ಸಮಕಾಲೀನ-೨

20ನೇ ವರ್ಷ

ಕನ್ನಡದ ಮನಸ್ಸು ಮತ್ತು ಇತರ ಲೇಖನಗಳು

ಡಿ ಎಸ್ ನಾಗಭೂಷಣ್



ಸಮಕಾಲೀನ

ಮಾಲಿಕೆ–೨

ಕನ್ನಡ ಮನಸ್ಸು
ಮತ್ತು ಇತರ ಲೇಖನಗಳು

ಡಿ.ಎಸ್.ನಾಗಭೂಷಣ

ಅಭಿರುಚಿ ಪ್ರಕಾಶನ
ನಂ. 386, 14ನೆಯ ಮುಖ್ಯರಸ್ತೆ, 3ನೆಯ ಅಡ್ಡರಸ್ತೆ,
ಸರಸ್ವತೀಪುರ, ಮೈಸೂರು - 5700 09

kannada manassu
Mattu itara Lekhanagalu

written by
D.S.Nagabushan

Published by
Abhiruchi Prakashana
386, 14th Main, 3rd Cross,
Saraswathipura,Mysore-9
Cell: 99805 60013
tingalu09@gmail.com
abhiruchiprakashana@yahoo.co.in

First Impression 2017
Page: 208 Rs. 150/-
Paper Used : 70gsm N/S Maplitho
Size: 1/8th Demy

ಕನ್ನಡ ಮನಸ್ಸು
ಮತ್ತು ಇತರ ಲೇಖನಗಳು
ಡಿ.ಎಸ್.ನಾಗಭೂಷಣ

ಪುಟಗಳು: 208
ಬೆಲೆ: ಒಂದುನೂರ ಐವತ್ತು ರೂಪಾಯಿಗಳು
ಮುಖಪುಟ ವಿನ್ಯಾಸ: ವೇಣುಗೋಪಾಲ್ ಟಿ.ಎಸ್.
ಪುಸ್ತಕ ಮಾರಾಟದ ಹಕ್ಕು : ಅಭಿರುಚಿ ಪ್ರಕಾಶನ
ಪ್ರಕಾಶಕರು: 'ಅಭಿರುಚಿ' ಗಣೇಶ್
ಮುದ್ರಣ: ಲಕ್ಷ್ಮೀ ಮುದ್ರಣಾಲಯ, ಬೆಂಗಳೂರು

ಅರ್ಪಣೆ:

ಗತಿಸಿದ
ನನ್ನ ಒಡಹುಟ್ಟು
ರಾಜಮ್ಮನ
ನೆನಪಿಗೆ

ಲೇಖಕನ ಮಾತು

ಆಧುನಿಕತೆ, ಅಭಿವೃದ್ಧಿ ಕುರಿತ ನನ್ನ ಆಯ್ದ ಲೇಖನಗಳ ಸಂಗ್ರಹ 'ಭೂಮಿಯನ್ನು ಹಂಚಿಕೊಳ್ಳುವ ಬಗೆಗಳು...' ಮೂರು-ನಾಲ್ಕು ತಿಂಗಳುಗಳ ಹಿಂದಷ್ಟೇ ಪ್ರಕಟವಾಗಿದೆ. ಹಾಗಾಗಿ ನನ್ನ ಲೇಖನಗಳ ಮತ್ತೊಂದು ಸಂಗ್ರಹವನ್ನು ಪ್ರಕಟಿಸುವ ಉಮೇದು ನನಗೇನೂ ಇರಲಿಲ್ಲ. ಆದರೆ ಗೆಳೆಯ ಟಿ.ಎಸ್. ವೇಣುಗೋಪಾಲ್ 'ಅಭಿರುಚಿ' ಪ್ರಕಾಶನದ ಪರವಾಗಿ ತಾವು ಆರಂಭಿಸಿರುವ 'ಸಮಕಾಲೀನ' ಸರಣಿಗೆ ನನ್ನದೊಂದು ಕೃತಿ ಬೇಕೆಂದು ಪ್ರೀತಿಪೂರ್ವಕವಾಗಿ ಒತ್ತಾಯಿಸಿದ್ದರಿಂದ ಈ ಕೃತಿ ಪ್ರಕಟವಾಗುತ್ತಿದೆ.

ಈ ಕೃತಿಯಲ್ಲಿ ರಾಜಕೀಯ-ಸಾಮಾಜಿಕ-ಸಾಂಸ್ಕೃತಿಕ ಬರಹಗಳ ಜೊತೆ ಸಾಹಿಣ್ಯಕ ಬರಹಗಳೂ ಸೇರಿವೆ. ಅವು ಲೇಖನ, ಪುಸ್ತಕಾವಲೋಕನ, ವ್ಯಕ್ತಿಚಿತ್ರ ಮತ್ತು ಪತ್ರಗಳ ರೂಪದಲ್ಲಿವೆ. ಅವುಗಳೆಲ್ಲದರ ಹಿಂದೆ ಇಂದು ಕನ್ನಡ ಸಮಾಜವು ಪರಿಗ್ರಹಿಸಬೇಕಾದ ಸಮಕಾಲೀನ ತುರ್ತುಗಳಿದ್ದು, ಅವೇ ಈ ಪುಸ್ತಕಕ್ಕೊಂದು ವಿಶಿಷ್ಟ ಸಮಗ್ರತೆ ನೀಡಿವೆ ಎಂದು ನಾನು ಭಾವಿಸಿದ್ದೇನೆ. ಹಾಗೆ ನೋಡಿದರೆ ಈ ಕೃತಿಯೂ, ನನ್ನ ಹಿಂದಿನ ಕೃತಿಯಂತೆಯೇ ಆಧುನಿಕತೆ, ಅಭಿವೃದ್ಧಿ ಮತ್ತು ಜಾಗತೀಕರಣಗಳನ್ನು ಪರೀಶೀಲಿಸುವ ಪ್ರಯತ್ನವನ್ನೇ ಮಾಡುವುದಾದರೂ, ಇಲ್ಲಿ ನಿರ್ದಿಷ್ಟ ಸಮಕಾಲೀನ ವಿಷಯಗಳ ನಿಕಷವಿದೆ ಎಂಬುದನ್ನು ಓದುಗರು ಗಮನಿಸಬಹುದು.

ಈ ಸಂಗ್ರಹದ ಎರಡು ಮುಖ್ಯ ಲೇಖನಗಳಾದ ಲೋಹಿಯಾ-ಅಂಬೇಡ್ಕರ್‌ರ ತುಲನಾತ್ಮಕ ನೋಟ ಹಾಗೂ ಸಾಮಾಜಿಕ ನ್ಯಾಯದ ಸಮಕಾಲೀನ ನೋಟ ಇಂದಿನ ರಾಜಕೀಯ ಸಂದರ್ಭದಲ್ಲಿ ತುರ್ತಾಗಿ ಅಗತ್ಯವೆನಿಸುತ್ತಿರುವ ಪರ್ಯಾಯ ರಾಜಕೀಯ ಮಾದರಿಯ ಹುಡುಕಾಟದ ಪ್ರಯತ್ನಗಳಿಗೆ ಒಂದಿಷ್ಟಾದರೂ ಮುಖ್ಯವೆನಿಸುವ ಸ್ಫೂರ್ತಿ ಮತ್ತು ಒಳನೋಟಗಳನ್ನು ಒದಗಿಸುತ್ತವೆ ಎಂದು ನಾನು ಭಾವಿಸುತ್ತೇನೆ. ಹಾಗೇ ಕಡಿದಾಳು ಶಾಮಣ್ಣ ಹಾಗೂ ಕೆ. ರಾಮದಾಸ್ ಅವರನ್ನು ಕುರಿತ ಗ್ರಂಥಗಳ ಮುನ್ನುಡಿ ಲೇಖನಗಳೂ ಇದೇ ಕೆಲಸವನ್ನು ಪರೋಕ್ಷವಾಗಿಯಾದರೂ ಮಾಡುತ್ತವೆಂದು ನಾನು ನಂಬುತ್ತೇನೆ. ಇನ್ನು ಅನಂತಮೂರ್ತಿಯವರೊಡನೆಯ ಸಂದರ್ಶನ, ಹೆಗ್ಗೋಡಿನ ನೀನಾಸಂ ಕುರಿತ ಬರಹ ಹಾಗೂ ಇಂದಿನ ಸಾಹಿತ್ಯ ಪರಿದೃಶ್ಯ ಕುರಿತ ಲೇಖನ ಇವು ಪರ್ಯಾಯ

ರಾಜಕೀಯ ಮಾದರಿಗೆ ಆಧಾರವಾಗಬಲ್ಲ ಪರ್ಯಾಯ ಸಾಂಸ್ಕೃತಿಕ ಕೋಶವೊಂದರ ನಿರ್ಮಾಣಕ್ಕೆ ಅಗತ್ಯವಾದ ಒಳನೋಟಗಳನ್ನು ಒದಗಿಸಬಲ್ಲವೆಂಬುದು ನನ್ನ ಆಶಯ. ಮಿಕ್ಕಂತೆ ಪುಸ್ತಕ ವಿಮರ್ಶೆಗಳು, ಪತ್ರಗಳು ಮತ್ತು ಕೆಲ ಫೇಸ್‌ಬುಕ್ ಬರಹಗಳು ಪುಸ್ತಕದ ಒಟ್ಟು ಚೌಕಟ್ಟನ್ನು ತುಂಬಿ ನನ್ನ ಈ ಪ್ರಯತ್ನಕ್ಕೆ ಒಂದು ಜೀವಂತಿಕೆಯನ್ನು ಒದಗಿಸಿವೆ ಎಂದುಕೊಂಡಿದ್ದೇನೆ.

ಇಂದು ಕರ್ನಾಟಕ, ಬುದ್ಧಿಜೀವಿಗಳ ವಲಯದ ಮಟ್ಟಿಗೆ ಒಡೆದುಹೋದ ಮನೆಯಾಗಿದೆ. ಅದರ ದೊಡ್ಡ ಭಾಗ ಒಂದಲ್ಲ ಒಂದು ನೆಪದಲ್ಲಿ ಆಳುವ ವ್ಯವಸ್ಥೆಯ ಭಾಗವಾಗಿ ಹೋಗಿದೆ. ಇವುಗಳ ಪೈಕಿ ಅತ್ಯಂತ ದೊಡ್ಡ ನೆಪವೆಂದರೆ, ದೇಶದಲ್ಲಿ ಫ್ಯಾಸಿಸಂ ಮತ್ತು ಕೋಮುವಾದ ಬೆಳೆಯುತ್ತಿದೆ ಎಂಬುದಾಗಿದೆ. ಆದರೆ ಈ ಬೆಳವಣಿಗೆ ಏಕುಂಟಾಯಿತು ಎಂಬುದರ ವಿಶ್ಲೇಷಣೆ ಇಲ್ಲದೆ ಇವುಗಳನ್ನು ಸಮರ್ಥವಾಗಿ ಎದುರಿಸಲಾಗದು ಎಂಬ ಪರಿವೆಯೇ ಇವರಿಗಿಲ್ಲವಾಗಿದೆ! ಇಂತಹ ವಿಶ್ಲೇಷಣೆಯೊಂದನ್ನು ಇವರು ಮಾಡಿದ್ದರೆ, ಅದು ಇವರ ಆತ್ಮಶೋಧನೆಯ ಒಂದು ಪ್ರಯತ್ನವೂ ಆಗಿ, ಈಗ ಅವರು ಯಾವುದರ ಭಾಗವಾಗಿ ಹೋಗಿದ್ದಾರೋ ಆ ವ್ಯವಸ್ಥೆಯ ಪಾಪ ಕಾರ್ಯಗಳ ಅರಿವೂ ಉಂಟಾಗುತ್ತಿತ್ತು ಮತ್ತು ಇವರೆಡೂ ವ್ಯವಸ್ಥೆಗಳಾಚೆಯ ಒಂದು ಮಾದರಿಯ ಹುಡುಕಾಟದಲ್ಲಿ ತೊಡಗುವ ಉಮೇದು ಉಂಟಾಗುತ್ತಿತ್ತು.

ಆದರೆ ಕನ್ನಡ ಸಮಾಜಕ್ಕೆ ಇತರ ವಲಯಗಳ ಸಾಮಾಜಿಕ ಜವಾಬ್ದಾರಿಗಳ ಗೈರುಹಾಜರಿಯಲ್ಲಿ ತನ್ನ ಮಿತಿಗಳಲ್ಲೇ ಸದಾ ಮಾರ್ಗದರ್ಶಕವಾಗುತ್ತಾ ಬಂದಿರುವ ಕನ್ನಡ ಲೇಖಕ–ಬುದ್ಧಿಜೀವಿಗಳ ವಲಯದ ಆತ್ಮವೇ ಇಂದು ಒಡೆದು ಭ್ರಷ್ಟಗೊಂಡಂತಿದೆ. ಇದರ ಒಂದು ಭಾಗ ಸಮಕಾಲೀನ ಬದುಕಿನ ಮೂರ್ತ ರೂಪಗಳ ತುಡಿತ–ಮಿಡಿತಗಳ ನೆದರೇ ಇಲ್ಲದಂತೆ ಅಮೂರ್ತಗಳಲ್ಲೇ ವಿಹರಿಸುವ ಬೌದ್ಧಿಕ ಲೋಲುಪತೆಯಲ್ಲಿ ಮುಳುಗಿದ್ದರೆ, ಇನ್ನೊಂದು ಭಾಗ ಜಾಗತೀಕರಣದ ಹುಲುಸಾದ ಮೇವನ್ನು ಮೇಯುತ್ತಾ ಸುತ್ತ ಅಜೀರ್ಣದ ವಾಯುವನ್ನು ಪಸರಿಸುತ್ತಾ ಅದನ್ನೇ ಶುದ್ಧ ಸೃಜನಶೀಲತೆ ಎಂದು ಇತರರನ್ನು ನಂಬಿಸುವ ಪ್ರಯತ್ನದಲ್ಲಿದೆ. ಇನ್ನು ಸಾಹಿತ್ಯ ವೇಷವೇ ಸಾರ್ವಜನಿಕ ಜೀವನದ ಅತ್ಯಂತ ಫಲದಾಯಕ ವೇಷವೆಂದು ಕಂಡುಕೊಂಡಿರುವ ಸಾಹಿತಿ ವೇಷಧಾರಿಗಳನ್ನೊಳಗೊಂಡ ಇನ್ನೊಂದು ಭಾಗ ಸಾಹಿತ್ಯ–ಸಂಸ್ಕೃತಿಗಳ ಆಡಳಿತ ಸಂಸ್ಥೆಗಳ ಆಯಕಟ್ಟಿನ ಜಾಗಗಳನ್ನು ಹಿಡಿದು ತನ್ನದೇ ಸಾಹಿತ್ಯಕ–ಸಾಂಸ್ಕೃತಿಕ ದರ್ಬಾರು ನಡೆಸುತ್ತಿದೆ. ನಮ್ಮ ವಿಶ್ವವಿದ್ಯಾಲಯಗಳ ಸಾಹಿತ್ಯ ವಿಭಾಗಗಳ ಮುಖ್ಯ ಸ್ಥಾನಗಳೂ ಸೇರಿದಂತೆ ಅವುಗಳ ಉನ್ನತ ಅತ್ಯುನ್ನತ ಸ್ಥಾನಗಳು ಇದಕ್ಕೆ ಹೊರತಾಗಿಲ್ಲ.

ಇದೆಲ್ಲದರ ಮಧ್ಯೆ ವಿಮರ್ಶಾ ರಾಜಕಾರಣ ಸಹಜವಾಗಿಯೇ ಯಾವ ಮಟ್ಟ ಮುಟ್ಟಿದೆ ಎಂದರೆ ಈ ವಲಯವು ಹಲವು ಹಿತಾಸಕ್ತಿಗಳ ಗುಂಪುಗಳಾಗಿ ಒಡೆದುಹೋಗಿ ಒಂದು ಗುಂಪಿನ ಪುಸ್ತಕಗಳ ವಿಮರ್ಶೆ, ಅವುಗಳ ಹೊಸ ಒಳನೋಟಗಳು ಸಾರ್ವಜನಿಕ ಚರ್ಚೆಗೇ ಬರದಂತೆ ತಡೆಯುವುದೇ/ಮುಚ್ಚಿ ಹಾಕುವುದೇ ಇನ್ನೊಂದು ಗುಂಪಿನ ಮುಖ್ಯ ಸಾಹಿತ್ಯಕ ಕೆಲಸಗಳಲ್ಲಿ ಒಂದಾಗಿರುವಂತೆ ತೋರುತ್ತಿದೆ. ಹೀಗಾಗಿ ಯಾವುದೇ ಗುಂಪಿಗೆ ಸೇರದ ಲೇಖಕರು ಹೇಳಹೆಸರಿಲ್ಲದೆ ತಮ್ಮ ಸೃಜನಶೀಲತೆಯನ್ನಷ್ಟೇ ನಂಬಿ ತಮ್ಮ ಕುಟುಕು ಜೀವವನ್ನು ಉಳಿಸಿಕೊಂಡಿದ್ದಾರೆ. ಈ ಕೆಟ್ಟ ರಾಜಕೀಯ ಆಟದಲ್ಲಿ ಪತ್ರಿಕೆಯ ಪುರವಣಿಗಳ,

ಸಾಹಿತ್ಯ ನಿಯತಕಾಲಿಕೆಗಳ ಮತ್ತೂ ಮುಖ್ಯವಾಗಿ ಸಾಹಿತ್ಯ ಅಕಾಡೆಮಿಯ(ಸಾಹಿತ್ಯ ಪರಿಷತ್ತಿನ ಸಾಹಿತ್ಯ ಮುಖದ ಬಗ್ಗೆ ಮಾತೇ ಆಡುವಂತಿಲ್ಲವಲ್ಲ?) ಪಾಲೂ ದೊಡ್ಡದಿದೆ. ಈ ಪುಸ್ತಕದ 'ಕನ್ನಡ ಮನಸ್ಸು' ಎಂಬ ಲೇಖನ ಈ ದೃಷ್ಟಿಯಿಂದ ಈ ಪುಸ್ತಕದ ಶೀರ್ಷಿಕೆಯಾಗಿ ಬಹು ಪ್ರಸ್ತುತವೇ ಆಗಿಬಿಡುತ್ತದೆ.

ಅದೇನೇ ಇರಲಿ, ಇಂದು ಬಹುಪಾಲು ಎಲ್ಲರೂ ಈ ದ್ವಿದಳ ವ್ಯವಸ್ಥೆಯ ಒಂದಲ್ಲ ಒಂದು ಭಾಗದ ಫಲಾನುಭವಿಗಳಾಗಲು ತಮ್ಮೆಲ್ಲ ಸಾಹಿತ್ಯಿಕ-ಸಾಂಸ್ಕೃತಿಕ ಮಾನ-ಮರ್ಯಾದೆಗಳನ್ನೂ ಬದಿಗಿಟ್ಟು ಬಕ ಪಕ್ಷಿಗಳಂತೆ ಕಾದು ನಿಂತಿರುವ ದೃಶ್ಯ ದುರಂತಮಯವಾಗಿ ಕಾಣುತ್ತಿದೆ. ಸ್ವಲ್ಪವಾದರೂ ಮಾನ-ಮರ್ಯಾದೆಗಳನ್ನು ಉಳಿಸಿಕೊಂಡಿರುವರೆಂದು ಭಾವಿಸಲ್ಪಟ್ಟಿರುವ ಕೆಲ ಹಿರಿಯರ ಮೌನ ಇದಕ್ಕೆಲ್ಲ ಸಮ್ಮತಿ ಸೂಚಿಸುವಂತೆಯೇ ಇರುವುದು ಪರಿಸ್ಥಿತಿ ಎಷ್ಟು ಗಂಭೀರವಾಗಿದೆ ಎಂಬುದರ ಸೂಚನೆಯೇ ಆಗಿದೆ.

ಇವೆಲ್ಲದರ ಪರಿಣಾಮವೆಂದರೆ, ಸಾಹಿತ್ಯ-ಸಂಸ್ಕೃತಿಗಳೂ ಸೇರಿದಂತೆ ನಮ್ಮ ಇಡೀ ಸಾರ್ವಜನಿಕ ಜೀವನ ನಿಂತ ನೀರಾಗಿ ಎಲ್ಲ ಚರ್ಚೆಗಳೂ ಅದೇ ಚರ್ವಿತ ಚವರ್ಣದಿಂದ ಕೂಡಿದೆ. ಹೀಗಾಗಿಯೇ ಇಂದು ನರೇಂದ್ರ ಮೋದಿ ಎಂಬ ವ್ಯಕ್ತಿತ್ವದ ಭೋಳೆ ಹಾಂಕಾರ-ಹೂಂಕಾರಗಳೇ ಹೊಸ ಯುಗದ ಅನಾವರಣದ ನಾಂದಿ ಕಹಳೆಯಂತೆ ಕೇಳಿಸತೊಡಗಿವೆ. ಇದು ನಿಜವಾಗಿಯೂ ನಮ್ಮ ಇಡೀ ಸಾರ್ವಜನಿಕ ಜೀವನದ ಸೃಜನಶೀಲತೆ ಸಂಪೂರ್ಣ ಬತ್ತಿಹೋಗಿರುವ ಸೂಚನೆ. ಇದು ಪರ್ಯಾಯ ಮಾದರಿಗಳ ಹುಡುಕಾಟದ ತುರ್ತಿನ ಸೂಚನೆಯೂ ಹೌದು. ಈ ಪುಸ್ತಕ ಈ ಸೂಚನೆಗೆ ಒಂದು ಪ್ರತಿಸ್ಪಂದನವೆಂಬುದು ಓದುಗರಿಗೆ ಅನ್ನಿಸಿದರೆ ಈ ಗೆಳೆಯ ವೇಣುಗೋಪಾಲ್ ಮತ್ತು ನನ್ನ ಈ ಪ್ರಯತ್ನ ಸಾರ್ಥಕವಾದಂತೆ.

ಈ ಪುಸ್ತಕ ಈ ರೂಪದಲ್ಲಿ ಬರುವಲ್ಲಿ ನೆರವಾದ ಎಲ್ಲರಿಗೂ, ನಿರ್ದಿಷ್ಟವಾಗಿ ಈ ಪುಸ್ತಕವನ್ನು ಹೊರತರುತ್ತಿರುವ ಅಭಿರುಚಿ ಪ್ರಕಾಶನದ ಗಣೇಶ್ ಅವರಿಗೂ ನನ್ನ ಧನ್ಯವಾದಗಳು.

10, ಜನವರಿ, 2017 — **ಡಿ.ಎಸ್. ನಾಗಭೂಷಣ**
ಶಿವಮೊಗ್ಗ

ಲೋಹಿಯಾ ಘರಾನೆಯ ಸ್ವತಂತ್ರ ಚಿಂತಕ

ಸಮಕಾಲೀನ ವಿಷಯಗಳನ್ನು ಕುರಿತಂತೆ ಚರ್ಚೆಗೆ ಸಾಧ್ಯವಾಗುವಂತೆ ಒಂದು ಮಾಲಿಕೆಯನ್ನು ಕನ್ನಡದಲ್ಲಿ ಪ್ರಾರಂಭಿಸುವ ಸಲಹೆ ಬಂದಾಗ ತಕ್ಷಣ ಹೊಳೆದ ಕೆಲವೇ ಹೆಸರುಗಳಲ್ಲಿ ಡಿ ಎಸ್ ನಾಗಭೂಷಣ ಅವರದ್ದು ಒಂದು. ಸದ್ಯದ ಸಮಸ್ಯೆಗಳಿಗೆ ಅರ್ಥವಂತಿಕೆಯಿಂದ ಸ್ಪಂದಿಸುವ ಕನ್ನಡದ ಕೆಲವೇ ಚಿಂತಕರಲ್ಲಿ ಡಿ ಎಸ್ ನಾಗಭೂಷಣ್ ಪ್ರಮುಖರು. ಸಮಾಜವಾದದ ಖಚಿತ ಹಿನ್ನೆಲೆಯಿಂದ ಬರೆಯುವ ಇವರ ಪ್ರತಿಲೇಖನದಲ್ಲೂ ವಿಭಿನ್ನ ದೃಷ್ಟಿಯನ್ನು, ಹೊಳಹನ್ನು ಕಾಣಬಹುದು. ಹಾಗೆಯೇ ಅವರ ಎಲ್ಲಾ ಕ್ರಿಯೆಗಳಲ್ಲೂ ಆಳದಲ್ಲಿ ಮಾನವೀಯತೆ, ಸಾಮಾಜಿಕ ಕಾಳಜಿ ಎದ್ದು ಕಾಣುತ್ತದೆ. ಅದೇ ಅವರ ಶಕ್ತಿ ಕೂಡ. ಒಪ್ಪದೇ ಹೋದಾಗ ಜಗಳಕ್ಕೂ ಇಳಿಯಬಲ್ಲ ಡಿಎಸ್ಸೆನ್ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸುವುದರಲ್ಲೂ ಅಷ್ಟೇ ಧಾರಾಳಿ. ಅವರ ಎಲ್ಲಾ ಪ್ರತಿಕ್ರಿಯೆಗಳು ವಿಚಾರಗಳ ಸಮರವೇ ಹೊರತು, ವೈಯಕ್ತಿಕ ಪೂರ್ವಗ್ರಹಗಳಿಂದ ಮೂಡಿಬಂದ ಹೇಳಿಕೆಗಳಲ್ಲ. ಇವರಷ್ಟು ನಿಷ್ಠುರವಾಗಿ, ನಿಸ್ಸಂದಿಗ್ಧವಾಗಿ, ಧೈರ್ಯದಿಂದ ಹೇಳಬೇಕಾದ್ದನ್ನು ಹೇಳುವವರು ವಿರಳ. ಅದೇ ಕೆಲವರು ಅವರನ್ನು ದೂರವಿಡುವುದಕ್ಕೆ ಕಾರಣವಿರಬಹುದು. ಅವರ ಅಭಿಪ್ರಾಯಗಳನ್ನು ಒಪ್ಪದೇ ಇರಬಹುದು ಅಥವಾ ಅವರು ಹೇಳುವ ವಿಧಾನದ ಬಗ್ಗೆ ತಕರಾರು ಇರಬಹುದು, ಆದರೆ ಅವರ ಚಿಂತನೆಗಳನ್ನು ನಿರ್ಲಕ್ಷಿಸುವುದಕ್ಕೆ ಸಾಧ್ಯವೇ ಇಲ್ಲ. ಹಾಗಾಗಿಯೇ ಅವರ ವಿಚಾರಗಳನ್ನು 'ಸಮಕಾಲೀನ'ದಲ್ಲಿ ಪ್ರಕಟಿಸುವುದಕ್ಕೆ ಆಸೆಪಟ್ಟದ್ದು.

'ಸಮಕಾಲೀನ'ದ ಪ್ರತಿ ಸಂಚಿಕೆಯೂ ಒಂದು ವಿಷಯಕ್ಕೆ ಸೀಮಿತವಾಗಿರಬೇಕು ಅಂದುಕೊಂಡಿದ್ದೇವೆ. ಮೊದಲ ಪುಸ್ತಕ ***ಲೋಕಚಿಂತಕರು*** ಹಾಗೇ ಆಗಿತ್ತು. ಮುಂದೆಯೂ ಹಾಗೆ ಆಗುತ್ತದೆ ಎಂದು ಅಂದುಕೊಂಡಿದ್ದೇವೆ. ಆದರೆ ಇಲ್ಲಿ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ಯಕ ಬರಹಗಳೂ ಇವೆ. ಜೊತೆಗೆ ಲೇಖನಗಳು, ಸಂದರ್ಶನಗಳು, ಪತ್ರಗಳು, ಪುಸ್ತಕ ವಿಮರ್ಶೆಗಳು, ಫೇಸ್‌ಬುಕ್ ಬರಹಗಳು, ವ್ಯಕ್ತಿಚಿತ್ರಗಳು ಹೀಗೆ ಹತ್ತಾರು ರೂಪದಲ್ಲಿ ಇವೆ. ಆದರೆ ಇದರ ಹಿಂದಿರುವ ಒಂದು ಮನಸ್ಸು ಹಾಗೂ ಸಮಕಾಲೀನ ವಿಷಯಗಳು ಇದಕ್ಕೆ ಒಂದು ಬಂಧವನ್ನು ಒದಗಿಸಿವೆ.

ಇದಕ್ಕೆ ಮುನ್ನುಡಿಯನ್ನು ಬರೆಯಬೇಕಾದ ಒತ್ತಡ ಬಂದಾಗ ಮಾತ್ರ ಗಾಬರಿಯಾಗಿದ್ದು ನಿಜ. "ನನ್ನ ಪುಸ್ತಕವನ್ನು ಪ್ರಕಟಿಸಲು ತೋರಿದ ಧೈರ್ಯವೇ ಮುನ್ನುಡಿ ಬರೆಯಲು ಪ್ರೇರೇಪಿಸಲಿ" ಎಂದು ನಾಗಭೂಷಣ್ ಸಲೀಸಾಗಿ ಹೇಳಿ ಸುಮ್ಮನಾಗಿಬಿಟ್ಟರು.

ನಾಗಭೂಷಣ್ ಮೂಲತಃ ವಿಜ್ಞಾನದ ವಿದ್ಯಾರ್ಥಿ. "ನಾನು ನನ್ನ ಮನೋವೃತ್ತಿಯಿಂದ ವಿಜ್ಞಾನದ ವಿದ್ಯಾರ್ಥಿಯೇ ಅಲ್ಲ – ಅದರ ಒತ್ತಡಗಳಿಂದ ಪಾರಾಗಲು ಸಾಹಿತ್ಯ ಮತ್ತು ಸಂಸ್ಕೃತಿಗಳ ಅಧ್ಯಯನದ ಕಡೆ ಆಸಕ್ತಿ ಬೆಳೆಸಿಕೊಂಡೆ" ಎಂದು ಹೇಳಿಕೊಂಡಿದ್ದರೂ ಅವರು ಎಲ್ಲಾ ಬರಹಗಳ ನಿಖರತೆಯಲ್ಲಿ ಗಣಿತಶಾಸ್ತ್ರದ ಪಾತ್ರವೂ ಒಂದಿಷ್ಟಿದೆ ಎನ್ನುವುದರಲ್ಲಿ ಅನುಮಾನವಿಲ್ಲ. ಅವರ ಚಿಂತನೆಯಲ್ಲಿನ ಭಿನ್ನತೆಗೂ ವಿಜ್ಞಾನದ ಓದು ಕಾರಣವಿದ್ದಿರಬಹುದು. ಸಾಹಿತ್ಯ ಹಾಗೂ ಸಾಂಸ್ಕೃತಿಕ ಅಧ್ಯಯನದಲ್ಲಿ ಅವರಿಗೆ ಒಂದು 'ಶಿಸ್ತಿನ' ಶಿಕ್ಷಣ ಇಲ್ಲದೇ ಹೋಗಿದ್ದು ಒಂದರ್ಥದಲ್ಲಿ ಒಳ್ಳೆಯದೇ ಆಗಿದೆ.

ಡಿಎಸ್ಸೆನ್ ಮಾರ್ಕ್ಸವಾದ ಪಶ್ಚಿಮದ ಸೃಷ್ಟಿ, ಅದು ಭಾರತೀಯ ಸಮಾಜವನ್ನು ಅರ್ಥಮಾಡಿಕೊಳ್ಳುವುದಕ್ಕೆ ಸಾಲುವುದಿಲ್ಲ ಎಂದು ಭಾವಿಸಿದವರು. ಇದಕ್ಕೆ ಪರ್ಯಾಯವಾಗಿ 'ಭಾರತೀಯ ಸಮಾಜವಾದವನ್ನು' ರೂಪಿಸಿದ ಲೋಹಿಯಾ ಅವರಿಂದ ಪ್ರಭಾವಿತರಾದವರು. ಅವರ ಸಿದ್ಧಾಂತವನ್ನು ಒಪ್ಪಿಕೊಂಡವರು. ಅದನ್ನು ಒಪ್ಪಿಕೊಳ್ಳುತ್ತಲೇ ತಮ್ಮದೇ ಆದ ಒಂದು ವಿಶಿಷ್ಟ ಸಮಾಜವಾದಿ ದೃಷ್ಟಿಕೋನವನ್ನು ಕಂಡುಕೊಂಡವರು. ಇವರು ಲೋಹಿಯಾ ಘರಾನೆಗೆ ಸೇರಿದ ಸ್ವತಂತ್ರ ಚಿಂತನೆಯ ಸಮಾಜವಾದಿ. ಈ ಸಂಕಲನದ ಮೊದಲ ಹಾಗೂ ಬಹು ಮುಖ್ಯ ಲೇಖನ 'ಅಂಬೇಡ್ಕರ್ ಮತ್ತು ಲೋಹಿಯಾ: ಒಂದು ತುಲನಾತ್ಮಕ ನೋಟ' ಡಿಎಸ್ಸೆನ್ ಅವರ ಈ ವಿಶಿಷ್ಟ ಸಮಾಜವಾದಿ ಸೈದ್ಧಾಂತಿಕ ದೃಷ್ಟಿಕೋನವನ್ನು ಪರಿಚಯಿಸುತ್ತದೆ. ಇವರು ಲೋಹಿಯಾ, ಗಾಂಧಿ ಹಾಗೂ ಅಂಬೇಡ್ಕರ್ ಅವರ ಪರಸ್ಪರ ಪ್ರಭಾವವನ್ನು, ಸಂಬಂಧವನ್ನು ವಿಶದವಾಗಿ ಚರ್ಚಿಸುತ್ತಾರೆ.

"ಲೋಹಿಯಾ, ಗಾಂಧಿ ಮತ್ತು ಅಂಬೇಡ್ಕರ್ ಒಂದು ರೀತಿಯ ತ್ರಿಕೋನ ಸಂಬಂಧವುಳ್ಳವರು. ಒಂದು ರೀತಿಯಲ್ಲಿ ಸಿನಿಮಾಗಳಲ್ಲಿ ತ್ರಿಕೋನ ಪ್ರೇಮಕಥೆ ಅಂತ ಹೇಳ್ತೀವಲ್ಲ, ಆ ರೀತಿ ಒಂದು ತರಹದ ತ್ರಿಕೋನ ದುರಂತ ಪ್ರೇಮಕಥೆ ಇದು. ಲೋಹಿಯಾ ಅವರ ಬಗ್ಗೆ ಮಾತನಾಡಬೇಕಾದರೆ ಗಾಂಧಿಯ ಪ್ರಸ್ತಾಪವಿಲ್ಲದೇ ಮಾತನಾಡೋದಕ್ಕೆ ಸಾಧ್ಯವೇ ಇಲ್ಲ. ಹಾಗೇನೇ ಅಂಬೇಡ್ಕರ್ ಬಗ್ಗೆ ಮಾತಾಡಬೇಕಾದರೂ ಗಾಂಧಿಯ ಪ್ರಸ್ತಾಪವಿಲ್ಲದೇ ಮಾತನಾಡೋದಕ್ಕೆ ಸಾಧ್ಯವೇ ಇಲ್ಲ." "ಒಬ್ಬರಿಗೆ ಒಬ್ಬರು ಪರಸ್ಪರ ರೆಫರೆನ್ಸ್‌ಗಳಾಗಿಯೇ ಇವೊತ್ತಿನ ಸಂದರ್ಭದ ಪ್ರಸ್ತುತತೆಯ ಸಂಬಂಧವಾಗಿ ನಮಗೆ ದಕ್ಕೋದು."

"ಲೋಹಿಯಾ ಮತ್ತು ಅಂಬೇಡ್ಕರ್ ನಡುವೆ ತೌಲನಿಕ ಅಧ್ಯಯನ ಅಥವಾ ವಿವೇಚನೆ ಸ್ವಲ್ಪ ಜಟಿಲವಾದದ್ದು. ಅನೇಕ ಮಡಿಕೆಗಳಲ್ಲಿ ಸೇರಿ ಹೋಗಿ, ಹಲವು ಬಾರಿ ಅಪಾರ್ಥಗಳ ನೆಲಬಾಂಬುಗಳನ್ನು ಹಾದು ಹೋಗಬೇಕಾದ ಬಹು ಎಚ್ಚರಿಕೆಯ ನಡೆಯನ್ನು ಅಪೇಕ್ಷಿಸುವಂತಹ ಡಿಫಿಕಲ್ಟ್ ಪೊಲಿಟಿಕಲ್ ಲ್ಯಾಂಡ್‌ಸ್ಕೇಪ್ ಅದು. ಅಥವಾ ಸರಳವಾಗಿ ಹೇಳೋದಾದ್ರೆ, ಕೇವಲ ಅಕಡೆಮಿಕ್ ಆಸಕ್ತಿಯಿಂದ ಮಾತ್ರ ಸಾಧು ಅನ್ನಿಸುವಂತಹ ವಿಷಯ ಅಂತಾನೂ ಕೆಲವು ಬಾರಿ ಅನ್ನಿಸಿಬಿಡುತ್ತದೆ. ಅದೇನೇ ಇದ್ದರೂ, ಇವತ್ತು ಈ ಇಬ್ಬರನ್ನೂ ಗಾಂಧಿ ಜೊತೆಗೆ ನಿಲ್ಲಿಸಿಕೊಂಡು ನೋಡಿದಾಗ ಮಾತ್ರ ಈ ಇಬ್ಬರ ಚಿತ್ರಗಳು ಇಂದಿನ ಸಂದರ್ಭಕ್ಕೆ ಸ್ಫುಟವಾಗಿ ಕಾಣಬಲ್ಲವು ಅಂತ ನನಗನ್ನಿಸುತ್ತೆ. ನಮಗೆ ಈ ಮೂರು ಜನರಿಂದಲೂ ಪಡೀಬೇಕಾದ್ದು ಬಹಳ ಇದೆ ಅನ್ಸುತ್ತೆ. ನಾನು ಹಿಂದೊಮ್ಮೆ ಹೇಳಿದ ಹಾಗೆ, ಹಿಂದೊಮ್ಮೆ ಬರೆದ ಹಾಗೆ ಇವತ್ತು ಗಾಂಧಿ, ಒಂದು ಕಡೆ ಅಂಬೇಡ್ಕರ್

ಮತ್ತು ಇನ್ನೊಂದು ಕಡೆ ಲೋಹಿಯಾರ ಹೆಗಲಮೇಲೆ ಕೈಹಾಕ್ಕೊಂಡು ನಮ್ಮನ್ನ ಮುನ್ನಡೆಸಿಕೊಂಡು ಹೋಗೋ ಒಂದು ಚಿತ್ರ ಕಣ್ಣ ಮುಂದೆ ಬಂದು, ಆ ಚಿತ್ರದ ಹಿಂದಿರೋ ಫಿಲಾಸಫಿ ನಮಗೆ ದಕ್ಕುವಂತಾದರೆ ಅದೇ ಇಂತಹ ತೌಲನಿಕ ಅಧ್ಯಯನಗಳಿಂದ ನಾವು ಪಡೆಯಬಹುದಾದಂತಹ ಬಹಳ ದೊಡ್ಡ ಪ್ರಯೋಜನ"

ಹೀಗೆ ಅವರನ್ನು ಒಟ್ಟಾಗಿ ತರುವುದಕ್ಕೆ ಡಿಎಸ್‌ಎನ್ ಒಂದು ಚೌಕಟ್ಟನ್ನು ಹಾಕಿಕೊಡುತ್ತಾರೆ.

ಅವರ ನಡುವಿನ ಸಾಮ್ಯತೆಯನ್ನು ಗಮನಿಸುತ್ತಿದ್ದಾಗಲೂ, ಅವರ ನಡುವಿನ ಭಿನ್ನತೆಯನ್ನು ಅಷ್ಟೇ ಸ್ಪಷ್ಟವಾಗಿ ಗಮನನಿಸುತ್ತಾರೆ. ಚಿಂತನೆ ಕೇವಲ ಅಕಡೆಮಿಕ್ ಮಟ್ಟದಲ್ಲಿ ಉಳಿಯುವುದಿಲ್ಲ. ಇಂದಿನ ಪರ್ಯಾಯ ರಾಜಕೀಯ ಮಾದರಿಗೆ ಬೇಕಾದ ಒಂದು ಒಳನೋಟವನ್ನು ಕೊಡುತ್ತದೆ. ಈ ಚರ್ಚೆ ಇಂದಿನ ಪರ್ಯಾಯ ರಾಜಕೀಯ ಹಾದಿಯನ್ನು ಕುರಿತು ನಡೆಯುತ್ತಿರುವ ಚರ್ಚೆಯ ಹಿನ್ನೆಲೆಯಲ್ಲಿ ಮುಖ್ಯವಾಗುತ್ತದೆ. ಅದೇ ಕಾರಣಕ್ಕೆ ಇಲ್ಲಿ ಬರುವ ದಲಿತ ಚಳುವಳಿಯನ್ನು ಕುರಿತ ಅವರ ಮಾತುಕತೆಗಳು ಮುಖ್ಯವಾಗುತ್ತವೆ.

ಮುಂದಿನ ಲೇಖನ 'ಆಧುನಿಕತೆ, ಪ್ರಗತಿಪರತೆ ಮತ್ತು ಸಾಮಾಜಿಕ ನ್ಯಾಯ'ದಲ್ಲಿ ಸಾಮಾಜಿಕ ನ್ಯಾಯವನ್ನು ಕುರಿತು ತಮ್ಮ ಚಿಂತನೆಯನ್ನು ವಿಸ್ತರಿಸುತ್ತಾ ಹೋಗುತ್ತಾರೆ. ಅದರಲ್ಲಿ ಅವರು 'ಆಧುನಿಕ' ಮನಸ್ಸು ಜಾತಿ ವ್ಯವಸ್ಥೆ ಕುರಿತಂತೆ ಕಟ್ಟಿಕೊಂಡ ಸಂಕಥನವನ್ನು ಪುನರ್‌ಪರಿಶೀಲಿಸಲು ಪ್ರಯತ್ನಿಸಿದ್ದಾರೆ. ಸಾಮಾಜಿಕ ನ್ಯಾಯಕ್ಕೆ ಸಂಬಂಧಿಸಿದಂತೆ ಅವರು ಹೇಳುವ ಮಾತು ಬಡತನ, ಅಸಮಾನತೆ ಇತ್ಯಾದಿಗಳ ವಿಷಯದಲ್ಲೂ ತುಂಬಾ ಸತ್ಯ.

"ಸಾಮಾಜಿಕ ನ್ಯಾಯವೆಂಬುದು ಕೇವಲ 'ಶೋಷಿತ' ಜಾತಿಗಳಿಗೆ ಸಂಬಂಧಿಸಿದ ರಾಜಕೀಯ ಪ್ರಕ್ರಿಯೆಯಲ್ಲ. ಅದು ಇಡೀ ಸಮಾಜದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಗ್ರಹೀತವಾದ ಮತ್ತು ಚಾಲ್ತಿಗೆ ಬಂದ ಪ್ರಕ್ರಿಯೆ. ಹಾಗಾಗಿ ಸಾಮಾಜಿಕ ನ್ಯಾಯದಿಂದ ಆಗಿರಬಹುದಾದ ಒಳ್ಳೆಯದನ್ನು ಅಳೆಯಬೇಕಾದದ್ದು ಕೆಲವು ಜಾತಿಗಳನ್ನು ದೃಷ್ಟಿಯಿಟ್ಟುಕೊಂಡಲ್ಲ. ಇಡೀ ಸಮಾಜವನ್ನು ದೃಷ್ಟಿಯಿಟ್ಟುಕೊಂಡು. ಹಾಗಾಗಿ ಈ ಸಂಬಂಧ ಆತ್ಯಂತಿಕವಾಗಿ ಕೇಳಬೇಕಾದ ಪ್ರಶ್ನೆಯೆಂದರೆ: ಈವರೆಗಿನ ಸಾಮಾಜಿಕ ನ್ಯಾಯ ರಾಜಕಾರಣದಿಂದ ಸಮಾಜದ ಸಾರ್ವತ್ರಿಕ ದಕ್ಷತೆ ಹೆಚ್ಚಿದೆಯೇ? ಸಾರ್ವಜನಿಕ ಸೇವೆಗಳ ಗುಣಮಟ್ಟ ಹೆಚ್ಚಿದೆಯೇ? ಹಾಗಾಗಿ ಸಾಮಾಜಿಕ ಸುಖ-ಶಾಂತಿಗಳು ಹೆಚ್ಚಿವೆಯೇ' ಮನುಷ್ಯ ಹೆಚ್ಚು ನ್ಯಾಯಶೀಲನಾಗಿದ್ದಾನೆಯೇ? ಎಂಬುವಾಗಿವೆ".

ಇಡೀ ಸಮುದಾಯದ ಒಳಿತನ್ನು ಗಮನದಲ್ಲಿಟ್ಟುಕೊಂಡು ಸಾಗುವ ಅವರ ಚಿಂತನೆ ಸ್ವಾಭಾವಿಕವಾಗಿಯೇ ಯಾವುದೇ ಕಾರ್ಯಕ್ರಮವೂ ಸಂಕುಚಿತ ಅರ್ಥದಲ್ಲಿ ಬಳಕೆಯಾದಾಗ ಕೆರಳುತ್ತದೆ. ಅದನ್ನು ಅವರು ಫೇಸ್‌ಬುಕ್ಕಿನಲ್ಲಿ ಬರೆದ 'ಸಾಮಾಜಿಕ ನ್ಯಾಯವೋ? ಜಾತಿ ರಾಜಕಾರಣವೋ?'ದಲ್ಲಿ ಕಾಣಬಹುದು. ಅದರಲ್ಲಿ ಇಂದಿನ ರಾಜಕಾರಣ ಜಾತಿಯನ್ನು ನಿರ್ವಹಿಸುತ್ತಿರುವ ರೀತಿಯನ್ನು ಕುರಿತಂತೆ ತಮ್ಮ ನೋವನ್ನು ವ್ಯಕ್ತಪಡಿಸಿದ್ದಾರೆ.

"ಜಾತಿಯನ್ನು ಇಲ್ಲಿ ಲೌಕಿಕ ಸಮಾನತ್ವದ ವಿಶೇಷ ಅವಕಾಶಗಳ ಮೂಲಕ ಸಾಧಿಸಬೇಕಾದ ಇಡೀ ಸಮಾಜದ ಭಾವನಾತ್ಮಕ ಏಕತೆಗಾಗಿ ಬಳಸಿ ಬಿಸಾಕಬೇಕಾದ

ಕೇವಲ ಒಂದು ತಾತ್ಪೂರ್ತಿಕ ಸಾಧನವಾಗಿ ಮಾತ್ರ ಪರಿಗಣಿಸಬೇಕಾಗಿದೆ. ಆದರೆ ಸಾಮಾಜಿಕ ನ್ಯಾಯ ರಾಜಕಾರಣದ ಜಾತ್ಯತೀತತೆಯ ಈ ಮೂಲ ಪಾಠವನ್ನೇ ಅವರು ಕೈಬಿಟ್ಟಿದ್ದಾರೆ. ಇದು ಹೆಣ ಸುಡಲು ಬಳಸುವ ಕೋಲನ್ನು ಅಂತಿಮವಾಗಿ ಹೆಣದ ಬೆಂಕಿಗೆ ಎಸೆದಂತೆ. ಬದಲಿಗೆ ನಮ್ಮ ಸರ್ಕಾರಗಳು ಜಾತಿ ಸಮಾಜವನ್ನು ಗಟ್ಟಿಗೊಳಿಸುವ ಜಾತಿಕೇಂದ್ರಿತ ಕಾರ್ಯಕ್ರಮಗಳನ್ನು ರೂಪಿಸುತ್ತಾ ಜಾತಿಅಸ್ಮಿತೆಯನ್ನು ಅದರೆಲ್ಲ ಸಂಕುಚಿತತೆಗಳೊಂದಿಗೆ ಬಲಪಡಿಸುವ ರೀತಿಯಲ್ಲಿ ಅವನ್ನು ಜಾರಿಗೊಳಿಸುತ್ತಿವೆ."

ಅವರು ತಲೆಕೆಡಿಸಿಕೊಂಡ ಇನ್ನೊಂದು ವಿಷಯ– ಭಾಷೆ. ಆ ಬಗ್ಗೆ ಅವರು ಬರೆದ ಹಲವು ಲೇಖನಗಳು ಈ ಸಂಚಿಕೆಯಲ್ಲಿ ಇವೆ. ಅವೆಲ್ಲಾ ಕನ್ನಡದ ಅಥವಾ ಕನ್ನಡ ಮನಸ್ಸಿನ ವಿವಿಧ ಆಯಾಮಗಳನ್ನು ಪರಿಚಯಿಸುತ್ತಾ ಹೋಗುತ್ತವೆ. ಅವೆಲ್ಲಾ ಬೇರೆ ಬೇರೆ ಉದ್ದೇಶಗಳಿಗೆ ಬರೆದ ಲೇಖನಗಳಾದ್ದರಿಂದ ಅವುಗಳ ಶೈಲಿಯೂ ವಿಭಿನ್ನವಾಗಿವೆ. ಆಳ್ವಾಸ್ ನುಡಿಸಿರಿಯಲ್ಲಿ ಕನ್ನಡದ ಮನಸ್ಸನ್ನು ಕುರಿತು ಮಾಡಿದ ಭಾಷಣ ಅದರಲ್ಲಿ ಬಹು ಮುಖ್ಯವಾದದ್ದು. ಅದರಲ್ಲಿ ಕನ್ನಡ ಮನಸ್ಸನ್ನು ಅರ್ಥಮಾಡಿಕೊಳ್ಳುವುದಕ್ಕೆ ಬೇಕಾದ ಒಂದು ಚಾರಿತ್ರಿಕ ಹಿನ್ನೆಲೆಯನ್ನು ಕೊಡುತ್ತಾರೆ. ಕೊನೆಗೆ ಕನ್ನಡ ಸಂಸ್ಕೃತಿ ಉಳಿಯಬೇಕಾದರೆ ಕನ್ನಡ ಶಿಕ್ಷಣದ ಮೂಲಕ ಮಾತ್ರ ಸಾಧ್ಯ ಅನ್ನುವ ತೀರ್ಮಾನಕ್ಕೆ ಬರುತ್ತಾರೆ.

"ಕನ್ನಡ ಕುಲ ಏನಾದರೂ ಇಂದು ತನ್ನ ಸಂಸ್ಕೃತಿಯನ್ನು, ತನ್ನ ಅಸ್ಮಿತೆಯನ್ನು, ತನ್ನ ಶಕ್ತಿಯನ್ನು ಉಳಿಸಿಕೊಳ್ಳುವುದಿದ್ದರೆ ಅದು ಕನ್ನಡ ಶಿಕ್ಷಣದ ಮೂಲಕ ಮಾತ್ರ ಸಾಧ್ಯ. ಕನ್ನಡಿಗ ತನ್ನ ಬದುಕನ್ನು ಕನ್ನಡ ಭಾಷಾ ಪರಂಪರೆ, ಚರಿತ್ರೆ, ಅದು ಕಟ್ಟಿಕೊಟ್ಟ ನುಡಿಗಟ್ಟು, ವಿವೇಕಗಳ ಮೂಲಕ ಕಟ್ಟಿಕೊಳ್ಳುವುದೊಂದೇ ಬದುಕಿನ ನಿಜವಾದ ಸಾರ್ಥಕತೆ ಅಥವಾ ಮುಕ್ತಿಯ ದಾರಿ ಎಂದು ಎಂದಿನವರೆಗೆ ಕಂಡುಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಅವನಿಗೆ ಶಾಂತಿಯಿಲ್ಲ. ಅವನು ಈ ದಾರಿ ಬಿಟ್ಟು ಅಥವಾ ಈ ದಾರಿ ಬಿಡಲು ಕಾರಣವಾಗಿರುವ ಜಾಗತೀಕರಣದ ಆಮಿಶಗಳಿಗೆ ಸಿಕ್ಕಿ ಎಷ್ಟೇ 'ಸುಖ' ಪಟ್ಟರೂ ಅವನಿಗೆ ಶಾಂತಿಯಿರಲಾರದು. ಏಕೆಂದರೆ ಅವನು ಆ ಮೂಲಕ ಒಂದು ಅಸ್ಥಿರ ಮತ್ತು ಅಶಾಂತ ಸಮಾಜವನ್ನು ಸೃಷ್ಟಿಸುತ್ತಿರುತ್ತಾನೆ."

ಹಾಗೆಯೇ ಸಮಾಜವಾದಿ ಹಿನ್ನೆಲೆಯಿಂದ ಭಾಷೆಯ ಸಮಸ್ಯೆಯನ್ನು ವಿಶ್ಲೇಷಿಸಿದ ಒಂದು ಲೇಖನವಿದೆ. ಜೊತೆಗೆ ಫೇಸ್‌ಬುಕ್ಕಿನಲ್ಲಿ ಬರೆದ ಲೇಖನಗಳೂ ಇವೆ.

ಈ ಪುಸ್ತಕದ ಲೇಖನಗಳಿಗೆ ಪರಸ್ಪರ ಸಂಬಂಧವಿದ್ದರೂ ಅದರ ಕ್ಯಾನವಾಸ್ ತುಂಬಾ ದೊಡ್ಡದು. ಬಿಜೆಪಿಯನ್ನು ಕುರಿತಂತೆ, ಇತ್ತೀಚೆಗೆ ಕಪ್ಪುಹಣದ ಹೆಸರಿನಲ್ಲಿ ರಾಡಿ ಎಬ್ಬಿಸಿದ ನೋಟು ರದ್ಧತಿಯ ಬಗ್ಗೆ, ರಾಮ್ ಕಿಶನ್ ಮತ್ತು ಭೂಪಾಲ್ ಎನ್‌ಕೌಂಟರ್ ಬಗ್ಗೆ ಲೇಖನಗಳಿವೆ. ಪುಸ್ತಕ ವಿಮರ್ಶೆಗಳಿವೆ, ವ್ಯಕ್ತಿ ಚಿತ್ರಗಳಿವೆ, ಅನಂತಮೂರ್ತಿಯವರೊಂದಿಗಿನ ಒಂದು ಒಳ್ಳೆಯ ಸಂದರ್ಶನವಿದೆ. ಕೊನೆಯದಾಗಿ ಅವರ "ಎಡ ಬಲಗಳ ನಡುವೆ ಒಂದಿಷ್ಟು ನೈತಿಕತೆ ಕುರಿತ ಮಾತುಗಳು" ಪುಟ್ಟದಾದರೂ ಒಂದು ಮುಖ್ಯ ಲೇಖನ. ನನಗೆ ಎಡವನ್ನು ಕುರಿತಂತೆ ಅದರಲ್ಲಿ ಮಾಡಿರುವ ಹಲವು ಟೀಕೆಗಳನ್ನು ಒಪ್ಪಿಕೊಳ್ಳುವುದಕ್ಕೆ ಕಷ್ಟವಾದರೂ ಅದು ಚರ್ಚಿಸಲೇ ಬೇಕಾದ ಹಲವು ವಿಷಯಗಳನ್ನು ಎತ್ತಿದೆ.

ನಾಗಭೂಷಣ ಅವರು ಹೆಗ್ಗೋಡಿನ ಕಾರ್ಯಕ್ರಮವೊಂದರಲ್ಲಿ ಹೇಳುವಂತೆ:

"ಒಂದು ಸಮಾಜಕ್ಕೆ ಬೌದ್ಧಿಕತೆ ಬೇಕು. ಅದೇ ಅದರ ಬುನಾದಿ ಕೂಡ. ಆದರೆ ಈ ಬೌದ್ಧಿಕತೆ ಬರೀ cerebral ಆದರೆ, ಬರೀ ಮಿದುಳಿಗೆ ಸಂಬಂಧಪಟ್ಟುದಾದರೆ, ಅಮೂರ್ತ ನೆಲೆಗಳಲ್ಲೇ ಕ್ರಿಯಾಶೀಲವಾದುದಾದರೆ ಅದು ಸಮಸ್ಯಾತ್ಮಕವಾಗುತ್ತದೆ.

"ಬೌದ್ಧಿಕತೆ ಅನ್ನುವುದು ಲೌಕಿಕ ನೆಲೆಯಲ್ಲಿ ಅಂದರೆ ಏನಿರುವುದೋ ಮತ್ತು ಏನು ಇರಬೇಕೆಂದು ನಾವು ಭಾವಿಸುತ್ತೇವೆಯೋ ಅದರ ಮಧ್ಯವರ್ತಿಯಾಗಿ ಮಾತ್ರ ಇರಬೇಕೇ ಹೊರತು ಅದಕ್ಕೊಂದು ಸ್ವತಂತ್ರ ಅಸ್ತಿತ್ವವಿಲ್ಲ ಎಂದು ನಾನೆಂದುಕೊಂಡಿದ್ದೇನೆ."

ಇದು ಚರ್ಚೆಯ ನಿಜವಾದ ಉದ್ದೇಶವೂ ಹೌದು. ಜನ ವರ್ತಮಾನವನ್ನು ಕುರಿತಂತೆ ನಿರ್ಭಿಡೆಯಿಂದ ಚರ್ಚಿಸುವಂತಾಗಬೇಕು. ನಾಗಭೂಷಣ ಅವರು ಪ್ರಾರಂಭಿಸಿರುವ ಈ ಚರ್ಚೆ ಆ ಕಾರಣಕ್ಕೆ ಮೌಲಿಕವಾದದ್ದು ಜೊತೆಗೆ ಒಂದು ಮಾದರಿಯೂ ಹೌದು.

ಟಿ.ಎಸ್.ವೇಣುಗೋಪಾಲ್
ಮೈಸೂರು

ಪರಿವಿಡಿ

ಅಂಬೇಡ್ಕರ್ ಮತ್ತು ಲೋಹಿಯಾ: ಒಂದು ತುಲನಾತ್ಮಕ ನೋಟ

(ಒಂದು ಮುನ್ಸೂಚನೆ: ಈ ಮಾತುಗಳಲ್ಲಿ ಹಲವೆಡೆ ಬಳಸಲಾಗಿರುವ 'ಆಧುನಿಕ' ಅಥವಾ 'ಆಧುನಿಕತೆ' ಎಂಬ ಶಬ್ದಗಳನ್ನು ೧೪ರಿಂದ ೧೭ನೇ ಶತಮಾನದವರೆಗೆ ಯೂರೋಪ್‌ನಲ್ಲಿ ಸಂಭವಿಸಿದ 'ಪುನರುಜ್ಜೀವನ' (ರೆನೈಸಾನ್ಸ್) ಮತ್ತು ಕೈಗಾರಿಕಾ ಕ್ರಾಂತಿಯ ಫಲವಾಗಿ ಮೂಡಿದ ಜೀವನ ದೃಷ್ಟಿ, ಜೀವನ ಮೌಲ್ಯಗಳು ಮತ್ತು ಜೀವನ ಕ್ರಮಗಳ ಸಂಬಂಧವಾಗಿ ಬಳಸುವ ಆಧುನಿಕ ಅಥವಾ ಆಧುನಿಕತೆ ಎಂಬ ಶಬ್ದಗಳ ಅರ್ಥದಲ್ಲಷ್ಟೇ ಬಳಸಲಾಗಿದೆ.)

ಬಹುಶಃ ಆಧುನಿಕ ಭಾರತದ ಇತಿಹಾಸದಲ್ಲಿ ವಿವೇಕಾನಂದ ಮತ್ತು ಮಹಾತ್ಮ ಗಾಂಧಿಯವರನ್ನು ಬಿಟ್ಟರೆ ಅತ್ಯಂತ ಹೆಚ್ಚು ಸಾರ್ವಜನಿಕ ಪ್ರಭಾವವನ್ನು ಬೀರಿದವರಲ್ಲಿ ಅಂಬೇಡ್ಕರರವರೇ ಮೊದಲಿಗರು ಎಂದು ಕಾಣುತ್ತದೆ. ಇಂತಹ ಮಹನೀಯರನ್ನ ಜಗತ್ತಿನ ಬಹಳ ಮಹತ್ವದ ಇತರ ಚಿಂತಕರು ಮತ್ತು ದಾರ್ಶನಿಕರ ಜೊತೆಯಲ್ಲಿ ಇಟ್ಟು ಒಂದು ತೌಲನಿಕವಾದ ವಿವೇಚನೆ ಮಾಡುವುದರಿಂದ ಅನೇಕ ರೀತಿಯ ಪ್ರಯೋಜನಗಳಿವೆ. ಇಂತಹ ಪ್ರಯತ್ನವೊಂದರ ಭಾಗವಾಗಿ ಇಲ್ಲಿ ಅಂಬೇಡ್ಕರ್‌ರನ್ನು ಸಮಾಜವಾದಿ ಚಿಂತಕ ಮತ್ತು ಹೋರಾಟಗಾರ ಡಾ. ರಾಮಮನೋಹರ ಲೋಹಿಯಾರ ಜೊತೆಗಿಟ್ಟು ನೋಡುವ ಒಂದು ಪ್ರಯತ್ನ ಮಾಡಲಾಗಿದೆ. ಹೀಗೆ ಇವರಿಬ್ಬರನ್ನು ಜೊತೆಗಿಟ್ಟು ನೋಡುವ ಕ್ರಮದಲ್ಲೇ ಗಾಂಧೀಜಿಯ ಪ್ರವೇಶ ಅನಿವಾರ್ಯವಾಗುತ್ತದೆ. ಇದನ್ನು ಮೊದಲಿಗೇ ತಿಳಿಸಿ ನನ್ನ ಮಾತುಗಳನ್ನು ಮುಂದುವರೆಸಬಯಸುವೆ.

ಲೋಹಿಯಾ, ಗಾಂಧಿ ಮತ್ತು ಅಂಬೇಡ್ಕರ್ ಒಂದು ರೀತಿಯ ತ್ರಿಕೋನ ಸಂಬಂಧವುಳ್ಳವರು. ಒಂದು ರೀತಿಯಲ್ಲಿ, ತ್ರಿಕೋನ ಪ್ರೇಮಕಥೆ ಅಂತ ಹೇಳ್ತೀವಲ್ಲ ಸಿನಿಮಾಗಳಲ್ಲಿ, ಆ ರೀತಿ ಒಂದು ತರಹದ ತ್ರಿಕೋನ ದುರಂತ ಪ್ರೇಮಕಥೆ ಇದು. ಈ ಮೊದಲೇ ಸೂಚಿಸಿದಂತೆ, ಲೋಹಿಯಾ ಅವರ ಬಗ್ಗೆ ಮಾತಾಡಬೇಕಾದರೆ ಗಾಂಧಿಯ ಪ್ರಸ್ತಾವವಿಲ್ಲದೇ ಮಾತಾಡೋದಕ್ಕೆ ಸಾಧ್ಯವೇ ಇಲ್ಲ. ಹಾಗೇನೇ ಅಂಬೇಡ್ಕರ್ ಬಗ್ಗೆ ಮಾತಾಡಬೇಕಾದರೂ ಗಾಂಧಿಯ ಪ್ರಸ್ತಾವವಿಲ್ಲದೇ ಮಾತಾಡೋಕ್ಕೆ ಸಾಧ್ಯವೇ ಇಲ್ಲ. ಅಂಬೇಡ್ಕರ್‌ಗೆ ಗಾಂಧಿ ಒಂದು ರೆಫರೆನ್ಸ್, ಗಾಂಧಿಗೆ ಅಂಬೇಡ್ಕರ್ ಒಂದು ರೆಫರೆನ್ಸ್. ಹಾಗೇನೇ ಲೋಹಿಯಾ ಮತ್ತು ಗಾಂಧಿ ನಡುವಣ ಸಂಬಂಧ ಕೂಡ.

ಗಾಂಧಿ–ಅಂಬೇಡ್ಕರ್ ಮತ್ತು ಲೋಹಿಯಾ ಕರ್ನಾಟಕದ ಆಧುನಿಕ ಚರಿತ್ರೆಯಲ್ಲಿ ಬಹಳ ಜನಪ್ರಿಯವಾದ ಹೆಸರುಗಳು. ಕರ್ನಾಟಕದಲ್ಲಿ ರಾಜಕೀಯ ಅಥವಾ ಸಾಮಾಜಿಕ ಕಳಕಳಿಯಿರುವ ಜನರಲ್ಲಿ ಲೋಹಿಯಾ ಮತ್ತು ಅಂಬೇಡ್ಕರ್ ಹೆಸರುಗಳನ್ನು ಕೇಳದಂತಹವರು ಬಹಳ ಕಡಿಮೆ. ೬೦–೭೦ರ ದಶಕದಲ್ಲಿ ಲೋಹಿಯಾ ಅವರು ಕರ್ನಾಟಕದ ಯುವಜನರ ಸ್ಫೂರ್ತಿಶಕ್ತಿಯಾಗಿದ್ದರು. ಹಾಗೇ, ಕರ್ನಾಟಕದ ರಾಜಕಾರಣದ ಸ್ಫೂರ್ತಿಶಕ್ತಿಯೂ ಅಗಿದ್ದರು. ನಂತರ ೮೦–೯೦ರ ದಶಕದ ಹೊತ್ತಿಗೆ ಅದೆಲ್ಲ ಅಂಬೇಡ್ಕರ್ ಕೇಂದ್ರಿತವಾಯಿತು. ಅದಕ್ಕೆ ಕಾರಣ ಕೂಡ ಇದೆ. ಈ ಅಂಬೇಡ್ಕರ್ ಧಾರೆ ಕರ್ನಾಟಕದಲ್ಲಿ ಆರಂಭವಾಗಿದ್ದು, ಲೋಹಿಯಾ ಧಾರೆಯಿಂದ ಒಡೆದುಬಂದು; ಅಥವಾ ದಲಿತ ದೃಷ್ಟಿಯಿಂದ ಅದರ ವಿಸ್ತರಣೆಯ ಪ್ರಯತ್ನವಾಗಿ. ಅದು ಸಮಾಜವಾದಿ ಯುವಜನ ಸಭಾದಲ್ಲಿದ್ದ (ಸಮಾಜವಾದಿ ಯುವಜನ ಸಭಾ ಅಂತಂದರೆ, ಲೋಹಿಯಾ ಅವರ ಸಮಾಜವಾದಿ ಧಾರೆ ಅಥವಾ ಪಕ್ಷದ ಯುವಜನ ಶಾಖೆ) ಇಬ್ಬರು ವ್ಯಕ್ತಿಗಳು ದೇವನೂರು ಮಹಾದೇವ ಮತ್ತು ಬಿ.ಕೃಷ್ಣಪ್ಪ ಹಾಗೂ ನಂತರದಲ್ಲಿ ಕಮ್ಯೂನಿಸ್ಟ್ ಧಾರೆಯಿಂದ ಸಿದ್ದಲಿಂಗಯ್ಯ ಸಮಾಜವಾದಿ ಯುವಜನ ಸಭಾದ ಚೌಕಟ್ಟನ್ನು ವಿಸ್ತರಿಸಿಕೊಂಡು ಅಥವಾ ಅದನ್ನು ಒಡೆದುಕೊಂಡು ದಲಿತ ಸಂಘರ್ಷ ಸಮಿತಿಯನ್ನು, ದಲಿತ ಚಳುವಳಿಯನ್ನು ಕರ್ನಾಟಕದಲ್ಲಿ ಆರಂಭ ಮಾಡಿದರು ಅಂತ ಹೇಳಬಹುದು.

ಯಾಕೆ, ಇವರಿಬ್ಬರಿಗೆ ಲೋಹಿಯಾರ ವಿಚಾರಧಾರೆ ಸಾಲದಾಯಿತೇ? ಅಂಬೇಡ್ಕರ್ ಕಡೆಗೆ ಯಾಕೆ ಬಂದ್ರು? ಅಂದ್ರೆ, ಅವರು ಲೋಹಿಯಾರನ್ನು ಬಿಟ್ಟು ಅಂಬೇಡ್ಕರರೆಡೆಗೆ ಬಂದ್ರು ಅಂತಲ್ಲ. ಎಪ್ಪತ್ತರ ದಶಕದ ಇಂದಿರಾ ಕಾಂಗ್ರೆಸ್ ರಾಜಕಾರಣ ಪರಿಶಿಷ್ಟ ಜಾತಿ–ವರ್ಗಗಳನ್ನು ತನ್ನ ಜನಪ್ರಿಯ 'ಸಮಾಜವಾದಿ' ಕಾರ್ಯಕ್ರಮಗಳು ಮತ್ತು ಘೋಷಣೆಗಳಿಗಾಗಿ ವಿಶೇಷ ಗುರಿಗಳನ್ನಾಗಿಸಿಕೊಂಡು ಅವುಗಳನ್ನು ವಿಸ್ತಾರವಾದ ಶೋಷಿತ ಸಮುದಾಯದಿಂದ ಬೇರೆ 'ಕತ್ತರಿಸಿ'ಟ್ಟು ಅವುಗಳ ಅಸ್ಮಿತೆಯನ್ನು ಪ್ರತ್ಯೇಕರಿಸಿದ್ದು, ಕರ್ನಾಟಕದಲ್ಲಿ ದೇವರಾಜ ಅರಸರ 'ಪ್ರಗತಿಪರ' ರಾಜಕಾರಣದ ಭಾಗವಾಗಿ ಜಾರಿಗೆ ಬಂದ ಭೂಸುಧಾರಣೆ, ಜೀತಪದ್ಧತಿ ನಿರ್ಮೂಲನೆ ಮತ್ತು ಖಾಸಗಿ ಸಾಲ ರದ್ದತಿಗಳ ಫಲಾನುಭವಿಗಳಾಗಿ ರಾಜ್ಯಮಟ್ಟದಲ್ಲಿ

ದಲಿತರು ಸಾಮಾನ್ಯ ಹಿತಾಸಕ್ತಿಗಳ ಒಂದು ದೊಡ್ಡ ಸಮೂಹವಾಗಿ ತಮ್ಮನ್ನು ತಾವು ಸ್ಪಷ್ಟವಾಗಿ ಗುರುತಿಸಿಕೊಳ್ಳಲು ಸಾಧ್ಯವಾದದ್ದು ಮತ್ತು ಇದೆಲ್ಲದರ ಜೊತೆಗೇ–ಇದಕ್ಕೆ ಪೂರಕವಾಗಿ–ಮಹಾರಾಷ್ಟ್ರದಲ್ಲಿ ಆರಂಭವಾದ ದಲಿತ್ ಪ್ಯಾಂಥರ್ಸ್ ಚಳುವಳಿ ಆ ರಾಜ್ಯದ ಗಡಿಗಳನ್ನೂ ದಾಟಿ ಅಂಬೇಡ್ಕರರ ವಿಚಾರಧಾರೆಗೆ ಒಂದು ಹೊಸ ಸಾಂಸ್ಕೃತಿಕ ತೀವ್ರತೆಯನ್ನು ಒದಗಿಸಿದ್ದು, ಎಲ್ಲಕ್ಕಿಂತ ಹೆಚ್ಚಾಗಿ ಕರ್ನಾಟಕದ ಸಮಾಜವಾದಿ ಚಳುವಳಿ ಬಿರುಕುಗೊಂಡು ಅದರ (ಲೇಖಕ–ಚಿಂತಕರನ್ನೊಳಗೊಂಡ) ಬೌದ್ಧಿಕ ಭಾಗ ತನ್ನ ಜಾತಿವಿರೋಧಿ ನೀತಿಯನ್ನು ತನ್ನದೇ ವಿಶಿಷ್ಟ ಕಾರಣಗಳಿಗಾಗಿ ಕೇವಲ ಬ್ರಾಹ್ಮಣ ವಿರೋಧಿ ನೀತಿಯನ್ನಾಗಿ ಪ್ರಸ್ತುತಗೊಳಿಸಿಕೊಂಡದ್ದು, ಈ ಪ್ರವೃತ್ತಿಯ ವಿರುದ್ಧ ನಡೆಸಿದ ಪರಿಣಾಮಕಾರಿ (ಅಪ)ಪ್ರಚಾರ ಮತ್ತು ಆಗ ಕರ್ನಾಟಕದಲ್ಲಿ ಹೊಸ ಹುರುಪಿನೊಂದಿಗೆ ಆರಂಭವಾದ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ವಿಸ್ತರಣಾ ಚಟುವಟಿಕೆಗಳು ಇವೆಲ್ಲ ಈ ನಾಯಕರ ಮೇಲೆ ಪ್ರಭಾವ ಬೀರಿರಬಹುದು. ಇವರಲ್ಲಿ ಕೃಷ್ಣಪ್ಪನವರು ತಮ್ಮನ್ನು ಅಪ್ಪಟ ಅಂಬೇಡ್ಕರ್‌ವಾದಿ ಎಂದು ಗುರುತಿಸಿಕೊಂಡರಾದರೂ, ಅವರ ಲೋಹಿಯಾ ಅಭಿಮಾನಕ್ಕೇನೂ ಚ್ಯುತಿಯುಂಟಾಗಿರಲಿಲ್ಲ. ಇನ್ನು ಮಹಾದೇವ ಅವರನ್ನು ದಲಿತ ಚಳುವಳಿಯೊಳಗಡೆಯೇ ಲೋಹಿಯಾವಾದಿ ಎಂದು ಗುರುತಿಸಿ/ಅನುಮಾನಿಸಲಾಗುತ್ತಿತ್ತು! ಈ ನಿರ್ದಿಷ್ಟ ಮತ್ತು ಸಂಕೀರ್ಣ ಚಾರಿತ್ರಿಕ ಕಾರಣಗಳ ಜೊತೆಗೇ ಹಲವು ತಾತ್ವಿಕ ಕಾರಣಗಳೂ ಮತ್ತು ಅವು ಹುಟ್ಟು ಹಾಕಿದ ರಾಜಕೀಯ ಸಂದರ್ಭಗಳೂ ಇದರ ಹಿಂದೆ ಇವೆ. (ಇದರ ವಿವರಗಳಿಗಾಗಿ ನನ್ನ 'ಸಮಾಜವಾದಿ ಸಂಕಥನ'ಗಳ ಸಂಪುಟಗಳಲ್ಲಿನ ಲೇಖನಗಳನ್ನು ಗಮನಿಸಬಹುದು.) ನನ್ನ ಮುಂದಿನ ಮಾತುಗಳಲ್ಲಿ ನಿಮಗೆ ಇದು ಸ್ಪಷ್ಟವಾಗ್ತಾ ಹೋಗ್ತದೆ ಅಂತ ನಾನು ಭಾವಿಸಿದ್ದೇನೆ.

ಇರಲಿ. ಅದಕ್ಕಿಂತ ಮುಂಚೆ, ಇವತ್ತು ಅಂಬೇಡ್ಕರ್ ಬಗ್ಗೆ ಮಾತಾಡಬೇಕಾದ್ರೆ ಸ್ವಲ್ಪ ಕಸಿವಿಸಿ, ಗೊಂದಲ ಮತ್ತು ಆತಂಕ ಕೂಡ ಉಂಟಾಗುತ್ತೆ ಎಂಬುದನ್ನು ಸ್ಪಷ್ಟವಾಗಿ ಹೇಳಿಯೇ ಇಲ್ಲಿ ಮುಂದುವರಿಯುವ ಅಗತ್ಯ ಇದೆ. ಅದನ್ನ ಅಂಬೇಡ್ಕರ್‌ವಾದದ ವಿದ್ವಾಂಸರು ಅಂತ ಇವೊತ್ತು ನಾವೇನು ಕರೀತೀವಿ, ಆ ಆನಂದ ತೇಲ್ತುಂಬ್ಡೆ ಅವರು–ಗೊತ್ತಿರಬೇಕು ನಿಮಗೆಲ್ಲ, ಅವರು ಪ್ರಕಾಶ್ ಅಂಬೇಡ್ಕರ್‌ರವರ ಅಳಿಯ. ಅಂದರೆ ಅಂಬೇಡ್ಕರ್‌ಗೆ ತುಂಬಾ ಹತ್ತಿರದ ಸಂಬಂಧಿಯಾದವರು – ಅವರು ಹೇಳ್ತಾರೆ; ಇವತ್ತು ಅಂಬೇಡ್ಕರ್ ಚಿಂತನೆ ತುಂಬಾ ಗೊಂದಲಕ್ಕೆ ಸಿಕ್ಕಿದೆ ಅಂತ. ವಿವಿಧ ವಿಷಯಗಳ ಬಗೆಗೆ ಅಂಬೇಡ್ಕರ್ ತಳೆದ ನಿಲುವುಗಳು ಸ್ಫುಟವಾಗಿ ದಾಖಲಾಗಿವೆ ನಿಜ. ಆದ್ರೆ ಅವರು ತಮ್ಮ ಬದುಕಿನ ವಿವಿಧ ಘಟ್ಟಗಳಲ್ಲಿ ತಾವು ತೆಗೆದುಕೊಂಡ ನಿಲುವು ಮತ್ತು ತೀರ್ಮಾನಗಳ ಬಗ್ಗೆ ನಂತರದ ದಿನಗಳಲ್ಲಿ ಆಡಿದ ಮಾತುಗಳನ್ನು ನೋಡಿದರೆ ಅಂಬೇಡ್ಕರ್ ಚಿತ್ರ ಆಂತರಿಕವಾಗಿ ಮಸುಕಾಗಿದೆ, ಅಂದರೆ ಅಸ್ಪಷ್ಟವಾಗಿದೆ ಅಂತ ಅವರು ಹೇಳ್ತಾರೆ. ಯಾತಕ್ಕೆ ಅಂತಂದ್ರೆ ತುಂಬಾ ಭಿನ್ನ ವಿಭಿನ್ನವಾದ ಅಂಬೇಡ್ಕರ್ ಚಿತ್ರಗಳು, ಸಿನಿಮಾಗಳು, ಕಿರುತೆರೆಯ

ಕಥಾನಕಗಳು, ಕ್ಯಾಲೆಂಡರ್‌ಗಳು, ಗಾನಮೇಳಗಳು, ಇವೆಲ್ಲವೂ ಎಂಥಾ ದೊಡ್ಡ ಸಂತೆಯನ್ನ ನಿರ್ಮಾಣ ಮಾಡಿವೆ ಅಂತಂದ್ರೆ, ಇದರಲ್ಲಿ ಯಾರು ನಿಜವಾದ ಅಂಬೇಡ್ಕರ್, ಯಾವ ಅಂಬೇಡ್ಕರ್‌ರನ್ನು ನಾವು ಆಯ್ಕೆ ಮಾಡಬೇಕು ಅನ್ನೋ ಗೊಂದಲ ಉಂಟಾಗ್ತಾ ಇದೆ ಅಂತ ತೇಲ್ತುಂಬ್ಡೆ ಹೇಳ್ತಾರೆ. ಮತ್ತು ಅಂಬೇಡ್ಕರ್ ಬಗ್ಗೆ ಮಾತಾಡ್ಬೇಕಾದರೆ ಸ್ವಲ್ಪ ದೈಹಿಕ ಎಚ್ಚರಿಕೆಯಿಂದ ಮಾತಾಡ್ಬೇಕಾದಂತಹ ಪ್ರಸಂಗ ಕೂಡ ಉಂಟಾಗಿದೆ ಇವತ್ತು. ಅದು ಕಳೆದ ಎರಡು ಮೂರು ದಶಕಗಳಲ್ಲಿ ಅಂಬೇಡ್ಕರ್ ಸುತ್ತ ಕಟ್ಟಲಾಗಿರುವ 'ಧಾರ್ಮಿಕ' ಎನ್ನಬಹುದಾದ ಪ್ರಭಾವಳಿ ಮತ್ತು ಅಂತಹ ಪ್ರಭಾವಳಿ ಹೇರುವ ವಿಧಿ ನಿಷೇಧಗಳ ರಾಜಕಾರಣವನ್ನು ನೋಡ್ತಾ ಬಂದ್ರೆ ಗೊತ್ತಾಗ್ತದೆ ಅದು. ಅಂಬೇಡ್ಕರ್ ಎಂಬ ಹೆಸರು ಇವೊತ್ತು ಬಹಳ ಸೂಕ್ಷ್ಮವಾದಂತಹ ಒಂದು ವಿದ್ಯಮಾನ ಆಗ್ಹೋಗಿಬಿಟ್ಟಿದೆ. ಈ ಹಿನ್ನೆಲೆಯಲ್ಲಿ ಇವತ್ತು ನಾನು ಸ್ವಲ್ಪ ಆತಂಕದಿಂದಲೇ ಮಾತಾಡ್ತಾ ಇದ್ದೇನೆ. ಆದ್ರೂ, ಇದು ವಿಶ್ವವಿದ್ಯಾನಿಲಯದ ವಿಚಾರ ಸಂಕಿರಣ–ಆಕಾಶವಾಣಿಯ ವಿಚಾರ ಸಂಕಿರಣ. ಎದುರಿಗಿರುವವರು ಬಹುಪಾಲು ಚಿಂತನಶೀಲರು. ಆದ್ದರಿಂದ ಅಕಾಡೆಮಿಕ್ ಆದ ಧೈರ್ಯದಿಂದ ಮಾತಾಡಬಹುದು ಅಂತ ಭಾವಿಸಿ ಮಾತಾಡ್ತಾ ಇದೀನಿ.

ಲೋಹಿಯಾ ಮತ್ತು ಅಂಬೇಡ್ಕರ್ ನಡುವಣ ಒಂದು ತೌಲನಿಕ ವಿವೇಚನೆ ಮಾಡ್ಬೇಕಾದರೆ ಕೆಲವು ಆಧಾರ ಸಂಗತಿಗಳನ್ನು ನಾವು ಮೊದಲು ಗಮನಿಸಬೇಕಾಗ್ತದೆ. ಅವು ಇವರ ತೌಲನಿಕ ಅಧ್ಯಯನಕ್ಕೆ ಒಂದು ಪರಿಪ್ರೇಕ್ಷ್ಯವನ್ನು ಒದಗಿಸುವಂತಹ ಕೆಲವು ಸಂಗತಿಗಳನ್ನು ಒಳಗೊಂಡಿವೆ. ಮೊದಲನೆಯದಾಗಿ ಅಂಬೇಡ್ಕರ್ ಮತ್ತು ಲೋಹಿಯಾ ನಡುವೆ ಸುಮಾರು ೨೦ ವರ್ಷಗಳ ವಯಸ್ಸಿನ ಅಂತರ ಇದೆ ಅನ್ನೋದನ್ನ ಗಮನಿಸಬೇಕು. ಆ ಥರ ನೋಡಿದ್ರೆ ಅವರಿಬ್ಬರೂ ವಿಭಿನ್ನ ತಲೆಮಾರುಗಳಿಗೆ ಸೇರಿದವರು. ನಮ್ಮ ಸರ್ಕಾರಿ ವೃತ್ತಿ ಪರಿಭಾಷೆಯಲ್ಲಿ ಹೇಳೋದಾದ್ರೆ ಅಂಬೇಡ್ಕರ್‌ಗೆ ಲೋಹಿಯಾ ಬಹಳ ಜ್ಯೂನಿಯರ್, ಪೊಲಿಟಿಕಲ್ ಕೆರಿಯರ್‌ನಲ್ಲಿ. ಇನ್ನೊಂದು ಮಾತು ಅಂತಂದ್ರೆ ಅಂಬೇಡ್ಕರ್ ಬ್ರಿಟಿಷ್ ಪ್ರಭುತ್ವದ ಸೈನ್ಯಾಧಿಕಾರಿಯೊಬ್ಬರ ಮಗ ಅಥವಾ ಸುಬೇದಾರ್‌ರ ಮಗ. ಬ್ರಿಟಿಷ್ ಪ್ರಭುತ್ವದ ಕೆಲವು ನಾಗರಿಕ, ಸೌಲಭ್ಯಗಳನ್ನು–ಅವು ಎಷ್ಟೇ ಕನಿಷ್ಟತಮವಾದರೂ–ಅವರ ಕುಟುಂಬ ಪಡೀತಾ ಇತ್ತು. ಆ ಕಾರಣದಿಂದಾಗಿ ಬ್ರಿಟಿಷ್ ಪ್ರಭುತ್ವದ ಬಗ್ಗೆ ಅವರ ಕುಟುಂಬಕ್ಕೆ ಒಂದು ಅಭಿಮಾನ, ಕೃತಜ್ಞತೆ ಇತ್ತು. ಅದಕ್ಕೆ ತದ್ವಿರುದ್ಧವಾಗಿ ಲೋಹಿಯಾ, ಬ್ರಿಟಿಷ್ ಪ್ರಭುತ್ವದ ವಿರುದ್ಧ ಹೋರಾಡ್ತಿದ್ದಂತಹ ಗಾಂಧಿಯ ಶಿಷ್ಯನಾಗಿ ಗಾಂಧಿಯವರ ಖಾದಿ ಮತ್ತು ಗ್ರಾಮೋದ್ಯೋಗ ಚಳುವಳಿಯ ಸಕ್ರಿಯ ಸದಸ್ಯನಾಗಿ ಭಾಗವಹಿಸಿದ್ದಂತಹ ಹೀರಾಲಾಲರ ಮಗ. ಹೀಗೆ ಇಬ್ಬರೂ ಕೌಟುಂಬಿಕ ಹಿನ್ನೆಲೆಗಳಲ್ಲಿ ತದ್ವಿರುದ್ಧ ಧ್ರುವಗಳಿಗೆ ಸೇರಿದವರು. ಇವರಿಬ್ಬರ ನಡುವಣ ಇನ್ನೂ ಒಂದು ಸಾದೃಶ್ಯ ಏನೂಂತಂದ್ರೆ ಅಂಬೇಡ್ಕರ್ ಮುಂಬೈಯಂತಹ ಬೃಹತ್ ನಗರದ ಒಂದು ಸರ್ಕಾರೀ ಚಾಳ್‌ನಲ್ಲಿ ಬೆಳೆದವರು. ಲೋಹಿಯಾ ಅವರು ಅಯೋಧ್ಯೆಯ ಬಳಿಯ ಒಂದು ಸಣ್ಣ ಕುಗ್ರಾಮ, ಅಕ್ಬರ್‌ಪುರ ಅಂತ, ಅಲ್ಲಿ

ಹುಟ್ಟಿ ಬಾಲ್ಯವನ್ನು ಕಳೆದವರು. ಅಂದರೆ, ಅಂಬೇಡ್ಕರ್ ನಗರದ ಹಿನ್ನೆಲೆಯಿಂದ ಬಂದಂತಹವರು, ಲೋಹಿಯಾ ಗ್ರಾಮೀಣ ಹಿನ್ನೆಲೆಯಿಂದ ಬಂದವರು. ಜೊತೆಗೆ ಲೋಹಿಯಾ ಅವರು ಅಯೋಧ್ಯಾ ಬಳಿ ಇದ್ದದ್ದರಿಂದ ಅವರು ರಾಮ ಕಥೆಗಳನ್ನ ಕೇಳಿಕೊಂಡೇ ಬೆಳೆದಂತಹವರು. ಅಂಬೇಡ್ಕರ್ ಅವರ ಕುಟುಂಬ ಕಬೀರ್‌ಪಂಥಿ ಅಂತ ಹೇಳ್ತಾರೆ. ಕಬೀರ್ ರಾಮನ ಆರಾಧಕನೇ ಆದ್ರೂ ಅವನು ರಾಮನನ್ನ ನೋಡಿರೋ ರೀತಿನೇ ಬೇರೆಯಾಗಿರೋದ್ರಿಂದ ಬಾಲಕ ಅಂಬೇಡ್ಕರ್ ಮನಸ್ಸಿನಲ್ಲಿ ಕೂತದ್ದು ಸ್ವಲ್ಪ 'ಆಧುನಿಕ' ಎಂದು ಕರೆಯಬಹುದಾದ–ಇಂದಿನ 'ಸೆಕ್ಯುಲರ್' ಅರ್ಥಕ್ಕೆ ಸಮೀಪವಾದ–ರಾಮನದ್ದು. ಲೋಹಿಯಾರದ್ದು ಹೆಚ್ಚು ಭಕ್ತಿ ಪಂಥದ, ಸ್ವಲ್ಪ 'ರಮ್ಯ' ಶೈಲಿಯ ಕಥನದಲ್ಲಿ ಸೃಷ್ಟಿಯಾದ ರಾಮ.

ಇವರಿಬ್ಬರ ನಡುವಣ ತೌಲನಿಕತೆಯ ಸಂದರ್ಭದಲ್ಲಿ ಗಮನಿಸಬಹುದಾದ ಇನ್ನೂ ಒಂದು ಸಂಗತಿ ಏನೂಂತಂದ್ರೆ, ಅಂಬೇಡ್ಕರ್‌ರವರು ಮಹಾರಾಜರೊಬ್ಬರ ಅನುಗ್ರಹದಿಂದ ಉನ್ನತ ಶಿಕ್ಷಣವನ್ನು ಪಡೆದವರು. ಅಮೇರಿಕಾಗೆ ಹೋದವರು. ಅಮೆರಿಕಾದ ಕೊಲಂಬಿಯಾ ಯೂನಿವರ್ಸಿಟಿಯಲ್ಲಿ ವಿದ್ಯಾಭ್ಯಾಸ ಮಾಡಿದವರು. ಅಮೆರಿಕಾದ, ಯಾವುದನ್ನ ನಾವು ಪೊಲಿಟಿಕಲ್ ಸೈನ್ಸ್‌ನಲ್ಲಿ ಲಿಬರಲ್ ಡೆಮಾಕ್ರಸಿ ಅಂತ ಕರೀತೀವಲ್ಲ–ಸಂಸದೀಯ ಪ್ರಜಾಪ್ರಭುತ್ವವೇ ಶ್ರೇಷ್ಠ ಮತ್ತು ಪ್ರಭುತ್ವಕ್ಕೆ ಪ್ರಜೆಗಳು ಯಾವಾಗಲೂ ನಿಷ್ಠರಾಗಿ ಬಾಳಿದರೆ ಮಾತ್ರ ಅವರ ಕಲ್ಯಾಣ ಸಾಧ್ಯ ಅಂತ ನಂಬಿದಂತಹ; ಒಂದು ರೀತಿಯ ಕಲ್ಯಾಣ ರಾಜ್ಯದ ಕಲ್ಪನೆಗೆ ಹೆಚ್ಚು ಒತ್ತುಕೊಟ್ಟಂತಹ–ಒಂದು ಲಿಬರಲ್ ಸಂಪ್ರದಾಯದ ಅನುಯಾಯಿಯಾಗಿ ಅಂಬೇಡ್ಕರ್ ಬೆಳೆದರು. ಆದರೆ ಲೋಹಿಯಾ, ಅವರು ಮಾರ್ವಾಡಿ ಜಾತಿಗೆ ಸೇರಿದವರು. ಬಡ ಮಾರ್ವಾಡಿ ಮಕ್ಕಳ ಕಲ್ಯಾಣನಿಧಿಯ ಅನುಗ್ರಹದಿಂದ ಅವರು ಉನ್ನತ ಶಿಕ್ಷಣಕ್ಕೋಸ್ಕರ ಇಂಗ್ಲೆಂಡ್‌ಗೆ ಹೋಗಿ ನಂತರ ಜರ್ಮನಿಗೆ ಹೋದವರು. ಜರ್ಮನಿ ಆವಾಗ ಹ್ಯಾಗಿತ್ತು ಅಂತಂದ್ರೆ, ೧೯೩೦ರ ದಶಕದಲ್ಲಿ, ಎರಡನೇ ಮಹಾಯುದ್ಧದ ಪೂರ್ವರಂಗದ ಕುದಿಬಿಂದು ಅದು. ಅಲ್ಲಿ ಬಂಡವಾಳವಾದ, ಮಾರ್ಕ್ಸ್‌ವಾದ, ಸಾಮಾಜಿಕ ಪ್ರಜಾಪ್ರಭುತ್ವ (ಸೋಶಿಯಲ್ ಡೆಮಾಕ್ರಸಿ) ಸೇರಿದಂತೆ ವಿವಿಧ ಆವೃತ್ತಿಗಳ ಸಮಾಜವಾದಗಳು, ಅಂದ್ರೆ ಇವತ್ತು ನಾವೇನು ಮಾತಾಡ್ತೀವಲ್ಲ ರಾಜಕೀಯಶಾಸ್ತ್ರದ ಬೇರೆ ಬೇರೆ ಶಾಖೆಗಳು ಅಥವಾ ಬೇರೆ ಬೇರೆ ಫಿಲಾಸಫಿಗಳು, ಅವೆಲ್ಲವೂ ಮುಖಾಮುಖಿಯಾಗ್ತಿದ್ದಂತಹ ಒಂದು ಕುದಿಬಿಂದು. ಅಲ್ಲಿ ಲೋಹಿಯಾ ಅವರು ಒಬ್ಬ ಅನಾರ್ಕಿಸ್ಟ್ ಆಗಿ ಬೆಳೆದರು. ಅನಾರ್ಕಿಸ್ಟ್ ಅಂದರೆ ಕನ್ನಡದಲ್ಲಿ ಅರಾಜಕತಾವಾದ ಅಂತ ಬಹಳ ಸಡಿಲವಾಗಿ ಅನುವಾದಿಸ್ತಾರೆ. ಅದು ತಪ್ಪು. ಹೀಗಾಗಿ ಅದಕ್ಕೊಂದು ಸ್ವಲ್ಪ ಅನುಮಾನಾಸ್ಪದವಾದ ಒಂದು ಅರ್ಥ ಬಂದುಬಿಟ್ಟಿದೆ. ಅರಾಜಕತಾವಾದಿಗಳು ಅಂತ ಅಂದ್ರೆ ಗೊಂದಲ ಉಂಟುಮಾಡುವವರು, ವಿನಾಶಾನಂದರು ಅಂತ ಅಲ್ಲ. ಅನಾರ್ಕಿ ಕೂಡ ಒಂದು ಗಂಭೀರವಾದ ರಾಜಕೀಯ ಫಿಲಾಸಫಿ. ಅಂದ್ರೆ ಪ್ರಭುತ್ವವನ್ನು ಯಾವಾಗಲೂ ಅನುಮಾನದಿಂದ ನೋಡ್ತಕ್ಕಂತದ್ದು.

ಪ್ರಭುತ್ವ ವ್ಯಕ್ತಿಯನ್ನ ದಮನ ಮಾಡುತ್ತೆ. ಅವನ ಸಾಧ್ಯತೆ-ಸಾಮರ್ಥ್ಯಗಳನ್ನ ತನ್ನ ತಹಬಂದಿಗೆ ತೆಗೆದುಕೊಂಡುಬಿಡುತ್ತೆ. ಆದ್ದರಿಂದ ಪ್ರಭುತ್ವಕ್ಕೆ ಒಂದು ಮಿತಿಯಿರ್ಬೇಕು, ಪ್ರಭುತ್ವದ ಬಗ್ಗೆ ಯಾವಾಗಲೂ ಒಂದು ಕಣ್ಣಿಟ್ಟಿರ್ಬೇಕು ಅಂತ ನಂಬಿಕೆ ಇಟ್ಟಿರ್ತಕ್ಕಂಥಾ ಒಂದು ಸಂಪ್ರದಾಯ ಅದು. ಅದರ ಸರಿಯಾದ ಪಾರಿಭಾಷಿಕ ಕನ್ನಡಾನುವಾದ, ಅನಧಿಪತ್ಯವಾದ ಎಂದಿರಬೇಕು. ಮೂಲತಃ ಆ ಸಂಪ್ರದಾಯಕ್ಕೆ ಸೇರಿದವರು ಲೋಹಿಯಾ ಅವರು. ಅವರು ರೂಪಿಸಿದ ಸಮಾಜವಾದಕ್ಕೆ ಅಡಿಗಲ್ಲೂ ಅದೇ.

ಇದೆಲ್ಲದರ ಜೊತೆಗೆ ಇನ್ನೊಂದು ಸಂಗತಿಯನ್ನೂ ಇಲ್ಲಿ ಹೇಳಬೇಕು. ಅಂಬೇಡ್ಕರ್ ಅವರು ಆಸಕ್ತಿಯಿಂದ ಓದಿದ್ದು ಸಮಾಜ ವಿಜ್ಞಾನ, ಕಾನೂನು ಮತ್ತು ಸಾರ್ವಜನಿಕ ವ್ಯವಹಾರ. ಸಂಶೋಧನೆಗಳೂ ಅವಕ್ಕೇ ಸಂಬಂಧಿಸಿದವು. ನಂತರ ಮಾಡಿದ್ದು ಇದೇ ವಿಷಯಗಳ ಬೋಧಕ ಮತ್ತು ವಕೀಲಿ ವೃತ್ತಿ. ಜೊತೆಗೇ ಜಾತಿಪದ್ಧತಿಯ ವಿರುದ್ಧ, ನಿರ್ದಿಷ್ಟವಾಗಿ ರಾಷ್ಟ್ರೀಯ ಮುಖ್ಯ ಪ್ರವಾಹದ ಪ್ರತೀಕವಾಗಿದ್ದ ಗಾಂಧಿ ಎದುರು ಕಟು ನಿಷ್ಠುರ ಹೋರಾಟ. ಹೀಗಾಗಿ ಅವರದ್ದು-ಅವರ ವ್ಯಕ್ತಿತ್ವದ್ದು ಅಂತಲೂ ಹೇಳಬಹುದು- ಒಂದು ತರಹದ ತಾರ್ಕಿಕ ಗದ್ಯದ ಲಯ, ಶೈಲಿ. ಈ ಲೋಹಿಯಾ ಇದ್ದಾರಲ್ಲ, ಅವರು ಓದಿದ್ದು ಮುಖ್ಯವಾಗಿ ಚರಿತ್ರೆ ಮತ್ತು ರಾಜಕೀಯ ತತ್ವಶಾಸ್ತ್ರವನ್ನು. ಅವರ ಡಾಕ್ಟೊರೇಟ್ ಕೆಲಸ ಕೂಡ ಅದಕ್ಕೇ ಸಂಬಂಧಿಸಿದ್ದು. ಇಷ್ಟೆಲ್ಲಾ ಉನ್ನತ ವಿದ್ಯಾಭ್ಯಾಸ ಮಾಡಿಬಂದ್ರೂ ಕೂಡ ಅವರು ಯಾವುದೇ ಉದ್ಯೋಗಕ್ಕೆ ಸೇರಲಿಲ್ಲ. ಆದಾಯವಿಲ್ಲದೇ ಅಲೆಮಾರಿಯಾಗಿಯೇ ಇದ್ದು ಗಾಂಧಿ ಪ್ರಭಾವದಲ್ಲಿ-ಅವರಿಂದ ವಿಮರ್ಶಾತ್ಮಕ ದೂರದಲ್ಲಿದ್ದುಕೊಂಡೂ-ಸ್ವಾತಂತ್ರ್ಯ ಹೋರಾಟದಲ್ಲಿ ಸಂಕಷ್ಟ ಮತ್ತು ಸಾಹಸಪೂರ್ಣ ಪಾತ್ರ ವಹಿಸುತ್ತಾ ತೊಡಗಿಕೊಂಡವರು. ಆದ್ದರಿಂದ ಒಂದು ರೀತಿಯ ತತ್ವಪದಕಾರನ ಪದ್ಯ ಶೈಲಿ ಅವರದ್ದು. ಈ ಗದ್ಯ ಮತ್ತು ಪದ್ಯ. ಹೀಗೆ ಬೇರೆಬೇರೆ ಒಂದು ನೆಲೆಗಳಿಂದ ಈ ಇಬ್ಬರ ವ್ಯಕ್ತಿತ್ವಗಳು ಬೆಳೀತಾ ಹೋಗ್ತವೆ. ಈ ಎಲ್ಲ ಸಾದೃಶ್ಯಗಳನ್ನು ಗಮನಿಸ್ತಾ ಹೋದ್ರೆ ನಮಗೆ ಲೋಹಿಯಾ ಮತ್ತು ಅಂಬೇಡ್ಕರ್ ನಡುವಣ ಈ ತೌಲನಿಕತೆ ಒಂದು ವಿಶೇಷ ರೂಪವನ್ನು ಪಡೆದುಕೊಳ್ಳುವುದು ಕಾಣ್ತಾ ಹೋಗುತ್ತೆ.

ಅಂಬೇಡ್ಕರ್ ಮತ್ತು ಲೋಹಿಯಾ ಸುಮಾರು ೨೫ ವರ್ಷಗಳ ಕಾಲ ಸಾರ್ವಜನಿಕ ಜೀವನದಲ್ಲಿ ಒಂದೇ ಕಾಲಘಟ್ಟದಲ್ಲಿ ಇದ್ದರೂ ಕೂಡ ಪರಸ್ಪರ ಭೇಟಿಯಾಗಲಿಲ್ಲ. ಭೇಟಿಯಾಗುವಂತಹ ಸಂದರ್ಭ ಬಂದಾಗ ಕೂಡ ಮುಖತಃ ಭೇಟಿಯಾಗಲು ಕಾಲ ಕೂಡಿಬರಲೇ ಇಲ್ಲ. ಯಾಕೇಂತ ಅದಕ್ಕೆ ಆಮೇಲೆ ಬರೋಣ. ಇನ್ನೂ ಒಂದು ಮುಖ್ಯ ಸಂಗತಿಯನ್ನು ಇಲ್ಲಿ ಹೇಳಬೇಕು. ಯಾರನ್ನೇ ಆಗಲಿ ಅಂಬೇಡ್ಕರ್ ಜೊತೆ ಹೋಲಿಸೋಕ್ಕೆ ಶುರು ಮಾಡ್ದಾಗ ಅಥವಾ ಒಂದು ತೌಲನಿಕತೆಯ ಪ್ರಯತ್ನಕ್ಕೆ ಕೈಹಾಕ್ದಾಗ, ಮತ್ತೆ ತೇಲ್ತುಂಬ್ಡೆ ಮಾತುಗಳಲ್ಲೇ ಹೇಳೋದಾದ್ರೆ, ತುಂಬ ಗೊಂದಲಗಳುಂಟಾಗ್ತವೆ ನಮಗೆ. ತೌಲನಿಕತೆಗೆ ಯಾವ ಅಂಬೇಡ್ಕರ್‌ರನ್ನ ನಾವು ಆರಿಸಿಕೊಳ್ಳಬೇಕು? ತೇಲ್ತುಂಬ್ಡೆ ಈ

ಸಂಬಂಧವಾಗಿ ಬಹುರೂಪಿ ಗಾಂಧಿ ಅನ್ನೋಹಾಗೆ ಬಹುರೂಪಿ ಅಂಬೇಡ್ಕರ್ ಅನ್ನುವ ಒಂದು ಸಂಕಥನವನ್ನ ಕಟ್ಟಿಕೊಟ್ಟಿದ್ದಾರೆ. ಅಂಬೇಡ್ಕರ್ ಚಿಂತನಾ ಲಹರಿ ವಿವಿಧ ಕಾಲಘಟ್ಟಗಳಲ್ಲಿ ಹರಿದ ವಿವಿಧ ದಿಕ್ಕುಗಳು ಮತ್ತು ಅವು ಕಟ್ಟಿಕೊಟ್ಟ ಅಂಬೇಡ್ಕರ್ ವ್ಯಕ್ತಿತ್ವಗಳ ತುಲನೆ ಮಾಡುತ್ತಾ ಇವೊತ್ತು ಯಾವ ಅಂಬೇಡ್ಕರ್‌ರನ್ನ ನಾವು ಮಾರ್ಗದರ್ಶಕ ಅಂತ ಸ್ವೀಕರಿಸಬೇಕು? ಎಂಬ ಪ್ರಶ್ನೆಯನ್ನ ಮುಂದಿಡ್ತಾರೆ. ೧೯೩೦ರ ದಶಕದಲ್ಲಿ ಈ ಜಾತಿ ವ್ಯವಸ್ಥೆಯನ್ನವರು ಏನು ವ್ಯಾಖ್ಯಾನ ಮಾಡಿದ್ರಲ್ಲ, ಸಗೋತ್ರ ಮತ್ತು ವಿ(ಭಿನ್ನ)-ಗೋತ್ರಗಳ ವಿವಾಹದ ಆಧಾರದ ಮೇಲೆ ಜಾತಿಪದ್ಧತಿ ಸೃಷ್ಟಿ ಆಯಿತು ಅಂತ ಮತ್ತು ಅಂತರ್ಜಾತಿ ವಿವಾಹ ಮತ್ತು ಸಮೂಹ ಭೋಜನಗಳ ಮೂಲಕ ನಾವು ಜಾತಿಪದ್ಧತಿಯ ವಿನಾಶ ಮಾಡಬಹುದು ಅಂತ ಹೇಳಿ, ಹಿಂದೂ ಸಮಾಜ ವಿಮೋಚನೆ ಸಾಧಿಸಬಹುದು ಅಂತ ವಾದಿಸಿದ ಅಂಬೇಡ್ಕರ್‌ರನ್ನು ನಾವು ಸ್ವೀಕರಿಸಬೇಕೋ ಅಥವಾ ಅದು ಸಾಧ್ಯವಿಲ್ಲ ಅನ್ನಿಸಿ, ಇಸ್ಲಾಂಗೆ ಮತಾಂತರವಾಗೋ ಇಂಗಿತ ತೋರಿದರಲ್ಲಾ-ಇಸ್ಲಾಂಗೆ ಮತಾಂತರ ಆಗ್ಲಿಲ್ಲ ಅನ್ನೋದು ಬೇರೆ ವಿಷಯ-ಆ ಅಂಬೇಡ್ಕರ್ ಬೇಕೋ ಅಥವಾ ಸಂವಿಧಾನವನ್ನ ರಚನೆ ಮಾಡೋ ಪ್ರಕ್ರಿಯೆ ಆರಂಭವಾದಾಗ, ಈ ದೇಶಕ್ಕೆ ಪ್ರತ್ಯೇಕ ಸಂವಿಧಾನ ಏನೂ ಬೇಕಾಗಿಲ್ಲ, ೧೯೩೫ರ ಇಂಡಿಯಾ ಆಕ್ಟ್ ಸಾಕು ಅಂತ ಹೇಳಿದ ಅಂಬೇಡ್ಕರ್ ಬೇಕೋ ಅಥವಾ ತುಂಬಾ ಶಿಸ್ತುಬದ್ಧವಾದ ಸಂವಿಧಾನವನ್ನ ರಚಿಸಿದ ಅಂಬೇಡ್ಕರ್ ಬೇಕೋ ನಮಗೆ? ಅಥವಾ ಕೆಲವೇ ವರ್ಷಗಳಲ್ಲಿ ಇದು ನನ್ನ ಕೈನಿಂದ ಇತರರು ಮಾಡಿಸಿದ ಕೆಲಸ; ಈ ಸಂವಿಧಾನವನ್ನು ನಾನೇ ಕೈಯಾರೆ ಸುಡಲು ಸಿದ್ಧ ಎಂದು ಆಕ್ರೋಶಗೊಂಡ ಅಂಬೇಡ್ಕರ್ ಬೇಕೋ? ದಲಿತರನ್ನ ಮೀಸಲಾತಿ ಮೂಲಕ ರಕ್ಷಿಸುವ ಯೋಜನೆ ರೂಪಿಸಿದ ಅಂಬೇಡ್ಕರ್ ಬೇಕೋ ಅಥವಾ ಮೀಸಲಾತಿ ಪಡೆದು ಮುಂದುವರೆದ ದಲಿತರು ತಮಗೆ ಕೈಕೊಟ್ಟರು ಎಂದು ದುಃಖಿಸಿದ ಅಂಬೇಡ್ಕರರು ಬೇಕೋ? ಈ ಮಾರ್ಕ್ಸಿಸ್ಟರು ನಮ್ಮ ಶತ್ರುಗಳು ಅಂತ ಹೇಳಿದ ಅಂಬೇಡ್ಕರ್ ಬೇಕೋ ಅಥವಾ ನಮಗೆ ಎರಡೇ ಪರ್ಯಾಯ ಇರೋದು- ಒಂದು ಮಾರ್ಕ್ಸ್‌ವಾದ ಇನ್ನೊಂದು ಬೌದ್ಧಧರ್ಮ ಅಂತ ಹೇಳಿದ ಅಂಬೇಡ್ಕರ್ ಬೇಕೋ? ಹೀಗೆ ಅಂಬೇಡ್ಕರ್ ನಮಗೆ ಹಲವಾರು ಆವೃತ್ತಿಗಳಲ್ಲಿ ಕಾಣೋಕ್ಕೆ ಶುರುಮಾಡ್ತಾರೆ.

ಇದಕ್ಕೆ ಕಾರಣ ಇದೆ. ಅದನ್ನ ತೇಲ್ತುಂಬ್ಡೆ ಹೇಳೋದಿಲ್ಲ. ಆದರೆ ಅಂಬೇಡ್ಕರ್ ದ್ವಂದ್ವ ಏನಾಗಿತ್ತೂ ಅಂತಂದ್ರೆ, ಅಂಬೇಡ್ಕರ್ ದೊಡ್ಡ ವಿದ್ವಾಂಸರು. ಆ ಕಾಲದ ಬಹಳ ದೊಡ್ಡ ವಿದ್ವಾಂಸರು ಅವರು. ಆದ್ರೆ ಅಂಬೇಡ್ಕರ್ ಒಬ್ಬ ದೊಡ್ಡ ವಿದ್ವಾಂಸರಾಗಿದ್ದ ಹೊತ್ತಿನಲ್ಲೇ ಅವರು ದಲಿತ ರಾಜಕಾರಣದ ನಾಯಕತ್ವವನ್ನು ಕೂಡ ವಹಿಸಿಕೊಳ್ಳಬೇಕಾಗಿ ಬಂತು. ಅವರು ಪಬ್ಲಿಕ್ ಅಫೇರ್ಸ್, ಸಮಾಜವಿಜ್ಞಾನ ಮತ್ತು ಕಾನೂನು ಈ ಮೂರೂ ಕ್ಷೇತ್ರಗಳಲ್ಲಿ ಕೆಲಸ ಮಾಡ್ತಿದ್ದಾಗಲೇನೇ ಮತ್ತು ಅಲ್ಲಿ ಹೊಸ ಹೊಸ ಪ್ರಮೇಯಗಳನ್ನು ಮಂಡಿಸುತ್ತಿದ್ದಾಗಲೇನೇ ಅಸ್ಪೃಶ್ಯತೆಯ ಅವಮಾನ ಮತ್ತು ತನ್ನ ಜನರ ಹೀನಾಯವಾದ ಸ್ಥಿತಿಗತಿಗಳ ಬಗ್ಗೆಯೂ ಯೋಚಿಸಿ ಕ್ರಿಯಾಶೀಲರಾಗಬೇಕಾಯಿತು. ಅದೂ ಗಾಂಧಿಯಂತಹ

ವಿರಾಟ್ ವ್ಯಕ್ತಿತ್ವದ ಪ್ರಭಾವದಲ್ಲಿ ರಾಷ್ಟ್ರ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸುತ್ತಿದ್ದಾಗ ಅವರ ಎದುರಿನಲ್ಲಿ ತನ್ನ ಸಮುದಾಯದ ಮೂಲಭೂತ ಸ್ವಾತಂತ್ರ್ಯ ಮತ್ತು ಹಕ್ಕುಗಳ ಪ್ರಶ್ನೆಯನ್ನೆತ್ತಿಕೊಂಡು ಗಾಂಧೀಜಿಯ ಹೋರಾಟದ ನಿಯತ್ತನ್ನೇ ಪ್ರಶ್ನಿಸತೊಡಗಿದಾಗ ಅವರ ಮೇಲೆ ಬ್ರಿಟಿಷರ ಏಜೆಂಟ್, ಸ್ವಾತಂತ್ರ್ಯ ಹೋರಾಟದ ವಿರೋಧಿ ಎನ್ನುವ ಆಪಾದನೆ-ಟೀಕೆಗಳು ಬರ್ತಾ ಇದ್ದಾಗ ಅವರು ವಿಚಲಿತರಾದದ್ದು ಸಹಜ. ಆಳದಲ್ಲಿ ದ್ವಂದ್ವಕ್ಕೆ ಸಿಕ್ಕಿಹಾಕಿಕೊಂಡಿದ್ದು ಸಹಜ. ದಲಿತ ರಾಜಕಾರಣವನ್ನ ಸಾರ್ವತ್ರಿಕ ರಾಜಕಾರಣದ ಮಧ್ಯೆ ಎಲ್ಲಿ ಲೊಕೇಟ್ ಮಾಡ್ಬೇಕು, ಅದರ ನಡುವೆ ಯಾವ ರೀತಿ ಸಂಬಂಧ ಕಲ್ಪಿಸಬೇಕು ಎನ್ನುವ ಗೊಂದಲ ಅಂಬೇಡ್ಕರರಲ್ಲಿ ಉಂಟಾದಂತೆ ನನಗೆ ಕಾಣ್ತದೆ. ಸಾರ್ವತ್ರಿಕ ರಾಜಕಾರಣ ಕುರಿತ ಅಂಬೇಡ್ಕರ್ ಪ್ರಮೇಯಗಳನ್ನು ಓದಿದಾಗ ಸರಿ ಅನಿಸುತ್ತೆ. ಹಾಗೇನೇ, ದಲಿತ ರಾಜಕಾರಣವನ್ನು ಕುರಿತ ಅವರ ಪ್ರಮೇಯಗಳನ್ನು ಓದ್ದಾಗಲೂ ಸರಿ ಅನ್ಸತ್ತೆ. ಆದರೆ ಇವೆರಡರ ನಡುವಣ ಸಂಬಂಧ ಎಲ್ಲಿ ಸಾಧ್ಯ ಆಗ್ತದೆ ಅನ್ನುವ ದೃಷ್ಟಿಯಿಂದ ಅಂಬೇಡ್ಕರರನ್ನು ಅಧ್ಯಯನ ಮಾಡ್ದಾಗ ಸ್ವಲ್ಪ ಗಲಿಬಿಲಿ ಉಂಟಾಗ್ತದೆ ನಮಗೆ.

ಹೀಗಾಗಿ ಅಂಬೇಡ್ಕರ್ ಮತ್ತು ಲೋಹಿಯಾ ನಡುವಣ ತೌಲನಿಕ ಅಧ್ಯಯನಕ್ಕೆ ಹೊರಟಾಗ ಯಾವ ಸ್ಪೇಸ್‌ನಲ್ಲಿ ಯಾವ ಬಿಂದುವಿನಲ್ಲಿ ಇವರಿಬ್ಬರ ತೌಲನಿಕ ಅಧ್ಯಯನವನ್ನು ನಾವು ಆರಂಭಿಸಬೇಕು ಅಂತ ಸ್ವಲ್ಪ ಅನುಮಾನಗಳು ಶುರುವಾಗ್ತವೆ. ಆದರೆ ಈ ಚಾರಿತ್ರಿಕ ನಿರ್ದಿಷ್ಟತೆಗಳನ್ನು ಅತ್ತ ಬಿಟ್ಟು ಹೊರಬಂದರೆ, ಅಂಬೇಡ್ಕರ್ ಮತ್ತು ಲೋಹಿಯಾ ನಡುವಣ ತೌಲನಿಕತೆ ನಮಗೆ ಬಹಳ ಸ್ಫುಟವಾಗಿ ಕಾಣೋಕೆ ಶುರುವಾಗೋದು, ತುಂಬಾ ಕ್ಲಿಯರ್ ಟರ್ಮ್ಸ್‌ನಲ್ಲಿ ಕಾಣೋಕ್ಕೆ ಆರಂಭವಾಗೋದು ಆಧುನಿಕತೆ ಕುರಿತಂತೆ, ಅದರ ಉಪಕರಣ-ಆವಿಷ್ಕಾರಗಳನ್ನು-ಉದಾ: ಪ್ರಜಾಪ್ರಭುತ್ವದ ಮಾದರಿಗಳು, ಸಮಾಜವಾದ, ತಂತ್ರಜ್ಞಾನ-ಕುರಿತಂತೆ; ನಮ್ಮ ನಾಗರಿಕತೆ, ಪರಂಪರೆಗಳನ್ನು ಕುರಿತಂತೆ, ಜಾತಿ ಪದ್ಧತಿಯನ್ನು ಕುರಿತಂತೆ ಇವರಿಬ್ಬರು ತಳೆದ ನಿಲುವುಗಳನ್ನು ಪರಿಶೀಲಿಸತೊಡಗಿದಾಗ. ಆಗ ನಮಗೆ ಇವರಿಬ್ಬರ ನಡುವಿನ ವ್ಯತ್ಯಾಸಗಳು ಮತ್ತು ಸಾಮ್ಯತೆಗಳು ಗೊತ್ತಾಗೋದಕ್ಕೆ ಶುರುಮಾಡ್ತವೆ.

ನಾನು ಮೊದಲೇ ಹೇಳಿದ ಹಾಗೆ ಅಂಬೇಡ್ಕರ್ ಅಮೇರಿಕಾದ ಶಿಕ್ಷಣದಿಂದ ಪ್ರಭಾವಿತರಾಗಿದ್ದವರು ಮತ್ತು ಸಂಸದೀಯ ಪ್ರಜಾಪ್ರಭುತ್ವವೇ ಶ್ರೇಷ್ಠ ಅಂತ ನಂಬಿದ್ದವರು ಮತ್ತು ಲಿಬರಲ್ ಡೆಮಾಕ್ರಸಿಯನ್ನ ಆದರ್ಶ ಅಂತ ಭಾವಿಸಿದ್ದವರು. ಅವರಿಗೆ ಸಾಂವಿಧಾನಿಕ ಹೋರಾಟವೇ ಬಹಳ ಮುಖ್ಯ ಆಗಿತ್ತು. ಸಾಂವಿಧಾನಿಕ ಕಾನೂನು ವ್ಯಾಪ್ತಿಗೆ ಕಟಿಬದ್ಧವಾದ ಶಿಸ್ತಿನ ಪ್ರಭುತ್ವ ಅವರ ಆದರ್ಶ. ಆದರೆ ಲೋಹಿಯಾ ಹಾಗಲ್ಲ. ಮೊದಲೇ ಹೇಳಿದ ಹಾಗೆ ಮೂಲತಃ ವ್ಯವಸ್ಥಾವಿರೋಧಿ (ನಾನ್‌ಕನ್‌ಫರ್ಮಿಸ್ಟ್), ಅನಧಿಪತ್ಯವಾದಿಯಾಗಿದ್ದವರು. ಪ್ರಭುತ್ವದ ಬಗ್ಗೆ-ಅದು ಎಂಥದೇ ಪ್ರಜಾಪ್ರಭುತ್ವವೇ ಆಗಿದ್ದರೂ- ಯಾವಾಗಲೂ ಅವರಿಗೆ ಅನುಮಾನ ಇರ್ತಿತ್ತು. ಅದು ಸೃಷ್ಟಿಯ ಸರ್ವ ಶಕ್ತಿಗಳ ಆಗರವಾದ 'ವ್ಯಕ್ತಿ'ಯನ್ನ ದಮನ

ಮಾಡುತ್ತೆ ಅಂತ. ಆ ಕಾರಣಕ್ಕೆ ಮಿನಿಮಮ್ ಗವರ್ನ್‌ಮೆಂಟ್ ಅವರ ಗುರಿ. ಆದ್ರಿಂದ ಸರ್ಕಾರ ಅನ್ನೋದು, ಅತ್ಯಂತ ಕಡಿಮೆ ವ್ಯಾಪ್ತಿಯಲ್ಲಿ ಇರ್ಬೇಕು ಅದರ ಬಾಹುಗಳು ವಿಪರೀತವಾದ ಸೀಮೆಗಳಿಗೆ ಚಾಚಬಾರದು. ವಿಶೇಷವಾಗಿ ಲೋಹಿಯಾ ಅವರಿಗೆ ವ್ಯಕ್ತಿಯ ಖಾಸಗಿ ಬದುಕಿನ ಮೇಲೆ ಪ್ರಭುತ್ವದ ಯಾವುದೇ ಆಕ್ರಮಣ ಆಗಬಾರದು. ಇದಕ್ಕಾಗಿಯೇ ಲೋಹಿಯಾ ಅವರ ರಾಜಕಾರಣದ ಮೂಲ ಆಧಾರಗಳಲ್ಲಿ ಅಧಿಕಾರದ ವಿಕೇಂದ್ರೀಕರಣವೂ ಒಂದಾಗಿದ್ದುದು.

ಕುತೂಹಲದ ಸಂಗತಿ ಅಂದರೆ, ಅಂಬೇಡ್ಕರ್ ಮತ್ತು ಲೋಹಿಯಾ ಇಬ್ಬರೂ ಸಮಾಜವಾದದಲ್ಲಿ ನಂಬಿಕೆ ಇಟ್ಟಿದ್ದವರು. ಆದರೆ ಅದು ಸಮಾಜವಾದ ತಾತ್ವಿಕವಾಗಿ ಹಲವು ಪ್ರಯೋಗಗಳನ್ನು ಹಾದು ಹೋಗುತ್ತಿದ್ದ ಕಾಲ. ಹಾಗಾಗಿ ಇಬ್ಬರದ್ದೂ ಒಂದೇ ಮಾದರಿಯ ಸಮಾಜವಾದವಲ್ಲ. ಅಂಬೇಡ್ಕರದ್ದು ಉದಾರವಾದಿ ಪ್ರಜಾಪ್ರಭುತ್ವದ ಸೂತ್ರಗಳಿಗೆ ಬದ್ಧವಾದ ಸಮಾಜವಾದವಾದರೆ, ಲೋಹಿಯಾ ಅನಧಿಪತ್ಯವಾದದಲ್ಲಿ ಹುಟ್ಟಿದ ಅಸೀಮ ನಾಗರಿಕ ಸ್ವಾತಂತ್ರ್ಯಗಳನ್ನು ಎತ್ತಿಹಿಡಿಯುವ ಸಮಾಜವಾದ. ಅವರು ತಮ್ಮ ಜೀವನದುದ್ದಕ್ಕೂ ಇಂತಹ ಸಮಾಜವಾದದ ರೂಹು-ರೂಪಗಳ ಅನ್ವೇಷಣೆ ಮಾಡುತ್ತಲೇ ಹೋದರು. ಸಮಾನತೆಯ ಹೊಸ ವ್ಯಾಖ್ಯಾನದ ಹೊಸ ನಾಗರಿಕತೆಯ ಕನಸು ಕಂಡರು. ಅವರಿಗೆ ಅವರ ರಾಜಕಾರಣವೆಂದರೆ ಈ ಕನಸನ್ನು ಸಾಕಾರಗೊಳಿಸುವುದೇ ಆಗಿತ್ತು. ಈ ದೃಷ್ಟಿಯಿಂದ ನೋಡಿದಾಗ ಅಂಬೇಡ್ಕರ್ ಅವರಿಗೆ ಸಮಾಜವಾದ ಅವರ ರಾಜಕಾರಣದ ಒಂದು ಸಿದ್ಧ ಉಪಕಾರಣ ಮಾತ್ರವಾಗಿತ್ತು. ಅಂದರೆ ಸಮಾಜವಾದ ಅನ್ನೋದು ಅವರಿಗೆ ಕೇವಲ ಒಂದು ಕಾರ್ಯಕ್ರಮ ಆಗಿತ್ತಷ್ಟೇನೇ. ಅವರ ಮಾತುಗಳಲ್ಲೇ ಹೇಳುವುದಾದರೆ ಸರ್ಕಾರೀ ಸಮಾಜವಾದ ಅವರದು. ಪ್ರಭುತ್ವ ಸಮಾಜವಾದ ಅಂತಲೂ ಕರೀತಾರದನ್ನ. ಅಂದ್ರೆ ಸಮಾಜವಾದ ಅನ್ನೋದು ಆಳುವ ಸರ್ಕಾರಕ್ಕೆ ಯಾವುದೇ ಚಾಯ್ಸ್ ಆಗಿರ್ಬಾರ್ದು, ಆಯ್ಕೆ ಆಗಿರ್ಬಾರ್ದು. ಅದು ಸಂವಿಧಾನದಲ್ಲೇ ಅಳವಡಿಸಲ್ಪಟ್ಟಿರಬೇಕು, ಅದಕ್ಕೆ ಕಾನೂನುಗಳ ಬೆಂಬಲ ಒದಗಿಸಬೇಕು. ಸರ್ಕಾರ ಅದನ್ನ ಜಾರಿಗೊಳಿಸಬೇಕು. ಈ ಪ್ರಭುತ್ವ ಸಮಾಜವಾದ ಜರ್ಮನಿಯ ಒಬ್ಬ ರಾಜಕೀಯ ಚಿಂತಕ ಕೊಟ್ಟಂತಹದ್ದು. ಅಂಬೇಡ್ಕರ್ ಅದನ್ನ ಇಲ್ಲಿ ಬೆಳಸ್ತಾರೆ ಅಷ್ಟೇನೆ. ಆದರೆ ಅದೊಂದು ಕಾರ್ಯಕ್ರಮವಷ್ಟೇ. ಅದೊಂದು ರಾಜಕೀಯ ಆಂದೋಲನವಲ್ಲ, ಅದೊಂದು ತತ್ತ್ವಜ್ಞಾನವೂ ಅಲ್ಲ.

ಹೀಗೆ ಯಾಕೆ ಹೇಳ್ಬೇಕಾಗುತ್ತೆ ಅಂದರೆ, ಅಂಬೇಡ್ಕರ್ ತಮ್ಮ ಪ್ರಭುತ್ವ ಸಮಾಜವಾದದ ಪ್ರತಿಪಾದನೆಯಲ್ಲಿ ಮುಖ್ಯವಾಗಿ ಎರಡು ಕಾರ್ಯಕ್ರಮ ಕೊಡ್ತಾರಷ್ಟೇ. ಒಂದು, ಭೂಮಿ ಮತ್ತು ಕೈಗಾರಿಕೆಗಳು ಸರ್ಕಾರದ ವಶದಲ್ಲಿರ್ಬೇಕು. ಎರಡು, ಭೂಮಿಯ ಸಾಮೂಹಿಕ ರಾಷ್ಟ್ರೀಕರಣ ಆಗ್ಬೇಕು. ಭೂಮಿಯನ್ನ ಕುಟುಂಬಗಳಿಗೆ ಹಂಚಿಬಿಟ್ಟು ಅಥವಾ ಕಾರ್ಪೋರೇಟ್ ಸಂಘ ಸಂಸ್ಥೆಗಳಿಗೆ ಕೊಟ್ಟುಬಿಟ್ಟು ಅವನ್ನ ನಿರ್ವಹಿಸಬೇಕು. ಕೈಗಾರಿಕೆಗಳೂ ಕೂಡ ಸರ್ಕಾರದ ಕೈಯಲ್ಲೇ ಇರ್ಬೇಕು. ಇದೊಂಥರಾ ರಾಷ್ಟ್ರೀಕರಣದ ತತ್ವ. ಅದರಾಚೆ

ಸಮಾಜವಾದದ ಫಿಲಾಸಫಿಗೆ ತುಂಬಾ ಅವಿಭಾಜ್ಯವಾಗಿರ್ಬೇಕಾದಂತಹ ವಿಕೇಂದ್ರೀಕರಣದ ತತ್ವವಾಗಲೀ, ಜಾತಿಪದ್ಧತಿಯ ಕುರಿತಂಥ ಮೀಮಾಂಸೆಯಾಗಲೀ ಅಥವಾ ತಂತ್ರಜ್ಞಾನ ಕುರಿತಂಥ ಮೀಮಾಂಸೆಯಾಗಲೀ ಅದರಲ್ಲಿ ಸೇರಿಲ್ಲ. ಅಂಬೇಡ್ಕರ್ ಪಶ್ಚಿಮದ ಆಧುನಿಕತೆಯ ಆರಾಧಕರಾಗಿದ್ದರು ಅಂತಲೇ ಹೇಳಬಹುದು. ಇನ್ನೂ ಮುಂದೆ ಹೋಗಿ ಹೇಳೋದಾದ್ರೆ ತುಂಬಾ ಲಿಬರಲ್ ಆಗಿ ಹೇಳೋದಾದ್ರೆ, ಈ ಆಧುನಿಕತೆಯೇ ಭಾರತದಂತಹ ಬಡಜನತೆಯ ವಿಮೋಚನೆ ಮಾಡ್ತದೆ, ನಿರ್ದಿಷ್ಟವಾಗಿ ದಲಿತರ ವಿಮೋಚನೆ ಆಧುನಿಕತೆಯ ಮೂಲಕ ಮಾತ್ರ ಆಗ್ತದೆ ಅಂತ ಅವರು ನಂಬಿದ್ದರು.

ಉದಾಹರಣೆಗೆ ಯಂತ್ರಗಳ ಬಗ್ಗೆ ಅವರ ನಿಲುವನ್ನ ತೆಗೆದುಕೊಳ್ಳಿ. ಯಂತ್ರಗಳ ಬಗ್ಗೆ ದೊಡ್ಡ ಜಿಜ್ಞಾಸೆಯೇ ನಡೆದು ಹೋಗಿದೆ ಕಳೆದ ಶತಮಾನದಲ್ಲಿ. ವಿಶೇಷವಾಗಿ ಸಮಾಜವಾದಿ ಚಿಂತಕರ ಮಧ್ಯೆ. ಯೂರೋಪ್‌ನಿಂದ ಹಿಡಿದು ಭಾರತದ, ಏಷ್ಯಾದ ಎಲ್ಲ ಚಿಂತಕರು, ಯಂತ್ರ ನಾಗರಿಕತೆಯ ಬಗ್ಗೆ ದೊಡ್ಡ ಸಿದ್ಧಾಂತಗಳನ್ನೇ ಮಂಡಿಸಿದ್ದಾರೆ. ದೊಡ್ಡ ಚಿಂತನೆಗಳನ್ನ ನಡೆಸಿದ್ದಾರೆ. ಆದರೆ ಅಂಬೇಡ್ಕರ್ ಈ ಬಗ್ಗೆ ಬಹಳ ಸರಳವಾಗಿ ಚಿಂತನೆ ಮಾಡ್ತಾರೆ. ಭಾರತದ ಸಮಾಜ ಒಂದು ಸುಸಂಸ್ಕೃತ ಸಮಾಜ ಆಗ್ಬೇಕಾದ್ರೆ, ಮನುಷ್ಯನಿಗೆ ದುಡಿಮೆಯ ಮಧ್ಯೆ ವಿಶ್ರಾಂತಿ ಬೇಕು. ವಿಶ್ರಾಂತಿಯಲ್ಲಿ ಮಾತ್ರ ಮನುಷ್ಯ ಸಂಸ್ಕೃತಿಯ ಬಗ್ಗೆ ಯೋಚನೆ ಮಾಡ್ತಾನೆ. ಸುಸಂಸ್ಕೃತನಾಗುವ ಎಲ್ಲ ಡೈನಮಿಕ್ಸ್ ಅಂತಹ ವಿಶ್ರಾಂತಿಯಲ್ಲಿರುತ್ತೆ. ಮನುಷ್ಯನಿಗೆ ವಿಶ್ರಾಂತಿ ಹೇಗೆ ಸಿಗುತ್ತೆ? ಯಂತ್ರಗಳು ದುಡಿಮೆಯ ಅವಧಿಯನ್ನು ಕಡಿಮೆಗೊಳಿಸುವುದರಿಂದ ಅದು ವಿಶ್ರಾಂತಿಗೆ ದಾರಿ ಮಾಡಿಕೊಡುತ್ತೆ. ಆದ್ರಿಂದ ಯಂತ್ರಗಳು ಬೇಕು. ಇಷ್ಟೇ ಅವರು ಹೇಳೋದು ಯಂತ್ರಗಳ ಬಗ್ಗೆ. ಆದರೆ ಗಾಂಧಿ ಯಂತ್ರವನ್ನು ಕುರಿತಂತೆ ಒಂದು ದೊಡ್ಡ ಮೀಮಾಂಸೆಯನ್ನೇ ಮಂಡಿಸಿದ್ರು, ಯಂತ್ರಗಳು ಯಾಕೆ ಬೇಡ ಅಂತ ತಾತ್ವಿಕವಾಗಿ ಚಿಂತಿಸಿದ್ದರ ಜೊತೆಗೆ ಎಂಥ ಯಂತ್ರಗಳು ಬೇಕು ಮತ್ತು ಬೇಡ ಅಂತ ಹೇಳಿದ್ರು, ಯಂತ್ರಗಳ ಮಧ್ಯೆ ಇದ್ರೆ ಮನುಷ್ಯ ಯಂತ್ರದ ಥರ ಆಗ್ಬೋಗ್ಬಿಡ್ತಾನೆ. ಮನುಷ್ಯ ಒಳಗಡೆ ಏನಾಗ್ತಾನೆ ಅನ್ನೋದ್ರ ಬಗ್ಗೆ ಗಾಂಧಿ ಯೋಚ್ನೆ ಮಾಡಿದ್ರು, ಅಂಬೇಡ್ಕರ್‌ಗೆ ದಲಿತರ ಬಿಡುಗಡೆ ಅತಿ ತುರ್ತಾದ ಅಗತ್ಯವಾಗಿ ಕಂಡದ್ದರಿಂದ ಅವರು ಇಂತಹ ಒಂದು ಸಮೀಪದೃಷ್ಟಿದೋಷಕ್ಕೆ ಒಳಗಾಗಿ ಯಂತ್ರವನ್ನು ಕುರಿತಂತೆ ಸಂಕೀರ್ಣವಾಗಿ ಯೋಚನೆ ಮಾಡ್ಲಿಲ್ಲ ಅಂತ ಕಾಣುತ್ತೆ. ಅವರ ಕೇಂದ್ರ ಕಾರ್ಯಕ್ರಮವಾದ ಜಾತಿ ವಿನಾಶದ ಅಥವಾ ಅವರು ಆತ್ಯಂತಿಕವಾಗಿ ನಂಬಿದ ಬೌದ್ಧ ಧರ್ಮದ 'ಕರುಣಾ'ದ ತಾತ್ವಿಕತೆ ಅವರ ಸಮಾಜವಾದದ ಸಾವಯವ ಭಾಗವಾಗದೆ ಅದೊಂದು ಬೋಳು ಸಾಂವಿಧಾನಿಕ ವಿಧಿಯಾಗಿರಲು ಇದೇ ಕಾರಣವೆಂದು ತೋರುತ್ತದೆ.

ಇಲ್ಲಿ ಗಾಂಧಿ ಪ್ರಸ್ತಾವ ಬಂದುದರಿಂದ ಅಂಬೇಡ್ಕರ್-ಲೋಹಿಯಾ ಚಿಂತನೆಗಳ ಹೋಲಿಕೆಗೆ ಸಂಬಂಧಿಸಿದಂತೆಯೇ ಒಂದು ಮುಖ್ಯ ಮಾತು ಇಲ್ಲಿ ಹೇಳಬೇಕು. ಯಾಕೇಂದ್ರೆ

ಆರಂಭದಲ್ಲೇ ಪ್ರಸ್ತಾಪಿಸಿದಂತೆ ಈ ಮೂವರದ್ದು ತ್ರಿಕೋನಾತ್ಮಕ ಸಂಬಂಧ. ಒಬ್ಬರಿಗೆ ಒಬ್ಬರು ಪರಸ್ಪರ ರೆಫರೆನ್ಸ್‌ಗಳಾಗಿಯೇ ಇವೊತ್ತಿನ ಸಂದರ್ಭದ ಪ್ರಸ್ತುತತೆಯ ಸಂಬಂಧವಾಗಿ ನಮಗೆ ದಕ್ಕೋದು. ಈಗ ಯಂತ್ರದ ವಿಷಯವಾಗಿಯೇ ನೋಡಿ. ಅಂಬೇಡ್ಕರ್ ಗಾಂಧಿ ಚಿಂತನೆಗೆ ತದ್ವಿರುದ್ಧ. ಇವೊತ್ತು ಅಂಬೇಡ್ಕರ್ ಇದ್ದರೆ, ದಲಿತ ಮತ್ತು ಯಂತ್ರದ ಸಂಬಂಧವಾಗಿ ಏನು ಹೇಳ್ತಿದ್ದರೋ ಗೊತ್ತಿಲ್ಲ. ಆದರೆ ಈ ಪಶ್ಚಿಮದ ಅಥವಾ ವಸಾಹತುಶಾಹಿ ನಾಗರೀಕತೆಯ ಉಪಕರಣಗಳ–ತಾತ್ವಿಕ ಮತ್ತು ಭೌತಿಕ ಎರಡೂ–ಬಗ್ಗೆ ಇಬ್ಬರೂ ಯೋಚನೆ ಮಾಡಿದ್ದು ತೀರಾ ಭಿನ್ನವಾಗಿ. ಈ ಇಬ್ಬರ ಎಲ್ಲ ನೆಲೆಗಳ ಮುಖಾಮುಖಿಗೆ ಇದೇ ಮೂಲ ಕಾರಣ ಎಂದು ನಾನು ಭಾವಿಸಿದ್ದೇನೆ. ಆದರೆ ಲೋಹಿಯಾ ಗಾಂಧಿಯನ್ನು ಸಾರಾಸಗಟಾಗಿ ಒಪ್ಪುತ್ತಿರಲಿಲ್ಲವಾದರೂ, ಅಂಬೇಡ್ಕರರಂತೆ ಅವರಿಗೆ ಎದುರು ನಿಲ್ಲಲಿಲ್ಲ. ಪಕ್ಕದಲ್ಲಿ ನಿಂತು ಗಾಂಧಿಯ (ಪಶ್ಚಿಮದ)ಆಧುನಿಕತೆಯ ವಿರೋಧವನ್ನು ವಿಮರ್ಶೆ ಮಾಡಿದರು. ಸಹಾನುಭೂತಿಪರವಾದ ಸಂವಾದ ಮಾಡಿ ಗಾಂಧಿಯ ವಿಚಾರಗಳನ್ನ ಅದರ ಸನಾತನತೆಯ (ಈ ಶಬ್ದಕ್ಕೆ ನಿತ್ಯನೂತನ ಎಂಬ ಅರ್ಥವೂ ಇದೆ ಎಂಬುದನ್ನು ಗಮನಿಸಬೇಕು) ಚಾರಿತ್ರಿಕತೆಯಿಂದ ಬಿಡಿಸಿ ಆಧುನೀಕರಿಸಲು (ಅಂದರೆ, ಅವರು ನಿತ್ಯನೂತನವೆಂದು ನಂಬಿರುವ ಮೌಲ್ಯಗಳನ್ನು ಘಾಸಿಗೊಳಿಸದೆ, ಹೊಸ ಕಾಲದ ಆಶೋತ್ತರಗಳಿಗೆ ಸ್ಪಂದಿಸಬಲ್ಲ ಒಂದು ಮಾದರಿಗಾಗಿ) ಪ್ರಯತ್ನಪಟ್ಟರು. ಇದೊಂದು ಅಸಾಮಾನ್ಯ ಸೃಜನಶೀಲ ಸಮನ್ವಯದ ಸಾಹಸವೇ ಸರಿ.

ಉದಾಹರಣೆಗೆ, ಯಂತ್ರ ಬೇಡ ಅಂತ ಅಂತೀರಲ್ಲ ನೀವು, ದೊಡ್ಡ ದೊಡ್ಡ ಯಂತ್ರಗಳು ಬೇಡ. ಬೃಹತ್ ಯಂತ್ರಗಳು ಏನ್ಮಾಡ್ತವೆ? ಮನುಷ್ಯನನ್ನ ತಿಂದ್ಹಾಕಿಬಿಡ್ತವೆ. ಮನುಷ್ಯನ ಆತ್ಮವನ್ನೇ ಕೊಂದು ಹಾಕಿಬಿಡ್ತಾವೆ. ಮನುಷ್ಯನ 'ಸ್ವ'ವನ್ನು ಹಿಸುಕಿ ಹಾಕಿಬಿಡ್ತಾವೆ. ಮನುಷ್ಯನನ್ನ ಯಂತ್ರದ ಥರ ಮಾಡ್ಹಾಕ್ಬಿಡ್ತವೆ. ಇದರ ಹಿಂದೆ ಇರೋದು ಆಧುನಿಕ ತಂತ್ರಜ್ಞಾನ. ಅದರ ಸಂಕೀರ್ಣತೆ ಮತ್ತು ಜಟಿಲತೆ ಹಾಗೂ ಅವು ಹುಟ್ಟಿಸುವ ಕಾಯಕ 'ಪರಕೀಯತೆ'. ಜೊತೆಗೆ ಅದರ ಹಿಂದೆ ಕೆಲಸ ಮಾಡುವ ಬಂಡವಾಳಶಾಹಿ ಮತ್ತು ಅದರ ರಾಜಕಾರಣ. ಆದ್ರಿಂದ ಅದನ್ನು ಬಳಸುವ ಮನುಷ್ಯನಿಗೆ ನಿಗೂಢವಾಗದೆ, ಅರ್ಥವಾಗಬಲ್ಲ, ಮನುಷ್ಯನನ್ನು ವಶ ಮಾಡಿಕೊಳ್ಳದೆ ತಾನೇ ಮನುಷ್ಯನ ವಶದಲ್ಲಿರಬಲ್ಲ, ಅವನ ಸೇವೆ ಮಾಡಬಲ್ಲ ವಿನ್ಯಾಸಗಳ ಬಗ್ಗೆ ಲೋಹಿಯಾ ಚಿಂತಿಸಿದರು. ಯೂರೋಪಿನ ಸಮಾಜವಾದಿಗಳು ಚಾಲ್ತಿಗೆ ತರಲಾರಂಭಿಸಿದ್ದ 'ಮಧ್ಯಸ್ಥ' ಎಂದು ಕರೆಯಬಹುದಾದ ತಂತ್ರಜ್ಞಾನವನ್ನು (ಇಂಟರ್‌ಮೀಡಿಯೇಟ್ ಟೆಕ್ನಾಲಜಿ) ಅವರು ಪ್ರತಿಪಾದಿಸಿದರು. ಇದು ಗಾಂಧಿಯವರ ಖಾದಿ–ಗ್ರಾಮೋದ್ಯೋಗ ಪರಿಕಲ್ಪನೆಯ ಆಧುನೀಕರಣ ಎನ್ನಬಹುದು. ಅಂದರೆ ಸಣ್ಣ ಪ್ರಮಾಣದ ಯಂತ್ರಗಳನ್ನ ನಾವು ಮಾಡಿಕೊಳ್ಳಬೇಕು. ಸ್ಮಾಲ್ ಯೂನಿಟ್ ಮೆಷಿನ್ಸ್ ಅಂತ ಕರೀತಾರೆ ಅದನ್ನ. ಪಶ್ಚಿಮದ ಆಧುನಿಕತೆಯನ್ನು ಲೋಹಿಯಾ ನಿರ್ವಹಿಸಿದ ಬಗೆಗೆ ಇದೊಂದು ಉದಾಹರಣೆ. ಆಧುನಿಕ ನಾಗರೀಕತೆಯಿಂದ ನಾವು ಸ್ವೀಕರಿಸಬಹುದಾದ

ಬಹು ದೊಡ್ಡ ಮೌಲ್ಯವೆಂದರೆ 'ಸಮಾನತೆ' ಎನ್ನುತ್ತಿದ್ದ ಅವರು, ಅದನ್ನು ವಸಾಹತುಶಾಹಿಗೊಳಪಟ್ಟಿದ್ದ ದೇಶಗಳು ತಮ್ಮದೇ ರೀತಿಯಲ್ಲಿ ಸೃಜನಶೀಲವಾಗಿ ರಾಜಕೀಯ ಕಾರ್ಯಕ್ರಮವಾಗಿ ರೂಪಿಸಿಕೊಳ್ಳಬೇಕೆಂದು ಹೇಳುತ್ತಿದ್ದರು.

ಈ ಯಂತ್ರ ಮೀಮಾಂಸೆಯ ಜೊತೆಗೇ ಪ್ರಸ್ತಾಪ ಮಾಡಬಹುದಾದ ಇನ್ನೊಂದು ಸಂಗತಿ ಎಂದರೆ, ಇದೇ ತಾತ್ವಿಕ ಜಿಜ್ಞಾಸೆಯಿಂದ ಹುಟ್ಟುವ ಅಧಿಕಾರ ಅಥವಾ ಆಡಳಿತದ ವಿಕೇಂದ್ರೀಕರಣದ ಪ್ರಶ್ನೆ. ಅಂಬೇಡ್ಕರ್ ಸಾಂವಿಧಾನಿಕ ಮತ್ತು ಕಾನೂನು ವಿಧೇಯತೆಯ ರಾಜ್ಯ ವ್ಯವಸ್ಥೆಯ ಸಮರ್ಥಕರಾದ ಕಾರಣದಿಂದಲೋ ಅಥವಾ ದಲಿತರ ಹಿತದೃಷ್ಟಿಯಿಂದಲೋ ಅಥವಾ ಈ ಎರಡೂ ಕಾರಣಗಳಿಂದಲೋ ಅಧಿಕಾರದ ಕೇಂದ್ರ ವ್ಯವಸ್ಥೆಯ ಪ್ರತಿಪಾದಕರಾಗಿದ್ದರು. ಅಂದರೆ ಆಧುನೀಕರಣವಾದಿಯಾದ ಅವರು ನಗರೀಕರಣದ ಪರವಾಗಿದ್ದರು. ಯಾಕೇಂತಂದ್ರೆ ಹಳ್ಳಿಗಳನ್ನ ನೋಡಿ ಅವರು, ಅವು ಸಾಮಾಜಿಕ ತಾರತಮ್ಯಗಳ ತವರು, ಮೌಢ್ಯದ ಕೊಂಪೆಗಳು, ದಲಿತರ ಪಾಲಿಗೆ ನರಕ ಅಂತ ಹೇಳ್ತಾ ಇದ್ದರು. ಯಾಕೇಂತಂದ್ರೆ ಮುಖ್ಯವಾಗಿ ಜಾತಿ ವ್ಯವಸ್ಥೆಯ ಕಾರಣದಿಂದಾಗಿ, ಭೀಕರ ಅಸ್ಪೃಶ್ಯತೆಯ ಕಾರಣದಿಂದಾಗಿ.

ಆದರೆ ಲೋಹಿಯಾ ಅವರು ಅಧಿಕಾರದ ಕೇಂದ್ರೀಕರಣ ಪ್ರಭುತ್ವದ ಹಿಂಸೆಗೆ ದಾರಿ ಮಾಡಿಕೊಡುತ್ತದೆ ಎಂದು ನಂಬಿದ್ದರು. ಹಾಗಾಗಿ ಅವರು ಗಾಂಧಿಯವರ ಗ್ರಾಮ ಸ್ವರಾಜ್ಯದ ಕಲ್ಪನೆಯನ್ನೂ-ಅದು ಅವ್ಯಾವಹಾರಿಕ ಎಂದು-ಒಪ್ಪದೆ, ಆಧುನಿಕತೆಯೊಡನೆಯ ಒಂದು ವಿಶಿಷ್ಟ ಅನುಸಂಧಾನದಲ್ಲಿ, ಒಂದು ಮಧ್ಯಮ ಮಾರ್ಗವಾಗಿ ಚತುಸ್ತಂಭ ರಾಷ್ಟ್ರದ ಕಲ್ಪನೆ ಕೊಟ್ಟರು. ಅಧಿಕಾರವನ್ನು ನಾಲ್ಕು ಹಂತಗಳಲ್ಲಿ ವಿಸ್ತರಿಸಬೇಕಾಗ್ತದೆ. ಗ್ರಾಮ, ಮಂಡಲ, ರಾಜ್ಯ ಮತ್ತು ಕೇಂದ್ರ, ಅಂದರೆ ಒಂದು ರಾಜ್ಯ ವ್ಯವಸ್ಥೆ ಈ ನಾಲ್ಕು ಸ್ತಂಭಗಳ ಮೇಲೆ ನಿಂತಿರಬೇಕು. ರಾಜಕೀಯ ಅಧಿಕಾರವನ್ನ ನಾವು ಹೀಗೆ ಹರಿದು ಹಂಚಿಬಿಟ್ಟರೆ, ಪ್ರಭುತ್ವ ರಾಕ್ಷಸೀಯವಾಗುವುದಿಲ್ಲ ಅಂತ ಹೇಳ್ತಾ ಇದ್ದರು. ಹೀಗೆ, ಲೋಹಿಯಾ ಅವರು ಗಾಂಧಿಯವರ ಚಿತ್ರವನ್ನ ಸ್ವಲ್ಪ ನಿಷೇಧಾತ್ಮಕ ಅರ್ಥದ ಸನಾತನದಿಂದ ಈಚೆಗೆ ತಂದು, ಅದರ ಸಾಂಪ್ರದಾಯಿಕ ಚಿತ್ರವನ್ನು ಬದಲಾವಣೆ ಮಾಡಿ ತಮ್ಮದೇ ರೀತಿಯಲ್ಲಿ ಆಧುನೀಕರಿಸಿದರು. ಲೋಹಿಯಾ ಅವರ ಆಧುನೀಕರಣದ ಈ ಮಾದರಿಗೆ ತಾತ್ವಿಕವಾದ ಮಾನ್ಯತೆ ಸಿಕ್ಕಷ್ಟು ವ್ಯಾವಹಾರಿಕ ಯಶಸ್ಸು ಸಿಗಲಿಲ್ಲ ಮತ್ತು ಏಕೆ? ಎಂಬುದು ಬೇರೆಯೇ ವಿಚಾರ.

ಇನ್ನು ಈ ತೌಲನಿಕತೆಯ ಮುಖ್ಯ ಸಂಗತಿಯಾದ ಜಾತಿಪದ್ಧತಿಗೆ ಸಂಬಂಧ ಪಟ್ಟಂತೆ ಮಾತಾಡೋದಾದ್ರೆ, ಲೋಹಿಯಾ ಮತ್ತು ಅಂಬೇಡ್ಕರ್ ನಡುವಣ ಸಾದೃಶ್ಯ ಎದ್ದು ಕಾಣುವುದು ಇಲ್ಲಿ. ಇಬ್ಬರೂ ಜಾತಿಪದ್ಧತಿಯನ್ನು ಕಟುವಾಗಿ ವಿರೋಧಿಸಿದರು. ಜಾತಿ ಪದ್ಧತಿ ನಾಶವಾಗದೇ ಭಾರತ ಒಂದು ರಾಜಕೀಯ ಸಮಾಜವಾಗಿರಲು ಸಾಧ್ಯನೇ ಇಲ್ಲ. ಇದು ಅಸಮ ಸಮಾಜ. ಆದ್ರಿಂದ ತಮ್ಮ ಸಮಾಜವಾದಿ ತತ್ವದ ಒಂದು ಅವಿಭಾಜ್ಯ

ಅಂಗವಾಗಿ ಲೋಹಿಯಾ ಅವರು ಜಾತಿವಿನಾಶ ಕಾರ್ಯಕ್ರಮವನ್ನು ಕೊಟ್ಟರು. ಇನ್ನು ಅಂಬೇಡ್ಕರ್ ಅವರ ಹೋರಾಟ–ತತ್ವದ ಜೀವ ಜೀವಾಳವಿರುವುದೂ ಜಾತಿ ವಿನಾಶ ಕುರಿತಂತೆ ಇರುವ ಅವರ 'ಅನ್ನಿಲೇಶನ್ ಆಫ್ ಕಾಸ್ಟ್' ಎಂಬ ಒಂದು ಮುಖ್ಯ ಲೇಖನದಲ್ಲೇ. (ಈ ಲೇಖನ, ಅಂಬೇಡ್ಕರ್ ಜಾತಿ ವಿನಾಶ ಕುರಿತಂತೆ ತಮ್ಮ ತಾತ್ವಿಕತೆಯ ಯಾವುದೇ ವಿವರದಲ್ಲಿಯೂ ಒಂದಿಷ್ಟೂ ರಾಜಿಗೆ ಒಪ್ಪದ ಕಾರಣದಿಂದಾಗಿ ನಡೆಯದೇ ಹೋದ ಒಂದು 'ಜಾತಿ ಬಿಡಿ' –'ಜಾತಿ ತೋಡಕ್' – ಸಮ್ಮೇಳನದ ಅಧ್ಯಕ್ಷೀಯ ಭಾಷಣವಾಗಿ ಬರೆದದ್ದು) ಅಂಬೇಡ್ಕರರನ್ನ ಗಾಂಧಿ ವಿರುದ್ಧ ತೀವ್ರ ತಾತ್ವಿಕ ಮತ್ತು ರಾಜಕೀಯ ಸೆಣಸಾಟಕ್ಕೂ ಪ್ರೇರೇಪಿಸಿದ್ದು ಮತ್ತು ಇಂದೂ ಕೆಲವರು (ತಪ್ಪಾಗಿ)ದಾಖಲಿಸುವಂತೆ ಗಾಂಧಿ ಜಾತಿಪದ್ಧತಿಯ ಸಮರ್ಥಕ ಎಂಬ ಅಭಿಪ್ರಾಯಕ್ಕೆ ಕಾರಣವಾಗಿದ್ದು. (ಬಹುಶಃ ಆರ್ಯ ಸಮಾಜ ಆಂದೋಲನದಿಂದ ಪ್ರಭಾವಿತರಾಗಿದ್ದ ಪಂಜಾಬ್ ಸಂಸ್ಥಾನದ ಕೆಲ ಸವರ್ಣೀಯ ಹಿಂದೂಗಳ ಸಂಘಟನೆಯೊಂದರಿಂದ ಆಯೋಜಿಸಲ್ಪಡಲು ಉದ್ದೇಶಿತವಾಗಿದ್ದ ಈ ಜಾತಿ ತೋಡಕ್ ಸಮ್ಮೇಳನವನ್ನು, ಹಿಂದೂ ಸುಧಾರಣಾವಾದಿಗಳು ಅಂಬೇಡ್ಕರ್‌ರನ್ನು ತಮ್ಮೊಳಕ್ಕೆ ಕರೆದುಕೊಳ್ಳಲು ನಡಸಿದ ಒಂದು ಪ್ರಾಮಾಣಿಕ ಪ್ರಯತ್ನವೆಂದೂ ನೋಡಬಹುದಾಗಿದೆ.) ಇಲ್ಲಿ ವಿಷಯ ಬಿಟ್ಟು ಒಂದೆರಡು ಮಾತುಗಳನ್ನು ಆಡಬೇಕು. ಅದೇನೂಂದ್ರೆ ಅಂಬೇಡ್ಕರ್‌ರೊಡನೆಯ ಈ ಸೆಣಸಾಟದಿಂದಾಗಿ ಮತ್ತು ನಂತರದಲ್ಲಿ ಸಮಾಜವಾದಿಗಳೂ ಸೇರಿದಂತೆ ಅನೇಕ ಪ್ರಗತಿಪರ ಚಿಂತಕರ ಒಡನಾಟದಿಂದಾಗಿ ಗಾಂಧಿ ೧೯೪೫ರ ಹೊತ್ತಿಗೆ ಜಾತಿ ಪದ್ಧತಿ ಕೆಟ್ಟದು, ಅದು ಹೋಗಲಾಡಿಸಲೇಬೇಕಾದ ಅನಿಷ್ಟ ಎಂಬ ತೀರ್ಮಾನಕ್ಕೆ ಬಂದರು. ಅವರು ಅಂತರ್ಜಾತಿಯಲ್ಲದ ಯಾವುದೇ ಮದುವೆಯನ್ನು ತಮ್ಮ ಆಶ್ರಮದಲ್ಲಿ ನಡೆಯುವಂತಿಲ್ಲ ಎಂದು ತೀರ್ಮಾನಿಸಿದರು. ಅಷ್ಟೇ ಅಲ್ಲ ಮದುವೆಗೆ ತಮ್ಮ ವೈಯಕ್ತಿಕ ಆಶೀರ್ವಾದ ಬೇಕಿದ್ದರೆ ವಧು ಅಥವಾ ವರರಲ್ಲಿ ಒಬ್ಬರು ಅಸ್ಪೃಶ್ಯರಾಗಿರಬೇಕು ಎನ್ನುವ ಮಟ್ಟಕ್ಕೂ ಬಂದರು.

ಆದ್ದರಿಂದ ಒಂದು ಮುಖ್ಯ ಮಾತನ್ನು ಇಲ್ಲಿ ಹೇಳಬೇಕು. ಅಂಬೇಡ್ಕರ್‌ರೊಡನೆಯ ಸೆಣೆಸಾಟದಿಂದ–ಅದೆಷ್ಟೇ ಕಹಿಯಾಗಿದ್ದರೂ–ಗಾಂಧಿಗೆ ಒಳ್ಳೆಯದೇ ಆಯಿತು. ಅಥವಾ ಬೇರೆ ಮಾತುಗಳಲ್ಲಿ ಹೇಳೋದಾದ್ರೆ, ಅಂಬೇಡ್ಕರ್ ಇಲ್ಲದೇ ಹೋಗಿದ್ರೆ ಈಗ ನಾವು ಒಪ್ಪಿಕೊಳ್ಳಬಹುದಾದ ಗಾಂಧಿ ನಮಗೆ ಸಿಗುತ್ತಿರಲಿಲ್ಲ. ಅಂಬೇಡ್ಕರ್ರೊಡನೆಯ ಮುಖಾಮುಖಿ ಗಾಂಧೀಜಿಯ ಲೋಕದೃಷ್ಟಿಯನ್ನು ನಿರ್ಣಾಯಕವಾಗಿ ಬದಲಾಯಿಸಿತೆಂದೇ ಹೇಳಬೇಕು. (ಹಾಗೇ, ಗಾಂಧಿಯೊಡನೆಯ ಮುಖಾಮುಖಿ ಅಂಬೇಡ್ಕರ್‌ರನ್ನು ಬದಲಿಸಿತೋ? ಹೇಳುವಂತಿಲ್ಲ. ಏಕೆಂದರೆ ಅದಕ್ಕೆ ಪುರಾವೆಗಳಿಲ್ಲ!) ಇಂದು ನಮಗೆ ದಕ್ಕಿರುವ ಗಾಂಧಿ ಅಂಬೇಡ್ಕರ್ರನ್ನೂ ಒಳಗೊಂಡಿದ್ದು, ಹಾಗೆ ಅಂಬೇಡ್ಕರ್ ಜೊತೆಗಿಲ್ಲದ ಗಾಂಧಿ ನಿಜವಾದ ಗಾಂಧಿಯೇ ಅಲ್ಲ ಎಂದೂ ಹೇಳಬಹುದು.

ಜಾತಿ ಪದ್ಧತಿ ಕುರಿತಂತೆ ಅಂಬೇಡ್ಕರ್ ಮತ್ತು ಲೋಹಿಯಾರಿಗೆ ಈ ಪದ್ಧತಿ ಹೋಗಬೇಕು ಎನ್ನುವುದರಲ್ಲಿ ನಂಬಿಕೆ ಒಂದೇ ತೆರ ಮತ್ತು ತೀವ್ರತೆಯಲ್ಲಿತ್ತಾದರೂ, ಈ ಪದ್ಧತಿಯನ್ನು ಐತಿಹಾಸಿಕವಾಗಿ ಅರ್ಥೈಸುವುದರಲ್ಲಿ ಇಬ್ಬರ ನಿಲುವುಗಳೂ ಬೇರೆ ಬೇರೆಯಾಗಿದ್ದವು. ಅಂಬೇಡ್ಕರ್ ಜಾತಿಯನ್ನ ಜಾತಿಪದ್ಧತಿಯನ್ನ ಕಂಡದ್ದು, ನಾನು ಹಿಂದೆ ಹೇಳಿದ ಹಾಗೆ, ಸಗೋತ್ರ ಮತ್ತು ವಿಗೋತ್ರ ವಿವಾಹಗಳನ್ನು ಆಧರಿಸಿದಂತಹ ಸಾಮಾಜಿಕ ವಿಂಗಡಣೆಯೇ ಅಥವಾ ಸಾಮಾಜಿಕ ಸಂಘಟನೆಯ ಕ್ರಮವೇ ಮುಂದೆ ಜಾತಿ ಪದ್ಧತಿಯಾಗಿ ಬೆಳೆದುಬಂದಿದೆ ಎಂಬ ಗ್ರಹಿಕೆಯಲ್ಲಿ. ಅಂದ್ರೆ ಭಾರತೀಯ ಸಂದರ್ಭಕ್ಕೆ ಅನ್ವಯ ಮಾಡಿ ಅವರು ಜಾತಿಯನ್ನ ವ್ಯಾಖ್ಯಾನ ಮಾಡಿದ್ರು ಅಂತ ಹೇಳಬಹುದು. ಅಂದರೆ, ಜಾತಿ ವ್ಯವಸ್ಥೆ ಭಾರತಕ್ಕೆ ಅನನ್ಯವಾದ ವ್ಯವಸ್ಥೆ ಎಂಬ ಗ್ರಹಿಕೆ ಅವರದ್ದಾಗಿದ್ದಂತೆ ತೋರುತ್ತದೆ. ಆದರೆ ಲೋಹಿಯಾ ಜಾಗತಿಕ ಇತಿಹಾಸದ ಪರಿಪ್ರೇಕ್ಷ್ಯದಲ್ಲಿ ಜಾತಿ ವ್ಯವಸ್ಥೆಯನ್ನ ವ್ಯಾಖ್ಯಾನ ಮಾಡಕ್ಕೆ ಟ್ರೈ ಮಾಡಿದ್ರು. ಅವರು ಹೇಳೋ ಮಾತು ಏನು ಅಂತಂದ್ರೆ, ಸ್ಥಗಿತಗೊಂಡ ವರ್ಗವೇ ಜಾತಿ, ಅರಳಿಕೊಂಡ ಜಾತಿಯೇ ವರ್ಗ. ಅಂದ್ರೆ ಒಂದು ನಾಗರಿಕತೆಯ ಏಳುಬೀಳಿನಲ್ಲಿ ಜಾತಿ ಮತ್ತು ವರ್ಗಗಳು ಸೃಷ್ಟಿಯಾಗ್ತಾ ಇರ್ತವೆ. ಅಂದರೆ ಒಂದು ನಾಗರಿಕತೆ ಹೊರಗಿನ ಆಕ್ರಮಣದ ಒತ್ತಡಗಳಿಗೆ ಒಳಗಾದಾಗ, ಸದಾ ಸ್ಪರ್ಧೆಯಲ್ಲಿರೋ, ಪರಸ್ಪರ ಹೋರಾಟಗಳಲ್ಲಿ ತೊಡಗಿರೋ ವರ್ಗಗಳು ಸ್ಥಗಿತಗೊಂಡುಬಿಡ್ತವೆ. 'ಓ ನಾವೆಲ್ಲರೂ ಅಪಾಯದಲ್ಲಿದ್ದೀವಿ ನಾವು ಹೆಚ್ಚು ಹೊಡೆದಾಡೋದು ಬೇಡ, ಸದ್ಯಕ್ಕೆ ನಮ್ಮ ನಮ್ಮ ಸ್ಥಾನಗಳಿಗೆ ಅಂಟಿಕೊಂಡಿರೋಣ' ಅಂತ. ಅದು ವರ್ಗ ವ್ಯವಸ್ಥೆ ಸ್ಥಗಿತಗೊಂಡು ಜಾತಿ ವ್ಯವಸ್ಥೆ ಆಗೋ ಪ್ರಕ್ರಿಯೆಯ ಆರಂಭ. ಮತ್ತೆ ಆ ನಾಗರೀಕತೆಯ ಮೇಲಿನ ಒತ್ತಡಗಳು ಕಡಿಮೆ ಆಗ್ತಿದ್ದ ಹಾಗೇನೇ ಮತ್ತೆ ತಮ್ಮ ತಮ್ಮ ಆಸ್ಪಿರೇಶನ್ಸ್‌ಗಾಗಿ, ಆಶೋತ್ತರಗಳಿಗಾಗಿ ಅವು ವರ್ಗಗಳಾಗಿ ಮತ್ತೆ ಹೊಡೆದಾಡಕ್ಕೆ ಶುರುಮಾಡ್ತವೆ. ಅಂದ್ರೆ ತಾವು ಮೇಲೇರೋದಕ್ಕೆ, ತಮ್ಮ ಸ್ಥಾನ-ಮಾನಗಳನ್ನ ಹೆಚ್ಚಿಸಿಕೊಳ್ಳೋದಕ್ಕೆ ಟ್ರೈ ಮಾಡ್ತವೆ. ಅಂದ್ರೆ, ಜಾತಿ ಅಂದ್ರೆ ಸ್ಥಗಿತಗೊಂಡ ವರ್ಗ, ಅಂದ್ರೆ ಅವುಗಳ ಸ್ಥಾನ-ಮಾನ ಫಿಕ್ಸ್ ಆಗ್ಹೋಗಿರ್ತದೆ ಆಗ. ಬದಲಾಗಕ್ಕೆ ಸಾಧ್ಯನೇ ಇಲ್ಲ. ವರ್ಗಗಳು ಅಂತಂದ್ರೆ ಸಮಯ ಬಂದಾಗ ತಮ್ಮ ಸ್ಥಗಿತತೆಯಿಂದ ಬಿಡಿಸಿಕೊಂಡು ಅರಳಿಕೊಂಡ ಜಾತಿಗಳು. ಅಂದ್ರೆ ಜಾತಿಗಳು ಮತ್ತೆ ಚಲನೆ ಪಡೆದಾಗ ಆಗೋದೇ ವರ್ಗಗಳು. ಹೀಗೆ ಲೋಹಿಯಾ ನಾಗರೀಕತೆಯ ಏಳುಬೀಳುಗಳ ಪರಿಪ್ರೇಕ್ಷ್ಯದಲ್ಲಿ ಜಾತಿಯನ್ನ ವ್ಯಾಖ್ಯಾನಿಸ್ತಾ ಇದ್ದರು. ಇದು ಜಗತ್ತಿನ ನಾಗರೀಕತೆಗಳ ಏಳುಬೀಳುಗಳ ಇತಿಹಾಸದುದ್ದಕ್ಕೂ ಕಾಣಬರುವ ಪ್ರವೃತ್ತಿ ಎಂದು ಲೋಹಿಯಾ ಹೇಳುತ್ತಿದ್ದರು.

ಆದರೆ ಭಾರತೀಯ ಸಂದರ್ಭ ಇಟ್ಟುಕೊಂಡು ಜಾತಿಪದ್ಧತಿಯನ್ನ ಅಂಬೇಡ್ಕರ್ ವ್ಯಾಖ್ಯಾನ ಮಾಡಿದ ಕಾರಣದಿಂದಾಗಿ ಅವರಿಗೊಂದು ನಂಬಿಕೆ ಇತ್ತು. ಏನೂಂತಂದ್ರೆ, ಈವರೆಗೆ ಜಾತಿ ಪದ್ಧತಿಯ ನಾಶಕ್ಕೆ ಅನೇಕ ಪ್ರಯತ್ನಗಳು ನಡೆದಿವೆ-ಉದಾಹರಣೆಗೆ, ನಮ್ಮ ಭಕ್ತಿಪಂಥದವರು ದೊಡ್ಡ ಪ್ರಯತ್ನವನ್ನೇ ಮಾಡಿದ್ರು. ಜಾತಿ ಒಂದು ಮಿಥ್ಯ ಅಂತ

ಹೇಳೋದಕ್ಕೆ–ಆದ್ರೂ ಆಗಲಿಲ್ಲ; ಯಾತಕ್ಕೆ ಅಂತಂದ್ರೆ ಜಾತಿ ಪದ್ಧತಿ ಅನ್ನೋದು ನಮ್ಮ ಧರ್ಮಗ್ರಂಥಗಳಲ್ಲಿ ಅಂತರ್ಗತವಾಗ್ಹೋಗಿಬಿಟ್ಟಿದೆ. ಅಲ್ಲಿ ಅದಕ್ಕೊಂದು ಮಾನ್ಯತೆ, 'ಪಾವಿತ್ರ್ಯತೆ' ಸಿಕ್ಕಿಬಿಟ್ಟಿದೆ. ನಮ್ಮ ಜನರಿಗೆ ಧರ್ಮಗ್ರಂಥಗಳಲ್ಲಿರತಕ್ಕಂಥ ಆಳವಾದ ನಂಬಿಕೇನೇ ಜಾತಿಪದ್ಧತೀನ ಇಲ್ಲಿ ಉಳಿಸಿದೆ ಅಂತ ಅವರು ನಂಬಿದ್ದರು. ಆದ್ರಿಂದ ಧರ್ಮಗ್ರಂಥಗಳನ್ನ ನಾಶ ಮಾಡಿ, ಧರ್ಮಗ್ರಂಥಗಳ ಪಾವಿತ್ರ್ಯವನ್ನು ನಾಶಮಾಡ್ಬೇಕು, ಶ್ರುತಿ ಮತ್ತು ಸ್ಮೃತಿಗಳನ್ನ ನಾಶ ಮಾಡ್ಬೇಕು, ಆಗ ಮಾತ್ರ ಜಾತಿಪದ್ಧತಿಯ ಬೇರುಗಳನ್ನು ಭಾರತೀಯ ಮನಸ್ಸಿನಿಂದ ಕಿತ್ತು ಹಾಕಬಹುದು. ಭಾರತದಲ್ಲಿ ಜಾತಿ ಪದ್ಧತಿಯಿಂದ ಬಿಡುಗಡೆ ಅಂತಂದ್ರೆ ಧರ್ಮಗ್ರಂಥಗಳ ಪಾವಿತ್ರ್ಯವನ್ನ ನಾಶ ಮಾಡೋದು. ಈ ನಂಬಿಕೆಯ, ಕಾರ್ಯಕ್ರಮದ ಭಾಗವಾಗಿಯೇ ಅಂಬೇಡ್ಕರ್ ಮನುಸ್ಮೃತಿಯನ್ನು ಬಹಿರಂಗವಾಗಿ ಸುಡುವ ಕಾರ್ಯಕ್ರಮವನ್ನು ಘೋಷಿಸಿ ಸಾಂಪ್ರದಾಯಿಕರ ಕೆಂಗಣ್ಣಿಗೆ ಗುರಿಯಾದರು. ಭಾರತೀಯ ಧರ್ಮಗ್ರಂಥಗಳೂಂತ ನಾವು ಯಾವುದನ್ನ ಕರೀತೀವಿ, ಅವುಗಳನ್ನು ಐತಿಹಾಸಿಕ ನೆಲೆಗೆ ಒಯ್ದು ಅವುಗಳ ಪುನರ್ವ್ಯಾಖ್ಯಾನದ ಪ್ರಯತ್ನ ಮಾಡಿದರು. 'ಹಿಂದೂ ಧರ್ಮದ ಒಗಟುಗಳು' ಇದಕ್ಕೊಂದು ಜ್ವಲಂತ ಉದಾಹರಣೆ.

ಆದರೆ ಲೋಹಿಯಾ ಇದನ್ನ ಒಪ್ಪಲಿಲ್ಲ. ಲೋಹಿಯಾ ಅವರು ನಾಗರಿಕತೆಯ ಸಂದರ್ಭದಲ್ಲಿ ಎಲ್ಲ ದೇಶಗಳಲ್ಲೂ ಈ ಥರ ಜಾತಿ–ವರ್ಗಗಳ ನಡುವೆ ತುಯ್ದಾಟ ನಡೆದಿದೆ, ನಮ್ಮ ದೇಶದಲ್ಲೂ ನಡೆದಿದೆ. ಆದರೆ ಜಾತಿ ಪದ್ಧತಿ ಇಲ್ಲಿ ಕೆಲವು ವರ್ಷಗಳ ಕಾಲ ಸ್ಥಗಿತಗೊಂಡು ಈ ಶ್ರೇಣೀಕೃತ ಕ್ರೂರ ರೂಪ ಪಡೆದಿದೆ. ಯಾಕೇಂತಂದ್ರೆ ಪದೇ ಪದೇ ಇದು ವಿದೇಶೀ ಆಕ್ರಮಣಗಳಿಗೆ ಒಳಗಾಯಿತು. ಆ ಕಾರಣದಿಂದಾಗಿ ಇಲ್ಲಿ ಚಲನೆಯೇ ಇಲ್ಲ. ಜೊತೆಗೆ ಭಾರತದಲ್ಲಿ ಈ ಧರ್ಮಗ್ರಂಥಗಳನ್ನ ಆಶ್ರಯಿಸಿರುವ ಸಮುದಾಯಗಳು ತುಂಬಾ ಕಡಿಮೆ. ಧರ್ಮಗ್ರಂಥಗಳನ್ನ ಅವುಗಳ ಭಾಷೆ ಮತ್ತು ಜಟಿಲತೆಗಳಿಗಾಗಿ ಓದಿರೋರೇ ಕಡಿಮೆ. ಅದನ್ನ ಗಂಭೀರವಾಗಿ ನಂಬುವವರು ಇನ್ನೂ ಕಡಿಮೆ. ಅಲ್ಲದೆ ನಮ್ಮ ಬೇರೆ ಬೇರೆ ಸಮುದಾಯಗಳು ತಂತಮ್ಮ ಬದುಕಿನ ಅನುಭವಗಳ ನಿಜಗಳಿಗೆ ತಕ್ಕಂತೆ ಈ ಧರ್ಮಗ್ರಂಥಗಳ ಬೇರೆ ಬೇರೆ ಸ್ಥಳೀಯ ಆವೃತ್ತಿಗಳನ್ನು ಮಾಡಿಕೊಂಡಿವೆ. ಉದಾಹರಣೆಗೆ, ನಮ್ಮ ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಒಂದು ಸಂಶೋಧನೆ ನಡೀತಾ ಇತ್ತು. ಈ ಜಾತಿಪದ್ಧತಿ ಅನ್ನೋದು ಬ್ರಿಟಿಷ್ ಪ್ರಭುತ್ವದ ಒಂದು ಬಳುವಳಿ ಅಂತ ಸಾಬೀತು ಮಾಡೋದಕ್ಕೆ. ಅವರು ಹೀಗೆ ಕೇಳ್ತಾ ಇದ್ರು, "ಸರ್, ಮನುಸ್ಮೃತಿಯಲ್ಲಿ ಹೇಳುತ್ತಂತೆ, ನಿಮ್ಮ ವೇದಗಳನ್ನು ಕೇಳಿದ ಶೂದ್ರನ ಕಿವಿಗೆ ಕಾದ ಸೀಸ ಹೋಯ್ಬೇಕು ಅಂತ. ಎಲ್ಲಾದರೂ ಕೇಳಿದ್ದೀರಾ, ಓದಿದ್ದೀರಾ ಸರ್, ಯಾರ ಕಿವಿಗಾದರೂ ಕಾದ ಸೀಸ ಹುಯ್ದಿದ್ದನ್ನ? ಇರಬಹುದು ಕಾನೂನು, ಆದರೆ ಪ್ರಾಕ್ಟಿಕಲ್ ಆಗಿ ಕಂಡಿದ್ದು ಎಲ್ಲಾದರೂ ಉದಾಹರಣೆ ಚರಿತ್ರೆಯಲ್ಲಿ ಸಿಗುತ್ತಾ ನಿಮಗೆ?" ಅಂತ.

ಯಾರೋ. ಯಾತಕ್ಕೋ–ಬಹುಶಃ ತತ್ಕಾಲೀನ ರಾಜಕಾರಣಕ್ಕಾಗಿ–ಈ ಶ್ರುತಿ–ಸ್ಮೃತಿಗಳನ್ನೆಲ್ಲ ಮಾಡಿಕೊಂಡಿದ್ರು, ಆದರೆ ಇವೆಲ್ಲ ಜನಸಾಮಾನ್ಯರ ಗ್ರಂಥಗಳಲ್ಲ. ಆ ಮಡಿಗ್ರಂಥಗಳೆಲ್ಲ ಆಧುನಿಕತೆಯ ಒತ್ತಡಗಳಿಗೆ, ವೈಚಾರಿಕತೆಯ ಮಾತ್ರುಕೆಗಳಿಗೆ ಸಿಕ್ಕಿ ತಾವಾಗೇ ಅಪ್ರಸ್ತುತವಾಗಿ ಹೋಗ್ತವೆ. ಏನಿದ್ರು ಪುರಾಣಗಳ ಕಡೆ ಗಮನ ಕೊಡಬೇಕು ನಾವು ಅಂತಿದ್ರು ಲೋಹಿಯಾ. ಪುರಾಣಗಳು, ಮಹಾಕಾವ್ಯಗಳು, ಅವುಗಳ ಸ್ಥಳೀಯ ಆವೃತ್ತಿಗಳು, ಜಾನಪದ ಕಥಾನಕಗಳಲ್ಲಿ ಜಾತಿಪದ್ಧತಿ ಬಗ್ಗೆ ಏನಿದೆ? ಜಾನಪದ ಕಥೆಗಳಲ್ಲಿ ಮತ್ತು ಪುರಾಣಗಳಲ್ಲಿ ಜಾತಿಪದ್ಧತಿ ವಿರುದ್ಧವಾದ ಕೌಂಟರ್ ಆರ್ಗ್ಯುಮೆಂಟ್ಸ್, ಕೌಂಟರ್ ನೆರೇಟಿವ್ಸ್ ಏನಿವೆ ಅವನ್ನ ನಾವು ಗಮನಿಸಬೇಕು. ಶಂಬೂಕನ ಕಥೆ ಬರ್ತದೆ ವಿಶ್ವಾಮಿತ್ರನ ಕಥೆ ಬರ್ತದೆ, ಏಕಲವ್ಯನ ಕಥೆ ಬರ್ತದೆ. ನಮ್ಮ ಜಾನಪದ ಕಥೆಗಳಿಗ್ಹೋದ್ರಂತೂ ಜಾತಿ ಪದ್ಧತಿಯ ವಿರುದ್ಧ ಹೋರಾಟಗಳಿಗೆ ಸಂಬಂಧಿಸಿದ ಅನೇಕ ಮಿಥ್‌ಗಳು ನಮಗೆ ಸಿಗ್ತಾವೆ. ಆದ್ರಿಂದ ಪುರಾಣಗಳ ಆಧಾರದ ಮೇಲೆ ನಾವು ಜಾತಿಪದ್ಧತಿಯ ವಿರುದ್ಧದ ಸಂಕಥನಗಳನ್ನು ಕಟ್ಟಬೇಕು ಅಂತ ಲೋಹಿಯಾ ಅವರು ಹೇಳ್ತಾ ಇದ್ದರು. ಅಲ್ಲದೆ, ಜಾತಿ ತಾರತಮ್ಯದ ಜೊತೆಗೇನೇನೆ, ಲಿಂಗ ತಾರತಮ್ಯದ ಬಗ್ಗೆ ಯಾವಾಗಲೂ ಅವರು ಮಾತಾಡ್ತಾ ಇದ್ದರು. ಕಾರಣ ಅವರೆಡೂ ಒಂದೇ ಮೂಲದಿಂದ ಬಂದವು ಅಂತ ಅವರು ನಂಬಿದ್ರು.

ಲೋಹಿಯಾ ಸೆಗ್ರಿಗೇಶನ್ ಆಫ್ ಕ್ಯಾಸ್ಟ್ ಆಂಡ್ ಜೆಂಡರ್– ಜಾತಿ ಮತ್ತು ಲಿಂಗ ಪ್ರತ್ಯೇಕತೆಗಳು ಇವೆರಡೂ ಒಂದೇ ಜೊತೇನಲ್ಲಿ–ಶುದ್ಧಿ ಅಥವಾ ಮಡಿ ಕಲ್ಪನೆಯ ಮೂಲದಿಂದ–ಬಂದಿರ್ತಕ್ಕಂಥವು. ಅದ್ರಿಂದ ಅವೆರಡರ ವಿರುದ್ಧನೂ ಹೋರಾಡಬೇಕು ಅಂತ ಹೇಳ್ತಾ ಇದ್ದರು. ಅಂಬೇಡ್ಕರ್ ಕೂಡಾ ಈ ಪ್ರತ್ಯೇಕತೆಗಳ ಜೋಡಿತನದ ಬಗ್ಗೆ ಲೋಹಿಯಾರಿಗಿಂತ ಮೊದಲೇ ಮಾತಾಡಿರುವರಾದರೂ, ಅದನ್ನ ವ್ಯಾಪಕವಾಗಿ ವಿಸ್ತರಿಸಲಿಲ್ಲ. ಆದರೆ ಲೋಹಿಯಾ ಇದನ್ನ ತಮ್ಮದೇ ರೀತಿಯಲ್ಲಿ ವಿಸ್ತರಿಸಿ ಹೇಳ್ತಾ ಇದ್ದರು, ಸಾವಿತ್ರಿ ಪಾತ್ರದ ಜೊತೆಲೇನೆ ನಮ್ಮ ಕಥಾನಕಗಳಲ್ಲಿ ದ್ರೌಪದಿ ಪಾತ್ರ ಕೂಡ ಇದೆ. ಹೀಗೆ ಪ್ರತಿಪಾತ್ರಗಳಿವೆ ನಮ್ಮ ಕಾವ್ಯ–ಪುರಾಣಗಳಲ್ಲಿ, ಜಾನಪದ ಕಥಾನಕಗಳಲ್ಲಿ, ಸ್ಥಳೀಯ ಐತಿಹ್ಯಗಳಲ್ಲಿ. ಅವರು ಸೀತೆ–ಸಾವಿತ್ರಿ–ದ್ರೌಪದಿ ಪಾತ್ರಗಳ ಬಗ್ಗೆ ಬರೆದಿರುವ ಲೇಖನಗಳನ್ನು ಗಮನಿಸಿದರೆ ಇದು ಸ್ಪಷ್ಟವಾಗ್ತದೆ. ಆದ್ರಿಂದ ನಾವು, ಈ ಹಿನ್ನೆಲೆಯಲ್ಲಿ ಅಂಬೇಡ್ಕರ್ ಯಾರನ್ನ ತುಂಬ ಕಟುವಾಗಿ, ಅಥವಾ ಸಾಂಪ್ರದಾಯಿಕ ಜಾತಿ ಸಮುದಾಯಗಳ ಮಾತುಗಳಲ್ಲಿ ಹೇಳೋದಾದ್ರೆ ತುಂಬಾ ಅನುಮಾನಾಸ್ಪದವಾಗಿ, ಕೀಳಾಗಿ ಚಿತ್ರಿಸಿದರೋ ಆ ರಾಮನನ್ನ ಲೋಹಿಯಾ ಅವರು 'ಮರ್ಯಾದಾ ಪುರುಷೋತ್ತಮ' ಅಂತ ಚಿತ್ರಿಸಿದರು. ಈ ವ್ಯತ್ಯಾಸಗಳಿಗೆ ಕಾರಣವೆಂದರೆ ಅಂಬೇಡ್ಕರ್ ರಾಮನನ್ನು 'ಇತಿಹಾಸದ ವ್ಯಕ್ತಿ'ಯಾಗಿ ಕಂಡಿದ್ದರೆ, ಲೋಹಿಯಾ ದೃಷ್ಟಿ ಜನಸಾಮಾನ್ಯರ ಪುರಾಣ–ಜನಪದೀಯವಾಗಿತ್ತು. (ಕುವೆಂಪು ಪರಿಭಾಷೆಯಲ್ಲಿ ಹೇಳೋದಾದ್ರೆ, ಅಂಬೇಡ್ಕರ್‌ದು ಪ್ರತಿಕೃತಿ ದೃಷ್ಟಿ ಆದ್ರೆ, ಲೋಹಿಯಾದ್ದು ಪ್ರತಿಮಾ ದೃಷ್ಟಿ) ಲೋಹಿಯಾ ಅವರ ಪರಿಭಾಷೆಯಲ್ಲಿ ಹೇಳೋದಾದ್ರೆ, ರಾಮ 'ಮಿತಿಗಳುಳ್ಳ ಮನುಷ್ಯ'ನ

ಅತ್ಯುತ್ತಮ ಮಾದರಿ. ಕೃಷ್ಣನನ್ನ ಮಿತಿಗಳಿಲ್ಲದ ಮನುಷ್ಯ ಅಂತ ಅವರು ಕರೆದರು. ಸಮೃದ್ಧ ವ್ಯಕ್ತಿತ್ವ ಕೃಷ್ಣನದ್ದು. ಇನ್ನು ಶಿವ, ಅವನು ಡೈಮೆನ್ಶನ್ಸ್‌ಗಳ ಆಚೆ ಇರತಕ್ಕಂಥವನು. ನಿರಾಯಾಮವಾದ ವ್ಯಕ್ತಿತ್ವ. ರಾಮ ಸೀಮಿತ ವ್ಯಕ್ತಿತ್ವ. ಸೀಮಿತ ಅಂತಂದ್ರೆ, ಅವನಿಗೆ ದೊರೆಯಾಗಿ ಅವನ ಯುಗದ–ಅವನನ್ನು ಸೃಷ್ಟಿಸಿದ 'ನಾಗರೀಕತೆ'ಯ–ಕೆಲವು ಕಟ್ಟುಪಾಡುಗಳ ಮಿತಿಗಳಿದ್ದವು. ಅವು ಆ ಕಾಲದ ಮರ್ಯಾದೆಯ ಎಲ್ಲೆಗಳು. ಪ್ರಜಾಧರ್ಮ ಅವನು ಪಾಲಿಸಬೇಕಿದ್ದ ಯುಗಧರ್ಮವಾಗಿತ್ತು. ಇವೊತ್ತಿನ ಗಾಂಧಿಯದ್ದೂ ಅದೇ ತರಹದ ಕಾಲಧರ್ಮ ವಿಧಿಸಿದ ಸೀಮೆಗಳ–ಮರ್ಯಾದೆಗಳ ವ್ಯಕ್ತಿತ್ವ ಎನ್ನುತ್ತಿದ್ದರು ಲೋಹಿಯಾ. ಈ ದೃಷ್ಟಿಯಿಂದ ಗಾಂಧಿ ನಮ್ಮ ಕಾಲದ ಮರ್ಯಾದಾ ಪುರುಷೋತ್ತಮನೇ ಅವರ ಪ್ರಕಾರ. ಹೀಗೆ ಭಾರತೀಯ ಪುರಾಣದ ಪ್ರತೀಕಗಳನ್ನ ಲೋಹಿಯಾ ಅವರು ಮರುನಿರೂಪಣೆ ಮಾಡುವ ಮೂಲಕ ಜಾತಿ ಪದ್ಧತಿ ವಿರುದ್ಧದ ಹೋರಾಟಕ್ಕೆ ಕಟುತನಕ್ಕೆ ಬದಲಾಗಿ ಒಂದು ವಿಶಿಷ್ಟ ಮಾರ್ದವತೆ, ಲಾಲಿತ್ಯಗಳನ್ನು ಒದಗಿಸಿದರು. ಜಾತಿ ಪದ್ಧತಿಯನ್ನು ತೊಲಗಿಸಲು ಅವರು ಪ್ರತಿಪಾದಿಸಿದ ಮುಖ್ಯ ರಾಜಕೀಯ ಕಾರ್ಯಕ್ರಮಗಳೆಂದರೆ, ಅಂತರ್ಜಾತಿ ವಿವಾಹ, ಸಮೂಹ ಭೋಜನ, ಭೂಸುಧಾರಣೆ ಮತ್ತು ವಂಚಿತ ಸಮುದಾಯಗಳಿಗೆ ಸಕಾರಾತ್ಮಕ ಆದ್ಯತೆಯ ನೀತಿ.

ಅಂಬೇಡ್ಕರ್–ಲೋಹಿಯಾರ ಚಿಂತನೆಗಳ ತುಲನಾತ್ಮಕತೆಯ ವಿಷಯವಾಗಿ ನಾವು ಗಮನಿಸಬೇಕಾದ ಇನ್ನೊಂದು ಬಹುಮುಖ್ಯ ವಿಚಾರವೆಂದರೆ, ಭಾಷೆ ಕುರಿತ ಈ ಇಬ್ಬರ ಚಿಂತನೆ ಮತ್ತು ನಿಲುವುಗಳು. ಅಂಬೇಡ್ಕರ್ ಭಾಷೆ ಬಗ್ಗೆ ವಿಶೇಷ ಚಿಂತನೆಯನ್ನೇನಾದರೂ ನಡೆಸಿದ ದಾಖಲೆಗಳಂತೂ ನನಗೆ ಕಂಡಿಲ್ಲ. ಭಾಷೆ ಬಹಳ ಮುಖ್ಯವಾದ ಸಂಗತಿ ಸಮಾಜವಾದದಲ್ಲಿ, ಸಮಾಜ ಕಟ್ಟುವ ಸಂದರ್ಭದಲ್ಲಿ. ಆದರೆ ಅಂಬೇಡ್ಕರ್ ಇಂಗ್ಲಿಷ್ ಎದುರು ಭಾರತೀಯ ಭಾಷೆಗಳ ಬಳಕೆ ಮತ್ತು ಸಂರಕ್ಷಣೆಯ ಮಹತ್ವದ ಬಗ್ಗೆ ಎಲ್ಲೂ ಜಿಜ್ಞಾಸೆ ನಡೆಸಿದಂತಿಲ್ಲ. ಬದಲಿಗೆ ಅವರು ಇಂಗ್ಲಿಷ್‌ನ್ನು ಸಿಂಹಿಣಿಯ ಹಾಲಿನಂತೆ; ಅದನ್ನು ಕುಡಿದು ಬಲಿಷ್ಠರಾಗಿ ಎಂದು ದಲಿತರಿಗೆ ಕರೆ ನೀಡಿದ್ದಾರೆಂದು ಕೆಲ ವರ್ಷಗಳ ಹಿಂದೆ ಕರ್ನಾಟಕದಲ್ಲಿ ಇಂಗ್ಲಿಷ್‌ನ್ನ ಒಂದನೇ ತರಗತಿಯಿಂದ ಕಲಿಸಬೇಕು ಅಂತ ಹೋರಾಟ ನಡೀತಲ್ಲ ಆಗ ಕೆಲವರು ಪ್ರಚಾರ ಮಾಡಿದರು. ಅಂಬೇಡ್ಕರ್‌ರ ಈ ಉಲ್ಲೇಖಿತ ಮಾತಿನ ಸಂದರ್ಭ, ವಿವರ ನನಗೆ ತಿಳಿಯದು. ಆದರೆ ಇದು ನಿಜವಾಗಿದ್ದರೆ, ಅಂಬೇಡ್ಕರ್ ಅವರಿಗೆ ಅವರ ಮಾತೃಭಾಷೆ ಮರಾಠಿ ಏನಾಗಿತ್ತು ಗೊತ್ತಿಲ್ಲ ನನಗೆ. ಇಂಗ್ಲಿಷ್ ಸಿಂಹಿಣಿಯ ಹಾಲಾಗಿದ್ದರೆ, ಮರಾಠಿ ಏನು ಮೇಕೆಯ ಹಾಲಾಗಿತ್ತೊ ಅಥವಾ ಜನ್ಮಕೊಟ್ಟ ತಾಯಿಯ ಹಾಲಾಗಿತ್ತೋ, ಆ ಹಾಲು ಏಕೆ ದುರ್ಬಲವಾಗಿ ಕಂಡಿತೋ ನನಗೆ ಗೊತ್ತಿಲ್ಲ. ಏಕೇಂದ್ರೆ ಮತ್ತೆ ಅಂಬೇಡ್ಕರ್ ಪಶ್ಚಿಮದ ಆಧುನಿಕತೆಯ ಎಲ್ಲ ಪರಿಕರಗಳನ್ನು ತುಂಬಾ ಸಾರಾಸಗಟಾಗಿ ಒಪ್ಪಿಕೊಂಡವರೋ ಎಂಬ ಅನುಮಾನವೇಳುತ್ತದೆ. ತಂತ್ರಜ್ಞಾನ, ಸಂಸದೀಯ ಪ್ರಜಾಪ್ರಭುತ್ವ ಕುರಿತ ಅವರ ಅವಿಮರ್ಶಾತ್ಮಕ ನಿಲುವುಗಳ ಭಾಗವಾಗಿ ಅವರು ಇಂಗ್ಲಿಷ್‌ನ್ನು

ವೈಭವೀಕರಿಸಿದರು ಅಂತ ಕಾಣುತ್ತೆ. ಅವಸರದಲ್ಲಿದ್ದರು, ಒತ್ತಡದಲ್ಲಿದ್ದರು ಅವರು. ದಲಿತರ ಬಿಡುಗಡೆಗೆ ಏನು ಸಿಗುತ್ತೋ ಅದನ್ನ ತಕ್ಷಣಕ್ಕೆ ಬಳಸುವ ತುರ್ತಿನಲ್ಲಿದ್ದರು ಅವರು. ಈ ಕಾರಣದಿಂದಾಗಿ ಅವರು ಇಂಗ್ಲಿಷ್ ಕೂಡ ಬಿಡುಗಡೆಯ ಒಂದು ಮಾರ್ಗ ಅಂತ ತಿಳ್ಕೊಂಡಿದ್ದಿರಬಹುದು.

ಆದರೆ ಲೋಹಿಯಾ ಅವರು ಇಂಗ್ಲಿಷ್ ಇರುವವರೆಗೆ ಈ ದೇಶದ ನಿಜವಾದ ಬಿಡುಗಡೆ ಸಾಧ್ಯ ಇಲ್ಲ ಅಂತ ಹೇಳ್ತಾ ಇದ್ದರು. ಯಾಕೇಂತಂದ್ರೆ, ದೇಶೀಯ ಭಾಷೆಗಳು ನಮ್ಮ ಆಲೋಚನಾ ಕ್ರಮದ ಮೂಲ ನುಡಿಗಟ್ಟುಗಳ ತವರು. ಅಂದರೆ ಲೋಕಗ್ರಹಿಕೆಯ ಮೂಲ ಕೋಶಗಳವು. ಅವುಗಳಲ್ಲಿ ಆಡಳಿತ ನಡೆದರೆ ಮಾತ್ರ, ಆ ನೆಲೆಗಳಲ್ಲಿ ಅಭಿವ್ಯಕ್ತಿ ನಡೆದರೆ ಮಾತ್ರ ನಿಜವಾದ ವ್ಯಕ್ತಿತ್ವಗಳು ಹೊರಹೊಮ್ಮುತ್ತವೆ. ಹಾಗೆ ನಿಜವಾದ ವ್ಯಕ್ತಿತ್ವ ಹೊರಹೊಮ್ಮದವರೆಗೆ ಭಾರತ ತನ್ನ ನಿಜದ ವ್ಯಕ್ತಿತ್ವವನ್ನು ಕಂಡುಕೊಳ್ಳಲಾರದು: ಅದಕ್ಕಾಗಿ ಹೋರಾಟ ನಡೆಸಲಾರದು ಎಂದು ಅವರು ನಂಬಿದ್ದರು. ಹಾಗಾಗಿಯೇ 'ಇಂಗ್ಲಿಷ್ ತೊಲಗಿಸಿ' ಮತ್ತು 'ಭಾರತೀಯ ಭಾಷಾ ಸಮ್ಮೇಳನ'ಗಳು ಅವರ ಸಮಾಜವಾದಿ ಆಂದೋಲನದ ಅವಿಭಾಜ್ಯ ಅಂಗಗಳಾಗಿದ್ದವು. ಅಂದ ಮಾತ್ರಕ್ಕೆ ಅವರು ಇಂಗ್ಲಿಷ್‌ನ ಅಂಧ ವಿರೋಧಿಯಾಗಿರಲಿಲ್ಲ. ಹಾಗೆ ನೋಡಿದರೆ, ಅವರು ಇಂಗ್ಲಿಷ್ ಭಾಷೆಯ ಪರಿಣತರಾಗಿದ್ದರು. ಆದರೆ ಇಂಗ್ಲಿಷ್ ಗ್ರಂಥಾಲಯದ ಭಾಷೆಯಾಗಿರಬೇಕೆಂಬುದು ಅವರ ನಿಲುವಾಗಿತ್ತು.

ಈ ಹಿನ್ನೆಲೆಯೊಂದಿಗೆ, ಈ ಲೇಖನದ ಕೊನೆಯ ಭಾಗಕ್ಕೆ ಬರುವುದಾದರೆ, ಲೋಹಿಯಾ ಮತ್ತು ಅಂಬೇಡ್ಕರ್ ಒಂದು ಕಾಲಘಟ್ಟದಲ್ಲಿ ಬದುಕಿದ್ದರೂ ಕೂಡ ಸಾರ್ವಜನಿಕ ಜೀವನದಲ್ಲಿ ಅವರಿಬ್ಬರು ಭೇಟಿ ಮಾಡಿರಲಿಲ್ಲ ಎಂದು. ಏಕೆ? ಭೇಟಿಯಾಗುವ ಸಂದರ್ಭ ಬಂದಾಗ ಕೂಡ ಭೇಟಿಯಾಗ್ಲಿಲ್ಲ ಏಕೆ? ಅದಕ್ಕೆ ಹಲವಾರು ಕಾರಣಗಳು ಕಾಣ್ತವೆ. ಒಂದು, ಮೊದಲೇ ಹೇಳಿದ ಹಾಗೆ ರಾಜಕೀಯ ತಲೆಮಾರುಗಳ ಅಂತರ. ಎರಡನೆಯದು ಇನ್ನೂ ಮುಖ್ಯವಾದದ್ದು: ಇಬ್ಬರೂ ವಿಭಿನ್ನ ರಾಜಕೀಯ ಚಿಂತನೆಗಳ ಹಿನ್ನೆಲೆಗಳಿಂದ ಬಂದವರು. ಲೋಹಿಯಾ ಅವರು ತಮ್ಮ ಸಕ್ರಿಯ ರಾಜಕೀಯ ಜೀವನವನ್ನು ಆರಂಭಿಸಿದ್ದು ೧೯೩೪ರ ನಂತರ. ಅಂದರೆ ಅಷ್ಟು ಹೊತ್ತಿಗೆ ಪೂನಾ ಒಪ್ಪಂದದ ರೂಪದಲ್ಲಿ ಗಾಂಧಿ–ಅಂಬೇಡ್ಕರ್ ನಡುವಣ ಘರ್ಷಣೆ ತಾರಕಕ್ಕೇರಿ ಅಂಬೇಡ್ಕರ್ ಗಾಂಧಿ ವಿರೋಧಿ ಪಾಳೆಯದ ದೊಡ್ಡ ನಾಯಕರಾಗಿ ಬಿಂಬಿಸಲ್ಪಟ್ಟಿದ್ದರು. ಜೊತೆಗೆ ಅಂಬೇಡ್ಕರ್‌ರ ಹಿಂದೆ ಆಗ ಗಾಂಧಿಯನ್ನು ಕುರಿತಂತೆ ಬಹಳ ಬಿಟ್ಟರ್ ಆಗಿದ್ದ, ಕಹಿಯಾಗಿದ್ದ ದೊಡ್ಡ ಚರಿತ್ರೆಯೇ ಇತ್ತು. ಆದರೆ ಗಾಂಧೀಜಿಯೊಡನೆ ಕೆಲವು ಪ್ರಾಥಮಿಕ ಭಿನ್ನಾಭಿಪ್ರಾಯಗಳಿದ್ದೂ, ಅವರನ್ನು ಬಹುವಾಗಿ ಗೌರವಿಸುತ್ತಿದ್ದ ಲೋಹಿಯಾ, ಗಾಂಧಿ ಚಿಂತನೆಯ ಮೂಲ ಸ್ಫೂರ್ತಿಯಲ್ಲೇ ತಮ್ಮ ಆಲೋಚನೆಗಳನ್ನ ಕಟ್ಟಿಕೊಳ್ಳುತ್ತಿದ್ದವರು. ಲೋಹಿಯಾ ಭಾಷೆಯಲ್ಲೇ ಹೇಳುವುದಾದರೆ

ಅವರು ಗಾಂಧಿಯ 'ಅಸಾಂಪ್ರದಾಯಿಕ'(ಅವರ ಭಾಷೆಯಲ್ಲೇ ಹೇಳುವುದಾದರೆ, 'ಕುಜಾತ') ಶಿಷ್ಯ. ಇನ್ನೂ ಒಂದು ಕಾರಣಾಂದ್ರೆ, ಲೋಹಿಯಾ ಕಾಂಗ್ರೆಸ್ ಪಕ್ಷದೊಳಗಿನ ಉಪಪಕ್ಷವಾಗಿದ್ದ ಕಾಂಗ್ರೆಸ್ ಸಮಾಜವಾದಿ ಪಕ್ಷದ ಸದಸ್ಯರಾಗಿ ಕಾಂಗ್ರೆಸ್ಸಿನ ರಾಜಕೀಯ ಪರಿಧಿಗೆ ಒಳಪಟ್ಟವರು. ಅಂಬೇಡ್ಕರ್‌ರಾದರೋ, ಕಾಂಗ್ರೆಸ್ಸಿನ ಪರಮವಿರೋಧಿಯಾಗಿ ಅದನ್ನು ಕಟುವಾಗಿ ಟೀಕಿಸುತ್ತಿದ್ದರು. ಅಲ್ಲದೆ, ಅವರ ರಾಜಕಾರಣ ಏಕಾಯಾಮವಾಗಿ ಕಾಂಗ್ರೆಸ್ ವಿರೋಧಿಯಾಗುವ ಭರದಲ್ಲಿ ವಸಾಹತುಶಾಹಿ ಪ್ರಭುತ್ವದ ಪರವಾಗಿದ್ದಂತೆ ಬಹಳ ಜನರ ಕಣ್ಣಿಗೆ ಕಾಣತೊಡಗಿತ್ತು.

ನನಗೆ ಹೊಳೆಯುವ ಇನ್ನೂ ಒಂದು ಕಾರಣವೆಂದರೆ, ಅಂಬೇಡ್ಕರ್ ಇಂದಿನ ಒಟ್ಟು ರಾಷ್ಟ್ರೀಯ ರಾಜಕೀಯ ಚಿತ್ರದಲ್ಲಿ ಕಳೆದ ಇಪ್ಪತ್ತು ವರ್ಷಗಳಲ್ಲಿ ಮುಖ್ಯವಾಗಿ ಕಾಣುವಷ್ಟು ಆಗ ಕಾಣುತ್ತಿರಲಿಲ್ಲ. ರಾಷ್ಟ್ರೀಯ ಹೋರಾಟದ ಸಂಕಥನದಲ್ಲಿ, ಇತ್ತೀಚಿನ ವರ್ಷಗಳಲ್ಲಿ ಅದು ಮರು ಓದಿಗೆ, ವ್ಯಾಖ್ಯಾನಕ್ಕೆ ಒಳಪಡುವ ಮುನ್ನ, ಅಂಬೇಡ್ಕರ್‌ದೇನಿದ್ದರೂ ಅಂಚಿನ ಪಾತ್ರವಾಗಿತ್ತು. ಹೀಗಾಗಿ ಲೋಹಿಯಾರ ಗಮನ (ಅವರ ಇತರೆಲ್ಲ ಸಮಾಜವಾದಿ ಗೆಳೆಯರಂತೆಯೇ) ಅಂಬೇಡ್ಕರ್‌ರ ರಾಜಕಾರಣದತ್ತ ಹರಿಯದಿರುವುದು ಸಹಜವೇ ಅನ್ನಿಸದಿರದು. ಆದರೆ ೧೯೫೫ರ ಹೊತ್ತಿಗೆ ಲೋಹಿಯಾ ಅವರಿಗೆ ತಮ್ಮ ಮಾತೃಪಕ್ಷ ಸಮಾಜವಾದಿ ಪಕ್ಷದಲ್ಲಿ ಇರೋದಕ್ಕೆ ಸಾಧ್ಯ ಆಗ್ಲಿಲ್ಲ. ಯಾಕೇಂದ್ರೆ ಗಾಂಧಿ ಸ್ಫೂರ್ತಿಯಲ್ಲಿ ಯಾವ ಸಮಾಜವಾದಿ ತತ್ವದ ಹೊಸ ರೂಪುಗಳನ್ನು ಅವರು ಕಂಡುಕೊಂಡಿದ್ದರೋ ಅವು ಆ ಸಮಾಜವಾದಿ ಪಕ್ಷದ ಮೂಲಕ ಸಾಕಾರಗೊಳ್ಳಲು ಸಾಧ್ಯವಿಲ್ಲ ಅನ್ನೋ ಒಂದು ಅನುಮಾನ ಶುರುವಾಯ್ತು ಅವರಿಗೆ. ಪಕ್ಷದೊಳಗಿನ ಕೆಲ ಬೆಳವಣಿಗೆಗಳು ಅವರಿಗೆ ಜಿಗುಪ್ಸೆ ತಂದಿದ್ದವು. ಅದು ಐರೋಪ್ಯ ಸಮಾಜವಾದದ ಪಡಿಯಚ್ಚಾಗತೊಡಗಿ, ನೆಹರೂ ಸಮಾಜವಾದದ ಸಮೀಪಕ್ಕೆ ಹೋಗಲು ಶುರುಮಾಡಿತ್ತು. ಜೆಪಿ–ನೆಹರೂ ಮಾತುಕತೆ ಶುರುವಾಗಿ, ಸಮಾಜವಾದಿ ಆಂದೋಲನ ತನ್ನ ಮೂಲ ಕ್ರಾಂತಿಕಾರಕತೆಯನ್ನ ಕಳೆದುಕೊಳ್ಳತೊಡಗಿದೆ ಅಂತ ಅವರಿಗೆ ಅನ್ನಿಸತೊಡಗಿತ್ತು. ಹೀಗಾಗಿ ಅವರು ತಮ್ಮದೇ ಒಂದು ಸಮಾಜವಾದಿ ಪಕ್ಷವನ್ನ ಸ್ಥಾಪಿಸಬೇಕಾದಂತಹ ಪ್ರಮೇಯ ಉಂಟಾಯ್ತು.

ಆಗ ತಮ್ಮ ಈ ಹೊಸ ಸಮಾಜವಾದಿ ಪಕ್ಷ ಕಟ್ಟೋದಕ್ಕೆ ಮುಖ್ಯವಾಗಿ ಆದಿವಾಸಿಗಳು, ಹರಿಜನರು–ದಲಿತ ಅನ್ನೋ ಶಬ್ದ ಆಗಿನ್ನೂ ಚಲಾವಣೆಗೆ ಬಂದಿರಲಿಲ್ಲ–ಮಹಿಳೆಯರು, ಮುಸ್ಲಿಮರು ಮತ್ತು ಬಡವರು. ಇವರನ್ನ ಗುರಿಯಾಗಿಟ್ಟುಕೊಂಡು ಇವರ ಆಶೋತ್ತರಗಳನ್ನ ಈಡೇರಿಸುವಂಥ ಪಕ್ಷವಾಗಿ ತಮ್ಮ ಸಮಾಜವಾದಿ ಪಕ್ಷವನ್ನು ಕಟ್ಟೋದಕ್ಕೆ ಅವರು ಪ್ರಯತ್ನ ಪಟ್ಟಾಗ ಅವರಿಗೆ ನೆನಪಿಗೆ ಬಂದದ್ದು ಅಂಬೇಡ್ಕರ್. ಅಂಬೇಡ್ಕರ್ ಆಗ ಹಲವಾರು ರೂಪಾಂತರಗಳನ್ನು ತಾಳಿ, ಶೆಡ್ಯೂಲ್ಡ್ ಕ್ಯಾಸ್ಟ್ ಫೆಡರೇಶನ್ ಅನ್ನೋ ರಾಜಕೀಯ ಪಕ್ಷವನ್ನು ಸ್ಥಾಪಿಸಿದ್ರು, ಇಂಡಿಯನ್ ಲೇಬರ್ ಪಾರ್ಟಿ ಅನ್ನುವ ಜಾತ್ಯಾತೀತ ಕಾರ್ಮಿಕ

ಪಕ್ಷ ಮಾಡಿ ಅದರ ರಾಜಕಾರಣದಿಂದ ನಿರಾಶೆಗೊಂಡು ಅವರು ಮತ್ತೆ ಶೆಡ್ಯೂಲ್ಡ್ ಕ್ಯಾಸ್ಟ್‌ಗಳನ್ನೇ ಆಧರಿಸಿದಂಥ ಒಂದು ಪಕ್ಷವನ್ನ ಕಟ್ಟಕ್ಕೆ ಹೊರಟಿದ್ರು. ಅದು ಕೊನೆಗೆ ರಿಪಬ್ಲಿಕನ್ ಪಕ್ಷವಾಗಿ ಬೇರೆ ಏನೇನೋ ಆಗೋಯ್ತು. ಅದು ಬೇರೆ ವಿಷಯ. ಆಗ ಅಂಬೇಡ್ಕರ್‌ಗೆ ಲೋಹಿಯಾ ಒಂದು ಪತ್ರ ಬರೆದು ಅವರನ್ನ ತಮ್ಮ ಪಕ್ಷದ ಸ್ಥಾಪನಾ ಸಮ್ಮೇಳನಕ್ಕೆ ಓರ್ವ ವಿಶೇಷ ಅತಿಥಿಯಾಗಿ ಬರಲು ಆಹ್ವಾನಿಸ್ತಾರೆ. ಹಾಗೇ ಬಂಡವಾಳಶಾಹಿ ಮತ್ತು ಸಮತಾವಾದಿ(ಕಮ್ಯೂನಿಸ್ಟ್) ಸಮಾಜಗಳಿಗಿಂತ ಭಿನ್ನವಾದ ಸಮಾಜವನ್ನು ರೂಪಿಸುವ, ಒಂದು ಹೊಸ ನಾಗರಿಕತೆಯ ಅಸ್ತಿವಾರ ಹಾಕಬಲ್ಲ, ಸಮಾನತೆಯ ಅರ್ಥಗಳನ್ನು ಒಂದು ಮುಕ್ತ ಪ್ರಜಾಸತ್ತಾತ್ಮಕ ಪರಿಪ್ರೇಕ್ಷ್ಯದಲ್ಲಿ ಶೋಧಿಸಿ ಸಂಘಟಿಸಬಲ್ಲ, ಒಬ್ಬ ಹೊಸ ಮನುಷ್ಯನನ್ನು ರೂಪಿಸಲು ಅನುವಾಗುವಂತಹ ಒಂದು ಸಮಾಜವಾದಿ ಪಕ್ಷವನ್ನ ಮತ್ತು ಆಂದೋಲನವನ್ನ ಕಟ್ಟಬೇಕು ಅನ್ನೋ ಹಂಬಲದಿಂದ ಅವರು 'ಮ್ಯಾನ್‌ಕೈಂಡ್' ಅನ್ನೋ ಒಂದು ಮಹತ್ವಾಕಾಂಕ್ಷೆಯ ಜಾಗತಿಕ ತ್ರೈಮಾಸಿಕವನ್ನು ಶುರು ಮಾಡುತ್ತಾರೆ. ಅದಕ್ಕಾಗಿ ಜಾತಿ ಪದ್ಧತಿ ಕುರಿತಂತೆ 'ಭಾರತದ ಜನತೆ ಕೇವಲ ಸಿಟ್ಟಿನಿಂದ ಅಲ್ಲ, ಬೆಚ್ಚಿಬಿದ್ದು ಕೂರುವಂತೆ ಮಾಡುವಂತಹ' ಲೇಖನ ಬರೆದು ಕಳಿಸುವಂತೆ ಅಂಬೇಡ್ಕರ್‌ರನ್ನು ಕೋರುತ್ತಾರೆ.

ಹೌದು, ಜನ ಬೆಚ್ಚಿಬೀಳಬೇಕು, ನಿಜವಾಗಿ ಜನರನ್ನು ಬೆಚ್ಚಿಬೀಳಿಸಬೇಕಾಗಿದೆ ಇವತ್ತು. ಇಲ್ಲದಿದ್ರೆ ಎದ್ದೇಳೋದಿಲ್ಲ ಇವರು, ಅನ್ನೋದು ಅವರ ಆಶಯವಾಗಿತ್ತು. ಲೋಹಿಯಾ ಹೇಳ್ತಿದ್ರು 'ಸ್ಥಿರತೆ, ಸ್ಥಿರತೆ ಅಂತ ಮಾತಾಡ್ತಾರಲ್ಲ ನೆಹರೂ ಅವರು, ಈ ಸ್ಥಿರತೆ ಬೇಕಾಗಿರೋದು ಬಂಡೆಗಳಿಗೆ, ಮರಗಳಿಗೆ, ರಾಷ್ಟ್ರಕ್ಕಲ್ಲ' ಅಂತ. ಹಾಗೆ ಅಂಬೇಡ್ಕರ್‌ಗೂ ಹೇಳ್ತಾರೆ, 'ರಾಷ್ಟ್ರವನ್ನ ಬೆಚ್ಚಿಬೀಳಿಸುವಂಥಾ ಲೇಖನ ಬರೀರಿ ನೀವು' ಅಂತ. ಜೊತೆಗೆ ತಮ್ಮ ಪಕ್ಷದ ವಲಯ ಅಧ್ಯಯನ ಶಿಬಿರಕ್ಕೆ ಗಣ್ಯ ಸಂಪನ್ಮೂಲ ವ್ಯಕ್ತಿಯಾಗಿ ಬರುವಂತೆಯೂ ಅವರು ಶಿಬಿರದ ಸಕಲ ವಿವರಗಳೊಂದಿಗೆ ಅವರನ್ನು ಪ್ರೀತಿಯಿಂದ ಆಹ್ವಾನಿಸುತ್ತಾರೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಒಂದು ಸಂಗತಿ ಎಂದರೆ, ಈ ಹೊತ್ತಿಗೆ ಲೋಹಿಯಾ ಅಂಬೇಡ್ಕರ್‌ರ ವ್ಯಕ್ತಿತ್ವ ಮತ್ತು ರಾಜಕಾರಣದ ಬಗ್ಗೆ ಸಾಕಷ್ಟು ವಿಶ್ಲೇಷಣೆ ಮಾಡಿರುವ ಸೂಚನೆಗಳೂ ಈ ಪತ್ರದಲ್ಲಿ ಸಿಗುತ್ತವೆ. ಅವರು ಅಂಬೇಡ್ಕರ್‌ಗೆ ಹೇಳುವ ಈ ಮಾತುಗಳನ್ನು ಗಮನಿಸಿ: 'ಈಗ ಕೂಡ ಸಿಟ್ಟಿನೊಂದಿಗೆ ಸರ್ವಾನುಭೂತಿಯೂ ಬೆರೆತಿರಬೇಕೆಂಬುದು ನನ್ನ ಅಭಿಲಾಷೆ. ನೀವು ಕೇವಲ ಪರಿಶಿಷ್ಟ ಜಾತಿಗಳಿಗಷ್ಟೇ ಅಲ್ಲ, ಇಡೀ ಭಾರತದ ಜನತೆಯ ನಾಯಕರಾಗಬೇಕೆಂದು ನಾನು ಆಶಿಸುತ್ತೇನೆ.' ಈ ಪತ್ರ ಬರೆಯುವುದರ ಜೊತೆಗೆ, ಲೋಹಿಯಾ ಅವರು ಮೆಹ್ರೋತ್ರಾ ಮತ್ತು ಗೋಸ್ವಾಮಿ ಎಂಬ ತಮ್ಮಿಬ್ಬರು ಸಮಾಜವಾದಿ ಶಿಷ್ಯರನ್ನು ಅವರನ್ನು ಮುಖತಃ ಭೇಟಿಯಾಗಿ ಮಾತಾಡಲು ಕಳಿಸುತ್ತಾರೆ.

ಈ ಮೆಹ್ರೋತ್ರಾ ಮತ್ತು ಗೋಸ್ವಾಮಿಯವರು ಲೋಹಿಯಾಗೆ ಬರೆದ ಪತ್ರದ ಪ್ರಕಾರ ಅಂಬೇಡ್ಕರ್ ಲೋಹಿಯಾರ ಮಾತು ಮತ್ತು ಸಲಹೆಗಳನ್ನು ಸಹಾನುಭೂತಿಯಿಂದ

ಆಲಿಸುತ್ತಾರೆ ಮತ್ತು ನೆಹರೂ ರಾಜಕಾರಣದ ಆಧಿಪತ್ಯವನ್ನು ಎದುರಿಸುವ ಅಗತ್ಯವನ್ನು ಒಪ್ಪುತ್ತಾರೆ. ಸ್ವತಃ ಅವರು ಲೋಹಿಯಾಗೆ ಪತ್ರ ಬರೆದು ಇಬ್ಬರೂ ಒಟ್ಟುಗೂಡಿ ಕೆಲಸ ಮಾಡಲು ಏನೆಲ್ಲ ಮಾಡಬೇಕೆಂಬುದನ್ನು ಚರ್ಚಿಸಲು ಒಂದು ದಿನಾಂಕ ನಿಗದಿ ಮಾಡಿ ಅವರನ್ನು ದೆಹಲಿಗೆ ಆಹ್ವಾನಿಸುತ್ತಾರೆ. ಆದರೆ ಏಕೋ ಈ ಭೇಟಿಗೆ–ಮಧ್ಯವರ್ತಿಗಳು ಚುನಾವಣಾ ಮೈತ್ರಿ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಮಾತುಕತೆ ಮುಂದುವರೆಸಿದರಾದರೂ– ಇಬ್ಬರಿಗೂ ಅನುಕೂಲವಾಗುವ ದಿನ ಒಂದು ವರ್ಷವಾದರೂ ಕೂಡಿ ಬರುವುದೇ ಇಲ್ಲ. (ಅಷ್ಟರಲ್ಲಿ ಅಂಬೇಡ್ಕರ್ ಅಕಾಲಿಕವಾಗಿ ನಿಧನರಾಗುತ್ತಾರೆ.) ಅಂಬೇಡ್ಕರ್ ಸಾಮಾನ್ಯವಾಗಿ ದೆಹಲಿಯಲ್ಲಿದ್ದು ಅಲ್ಲಿಂದ ಮುಂಬೈಗೆ ಹೋಗಿ ಬರುತ್ತಿದ್ದರೆ, ಲೋಹಿಯಾ, ತಮ್ಮ ಹೊಸ ಪಕ್ಷದ ಮುಖ್ಯ ಕಛೇರಿ ಹೈದರಾಬಾದ್‌ನಲ್ಲಿರುತ್ತಿದ್ದುದರಿಂದ ಅಲ್ಲಿರುತ್ತಿದ್ದರು ಮತ್ತು ಅಲ್ಲಿಂದ ಪಕ್ಷದ ಕೆಲಸಗಳಿಗಾಗಿ ದೇಶದಾದ್ಯಂತ ತಿರುಗಾಡುತ್ತಿದ್ದರು. ಅವರಿಗೆ ಸಕಾಲಿಕ ಮತ್ತು ಸುಗಮ ಪ್ರಯಾಣಕ್ಕೆ ಅಗತ್ಯವಾದ ಆರ್ಥಿಕ ಸೌಲಭ್ಯಗಳಿದ್ದಂತಿರಲಿಲ್ಲ. ಲೋಹಿಯಾರ ಪರವಾಗಿ ಅಂಬೇಡ್ಕರರನ್ನು ಭೇಟಿಯಾದ ಮೆಹ್ರೋತ್ರಾ ಮತ್ತು ಗೋಸ್ವಾಮಿಯವರು ಅವರಿಗೆ ಬರೆದ ಪತ್ರದಲ್ಲಿ, ಈ ಭೇಟಿಯ ಸಂಬಂಧವಾಗಿ ತಾವು ಎದುರಿಸಿದ ಹಣಕಾಸಿನ ತೊಂದರೆಯ ಬಗ್ಗೆ ಬರೆದಿರುವುದನ್ನು ಗಮನಿಸಬಹುದು.

ಅದೇನೇ ಇದ್ದರೂ ಒಂದು ಮಾತು ಇಲ್ಲಿ ಹೇಳಬಹುದು: ಒಂದು ವರ್ಷದ ಅವಧಿಯಲ್ಲಿ ಇಬ್ಬರ ಭೇಟಿ ಸಾಧ್ಯವಾಗಲಿಲ್ಲ ಎಂದರೆ ಇಬ್ಬರಿಗೂ ಪರಸ್ಪರ ಭೇಟಿಯ ಅಂತಹ ಆಂತರಿಕ ಒತ್ತಾಸೆಗಳು ಇರಲಿಲ್ಲವೇನೋ ಎಂದೆನಿಸಿಯೂ ಬಿಡುವ ಸಾಧ್ಯತೆ ಇದೆ. ಈ ಬಗ್ಗೆ ವಿವರವಾಗಿ ಬರೆದಿರುವ ಸುಪ್ರಸಿದ್ಧ ಲೋಹಿಯಾವಾದಿ ಚಿಂತಕ ಯೋಗೇಂದ್ರ ಯಾದವ್, ಈ ಭೇಟಿ ಅವರ ಜೀವಿತಾವಧಿಯಲ್ಲಿ ಅಸಾಧ್ಯವಾಗಿತ್ತೆಂದೇ ಊಹಿಸುತ್ತಾರೆ. ಏಕೆಂದರೆ ಅಂದಿನ ರಾಜಕೀಯ ಸಂದರ್ಭದಲ್ಲಿ, ಇಬ್ಬರ ನಡುವೆ ಸಾಕಷ್ಟು ಸಾಮಾನ್ಯ ರಾಜಕೀಯ ಹಿತಾಸಕ್ತಿಗಳು ಇದ್ದರೂ, ಇಬ್ಬರ ರಾಜಕೀಯ ಗ್ರಹಿಕೆಯ ಮೂಲ ನೆಲೆಗಳು, ಮನೋಭೂಮಿಕೆ ಮತ್ತು ಪರಿಭಾಷೆಗಳು ಸಾಕಷ್ಟು ಬೇರೆಯಾಗಿದ್ದವು. ಯೋಗೇಂದ್ರ ಯಾದವ್ ಮಾತುಗಳಲ್ಲಿ ಹೇಳುವುದಾದರೆ. ಸ್ವಾತಂತ್ರ್ಯಪೂರ್ವ ಕಾಲಘಟ್ಟದಲ್ಲಂತೂ ಅವರಿಬ್ಬರೂ ರಾಜಕಾರಣದ ಎರಡು ದಡಗಳಲ್ಲಿದ್ದರು. ಲೋಹಿಯಾ, ಬಹುಶಃ ಅಂಬೇಡ್ಕರ್‌ರ ರಾಜ್ಯದವರಾದ ಕಾರಣ ಅವರ ಬಗ್ಗೆ ಹೆಚ್ಚಿನ ಸಹಾನುಭೂತಿ ಇದ್ದ ತಮ್ಮ ಶಿಷ್ಯ ಮಧುಲಿಮಯೆ ಅವರ ಕುತೂಹಲಕ್ಕಾಗಿಯೇನೋ ಅಂಬೇಡ್ಕರ್‌ರ ನಿಧನದ ಆರು ತಿಂಗಳುಗಳ ನಂತರ ತಮ್ಮ ಮತ್ತು ಅವರ ನಡುವಣ ಪತ್ರ ವ್ಯವಹಾರದ ದಾಖಲೆಗಳನ್ನು ಅವರಿಗೆ ಕಳಿಸುತ್ತಾ ಅವರಿಗೊಂದು ಪತ್ರ ಬರೆಯುತ್ತಾರೆ. ಅದರಲ್ಲಿ ಅವರು ಅಂಬೇಡ್ಕರ್ ಬಗೆಗೆ ಬರೆದಿರುವ ಮಾತುಗಳು ಅವರಿಬ್ಬರ ನಡುವೆ ಸಾಮಾನ್ಯ ಹಿತಾಸಕ್ತಿಗಳ ಜೊತೆಗೇ ಇದ್ದ ರಾಜಕೀಯ ವೈರುಧ್ಯಗಳ ಮೇಲೂ ಬೆಳಕು ಚೆಲ್ಲುವಂತಿವೆ.

ಈ ಪತ್ರದಲ್ಲಿ ಲೋಹಿಯಾ ಅಂಬೇಡ್ಕರ್‌ರ ಅಕಾಲಿಕ ಸಾವು ತಮಗೆ ವೈಯಕ್ತಿಕ ವ್ಯಥೆಯನ್ನುಂಟು ಮಾಡಿದೆ ಅಂತ ಹೇಳ್ತಾ ಅವರನ್ನ ತಮ್ಮ ಪಕ್ಷದ ಸಂಘಟನೆಯೊಳಕ್ಕೆ, ತಾತ್ವಿಕ ದೃಷ್ಟಿಯ ನೆಲೆಯಿಂದಲೂ ತರುವ ಕಾಲ ಸಮೀಪಿಸಿತ್ತು ಅಂತಾರೆ. ಜೊತೆಗೇ ಈ ಬಹುಮುಖ್ಯ ಮಾತುಗಳನ್ನಾಡ್ತಾರೆ: 'ಅಂಬೇಡ್ಕರ್ ಭಾರತದ ಬಹು ದೊಡ್ಡ ರಾಜಕೀಯ ನಾಯಕರಾಗಿದ್ದರು. ಬಹುಶಃ ಗಾಂಧೀಜಿಯೊಬ್ಬರ ಹೊರತಾಗಿ ಇನ್ನಾವ ಸವರ್ಣೀಯ ಹಿಂದೂ ನಾಯಕನಿಗಿಂತಲೂ ಅವರು ದೊಡ್ಡವರಾಗಿದ್ದರು. ಅವರು ಹಿಂದೂ ಧರ್ಮದಲ್ಲಿನ ಜಾತಿ ಪದ್ಧತಿಯನ್ನು ಒಂದಲ್ಲ ಒಂದು ದಿನ ನಾಶ ಮಾಡಬಹುದೆಂಬ ಆತ್ಮವಿಶ್ವಾಸದ ಪ್ರತೀಕವಾಗಿದ್ದು ಮತ್ತು ನಮ್ಮಂಥವರ ನೆಮ್ಮದಿಗೆ ಕಾರಣರಾಗಿದ್ದರು.' ಇದೇ ಪತ್ರದಲ್ಲಿ ಲೋಹಿಯಾ ಅಂದಿನ ದಲಿತ ಸಮುದಾಯದೊಳಗಿನ ನಾಯಕರ ಎರಡು ಮಾದರಿಗಳಾಗಿ ಜಗಜೀವನರಾಂ ಮತ್ತು ಅಂಬೇಡ್ಕರನ್ನ ಹೋಲಿಕೆ ಮಾಡ್ತಾರೆ. ಜಗತ್ತಿಗೆ ಜಾಗೃತ ಭಾರತದ ನೇರ ಪ್ರತೀಕ ಅಂತ ಹೆಸರಿಸಬಹುದಾಗಿದ್ದ ಅಂಬೇಡ್ಕರ್, ಓರ್ವ ಪ್ರಾಮಾಣಿಕ ಮತ್ತು ಸ್ವತಂತ್ರ ನಿಲುವಿನ ವಿದ್ವಾಂಸರಾಗಿದ್ದರು ಎನ್ನುವ ಲೋಹಿಯಾ, ಅವರ ಕಹಿತನ ಮತ್ತು ಅನ್ಯರೊಂದಿಗೆ ಬೆರೆಯಲಿಚ್ಛಿಸದ ಗುಣಗಳ ಪ್ರಸ್ತಾವ ಮಾಡುತ್ತಾ 'ಅವರು ಜಾತಿ ಪರಿಧಿಯನ್ನು ದಾಟಿ ಹರಿಜನರ ಮಾತ್ರವಲ್ಲ, ಇಡೀ ಭಾರತದ ಜನತೆಯ ನಾಯಕರಾಗಲು ನಿರಾಕರಿಸಿದರು' ಅಂತ ವಿಷಾದದಿಂದ ಗಮನಿಸ್ತಾರೆ. ಅವರು ಅದೇ ವಿಷಾದದಲ್ಲಿ ಮುಂದುವರೆದು ಹೇಳ್ತಾರೆ: 'ಅವರ ಸಮುದಾಯದ ಐದು ಸಾವಿರ ವರ್ಷಗಳ ಕಾಲದ ನೋವು ಮತ್ತು ಅನ್ಯಾಯಗಳ ಚರಿತ್ರೆಯನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ. ಆದರೆ ಅಂಬೇಡ್ಕರ್‌ರಂತಹ ದೊಡ್ಡ ನಾಯಕರು ಈ ಚರಿತ್ರೆಯ ಅಡ್ಡಗೋಡೆಯನ್ನು ದಾಟಿ ಹೊರಬಲ್ಲರೆಂಬ ವಿಶ್ವಾಸವಿತ್ತು. ಆದರೆ ಅದಾಗುವ ಮುನ್ನವೇ ಅಂಬೇಡ್ಕರ್ ಇನ್ನಿಲ್ಲವಾಗಿದ್ದಾರೆ'. ತಾವು ಕಂಡು, ಕೇಳಿದ ಜಗಜೀವನರಾಂ ವ್ಯಕ್ತಿತ್ವದ ಬಗ್ಗೆ 'ಅವರು ಸವರ್ಣೀಯರ ಮುಂದೆ ಅವರಿಗೆ ಪ್ರಿಯರಾಗುವ ಹಾಗೆ ಮಾತಾಡುತ್ತಾ ವರ್ತಿಸುತ್ತಿದ್ದರಾದರೂ, ಹರಿಜನರ ಸಭೆಗಳಲ್ಲಿ ಆ ಸವರ್ಣೀಯರನ್ನು ಕಟುವಾಗಿ ನಿಂದಿಸುತ್ತಿದ್ದರು' ಎನ್ನುತ್ತಾ 'ಇವರಂತವರು ಭವಿಷ್ಯ ಭಾರತದ ಅಡಿಪಾಯವನ್ನು ಭದ್ರಗೊಳಿಸಲಾರರು' ಎನ್ನುತ್ತಾರೆ. ಅದೇ ಉಸಿರಿನಲ್ಲಿ ಅಂಬೇಡ್ಕರ್ ಮಾದರಿಯನ್ನೂ ಒಪ್ಪಿಕೊಳ್ಳದ ಲೋಹಿಯಾ, 'ಹರಿಜನ ಸಮುದಾಯ ಕಳೆದ ೪೦ ವರ್ಷಗಳ ಭಾರತದ ರಾಜಕೀಯ ಚರಿತ್ರೆಯನ್ನು ವಿವೇಚನೆಯಿಂದ ಗಮನಿಸುತ್ತಾ, ತನ್ನ ಕಹಿಯನ್ನು ಬಿಟ್ಟ ಮತ್ತು ಇಡೀ ದೇಶದ ನಾಯಕರಾಗಲು ತುಡಿಯುವಂತಹ ಕಲಿಕೆಯ ಶ್ರದ್ಧೆಯುಳ್ಳ ಅಂಬೇಡ್ಕರ್‌ರ ಮಾದರಿಯೊಂದನ್ನು ರೂಪಿಸಿಕೊಂಡು ಅನುಸರಿಸಬೇಕು' ಅಂತ ಹೇಳ್ತಾರೆ.

ಒಟ್ಟು ಈ ಪತ್ರವ್ಯವಹಾರದಲ್ಲಿ ಮೂಡಿ ಬರುವ ಎರಡು ಮುಖ್ಯ ಸಂಗತಿಗಳೆಂದರೆ, ಒಂದು: ಅಂಬೇಡ್ಕರ್ ಮತ್ತು ಲೋಹಿಯಾ ಇಬ್ಬರೂ ನೆಹರೂ ಅವರ ವೈಯಕ್ತಿಕ ಶೈಲಿಯ–ವ್ಯಕ್ತಿಪೂಜೆ ಮಾದರಿಯ–ರಾಜಕಾರಣದಿಂದ ಬೇಸತ್ತಿದ್ದರು ಮತ್ತು ಒಂದು ಸಂಪೂರ್ಣ ಬದಲಿ ರಾಜಕಾರಣದ ಮಾದರಿಗಾಗಿ ಕಾತರಿಸುತ್ತಿದ್ದರು. ಇನ್ನೊಂದು:

ಅಂಬೇಡ್ಕರ್ ದಲಿತ ರಾಜಕಾರಣದಲ್ಲಿ ಎಷ್ಟು ವ್ಯಸ್ತರಾಗಿಹೋಗಿದ್ದರೆಂದರೆ, ಅದನ್ನು ಸಾರ್ವತ್ರಿಕ ರಾಜಕಾರಣದೊಡನೆ ಸುಸಂಗತವಾಗಿ ಮತ್ತು ಸಾಮರಸ್ಯದೊಂದಿಗೆ ಕೂಡಿಸದಿದ್ದರೆ ಅದು ತನ್ನ ಗುರಿ ಮುಟ್ಟಲಾಗದು ಎಂಬುದರ ಕಡೆ ಅಷ್ಟು ಗಮನ ಹೋದಂತಿರಲಿಲ್ಲ ಮತ್ತು ಅದೇ ಅವರ ಹೋರಾಟ ಮತ್ತು ರಾಜಕಾರಣದ ಮುಖ್ಯ ತೊಂದರೆಯಾಗಿತ್ತು ಎಂದು ಲೋಹಿಯಾ ಭಾವಿಸಿದ್ದರು. ಆದರೆ ಇಂದಿನ ವಾಸ್ತವ ಸಂಗತಿ ಎಂದರೆ ಅಂಬೇಡ್ಕರ್ ಮತ್ತು ಲೋಹಿಯಾ ಈ ಇಬ್ಬರ ರಾಜಕರಣವೂ ತಮ್ಮ ಗುರಿಗಳನ್ನು ಮುಟ್ಟಲು ವಿಫಲವಾಗಿವೆ. ಅಂಬೇಡ್ಕರ್ ರಾಜಕಾರಣ ತನ್ನ ಅವನತಿಯನ್ನು ಮಾಯಾವತಿ ರಾಜಕಾರಣದಲ್ಲಿ ಕಂಡುಕೊಂಡಿದ್ದರೆ, ಲೋಹಿಯಾ ರಾಜಕಾರಣ ಮುಲಾಯಂ-ಲಾಲೂ ರಾಜಕಾರಣದಲ್ಲಿ ಕಂಡುಕೊಂಡಿದೆ. ಈ ಎರಡೂ ತಮ್ಮ ಇತರೆಲ್ಲ ರಾಜಕೀಯ ಆಯಾಮಗಳನ್ನು ಕಳೆದುಕೊಂಡು ಅಪ್ಪಟ ಜಾತಿವಾದಿ ರಾಜಕಾರಣವಾಗಿ ಮಾರ್ಪಾಟಾಗಿವೆ. ಇಂದು ಅಂಬೇಡ್ಕರ್‌ರನ್ನಾಗಲೀ, ಲೋಹಿಯಾರನ್ನಾಗಲೀ ವರ್ತಮಾನದ ಮೂರ್ತ ನೆಲೆಗಳ ರಾಜಕಾರಣದ ಪರಿಭಾಷೆಯಲ್ಲಿ ಚರ್ಚಿಸಲು ಸಾಧ್ಯವಾಗದಂತಹ ಪರಿಸ್ಥಿತಿ ಉಂಟಾಗಿದೆ. ಚರ್ಚೆ ಏನಿದ್ದರೂ ಅಕೆಡೆಮಿಕ್ ನೆಲೆಯಲ್ಲಿ ಮಾತ್ರ ಸಾಧ್ಯವಾಗಿದೆ.

ಈ ದುರಂತಕ್ಕೆ ಮುಖ್ಯ ಕಾರಣವನ್ನು ಹುಡುಕುತ್ತಾ ಹೋದರೆ ನನಗೆ ಹೊಳೆಯುವ ಕಾರಣವೆಂದರೆ, ಈ ಎರಡೂ ರಾಜಕಾರಣಗಳು ಗಾಂಧಿ ರಾಜಕಾರಣದಿಂದ ಮುಖ್ಯವಾದ ಏನನ್ನೂ ಕಲಿಯದೇ ಹೋದದ್ದು. ಅಂಬೇಡ್ಕರ್ ಕೊನೆವರೆಗೂ ಗಾಂಧಿಯನ್ನು ಸಹಾನುಭೂತಿಯಿಂದ ಅರ್ಥ ಮಾಡಿಕೊಳ್ಳುವ ಪ್ರಯತ್ನವನ್ನು-ಗಾಂಧಿ ಅಂಬೇಡ್ಕರರನ್ನು ಅರ್ಥ ಮಾಡಿಕೊಳ್ಳಲು ಮಾಡಿದ ಅರ್ಧದಷ್ಟಾದರೂ-ಮಾಡಲೇ ಇಲ್ಲ. ಅಂತಹ ಒಂದು ಪ್ರಯತ್ನ ಸಾಧ್ಯವಾಗಿದ್ದರೆ, ಅಂಬೇಡ್ಕರ್ ರಾಜಕಾರಣದ ಮುಖ್ಯ ನೆಲೆಯಾಗಿದ್ದ ಅವರ 'ಜಾತಿವಿನಾಶ' ತತ್ವ ಮತ್ತು ಕಾರ್ಯಕ್ರಮಕ್ಕೆ ಒಂದು ಧಾರ್ಮಿಕವೆನ್ನಬಹುದಾದ ಮಾನ್ಯತೆ ಸಿಕ್ಕಿ ದಲಿತ ರಾಜಕಾರಣ ಸಾರ್ವತ್ರಿಕ ರಾಜಕಾರಣದ ಒಂದು ಅವಿಭಾಜ್ಯ ಅಂಗವಾಗಿರುತ್ತಿತ್ತು ಅಂತ ನನಗನ್ನಿಸುತ್ತದೆ. ಇನ್ನೂ ಮುಂದೆ ಹೋಗಿ ಹೇಳುವುದಾದರೆ, ಇದು ಸಾಧ್ಯವಾಗಿದ್ದಲ್ಲಿ ಪೂನಾ ಒಪ್ಪಂದ ಇಂದಿನ ಅಂಬೇಡ್ಕರ್‌ವಾದಿಗಳಿಗೆ ಒಂದು ಕಹಿ ನೆನಪಾಗಿ ಉಳಿಯುತ್ತಿರಲಿಲ್ಲ. ಹಾಗೇ, ಲೋಹಿಯಾ ರಾಜಕಾರಣವನ್ನು ಮೂಲತಃ ಗಾಂಧಿವಾದಿಯೆಂದು ಗುರುತಿಸಲಾಗುವುದಾದರೂ, ಅದು ತಾನು ಗಾಂಧಿಯ 'ಮಿತಿ'ಗಳನ್ನು ಮೀರುವ ಪ್ರಯತ್ನ ಮಾಡುತ್ತಿದ್ದೇನೆ ಎಂಬ ಹಮ್ಮಿಗೆ ಬಲಿಯಾಯಿತೆಂದು ನನಗನ್ನಿಸುತ್ತದೆ. ಮುಖ್ಯವಾಗಿ ಅದು ಪಶ್ಚಿಮದ ಆಧುನಿಕ ನಾಗರಿಕತೆ ಕುರಿತ ಗಾಂಧಿ ವಿಮರ್ಶೆಯನ್ನು ಅಗತ್ಯ ಸೂಕ್ಷ್ಮತೆಯೊಂದಿಗೆ ಪರಿಗಣಿಸದೆ-ಎಷ್ಟಾದರೂ ಸಮಾಜವಾದ ಒಂದು ಐರೋಪ್ಯ ಹುಟ್ಟಿನ ಪರಿಕಲ್ಪನೆಯೇ ಅಲ್ಲವೇ?-ಬಂಡವಾಳಶಾಹಿಯೊಂದಿಗೆ ಸ್ಪರ್ಧಿಸುವ ದುಸ್ಸಾಹಸ ಮಾಡಲೂ ಹೋಗಿಯೇನೋ, ಸಮಾನತೆಯನ್ನು ಸಮೃದ್ಧಿಯ ಮೂಲಕ ಅಥವಾ ಸಹವಾಸದಲ್ಲಿ ಸೃಜಿಸುವ ಮಾತುಗಳನ್ನಾಡಿತು. ಸಮೃದ್ಧಿ ಎಂಬ ಶಬ್ದಕ್ಕೆ ಒಂದು ಎಲ್ಲೆ

ಮೀರಿದ ಎಂಬ ಅರ್ಥವೂ ಇದೆ ಎಂಬುದನ್ನು ನಾವು ಗಮನಿಸಬೇಕು. ಸ್ವತಃ ಲೋಹಿಯಾ ಸಮಾನತೆಯ ಬದಲಾಗಿ ಸಮತೆ ಎಂಬ ಪರಿಕಲ್ಪನೆಯನ್ನು ಪರಿಚಯಿಸಿ, ಅದನ್ನು 'ಆಂತರಿಕ ಶಾಂತಿ ಮತ್ತು ಬಾಹ್ಯ ಬಂಧುತ್ವ' ಎಂದು ಅರ್ಥೈಸಿದರಾದರೂ, ಅವರ ರಾಜಕಾರಣದ ಆವೇಗ ಅದರ ಬೌದ್ಧಿಕ ಒಳನೋಟವನ್ನು ಹಿನ್ನೆಲೆಗೆ ಸರಿಸಿತೆಂದೇ ಹೇಳಬೇಕು. ಅದೇ ಮುಂದೆ–ಲೋಹಿಯಾ ಮರಣಾನಂತರ–ಲೌಕಿಕ ಸಂಪತ್ತಿಗಾಗಿ ನಡೆಯುವ ಅಪ್ಪಟ ಶೂದ್ರ ಜಾತಿವಾದವಾಗಿ ಪರಿವರ್ತಿತವಾಯಿತು.

ಹೀಗೆ ಲೋಹಿಯಾ ಮತ್ತು ಅಂಬೇಡ್ಕರ್ ನಡುವೆ ತೌಲನಿಕ ಅಧ್ಯಯನ ಅಥವಾ ವಿವೇಚನೆ ಸ್ವಲ್ಪ ಜಟಿಲವಾದದ್ದು. ಅನೇಕ ಮಡಿಕೆಗಳಲ್ಲಿ ಸೇರಿ ಹೋಗಿ ಹಲವು ಬಾರಿ ಅಪಾರ್ಥಗಳ ನೆಲಬಾಂಬುಗಳನ್ನು ಹಾದು ಹೋಗಬೇಕಾದ ಬಹು ಎಚ್ಚರಿಕೆಯ ನಡೆಯನ್ನು ಅಪೇಕ್ಷಿಸುವಂತಹ ಡಿಫಿಕಲ್ಟ್ ಪೊಲಿಟಿಕಲ್ ಲ್ಯಾಂಡ್‌ಸ್ಕೇಪ್ ಅದು. ಅಥವಾ ಸರಳವಾಗಿ ಹೇಳೋದಾದ್ರೆ, ಕೇವಲ ಅಕೆಡೆಮಿಕ್ ಇಂಟರೆಸ್ಟ್‌ನಿಂದ ಮಾತ್ರ ಸಾಧು ಅನ್ನಿಸುವಂತಹ ವಿಷಯ ಅಂತನೂ ಕೆಲವು ಬಾರಿ ಅನ್ನಿಸಿಬಿಡುತ್ತದೆ. ಅದೇನೇ ಇದ್ದರೂ, ಇವತ್ತು ಈ ಇಬ್ಬರನ್ನೂ ಗಾಂಧಿ ಜೊತೆಗೆ ನಿಲ್ಲಿಸಿಕೊಂಡು ನೋಡಿದಾಗ ಮಾತ್ರ ಈ ಇಬ್ಬರ ಚಿತ್ರಗಳು ಇಂದಿನ ಸಂದರ್ಭಕ್ಕೆ ಸ್ಫುಟವಾಗಿ ಕಾಣಬಲ್ಲವು ಅಂತ ನನಗನ್ನಿಸುತ್ತೆ. ನಮಗೆ ಈ ಮೂರು ಜನರಿಂದಲೂ ಪಡೀಬೇಕಾದದ್ದು ಬಹಳ ಇದೆ ಅನ್ಸುತ್ತೆ. ನಾನು ಹಿಂದೊಮ್ಮೆ ಹೇಳಿದ ಹಾಗೆ, ಹಿಂದೊಮ್ಮೆ ಬರೆದ ಹಾಗೆ ಇವತ್ತು ಗಾಂಧಿ, ಒಂದು ಕಡೆ ಅಂಬೇಡ್ಕರ್ ಮತ್ತು ಇನ್ನೊಂದು ಕಡೆ ಲೋಹಿಯಾರ ಹೆಗಲಮೇಲೆ ಕೈಹಾಕ್ಕೊಂಡು ನಮ್ಮನ್ನ ಮುನ್ನಡೆಸಿಕೊಂಡು ಹೋಗೋ ಒಂದು ಚಿತ್ರ ಕಣ್ಣ ಮುಂದೆ ಬಂದು ಆ ಚಿತ್ರದ ಹಿಂದಿರೋ ಫಿಲಾಸಫಿ ನಮಗೆ ದಕ್ಕುವಂತಾದರೆ ಅದೇ ಇಂಥಾ ತೌಲನಿಕ ಅಧ್ಯಯನಗಳಿಂದ ನಾವು ಪಡೀಬಹುದಾದಂತಹ ಬಹಳ ದೊಡ್ಡ ಪ್ರಯೋಜನ ಅಂತ ಹೇಳಿ ನನ್ನ ಮಾತುಗಳನ್ನ ಮುಗಿಸ್ತೀನಿ.

ನಮಸ್ಕಾರ.

(೨೦೧೪ರ ಅಕ್ಟೋಬರ್ ೧೧ರಂದು ಬೆಂಗಳೂರು ಆಕಾಶವಾಣಿ ಕೇಂದ್ರ ಮತ್ತು ಬೆಂಗಳೂರು ವಿಶ್ವವಿದ್ಯಾಲಯದ ಬಾಬಾ ಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಸಂಯುಕ್ತ ಆಶ್ರಯದಲ್ಲಿ ಬೆಂಗಳೂರಿನಲ್ಲಿ ಏರ್ಪಡಿಸಲಾಗಿದ್ದ 'ಡಾ. ಬಿ.ಆರ್. ಅಂಬೇಡ್ಕರ್ ಬದುಕು ಮತ್ತು ಚಿಂತನೆಗಳ ತೌಲನಿಕ ಅವಲೋಕನ' ಎಂಬ ವಿಷಯ ಕುರಿತ ವಿಚಾರ ಸಂಕಿರಣದಲ್ಲಿ ಆಡಿದ ಮಾತುಗಳ ಸಂಕಲಿತ ರೂಪ)

ಆಧುನಿಕತೆ, ಪ್ರಗತಿಪರತೆ ಮತ್ತು ಸಾಮಾಜಿಕ ನ್ಯಾಯ

ನಮ್ಮ ದೇಶ ವಸಾಹತುಶಾಹಿಯಿಂದ ಬಿಡುಗಡೆಗೊಂಡು ಪ್ರಜಾಪ್ರಭುತ್ವ ರಾಷ್ಟ್ರವಾಗಲು ಕಾರಣವಾದ ರಾಷ್ಟ್ರೀಯ ಹೋರಾಟ ಅನೇಕ ಕ್ರಾಂತಿಕಾರಿ ಆಲೋಚನೆಗಳಿಗೆ, ಜನರ ವೈವಿಧ್ಯಮಯ ಆಶೋತ್ತರಗಳಿಗೆ ಕಾರಣವಾಯಿತು. ಅವೆಲ್ಲವೂ ರಾಷ್ಟ್ರೀಯ ಹೋರಾಟದ ಸಮಷ್ಟಿ ಮನಸ್ಸಿನಲ್ಲಿ ಪರಿಷ್ಕಾರಗೊಂಡು ನಮ್ಮ ಸಂವಿಧಾನವಾಗಿ ಹರಳುಗಟ್ಟಿದೆ. ಹಾಗೇ ಮೂಡಿಬಂದದ್ದು ಸಾಮಾಜಿಕ ನ್ಯಾಯದ ಕಲ್ಪನೆ. ಪ್ರಜಾಪ್ರಭುತ್ವವೆಂದ ಮೇಲೆ ಆ ಪ್ರಭುತ್ವದಲ್ಲಿ ಪ್ರಜಾ ವರ್ಗದ ಸಕಲ ಸಮುದಾಯಗಳೂ ಪಾಲ್ಗೊಳ್ಳುವಂತಾಗಬೇಕು. ಅದಕ್ಕಾಗಿ, ಐತಿಹಾಸಿಕ ಕಾರಣಗಳಿಂದಾಗಿ (ಮುಖ್ಯವಾಗಿ ಜಾತಿ ವ್ಯವಸ್ಥೆಯ ಕಾರಣದಿಂದಾಗಿ) ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿದ್ದ ಸಮುದಾಯಗಳಿಗೆ ರಾಷ್ಟ್ರಜೀವನದ ಎಲ್ಲ ಕ್ಷೇತ್ರಗಳಲ್ಲಿ ನ್ಯಾಯಬದ್ಧ ಪ್ರಾತಿನಿಧ್ಯವನ್ನು ಖಚಿತಗೊಳಿಸಿಕೊಳ್ಳಬೇಕು. ಈ ನ್ಯಾಯಸಾಧನೆಗೆ ಪರಿಣಾಮಕಾರಿ ಸಾಧನವಾಗಿ ಜಾರಿಗೆ ಬಂದದ್ದೇ ಮೀಸಲಾತಿ. ಅದನ್ನು ರಾಷ್ಟ್ರೀಯ ಹೋರಾಟದ ಉದಾತ್ತ ಮೌಲ್ಯಗಳಿಂದ ಸ್ಫೂರ್ತಿಗೊಂಡಿದ್ದ ರಾಷ್ಟ್ರ, ಪಶ್ಚಾತ್ತಾಪಪೂರ್ವಕವಾಗಿ ಮತ್ತು ಸೋದರತೆಯ ಪ್ರತೀಕವಾಗಿ ಒಪ್ಪಿಕೊಂಡಿತೆಂದೇ ಹೇಳಬೇಕು.

ಈಗ ಈ ಮೀಸಲಾತಿ ಕೆಲ ಸಮುದಾಯಗಳಿಗೆ ಜಾರಿಗೆ ಬಂದು ೬೦ ವರ್ಷಗಳಾಗಿದ್ದರೆ, ಇನ್ನು ಕೆಲವು ಸಮುದಾಯಗಳಿಗೆ ನಮ್ಮ ರಾಜ್ಯದಲ್ಲಿ ಜಾರಿಗೆ ಬಂದು ನಲವತ್ತು ವರ್ಷಗಳಾಗಿವೆ. ಇದರ ಪರಿಣಾಮಗಳಾದರೂ

ಏನು? ಸಾಮಾಜಿಕ ಅಸಮಾನತೆಯ ಸಮೀಕರಣಗಳು ಈ ಅವಧಿಯಲ್ಲಿ ಬದಲೇ ಆಗಿಲ್ಲವೇ? ಇತ್ತೀಚಿನ ದಿನಗಳಲ್ಲಿ ಏಕೆ ರಾಷ್ಟ್ರದ ಅಲ್ಲಲ್ಲಿ ಆಗಾಗ್ಗೆ ಮೀಸಲಾತಿ ವಿರೋಧಿ ಆಂದೋಲನಗಳು ಚಿಮ್ಮುತ್ತವೆ? ಮೀಸಲಾತಿಯಿಂದ ಹೊರಗಿಟ್ಟ ಸಮುದಾಯಗಳು ಮೀಸಲಾತಿ ವ್ಯಾಪ್ತಿಗೆ ಸೇರಲು ಹೋರಾಟ ನಡೆಸಲಾರಂಭಿಸಿವೆ ಏಕೆ? ಯಾರಾದರೂ ಮೀಸಲಾತಿ ನೀತಿಯ ಪರಿಷ್ಕರಣೆಯ (ರದ್ದತಿಯ ಅಲ್ಲ) ಮಾತಾಡಿದ ಕೂಡಲೇ ಮೀಸಲಾತಿ ಫಲಾನುಭವಿ ಸಮುದಾಯಗಳು ಹಾಹಾಕಾರ ಮಾಡುತ್ತವೆ? ಹಾಗಾದರೆ ಮೀಸಲಾತಿ ಒಂದು ಶಾಶ್ವತ ವ್ಯವಸ್ಥೆಯಾಗಬೇಕೆ? ಅಂದರೆ, ಸಾಮಾಜಿಕ ಅಸಮಾನತೆ ಪರಿಹಾರವಾಗದ ಸಮಸ್ಯೆಯೆ? ಅಂದರೆ ಮೀಸಲಾತಿ ತನ್ನ ಉದ್ದೇಶದಲ್ಲಿ ವಿಫಲವಾಗಿದೆಯೇ? ಆ ಕಾರಣದಿಂದಲಾದರೂ ಅದರ ಪುನರಾವಲೋಕನ ಅಗತ್ಯವಿದೆಯಲ್ಲವೆ?

ಉದಾಹರಣೆಗೆ ಮೀಸಲಾತಿಯ ತಾತ್ವಿಕತೆಗೆ ಕಾರಣವಾದ ಜಾತಿ ವ್ಯವಸ್ಥೆಯನ್ನು ನಾವು ಅರ್ಥ ಮಾಡಿಕೊಂಡ ರೀತಿಯೇ ದೋಷಪೂರ್ಣವಾಗಿದೆಯೇ? ಮೀಸಲಾತಿಯ ಮಗ್ಗುಲಲ್ಲೇ ನಡೆದ ನಮ್ಮ ಜಾತಿ ವಿರೋಧಿ ಆಂದೋಲನಗಳು (ಉದಾ: ದಲಿತ ಚಳುವಳಿ) ದಾರಿ ತಪ್ಪಿದ ಕಾರಣದಿಂದಾಗಿ ಮೀಸಲಾತಿ ಎಂಬುದು ಒಂದು ಪಟ್ಟಭದ್ರ ಹಿತಾಸಕ್ತಿಯಾಗಿ ಪರಿವರ್ತಿತವಾಗಿ ಜಾತಿ ವ್ಯವಸ್ಥೆಯನ್ನು ಇನ್ನೊಂದು ರೂಪದಲ್ಲಿ ಪುನರುತ್ಪಾದಿಸತೊಡಗಿದೆಯೇ? ಹಾಗಿದ್ದಲ್ಲಿ ಮೀಸಲಾತಿಯ ಬದಲಾಗಿ ಸಾಮಾಜಿಕ ಸಮಾನತೆಗಾಗಿ ಬೇರೊಂದು ಸಾಧನವನ್ನು ರೂಪಿಸುವ ಬಗ್ಗೆ ಯೋಚನೆ ಮಾಡುವುದು ಲೇಸಲ್ಲವೆ? ಅಥವಾ ಮೀಸಲಾತಿಯಿಂದ ಸಾಮಾಜಿಕ ಸಮಾನತೆ ಎಷ್ಟು ಸಾಧಿತವಾಗಿದೆಯೋ ಅಷ್ಟರಮಟ್ಟಿಗಾದರೂ ಮೀಸಲಾತಿ ಕಾರ್ಯಕ್ರಮವನ್ನು ಪುನರ್ವಿನ್ಯಾಸಗೊಳಿಸಬೇಕಲ್ಲವೆ? ಜಾತಿ ವ್ಯವಸ್ಥೆ ಮೇಲ್ಜಾತಿಗಳವರಿಂದ ಮಾತ್ರ ಉಳಿದಿದೆಯೇ? ಕೆಳಜಾತಿಗಳಿಗೆ ತಮ್ಮ ಜಾತಿಕಟ್ಟಳೆ–ನಂಬಿಕೆ–ಆಚರಣೆಗಳಲ್ಲಿ ನಂಬಿಕೆಯಿಲ್ಲವೆ? ಸಾಮಾಜಿಕ ನ್ಯಾಯ ಕೇವಲ ಮೀಸಲಾತಿಯ ಜಾತಿಗಳಿಗೆ ಮಾತ್ರ ಸಂಬಂಧಿಸಿದ ವಿಷಯವೇ? ಈಗ ಜಾರಿಯಲ್ಲಿರುವ ಸಾಮಾಜಿಕ ನ್ಯಾಯ ಕಾರ್ಯಕ್ರಮಗಳ ಪರಿಣಾಮ ಇಡೀ ಸಮಾಜದ ಮೇಲೆ ಯಾವ ರೀತಿ ಆಗಿದೆ ಎಂಬುದರ ಬಗ್ಗೆ ಯಾರೇ ಆದರೂ ಯೋಚಿಸಬಹುದಲ್ಲವೆ? ಒಬ್ಬ ಅಂತಾರಾಷ್ಟ್ರೀಯ

> ಮಟ್ಟದ ಭಾರತೀಯ ಸಮಾಜಶಾಸ್ತ್ರಜ್ಞನಿಗೆ ಒಂದು ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಅಂಬೇಡ್ಕರ್‌ರನ್ನು ಮೂರ್ಖನೆಂದೂ, ಮೀಸಲಾತಿ ಪಡೆದು ವಿಶ್ವವಿದ್ಯಾಲಯಗಳಲ್ಲಿ ಅಧ್ಯಾಪಕರಾದವರನ್ನು ಕತ್ತೆಗಳು ಎಂದು ಕರೆಯುವಷ್ಟು ಧೈರ್ಯ ಇಂದು ಏಕೆ ಬಂದಿದೆ? ಕೇವಲ ಈತನನ್ನು ಶಪಿಸುವ ಮೂಲಕ ಈ ಪ್ರಶ್ನೆಗೆ ಉತ್ತರ ದೊರೆಯಲಾರದು.
>
> ದಲಿತ ಚಳುವಳಿಯ ಮುಖ್ಯ ಚಿಂತಕರೂ, ನಾಯಕರೂ ಆಗಿರುವ ದೇವನೂರ ಮಹಾದೇವ ಕೆಲ ಕಾಲದ ಹಿಂದೆ ಜಾತಿ ವಿರೋಧಿ ಹೋರಾಟದ ಬಗ್ಗೆ ಒಂದು ಹಿನ್ನೋಟ ಬೀರುತ್ತಾ, ಈ ಹೋರಾಟ ಜಾತಿಯನ್ನು ಗಟ್ಟಿಕೊಳಿಸಿರಬಹುದೇ ಎಂಬ ಅನುಮಾನದಲ್ಲಿ ಹೇಳಿದ ಈ ಮಾತುಗಳು ಇಲ್ಲಿ ನೆನಪಾಗುತ್ತಿವೆ. ಜಾತಿ ವಿರುದ್ಧದ ಕಾರ್ಯಕ್ರಮಗಳಲ್ಲಿ ಒಂದು ಕಾಲನ್ನು ಜಾತಿಯ ಒಳಗೂ, ಇನ್ನೊಂದು ಕಾಲನ್ನು ಜಾತಿಯ ಹೊರಗೂ ಇಡುವ ಎಚ್ಚರ ನಮಗಿರಬೇಕಿತ್ತು ಎಂದವರು ಹೇಳಿದ್ದರು. ಇದನ್ನು ನಮ್ಮ ಸಾಮಾಜಿಕ ನ್ಯಾಯ ಕಾರ್ಯಕ್ರಮಗಳಲ್ಲಿ, ಮುಖ್ಯವಾಗಿ ಮೀಸಲಾತಿ ಜಾರಿಯಲ್ಲಿ ಅಳವಡಿಸಿಕೊಳ್ಳುವ ಕಾರ್ಯವಿಧಾನವಾವುದು? ಈ ಬಗ್ಗೆ ವ್ಯಾಪಕ ಮತ್ತು ಮುಕ್ತ ಚರ್ಚೆ ನಡೆಯಬೇಕಿದೆ.

ಇಂದು ನಮ್ಮ ಮುಂದಿರುವ ಈ ಎಲ್ಲ ಪ್ರಶ್ನೆಗಳ ಹಿನ್ನೆಲೆಯಲ್ಲಿ ಇಷ್ಟು ಮಾತುಗಳನ್ನು ಹೇಳಬಹುದು. ಸಾಮಾಜಿಕ ನ್ಯಾಯ, ನಿರ್ದಿಷ್ಟವಾಗಿ ಮೀಸಲಾತಿ ಕುರಿತಂತೆ ನಮ್ಮ ಜನಪ್ರಿಯ ಮತಬ್ಯಾಂಕ್ ರಾಜಕಾರಣ ಮತ್ತು ಜಾತಿಲೋಭದ ಜಾತೀಯವಾದಿ ಗುಂಪುಗಳು ಕಟ್ಟಿರುವ ಭಾವನಾತ್ಮಕ ವಾತಾವರಣದಲ್ಲಿ ಜಾತಿವ್ಯವಸ್ಥೆ ಮತ್ತು ಅದರ ಪರಿಣಾಮವಾದ ಸಾಮಾಜಿಕ ನ್ಯಾಯ ಕುರಿತಂತೆ ಒಂದು ಶಾಸ್ತ್ರೀಯ, ವಸ್ತುನಿಷ್ಠ ಚರ್ಚೆ ಸ್ವಲ್ಪ ದುಸ್ಸಾಹಸದ ಕೆಲಸವೇ. ಆದರೂ ಸ್ವಸ್ಥ ಮತ್ತು ಸಮಾನತೆಯ ಸಮಾಜವನ್ನು ಬಯಸುವವರು ಅದನ್ನು ಕರ್ತವ್ಯವೆಂಬಂತೆ ಮಾಡಲೇಬೇಕಿದೆ

* * * * *

ಭಾರತದ ಜಾತಿ ವ್ಯವಸ್ಥೆ ಕುರಿತಂತೆ ನಿರಂತರವಾಗಿ ಅಧ್ಯಯನ-ಸಂಶೋಧನೆಗಳು ನಡೆದೇ ಇವೆ. ಜಾತಿ ವ್ಯವಸ್ಥೆಗೆ ರಾಮಾಯಣ-ಮಹಾಭಾರತಗಳಷ್ಟು ಪ್ರಾಚೀನ ಕಾಲದಿಂದಲೂ ಒಂದಿಲ್ಲ ಒಂದು ರೀತಿಯ ಪ್ರತಿರೋಧ ವ್ಯಕ್ತವಾಗುತ್ತಾ ಬಂದಿದೆ. ಇದು, ಜಾತಿವ್ಯವಸ್ಥೆಯು ಇತಿಹಾಸದುದ್ದಕ್ಕೂ ವಿವಾದಾಸ್ಪದವಾಗಿಯೇ ಉಳಿದುಬಂದಿದೆ ಎಂಬುದನ್ನು ವೇದ್ಯವಾಗಿಸುತ್ತದೆ. ಆದರೆ ಅದು ಈವರೆಗೂ ಉಳಿದು ಬಂದಿದೆ ಎಂಬುದು

ಇಲ್ಲಿ ಮುಖ್ಯ ಸಂಗತಿ. ಉಳಿದು ಬಂದಿದೆ ಎಂದರೆ, ಗಟ್ಟಿಯಾಗೇ ಉಳಿದು ಬಂದಿದೆ. ಎಷ್ಟು ಗಟ್ಟಿಯಾಗಿ ಎಂದರೆ, ಅದನ್ನು ನಾಶಮಾಡಲು, ನಿಷ್ಪ್ರಯೋಜಕಗೊಳಿಸಿ ಅಪ್ರಸ್ತುತಗೊಳಿಸಲು ಬಳಸಲಾಗುತ್ತಿರುವ ಆಧುನಿಕ ಶಸ್ತ್ರಾಸ್ತ್ರಗಳೆಲ್ಲವೂ ವಿಫಲವಾಗುತ್ತಿರುವಂತೆ ತೋರುವಷ್ಟರ ಮಟ್ಟಿಗೆ. ಈ ಸಂಗತಿ ಎತ್ತುವ ಎರಡು ಮುಖ್ಯ ಪ್ರಶ್ನೆಗಳೆಂದರೆ, ಅದು ಅಷ್ಟು ಗಟ್ಟಿಯಾಗಿ ಏಕೆ ಮತ್ತು ಹೇಗೆ ಉಳಿದು ಬಂದಿದೆ ಮತ್ತು ಅದನ್ನು ನಾಶ ಮಾಡುವ ಪ್ರಯತ್ನಗಳಾದರೂ ಏಕೆ ಮತ್ತು ಹೇಗೆ ಎಂಬುದು.

ಜಾತಿ ಮೂಲತಃ ಒಂದು ಸಮಾಜಕ್ಕೆ ಅಗತ್ಯವಾದ ಸೇವಾ ಸೌಲಭ್ಯಗಳ ಹಿನ್ನೆಲೆಯಲ್ಲಿ ಒಬ್ಬ ಮನುಷ್ಯನ ಕೌಶಲ್ಯ–ಸಾಮರ್ಥ್ಯಗಳನ್ನು ಆಧರಿಸಿ ನಿರ್ಣಯವಾಗುತ್ತಿದ್ದ ಸಂಗತಿ; ಇದನ್ನು ವರ್ಣ ಧರ್ಮ ಎಂದು ಕರೆಯಲಾಗುತ್ತಿತ್ತು ಎಂದು ಹೇಳಲಾಗುತ್ತದೆ. ಅದು ಕ್ರಮೇಣ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ವಿಂಗಡಣೆಯಲ್ಲಿ ಪರಿಣಮಿಸಿತು ಎಂದು ನಂಬಲಾಗಿದೆ. ಆದರೆ ಅದು ನಮ್ಮ ಕಣ್ಣಿಗೆ ಕಾಣುವ ಇತಿಹಾಸದುದ್ದಕ್ಕೂ ಹುಟ್ಟಿನ ಆಧಾರದ ಮೇಲೇ–ಬಹುಶಃ ಸಮಾಜದ ಅಗತ್ಯಗಳು ಮತ್ತು ಮನುಷ್ಯನ ಹೊಸ ಕೌಶಲ್ಯ ಮತ್ತು ಸಾಮರ್ಥ್ಯಗಳ ನಡುವಣ ಪರಸ್ಪರ ಪ್ರಭಾವದಿಂದ ಸಾಮಾಜಿಕ ಮತ್ತು ರಾಜಕೀಯ ಬದಲಾವಣೆಯ ಗತಿಗಳಿಗೆ ಹೊಂದಿಕೊಳ್ಳಲಾಗದೆ ನಿರ್ಣೀತವಾಗುತ್ತಿರುವುದನ್ನೂ, ಅದರ ಸುತ್ತ ದಾಖಲಾಗಿರುವ ಎಲ್ಲ ವಿವಾದಗಳ ಮೂಲ ಇದೇ ಆಗಿರುವುದನ್ನೂ ನಾವು ಕಾಣುತ್ತಿದ್ದೇವೆ. ಆಕಸ್ಮಿಕವಾದ ತಮ್ಮ (ಹುಟ್ಟು) ಜಾತಿ ಕಾರಣದಿಂದಾಗಿಯೇ; ಅಂದರೆ, ವರ್ಣ ಧರ್ಮದ ಅನುಲ್ಲಂಘನೀಯ ನಿಯಮಗಳಿಂದಾಗಿಯೇ ಭಾರತದ ಇತಿಹಾಸದಲ್ಲಿ ಹಲವು ಸಮರ್ಥರು–ಪ್ರತಿಭಾಶಾಲಿಗಳು ಬದುಕಿನಲ್ಲಿ ಪಡೆಯಬೇಕಾದ ಸ್ಥಾನಮಾನಗಳನ್ನು–ಅಂದರೆ ಸಾಮಾಜಿಕ ನ್ಯಾಯವನ್ನು–ಪಡೆಯದೇ ಹೋಗಿದ್ದಾರೆ. ಅಷ್ಟೇ ಅಲ್ಲ, ಹಲವು ಜನಸಮುದಾಯಗಳು ಇತಿಹಾಸದುದ್ದಕ್ಕೂ ಹಲವು ರೀತಿಯ ಅವಕಾಶಗಳಿಂದ ವಂಚಿತರಾಗಿ ಈಗ ಹೊಸ ಕಾಲದ ಪ್ರಯೋಜನ ಮತ್ತು ಸೌಲಭ್ಯಗಳನ್ನು ಪಡೆಯುವ ಸಾಮರ್ಥ್ಯಗಳನ್ನು ರೂಢಿಸಿಕೊಳ್ಳಲಾಗದ ಮತ್ತು ಅದರಿಂದಾಗಿ ಸಮಕಾಲೀನ ಸ್ಪರ್ಧೆಯಲ್ಲಿ ಹಿಂದೆ ಬೀಳುವಂತಾಗುವ ಅಸಹಾಯಕ ಸ್ಥಿತಿ ತಲುಪಿದರು. ಇದರಿಂದ ಅವರನ್ನು ಪಾರು ಮಾಡುವ ಸಾಹಸದ ಭಾಗವಾಗಿಯೇ, ಇದಕ್ಕೆ ಕಾರಣವಾಗಿರುವ ಜಾತಿ ವ್ಯವಸ್ಥೆಯನ್ನು ಅಸಿಂಧುಗೊಳಿಸುವ (ಇದರ ಜ್ವಲಂತ ಉದಾಹರಣೆಯಂತಿದ್ದ ಡಾ. ಅಂಬೇಡ್ಕರ್‌ರ ಭಾಷೆಯಲ್ಲಿ ಹೇಳುವುದಾದರೆ ಜಾತಿ ವಿನಾಶ ಮಾಡುವ) ಪ್ರಯತ್ನ. ಈ ಅರ್ಥದಲ್ಲಿ ಇದು ಇತಿಹಾಸದ ವಕ್ರತೆಗಳ, ಅನ್ಯಾಯ, ಅಮಾನವೀಯತೆಗಳ ವಿರುದ್ಧ ನಡೆದಿರುವ ಹೋರಾಟ.

ಆದರೆ ಈ ಸಾಮಾಜಿಕ ಹೋರಾಟ, ಆರಂಭದಲ್ಲಿ ಸೂಚಿಸಿದ ಹಾಗೆ ವಿಫಲವಾಗುತ್ತಿರುವ ಸೂಚನೆಗಳು ಕಾಣಬರುತ್ತಿವೆ: ಯಾವ ವಂಚಿತ ಜನಸಮುದಾಯಗಳ ಒಳತಿಗಾಗಿ ಈ

ಹೋರಾಟವನ್ನು ಆರಂಭಿಸಲಾಯಿತೋ ಆ ಜನ ಸಮುದಾಯಗಳು ಈ ಹೋರಾಟದಿಂದ ಪ್ರಯೋಜನ ಪಡೆದಿರುವ ಸಾಕಷ್ಟು ಸಾಕ್ಷ್ಯಗಳು ನಮ್ಮ ಮುಂದಿದೆ. ಆದರೆ ಈ ಜನ ಸಮುದಾಯಗಳಿಗೆ ಐತಿಹಾಸಿಕವಾಗಿ ಅನ್ಯಾಯಕ್ಕೆ ಕಾರಣವಾದ ಜಾತಿ ವ್ಯವಸ್ಥೆಯೆಂಬುದು ಅಸಿಂಧುಗೊಳ್ಳುವ/ನಾಶವಾಗುವ ಸೂಚನೆಗಳು ಕಾಣಬರುತ್ತಿವೆಯೇ ಎಂಬ ಪ್ರಶ್ನೆಗೆ ಹೌದು ಎಂದು ಉತ್ತರ ಹೇಳುವುದು ಇಂದು ಕಷ್ಟವೆನಿಸುತ್ತಿದೆ. ಈ ಪ್ರಶ್ನೆಯನ್ನು ಕೇಳುವುದು ಏಕೆ ಅಗತ್ಯ ಮತ್ತು ಮುಖ್ಯವೆಂದರೆ, ಒಂದು ರೀತಿಯ ಅನ್ಯಾಯದ ಜಾತಿ ವ್ಯವಸ್ಥೆ ಇನ್ನೊಂದು ರೀತಿಯ ಅನ್ಯಾಯದ ಜಾತಿ ವ್ಯವಸ್ಥೆಯಾಗಿ ಮಾರ್ಪಾಡಾಗುತ್ತಿರುವ ಎಲ್ಲ ಅಪಾಯದ ಸೂಚನೆಗಳು ಇಂದು ಕಾಣತೊಡಗಿವೆ. ಇದು, ಜಾತಿ ವ್ಯವಸ್ಥೆ ಎಂಬುದು ಕೇವಲ ಆರ್ಥಿಕ ಮತ್ತು ಸಾಮಾಜಿಕ ಅನ್ಯಾಯ ಅಥವಾ ಉನ್ನತಿಯ ಪ್ರಶ್ನೆಗಳನ್ನು ಮೀರಿದ ಒಂದು ವಿದ್ಯಮಾನವಾಗಿದೆ ಎಂಬ ಅರಿವನ್ನು ಮೂಡಿಸತೊಡಗಿದೆ. ಇದು ಹೊಸ ಅಥವಾ ಆಧುನಿಕ ಎಂದು ಕರೆಯಲಾಗುವ ಕಾಲದ ಮನಸ್ಸು ಜಾತಿ ವಿರೋಧಿ ಹೋರಾಟಕ್ಕೆ ಆಧಾರವಾಗಿ, ಸ್ಫೂರ್ತಿಯಾಗಿ ಜಾತಿ ವ್ಯವಸ್ಥೆ ಕುರಿತು ಕಟ್ಟಿಕೊಂಡ ಸಂಕಥನದತ್ತ ಮರುನೋಟ ಹಾಯಿಸುವಂತೆ ನಮ್ಮನ್ನು ಪ್ರೇರೇಪಿಸುತ್ತಿದೆ. ಸಾಮಾಜಿಕ ನ್ಯಾಯ ಹೋರಾಟದಿಂದ ಪ್ರಯೋಜನ ಪಡೆದ ಜನವರ್ಗಗಳಿರುವಂತೆಯೇ ಇನ್ನೂ ಪ್ರಯೋಜನ ಪಡೆಯದ ಜನವರ್ಗಗಳು ಸಾಕಷ್ಟಿವೆ; ಹೀಗಿರುವಾಗ ಈ ಮಧ್ಯಂತರದಲ್ಲೇ ಜಾತಿ ವ್ಯವಸ್ಥೆ ನಾಶವಾಗುತ್ತಿಲ್ಲ ಅಥವಾ ಗಟ್ಟಿಕೊಳ್ಳುತ್ತಿದೆ ಎಂದು ವಾದಿಸುವುದು ತಪ್ಪಾಗುತ್ತದೆ ಎಂದೂ ಕೆಲವರು ಹೇಳಬಹುದು. ಆದರೆ ಈ ಹೋರಾಟದ ಈವರೆಗಿನ ರೂಪಗಳು ಮತ್ತು ಅದನ್ನು ಮುಂದುವರೆಸಲು ಮುಂದಿಡಲಾಗುತ್ತಿರುವ ತರ್ಕವನ್ನು ಗಮನಿಸಿದರೆ, ಈ ಸಾಮಾಜಿಕ ನ್ಯಾಯ ಹೋರಾಟ ಮುಂದಿನ ದಾರಿ ಮತ್ತು ಪರಿಣಾಮ ಏನೆಂಬುದು ನಿಚ್ಚಳವಾಗುತ್ತದೆ. ಹಾಗಾಗಿ ಸಾಮಾಜಿಕ ನ್ಯಾಯ ಹೋರಾಟಕ್ಕೆ ಸ್ಫೂರ್ತಿಯಾದ ಜಾತಿ ವ್ಯವಸ್ಥೆ ಮತ್ತು ಜಾತಿ ಅನ್ಯಾಯಗಳನ್ನು ಅದು ಹೇಗೆ ಪರಿಕಲ್ಪಿಸಿಕೊಂಡಿದೆ ಎಂಬುದನ್ನು ಅರಿಯುವುದು ಮುಖ್ಯವಾಗುತ್ತದೆ.

-೨-

ಭಾರತದ ಆಧುನಿಕ ಕಾಲದ ಆರಂಭವೆಂದರೆ ವಸಾಹತುಶಾಹಿಯ ಕಾಲ. ಅಲ್ಲಿಯವರೆಗೆ ಭಾರತೀಯ ಸಮಾಜವನ್ನು ಆಳುತ್ತಿದ್ದ ಮಾನಸಿಕತೆ ಬದಲಾದ ಕಾಲವದು. ಭಾರತ ಜಗತ್ತಿಗೆ ವಿಶೇಷವಾಗಿ ಪಶ್ಚಿಮದ 'ಜ್ಞಾನಯುಗ'ದ ಉದಾರವಾದಿ ಮೌಲ್ಯಗಳಿಗೆ ತೆರೆದುಕೊಂಡು ಜಾತಿ ವ್ಯವಸ್ಥೆಯನ್ನು ಪ್ರಶ್ನಿಸುವ ಛಾತಿ ಪಡೆದುಕೊಂಡ ಕಾಲವದು. ಆಗ ರೂಪುಗೊಳ್ಳುತ್ತಿದ್ದ 'ಸಾಮಾಜಿಕ ಅಧ್ಯಯನ' ಎಂಬ ಹೊಸ ಜ್ಞಾನಶಾಖೆಯಡಿಯಲ್ಲಿ ಜಾತಿ ವ್ಯವಸ್ಥೆಯನ್ನು ಅದರ ಉಗಮ, ವಿಕಾಸ ಮತ್ತು ಪರಿಣಾಮಗಳೊಂದಿಗೆ ವಿಶ್ಲೇಷಿಸುವ ಪ್ರಯತ್ನ ಆರಂಭವಾದ ಕಾಲವದು. ಇಂತಹ ಅಧ್ಯಯನಗಳು ವಸ್ತುನಿಷ್ಠವಾಗಿ

ಆರಂಭವಾದುವಾದರೂ ಇವುಗಳಲ್ಲಿ ಹಲವು ಸಹಜವಾಗಿಯೇ ವಸಾಹತುಶಾಹಿ ರಾಜಕಾರಣದ ಭಾಗವಾಗಿಯೂ ನಡೆಯಲಾರಂಭಿಸಿದ್ದೂ ನಿಜ. ಅಂತಹವು ಜಾತಿ ವ್ಯವಸ್ಥೆಗೂ ಹಿಂದೂ ಧರ್ಮಕ್ಕೂ ತಳಕು ಹಾಕಿ, ಅವನ್ನು ಕ್ರಿಶ್ಚಿಯನ್ ಮತ ಪ್ರಸಾರಕ್ಕೆ ಬಳಸಿಕೊಳ್ಳುವ ಪ್ರಯತ್ನಗಳೂ ನಡೆದವು. ಜಾತಿ ವ್ಯವಸ್ಥೆ ಒಂದು ಶ್ರೇಣೀಕೃತ ವ್ಯವಸ್ಥೆಯಷ್ಟೇ ಅಲ್ಲ, ಮೇಲಿಂದ ಕೆಳಗಿನವರೆಗೆ ಈ ಶ್ರೇಣಿ ರೂಪುಗೊಂಡಿರುವುದೇ ಮೇಲಿನ ಶ್ರೇಣಿ ಕೆಳಗಿನ ಶ್ರೇಣಿಯನ್ನು ತುಳಿಯುವ/ಶೋಷಿಸುವ ಮೂಲಕ ಎಂದು ವಿಶ್ಲೇಷಿಸಲಾಯಿತು. ಇದಕ್ಕಾಗಿ ಮನುಧರ್ಮ ಶಾಸ್ತ್ರ ಸೇರಿದಂತೆ ಹಲವು ಸಂಹಿತೆಗಳನ್ನೂ ಹಲವು ಐತಿಹ್ಯ ಮತ್ತು ಆಖ್ಯಾಯಿಕೆಗಳನ್ನು ಉಲ್ಲೇಖಿಸಲಾಯಿತು.

ಜಾತಿ ವ್ಯವಸ್ಥೆ ಕುರಿತ ಈವರೆಗಿನ ಸಂಕಥನ ರೂಪುಗೊಂಡಿರುವುದು ಆಧುನಿಕ ಪರಿಪ್ರೇಕ್ಷದಲ್ಲೇ ಅಥವಾ ಈ ಚಿಂತನಾ ಎರಕದಲ್ಲೇ. ಇದರ ಒಟ್ಟು ಕಾರ್ಯಶೀಲ ರೂಪ ಎಂದರೆ, ಜಾತಿ ವ್ಯವಸ್ಥೆ ಎಂಬುದು ಮೂಲತಃ ವಿಭಜನಶೀಲ, ಶೋಷಣಾತ್ಮಕ ವ್ಯವಸ್ಥೆಯಾಗಿದ್ದು ಇದನ್ನು ನಾಶ ಮಾಡುವುದು ಅಥವಾ ಅಮಾನ್ಯ ಮಾಡುವುದು ಪ್ರಗತಿಪರ ಕೆಲಸವಾಗಿದೆ. ಮತ್ತು ಅದಕ್ಕಾಗಿ ಜಾತಿ ಶ್ರೇಣಿಯನ್ನು ಮೇಲ್ಜಾತಿಗಳು(ಶೋಷಕರು) ಮತ್ತು ಕೆಳಜಾತಿಗಳು(ಶೋಷಿತರು) ಎಂದು ವಿಂಗಡಿಸಿ ಕೆಳಜಾತಿಗಳಿಗೆ ಸಾರ್ವತ್ರಿಕ ಜೀವನದಲ್ಲಿ ವಿಶೇಷ ಪ್ರಾಶಸ್ತ್ಯದ ಆಧಾರದ ಮೇಲೆ ಅವಕಾಶಗಳನ್ನು ಮೀಸಲಿಡುವುದು; ಅಂದರೆ, ಜಾತಿ ವ್ಯವಸ್ಥೆಯನ್ನು ಕಟ್ಟಿರುವವೆಂದು ಹೇಳಲಾಗುವ ನಿಯಮಗಳನ್ನು ಉಲ್ಲಂಘಿಸುವುದು. ಇದಕ್ಕೆ ಬೆಂಬಲವಾದ ಇತರ ಕ್ರಮಗಳೆಂದರೆ, ಅಸ್ಪೃಶ್ಯತಾ ನಿವಾರಣೆಯ ಕಾರ್ಯಕ್ರಮಗಳು, ಸಹಭೋಜನ, ಅಂತರ್ಜಾತೀಯ ವಿವಾಹ, ಭೂ ಸುಧಾರಣೆಗಳು ಇತ್ಯಾದಿ. ಇದನ್ನು ಇಂದು ಸಮಾನತೆಯ ರಾಜಕಾರಣ ಅಥವಾ ಸಾಮಾಜಿಕ ನ್ಯಾಯ ರಾಜಕಾರಣ ಎಂದು ಕರೆಯಲಾಗಿದೆ.

ಆದರೆ ಇತ್ತೀಚಿನ ವರ್ಷಗಳಲ್ಲಿ ಈ ಸಂಕಥನದ ಬಗ್ಗೆ ಸಂಶೋಧನೆ-ಅಧ್ಯಯನ ಕ್ಷೇತ್ರಗಳಿಂದಲೇ ಹಲವು ಭಿನ್ನ ಧ್ವನಿಗಳು ಕೇಳಿ ಬರಲಾರಂಭಿಸಿವೆ. ಇವುಗಳಿಗೆ ಕಾರಣ ಸಮಾನತೆಯ ರಾಜಕಾರಣ ಅಥವಾ ಸಾಮಾಜಿಕ ನ್ಯಾಯ ಹೋರಾಟದ ಕೆಲವು ಪ್ರತಿಕೂಲ ಅಥವಾ ವಕ್ರವೆನ್ನಬಹುದಾದ ಸಾಮಾಜಿಕ ಪರಿಣಾಮಗಳು ಎಂದರೆ ತಪ್ಪಾಗಲಾರದು. ಎದ್ದು ಕಾಣತೊಡಗಿರುವ ಇಂತಹ ದೊಡ್ಡ ಪರಿಣಾಮವೆಂದರೆ, ಭಾರತೀಯ ಸಮಾಜ ಹಲವು ನೆಲೆಗಳಲ್ಲಿ ಹೆಚ್ಚೆಚ್ಚು ಜಾತಿ ಬಂಧಿತವಾಗುತ್ತಿರುವ ಲಕ್ಷಣಗಳು ಗೋಚರವಾಗತೊಡಗಿರುವುದು. ಇದರ ಸಾಮಾಜಿಕ-ರಾಜಕೀಯ ಪರಿಣಾಮಗಳು ಒಟ್ಟು ಸಮಾಜದ ದೃಷ್ಟಿಯಿಂದ ವಿಘಟನಕಾರಿ ಮತ್ತು ವಿಚ್ಛಿದ್ರಕಾರಿಯಾಗುತ್ತಿರುವುದು. ಇನ್ನೂ ಅನಾಹುತಕಾರಿ ಅಂಶವೆಂದರೆ, ಭಾರತದಲ್ಲಿ ಸಾಮಾಜಿಕ ನ್ಯಾಯ ಕುರಿತಂತೆ ಒಂದು ಪರಿಣಾಮಕಾರಿ ತಾತ್ವಿಕತೆ ಕಟ್ಟಿಕೊಟ್ಟ ಡಾ. ಅಂಬೇಡ್ಕರ್, ಆ ತಾತ್ವಿಕತೆಯ ಪ್ರಾಣರೂಪಿ

ಕಾರ್ಯಕ್ರಮವಾದ 'ಜಾತಿ ವಿನಾಶ' (Annihilation of caste) ಎಂಬುದೇ ಸಾಮಾಜಿಕ ನ್ಯಾಯ ರಾಜಕಾರಣದ ನಕ್ಷೆಯಿಂದಲೇ ಹೊರದೂಡಲ್ಪಡುತ್ತಿರುವುದು.

ಹಿಂದಿನ ಜಾತಿ 'ವ್ಯವಸ್ಥೆ'ಯಲ್ಲಿ-ಈಗ ಆಧುನಿಕ ಪರಿಪ್ರೇಕ್ಷ್ಯದಲ್ಲಿ ಅದು ಎಷ್ಟೇ ಶ್ರೇಣೀಕೃತ ಮತ್ತು ಶೋಷಣಾತ್ಮಕವಾಗಿ ಕಾಣತೊಡಗಿದ್ದರೂ- ಒಂದು ಸಾಮಾಜಿಕ ಸ್ಥಿರತೆಯ ಅಂತರ್ಗತ ಆಶಯ-ಆದೇಶವಿತ್ತು. ಒಂದೊಂದು ಜಾತಿಯೂ-ಸಮಾಜದ ಒಂದೊಂದು ಸಾಮಾಜಿಕ ಜಾಗವನ್ನು ಆಕ್ರಮಿಸಿಕೊಂಡು ತನ್ನದೇ ಕೌಶಲ್ಯಗಳ 'ಹೆಮ್ಮೆ'ಯಲ್ಲಿ ತಮ್ಮವೇ ಪೌರಾಣಿಕ ನಂಬಿಕೆಗಳನ್ನು ರೂಢಿಸಿಕೊಂಡು ಒಂದರ ಜಾಗವನ್ನು ಇನ್ನೊಂದು ದುರಾಕ್ರಮಿಸಿಕೊಳ್ಳದಂತೆ 'ವ್ಯವಸ್ಥೆ'ಯ ಸಮತೋಲನ ತಪ್ಪಿಸದಂತೆ ತಮ್ಮ 'ತೃಪ್ತಿ'ಯಲ್ಲಿ ತಾವಿದ್ದವು. (ಜಾತಿ ಅಸಮಾನತೆಯ ಜಾಗೃತಿ ಉಂಟಾಗಿರುವ ಇಂದು ಕೂಡ ಅತಿಕೆಳ ಜಾತಿಗಳೂ ಸೇರಿದಂತೆ ಎಲ್ಲ ಜಾತಿಗಳ ಶೇ ೯೯ರಷ್ಟು ಜನ ಜಾತಿ ಸಂಕರವನ್ನು ಒಪ್ಪದೆ ತಮ್ಮ ಮನೆಯ ಮದುವೆಗಳನ್ನು ತಮ್ಮ ಜಾತಿ-ಉಪಜಾತಿಗಳೊಳಗೇ ಮಾಡಿಕೊಳ್ಳಬಯಸುವುದನ್ನು ಇಲ್ಲಿ ಗಮನಿಸಬೇಕು) ಹೀಗೆಂದ ಮಾತ್ರಕ್ಕೆ ಜಾತಿ ವ್ಯವಸ್ಥೆಯ ಚರಿತ್ರೆಯಲ್ಲಿ ಅಸಮಾಧಾನಗಳು, ಸ್ಪರ್ಧೆಗಳು, ಬಂಡಾಯಗಳು ಇರಲಿಲ್ಲವೆಂದರ್ಥವಲ್ಲ. ಜಾತಿಗಳು ಒಂದು ಶ್ರೇಣಿಯಿಂದ ಇನ್ನೊಂದು ಶ್ರೇಣಿಗೆ ಚಲಿಸಿವೆ. (ಉದಾ: ಶೂದ್ರ ಕ್ಷತ್ರಿಯನಾಗುವುದು, ಕ್ಷತ್ರಿಯ ಬ್ರಾಹ್ಮಣನಾಗುವುದು ಹಾಗೂ ಇವುಗಳ ತಿರುಗು ಮುರುಗು) ಆದರೆ ಕಾಲಾಂತರದಲ್ಲಿ ಈ ಒಳಚಲನೆಗಳನ್ನು ಜಾತಿ ವ್ಯವಸ್ಥೆ ಜೀರ್ಣಿಸಿಕೊಂಡು ಅದರ ಮೂಲ ಶ್ರೇಣಿ ವ್ಯವಸ್ಥೆ ಹಾಗೇ ಸಂರಕ್ಷಿತವಾಗುತ್ತಿತ್ತು.* ಆದರೀಗ ತೃಪ್ತಿ ಎಂಬುದು ಚಾರಿತ್ರಿಕ ಅನ್ಯಾಯಗಳನ್ನು ಮರೆಸಿದ ಪ್ರಜ್ಞೆಯ ಮಂಪರು ಮಾತ್ರವೆಂದು ಹೇಳುವ ಆಧುನಿಕ ಚಾರಿತ್ರಿಕವಾದಗಳು ಜನಸಮುದಾಯಗಳನ್ನು ಆ ಮಂಪರಿನಿಂದ ಎಬ್ಬಿಸಿ ಮಾನವ ಹಕ್ಕುಗಳ ಆಗ್ರಹದೊಂದಿಗೆ ಪ್ರಗತಿ ಚಕ್ರವನ್ನು ಉರುಳಿಸುತ್ತಾ ಬಂದಿವೆ. ಅತೃಪ್ತಿಯನ್ನೇ ತನ್ನ ಪ್ರೇರಕ ಶಕ್ತಿಯನ್ನಾಗಿ ಮಾಡಿಕೊಂಡಿರುವ ಆಧುನಿಕ ಕಾಲದ ಬೀಜಶಕ್ತಿಯಾಗಿರುವ ಈ ಪ್ರಗತಿಪರತೆಯ ಪರಿಣಾಮವಾಗಿ ಇಂದಿನ ಜಾತಿ 'ವ್ಯವಸ್ಥೆ'ಯು ಸಾಮಾಜಿಕ ನ್ಯಾಯದ ಅನೇಕ ಉಪಕ್ರಮಗಳ ಹೊರತಾಗಿಯೂ ತನ್ನ ಮೂಲ ರಾಚನಿಕತೆಯನ್ನು ಕಳೆದುಕೊಳ್ಳಲು ನಿರಾಕರಿಸುತ್ತಿದೆ. ಅಂದರೆ, ಅದು ತೆರೆದುಕೊಂಡ ವರ್ಗ ವ್ಯವಸ್ಥೆಯಾಗಲು (ಅಂದರೆ ಜಾತಿರಹಿತವಾಗಲು; ಅಂದರೆ ಜಾತಿ 'ವ್ಯವಸ್ಥೆ'ಯ ಅದರ ವಿಭಜನಶೀಲತೆ ಮತ್ತು ಸಂಕುಚಿತ ಒಗ್ಗಟ್ಟಿನ ರಾಜಕಾರಣದಿಂದ ಹೊರಗೆ ಬರಲು) ನಿರಾಕರಿಸುತ್ತಿದೆ. ಬದಲಿಗೆ, ಪರಸ್ಪರ ಅನುಮಾನ ಮತ್ತು ಸ್ಪರ್ಧೆಗಳ ಮೂಲಕ ಹೆಚ್ಚೆಚ್ಚು ಬಿಗುವುಗಳೊಂದಿಗೆ ಹೆಚ್ಚೆಚ್ಚು ಪ್ರತ್ಯೇಕಗೊಳ್ಳುತ್ತಿರುವ ಜನ ಸಮುದಾಯಗಳಿಂದ ಒಡಗೂಡಿ, ಸಾಮಾಜಿಕ ಅಸ್ಥಿರತೆ, ಅನ್ಯೈಕ್ಯತೆ, ಆತಂಕ ಮತ್ತು ಅಶಾಂತಿ ಹುಟ್ಟಿಸುವಂತಹ ಮುಚ್ಚಿಕೊಂಡ ಸಮಾಜವನ್ನು ನಿರ್ಮಿಸತೊಡಗಿದೆ: ಜಾತಿ ಅಪ್ರಸ್ತುತಗೊಳ್ಳುವ ಬದಲು ಹೊಸ ಆರ್ಥಿಕ-ಸಾಮಾಜಿಕ-

ರಾಜಕೀಯ ಸಬಲೀಕರಣದ ಆಯುಧಗಳೊಂದಿಗೆ ಸಜ್ಜಾಗಿ ಹೆಚ್ಚು ಪ್ರಸ್ತುತ, ಅನಿವಾರ್ಯ ಮತ್ತು 'ಪ್ರಯೋಜನಕಾರಿ' ಎನ್ನಿಸತೊಡಗಿದೆ!*

ಎಲ್ಲಕ್ಕಿಂತ ಮುಖ್ಯವಾಗಿ ಜಾತಿಯ ಈ 'ಪ್ರಯೋಜನಕಾರಿತ್ವ' ಜಾತಿವಿರೋಧಿ ಹೋರಾಟದ ಹಿಂದಿನ ರಾಜಕೀಯ ದರ್ಶನವನ್ನೇ ಅಸಂಗತ ಮಾಡಿಬಿಟ್ಟಿದೆ. ಹೊಸ ಜಾತಿ ಸಂಘಟನೆಗಳ, ಹೊಸ ಜಾತಿ ಗುರುತು ಮತ್ತು ಪೌರಾಣಿಕ ಶ್ರೇಷ್ಠತೆಗಳ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಮತ್ತು ಅಪಾಯಕಾರಿಯಾಗಿ ಜಾತಿ ಆಧಾರಿತ ಹೊಸ ರಾಜಕೀಯ ಸಂಯೋಜನೆ ಮತ್ತು ಪಕ್ಷಗಳ ಉದಯ ಸಮಾನತೆಯ ಮತ್ತು ಸಾಮಾಜಿಕ ನ್ಯಾಯ ರಾಜಕಾರಣದ ಉದ್ದೇಶಗಳನ್ನೇ

---

* ಈ ಮಾತುಗಳನ್ನು ಅಸ್ಪೃಶ್ಯ ಜಾತಿಗಳಿಗೆ ಸಾರಾ ಸಗಟಾಗಿ ಅನ್ವಯಿಸಿ ಹೇಳಬಹುದೇ ಎಂಬ ಬಗ್ಗೆ ನನಗೇ ಕೆಲವು ಅನುಮಾನಗಳಿವೆ. ಕಾರಣ, ಅಸ್ಪೃಶ್ಯತೆ ಆಚರಣೆಯ ಉಗಮ ಮತ್ತು ಬೆಳವಣಿಗೆಗಳ ಈವರೆಗೆ ಯಾವ ಸಮಾಜಶಾಸ್ತ್ರಜ್ಞರೂ ಅಥವಾ ಚಿಂತಕರೂ–ಅಂಬೇಡ್ಕರ್‌ರ ವಿಶ್ಲೇಷಣೆಗಳಿಂದ ಹಿಡಿದು ಮತ್ತು ದೇವನೂರ ಮಹಾದೇವ ಅವರ ಭಾಷಣಗಳವರೆಗೆ–ವಿಶ್ವಾಸಾರ್ಹ ವಾದ ಮಂಡಿಸಿದಂತಿಲ್ಲ. ಹಾಗೇ, ರಾಜಕೀಯ–ಧಾರ್ಮಿಕ ಪಲ್ಲಟಗಳಿಗನುಗುಣವಾಗಿ ಉಂಟಾಗುತ್ತಿದ್ದ ಸಾಮಾಜಿಕ ಪಲ್ಲಟಗಳ ಪರಿಣಾಮವಾಗಿ, ಅಸ್ಪಶ್ಯ ಜಾತಿಗಳು ಕಾಲಾನುಕಾಲಕ್ಕೆ ಹೊಸದಾಗಿ ಸೃಷ್ಟಿಯಾಗುತ್ತಿದ್ದುವೆ? ಹಾಗಾಗಿ ಅಸ್ಪೃಶ್ಯತಾ ಆಚರಣೆ (ಅದು ಸಮಾಜಕ್ಕೆ ಅಗತ್ಯವಾದ ಶೌಚ ಮತ್ತು ಚರ್ಮ ಸಂಸ್ಕರಣೆಗೆ ಸಂಬಂಧಿಸಿದಂತೆ ತೆಗೆದುಕೊಳ್ಳಬೇಕಾಗಿ ಬರುತ್ತಿದ್ದ ಆರೋಗ್ಯ ಮುನ್ನೆಚ್ಚರಿಕೆಗಳ ಪರಿಣಾಮವಾಗಿ ಜಾರಿಗೆ ಬಂತೆ? ಎಂಬ ಚರ್ಚಾಸ್ಪದ ಪ್ರಶ್ನೆಯೂ ಇದೆ.) ಜಾತಿ ವ್ಯವಸ್ಥೆಯ ಸಂಹಿತೆಗೆ ಬಾಹ್ಯವಾದದ್ದು ಆಗುತ್ತದಲ್ಲವೆ ಎಂಬ ಪ್ರಶ್ನೆಗಳೂ ಇವೆ. ಅದೇನೇ ಇರಲಿ, ಭಾರತೀಯ ಸಮಾಜ ತನ್ನ ಸಾಮಾಜಿಕ ಅಗತ್ಯಗಳು ಮತ್ತು ಸ್ಥಿರತೆಗಾಗಿ ಕಂಡುಕೊಂಡ ಜಾತಿ ವ್ಯವಸ್ಥೆಯ ಆತ್ಯಂತಿಕ ತಾರ್ಕಿಕ ರೂಪ ಅಸ್ಪಶ್ಯತೆ ಎನ್ನಬಹುದೇನೋ. ಹಾಗಾಗಿ ಇದನ್ನು ಜಾತಿ ವ್ಯವಸ್ಥೆಯ ಭಾಗವಾಗಿ ನೋಡಲೂ ಸಾಧ್ಯವಿದೆ.

ಆದರೆ ಜಾತಿವಿರೋಧಿ ಅಥವಾ ಸಾಮಾಜಿಕ ಹೋರಾಟದ ಒಂದು ದೊಡ್ಡ ಪರಿಣಾಮವೆಂದರೆ ಅಸ್ಪೃಶ್ಯ ಜಾತಿಗಳನ್ನು ಕುರಿತ ಒಟ್ಟು ಸಮಾಜದ ನಿಲುವು ಯುಗಪಲ್ಲಟದ್ದೆನಿಸುವಷ್ಟು ನಿರ್ಣಾಯಕವಾಗಿ ಬದಲಾಯಿತು. ಜಾತಿ ವ್ಯವಸ್ಥೆಯಲ್ಲಿದ್ದ 'ತೃಪ್ತಿ' ಅಸ್ಪೃಶ್ಯ ಜಾತಿಗಳ ಮೇಲೆ ವಿಧಿಸಲಾಗಿದ್ದ ಅವಮಾನ ಮತ್ತು ದೌರ್ಜನ್ಯಗಳ ಮೇಲೂ ನಿಂತಿದೆ; ಹಾಗಾಗಿ ಈ ವ್ಯವಸ್ಥೆ ಬುಡದಲ್ಲೇ ಅನ್ಯಾಯದ ಮೇಲೆ ನಿಂತಿದೆ ಎಂಬುದರ ಅರಿವಾಗಿ, ಜಾತಿ ಸಮಾಜದ ಆತ್ಮಸಾಕ್ಷಿಯ ಕಣ್ಣು ದೊಡ್ಡದಾಗಿ ತೆರೆದುಕೊಂಡಿತು. ಹೀಗೆ ತೆರೆದುಕೊಂಡ ಕಣ್ಣು ಇತ್ತೀಚಿನ ವರ್ಷಗಳಲ್ಲಿ ಮತ್ತೆ ಮುಚ್ಚಿಕೊಳ್ಳತೊಡಗಿದ್ದರೆ, ಅದಕ್ಕೆ ಸಾಮಾಜಿಕ ನ್ಯಾಯ ಹೋರಾಟ ಅಥವಾ ಕಾರ್ಯಕ್ರಮಗಳು ಭಾವನೆಯ ನೆಲೆಯಲ್ಲಿಯೂ ಪರಿಣಾಮಗಳ ನೆಲೆಯಲ್ಲೂ ದಾರಿ ತಪ್ಪುತ್ತಿರುವುದೂ ಕಾರಣವಿರಬಹುದು.

ಭಂಗಗೊಳಿಸಿದೆ. ಸಬಲೀಕರಣಗೊಂಡ ಜಾತಿ ಸಮುದಾಯಗಳು ವರ್ಗಗಳಾಗಿ ವಿಸರ್ಜನೆಗೊಳ್ಳದೆ ತಮ್ಮ ಸಾಂಸ್ಕೃತಿಕ ಅಸ್ಮಿತೆಗಳನ್ನು ಸಬಲ ಜಾತಿಗಳಾಗಿಯೇ ಇನ್ನಷ್ಟು ಹರಳುಗಟ್ಟಿಕೊಳ್ಳುವ ಪ್ರವೃತ್ತಿಗಳನ್ನು ತೋರತೊಡಗಿವೆ. ಕೂಸೇ ತಾಯಿಯನ್ನು ನುಂಗತೊಡಗಿದೆ! ಹೀಗೇಕಾಯಿತು? ನನ್ನ ಪ್ರಕಾರ ಜಾತಿರಹಿತ ಸಮಾಜವೆಂಬ ಆಧುನಿಕ ಸಮಾಜವನ್ನು ನಿರ್ಮಿಸಲು ಅತೃಪ್ತಿಯನ್ನು ಒಂದು ಅಸ್ತ್ರವನ್ನಾಗಿ ಬಳಸುತ್ತಿರುವುದೇ ಇದಕ್ಕೆ ಕಾರಣವಿರಬಹುದು. ಹಾಗಾಗಿ ಜಾತಿರಹಿತ ಸಮಾಜವನ್ನು ಆಧುನಿಕತೆಯ ಒಂದು ಭಾಗವಾಗಿ ಪರಿಕಲ್ಪಿಸಿಕೊಂಡಿದ್ದರಲ್ಲೇ ಮೂಲದೋಷವಿದ್ದಂತೆ ನನಗೆ ಕಾಣುತ್ತದೆ. ಜಾತಿ ವ್ಯವಸ್ಥೆ ಕುರಿತ ಅಂಬೇಡ್ಕರ್ ಮತ್ತು ಗಾಂಧಿಯವರ ಚಿಕಿತ್ಸಕ ನೋಟಗಳಲ್ಲಿನ ಮೂಲಭೂತ ವ್ಯತ್ಯಾಸಗಳೂ ಇಲ್ಲಿ ಕಾಣತೊಡಗುತ್ತವೆ ಎಂದು ನನಗನ್ನಿಸುತ್ತದೆ. ಮುಖ್ಯವಾಗಿ ಆಧುನಿಕತೆ ನಮ್ಮನ್ನು ತಲುಪಿದ ವಸಾಹತು ವಿರೋಧಿ ಮತ್ತು ಕೈಗಾರಿಕೀಕರಣ ಪರವಾದ ಆವೃತ್ತಿಗಳ ರೂಪಗಳಲ್ಲಿ, ಚರಿತ್ರೆಯ ಎಲ್ಲ ಅನ್ಯಾಯಗಳನ್ನೂ ಸರಿಪಡಿಸುವ ಹೊಣೆಯನ್ನು ಸಂಪೂರ್ಣವಾಗಿ ಸರ್ಕಾರದ ಮೇಲಷ್ಟೇ ಹೊರಿಸಿತು. ಆಧುನಿಕ ಆಡಳಿತ ರೂಪ 'ಪ್ರಜಾ–ಪ್ರಭುತ್ವ'ವೆನಿಸಿದ್ದೂ, ಅದರ ಪ್ರಗತಿಪರತೆ ಇಡೀ ಸಮಾಜವನ್ನು ಸಾರಾಸಗಟಾಗಿ ಶೋಷಕ ಮತ್ತು ಶೋಷಿತವೆಂದು ವಿಂಗಡಿಸಲು ಅನುವು ಮಾಡಿಕೊಟ್ಟದ್ದೂ ಮತ್ತು ಈ ಹೊಸ ರಾಜಕಾರಣದಲ್ಲಿ ಮುನ್ನೆಲೆಗೆ ಬಂದ ಹಕ್ಕುಗಳ ಮಹತ್ವ ಕರ್ತವ್ಯಗಳ ಮಹತ್ವವನ್ನು ಹಿನ್ನೆಲೆಗೆ ಸರಿಸಿದ್ದೂ ಇದಕ್ಕೆ ಪೂರಕ ಕಾರಣಗಳಾದವು.

ಅದೇನೇ ಇರಲಿ, ಜಾತಿ ವ್ಯವಸ್ಥೆಯ ನಾಶದ ಉದ್ದೇಶವು ಇಂದು ಜಾತಿ ಸಮಾನತೆಯ ಉದ್ದೇಶವಾಗಿ ಮಾರ್ಪಾಡಾಗಿ, ಇದೇ ಸಮಾನತೆಯ ಹೋರಾಟ ಎನಿಸಿಕೊಳ್ಳುತ್ತಿದೆ. ಈ ಕಾರಣದಿಂದಾಗಿ 'ಸಮಾನತೆ' ಎಂಬ ಪರಿಕಲ್ಪನೆಯ ಅರ್ಥವೇ ಸೀಮಿತಗೊಂಡು ವಿಕಿಪ್ತಗೊಂಡಿದೆ. ಸಮಾನತೆಯ ಪರಿಕಲ್ಪನೆಯೊಳಗೆ ಐಕ್ಯತೆ, ಸಹಬಾಳ್ವೆ, ಶಾಂತಿ–ಸಂತೋಷ, ಸಮತೋಲನ, ಸಾಂಸ್ಕೃತಿಕ ಮಾರ್ದವತೆಗಳ ಅಂಶಗಳೂ ಇವೆ. ಸಮಾನತೆ ಎಂಬುದು ಕೇವಲ ಸಾಮೂಹಿಕ ನೆಲೆಯ ವಿದ್ಯಮಾನವಾಗಿರದೆ; ವೈಯುಕ್ತಿಕ ನೆಲೆಯಲ್ಲೂ ಕ್ರಿಯಾಶೀಲವಾಗಿರುವ ವಿದ್ಯಮಾನವಾಗಿರುತ್ತದೆ. ಸಮಾಜವಾದಿ ಚಿಂತಕ ಡಾ. ರಾಮಮನೋಹರ ಲೋಹಿಯಾ ಹೇಳಿದಂತೆ ಸಮಾನತೆಯ ಮೂಲ ಆಶಯ ಸಾಮೂಹಿಕ ಮತ್ತು ವೈಯುಕ್ತಿಕ ಈ ಎರಡೂ ನೆಲೆಗಳಲ್ಲಿನ ಸಮತೋಲನವಾಗಿದ್ದು, ಅದು ಬಾಹ್ಯ ಬಂಧುತ್ವ ಮತ್ತು ಆಂತರಿಕ ಪ್ರಶಾಂತಿಯಲ್ಲಿ ಪರಿಣಮಿಸುವಂತಹದ್ದು. ಹಾಗಾಗಿ ಕೆಲವು ಅಥವಾ ಹಾಗೆ ನೋಡಿದರೆ ಎಲ್ಲ ಜನಸಮುದಾಯಗಳ ಆರ್ಥಿಕ ಮತ್ತು ಸಾಮಾಜಿಕ ಸಬಲೀಕರಣವಷ್ಟೇ ಸಾಮಾಜಿಕ 'ನ್ಯಾಯ'ದ, ಸಮಾನತೆಯ ಅಥವಾ ಸಮಾಜವಾದದ ರಾಜಕಾರಣ ಅನ್ನಿಸಿಕೊಳ್ಳುವುದಿಲ್ಲ. ಅಂದರೆ ಸಮಾನತೆ ಎಂಬುದು ಅಂಕಿ–ಅಂಶಗಳಿಂದ ಸಜ್ಜಾದ ವಾದಗಳಿಗೆ ಒದಗುವ ಹೊರನೋಟವಾಗಿರದೆ, ವೈಯಕ್ತಿಕ ಮತ್ತು ಸಾಮುದಾಯಿಕ ಅನುಭವವಾಗಿರುತ್ತದೆ.

ಸಾಮಾಜಿಕ ನ್ಯಾಯ ರಾಜಕಾರಣ ಹೀಗೆ ತನ್ನ ತಾತ್ವಿಕ ಮತ್ತು ತಾರ್ಕಿಕ ಅಂತ್ಯವನ್ನು ಸಮಾಜವಾದಿ ರಾಜಕಾರಣದಲ್ಲಿ ಕಂಡುಕೊಳ್ಳಲಾಗದಿರಲು ಕಾರಣ, ನಾನು ಮೊದಲಿನಿಂದಲೂ ಹೇಳುತ್ತಾ ಬರುತ್ತಿರುವ ಹಾಗೆ ಸಾಮಾಜಿಕ ನ್ಯಾಯ ಎನ್ನುವುದು ಜಾತಿ ನ್ಯಾಯ ಮಾತ್ರವಾಗಿ ಅವನತಿಗೊಂಡಿರುವುದು. (ಭಾರತೀಯ) ಸಮಾಜ ಎಂದರೆ ಕೇವಲ ಜಾತಿಗಳ ಗುಂಪು ಅಲ್ಲ. ಹಿಂದೆಯೂ ಹಾಗೇನೂ ಇರಲಿಲ್ಲ. ಜಾತಿಯನ್ನು ಒಳಗೊಂಡೂ, ಅದನ್ನು ಮೀರಿದ ಕಾಲಾನುಕಾಲದ ಸಾಮಾಜಿಕ ವಿವೇಕವೊಂದು ಅದನ್ನು ಕಟ್ಟಿದೆ. ಹಾಗಿಲ್ಲದಿದ್ದರೆ, ಅದು ಇತಿಹಾಸದ ಎಲ್ಲ ಹೊಡೆತಗಳನ್ನು ತಡೆದುಕೊಂಡು, ಅವುಗಳೊಂದಿಗೆ ಅನುಸಂಧಾನಿಸುತ್ತಾ ಹೀಗೆ ಉಳಿದು–ನಾಶವಾಗಲು ನಿರಾಕರಿಸುತ್ತಾ–ಬರುತ್ತಿರಲಿಲ್ಲ. ಈ ವಿವೇಕ ಇಂದಿನ ಬದಲಾದ ಪರಿಪ್ರೇಕ್ಷ್ಯದಲ್ಲಿ ಅಪ್ರಸ್ತುತ, ಅಸಂಗತ, ಅನ್ಯಾಯ ಮತ್ತು ಕ್ರೂರ ರೂಪಗಳಲ್ಲಿ ಮಾತ್ರ ನಮಗೆ ಕಾಣುವಂತಾಗಿರಲು, ಪಶ್ಚಿಮದ ಕೈಗಾರಿಕಾ ಕ್ರಾಂತಿಯ ಹೊಸ ರಾಜಕೀಯ ಪರಿಪ್ರೇಕ್ಷ್ಯದಲ್ಲಿ ಮೂಡಿದ ('ಕರ್ತವ್ಯ'ಗಳು ಎಂಬ ಪರಿಕಲ್ಪನೆಯ ನೆನಪೇ ಇಲ್ಲದ) 'ಹಕ್ಕುಗಳು' ಮತ್ತು 'ಶೋಷಣೆ' ಎಂಬ ಪರಿಕಲ್ಪನೆಗಳನ್ನು ಸಾರಾಸಗಟಾಗಿ ಜಾತಿ ವ್ಯವಸ್ಥೆಗೆ ಅನ್ವಯಿಸಿಕೊಂಡು ಅದರ ಆಧಾರದ ಮೇಲೆ ಇಲ್ಲಿ ಕಟ್ಟಿಕೊಂಡ ಸಮಾನತೆಯ ರಾಜಕಾರಣವನ್ನು ಜಾರಿಗೆ ತರುವಲ್ಲಿ ತೋರಿದ ಕುರುಡು ಆಧುನಿಕತೆಯ ಆವೇಶವೇ ಕಾರಣವೆಂದು ತೋರುತ್ತದೆ. ಇದೇ ಈ ಜಾತಿ ವಿರೋಧಿ ರಾಜಕಾರಣ ಮತ್ತು ಹೋರಾಟ ಇಂದು ಜಾತಿ ವ್ಯವಸ್ಥೆಯನ್ನು ಹೊಸ ರೂಪ, ತರ್ಕ ಮತ್ತು ವೀರಾವೇಶಗಳಲ್ಲಿ ಕಾಣಿಸಿಕೊಳ್ಳುತ್ತಿರುವುದಕ್ಕೂ ಕಾರಣವೆಂದು ನಾನು ಭಾವಿಸಿದ್ದೇನೆ.

–೩–

ಈ ಮೊದಲೇ ನಾನು ಪ್ರಸ್ತಾಪಿಸಿದಂತೆ, ಜಾತಿ ವ್ಯವಸ್ಥೆ ಕುರಿತಂತೆ ಇಂದು ಹೊಸ ನೆಲೆಗಳ ಸಂಶೋಧನೆಗಳು, ಅಧ್ಯಯನಗಳು ಆರಂಭವಾಗಿವೆ. ಇವುಗಳಲ್ಲಿ ಕೆಲವು ನವಪುರೋಹಿತಶಾಹಿ ರಾಜಕಾರಣದ ಭಾಗವಾಗಿ ಆಯೋಜಿತವಾಗಿರುವಂತೆ ತೋರುವವಾದರೂ, ಇವುಗಳ ಮಧ್ಯೆ ಇಂದು ಸಾಮಾಜಿಕ ನ್ಯಾಯ ರಾಜಕಾರಣ ಬಂದು ಮುಟ್ಟಿರುವ ಪರಿಸ್ಥಿತಿಯ ಹಿನ್ನೆಲೆಯಲ್ಲಿ ನೋಡಿದಾಗ ಎದ್ದು ಕಾಣುವ ಒಂದು ಸಂಗತಿ ಎಂದರೆ ಜಾತಿ ವ್ಯವಸ್ಥೆ ಕುರಿತ ನಮ್ಮ ಗ್ರಹಿಕೆ ಆಧುನಿಕತೆಯ ಅಂತರ್ಗತ ದೋಷಗಳೊಡನೆ ತಳುಕು ಹಾಕಿಕೊಂಡಿದೆ ಎಂಬುದು. ಮುಖ್ಯವಾಗಿ ಆಧುನಿಕತೆಯನ್ನು ನಾವು ಯಾವುದರ ಭಾಗವಾಗಿ ಮುಖಾಮುಖಿಯಾದೆವೋ ಆ ವಸಾಹತುಶಾಹಿ ರಾಜಕಾರಣ ಈ ಗ್ರಹಿಕೆಯ ತರ್ಕದ ಹಿಂದೆ ಇದ್ದಂತೆ ತೋರುತ್ತದೆ. ಜಾತಿ ವ್ಯವಸ್ಥೆ ಹಿಂದೂ ಧರ್ಮದ ಅಧಿಕೃತ ಸಾಮಾಜಿಕ ವ್ಯವಸ್ಥೆ ಎಂದು ಹೇಳುವುದು ಜಾತಿ ವ್ಯವಸ್ಥೆಯನ್ನು ಕುರಿತ ನಮ್ಮ ಗ್ರಹಿಕೆಯನ್ನು ಸೀಮಿತಗೊಳಿಸಿಬಿಟ್ಟಿದೆ. ಹೆಚ್ಚೆಂದರೆ ಇದು ಅರ್ಧ ಸತ್ಯ ಮಾತ್ರ, ಅಥವಾ ಹೊರ (ನೋಟದ) ಸತ್ಯ ಮಾತ್ರ. ಏಕೆಂದರೆ, ಹಿಂದೂ ಎನ್ನುವುದು ಎಂದೂ ಏಕಶಿಲಾಖಂಡ ರೂಪದ ಧರ್ಮವಾಗಿರಲಿಲ್ಲ. ಅದೊಂದು ವೈದಿಕ–ಅವೈದಿಕ ಸಂಪ್ರದಾಯಗಳ

ವೈವಿಧ್ಯಮಯ ಆವೃತ್ತಿಗಳ ಕಲಸುಮೇಲೋಗರ. ಅದು ತನ್ನ ಈ ಸ್ವರೂಪದಲ್ಲಿ ಜಾತಿ ವ್ಯವಸ್ಥೆಯನ್ನು – ಈ ಹಿಂದೆಯೇ ಸೂಚಿಸಿದಂತೆ–ಒಂದು ಸಂಹಿತೆಯಾಗಿ ಕಟ್ಟುನಿಟ್ಟಾಗಿ ಒಪ್ಪುವ, ಪರಿವರ್ತಿಸುವ, ಪ್ರಶ್ನಿಸುವ, ನಿರಾಕರಿಸುವ ಪ್ರವೃತ್ತಿಗಳನ್ನು ಕಾಲಾನುಕಾಲಕ್ಕೆ ತೋರುತ್ತಾ ಬಂದಿದೆ. ಜೊತೆಗೆ ಅದು ಭಾರತೀಯ ಸಮಾಜವೆಂಬ ಒಂದು ಅತಿ ಪ್ರಾಚೀನ, ಸ್ಥೂಲ, ವಿಶಾಲ ಮತ್ತು ಸಂಕೀರ್ಣ ಸಮಾಜದಲ್ಲಿ ಎಲ್ಲ ಕಾಲದಲ್ಲೂ ನಾವಿಂದು ಅರ್ಥೈಸಿಕೊಳ್ಳುತ್ತಿರುವ ಸಾರಾ ಸಪಾಟಾದ ರೀತಿಯ ಶ್ರೇಣಿ ಅಥವಾ ಶೋಷಣೆಯ ವ್ಯವಸ್ಥೆಯಾಗಿ, ಅಂದರೆ ಒಂದು ಸುಸ್ಥಿರವಾದ ಯೋಜಿತ ಪಿತೂರಿಯಾಗಿ ಬಾಳುತ್ತಾ ಬಂತು ಎಂದು ಹೇಳುವುದು ಕಷ್ಟ.

ಭಾರತ ಹಾದು ಬಂದ, ಮುಖಾಮುಖಿಯಾದ ಷಡ್ದರ್ಶನಗಳು ಮತ್ತು ಅನ್ಯ ಜನಾಂಗಗಳ, ಅವುಗಳ ಮತಗಳ ಆಗಮನ, ಆಕಮಣ ಮತ್ತು ಅನುಸಂಧಾನಗಳು ರೂಪಿಸಿದ ವಿವಿಧ ಜೀವನ ಕ್ರಮ ಮತ್ತು ಸಾಮಾಜಿಕ ವ್ಯವಸ್ಥೆಗಳಲ್ಲಿ ಜಾತಿ ಸದ್ಯದ ರೂಪದಲ್ಲಿಯೇ ಇದ್ದು, ಅವಿಚಲಿತವಾಗಿ ಉಳಿದು ಬಂದಿದೆ ಎಂದು ಹೇಳಲಾಗದು. ಏಕೆಂದರೆ, ಅನೇಕ ರೀತಿಯ ಅನುಸಂಧಾನಗಳ ಸುಳಿವು–ಸಾಕ್ಷ್ಯಗಳು ನಮಗಿಂದು ಸಿಗುತ್ತವೆ. ಈ ಅನುಸಂಧಾನಗಳ ಇತಿಹಾಸ, ಅನುಭವ ಮತ್ತು ವಿವೇಕವನ್ನು ಸಾಮಾಜಿಕ ನ್ಯಾಯದ ರಾಜಕಾರಣ ಗಮನಿಸುವ, ವಿಶ್ಲೇಷಿಸುವ ಮತ್ತು ನಂತರ ತನ್ನೊಳಕ್ಕೆ ಸಂಶ್ಲೇಷಿಸಿಕೊಳ್ಳುವ ಸೂಕ್ಷ್ಮತೆಯನ್ನಾಗಲೀ, ಅದಕ್ಕೆ ಬೇಕಾದ ವ್ಯವಧಾನವನ್ನಾಗಲೀ ಪ್ರದರ್ಶಿಸಲೇ ಇಲ್ಲ. ಸಂಕ್ಷಿಪ್ತವಾಗಿ ಹೇಳುವುದಾದರೆ, ಸಾಮಾಜಿಕ ನ್ಯಾಯ ರಾಜಕಾರಣವೆಂಬುದು ತನ್ನ ಆರಂಭದ ಹೊರತಾಗಿ ಹಾದಿಯಲ್ಲೆಲ್ಲೂ ಒಂದು ಬೌದ್ಧಿಕ ನೆಲಗಟ್ಟನ್ನು ಕಂಡುಕೊಳ್ಳಲೇ ಇಲ್ಲ. ಹಾಗಾಗಿ ವರ್ಣಾಶ್ರಮ ಧರ್ಮದ ಪರಿಭಾಷೆಯಲ್ಲಿ ನಮ್ಮ ಜಾತಿಗಳನ್ನು ಇಂದು ಬ್ರಾಹ್ಮಣ, ಕ್ಷತ್ರಿಯ, ಶೂದ್ರ (ಮತ್ತು ಪಂಚಮ) ಎಂದು ವಿಂಗಡಿಸುವುದು, ಅದರ ಆಧಾರದ ಮೇಲೆ ನಮ್ಮ ಜಾತಿ ಸಂಕಥನವನ್ನು ಕಟ್ಟಿಕೊಳ್ಳುವುದು ಮತ್ತು ಅದರ ಭಾಗವಾಗಿ ಸಾಮಾಜಿಕ ನ್ಯಾಯ ಹೋರಾಟವನ್ನು ರೂಪಿಸುವುದು ಐತಿಹಾಸಿಕ ದೃಷ್ಟಿಯಿಂದ ಒಂದು ವಾರೆಯಾದ, ಒಂದು ಹೊಸ ಪಟ್ಟಭದ್ರ ಹಿತಾಸಕ್ತಿ ಮೂಲವಾದ (ವಸಾಹತುಶಾಹಿ ಮೂಲವೂ ಸೇರಿದಂತೆ) 'ಯೋಜನೆ'ಯಂತೆ ಇಂದು ಯಾರಿಗಾದರೂ ಕಾಣತೊಡಗಿದ್ದರೆ ಆಶ್ಚರ್ಯವಿಲ್ಲ. (ಈ ವಿಂಗಡಣೆಯಲ್ಲಿ ಜಾತಿ ವ್ಯವಸ್ಥೆಗೆ ಹೊರತಾದವರೆಂದು ಹೇಳಲಾಗುವ 'ಪಂಚಮ'ರನ್ನೂ ಸೇರಿಸಿರುವುದು, ಅವರು ಇಂದು ಅನುಭವಿಸುತ್ತಿರುವ ಅವಮಾನ–ದೌರ್ಜನ್ಯಗಳನ್ನು ಮತ್ತು ಅದರಿಂದಾಗಿ ಅವರಿಗೆ ವಿಶೇಷ ರಕ್ಷಣೆ ಅಗತ್ಯ ಎಂಬುದನ್ನು ನಿರ್ಲಕ್ಷಿಸಿ ಅಲ್ಲ; ಬದಲಿಗೆ, ಪಂಚಮ ಕುಲಗಳೇನಕವು ಶೂದ್ರ ಜಾತಿಗಳ ಉಪ ಉತ್ಪನ್ನಗಳು ಮತ್ತು ಅವುಗಳಲ್ಲಿ ಕೆಲವಾದರೂ ಕೆಲವು ಕಾಲಘಟ್ಟಗಳಲ್ಲಿ ಕೆಲವು ಪ್ರದೇಶಗಳಲ್ಲಿ ಆಳುವ ವರ್ಗವಾಗಿದ್ದವು ಎಂಬ ಉಲ್ಲೇಖಗಳನ್ನು ಇಂದಿನ ಸಾಂಸ್ಕೃತಿಕ ಅಧ್ಯಯನಗಳಲ್ಲಿ ಕಾಣಬಹುದು ಎಂಬುದು.)

ಈ ಸಂಕಥನದ ಇನ್ನೊಂದು ಸಮಸ್ಯೆಯೆಂದರೆ, ಈ ವಿಂಗಡಣೆಯಲ್ಲಿ 'ಶೂದ್ರ' ಎನ್ನುವುದನ್ನು ಬಹು ಸ್ಥೂಲಗೊಳಿಸಿ ಅದರಲ್ಲಿ ಸಾಂಪ್ರದಾಯಿಕ ಆಸ್ತಿವಂತ ಕಸುಬುದಾರ ಜಾತಿಗಳನ್ನು ಸೇರಿಸುವ ಮೂಲಕ ಜಾತಿ ವ್ಯವಸ್ಥೆಯ 'ಅನ್ಯಾಯ'ದ ಇತಿಹಾಸವನ್ನು ವಸಾಹತುಶಾಹಿ ರಾಜಕಾರಣದ ಕಾಲಘಟ್ಟದ ಪರಿಪ್ರೇಕ್ಷ್ಯದಲ್ಲಷ್ಟೇ ಸ್ಥಿತಗೊಳಿಸಿ ನೋಡಿ (ಅಂದರೆ ಅಕ್ಷರಜ್ಞಾನ ವಂಚನೆಯೇ ಹೊಸ ವ್ಯವಸ್ಥೆಯಲ್ಲಿ ಸಮ ಪಾಲುದಾರರಾಗಲು ತಡೆದಿರುವ ಏಕೈಕ ಅಂಶ ಎಂಬಂತೆ) ಅದನ್ನು ಕೇವಲ ಮೇಲ್ಜಾತಿ ವಿರೋಧಿ ನೋಟದ ಸಂಕಥನವಾಗಿ ಕಟ್ಟಲಾಗಿದೆ ಎಂಬುದು. ಇದರಿಂದಾಗಿ ಇಡೀ ಜಾತಿ ವ್ಯವಸ್ಥೆಯಲ್ಲಿ ಅಂತರ್ಗತವಾಗಿದ್ದ ಶ್ರೇಣೀಕರಣ ಮತ್ತು ಶೋಷಣೆಯ ವಿನ್ಯಾಸ ಮತ್ತು ಇತಿಹಾಸದ ಹಲವು ಸೂಕ್ಷ್ಮಗಳು (ಸಂದುಗೊಂದುಗಳು) ಮರೆಯಾಗಿ ಹೋದದ್ದು. ಹಾಗೇ, ಪುರೋಹಿತಶಾಹಿ ಮತ್ತು ಊಳಿಗಮಾನ್ಯಶಾಹಿ ಎಂಬುವುಗಳು ಜಾತಿಗಳಿಗಿಂತ ಹೆಚ್ಚಾಗಿ; ಸಾಮಾಜಿಕ ರಾಜಕಾರಣದ ಪ್ರವೃತ್ತಿಗಳಾಗಿ ಜೊತೆ ಜೊತೆಯಾಗಿ ನಮ್ಮ ಜಾತಿ ವ್ಯವಸ್ಥೆಯ ಶೋಷಣಾತ್ಮಕತೆಯನ್ನು ರೂಪಿಸಿದವು ಎಂಬುದು ನಮ್ಮ ಗಮನಕ್ಕೆ ಬಾರದೇ ಹೋದದ್ದು. ಈ ವ್ಯವಸ್ಥೆಯಲ್ಲಿನ ಮಹಿಳೆಯರ ಅಸಮಾನತೆಯ ಇತಿಹಾಸದ ಮರ್ಮವನ್ನು ನಾವು ಇಲ್ಲಿ ಗುರುತಿಸಬಹುದು ಎಂದು ಕಾಣುತ್ತದೆ.

ಇದನ್ನೇ ನೇರವಾಗಿ, ಸ್ಪಷ್ಟವಾಗಿ ಹೇಳುವುದಾದರೆ, ಜಾತಿ ವ್ಯವಸ್ಥೆಯ ಮೂಲಕ ನಮ್ಮವರೆಗೆ ಹರಿದುಬಂದ ಅನ್ಯಾಯಗಳಿಗೆ ಇಂದು ಮೇಲ್ಜಾತಿಗಳೆಂದು ಗುರುತಿಸಲಾಗುವ ಜಾತಿಗಳು ಎಷ್ಟು ಕಾರಣವೋ ಅಷ್ಟೇ ಇಂದು ಇತರ ಹಿಂದುಳಿದ ಜಾತಿಗಳೆಂದು ಕರೆಯಲಾಗುವ ಜಾತಿಗಳಲ್ಲಿ ಬಹಳಷ್ಟು ಜಾತಿಗಳೂ ಕಾರಣವಾಗಿವೆ. ನಮ್ಮ ಜಾತಿ ವ್ಯವಸ್ಥೆಯ ಅಂತರ್ಗತ ಗುಣವೆಂದರೆ, ಒಂದು ಜಾತಿಗೆ ಒಂದಿಷ್ಟು ಭೂ ಅಥವಾ ಆಸ್ತಿ ಒಡೆತನ ಅಥವಾ ರಾಜಕೀಯ ಅಧಿಕಾರ(ಅದು ಯಾವುದೇ ಸ್ತರದ್ದಾಗಲೀ) ದೊರೆತೊಡನೆ ಅವು ಊಳಿಗಮಾನ್ಯಶಾಹಿ ಪ್ರವೃತ್ತಿ ತೋರತೊಡಗುತ್ತವೆ: ಅವು ತನ್ನ ಮೇಲಿನ ಜಾತಿಗಳನ್ನು ಆಕ್ರಮಣಶೀಲವಾಗಿಯೂ ತನ್ನ ಕೆಳಗಿನ ಜಾತಿಗಳನ್ನು ದಮನಶೀಲವಾಗಿಯೂ ನೋಡತೊಡಗುತ್ತವೆ. ಇದರರ್ಥ ಮತ್ತೇನಲ್ಲ; ಈ ಎಲ್ಲ ಜಾತಿಗಳೂ ಒಂದಲ್ಲ ಒಂದು ಕಾಲಘಟ್ಟದಲ್ಲಿ ಒಂದಲ್ಲ ಒಂದು ರೂಪದಲ್ಲಿನ ಆಳುವ ವ್ಯವಸ್ಥೆಯ ಭಾಗವಾಗಿದ್ದು, ಅದರ ವಾಸನೆಗಳು ಅವುಗಳಲ್ಲಿ ಹಾಗೇ ಉಳಿದು ಬಂದಿವೆ. ಅಂದರೆ ಯಾವ ರೂಪದ ಜಾತಿ ವ್ಯವಸ್ಥೆಯನ್ನು ನಾವು ಈ ಆಧುನಿಕ ಕಾಲದಲ್ಲಿ ಶ್ರೇಣೀಕೃತ–ಶೋಷಣಾತ್ಮಕ ವ್ಯವಸ್ಥೆ ಎಂದು ಗುರುತಿಸಿ ಅದನ್ನು ಶೋಷಕ ಮತ್ತು ಶೋಷಿತ ಶ್ರೇಣಿಗಳೆಂದು ವಿಂಗಡಿಸಿದೆವೋ ಅದರ ತಲೆಯಿಂದ ಬುಡದವರೆಗೆ ಊಳಿಗಮಾನ್ಯಶಾಹಿ ಗುಣ ಅಂತರ್ಗತವಾಗಿದ್ದು, ಪ್ರತಿ ಜಾತಿಯೂ ಅವಕಾಶ ಸಿಕ್ಕೊಡನೆ ತನ್ನ ಸುಸ್ಥಿರತೆಗಾಗಿ ತನ್ನದೇ ಪುರೋಹಿತಶಾಹಿಯ ಅನ್ವೇಷಣೆಯಲ್ಲಿ ತೊಡಗುತ್ತದೆ. ಇದಕ್ಕೆ ಉದಾಹರಣೆ ಅಥವಾ ವಿವರಣೆ ಅಗತ್ಯವಿಲ್ಲದಷ್ಟು ಪ್ರಮಾಣದಲ್ಲಿ ಈ ವಿದ್ಯಮಾನ ನಮ್ಮೆದುರಿಗೇ ನಡೆಯುತ್ತಿದೆ.

ಇಲ್ಲಿ ಎದ್ದು ಕಾಣುವ ಒಂದು ಸಂಗತಿಯೆಂದರೆ, ಸಾಮಾಜಿಕ ನ್ಯಾಯ ರಾಜಕಾರಣದ ನಾಯಕತ್ವ ಜಾತಿ ವ್ಯವಸ್ಥೆಯಲ್ಲಿ ಅಂತರ್ಗತವಾಗಿದ್ದ ಅಸಮಾನತೆಯ ರಾಜಕಾರಣವನ್ನು ಬಹಳ ಸರಳೀಕರಿಸಿ ಆ ಸರಳೀಕರಣದ ಆಧಾರದ ಮೇಲೆ ಶೋಷಿತ ಜಾತಿಗಳೆಂದು ವಿಂಗಡಿಸಲ್ಪಟ್ಟ ಜಾತಿಗಳ ತಾತ್ಪೂರ್ತಿಕ ಲೌಕಿಕ ಲಾಭಗಳಿಗಷ್ಟೇ ತನ್ನ 'ಹೋರಾಟ'ವನ್ನು ಸೀಮಿತಗೊಳಿಸಿಕೊಂಡಿತು ಎಂಬುದು. ಈ ನಾಯಕತ್ವ ಈ ಜನಸಮುದಾಯಗಳ ಮುಂದಿತ್ತೇ ಹೊರತು ಮಧ್ಯದಲ್ಲಲ್ಲ.

–೪–

ಈ ವಾಸ್ತವ ಸತ್ಯ–ಸಂಕೀರ್ಣಕ್ಕೆ ಕಣ್ಣು ಮುಚ್ಚಿಕೊಂಡಿರುವುದೇ ಇಂದಿನ ಸಾಮಾಜಿಕ ನ್ಯಾಯ ಅಥವಾ ಸಮಾನತೆಯ ರಾಜಕಾರಣದ ದುರಂತವಾಗಿದೆ. ಸಾಮಾಜಿಕ ನ್ಯಾಯ ರಾಜಕಾರಣದಡಿಯಲ್ಲಿ ಯಾವ ಸಮುದಾಯಗಳು ಇತಿಹಾಸದ ಬಂಧನಗಳಿಂದ ಬಿಡುಗಡೆಗೊಂಡವೋ (ಅಥವಾ ಬಿಡುಗಡೆಗೊಳ್ಳುತ್ತಿವೆಯೋ) ಆ ಸಮುದಾಯಗಳು ಇಂದು ಹೇಗೆ ಆ ಸಾಮಾಜಿಕ ನ್ಯಾಯ ರಾಜಕಾರಣವನ್ನು ತಂತಮ್ಮ ಜಾತಿಗಳ ಅನಿರ್ಬಂಧಿತ ಮತ್ತು ಅನೈತಿಕ ಸಬಲೀಕರಣಕ್ಕಾಗಿ ಬಳಸಿಕೊಳ್ಳಲು (ಉದಾ: ಯಾವ ಎಗ್ಗೂ ಇಲ್ಲದೆ ತಮ್ಮನ್ನು ತಾವೇ 'ತಬ್ಬಲಿ'ಗಳು ಎಂದು ಕರೆದುಕೊಳ್ಳುತ್ತಾ) ಆರಂಭಿಸುವ ಮೂಲಕ ಅದರ ಮುಂದಿನ ಘಟ್ಟವಾದ ಸಮಾನತೆಯ ಹೊಸ ಸಮಾಜವನ್ನು ರೂಪಿಸುವ ಸಮಾಜವಾದಿ ರಾಜಕಾರಣವನ್ನೇ ಇಲ್ಲವಾಗಿಸಿವೆ ಎಂಬುದನ್ನು ನಾವಿಂದು ನೋಡುತ್ತಿದ್ದೇವೆ. ನಮ್ಮ ಜಾತಿ ವ್ಯವಸ್ಥೆಯಲ್ಲೇ ಅಂತರ್ಗತವಾಗಿದ್ದ ಜಾತಿಗಳ ಊಳಿಗಮಾನ್ಯ ಗುಣಗಳು ಅವುಗಳಲ್ಲಿ ಹಾಗೇ ಉಳಿದಹೋದ ಕಾರಣದಿಂದಾಗಿ ಸಾವಾಜಿಕ ನ್ಯಾಯ ರಾಜಕಾರಣವೆಂಬುದು ಹೆಚ್ಚು ಬಲಶಾಲಿ ಮತ್ತು ಕಡಿಮೆ ಬಲಶಾಲಿ ಊಳಿಗಮಾನ್ಯ 'ಜಾತಿ'ಗಳ ನಡುವಣ ಸ್ಪರ್ಧೆಯ ರಾಜಕಾರಣವಾಗಿ ಮಾರ್ಪಟ್ಟಿದೆ. (ಜಾತಿ ವ್ಯವಸ್ಥೆಯ ಅನ್ಯಾಯಗಳಿಗೆ ಒಳಗಾದವರೆಂದು ಹೇಳಲಾಗುವ ಜಾತಿಗಳಿಂದ ಮೂಡಿದ ರಾಜಕೀಯ ನಾಯಕತ್ವ ಇಂದು ಎಂತಹ ರಾಜಕಾರಣಕ್ಕೆ ಹೆಸರಾಗಿವೆ ಗಮನಿಸಿ) ನೆಹ್ರೂ ವಂಶ ರಾಜಕಾರಣದ ವಿರುದ್ಧ ಮಾತಾಡುತ್ತ ಬೆಳೆದ ಮಧ್ಯಮಜಾತಿಗಳ ನಾಯಕರು ಮತ್ತವರು ಇಂದು ಕಟ್ಟಿಕೊಂಡಿರುವ ಜಾತಿ ರಾಜಕೀಯದ ಪರಿಣಾಮವಾಗಿ ಒಟ್ಟು ಸಮಾಜದಲ್ಲಿ ದುರಾಶೆ, ಈರ್ಷ್ಯೆ, ಕ್ರೌರ್ಯಗಳು ಹೆಚ್ಚುತ್ತಾ, ಸಹಾನುಭೂತಿ, ಅನುಕಂಪ, ಸೋದರತೆ ಮುಂತಾದ ಐಕ್ಯತೆ ಮತ್ತು ಸಹಬಾಳ್ವೆಯ ಮೌಲ್ಯಗಳು ಹಿನ್ನೆಲೆಗೆ ಸರಿಯುತ್ತಿವೆ. ಸರ್ವಾಧಿಕಾರಿ ಮತ್ತು ಕುಟುಂಬ ರಾಜಕಾರಣ ಪ್ರಶ್ನಾತೀತವಾಗತೊಡಗಿದೆ. ಈ ಮುಕ್ತ ಮಾರುಕಟ್ಟೆ ಕಾಲದಲ್ಲಂತೂ ಜಾತಿ ಜಾತಿಗಳ ನಡುವಣ ಸ್ಪರ್ಧೆಯು, ಸ್ಪರ್ಧೆಯ ಎಲ್ಲ ಶೀಲಗಳಿಂದ ಮುಕ್ತವಾಗಿ ನಡೆದಿರುವಾಗ ಸಮಾಜ ಹೆಚ್ಚು ಭ್ರಷ್ಟ ಮತ್ತು ದುಷ್ಟವಾಗುತ್ತಿದೆ. ಇದರಿಂದಾಗಿ ಸಾರ್ವಜನಿಕ ಜೀವನದಲ್ಲಿ ಇಂದು ಹಿಂಸೆ, ಅಶಾಂತಿ ಹೆಚ್ಚುತ್ತಾ ತೀವ್ರತರವಾದ ಸಾಮಾಜಿಕ ಅಸ್ಥಿರತೆಯ ಆತಂಕ ತಲೆದೋರಿದೆ.

ಅಸಮಾನತೆಯ ಬಂಧನಗಳಿಂದ ತಾವು ವಿಮೋಚನೆಗೊಳ್ಳುವ ಮೂಲಕ ಇಡೀ ಸಮಾಜವನ್ನು ವಿಮೋಚನೆಗೊಳಿಸಬೇಕಿದ್ದ ಸಮುದಾಯಗಳು ಇಂದು ಯಾವ, ಎಂತಹ ರಾಜಕಾರಣದೊಂದಿಗೆ ಗುರುತಿಸಿಕೊಂಡಿವೆ ಎಂಬುದನ್ನು ಒಮ್ಮೆ ಗಮನಿಸಿದರೆ ಚಿತ್ರ ಗಾಬರಿಯಾಗುವಂತಿದೆ. ಸಾಮಾಜಿಕ ನ್ಯಾಯದ ಆಶಯವನ್ನು ಹೋರಾಟವನ್ನಾಗಿ ಮಾಡಿಕೊಂಡು ಬೆಳೆದ ರಾಜಕೀಯ ಪಕ್ಷಗಳು (ಉದಾ: ಡಿಎಂಕೆ ಮತ್ತು ಅದರ ವಿವಿಧ ಆವೃತ್ತಿಗಳು, ಸಮಾಜವಾದಿ ಪಕ್ಷ, ಬಿಎಸ್ಪಿ, ಅಕಾಲಿದಳ, ರಾಷ್ಟ್ರೀಯ ಜನತಾ ದಳ, ತೆಲಂಗಾಣ ಕಾಂಗ್ರೆಸ್ ಮುಂತಾದವು) ಯಾವ ಶಕ್ತಿಗಳ ವಿರುದ್ಧ ತಮ್ಮ ಹೋರಾಟವನ್ನು ಆರಂಭಿಸಿದವೋ ಅವೇ ಯಥಾಸ್ಥಿತಿವಾದಿ ಮತ್ತು ಪಟ್ಟಭದ್ರ ಶಕ್ತಿಗಳನ್ನು ಪ್ರತಿನಿಧಿಸುವ ಪಕ್ಷಗಳ ಬಾಲಂಗೋಚಿಗಳಾಗಿ ಇಂದು ಅತ್ಯಂತ ನಿರ್ಲಜ್ಜ ಮತ್ತು ಸಮಯಸಾಧಕ ರಾಜಕಾರಣ ಮಾಡಿಕೊಂಡು ಬದುಕುತ್ತಿರುವುದನ್ನು ನಾವು ವಿಷಾದ ಜಿಗುಪ್ಸೆಗಳಿಂದ ಗಮನಿಸುವಂತಾಗಿದೆ. ಅಷ್ಟೇ ಅಲ್ಲ, ಅವುಗಳ ಊಳಿಗಮಾನ್ಯ ಗುಣ ಅವು ಕಟ್ಟಿಕೊಳ್ಳುತ್ತಿರುವ ಕುಟುಂಬ ರಾಜಕಾರಣದಲ್ಲಿ ನಿಚ್ಚಳವಾಗಿ ಕಾಣುತ್ತದೆ. ಏಕೆ? ಶೋಷಿತ ಜಾತಿ ಶ್ರೇಣಿಗೆ ಸೇರಿದವರೆಂದು ಹೇಳಲಾದ ನರೇಂದ್ರ ಮೋದಿ ಎತ್ತಿ ಹಿಡಿಯುತ್ತಿರುವ ರಾಜಕಾರಣದ ಮೌಲ್ಯಗಳು ಮತ್ತು ಉದ್ದೇಶ; ಹಾಗೂ ಜಾತಿ ವ್ಯವಸ್ಥೆಯ ಮೌಲ್ಯಗಳನ್ನು ತಾತ್ವಿಕವಾಗಿ ವಿರೋಧಿಸದ ಬಿಜೆಪಿಯ ಇತ್ತೀಚಿನ ಪ್ರಾಬಲ್ಯದ ಹಿಂದಿರುವ ಶಕ್ತಿಗಳ ಸಾಮಾಜಿಕ ಸ್ವರೂಪವು ಸಾಮಾಜಿಕ ನ್ಯಾಯ ಹೋರಾಟದ ಹಿಂದಿರುವವೆಂದು ಹೇಳಲಾಗುತ್ತಿರುವ ಮೌಲ್ಯಗಳನ್ನು ಧಿಕ್ಕರಿಸಿ ನಿಂತಂತಿರುವವಲ್ಲಾ ಏಕೆ?

ಏಕೆಂದರೆ ನಮ್ಮ ಜಾತಿ ವಿರೋಧಿ ಅಥವಾ ಸಾಮಾಜಿಕ ನ್ಯಾಯ ರಾಜಕಾರಣ ತನ್ನ ತಾತ್ವಿಕ ಏಕಾಗ್ರತೆಯನ್ನು ಕಳೆದುಕೊಂಡು ತಾನು ಎದುರಿಸಬೇಕಾದದ್ದು ಜಾತಿ–'ವ್ಯವಸ್ಥೆ'ಯನ್ನೇ ಹೊರತು ಜಾತಿ–'ಸಮುದಾಯ'ಗಳನ್ನಲ್ಲ ಎಂಬುದನ್ನು ಮರೆತು ಒಳತೋಟಿಯಿಲ್ಲದ ಕೇವಲ ಹೊರ ಹೋರಾಟವಾಗಿ ಬೆಳೆಯಿತು. ಅದು ಹೀಗೆ ತನ್ನ ಅಧ್ಯಾತ್ಮಿಕತೆಯನ್ನು ಕಳೆದುಕೊಂಡು ಅಲ್ಪಕಾಲಿಕ ಲಾಭ ಮತ್ತು ಆಕರ್ಷಣೆಗಳಿಗೆ ಈಡಾಯಿತು. ಇದರ ಒಟ್ಟು ಪರಿಣಾಮವೆಂದರೆ ಸಮಾಜ ಭಾವನಾತ್ಮಕವಾಗಿ ಛಿದ್ರವಾಗಿದೆ; ತನ್ನ ಸಂವೇದನಾಶೀಲತೆಯನ್ನು ಕಳೆದುಕೊಂಡು ಹಣ ಮತ್ತು ಸಂಪತ್ತಿನ ದುಷ್ಟ ಆಟವಾಗಿರುವ ಈ ರಾಜಕಾರಣವೆಂಬ ಅಶ್ಲೀಲ ಸ್ಪರ್ಧೆಯಲ್ಲಿ ಭಾಗವಹಿಸಲಾಗದ ಜನಸಮುದಾಯಗಳನ್ನು ನಿರ್ದಾಕ್ಷಿಣ್ಯವಾಗಿ ಅಂಚಿಗೆ ತಳ್ಳುತ್ತಿದೆ. ಆ ಮೂಲಕ ಜಾತಿ ವ್ಯವಸ್ಥೆಯ ವಿರುದ್ಧದ ಜಾಗೃತಿ ಮತ್ತು ಹೋರಾಟ ಯಾವುದರ ಅಮಾನವೀಯತೆಯಿಂದ ಕೆರಳಿ ಆರಂಭವಾಯಿತೋ ಆ ಅಸ್ಪೃಶ್ಯತೆಯ ಹೊಸ ಸಂಯೋಜನೆಯೊಂದಕ್ಕೆ ದಾರಿ ಮಾಡಿಕೊಡುತ್ತಿದೆ. ಅಲ್ಲಿಗೆ ಜಾತಿ ಪದ್ಧತಿಯ ಹೊಸ ವಿನ್ಯಾಸದ ಎರಕ ಸಿದ್ಧಗೊಂಡಿದೆ ಎಂದೇ ಅರ್ಥ.

ಅಸ್ಪೃಶ್ಯತೆ ಎಂಬುದು ಜಾತಿ ವ್ಯವಸ್ಥೆಯ ಹೊರಗಿನ ವ್ಯವಸ್ಥೆಯಲ್ಲವೇನೋ. ಅಸ್ಪೃಶ್ಯತೆ ಎಂಬುದು ಜಾತಿ ವ್ಯವಸ್ಥೆ ಎಂಬ ಯಂತ್ರ ನಡೆಯಲು ಬೇಕಾದ ಮೂಲ ಇಂಧನ ಇದ್ದಂತೆ. ಇಂಧನದ ಕಲ್ಪನೆ ಇಲ್ಲದೆ ಯಾವುದೇ ಯಂತ್ರ ರೂಪುಗೊಳ್ಳಲಾರದು. ಅಥವಾ ಹೀಗೂ ಹೇಳಬಹುದೇನೋ: ಜಾತಿ ಒಂದು ವ್ಯವಸ್ಥೆಯಾಗಿ ತನ್ನ ಪೂರ್ಣತೆಯನ್ನು ಕಂಡುಕೊಂಡದ್ದೇ ಬಹುಶಃ ಅದು ತನ್ನ ಅಸ್ಪೃಶ್ಯತೆಯ ಕಲ್ಪನೆಯನ್ನು ಕಂಡುಕೊಂಡಾಗಲೇ. ಆ ಕಂಡುಕೊಳ್ಳುವ ಪ್ರಕ್ರಿಯೆಯಲ್ಲಿ ಕ್ರಿಯಾಶೀಲವಾಗಿರುವ, ಅದಕ್ಕೊಂದು ವಿಧ್ಯುಕ್ತ ಮಾನ್ಯತೆಯ ರೂಪಗಳನ್ನು ನೀಡುವ ಮಿದುಳನ್ನೇ ಪುರೋಹಿತಶಾಹಿ ಎಂದು ಗುರುತಿಸುವುದು. ಊಳಿಗಮಾನ್ಯಶಾಹಿ ಅದರ ಕೈಗಳು. ಇಂದು ಈ ಮೂರೂ ಹೊಸ ತರ್ಕ, ಹೊಸ ಸಾಧನ-ಸಲಕರಣೆ ಮತ್ತು ಹೊಸ ವೇಷಗಳಲ್ಲಿ ಕಾಣಿಸಿಕೊಂಡಿರುವುದನ್ನು ನಾವು ಗಮನಿಸಬಹುದು. ಅಥವಾ ಹೀಗೂ ಹೇಳಬಹುದು: ಸಮಾಜ ಎನ್ನುವ ಕಲ್ಪನೆಯೇ ನಶಿಸುತ್ತಾ ಅದು ಇಡಿಯಾಗಿ ಎಲ್ಲ ನೆಲೆಗಳಲ್ಲೂ ಕಾರ್ಪೋರೇಟ್‌ಶಾಹಿ ರೂಪ ತಾಳುತ್ತಿರುವುದರಿಂದ ಅದರ ಪರಿಭಾಷೆಯ ಮರೆಯಲ್ಲಿ ಈ ಜಾತಿ ವ್ಯವಸ್ಥೆ ಎಂಬುದು ತನ್ನ ಹಳೆಯ ಚಾಲೂ-ಚಹರೆಗಳೊಂದಿಗೆ ಕಾಣದೇ ಹೋಗಿದೆಯಷ್ಟೆ. ಹಾಗೇ, ಜಾತಿ ವಿರೋಧಿ ಹೋರಾಟದ ಪ್ರಬಲ ಅಸ್ತ್ರವೆಂದು ಹೇಳಲಾಗುವ ಜಾತಿ ಸಂಕರದ ಪ್ರಯೋಗಗಳೂ ಇಂದು ಈ ಕಾರ್ಪೋರೇಟ್ ಜಗತ್ತಿನ ಮಾಯೆಗೆ ಸಿಕ್ಕಿ ಹೊಸ ಜಾತಿ ವ್ಯವಸ್ಥೆಯೊಳಕ್ಕೆ ಲೀನವಾಗುತ್ತಿರುವ ಪರಿಯನ್ನೂ ನಾವು ಇಲ್ಲಿ ಗಮನಿಸಬೇಕು.

-೫-

ಹೀಗೆ ಸಾಮಾಜಿಕ ನ್ಯಾಯ ರಾಜಕಾರಣ ತನ್ನ ವಿಪರ್ಯಾಸದ ಕೊನೆಯ ಹಂತವನ್ನು ಮುಟ್ಟುತ್ತಿರುವಂತಿದೆ: ಊಳಿಗಮಾನ್ಯಶಾಹಿಯ ಹೊಸ ಅವತಾರಗಳೊಂದಿಗೆ ಜಾತಿ ವ್ಯವಸ್ಥೆ ಇಂದು ಹೆಚ್ಚು 'ಬಲ'ಶಾಲಿಯೂ, ಅಶ್ಲೀಲವೂ ಆಗಿ ಸಾರ್ವಜನಿಕ ಜೀವನವನ್ನು ಹಿಂದಿಗಿಂತ ಹೆಚ್ಚು ಅಧಿಕಾರದೊಂದಿಗೆ ಆಳತೊಡಗಿದೆ. ಹಾಗಾಗಿ ಅದರ ಹಿಂಸೆ ಹೆಚ್ಚು ಆತ್ಮವಿಶ್ವಾಸದೊಡನೆ ಅಂದರೆ ಯಾವುದೇ ನೈತಿಕತೆಯ ಭಯವಿಲ್ಲದೆ ನಿಸ್ಸಂಕೋಚವಾಗಿ-ಪ್ರಕಟವಾಗತೊಡಗಿದೆ. ಕೆಲವೇ ಸೂಚನೆಗಳನ್ನು ನೀಡುವುದಾದರೆ, ಹತ್ಯೆ ಈಗ ಒಂದು ಕಡೆ (ಸಾಮೂಹಿಕ) 'ಆತ್ಮಹತ್ಯೆ'ಗಳ ರೂಪವನ್ನೂ ಇನ್ನೊಂದು ಕಡೆ 'ಮರ್ಯಾದೆ'ಯ ರೂಪವನ್ನೂ ಪಡೆಯಲಾರಂಭಿಸಿದೆ. ಮಹಿಳೆ ಮತ್ತು ಅತಿ-ಕೆಳಜಾತಿಗಳವರು ಹಿಂಸೆಗೆ ಹೆಚ್ಚು ಅಗ್ಗವಾಗತೊಡಗಿದ್ದಾರೆ. ಜಾತಿ ವಿರೋಧೀ ಆಂದೋಲನದ ಆರಂಭದಲ್ಲಿ ಬಳಲಿಹೋಗಿದ್ದ ನಮ್ಮ ಪುರೋಹಿತಶಾಹಿ ಈಗ ಹೊಸ ನಯ-ನಾಜೂಕುಗಳೊಂದಿಗೆ ಹೊಮ್ಮುತ್ತಿರುವ ಊಳಿಗಮಾನ್ಯಶಾಹಿಯ ಬೆಂಬಲದೊಂದಿಗೆ ಹೊಸ ಮತ್ತು ಶ್ರೀಮಂತ ರೂಪಗಳಲ್ಲಿನ ಮಾನ್ಯತೆ ಪಡೆದು ಹೊಸ ಹೊಸ ದೇವರು-ದಿಂಡರು-ಹಬ್ಬ-ವ್ರತ-ಸಂಕಷ್ಟಿ-ಯಾಗ-ಯಜ್ಞ-ಶ್ಲೋಕ-ಧ್ಯಾನ-ಯೋಗ-ಪ್ರಾರ್ಥನೆ-ಮಂತ್ರಗಳೊಂದಿಗೆ ಈ ಹೊಸ ಜಾತಿ ವ್ಯವಸ್ಥೆಯನ್ನು ತನ್ನ ಹತ್ತೂ ಬೆರಳುಗಳಲ್ಲಿನ ಚಿನ್ನದ ಉಂಗುರಗಳೊಂದಿಗೆ ಆಶೀರ್ವದಿಸುತ್ತಿದೆ.

ಮತ್ತೆ ಲೋಹಿಯಾರ ಮಾತುಗಳು ನೆನಪಿಗೆ ಬರುತ್ತಿವೆ: 'ಜಾತಿ ವ್ಯವಸ್ಥೆಯಿಂದಾಗಿ ಬ್ರಾಹ್ಮಣ ಶೂದ್ರರಿಬ್ಬರೂ ಅರೆ ಜೀವವವಾಗಿ ಬಿದ್ದಿದ್ದಾರೆ. ನಿಜವಾದ ಸಮಾನತೆಗಾಗಿ ಒಬ್ಬರು ಇನ್ನೊಬ್ಬರನ್ನು ಕೈಹಿಡಿದೆತ್ತಿ ಸಮಾಜವಾದಿ ರಾಜಕಾರಣದಲ್ಲಿ ಪಾಲ್ಗೊಳ್ಳಬೇಕಿದೆ.' ಜಾತಿ ವಿರೋಧಿ ಅಥವಾ ಜಾತಿ ವಿನಾಶದ ಹೋರಾಟ ಈ ಮಾತನ್ನು ಅದರ ಸಮಗ್ರತೆ ಮತ್ತು ಸೂಕ್ಷ್ಮತೆಗಳೊಂದಿಗೆ–ಬ್ರಾಹ್ಮಣ ಮತ್ತು ಶೂದ್ರರಿಬ್ಬರೂ ಎಂಬುದನ್ನು ಇಡೀ ಸಮಾಜ ಮಾನಸಿಕವಾಗಿ ಮತ್ತು ದೈಹಿಕವಾಗಿ ಎಂಬರ್ಥದಲ್ಲಿ–ಅರ್ಥ ಮಾಡಿಕೊಳ್ಳದೇ ಹೋದರೆ ಅದು ನಮ್ಮ ಜಾತಿ ವ್ಯವಸ್ಥೆಯನ್ನು ಪುನರುತ್ಪಾದಿಸುತ್ತಾ ಹೋಗುತ್ತದಷ್ಟೆ. ಇದರ ಆತ್ಯಂತಿಕ ಬಲಿಪಶುಗಳು ಅಸ್ಪೃಶ್ಯ ಜಾತಿಗಳೇ ಆಗಿರುತ್ತವೆ ಎಂಬುದನ್ನೂ ನಾವು ಇಲ್ಲಿ ಗಮನಿಸಬೇಕಾಗುತ್ತದೆ.

ಇನ್ನು ಕೊನೆಯ ಮಾತು: ಸಾಮಾಜಿಕ ನ್ಯಾಯವೆಂಬುದು ಕೇವಲ 'ಶೋಷಿತ' ಜಾತಿಗಳಿಗೆ ಸಂಬಂಧಿಸಿದ ರಾಜಕೀಯ ಪ್ರಕ್ರಿಯೆಯಲ್ಲ. ಅದು ಇಡೀ ಸಮಾಜದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಗ್ರಹೀತವಾದ ಮತ್ತು ಚಾಲ್ತಿಗೆ ಬಂದ ಪ್ರಕ್ರಿಯೆ. ಹಾಗಾಗಿ ಸಾಮಾಜಿಕ ನ್ಯಾಯದಿಂದ ಆಗಿರಬಹುದಾದ ಒಳ್ಳೆಯದನ್ನು ಅಳೆಯಬೇಕಾದದ್ದು ಕೆಲವು ಜಾತಿಗಳನ್ನು ದೃಷ್ಟಿಯಿಟ್ಟುಕೊಂಡಲ್ಲ. ಇಡೀ ಸಮಾಜವನ್ನು ದೃಷ್ಟಿಯಿಟ್ಟುಕೊಂಡು. ಹಾಗಾಗಿ ಈ ಸಂಬಂಧ ಆತ್ಯಂತಿಕವಾಗಿ ಕೇಳಬೇಕಾದ ಪ್ರಶ್ನೆಯೆಂದರೆ: ಈವರೆಗಿನ ಸಾಮಾಜಿಕ ನ್ಯಾಯ ರಾಜಕಾರಣದಿಂದ ಸಮಾಜದ ಸಾರ್ವತ್ರಿಕ ದಕ್ಷತೆ ಹೆಚ್ಚಿದೆಯೆ? ಸಾರ್ವಜನಿಕ ಸೇವೆಗಳ ಗುಣಮಟ್ಟ ಹೆಚ್ಚಿದೆಯೇ? ಹಾಗಾಗಿ ಸಾಮಾಜಿಕ ಸುಖ–ಶಾಂತಿಗಳು ಹೆಚ್ಚಿವೆಯೇ? ಮನುಷ್ಯ ಹೆಚ್ಚು ನ್ಯಾಯಶೀಲನಾಗಿದ್ದಾನೆಯೇ? ಎಂಬುವಾಗಿವೆ.

ಈ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳುವುದಿರಲಿ, ಈ ಪ್ರಶ್ನೆಗಳನ್ನು ಕೇಳಲಾದರೂ ಇಂದು ಅವಕಾಶವಿದೆಯೇ? ಸಾಮಾಜಿಕ ನ್ಯಾಯ ರಾಜಕಾರಣದ ಫಲಾನುಭವಿಗಳು ಈ ಪ್ರಶ್ನೆಯ ಉತ್ತರಕ್ಕೆ ಬಾಧ್ಯಸ್ಥರಾಗಿದ್ದಾರೆ.

('ಹೊಸತು' ವಾರ್ಷಿಕ ವಿಶೇಷಾಂಕ – ೨೦೧೩ರಲ್ಲಿ ಪ್ರಕಟವಾದ ಲೇಖನದ ವಿಸ್ತೃತ ರೂಪ)

ಸರ್ವೋದಯ ಆಂದೋಲನದ ಮರುಹುಟ್ಟಿನ ಸಾಧ್ಯತೆಗಳನ್ನು ಕುರಿತು...

ಬಡವ-ಶ್ರೀಮಂತರೆನ್ನದೆ, ಕೀಳು-ಮೇಲುಗಳೆನ್ನದೆ, ಯಾರನ್ನೂ ಹೊರತುಪಡಿಸದೆ ಎಲ್ಲರ ಲೌಕಿಕ ಮತ್ತು ಅಧ್ಯಾತ್ಮಿಕ ಉನ್ನತಿಯನ್ನು ಗುರಿಯಾಗುಳ್ಳ 'ಸರ್ವೋದಯ' ಎಂಬುದು ಗಾಂಧಿ ದರ್ಶನದಲ್ಲಿನ ಒಂದು ಪ್ರತ್ಯೇಕ ಸಿದ್ಧಾಂತವಲ್ಲ ಎಂಬುದನ್ನು ನಾವು ಮೊದಲು ತಿಳಿದಿರಬೇಕು. ಅದು ಗಾಂಧಿ ದರ್ಶನದ ವಾಸ್ತವಿಕ ನೆಲೆಯ ಅನುಷ್ಠಾನದ ಒಂದು ಸಾಮಾಜಿಕ-ರಾಜಕೀಯ ಸಾಧನವಾಗಿದೆ. ಸರ್ವೋದಯ ಕಲ್ಪನೆಗೆ ಕಾರಣವಾದ ಗಾಂಧಿ ದರ್ಶನದ ಆದಿ ಪಠ್ಯವೆನಿಸಿದ 'ಹಿಂದ್ ಸ್ವರಾಜ್'ನ ಮೂಲ ಪ್ರೇರಣೆಯೇ ಆಗಿದೆ ಎಂಬುದನ್ನು ಗಮನಿಸಿದಾಗ ಅದು ಗಾಂಧಿವಾದದ ನಿಜವಾದ ಬೆನ್ನೆಲುಬೇ ಆಗಿದೆ ಎಂಬುದು ಗೊತ್ತಾಗುತ್ತದೆ. ಹಾಗಾಗಿ ಇಂದು-ವಿಶೇಷವಾಗಿ, ಸರ್ವೋದಯ ಆಂದೋಲನದ ಇನ್ನೊಂದು ರೂಪವೇ ಆಗಿದ್ದ ಜೆಪಿಯವರ 'ಸಂಪೂರ್ಣ ಕ್ರಾಂತಿ' ಆಂದೋಲನದ ಪ್ರಯತ್ನದ ನಂತರ- ಸರ್ವೋದಯ ಆಂದೋಲನ ಎಂಬುದು ಇಂದು ರಾಷ್ಟ್ರಾದ್ಯಂತವೂ ಬತ್ತಿ ಹೋಗಿರುವಂತೆ ಕಾಣುತ್ತಿದ್ದರೆ, ಅದಕ್ಕೆ ಕಾರಣ ಇಡಿಯಾಗಿ ಗಾಂಧಿ ವಿಚಾರಗಳ ಮೌಲಿಕತೆ ಮತ್ತು ಪ್ರಸ್ತುತತೆಗಳು ಹಿನ್ನೆಲೆಗೆ ಸರಿಯುವಂತಹ ರಾಜಕೀಯ ವಾತಾವರಣ ಸೃಷ್ಟಿಯಾಗಿರುವುದೇ ಆಗಿದೆ. ಈ ರೀತಿ ಏಕಾಯಿತು ಎಂಬುದರ ಪರಿಶೀಲನೆಯೇ 'ಸರ್ವೋದಯ' ಪರಿಕಲ್ಪನೆ ಮತ್ತು ಆಂದೋಲನಗಳ ಇಂದಿನ ಅಗತ್ಯತೆಗಳ ವಿವೇಚನೆಯೂ ಆಗುತ್ತದೆ.

ಇಂದಿನ ಕಾಲಮಾನವನ್ನು ಜಾಗತೀಕರಣದ ಯುಗ ಎಂದು ಕರೆಯಲಾಗುತ್ತದೆ. ಜಾಗತೀಕರಣವೆಂದರೆ, ಪ್ರಜ್ಞೆಯ ನೆಲೆಯಲ್ಲಿ ಜಗತ್ತು ಒಂದು ಎಂಬ ಉದಾತ್ತ ಅರಿವಿನ ಅನಾವರಣವಾಗಿರದೆ, ಜಗತ್ತಿನ ವಿವಿಧ ಭಾಗಗಳಲ್ಲಿ ವಿವಿಧ ಕಾರಣ ಮತ್ತು ಉದ್ದೇಶಗಳಿಗಾಗಿ

ಉತ್ಪಾದನೆಯಾಗುತ್ತಿರುವ ಎಲ್ಲ ಸರಕುಗಳಿಗೆ ಇಡೀ ಜಗತ್ತು ಒಂದು ಸಾಮಾನ್ಯ ಮಾರು ಕಟ್ಟೆಯಾಗಲು ಇದ್ದ ಅಡೆ ತಡೆಗಳನ್ನು ಸಡಿಲಿಸಿ ಜಾಗತಿಕ ಉದ್ಯಮಿಗಳ ಲಾಭಕೋರತನಕ್ಕಾಗಿ ಒಂದು ಮುಕ್ತ ವ್ಯಾಪಾರ ವಾತಾವರಣವನ್ನು ನಿರ್ಮಿಸುವುದೇ ಆಗಿದೆ ಎಂಬುದನ್ನು ನಾವು ಮೊದಲು ಅರಿಯಬೇಕಿದೆ. ಅಂದರೆ ಇದರ ಅರ್ಥ ಇಷ್ಟೆ: ಜಗತ್ತಿನ ಜನರ ಪ್ರದೇಶ ವಿಶಿಷ್ಟವಾದ ಬದುಕಿನ ಮಾದರಿಗಳಲ್ಲಿ ಅಡಕವಾಗಿದ್ದ ಸಂತೃಪ್ತಿಯ ವಿಶಿಷ್ಟತೆಗಳನ್ನು ಕೀಳುಗರೆಯುತ್ತಾ ಮನುಷ್ಯನನ್ನು ತನ್ನ ಸಂಸ್ಕೃತಿ ವಿಶಿಷ್ಟ ಸಂತೃಪ್ತಿಯಿಂದ ಹೊರತಂದು ಅವನಲ್ಲಿ ಹೊಸ ಹೊಸ ಆಸೆಗಳನ್ನು ಹುಟ್ಟಿಸಿ ಅವನ ಮನಸ್ಸನ್ನು ಅಸ್ಥಿರಗೊಳಿಸುವುದೇ ಆಗಿದೆ. ಈ ಪ್ರಕ್ರಿಯೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಇದು ಇತಿಹಾಸದಲ್ಲಿ ಭಾರತದಂತಹ ದೇಶಗಳು ಗುಲಾಮಗಿರಿಗೆ ಈಡಾದ ಪ್ರಕ್ರಿಯೆ ಕುರಿತು ಗಾಂಧಿ ತಮ್ಮ 'ಹಿಂದ್ ಸ್ವರಾಜ್'ನಲ್ಲಿ ಮಂಡಿಸಿದ ಪರಿಶೀಲನೆಯ ಹೊಸ ರೂಪವೇ ಆಗಿದೆ ಎಂಬುದು ಗೊತ್ತಾಗುತ್ತದೆ. ಅಂದರೆ ಜಾಗತೀಕರಣವೆಂಬುದು ನವಸಾಮ್ರಾಜ್ಯಶಾಹಿಯೇ ಆಗಿದೆ.

ಆದರೆ ಇದು ನವಸಾಮ್ರಾಜ್ಯಶಾಹಿ ಎಂದು ಗುರುತಿಸಲು ನಮಗೆ ಇಂದು ಅಡ್ಡಿಯಾಗಿರುವ ಅಂಶವೆಂದರೆ, 'ಅಭಿವೃದ್ಧಿ' ಎಂಬ ಪರಿಕಲ್ಪನೆ. ಇದು ಯಾವಾಗಲೂ ಸದ್ಯದ ಮಾನವ ಸ್ಥಿತಿಯನ್ನು ಹೀನಾಯವೆಂದೇ ಪ್ರಸ್ತುತಪಡಿಸಿ, ಅದನ್ನು ಉತ್ತಮಗೊಳಿಸಿಕೊಳ್ಳುವುದು ಮಾನವನ ಆಜನ್ಮಸಿದ್ಧ ಹಕ್ಕೆಂದು ಪ್ರತಿಪಾದಿಸುತ್ತಾ ಮನುಷ್ಯನನ್ನು ಸದಾ ಅತೃಪ್ತನನ್ನಾಗಿಡುವ ಮಾನಸಿಕ ತಂತ್ರವನ್ನು ಅನುಸರಿಸುತ್ತದೆ. ಇದು ಈ ಹಿಂದೆ ಬ್ರಿಟಿಷ್ ವಸಾಹತುಶಾಹಿಯು ಒಂದು ಸುಯೋಜಿತ ಕಾರ್ಯಕ್ರಮವಾಗಿ ನಮ್ಮಲ್ಲಿ ಆರ್ಥಿಕ ಮತ್ತು ಸಾಮಾಜಿಕ ಹಿಂದುಳಿದಿರುವಿಕೆಯ ಮಾನಸಿಕತೆಯನ್ನು ಹುಟ್ಟಿಸಿ, ಮುಂದುವರೆಯುವಿಕೆ ಅಥವಾ ಪ್ರಗತಿ ಎಂಬ ಹೊಸ ಪರಿಕಲ್ಪನೆಯ ವ್ಯಾಮೋಹ ಹುಟ್ಟಿಸಿ ತನ್ನ ಸಾಮ್ರಾಜ್ಯಶಾಹಿಯನ್ನು ಸ್ಥಿರಗೊಳಿಸಿಕೊಂಡಿದ್ದರ ಇನ್ನೊಂದು–ಹೊಸ–ರೂಪವೇ ಆಗಿದೆ.

ಗಾಂಧಿ, ಮನುಷ್ಯ ಇಂತಹ ಅತೃಪ್ತಿ–ವ್ಯಾಮೋಹಗಳ ಮಾನಸಿಕತೆ ಆತ್ಯಂತಿಕವಾಗಿ ಹೇಗೆ ಮನುಷ್ಯನ ಆತ್ಮವಿನಾಶಕ್ಕೆ, ಅಂದರೆ ಮನೋದೈಹಿಕ ಗುಲಾಮಗಿರಿಗೆ ಕಾರಣವಾಗುತ್ತದೆ ಎಂಬುದನ್ನು ವಿವರಿಸುತ್ತಾ, ಆತ್ಮದ ಇಂತಹ ಅವನತಿಯ ದಾರಿ ವಿರುದ್ಧ ರಕ್ಷಣೆಯಾಗಿ ಅವರು 'ಸ್ವರಾಜ್ಯ'ದ ಪರಿಕಲ್ಪನೆಯನ್ನು ನೀಡಿದರು. ಆತ್ಯಂತಿಕವಾಗಿ ಮನುಷ್ಯನನ್ನೂ ಸರಕನ್ನಾಗಿ ಪರಿವರ್ತಿಸಬಲ್ಲ ಜಗತ್ತಿನ ವ್ಯಾಪಾರೀಕರಣದ ಇನ್ನೊಂದು ಹೆಸರೆನಿಸಿರುವ ಜಾಗತೀಕರಣವೆಂಬ ಜಾಗತಿಕ ಬಂಡವಾಳಶಾಹಿಯ ಹೊಸ ಯೋಜನೆಯ ವಿರುದ್ಧ, ಅಂದರೆ ಲಾಭಕೋರತನವೇ ಒಂದು ಸಿದ್ಧಾಂತವಾಗಿ ಇಂದು ಸೃಷ್ಟಿಸುತ್ತಿರುವ ಹಲವು ತೆರೆನಾದ ಹಿಂಸೆ–ಅಶಾಂತಿ–ರೋಗ–ಆತ್ಮಹತ್ಯೆ ಇತ್ಯಾದಿ ದುರ್ಲಕ್ಷಣಗಳ ಬಾಧೆ ಇಲ್ಲದೆ ಮನುಷ್ಯ ತನ್ನ ಪ್ರದೇಶದ ಮತ್ತು ಸಮಾಜದ ಮಿತಿಗಳನ್ನು ಅರಿತು ನೆಮ್ಮದಿಯಿಂದ ಬದುಕುವ ಸಹಜ ಮಾರ್ಗವಿದು.

ಈ ಸಹಜ ಮಾರ್ಗದ ಹೊಳಹು ಗಾಂಧೀಜಿಗೆ ದೊರಕಿದ್ದು ೧೯೦೪ರಲ್ಲಿ ದ. ಆಫ್ರಿಕಾದಲ್ಲಿ ಅವರ ಗೆಳೆಯ ಹೆನ್ರಿ ಪೊಲಾಕ್ ನೀಡಿದ ಅಮೆರಿಕನ್ ಲೇಖಕ ಜಾನ್ ರಸ್ಕಿನ್ರ ಪುಸ್ತಕ 'ಅನ್‌ಟು ದ ಲಾಸ್ಟ್' (Unto the Last)ನಲ್ಲಿ. ಈ ಪುಸ್ತಕ ತಮ್ಮ ಲೋಕ ಗ್ರಹಿಕೆಯ ವಿಧಾನವನ್ನೇ, ಆ ಮೂಲಕ ಮನುಷ್ಯ ಬದುಕಿನ ತಮ್ಮ ಕಲ್ಪನೆಯನ್ನೇ ಅಮೂಲಾಗ್ರವಾಗಿ ಬದಲಿಸಿತೆಂದು ಹೇಳುವ ಗಾಂಧಿ ಇದನ್ನು ೧೯೦೮ರ ಹೊತ್ತಿಗೆ 'ಸರ್ವೋದಯ' ಎಂಬ ಶೀರ್ಷಿಕೆಯಲ್ಲಿ ತಮ್ಮ ಮಾತೃಭಾಷೆ ಗುಜರಾತಿಗೆ ಅನುವಾದಿಸಿ ಆ ಪರಿಕಲ್ಪನೆಗೆ ಭಾರತೀಯ ಸಂದರ್ಭದ ಒಂದು ಹೊಸ ಅರ್ಥವನ್ನೇ ಪ್ರದಾನ ಮಾಡಿದರು. ಅದು ಸಾಧ್ಯವಾಗಿರುವುದು ಆ ಪುಸ್ತಕದಲ್ಲಿ ಪ್ರತಿಪಾದಿತವಾಗಿರುವ ೧) ವ್ಯಕ್ತಿಯ ಹಿತ ಸಮಾಜದ ಹಿತದಲ್ಲಿ ಅಡಗಿದೆ ೨) ವಕೀಲ ಮತ್ತ ಚಮ್ಮಾರ ಇಬ್ಬರೂ ತಮ್ಮ ಜೀವನೋಪಾಯಕ್ಕಾಗಿ ದುಡಿಯುತ್ತಿದ್ದು ಅವರ ಆ ಹಕ್ಕುಗಳು ಸಮಾನವಾದುದರಿಂದ ಅವರಿಬ್ಬರ ಕೆಲಸದ ಮೌಲಿಕತೆಗಳೂ ಸಮಾನವಾದವು ಮತ್ತು ೩) ರೈತ ಮತ್ತು ಕುಶಲಕರ್ಮಿಗಳಂತಹವರ ದೈಹಿಕ ದುಡಿಮೆಯ ಬದುಕೇ ಬದುಕಲು ನಿಜವಾಗಿ ಅರ್ಹವಾದ ಬದುಕಾಗಿದೆ ಎಂಬ ಮೂರು ಮುಖ್ಯ ತತ್ವಗಳನ್ನು ಕುರಿತ ಆಳವಾದ ಒಳನೋಟಗಳಲ್ಲಿ. ಇದು ಕೈಗಾರಿಕೀಕರಣ, ಯಾಂತ್ರೀಕರಣಗಳನ್ನು ಮನುಷ್ಯನ ನಿಜವಾದ ಪ್ರಗತಿಯ ಸಂಕೇತಗಳೆಂದು ನಂಬಿಸಿ ಅದರ ಆಕರ್ಷಣೆಯಲ್ಲಿ ಸಾಮ್ರಾಜ್ಯಶಾಹಿಯನ್ನು ಸಹಜವೆಂಬಂತೆ ಸೃಷ್ಟಿಸಿದ ಪಶ್ಚಿಮದ ಆಧುನಿಕ ನಾಗರೀಕತೆಯ ದುಷ್ಟ ಲಕ್ಷಣಗಳ ಆಳವಾದ ಪರಿಶೀಲನೆಗೆ ಗಾಂಧೀಜಿಯನ್ನು ಪ್ರೇರೇಪಿಸಿತು. ಇದಕ್ಕೆ ಗಾಂಧೀಜಿಗೆ ತಾತ್ವಿಕ ಸ್ಫೂರ್ತಿ ಒದಗಿದ್ದು ಓರ್ವ ಪಶ್ಚಿಮದ ದಾರ್ಶನಿಕನಿಂದಲೇ ಎಂಬುದು ಇಲ್ಲಿ ಗಮನಾರ್ಹ ಮತ್ತು ತಾರ್ಕಿಕವಾಗಿ ಸರಿಯಾಗಿಯೇ ಇದೆ.

ಅದೇನೇ ಇರಲಿ, ಇಂದಿನ ಜಾಗತೀಕರಣ ಮತ್ತೇನೂ ಆಗಿರದೆ, ಗಾಂಧಿ ಇಂತಹ ತಮ್ಮ ಆಳದ ಪರಿಶೀಲನೆಯ ಹಿನ್ನೆಲೆಯಲ್ಲಿ ಯಾವುದನ್ನು 'ಇದು ನಾಗರೀಕತೆಯಲ್ಲ; ರೋಗ' ಎಂದು ಕರೆದರೋ ಆ ಆಧುನಿಕ ನಾಗರೀಕತೆಯ ಆತ್ಯಂತಿಕ ರೂಪವೇ ಆಗಿದೆ. ಹಾಗಾಗಿ ಇಂದು 'ಸರ್ವೋದಯ'ದ ಅಗತ್ಯವಿರುವುದು ಅದು ಜಾಗತೀಕರಣದ ದುಷ್ಫಲಗಳ ವಿರುದ್ಧ ಹೋರಾಡಲು ನಮಗೆ ಲಭ್ಯವಿರುವ ಸಹಜ ಬದುಕಿನ ಮಾದರಿಯ ಸ್ಫೂರ್ತಿ ಸೆಲೆಯಾಗಿ. ಆದರೆ ಅದಕ್ಕೆ ಮೊದಲು ಸರ್ವೋದಯ ಮಾಡಬೇಕಾದ ಒಂದು ಪೂರಕ ಕೆಲಸವೆಂದರೆ, ಪಶ್ಚಿಮದ ಆಧುನಿಕ ನಾಗರೀಕತೆಯ ಇತ್ತೀಚಿನ ರೂಪವಾದ ಈ ಜಾಗತೀಕರಣವನ್ನು ಒಂದು ರೋಗವೆಂದು ಜನರಿಗೆ ಮನವರಿಕೆ ಮಾಡುವುದು. ಇದಕ್ಕಾಗಿ 'ಸರ್ವೋದಯ'ವು ಜಾಗತೀಕರಣದ ವಿರುದ್ಧ ಈಗ ನಡೆದಿರುವ ಅನೇಕ ರೀತಿಯ ಆಂದೋಲನಗಳ ಜೊತೆ ಕೈಜೋಡಿಸಬೇಕಿದೆ. ತನ್ನ ವಿಶಿಷ್ಟ ವಿಚಾರಧಾರೆಯ ಗುರುತನ್ನು ಕಳೆದುಕೊಳ್ಳದೆ ಇತರ ಹೋರಾಟಗಳನ್ನು ತನ್ನ ಸತ್ವದ ಶಕ್ತಿಯಿಂದ ಪ್ರಭಾವಿಸುವ ಕೆಲಸ ಮಾಡ ಬೇಕಿದೆ. ಏಕೆಂದರೆ ಈ ಬಹಳಷ್ಟು ಇತರ ಹೋರಾಟಗಳು ಆಧುನಿಕ ನಾಗರೀಕತೆಯ ರಾಜ

ಕೀಯ ಉತ್ಪನ್ನಗಳೇ ಆಗಿವೆ. ಉದಾಹರಣೆಗೆ, ಅವು ಮನುಷ್ಯನನ್ನು ಹೆಚ್ಚೆಚ್ಚು ಸುಖ ಜೀವಿಯನ್ನಾಗಿಸುವ ಆದರ್ಶ ಹೊಂದಿವೆ. ಅದಕ್ಕಾಗಿ ಅವು ಆಧುನಿಕ ತಂತ್ರಜ್ಞಾನದ ಅವಿಮರ್ಶಕ ಬೆಂಬಲಿಗರಾಗಿವೆ ಮತ್ತು ಇವಕ್ಕೆಲ್ಲ ಸಂಸದೀಯ ಪ್ರಜಾಪ್ರಭುತ್ವ ಮಾರ್ಗವೇ ಶ್ರೇಷ್ಠವೆಂದು ನಂಬಿವೆ. ಆದರೆ ಸರ್ವೋದಯ ಹಾಗೆ ಭಾವಿಸದ: ಮೂಲತಃ ಒಂದು ಆಧ್ಯಾತ್ಮಿಕ ಮೌಲ್ಯ ಪ್ರೇರಿತ ಆಂದೋಲನವಾಗಿದೆ ಎಂಬ ಸತ್ಯ ಅದಕ್ಕೆ ಸದಾ ನೆನಪಿನಲ್ಲಿರಬೇಕಿದೆ.

ಏಕೆಂದರೆ ಸರ್ವೋದಯವೂ ಸೇರಿದಂತೆ, ಗಾಂಧಿಯ ಇಡೀ ಜೀವನ ದರ್ಶನ, ಮನುಷ್ಯನ ಬದುಕಿನ ಮೂಲ ಉದ್ದೇಶ ಭಗವಂತನ ಸಾಕ್ಷಾತ್ಕಾರ ಮಾಡಿಕೊಳ್ಳುವುದೇ ಆಗಿದೆಂಬ ನಂಬಿಕೆಯನ್ನು ಆಧರಿಸಿದ್ದಾಗಿದೆ. ಹಾಗೇ ಆ ಭಗವಂತನ ಸಾಕ್ಷಾತ್ಕಾರಕ್ಕಾಗಿ ಅದು ಧ್ಯಾನ-ತಪಸ್ಸುಗಳನ್ನು ನಂಬಿರದೆ, ಭಗವಂತ ನಮ್ಮ ಕಣ್ಣಿಗೆ ಕಾಣುವಂತಿರುವುದು ಅವನ ಸೃಷ್ಟಿಯ ರೂಪದಲ್ಲಿ ಮತ್ತು ಆ ಸೃಷ್ಟಿಯ ಸಂರಕ್ಷಣೆಯ ಕೆಲಸವೇ ನಿಜವಾದ ಭಗವಂತನ ಸಾಕ್ಷಾತ್ಕಾರದ ಕೆಲಸವಾಗಿರುತ್ತದೆ ಎಂದು ನಂಬಿದೆ. ಸೃಷ್ಟಿಯ ಸಂರಕ್ಷಣೆ ಎಂದರೆ, ಮಾನವ ಘನತೆಗೇ ಅವಮಾನದಂತೆ ಕಾಣುವ ದೀನ ದಲಿತರ ಸೇವೆಯ ಮೂಲಕ ಅವರ ಉನ್ನತೀಕರಣ. ಜೊತೆಗೆ ಅಷ್ಟೇ ಮುಖ್ಯವಾಗಿ ಆಧುನಿಕ ನಾಗರೀಕತೆಯ 'ಅಭಿವೃದ್ಧಿ'ಯ ಹಪಾಹಪಿಯಿಂದಾಗಿ ನಾಶವಾಗುತ್ತಿರುವ ನಿಸರ್ಗದ ಸಂರಕ್ಷಣೆ. ಗಾಂಧಿ, ಧರ್ಮ ಎಂದರೆ ಕರ್ತವ್ಯ; ಕರ್ತವ್ಯ ಎಂದರೆ ನೆರೆಹೊರೆಯ ಜವಾಬ್ದಾರಿ ಎಂದು ವ್ಯಾಖ್ಯಾನಿಸಿದ್ದನ್ನೂ ನಾವಿಲ್ಲಿ ನೆನಪಿಸಿಕೊಳ್ಳಬೇಕಿದೆ. ಇಲ್ಲಿ ಅವರು 'ಸರ್ವೋದಯ ಆರಂಭವಾಗಬೇಕಿರುವುದು ಅಂತ್ಯೋದಯದಿಂದ' ಎಂದೂ ಹೇಳುತ್ತಿದ್ದರು ಎಂಬುದನ್ನೂ ಇಲ್ಲಿ ನೆನಪಿಸಿಕೊಂಡರೆ, ಅವರ ನೆರೆಹೊರೆಯ ಕಲ್ಪನೆಯೂ ಸ್ಪಷ್ಟವಾಗುತ್ತದೆ.

ಇದರ ಜೊತೆಗೇ, ಪರಿಸರ ವಿಜ್ಞಾನ, ಪರಿಸರ ಪ್ರಜ್ಞೆ, ಪರಿಸರವಾದ, ಪರಿಸರ ಆಂದೋಲನ ಇತ್ಯಾದಿಗಳ ಸುಳಿವು ಕೂಡ ಇಲ್ಲದ ಕಾಲದಲ್ಲಿಯೇ ಮನಗಂಡಿದ್ದ ಮತ್ತು ಇಂದು ಪ್ರವಾದಿತ್ವ ಸಮಾನವಾದ ಸತ್ಯವೆಂಬಂತೆ ಕಾಣುತ್ತಿರುವ 'ಈ ಭೂಮಿ ಎಲ್ಲರ ಅಗತ್ಯಗಳನ್ನು ಪೂರೈಸಬಲ್ಲುದೇ ಹೊರತು ಎಲ್ಲರ ಆಸೆಗಳನ್ನಲ್ಲ' ಎಂಬ ಅವರ ಮಾತು, 'ಸರ್ವೋದಯ'ವು ಆಗಬೇಕಾದದ್ದು ಎಂತಹ ಮಿತಿಗಳ ಚೌಕಟ್ಟಿನಲ್ಲಿ ಎಂಬುದನ್ನೂ ಸೂಚಿಸುತ್ತದೆ. ಇಂತಹ ಮಿತಿಗಳ ಸ್ಪಷ್ಟ ಕಲ್ಪನೆ ನಿಜವಾಗಿ ಅರಿವಾಗುವುದು ಮತ್ತು ಅದನ್ನು ಪಾಲಿಸಲು ಸಾಧ್ಯವಾಗುವುದು ನಮ್ಮ ಹತ್ತಿರದ್ದೇ ಎನಿಸುವ 'ಸರ್ಕಾರವಲ್ಲದ ಸರ್ಕಾರ'ದಂತಿರಬಲ್ಲ ಸ್ವಾಯತ್ತ ಸ್ಥಳೀಯ ಆಡಳಿತ ವ್ಯವಸ್ಥೆಯಲ್ಲಿ. ಇದನ್ನು ಗಾಂಧಿ 'ಗ್ರಾಮ ಸ್ವರಾಜ್ಯ' ಎಂದು ಕರೆದಿದ್ದರಾದರೂ, ಇಂದು ಗ್ರಾಮಗಳು ಗ್ರಾಮಗಳಾಗಿ ಉಳಿಯದಿರುವುದರಿಂದ ಈಗ 'ಪರಿಸರ ಸರ್ಕಾರ'ಗಳ ಕಲ್ಪನೆಯನ್ನು ಪರಿಚಯಿಸುವ ಪ್ರಯತ್ನ ಮಾಡಿ, 'ಸರ್ವೋದಯ'ವು ಅಂತಹ 'ಪರಿಸರ ಸ್ವರಾಜ್ಯ'ದ ಪರಿಕಲ್ಪನೆಯನ್ನು ಪ್ರತಿಪಾದಿಸಬೇಕಿದೆ. ಇಂತಹ 'ಪರಿಸರ ಸ್ವರಾಜ್ಯ'ದ ಶಿಕ್ಷಣ, ಅಭಿವೃದ್ಧಿ ಮತ್ತು ಆಡಳಿತ ನೀತಿಗಳು ಎಂತಹವಾಗಿರುತ್ತವೆಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ.

ಹಲವರಿಗೆ ತೀರಾ ಆದರ್ಶಮಯ ಮತ್ತು ಅವಾಸ್ತವಿಕವೆನಿಸುವ ಇಂತಹ ಕೆಲಸಗಳಿಗೆ ಕೈಹಾಕುವುದರಿಂದ ಸರ್ವೋದಯವು ಕಳೆದುಕೊಳ್ಳಲು ಇಂದು ಅದರ ಬಳಿ ಏನೂ ಉಳಿದಿಲ್ಲ, ಗಾಂಧಿ ಪ್ರಣೀತ ತನ್ನ ತತ್ವದ ಹೊರತಾಗಿ. ಈ ತತ್ವದ ಬಗ್ಗೆ ಅದಕ್ಕೆ ನಿಜವಾದ ನಂಬಿಕೆ ಇದ್ದರೆ ಅದನ್ನು ಉಳಿಸಿಕೊಳ್ಳಲಾದರೂ ಅದೀಗ ಸನ್ನದ್ಧವಾಗಬೇಕಿದೆ. ಹಲವರಿಗೆ ತೀರಾ ಆದರ್ಶಮಯ ಮತ್ತು ಅವಾಸ್ತವಿಕವೆನ್ನಿಸುವ ಗುರಿಗಳ ಬೆನ್ನು ಹತ್ತಿದವರಿಂದಲೇ ಜಗತ್ತಿನ ಇತಿಹಾಸದಲ್ಲಿ ನಿಜವಾದ ಬದಲಾವಣೆಗಳು ಸಂಭವಿಸಿರುವುದು ಎಂಬುದೂ ಈ ಹೊತ್ತಿನಲ್ಲಿ ನೆನಪಿರಬೇಕಿದೆ. ಹಾಗೇ ಇಂದು ಸರ್ವೋದಯ ಆಂದೋಲನದ ಬಳಿ ಇಡೀ ರಾಷ್ಟ್ರದಲ್ಲಿ ಹೆಸರು ಹೇಳಲು ಒಂದೆರೆಡು ಆಶ್ರಮಗಳು ಮತ್ತು ನಾಲ್ಕಾರು ಹಿರಿಯ ನಾಯಕರ ಹೊರತಾಗಿ ಏನೂ ಉಳಿಯದಂತಾಗಿರಲು ಏನು ಕಾರಣವೆಂದು ಅದು ತನ್ನ ಬಿಂಕ ಬಿಟ್ಟು ಯೋಚಿಸಬೇಕಿದೆ.

ವಿನೋಬಾರಂತಹ ಗಾಂಧಿ ಆಶೀರ್ವಾದ ಪಡೆದ ನಾಯಕ ರಾಷ್ಟ್ರಾದ್ಯಂತ ತಿರುಗಿ ಸಾವಿರಾರು ಎಕರೆ ಭೂಮಿಯನ್ನು ದಾನ ಪಡೆದ ಐತಿಹಾಸಿಕ ಕಾರ್ಯಕ್ರಮದ ಮತ್ತು ಇದರ ಭಾಗವಾಗಿ ಜಯಪ್ರಕಾಶ್ ನಾರಾಯಣರಂತಹ ನಿಸ್ಪೃಹ ಜನನಾಯಕನನ್ನು ತನ್ನೆಡೆಗೆ ಆಕರ್ಷಿಸಿದ್ದರ ಹೊರತಾಗಿಯೂ 'ಸರ್ವೋದಯ'ವೆಂಬುದು ಏಕೆ ಈಗ ಜನರ ಮಧ್ಯೆ ಚಲಾವಣೆ ಕಳೆದುಕೊಂಡಿರುವ ನಾಣ್ಯವಾಗಿದೆ ಎಂಬುದರ ಬಗ್ಗೆ ಈಗ ಉಳಿದಿರುವ ನಾಯಕರ ಮಧ್ಯೆಯಾದರೂ ಬಿಚ್ಚು ಮನಸ್ಸಿನ ಪರ್ಯಾಲೋಚನೆ ನಡೆಯಬೇಕಿದೆ. ಅದಕ್ಕಾಗಿ ಅವರು ಸಮಾನಮನಸ್ಕ ಆಂದೋಲನಗಳ ನಾಯಕರ ಜೊತೆ ಬೆರೆತು ಚರ್ಚಿಸುವ ಕಾಲ ಸನ್ನಿಹಿತವಾಗಿದೆ. ಅದಕ್ಕಾಗಿ ಅದು ತನ್ನ ಪಾರಂಪರಿಕ ಮಡಿ–ಮೈಲಿಗೆಗಳನ್ನು ತೊರೆದು ಜಾಗತೀಕರಣಗೊಂಡ ಸಮಾಜದ ಹೊಸ ಸೂಕ್ಷ್ಮಗಳನ್ನು ಅರಿತು, ಅದಕ್ಕೆ ತಕ್ಕಂತೆ ತನ್ನ ಗುರಿ–ಆದರ್ಶಗಳನ್ನು ಮರುರೂಪಿಸಿಕೊಳ್ಳುವ ಧೈರ್ಯ ತೋರಬೇಕಿದೆ. ಅದಕ್ಕೆ, ತನ್ನ ಹೆಗಲ ಮೇಲಿನ ಕೆಲವು ಹಳೆಯ ಹೊರೆಗಳನ್ನು ಇಳಿಸಿಕೊಳ್ಳಲು ಬೇಕಾದ 'ತ್ಯಾಗ'ದ ಅಗತ್ಯವೂ ಇದೆ. ವಿನೋಬಾಜಿ ಬಹುವಾಗಿ ಹೇಳುತ್ತಿದ್ದ 'ತ್ಯಾಗ'ಗಳಲ್ಲಿ ಇದೂ ಒಂದು ಎಂದು 'ಸರ್ವೋದಯ' ಭಾವಿಸಿ, ಅದು ಎಪ್ಪತ್ತರ ದಶಕದಲ್ಲಿ ಜೆಪಿಯವರ ನೇತೃತ್ವದಲ್ಲಿ ನಡೆದಂತಹ ರಾಜನೀತಿ–ಲೋಕನೀತಿಗಳ ಸಕಾರಾತ್ಮಕ ಮಿಲನದ ಪ್ರಯತ್ನಕ್ಕೆ ತನ್ನ ಅಮೂಲ್ಯ ಕೊಡುಗೆ ಸಲ್ಲಿಸುವುದಾದರೆ, ಅದು ಮತ್ತೆ ಸೃಜನಶೀಲವಾಗಲು ತಯಾರಾದಂತೆಯೇ ಸರಿ.

ಈಗ ಮೇಲುಕೋಟೆಯಲ್ಲಿ ಆಯೋಜಿಸಲಾಗುತ್ತಿರುವ 'ರಾಜ್ಯ ಮಟ್ಟದ ಸರ್ವೋದಯ ಸಮ್ಮೇಳನ' ಇಂತಹ ಒಂದು ಪ್ರಯತ್ನಕ್ಕೆ ನಾಂದಿ ಹಾಡಲಿ ಎಂದು ಆಶಿಸುತ್ತೇನೆ.

('ಜನಪದ ವಿಚಾರ' : ಡಿಸೆಂಬರ್, ೨೦೧೬)

ಕನ್ನಡ ಮನಸ್ಸು : ಸ್ವಪ್ನ ಮತ್ತು ದುಃಸ್ವಪ್ನಗಳು

ಆಳ್ವಾಸ್ ನುಡಿಸಿರಿ ತುಳುನಾಡಿನ ಸಾಂಸ್ಕೃತಿಕ ಕೇಂದ್ರವೆನಿಸಿದ ಮೂಡುಬಿದ್ರೆಯಲ್ಲಿ ಒಂದು ಸಾಂಸ್ಕೃತಿಕ ಹಬ್ಬವಾಗಿ ಕಳೆದ ಕೆಲವು ವರ್ಷಗಳಿಂದ ಕನ್ನಡ ಮನಸ್ಸಿನ ಹಲವು ಮಗ್ಗುಲುಗಳನ್ನು ಶೋಧಿಸುವ ಗಂಭೀರ ಪ್ರಯತ್ನ ಮಾಡುತ್ತಿದೆ. ಅದು ಈ ವರ್ಷ (೨೦೧೧) ಆರಿಸಿಕೊಂಡಿರುವ ಇಂತಹ ಮಗ್ಗುಲು: 'ಕನ್ನಡ ಮನಸ್ಸು: ಸಂಘರ್ಷ ಮತ್ತು ಸಾಮರಸ್ಯ'. ಈ ಶೋಧನೆಯನ್ನು ಭಾಷೆ ನೆಲೆಯಿಂದ ಮಾಡುವ ಜವಾಬ್ದಾರಿಯನ್ನು ನನಗೆ ನೀಡಲಾಗಿದೆ.

ಭಾಷೆ ತಂತಾನೆ ಶಿವನ ರೀತಿ ಜಡ. ಶಿವೆಯೊಂದಿಗೆ ಇದ್ದರೆ ಮಾತ್ರ ಅದು ಕ್ರಿಯಾಶೀಲ. ಭಾಷೆ ತನ್ನ ಸಂಸ್ಕೃತಿ, ಚರಿತ್ರೆ, ನಾಗರಿಕತೆಯ ಕಟ್ಟೋಣಗಳ ರೂಪದಲ್ಲಿ ಅಂದರೆ ಅದರ ಕ್ರಿಯಾಶೀಲ ರೂಪಗಳಲ್ಲಿ ವ್ಯಕ್ತವಾದಾಗ ಮಾತ್ರ ನಾವು ಅದರ ಬಗ್ಗೆ ಏನಾದರೂ ಪರಾಮರ್ಶೆ ಮಾಡಬಹುದು. ಹಾಗಾಗಿ, ನಾನು ಭಾಷೆ ಕುರಿತ ಇವತ್ತಿನ ಕ್ರಿಯಾಶೀಲ ಪ್ರಶ್ನೆಗಳನ್ನು ಎತ್ತಿಕೊಂಡು ಚರಿತ್ರೆಯತ್ತ ಸಾಗಿ ಮತ್ತೆ ಇವತ್ತಿನ ಪ್ರಶ್ನೆಗಳಿಗೆ ಬರುವ ಪ್ರಯತ್ನ ಮಾಡುತ್ತೇನೆ.

ಈ ವಿಚಾರ ಸಂಕಿರಣದ ವಿಷಯವನ್ನು ಪ್ರವೇಶಿಸುವ ಬಗ್ಗೆ ನನಗಿದ್ದ ಕೆಲವು ಗೊಂದಲಗಳೊಂದಿಗೇ ನನ್ನ ಮಾತುಗಳನ್ನು ಆರಂಭಿಸುತ್ತೇನೆ. ಉದಾ: ಭಾಷೆಯನ್ನು ಕುರಿತಂತೆ ಸಾಮರಸ್ಯ ಮತ್ತು ಸಂಘರ್ಷದ ವಿಚಾರಗಳನ್ನು ಯಾವ ನೆಲೆಗಟ್ಟನ್ನು ಇಟ್ಟುಕೊಂಡು ಮಾತನಾಡಬೇಕು? ಕನ್ನಡ ಮನಸ್ಸು ಎಂದರೆ ಏನು? ಈ ಬಗ್ಗೆ ನಾನು ನನ್ನ ಇವೊತ್ತಿನ ಸಹ ಚಿಂತಕ ರಾಘವೇಂದ್ರ ರಾವ್ ಜೊತೆಯಲ್ಲಿ ದೂರವಾಣಿಯಲ್ಲಿ ಚರ್ಚಿಸಿದಾಗ ಅವರು ನಾನು ವಿಷಯ ಪ್ರವೇಶ ಮಾಡಲು ಸಾಧ್ಯವಾಗಿಸುವ ಒಂದು ಪ್ರಶ್ನೆಯನ್ನು ನನ್ನ ಮುಂದೆ ಇಟ್ಟರು. ಅದು ಕನ್ನಡ ಮನಸ್ಸೋ? ಕರ್ನಾಟಕದ ಮನಸ್ಸೋ? ಎಂಬ ಪ್ರಶ್ನೆ. ಅಂದರೆ, ಕರ್ನಾಟಕದ ಮನಸ್ಸು ಮತ್ತು ಕನ್ನಡ ಮನಸ್ಸು ಒಂದೇನಾ?

ಎಂಬುದು. ಇದು ಬಹಳ ವರ್ಷಗಳಿಂದ ಪದೇ ಪದೇ ಕೇಳಲ್ಪಡುವ ಪ್ರಶ್ನೆಯಾದರೂ, ಇತ್ತೀಚೆಗೆ ಬಹು ಭಾಷಾ ಸಂದರ್ಭ ಎನ್ನುವ ನೆಲೆಗಟ್ಟಿನಲ್ಲಿ ಕೆಲವರು (ಅಂದರೆ, ನನ್ನ ಪ್ರಕಾರ ಅತಿ ಪ್ರಜಾತಾಂತ್ರಿಕವಾದಿಗಳು) ಈ ಪ್ರಶ್ನೆಯನ್ನು ಬಹಳ ಮುನ್ನೆಲೆಗೆ ತಂದು ಹಲವು ಸಂಘರ್ಷಮಯ ಗೊಂದಲಗಳನ್ನು ಸೃಷ್ಟಿಸಿದ್ದಾರೆ. ಆದರೆ ಅವರು ಆಧಾರವಿಲ್ಲದೆ ಈ ಪ್ರಶ್ನೆ ಎತ್ತುತ್ತಿಲ್ಲ ಎಂಬುದೂ ನಿಜ. ಅವರ ಪ್ರಕಾರ ಕರ್ನಾಟಕದ ಶೇಕಡಾ ೬೫ ಜನ ಮಾತ್ರ ಕನ್ನಡಿಗರಿದ್ದಾರೆ. ಇನ್ನು ಶೇಕಡಾ ೩೫ ಜನ ಅನ್ಯಭಾಷಿಕರು. ಹಾಗಾಗಿ, ನಾವು ಕನ್ನಡದ ಮನಸ್ಸು ಅಂತ ಹೇಳಿಕೊಂಡು, ಕನ್ನಡ ರಾಜ್ಯ ಭಾಷೆ ಅಂತ ಹೇಳಿಕೊಂಡು ಕನ್ನಡ ಭಾಷೆಯನ್ನು ಅವರ ಮೇಲೆ ಹೇರುವುದು ಪ್ರಜಾತಂತ್ರಕ್ಕೆ ವಿರುದ್ಧವಾದ ಪ್ರಯತ್ನವಲ್ಲವೇ? ಈ ಪ್ರಶ್ನೆಯನ್ನು ಅವರು ಎತ್ತುತ್ತಿದ್ದಾರೆ.

ಆದರೆ ಅವರ ಈ ಆಧಾರ, ಅಂಕಿ ಅಂಶಗಳ ನೆಲೆಯಲ್ಲಿ ಮಾತ್ರ ನಿಲ್ಲುವಂತಹದ್ದು ಎಂದೇ ಹೇಳಬೇಕಾಗಿದೆ. ಏಕೆಂದರೆ, ೯ನೇ ಶತಮಾನದಲ್ಲಿ ಕವಿರಾಜಮಾರ್ಗಕಾರ ಕಾವೇರಿಯಿಂದ ಗೋದಾವರಿಯವರೆಗೆ ಇರುವ ಕನ್ನಡ ನುಡಿ, ಕನ್ನಡ ನಾಡಿನ ಬಗ್ಗೆ ಮಾತಾಡುತ್ತಾ, 'ಕನ್ನಡದೊಳ್ ಭಾವಿಸಿದ ಜನಪದಂ' ಎಂದಾಗ ಕೂಡ ಪರಿಸ್ಥಿತಿ ಹೆಚ್ಚೂ ಕಡಿಮೆ ಹೀಗೇ ಇತ್ತು. ಷ. ಶೆಟ್ಟರ್‌ರವರು ತಮ್ಮ ಇತ್ತೀಚಿನ ಒಂದು ಸಂಶೋಧನಾ ಗ್ರಂಥ 'ಶಂಗಂ ತಮಿಳಗಂ ಮತ್ತು ಕನ್ನಡ ನಾಡು ನುಡಿ' ಕೃತಿಯಲ್ಲಿ ಕನ್ನಡ ನಾಡು ನುಡಿಯ ಬಗ್ಗೆ ಬಹಳ ಅಪರೂಪದ ಮತ್ತು ಇದುವರೆಗೆ ಕಾಣಿಸದಿದ್ದ ಒಂದು ಸತ್ಯವನ್ನು, ಒಂದು ಸುಳಿವನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಅದೇನೆಂದರೆ ಇಂದು ತುಳುವರ ಮೇಲೆ, ಕೊಂಕಣಿಗರ ಮೇಲೆ, ಕೊಡವರ ಮೇಲೆ, ಬ್ಯಾರಿಗಳ ಮೇಲೆ ಕನ್ನಡವನ್ನು ಹೇರುವುದು ಸರಿಯೇ? ಎಂದು ಕೇಳುವವರಿಗೆ ಒಂದು ರೀತಿಯ ಪರೋಕ್ಷ ಉತ್ತರ ಕೊಟ್ಟಿದ್ದಾರೆ. ಅದೆಂದರೆ, ತೆಲುಗರು, ತಮಿಳರು, ಮಲೆಯಾಳಿಗಳು ಬೇರೆ. ಆದರೆ, ತುಳುವರು, ಕೊಡವರು ಮತ್ತು ಆದಿ ಕೊಂಕಣಿಗರು ಇವರೆಲ್ಲರೂ ಒಂದು ಭಾಷಾ ಕುಟುಂಬದಲ್ಲಿ ಇದ್ದವರು. ಇವರು ಕನ್ನಡದ ಸಾಹಚರ್ಯದಲ್ಲೇ ಬೆಳೆದವರು, ತಮ್ಮ ಸಂಸ್ಕೃತಿಯನ್ನು ಕಟ್ಟಿಕೊಂಡವರು. ಇವರನ್ನು ಒಳಗೊಂಡ ಒಂದು ಭಾಷಾ ಒಕ್ಕೂಟವನ್ನು ವಡಗರು ಎಂದು ಮೂಲ ತಮಿಳರು ಕರೆಯುತ್ತಿದ್ದರು. ಇಂದು ಶೇ ೬೫ರಷ್ಟು ಜನ ಮಾತ್ರ ಕನ್ನಡಿಗರಿದ್ದಾರೆ ಎಂದರೆ, ಇದಕ್ಕೆ ತುಳುವರು, ಕೊಡವರು ಮತ್ತು ಕೊಂಕಣಿಗರನ್ನು ಸೇರಿಸಿಕೊಂಡರೆ ಅದು ಶೇ. ೭೫–೮೦ ಆಗುತ್ತದೆ.

ಮತ್ತೆ, ಶತ–ಶತಮಾನಗಳ ಕಾಲದಿಂದ ಯುದ್ಧ, ಕ್ಷಾಮಗಳಿಂದಾಗಿ ಉದ್ಯೋಗ ಅರಸಿ ದೇಶಾಂತರ ಬಂದವರು, ತಲೆತಲೆಮಾರುಗಳ ಕಾಲ ಕರ್ನಾಟಕದಲ್ಲೇ ಇದ್ದುಕೊಂಡು ಕನ್ನಡಿಗರೇ ಆಗಿದ್ದಾರೆ. ಅವರ ಮನೆ ಭಾಷೆ ಯಾವುದೇ ಇದ್ದರೂ, ಬೀದಿಯ ಭಾಷೆ, ಪರಿಸರದ ಭಾಷೆ, ಅವರ ಅಭಿವ್ಯಕ್ತಿಯ ಭಾಷೆ ಕನ್ನಡವೇ ಆಗಿದೆ. ಹೀಗಿರುವಾಗ ರಾಜ್ಯದಲ್ಲಿ ಶೇ ೯೦–೯೫ ಕನ್ನಡಿಗರೆನಿಸಿಕೊಳ್ಳುತ್ತಾರೆ. ಭಾರತ ಒಂದು ಏಕಾತ್ಮಕ ರಾಷ್ಟ್ರವಾಗಿ, ವಲಸೆ

ಎನ್ನುವುದು ಒಂದು ಆಧುನಿಕ ವಿದ್ಯಮಾನವಾಗಿ ಯಾವ ಭಾಷೆಯವರು ಎಲ್ಲಿ ಬೇಕಾದರೂ ನೆಲೆಸಿ, ತಮ್ಮ ಭಾಷೆಯನ್ನು ನೆಲೆಯೂರಿಸಬಹುದು ಎಂಬ ಅವಕಾಶವಿರುವ ರಾಜಕೀಯ ಸ್ವಾತಂತ್ರ್ಯ ಲಭಿಸುವರೆಗೆ (ಇದರ ಒಳಿತು ಕೆಡುಕುಗಳ ಚರ್ಚೆ ಬೇರೆಯೇ ವಿಷಯ) ಕರ್ನಾಟಕದಲ್ಲಿ ಇದ್ದವರೆಲ್ಲರೂ ಒಂದು ಅರ್ಥದಲ್ಲಿ ಕನ್ನಡಿಗರೇ ಆಗಿದ್ದರು. ಆದ್ದರಿಂದ ಕನ್ನಡ ಮನಸ್ಸು ಮತ್ತು ಕರ್ನಾಟಕದ ಮನಸ್ಸು ಎನ್ನುವ ದ್ವಂದ್ವ ಭದ್ರವಾದ ಆಧಾರ ಉಳ್ಳದ್ದಲ್ಲ ಎಂದು ನನ್ನ ಅಭಿಪ್ರಾಯ.

ಇನ್ನು ಕನ್ನಡ ಮನಸ್ಸು ಅಂದರೆ ಏನು? ಕನ್ನಡ ಮನಸ್ಸು ಅನ್ನುವುದು ಒಂದು ಇದೆಯೆ? ಇದು ತೆಲುಗು ಮನಸ್ಸು ಅಥವಾ ಬಂಗಾಳಿ ಮನಸ್ಸು, ಅಥವಾ ಲ್ಯಾಟಿನ್ ಮನಸ್ಸು, ಅಥವಾ ಗ್ರೀಕ್ ಮನಸ್ಸು ಇವುಗಳಿಗಿಂತ ಹೇಗೆ ಭಿನ್ನ ಅನ್ನುವುದು. ಆದರೆ ಇದನ್ನು ಅಷ್ಟು ಜಟಿಲ ಮಾಡಿಕೊಳ್ಳುವ ಅವಶ್ಯಕತೆ ಇಲ್ಲ ಎಂದು ನನಗೆ ಅನ್ನಿಸುತ್ತದೆ. ಕನ್ನಡದ ಮೂಲಕ ತನ್ನ ಸ್ವಾಭಿವ್ಯಕ್ತಿಯನ್ನು ಕಂಡುಕೊಂಡ ಹಾಗೂ ಜಗತ್ತನ್ನು ಅರಿಯಲು ಮತ್ತು ಎದುರಿಸಲು ಕನ್ನಡದ ಕುಶಲತೆಯನ್ನು ಬೆಳೆಸಿಕೊಂಡ ಮನಸ್ಸೇ ಕನ್ನಡ ಮನಸ್ಸು ಎಂದು ನಾವು ಸರಳವಾಗಿ ಅರಿತುಕೊಂಡರೆ ಸಾಕೆಂದು ಕಾಣುತ್ತದೆ. ಆದರೂ ಈ ಮೊದಲು ಕನ್ನಡದ ಮನಸ್ಸಿನ ಸಾಮರಸ್ಯ ಮತ್ತು ಸಂಘರ್ಷದ ಬಗ್ಗೆ ಸಂಸ್ಕೃತಿಯ ನೆಲೆಯಲ್ಲಿ ಮಾತನಾಡುತ್ತಿರುವಾಗ, ರಾಘವೇಂದ್ರ ರಾವ್ ಅವರು ಪ್ರಸ್ತಾಪಿಸಿದ ಕರಿನೆರಳು ಅಂದರೆ ಬೇರೊಂದು ಸಾಂಸ್ಕೃತಿಕ ಕರಿನೆರಳು ನಮ್ಮನ್ನು ಆವರಿಸುತ್ತಾ ಇದೆ ಎಂದು ಪರೋಕ್ಷವಾಗಿ ಏನು ಸೂಚಿಸಿದರೋ ಅದನ್ನು ಭಾಷೆಯ ನೆಲೆಯಲ್ಲಿ ಬೆಳೆಸಿ, ವಿವರಿಸಿ ಇಲ್ಲಿ ಅದನ್ನು ಚರ್ಚಿಸಬಯಸುತ್ತೇನೆ.

ಈ ಕರಿನೆರಳು ನಮ್ಮ ಮೂರ್ತದೊಳಗೆ ನಮ್ಮ ಎದುರಿಗಿರುವುದು ಕನ್ನಡ ಶಾಲೆಗಳ ನಿರ್ನಾಮದ ರೂಪದಲ್ಲಿ ಎಂಬುದನ್ನು ನಾವು ಮೊದಲು ಅರಿಯಬೇಕಿದೆ. ಯಾವುದನ್ನು ನಾವು ಐದು-ಹತ್ತು ವರ್ಷಗಳ ಹಿಂದೆ ಆತಂಕದ ರೂಪದಲ್ಲಿ ಕಂಡಿದ್ದೆವೋ ಅದು ಇವತ್ತು ಮೂರ್ತ ರೂಪದಲ್ಲಿ ನಮ್ಮ ಎದುರಿಗೆ ನಿಂತಿದೆ. ಇಂದು ಮೂರು ಸಾವಿರ ಕನ್ನಡ ಶಾಲೆಗಳು ಮುಚ್ಚಬೇಕಾದ ಪ್ರಸಂಗ ಬಂದಾಗ ದೊಡ್ಡ ಹುಯಿಲೆದ್ದಿದೆ. ಆದರೆ ಕಳೆದ ಹತ್ತು ವರ್ಷಗಳಿಂದ ಕನ್ನಡ ಶಾಲೆಗಳು ನೂರಾರು ಸಂಖ್ಯೆಯಲ್ಲಿ ಮುಚ್ಚುತ್ತಿವೆ. ಆದರೆ ಯಾರೂ ಸೊಲ್ಲೆತ್ತಲಿಲ್ಲ. ಯಾಕೆ ಹೀಗೆ? ಈ ಪ್ರಶ್ನೆಯ ಸಂದರ್ಭದಲ್ಲಿ ನಾವು ಈ ಕನ್ನಡ ಮನಸ್ಸಿನ ಸಂಘರ್ಷ ಮತ್ತು ಸಾಮರಸ್ಯದ ಶೋಧನೆಗೆ ತೊಡಗಿದಾಗ ನಮಗೆ ಚರಿತ್ರೆಯ ಅನೇಕ ಒಳನೋಟಗಳು ಸಿಗುತ್ತವೆ. ಕನ್ನಡಿಗರು ಕನ್ನಡದ ಬಗ್ಗೆ ಯಾಕೆ ಈ ರೀತಿಯ ನಿರ್ಲಕ್ಷ್ಯ ತೋರಲು ಆರಂಭಿಸಿದ್ದಾರೆ? ಜಾಗತೀಕರಣದ ಒತ್ತಡಗಳೇ ಇದಕ್ಕೆ ಕಾರಣವೇ? ಲೌಕಿಕ ಯಶಸ್ಸಿನ ಬಗೆಗಿನ ಆತುರ-ಹಪಾಹಪಿಗಳೇ? ಅವರಿಗೆ ಕನ್ನಡ ಸಾಲದಾಯಿತೇ? ಈ ಎಲ್ಲಾ ಪ್ರಶ್ನೆಗಳಿಗೆ ಕನ್ನಡ ಚಳುವಳಿಕಾರರ ರೀತಿಯಲ್ಲಿ ಸರಳ ಉತ್ತರಗಳನ್ನು ಕೊಡಲಾಗುವುದಿಲ್ಲ.

ಈ ದೃಷ್ಟಿಯಿಂದ ಕನ್ನಡ ಮನಸ್ಸನ್ನು ಅರ್ಥ ಮಾಡಿಕೊಳ್ಳಬೇಕಾದರೆ, ನಾವು ಚರಿತ್ರೆಗೆ ಹೋಗಬೇಕಾಗುತ್ತದೆ. ಈ ಮೊದಲು ನಾನು ಕನ್ನಡ ಮನಸ್ಸೆಂದು ವ್ಯಾಖ್ಯಾನಿಸುತ್ತಾ ನೀಡಿದ್ದು ಒಂದು ರೀತಿಯ ಚೌಕಟ್ಟು ಮಾತ್ರ. ಆದರೆ ಕನ್ನಡ ಮನಸ್ಸಿನ ಮೂಲಸತ್ವ ಎಂಬುದಾದರೂ ಯಾವುದು? ನಾವು ನಮ್ಮ ಆದಿ ಸಾಂಸ್ಕೃತಿಕ ನಾಯಕ ಎಂದು ಕರೆಯಬಹುದಾದಂತಹ ಅಥವಾ ಕನ್ನಡದಲ್ಲಿ ಲಭ್ಯವಾದ ಮೊದಲ ಗ್ರಂಥ ಕವಿರಾಜಮಾರ್ಗದ ಲೇಖಕ ಕವಿರಾಜಮಾರ್ಗಕಾರ ಕನ್ನಡಿಗರನ್ನು ಮತ್ತು ಕನ್ನಡಿಗರ ಗುಣ ಲಕ್ಷಣಗಳನ್ನು ಏನು ನಿರೂಪಿಸಿದ್ದಾನೆ, ಆ ಕಡೆ ಗಮನ ಹರಿಸಿದಾಗ ನಮಗೆ ಇದರ ಬಗ್ಗೆ ಕೆಲವು ಸೂಚನೆಗಳು ಸಿಗುತ್ತವೆ. ೯ನೇ ಶತಮಾನದಲ್ಲಿ ಬಂದ ಈ ಕೃತಿ ಬಹಳ ವಿಶಿಷ್ಟತೆಗಳನ್ನು ಒಳಗೊಂಡ ಕೃತಿ. ಕೆ.ವಿ. ಸುಬ್ಬಣ್ಣನವರು ಈ ಕೃತಿಯ ಬಗ್ಗೆ ವಿಶೇಷ ಅಧ್ಯಯನ ಮಾಡಿ ಅನೇಕ ಅದ್ಭುತವಾದ ಒಳನೋಟಗಳನ್ನು ಹೊಸ ನೋಟಗಳನ್ನು ನೀಡಿದ್ದಾರೆ. ಈ ಕೃತಿ ಜಗತ್ತಿನ ಸಾಹಿತ್ಯ ಇತಿಹಾಸದಲ್ಲೇ ಮೊದಲ ಬಾರಿಗೆ ಒಂದು ನಾಡನ್ನು, ಒಂದು ರಾಜ್ಯತತ್ವವನ್ನು ಭಾಷೆಯ ಪರಿಭಾಷೆಯಲ್ಲಿ ನಿರೂಪಿಸಿದೆ. ಕಾವೇರಿಯಿಂದ ಗೋದಾವರಿಯವರೆಗಿದ್ದ ನಾಡದು, ಕನ್ನಡ ನಾಡು, ಅದು 'ಕನ್ನಡದೊಳ್ ಭಾವಿಸಿದ ಜನಪದಂ'. ಇದು ಹೀಗೆ ಜಗತ್ತಿನ ಯಾವ ಲಾಕ್ಷಣಿಕ ಗ್ರಂಥದಲ್ಲಾಗಲೀ, ಸಾಂಸ್ಕೃತಿಕ ಗ್ರಂಥದಲ್ಲಾಗಲೀ, ಒಂದು ರಾಜ್ಯವನ್ನು ಒಂದು ಭಾಷೆಯ ಮೂಲಕ ಗುರುತಿಸಿದ್ದು ಎಲ್ಲೂ ಇಲ್ಲ. ಜೊತೆಗೆ ಈ ಕೃತಿ ಕನ್ನಡಿಗರ ಗುಣ ಲಕ್ಷಣಗಳ ವರ್ಣನೆ ಕೂಡ ಮಾಡುತ್ತದೆ. ಇವತ್ತಿಗೆ ಉತ್ಪ್ರೇಕ್ಷೆಯಂತೆ ಕಾಣುವ ನುಡಿಗಟ್ಟಿನಲ್ಲಿ ಕನ್ನಡಿಗರನ್ನು ಹೀಗೆ ವರ್ಣಿಸುತ್ತದೆ– "ಅಭಿಜನರ್ಕಳ್ ಸುಭಟರ್, ಕವಿಗಳ್, ಕುರಿತೋದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್..." ಈ ಜನಪ್ರಿಯ ಸಾಲುಗಳು ಒಂದು ಹೊರನೋಟ ಕನ್ನಡ ಮನಸ್ಸಿನ ತತ್ತ್ವವಾದರೆ, ಒಳನೋಟ ಎನ್ನಬಹುದಾದ ಇನ್ನೊಂದು ಸಂಗತಿ ಇದೇ ಕೃತಿಯಲ್ಲಿನ ಬೆಳಗ್ಗೆ ಕಲುಬುರ್ಗಿಯವರೂ ಪ್ರಸ್ತಾಪ ಮಾಡಿದ "ಕಸವರಮೆಂಬುದು ನೆರೆಸೈರಿಸಲಾರ್ಪೊಡೆ..." ಎಂಬ ಒಂದು ಪದ್ಯದಲ್ಲಿದೆ. ಈ ಪದ್ಯದ ಅರ್ಥ: 'ಅನ್ಯ ಧರ್ಮವನ್ನು ಅನ್ಯ ವಿಚಾರಗಳನ್ನು ಸಹಿಸದವನ ಬಳಿ ಮತ್ತು ತನ್ನ ಮನಸ್ಸನ್ನು ಹಿಡಿತದಲ್ಲಿ ಇಟ್ಟುಕೊಳ್ಳದವನ ಬಳಿ ಬಂಗಾರವಿದ್ದರೂ ಕಸಕ್ಕೆ ಸಮಾನ'. ಇದು ಕನ್ನಡ ಸಂಸ್ಕೃತಿಯ, ಕನ್ನಡಿಗರ ವ್ಯಕ್ತಿತ್ವದ, ಕನ್ನಡ ಮನಸ್ಸಿನ ಒಂದು ಮೂಲ ಲಕ್ಷಣವಾಗಿ ದಾಖಲಾಗಿದೆ ಎಂಬುದನ್ನು ನಾವು ಗಮನಿಸಬೇಕಾಗುತ್ತದೆ.

ಹೀಗೆ ಕನ್ನಡ ಸಂಸ್ಕೃತಿ, ಕನ್ನಡ ಮನಸ್ಸು ಎಂಬುದು ಅನ್ಯಧರ್ಮ ಮತ್ತು ಅನ್ಯ ವಿಚಾರಗಳನ್ನು ಸದಾ ಸೈರಿಸುತ್ತಾ ಬಂದಂತಹ ಒಂದು ಸಂಸ್ಕೃತಿ, ಒಂದು ಭಾಷೆ ಅಥವಾ ಒಂದು ಭಾಷಾ ಚರಿತ್ರೆ ಅಥವಾ ಒಂದು ಜನಾಂಗ, ಒಂದು ಜನಪದ ಎಂದು ಹೇಳಬಹುದು. ಆದರೆ, ಇದು ನಿಜವಾಗಿಯೂ ಹಾಗೇ ಇದೆಯೇ? ಇತ್ತಾ? ಎಂದು ಆಲೋಚನೆ ಮಾಡಿದರೆ ಮತ್ತು ಇಂದಿನ ಕನ್ನಡ ಚಳುವಳಿಯ ಸ್ವರೂಪವನ್ನು ನೋಡಿದರೆ, ಬೆಳಗಾವಿಯ

ಮೇಯರ್ ಮುಖಕ್ಕೆ ಮಸಿ ಬಳಿಯುವ, ಕಾರವಾರದ ಕೊಂಕಣಿ ಚಳುವಳಿಗಾರರಿಗೆ ಮೊಟ್ಟೆ ಎಸೆಯುವ, ಹೊಗೇನಕಲ್ ಅಥವಾ ಕಾವೇರಿ ಜಲವಿವಾದದ ಸಂದರ್ಭದಲ್ಲಿ ತಮಿಳರ ಮೇಲೆ ಹಲ್ಲೆ ಮಾಡುವ ಕನ್ನಡ ಚಳುವಳಿಗಾರರನ್ನು ನೋಡಿದರೆ, ಈ ವರ್ಣನೆ ಕನ್ನಡಿಗರಿಗೆ ಸಮರ್ಪಕವೆನ್ನಿಸುತ್ತದೆಯೇ? ಎನ್ನುವ, ಗಂಭೀರ ಪ್ರಶ್ನೆ ಹುಟ್ಟುತ್ತದೆ. ಇದಕ್ಕೆ ನಾವು ಸರಳ ಖಂಡನೆಯ ಮಾತುಗಳನ್ನಾಡಿ ಅವರ ವರ್ತನೆಗಳನ್ನು ನಿರ್ಲಕ್ಷಿಸಲು ಸಾಧ್ಯ ಇಲ್ಲ. ಏಕೆಂದರೆ, ಚರಿತ್ರೆ ಯಾವತ್ತೂ ಒಂದು ಸಂಕೀರ್ಣವಾದಂತಹ ವಿದ್ಯಮಾನ.

ಕವಿರಾಜಮಾರ್ಗ ೯ನೇ ಶತಮಾನದಲ್ಲಿ ಅನ್ಯಧರ್ಮ ಸಹಿಷ್ಣುತೆ ಮತ್ತು ಪರವಿಚಾರ ಸಹಿಷ್ಣುತೆಯೇ ಕನ್ನಡಿಗರ ಗುಣಲಕ್ಷಣ ಮತ್ತು ಕನ್ನಡ ಸಂಸ್ಕೃತಿಯ ಒಂದು ಹೆಗ್ಗುರುತು ಎಂದು ಹೇಳುವ ಮುನ್ನ ಕನ್ನಡನಾಡು ಮತ್ತು ಕನ್ನಡ ಭಾಷಾಚರಿತ್ರೆ, ಕನ್ನಡ ರಾಜ್ಯಕಾರಣ ಹಲವಾರು ಮಜಲುಗಳನ್ನು ದಾಟಿ ಹೋಗಿತ್ತು ಎಂಬುದನ್ನು ನಾವು ಗಮನಿಸಬೇಕು. ಕರ್ನಾಟಕದ ಪ್ರಸ್ತಾಪ ಋಗ್ವೇದದಲ್ಲಿ ಬರುತ್ತದೆ ಎಂದು ಹೇಳುತ್ತಾರೆ. ಬಹಳ ಗತವೈಭವದೊಡನೆ ಹೇಳಿಕೊಳ್ಳುವವರು ಶಾತವಾಹನರು ಅಥವಾ ಪೂರ್ವ ಗಂಗರು, ಕದಂಬರು, ನಮ್ಮ ಪೂರ್ವಜರು ಎಂದು ಹೇಳುವವರಿದ್ದಾರೆ. ಆದರೆ, ಅವರು ಈ ಪ್ರದೇಶಕ್ಕೆ ಸೇರಿದ್ದರೂ ಕನ್ನಡ ಮಾತನಾಡುತ್ತಿದ್ದರೋ ಇಲ್ಲವೋ? ಗೊತ್ತಿಲ್ಲ. ಆದರೆ ಕನ್ನಡ ಮಾತನಾಡುವ ಮತ್ತು ಕನ್ನಡವನ್ನು ತಮ್ಮ ರಾಜ್ಯ ಭಾಷೆಯನ್ನಾಗಿ ಮಾಡಿಕೊಂಡ ದಾಖಲೆ ಇರುವ ಮೊದಲ ರಾಜವಂಶ ಬಾದಾಮಿ ಚಾಲುಕ್ಯರದು. ಅವರ ಕಾಲದಲ್ಲೇ ಕನ್ನಡ ಭಾಷೆ, ಸಂಸ್ಕೃತಿ ಎಂಬುದು ನಮಗೆ ನಿಚ್ಚಳವಾಗಿ ಪರಿಚಯವಾಗುವುದು. ಇವರ ಕಾಲದ ಮೊದಲನೇ ಪುಲಿಕೇಶಿ ಮತ್ತು ಇಮ್ಮಡಿ ಪುಲಿಕೇಶಿ ಕರ್ನಾಟಕದ ಅಥವಾ ಕನ್ನಡ ಚಕ್ರವರ್ತಿಗಳು ತಮ್ಮ ಸಾಮ್ರಾಜ್ಯವನ್ನು ಸಿಂಹಳದಿಂದ ನರ್ಮದೆಯವರೆಗೆ ವಿಸ್ತರಿಸಿಕೊಂಡು ಅದು ಒರಿಸ್ಸಾದವರೆಗೂ ಹೋಗಿತ್ತು ಎಂದು ಹೇಳುತ್ತಾರೆ. ಇವರ ವ್ಯಾಪ್ತಿಗೆ ಬಂದ ಎಲ್ಲಾ ಪ್ರದೇಶದ ಜನ ಕನ್ನಡ ಮಾತನಾಡುತ್ತಿದ್ದರು ಎಂದಲ್ಲ. ಆದರೆ, ರಾಜ ಕನ್ನಡಿಗನಾಗಿದ್ದ.

ನಮ್ಮ ಚಿದಾನಂದಮೂರ್ತಿ ಮತ್ತು ಪಾಟೀಲ್ ಪುಟ್ಟಪ್ಪ ಅವರಂತಹವರು ಗುಜರಾತ್‌ನಲ್ಲೂ ಕನ್ನಡಿಗರಿದ್ದರು, ಬಂಗಾಳದಲ್ಲಿಯೂ ಕನ್ನಡಿಗರಿದ್ದರು, ನೇಪಾಳದಲ್ಲಿಯೂ ಕನ್ನಡಿಗರಿದ್ದರು ಎಂದು ಹೇಳುತ್ತಾರೆ. ಹಾಗೆ ಹೇಳುತ್ತಾ ಕನ್ನಡ ಚಳುವಳಿಗಾರರನ್ನು ಉದ್ರೇಕಿಸಿ ಬಿಟ್ಟುಬಿಡುತ್ತಾರೆ. ಇದೇ ಸಮಸ್ಯೆ. ಏಕೆಂದರೆ, ಬಾದಾಮಿ ಚಾಲುಕ್ಯರ ಕಾಲದಲ್ಲಿ ಪರಾಕ್ರಮಶೀಲವಾಗಿದ್ದ ಕನ್ನಡ ಸಂಸ್ಕೃತಿ, ಕವಿರಾಜಮಾರ್ಗಕಾರನಿದ್ದ ರಾಷ್ಟ್ರಕೂಟರ ಕಾಲಕ್ಕೆ ಬಂದಾಗ ಮಿತಗೊಂಡಿತ್ತು. ಅದರ ವ್ಯಾಪ್ತಿ ಕಾವೇರಿಯಿಂದ ಗೋದಾವರಿಯವರೆಗಷ್ಟೇ ಬಂದಿತ್ತು ಎಂಬುದನ್ನು ಅವರು ಅಭಿಮಾನಾತುರದಲ್ಲಿ ಗಮನಿಸುವುದಿಲ್ಲ. ಈ ಮಿತಗೊಳ್ಳುವ ಪ್ರಕ್ರಿಯೆಯಲ್ಲಿ ಅದು ಕಂಡ ಸೋಲುಗೆಲುವುಗಳು, ಏಳುಬೀಳುಗಳು, ಸುಖದುಃಖಗಳು ಎಲ್ಲಾ ಸೇರಿ, ಈ 'ಕಸವರಮೆಂಬುದು ನೆರೆಸೈರಿಸಲಾರ್ಪೊಡೆ...' ಅಂದರೆ, ಅನ್ಯ ವಿಚಾರ,

ಅನ್ಯ ಧರ್ಮಗಳನ್ನು ಸಹಿಸುವ ಶಕ್ತಿ, ಸಹಿಸುವ ವಿವೇಕ ಕನ್ನಡಕ್ಕೆ ಬಂದಿತ್ತು. ಆ ವಿವೇಕವನ್ನು ಕವಿರಾಜಮಾರ್ಗ ಹೇಳುತ್ತದೆ.

ಇದನ್ನು ಸುಬ್ಬಣ್ಣನವರು ಇನ್ನೂ ಚೆನ್ನಾಗಿ ವಿವರಿಸುತ್ತಾರೆ. 'ಕವಿರಾಜಮಾರ್ಗ' ಒಂದು ಲಾಕ್ಷಣಿಕ ಗ್ರಂಥವಾದರೂ ಅದನ್ನು ಲಾಕ್ಷಣಿಕ ಗ್ರಂಥವಾಗಿ ಮಾತ್ರ ಓದುವುದು ಸ್ವಲ್ಪ ಪೆದ್ದುತನ ಅಂತ ಅವರು ಹೇಳುತ್ತಾರೆ. ಏಕೆಂದರೆ, ಲಾಕ್ಷಣಿಕ ಗ್ರಂಥವನ್ನು ಮೀರಿದ ಅರ್ಥವಿಸ್ತಾರ ಆ ಪುಸ್ತಕಕ್ಕೆ ಇದೆ ಎಂದು ಅವರು ಸೂಚಿಸುತ್ತಾರೆ. ಸುಬ್ಬಣ್ಣನವರ ಪ್ರಕಾರ ಕವಿರಾಜಮಾರ್ಗಕ್ಕೆ ಮೊದಲು ಭಾರತೀಯ ಪರಂಪರೆಯಲ್ಲಿ ರಾಜತ್ವ ತತ್ವಕ್ಕೆ ಒಂದು 'ತ್ರಿಕೂಟ' ಆಧಾರ ಇತ್ತಂತೆ. ಅದು ಕೌಟಿಲ್ಯನ ಅರ್ಥಶಾಸ್ತ್ರದ ಮೂಲದಿಂದ ಬಂದದ್ದು. 'ಅಮಾತ್ಯ–ರಾಜ–ಮತ್ತು ಸೇನಾಪತಿ' ಈ ಮೂರು ಸೇರಿ ರಾಜ್ಯ ತತ್ವದ ನಿರ್ಮಾಣವಾಗುತ್ತಿತ್ತು. ಆದರೆ ಕವಿರಾಜಮಾರ್ಗದ ಪ್ರಕಾರ ಕವಿ ಮತ್ತು ರಾಜ ಸೇರಿ ರಾಜ್ಯತತ್ತ್ವವನ್ನು ನಿರ್ಮಾಣ ಮಾಡುತ್ತಾರೆ. ಕವಿ ಜನತೆಯ ವಾಣಿ ಕೂಡ ಆಗಿರುವುದರಿಂದ, ಜನಶಕ್ತಿ, ರಾಜಶಕ್ತಿ ಮತ್ತು ಕವಿಶಕ್ತಿ ಈ ಮೂರೂ ಸೇರಿ ಕನ್ನಡ ಸಂಸ್ಕೃತಿಯನ್ನು ಕಟ್ಟಿದೆ ಎನ್ನುವ ಹೊಳಹನ್ನು ಕವಿರಾಜಮಾರ್ಗ ನೀಡುತ್ತದೆ. ಈ ಹೊಸ ಒಳನೋಟ ಈ ಕೃತಿಯನ್ನು ಐತಿಹಾಸಿಕಗೊಳಿಸುತ್ತದೆಂದು ಸುಬ್ಬಣ್ಣ ಅಭಿಪ್ರಾಯಪಡುತ್ತಾರೆ. ಜೊತೆಗೆ ಈ ಕೃತಿಯ ಇಬ್ಬರು–ಜಂಟಿ–ಲೇಖಕರು ಬೇರೆ ಬೇರೆ ಧರ್ಮಗಳಿಗೆ ಸೇರಿದವರು. ಒಬ್ಬರು ಜೈನರಾದರೆ, ಮತ್ತೊಬ್ಬ ವೈದಿಕ. ಶ್ರೀವಿಜಯ–ನೃಪತುಂಗರ ಕವಿರಾಜಮಾರ್ಗ ಮೂಲತಃ ಕನ್ನಡ ಜನತೆ, ಕನ್ನಡ ಜನಸಮುದಾಯ, ಕನ್ನಡ ಜನಪದ ಕಂಡುಕೊಂಡಂತಹ ಒಂದು ಬಹುತ್ವದ ಪ್ರಜ್ಞೆಯುಳ್ಳ ಬದುಕಿನ ದರ್ಶನ.

ಸುಪ್ರಸಿದ್ಧ ಸಂಸ್ಕೃತಿ ಚಿಂತಕ ಶೆಲ್ಡೆನ್ ಪೋಲಾಕ್ ಕೂಡಾ ಕವಿರಾಜಮಾರ್ಗವನ್ನು ಇದೇ ನೆಲೆಯಲ್ಲಿ ಜಗತ್ತಿನ ಸಾಂಸ್ಕೃತಿಕ ಚರಿತ್ರೆಯಲ್ಲಿಯೇ ಅತ್ಯಂತ ವಿಶಿಷ್ಟವಾದ ಕೃತಿ ಎಂದು ಗುರುತಿಸುತ್ತಾರೆ. ಅದು ದಕ್ಷಿಣ ಏಷ್ಯಾದ ಸಂಸ್ಕೃತಿಯ ಒಂದು ನಿರ್ಣಾಯಕ ಗ್ರಂಥವೆಂದೂ ಅಭಿಪ್ರಾಯಪಡುತ್ತಾರೆ. ಆದರೆ ಕನ್ನಡದ ಕೆಲವು ಹೊಸ ಚಿಂತಕರು ಈ ಕೃತಿಯನ್ನೂ, ಅದನ್ನು ಕುರಿತ ಸುಬ್ಬಣ್ಣ ಮತ್ತು ಶೆಲ್ಡನ್ ಪೊಲಾಕ್‌ರ ವ್ಯಾಖ್ಯಾನಗಳನ್ನು ಒಪ್ಪಲು ನಿರಾಕರಿಸುತ್ತಾರೆ. ಉದಾಹರಣೆಗೆ ಹೆಚ್.ಎಸ್.ಶಿವಪ್ರಕಾಶ್, ಕೆ.ವಿ.ನಾರಾಯಣ ಅಂತಹವರು ಇದು ಕನ್ನಡ ಚರಿತ್ರೆ ಮತ್ತು ಕಾವ್ಯ ಸಂಸ್ಕೃತಿಯನ್ನು ಸಂಸ್ಕೃತ ಪರಂಪರೆಯ ಭಾಗವಾಗಿ ಮತ್ತು ಮುಂದುವರಿಕೆಯಾಗಿ ನೋಡುತ್ತಾ ಕನ್ನಡ ಸಂಸ್ಕೃತಿಯ ಸ್ವಾಯತತ್ತೆಯನ್ನು ನಿರ್ಲಕ್ಷಿಸುವ ಪ್ರವೃತ್ತಿಯನ್ನು ತೋರುತ್ತದೆಯೆಂದು ಟೀಕಿಸುತ್ತಾರೆ. ಈ ಟೀಕೆಯನ್ನು ವಿಕ್ಷಿಪ್ತ ಮಟ್ಟಕ್ಕೆ ಒಯ್ದಿರುವ ಇತ್ತೀಚಿನ ಕೆಲವು ಚಿಂತಕ ವೇಷದ ಸಾಮಾಜಿಕ ನ್ಯಾಯವಾದಿಗಳು ಇದನ್ನು ಕನ್ನಡಕ್ಕೇ ಕುತ್ತು ತರುವಂತಹ ಭಾಷಾ ಗೊಂದಲಗಳಿಗೆ ಎಡೆ ಮಾಡಿಕೊಟ್ಟಿದ್ದಾರೆಂಬುದೂ ನಿಜ. ಆ ವಿಷಯಕ್ಕೆ ಆಮೇಲೆ ಬರೋಣ. ಆದರೆ ಕೆ.ವಿ. ಸುಬ್ಬಣ್ಣನವರಷ್ಟೇ ಸಮರ್ಥರಾದ ವಿದ್ವಾಂಸರು ಕವಿರಾಜಮಾರ್ಗ ಮತ್ತು ಅದರ

ವ್ಯಾಖ್ಯಾನಗಳ ಬಗ್ಗೆ ಸಂಸ್ಕೃತಿ ಚರಿತ್ರೆಯ ನೆಲೆಯಲ್ಲಿ ಕೆಲವು ಗಂಭೀರವಾದ ಸಂದೇಹಗಳನ್ನು ವ್ಯಕ್ತಪಡಿಸಿರುವುದರಿಂದ ಅದರ ಬಗ್ಗೆ ನಾವು ಗಮನ ಕೊಡದೆ ಇದ್ದರೆ, ಕನ್ನಡ ಭಾಷಾಚರಿತ್ರೆ, ಕನ್ನಡಿಗರ ಅಸ್ಮಿತೆ ಬಗ್ಗೆ ನಾವು ಪರಿಪೂರ್ಣ ಚಿತ್ರ ಗಳಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ.

ಕವಿರಾಜಮಾರ್ಗದ ಟೀಕಾಕಾರರ ಮುಖ್ಯ ವಾದವೆಂದರೆ, 'ಇದು ಸಂಸ್ಕೃತ ಪರಂಪರೆಯೊಂದಿಗೆ ಕನ್ನಡ ಒಡನಾಟವನ್ನೇ ಮುನ್ನೆಲೆಗೆ ತಂದು, ಕನ್ನಡ ಸಂಸ್ಕೃತಿಯ ವ್ಯಾಖ್ಯಾನವನ್ನು ಮಾಡಿದೆ. ಅದರ ಆಧಾರದ ಮೇಲೆ ಕನ್ನಡ ಸಂಸ್ಕೃತಿ ಲಕ್ಷಣಗಳ ಸೂಚನೆಗಳನ್ನು ಕೊಟ್ಟಿದೆ. ಅದರಿಂದಾಗಿ ಕನ್ನಡ ಭಾಷಾಚರಿತ್ರೆ, ಕನ್ನಡ ಭಾಷಾಸಂಸ್ಕೃತಿ ಒಂದು ನಿರ್ದಿಷ್ಟ ಜನವರ್ಗದ ಯಜಮಾನಿಕೆಯಲ್ಲಿಯೇ, ಒಂದು ನಿರ್ದಿಷ್ಟ ದಿಕ್ಕಿನಲ್ಲಿಯೇ ಬೆಳೆಯುವಂತಹ ಮಿತಿಗೆ ಒಳಗಾಗಿದೆ' ಎಂಬುದಾಗಿದೆ. ಇದಕ್ಕೆ ಪೂರಕವಾಗಿ ಈ ಟೀಕೆ ಬಿಸಿಬಿಸಿಯಾಗಿ ಚರ್ಚಿತವಾಗುತ್ತಿರುವ ಸಮಯದಲ್ಲೇ ಕಾಕತಾಳೀಯವೋ ಅಥವಾ ಚರಿತ್ರೆಯ ಆಕಸ್ಮಿಕವೋ ಗೊತ್ತಿಲ್ಲ, ಷ. ಶೆಟ್ಟರ್‌ರವರ 'ಶಂಗಂ ತಮಿಳಗಂ ಮತ್ತು ಕನ್ನಡ ನಾಡು ನುಡಿ' ಪುಸ್ತಕ ಬಂದಿದೆ. ಬಹುಶಃ ಕನ್ನಡ ಸಾಹಿತ್ಯ ಅಥವಾ ಭಾಷಾ ಚರಿತ್ರೆಯನ್ನು ಅಥವಾ ಕನ್ನಡ ಸಂಸ್ಕೃತಿ ಚರಿತ್ರೆಯನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಒಂದು ಸಣ್ಣ ಹೊಸ ಹೊಳಹನ್ನು ನೀಡಿದಂತಹ ಕೃತಿ ಇದು (ಇತ್ತೀಚೆಗೆ ತುಮಕೂರು ವಿಶ್ವವಿದ್ಯಾಲಯ ಪ್ರಕಟಿಸುವ 'ಲೋಕ ಜ್ಞಾನ' ಎಂಬ ಪತ್ರಿಕೆಯಲ್ಲಿ ಮನು ದೇವದೇವನ್ ಎಂಬುವವರು ಇದರ ಹಲವು ದೋಷಗಳನ್ನು ಸೂಚಿಸುತ್ತಾ, ಈ ಕೃತಿಯ ವಿಶ್ವಾಸಾರ್ಹತೆಯನ್ನು ಪ್ರಶ್ನಿಸಿರುವರಾದರೂ, ಅವರ ವಾದವಿನ್ನೂ ಚರ್ಚೆಗೆ ಒಳಗಾಗಬೇಕಿದೆ.) ಅದು, ಸಂಸ್ಕೃತ ಪರಂಪರೆಗೆ ಪರ್ಯಾಯವಾಗಿ ದ್ರಾವಿಡ ಮೂಲದೊಂದಿಗೆ ಕನ್ನಡ ಹೊಂದಿದ್ದಂತಹ ಸಂಪರ್ಕ, ಒಡನಾಟ ಹೇಗಿತ್ತು ಎಂಬುದರ ಬಗ್ಗೆ ಕೆಲವು ಒಳನೋಟಗಳನ್ನು ನೀಡುತ್ತದೆ. ಶೆಟ್ಟರ್ ನನ್ನೊಂದಿಗೆ ಮಾತನಾಡಿದಂತೆ, ಇದಕ್ಕೆ ಬೇಕಾಗಿರುವಂತಹ ಆಕರಗಳು ಬಹುಶಃ ಇಂದು ತುಂಬಾ ಕಡಿಮೆಯಾಗಿವೆ. ಅದರೂ ಕೂಡ ಕನ್ನಡ ಕುಲ ಚರಿತ್ರೆ ಹೇಗೆ ಬೆಳೆದು ಬಂತು ಮತ್ತು ಈ ಚರಿತ್ರೆಯನ್ನು ನಾವು ಕಾಪಿಟ್ಟುಕೊಂಡು ಬಂದಿರುವ ಬಗೆಯ ಬಗ್ಗೆ ಈ ಕೃತಿ ಸ್ಥೂಲವಾಗಿಯಾದರೂ ಬೆಳಕನ್ನು ಚೆಲ್ಲುತ್ತದೆ ಎಂದುಕೊಂಡಿದ್ದೇನೆ.

ಈ ಕೃತಿಯ ಪ್ರಕಾರ ಭಾರತದ ದಕ್ಷಿಣ ತುದಿಯಲ್ಲಿದ್ದಂತಹ ದ್ರಾವಿಡ ಕುಲ, ಮೂಲ ತಮಿಳು ಭಾಷಾ ಮೂಲದಿಂದ ಮೊದಲು ಒಡೆದದ್ದು ಕನ್ನಡವಾಗಿ. ಕನ್ನಡದ ಜೊತೆಯಲ್ಲಿಯೇ ತುಳು, ಕೊಡವ ಇತ್ಯಾದಿ ಸಣ್ಣಪುಟ್ಟ ಭಾಷೆಗಳು ಕೂಡ ಒಡೆದುಕೊಂಡವು. ತಮಿಳರು ಇತರ ದ್ರಾವಿಡ ಭಾಷಿಕರನ್ನು ವಡಗರು ಅಥವಾ ಹೊರಭಾಷಿಕರು ಎಂದು ಕರೆಯುತ್ತಿದ್ದರಂತೆ. ತಮಿಳಿನಂತೆ ಕೇಳಿಸದ, ತಮಿಳರಿಗೆ ಅರ್ಥವಾಗದ ಭಾಷೆ ಈ ವಡಗರ ಭಾಷೆ. ಅದರಲ್ಲಿ ಕರ್ನಾಟಕ ಮತ್ತು ಆಂಧ್ರ ಕೂಡ ಸೇರಿತ್ತಂತೆ. ತಮಿಳು ಭಾಷಾ ಸಮುದಾಯದ ನಾಡಾದ ತಮಿಳಗಂ, ವೇಂಗಡಂನಿಂದ ಕುಮರಿಯವರೆಗೆ ಅಂದರೆ ತಿರುಪತಿಯಿಂದ ಕನ್ಯಾಕುಮಾರಿಯವರೆಗೆ ಇದ್ದಂತಹ ಪ್ರದೇಶ. ಆಮೇಲೆ ಶಂಗಂ ಸಾಹಿತ್ಯಕ್ಕೆ

ಬಂದರೆ, ಅದು ಸಿಂಹಳವನ್ನು ಸೇರಿ ಮಾಲ್ಡೀವ್ಸ್‌ವರೆಗೆ ಬಂದಿತ್ತು ಎನ್ನುತ್ತಾರೆ. ಆಫ್ರಿಕಾ ಕೂಡ ಸೇರಿತ್ತೆಂದು ಇನ್ನೂ ಕೆಲವರು ವಾದ ಮಾಡುತ್ತಾರೆ. ಏನೇ ಇರಲಿ, ಚರಿತ್ರೆಯಲ್ಲಿ ಮೌರ್ಯರು ದಕ್ಷಿಣದ ಮೇಲೆ ದಂಡೆತ್ತಿ ಬಂದ ಕಾಲಕ್ಕೆ, ತಮಿಳಗಂನ್ನು ವಶಪಡಿಸಿಕೊಳ್ಳಲು ಯತ್ನಿಸಿದರಂತೆ. ಆಗ ವಡಗರು ಮೌರ್ಯರಿಗೆ ಸಹಾಯ ಮಾಡಿ, ತಮಿಳಗಂನ ಮೇಲೆ ದಾಳಿ ಮಾಡಲು ದಾರಿ ಮಾಡಿಕೊಟ್ಟರು ಎನ್ನುವ ಒಂದು ಸೂಚನೆ 'ಶಂಗಂ ತಮಿಳಗಂ' ಕೃತಿಯಲ್ಲಿ ಸಿಗುತ್ತದೆ.

ಕರ್ನಾಟಕ ಎಂದು ನಾವಿಂದು ಕರೆಯುವ ನಾಡನ್ನು ಕುಂತಲ ಎಂದು ಕರೆಯುತ್ತಾರೆ. ಪುನ್ನಾಟ ಎಂದು ಕರೆಯುತ್ತಾರೆ. ಉನ್ನತ್ತಿಕಾ, ಕರ್ಣಾಟ, ಕರುನಾಡು ಎಂದು ಬೇರೆ ಬೇರೆ ಹೆಸರುಗಳಿಂದಲೂ ಕರೆಯುತ್ತಾರೆ. ಇದು ಬಹುಭಾಷಾ ಪ್ರದೇಶವೇ ಆಗಿತ್ತು. ಭಾರತದ ಚರಿತ್ರೆಯಲ್ಲಿ ಏಕಭಾಷಾ ಪ್ರದೇಶವೆಂಬುದು ಇರಲೇ ಇಲ್ಲ. ಏಕ ಭಾಷೆ ಪರಿಕಲ್ಪನೆ ಬಂದದ್ದು ಭಾಷಾವಾರು ಪ್ರಾಂತ್ಯಗಳ ಏಕೀಕರಣ ಸಂದರ್ಭದಲ್ಲಿ ಮಾತ್ರ. ಅದಿರಲಿ, ಈ ವಡಗರು ಅಂದರೆ ತಮಿಳೇತರರದ ದ್ರಾವಿಡರು ಒಂದು ಕಾಪು ಸೀಮೆಯಾಗಿ ಅಂದರೆ buffer zone ಆಗಿ ಉತ್ತರದ ಆರ್ಯ ಸಂಸ್ಕೃತಿ ದ್ರಾವಿಡವನ್ನು ವಶಪಡಿಸಿಕೊಳ್ಳದ ರೀತಿಯಲ್ಲಿ ಒಂದು ಗೋಡೆಯಾಗಿ, ಕೆಲವೊಮ್ಮೆ ಅವರಿಗೆ ಸಹಾಯಕರಾಗಿ ವರ್ತಿಸಿದರು ಎನ್ನುವ ಸೂಚನೆಗಳು ನಮ್ಮ ಚರಿತ್ರೆಯಲ್ಲಿ ಸಿಗುತ್ತವೆ. ಅದಕ್ಕೆ ಬಹಳ ಸ್ಪಷ್ಟವಾದ ಸಾಕ್ಷ್ಯ ಎಂದರೆ ಈ ಮೌರ್ಯ ಸಂಸ್ಕೃತಿಯ ಅಂದರೆ ಅಶೋಕನ ಶಾಸನಗಳು ತಮಿಳಗಂನ ಉತ್ತರದ ಗಡಿಗೆ ನಿಂತು ಹೋಗುತ್ತವೆ. ಉದಾಹರಣೆಗೆ ಕರ್ನಾಟಕದ ಬಳ್ಳಾರಿ ಜಿಲ್ಲೆಯ ಬ್ರಹ್ಮಗಿರಿ, ಇಸಿಲ ಇವುಗಳ ದಕ್ಷಿಣದ ಆಚೆಗೆ ಪ್ರಾಕೃತ ಭಾಷೆಯ ಶಾಸನಗಳು ಎಲ್ಲಿಯೂ ಸಿಗುವುದಿಲ್ಲ. ಅಂದರೆ ಉತ್ತರ ಸಂಸ್ಕೃತಿಯವರನ್ನು ಒಳಕ್ಕೆ ಸೇರಿಸಿಕೊಳ್ಳಲಿಲ್ಲ. ಜೈನಧರ್ಮ ಪ್ರಸಾರದ ಭಾಗವಾಗಿ ನಂತರ ಪ್ರಾಕೃತ ಶಾಸನಗಳು ತಮಿಳ್ನಾಡಿನಲ್ಲಿ ಕಂಡು ಬರುತ್ತದೆ. ಆದರೆ ರಾಜ್ಯಾಡಳಿತ ಶಾಸನಗಳಾಗಿ ಅವು ಪ್ರಾಚೀನ ಕರ್ನಾಟಕದ ಗಡಿವರೆಗೆ ಮಾತ್ರ ಕಂಡುಬರುತ್ತವೆ.

ಅಷ್ಟು ಹೊತ್ತಿಗೆ ಕನ್ನಡ ಲಿಪಿಯನ್ನು ಪಡೆಯಲು ಪ್ರಯತ್ನಿಸುತ್ತಿತ್ತು. ಕನ್ನಡ ಭಾಷೆ ಮೂರ್ತ ದಾಖಲೆಗಳ ರೂಪ ಪಡೆಯುವ ಪ್ರಯತ್ನದಲ್ಲಿತ್ತು. ಆಗ ಮೌರ್ಯರು ತಂದುಕೊಟ್ಟಂತಹ ಪ್ರಾಕೃತ ಭಾಷೆಯಲ್ಲಿ ಬಳಸುತ್ತಿದ್ದಂತಹ ಬ್ರಾಹ್ಮಿಲಿಪಿಯ ೫೬ ಅಕ್ಷರಗಳನ್ನು ಕನ್ನಡ ಪಡೆದುಕೊಂಡಿತು. ಆದರೆ, ತಮಿಳರು ಅಥವಾ ತಮಿಳಿನ ಆಡಳಿತಗಾರರು ಅಥವಾ ಅಧಿಪತಿಗಳು ಮಾತ್ರ ಯಾವ ಕಾರಣಕ್ಕೂ ಬ್ರಾಹ್ಮಿಲಿಪಿಯನ್ನು ಒಪ್ಪಿಕೊಳ್ಳಲಿಲ್ಲ. ಈ ಬ್ರಾಹ್ಮಿಲಿಪಿಯ ಮೂಲಕ ಆರ್ಯ ಸಂಸ್ಕೃತಿಯ ಮಾತೃಕೆಗಳು ತಮ್ಮ ಸಂಸ್ಕೃತಿಗೆ ಬಂದುಬಿಡುತ್ತವೆ ಎಂಬ ಭಯದಿಂದ, ಆತಂಕದಿಂದ ಅವರು ಲಿಪಿಯನ್ನೇ ತಿರಸ್ಕರಿಸಿದರು. ಲಿಪಿ ಇಲ್ಲದೆಯೇ ಬದುಕು ನಡೆಸಿದರು. ಹಾಗೆ ಲಿಪಿ ಇಲ್ಲದೆ ಶತ ಶತಮಾನಗಳ ಕಾಲ ಸಾಹಿತ್ಯವನ್ನು ಅವರು ಬೆಳೆಸಿದರು, ಬಳಸಿದರು. ಆದರೆ ಲಿಪಿ ಬೇಕೇ ಬೇಕು ಎನ್ನಿಸಿದಾಗ

ಅವರು ತಮ್ಮ ಸಂಸ್ಕೃತಿಗೆ, ತಮ್ಮ ಭಾಷಾಭಿವ್ಯಕ್ತಿಗೆ ಬೇಕಾದಂತಹ ೨೬ ಅಕ್ಷರಗಳನ್ನು ಮಾತ್ರ ಬ್ರಾಹ್ಮಿಯಿಂದ ಪಡೆದುಕೊಂಡರು. ಅದನ್ನು ತಮಿಳು ಬ್ರಾಹ್ಮಿ ಎಂದು ಕರೆದುಕೊಂಡರು. ಅದಕ್ಕಾಗಿ ಅವರು ೩-೪ ಹಂತಗಳನ್ನು ಹಾದು ಬಂದರು: ದುಂಡು ಅಕ್ಷರ, ಗ್ರಂಥ ಲಿಪಿ ಆಮೇಲೆ ತಮಿಳು ಬ್ರಾಹ್ಮೀ.

ಹೀಗೆ ತಮಿಳರು ಆಳದ ಆತ್ಮಶ್ರೀಯ ಪ್ರಜ್ಞೆಯೊಂದಿಗೆ ತಮ್ಮ ಸಂಸ್ಕೃತಿಯನ್ನು ತಮ್ಮ ಭಾಷೆಯನ್ನು, ತಮ್ಮ ಅಸ್ಮಿತೆಯನ್ನು ಉಳಿಸಿಕೊಂಡ ಹಾಗೆ ಇತರ ವಡಗರು ಉಳಿಸಿಕೊಳ್ಳಲಿಲ್ಲ. ತಮಿಳರು ನಿಜವಾಗಿ ಸ್ವಾಭಿಮಾನಿಗಳು; ಆ ನೆಲೆಯಲ್ಲಿ ತಮ್ಮ ಪರಾಕ್ರಮವನ್ನೂ ಮೆರೆದಂಥವರು ಈ ದೃಷ್ಟಿಯಿಂದ, ಇತರ ವಡಗರ ಬಗ್ಗೆ ಹೇಳುವುದನ್ನು ಬಿಟ್ಟು ಕನ್ನಡಿಗರ ಬಗ್ಗೆ ಹೇಳುವುದಾದರೆ, ಅವರು ಸ್ವಲ್ಪ ಹೊಂದಾಣಿಕೆ ಸಂಸ್ಕೃತಿಯವರು. ಅದಕ್ಕೇ ನಮ್ಮಲ್ಲಿ ಪರಧರ್ಮ, ಪರವಿಚಾರಗಳ ಸಹಿಷ್ಣುತೆ ಜಾಸ್ತಿ ಎಂದು ಹೇಳಿಕೊಂಡು ನಾವು ಹೆಮ್ಮೆ ಪಡುತ್ತೇವೆ. ತಮಿಳರನ್ನು ಸಂಕುಚಿತರು ಎಂದು ಕರೆಯುತ್ತೇವೆ. ಆದರೆ, ತಮಿಳಿಗರ ಸಂಕುಚಿತತೆಯಿಂದ ಪಡೆದುಕೊಂಡಿದ್ದೆಷ್ಟು? ನಮ್ಮ ಉದಾರ ಮನಸ್ಸಿನಿಂದ ನಾವು ಪಡೆದುಕೊಂಡಿದ್ದೆಷ್ಟು? ಎಂದು ಲೆಕ್ಕ ಹಾಕಿದಾಗ ಉತ್ತರಗಳು ತುಂಬಾ ನಿರಾಶಾದಾಯಕವಾಗಿರುತ್ತವೆ.

ಯಾಕೆ ಹೀಗಾಯಿತು? ತಮಿಳು ಮತ್ತು ಕನ್ನಡ ಒಂದೇ ನದಿಯ ತೀರದಲ್ಲಿ ಹುಟ್ಟಿದ ಭಾಷೆಗಳು, ಕಾವೇರಿ ನದಿಯ ದಡದಲ್ಲಿ ಹುಟ್ಟಿದ ಭಾಷೆಗಳು. ಸ್ವಲ್ಪಕಾಲ ಕಾವೇರಿ ಸುತ್ತಮುತ್ತ ಇದ್ದ ಪುನ್ನಾಟ ದೇಶದವರು ಅಂದರೆ ಕನ್ನಡದವರು ತಮ್ಮ ನೆರೆಹೊರೆಯ ತಮಿಳಗಂನ ಜನಪದರೊಂದಿಗೆ ಬೆರೆತದ್ದುಂಟು. ಸಂಘರ್ಷ ಮಾಡಿದ್ದೂ ಉಂಟು. ಈ ಪುನ್ನಾಟದ ಕೋಶರರು ಅಂದರೆ ತುಳುವರು ಮತ್ತು ಕೊಡವರ ಪೂರ್ವಜರು, ನಂತರ ಆದಿ ಕೊಂಕಣಿಗಳು ಅಂದರೆ ಕದಂಬರು ಇವರೆಲ್ಲರೂ ಕರ್ನಾಟಕದ ಪ್ರದೇಶದಲ್ಲಿಯೇ ಇದ್ದ ಪೂರ್ವ ಜನಾಂಗದವರು. ಇವರು ಪದೇ ಪದೇ ತಮಿಳಗಂ ಮೇಲೆ ದಾಳಿ ಮಾಡುತ್ತಿರುತ್ತಾರೆ. ಕದಂಬರನ್ನು ತಮಿಳಿಗರು ಕಡಲ್ಗಳ್ಳರು ಮತ್ತು ಕಡಲು ದರೋಡೆಕೋರರು ಎಂದು ಕರೆಯುತ್ತಿರುತ್ತಾರೆ. ಕೋಶರರೂ ಅಷ್ಟೇ ಪರಾಕ್ರಮಿಗಳು. ಅವರು ಸೀಳುನಾಯಿಗಳೊಂದಿಗೆ ಓಡಾಡುತ್ತಿದ್ದರು. ತುಂಬಾ ಕ್ರೂರಿಗಳು. ಇಷ್ಟೆಲ್ಲಾ ಪರಾಕ್ರಮ ಚರಿತ್ರೆ ಇದ್ದರೂ ಕೂಡ ಕನ್ನಡ ಜನ ಉತ್ತರದ ಸಂಸ್ಕೃತಿಗೆ ಬೇಗನೆ ಒಲಿದರು. ಬೆಳೆದರೋ ಇಲ್ಲವೋ ನಾವು ತಕ್ಷಣಕ್ಕೆ ತೀರ್ಮಾನ ಮಾಡಬೇಕಾದಂತಹ ಸರಳ ವಿಷಯವಲ್ಲ. ಆದರೆ, ಮತ್ತೆ ಇವತ್ತಿನ ದಿನಕ್ಕೆ ವಾಪಸ್ಸು ಬಂದರೆ, ಕನ್ನಡ ಚಳುವಳಿಗಾರರು ಯಾಕೆ ಹೀಗೆ ಸಂಘರ್ಷದ ನೆಲೆಗಳಲ್ಲೇ ವರ್ತಿಸುತ್ತಿದ್ದಾರೆ ಎಂಬುದಕ್ಕೆ ಒಂದು ಕಾರಣ ಇಲ್ಲಿ-ಈ ಮಿಶ್ರ ಸಂಸ್ಕೃತಿಯ ಚರಿತ್ರೆಯ ಸಂದುಗೊಂದುಗಳಲ್ಲಿ ಕಾಣಸಿಗುತ್ತದೆಂದೆನಿಸುತ್ತದೆ.

ಕವಿರಾಜಮಾರ್ಗಕಾರನ ನಂತರ 'ಕನ್ನಡದೊಳ್ ಭಾವಿಸಿದ ಜನಪದಂ' ಎಂದು ಕರೆಯುತ್ತೇವೆಯಲ್ಲ ಅದು ಆ ಗಾತ್ರದಲ್ಲಿಯೂ ಉಳಿಯಲಿಲ್ಲ. ಆ ಭಾಷಾ ಸಾಂಸ್ಕೃತಿಕ

ಚೈತನ್ಯದೊಂದಿಗೂ ಉಳಿಯಲಿಲ್ಲ. ಚರಿತ್ರೆಯ ಬೇರೆ ಬೇರೆ ಕಾರಣಗಳಿಂದಾಗಿ ಅದು ಒಡೆಯುತ್ತಾ, ಒಂದುಗೂಡುತ್ತಾ, ಛಿದ್ರ ಛಿದ್ರವಾಗುತ್ತಾ, ಬೇರೆ ಬೇರೆ ಸಂಸ್ಥಾನಗಳಾಗುತ್ತಾ ಕಾಣೆಯಾಗುತ್ತಾ ಹೋಗಿ, ಅದು ಮತ್ತೆ ಬಹುದೊಡ್ಡ ಗಾತ್ರದ ಕನ್ನಡನಾಡಾಗಿ ನಮಗೆ ಕಾಣುವುದು ಟಿಪ್ಪುವಿನ ಕಾಲದಲ್ಲಿ ಮಾತ್ರ. ಅದೂ ಬಾದಾಮಿ ಚಾಲುಕ್ಯ ಕಾಲದಷ್ಟು ಗಾತ್ರ ಅಲ್ಲ. ಕವಿರಾಜಮಾರ್ಗದ ಕಾಲದಷ್ಟು ಅಲ್ಲ. ಆದರೆ, ಸಾಕಷ್ಟು ದೊಡ್ಡದಾದ ಸಾಮ್ರಾಜ್ಯ ಟಿಪ್ಪುವಿನ ಸಾಮ್ರಾಜ್ಯ. ಆದರೆ ಟಿಪ್ಪು ಬಾದಾಮಿ ಚಾಲುಕ್ಯರ ಗುಣವನ್ನೇ ಪಡೆದ. ಹಾಗೇ ಬಹಳ ಆಕ್ರಮಣಕಾರಿ ರಾಜ, ವಿಸ್ತರಣೆಯ ರಾಜ. ಜೊತೆಗೆ ಬ್ರಿಟಿಷರ ಎದುರಿಗೆ ಮುಖಾಮುಖಿಯಾಗುವ ಛಲ ಕೂಡ ಅವನಿಗಿತ್ತು. ಟಿಪ್ಪುವನ್ನು ಕರ್ನಾಟಕದ ಆಧುನಿಕ ಚರಿತ್ರೆಯಯಲ್ಲಿನ ಓರ್ವ ವೀರನೆಂದು ನಾವು ನೆನೆಸಿಕೊಳ್ಳಬೇಕಾದ್ದು ಈ ಕಾರಣಕ್ಕೆ. ಆತ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಯಾವ ವಸ್ತುಗಳನ್ನೂ ತನ್ನ ರಾಜ್ಯದೊಳಗೆ ಬರಮಾಡಿಕೊಳ್ಳದ ಭಾರತದ ಏಕೈಕ ರಾಜ. ಬ್ರಿಟಿಷರ ವ್ಯಾಪಾರಿಬುದ್ಧಿ ಕರ್ನಾಟಕದಲ್ಲಿ ನಡೆಯದ ಹಾಗೆ ನೋಡಿಕೊಂಡ ರಾಜ. ಆ ಕಾರಣದಿಂದ ಬ್ರಿಟಿಷರು ಇವನನ್ನು ಮುಗಿಸಲು ಕಾಯುತ್ತಿದ್ದರು. ಬ್ರಿಟಿಷರ ಕೈಗೆ ಸಿಕ್ಕ, ಬ್ರಿಟಿಷ್ ಭಾರತಕ್ಕೆ ಸೇರಿಸಲ್ಪಟ್ಟ ಕೊನೆಯ ರಾಜ್ಯ ಟಿಪ್ಪುವಿನ ಕರ್ನಾಟಕ, ಅದು ಮೈಸೂರು ರಾಜ್ಯ. ಬ್ರಿಟಿಷರು ಎಲ್ಲಾ ಕುತಂತ್ರಗಳನ್ನು ಬಳಸಿ ಕೊನೆಗೆ ಟಿಪ್ಪುವನ್ನು ಕೊಂದಿದ್ದು ಮುಸ್ಲಿಂ ರಾಜರ ನೆರವಿನೊಂದಿಗೆ– ಹೈದರಾಬಾದ ನಿಜಾಮನೊಂದಿಗೆ ಸೇರಿ– ಎಂಬುದನ್ನೂ ಟಿಪ್ಪುವಿನ ಮೇಲೆ ಪರಿ ಪರಿಯಾದ ಆರೋಪಗಳನ್ನು ಹೊರಿಸಲಾಗುತ್ತಿರುವ ಇಂದಿನ ಸಂದರ್ಭದಲ್ಲಿ ನಾವು ಗಮನಿಸಬೇಕು. ಆಗ ಛಿದ್ರ ವಿಚ್ಛಿದ್ರವಾದ ಕರ್ನಾಟಕ ಒಂದು ಶತಮಾನದ ಕಾಲ ಹಾಗೆಯೇ ಇತ್ತು. ಕನ್ನಡದ ಮನಸ್ಸು ವಿಘಟನೆಗೊಂಡಿತ್ತು, ವಿಚಲಿತಗೊಂಡಿತ್ತು, ಆತಂಕಗೊಂಡಿತ್ತು. ಅದು ಮತ್ತೆ ಸಾವರಿಸಿಕೊಂಡು ಎದ್ದು ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ, ಅದರ ಭಾಗವಾಗಿ ಮತ್ತೆ ಭಾಷಾ ಕುಲ ಪ್ರಜ್ಞೆ ಎಚ್ಚೆತ್ತುಕೊಂಡಾಗ.

ಸ್ವಾತಂತ್ರ್ಯ ಚಳುವಳಿಯನ್ನು ಭಾರತೀಯ ರಾಷ್ಟ್ರೀಯ ಚಳುವಳಿ ಎಂದು ಕರೆಯಲಾಗುತ್ತದೆ. ಇದು ಎಷ್ಟರ ಮಟ್ಟಿಗೆ ಸರಿ ಎಂಬುದು ದೊಡ್ಡ ಪ್ರಶ್ನೆ. ಏಕೆಂದರೆ ಆರಂಭವಾದದ್ದು ಬ್ರಿಟಿಷರಿಗೆ ಮನವಿಗಳನ್ನು ಸಲ್ಲಿಸುತ್ತಾ ಅಧಿಕಾರದ ಚೌಕಾಶಿ ಹೊಂದಾಣಿಕೆಯ ಮೂಲಕ ಚಾಲನೆ ಪಡೆದುಕೊಂಡ ರಾಷ್ಟ್ರೀಯ ಚಳುವಳಿ ಎಂದು ಕರೆಯಲ್ಪಡುವ ಸ್ವಾತಂತ್ರ್ಯ ಚಳುವಳಿ ನಿಜವಾದ ಅರ್ಥದಲ್ಲಿ ಚಳುವಳಿಯಾಗಿ, ಹೊರಹೊಮ್ಮಿದ್ದು, ರಾಷ್ಟ ಪ್ರಜ್ಞೆ ಎಂಬುದು ಜನಶಕ್ತಿಯ ಮಧ್ಯೆ ಹರಳುಗಟ್ಟಿ ಸ್ಫೋಟಿಸಿದ್ದು ಬಂಗಾಳವನ್ನು ಒಡೆಯಲು ಬ್ರಿಟಿಷರು ಯತ್ನಿಸಿದಾಗ ಎಂಬುದನ್ನು ನಾವಿಲ್ಲಿ ಗಮನಿಸುವುದು ಮುಖ್ಯ. ಬಂಗಾಳದ ವಿಭಜನೆಯ ವಿರುದ್ಧ, ಆ ಬಂಗಾಳದಲ್ಲಿ ಎದ್ದ ದಂಗೆ ಬೇರೆ ಬೇರೆ ರಾಜ್ಯಗಳಲ್ಲಿ ಆಯಾ ಭಾಷಾ ರಾಷ್ಟ್ರೀಯತೆಗಳನ್ನು ಪ್ರಚೋದಿಸಿತು. ಗುಜರಾತ್, ಒರಿಸ್ಸಾ,

ತಮಿಳುನಾಡು, ಕರ್ನಾಟಕಗಳೆಲ್ಲಾ ರಾಷ್ಟ್ರೀಯ ನಾಯಕರನ್ನು ಹುಟ್ಟಿಸಿತು. ಈ ಭಾಷಾ ರಾಷ್ಟ್ರೀಯತೆಗಳು ಒಂದು ವಿಶಿಷ್ಟ ರೀತಿಯಲ್ಲಿ ಒಗ್ಗೂಡಿ ಭಾರತದ ರಾಷ್ಟ್ರೀಯ ಆಂದೋಲನಕ್ಕೆ ಒಂದು ಸ್ಪಷ್ಟ ರೂಪ ಮತ್ತು ದಿಕ್ಕು-ದೆಸೆಗಳನ್ನು ನೀಡಿತು. ಈ-ಇಂದು ಭಾಷಾ ಉಪರಾಷ್ಟ್ರೀಯತೆಗಳೆಂದು ಅಸಡ್ಡೆಯಿಂದ ಗುರುತಿಸುವ ಭಾಷಾ ರಾಷ್ಟ್ರೀಯತೆಗಳೇ ಇಂದಿನ ರಾಷ್ಟ್ರೀಯತೆಯೆಂಬ ವಿರಾಟ್ ಕಥನವನ್ನು ಕಟ್ಟಿದ್ದೆಂಬ-ಸಂಗತಿ ಇಂದು ವಿರೋಧಭಾಸವಾಗಿ ಕಾಣಬಹುದು. ಗಾಂಧಿ ಎನ್ನುವ ಒಬ್ಬ ವ್ಯಕ್ತಿತ್ವ ಇಲ್ಲದೆ ಹೋಗಿದ್ದರೆ, ಬಹುಶಃ ಇವರೆಲ್ಲರನ್ನೂ ಒಗ್ಗೂಡಿಸಿ ತಮ್ಮದೇ ವಿಶಿಷ್ಟ ರಾಷ್ಟ್ರೀಯತೆಯ ಕಲ್ಪನೆ ಕೊಡದೆ ಹೋಗಿದ್ದರೆ ಈ ದೇಶ ಎಲ್ಲ ಭಾಷಾ ರಾಷ್ಟ್ರೀಯತೆಗಳೂ ತಮ್ಮದೇ ವಿಶಿಷ್ಟ ಸಂಸ್ಕೃತಿಗಳೊಂದಿಗೆ ಜೀವಂತವಿರುವ ಬೇರೊಂದು ಸ್ವರೂಪದ ಭಾರತೀಯ ಒಕ್ಕೂಟ ಆಗುತ್ತಿತ್ತೇನೋ ಎಂದು ನನಗನ್ನಿಸುತ್ತದೆ. ಆಗಬೇಕಾಗಿತ್ತು ಎಂಬ ಆಸೆ ಗಾಂಧಿ ಅಭಿಮಾನಿಯೂ ಆಗಿದ್ದೂ, ನನ್ನಲ್ಲೂ ಇದೆ. ಈ ರೀತಿ ಭಾರತ ಇರಬಾರದಾಗಿತ್ತು. (ಹಾಗೆ ನೋಡಿದರೆ ಇದು ಗಾಂಧಿ ಕಲ್ಪಿಸಿಕೊಂಡ ವಿಕೇಂದ್ರೀಕೃತಗೊಂಡ ರಾಷ್ಟ್ರೀಯತೆ-ಗ್ರಾಮ ಸ್ವರಾಜ್ಯ ಸ್ವರೂಪದ-ರಾಷ್ಟ್ರೀಯತೆಯೂ ಆಗಿಲ್ಲ ಎಂಬುದು ಬೇರೆ ವಿಷಯ.) ಅದು ಬಹಳ ದೊಡ್ಡ ಪ್ರಶ್ನೆ, ಸಂವಿಧಾನ ವಿರೋಧಿ ಪ್ರಶ್ನೆಯೂ ಆಗಿಬಿಡಬಹುದೇನೋ!

ಏನೇ ಇರಲಿ, ಭಾಷಾ ರಾಷ್ಟ್ರೀಯ ಚಳುವಳಿಯೇ ಸ್ವಾತಂತ್ರ್ಯ ಚಳುವಳಿಯಾಗಿ ಬೆಳೆದು ಅದರ ಪರಿಣಾಮವಾಗಿ ಕರ್ನಾಟಕ ಏಕೀಕರಣ ಅಥವಾ ಭಾಷಾ ಏಕೀಕರಣ ಚಳುವಳಿ ಅದರ ಒಂದು ಭಾಗವಾಗಿ ರೂಪುಗೊಂಡಿತು. ಅಂದರೆ ರಾಷ್ಟ್ರೀಯ ಅಸ್ಮಿತೆ ಎನ್ನುವುದು, ಭಾಷಾ ಅಸ್ಮಿತೆಗಳ ಮೂಲಕವೇ ತನ್ನನ್ನು ಕಟ್ಟಿಕೊಂಡದ್ದು. ಮೊದಲು ಒಂದು ನಾಗರಿಕತೆಯ ರೂಪದಲ್ಲಿ ಮಾತ್ರ ಇದ್ದ ಭಾರತ ರಾಜಕೀಯವಾಗಿ ಇದ್ದದ್ದು ವಿವಿಧ ಭಾಷಾ ರಾಷ್ಟ್ರೀಯತೆಗಳ ಒಕ್ಕೂಟವಾಗಿ. ನಾವು ಇಂದು ನೋಡುತ್ತಿರುವುದು ಸರಿ ಸುಮಾರಾಗಿ ಬ್ರಿಟಿಷರು ಕೊಟ್ಟಂತಹ ಭಾರತವನ್ನು. ಹಾಗಾಗಿ ಏಕೀಕರಣದ ಚಳುವಳಿಯು ಸ್ವಾತಂತ್ರ್ಯ ಚಳುವಳಿಯ ಒಂದು ಭಾಗವಾಗಿ ಬೆಳೆದದ್ದರಿಂದ ಏಕೀಕರಣ ಚಳುವಳಿಗೆ ಸ್ಫೂರ್ತಿಯಾಗಿ, ಇಂಧನವಾಗಿ ನಾವು ಕರ್ನಾಟಕ ಚರಿತ್ರೆಯನ್ನು ಭಾರತದ ಚರಿತ್ರೆಯ ನಿರ್ಮಾಣದ ಪ್ರಯತ್ನಗಳಿಗೆ ಸಮಾನಾಂತರವಾಗಿ ಕಟ್ಟುವುದಕ್ಕೆ ತೊಡಗಿದೆವು. ಅದು ಆಲೂರು ವೆಂಕಟರಾಯರಿರಬಹುದು ಅಥವಾ ಅದಕ್ಕಿಂತ ಮುಂಚೆ ನಾವು ನೆನೆಸಿಕೊಳ್ಳಬೇಕಾಗಿರುವುದು, ಡೆಪ್ಯುಟಿ ಚೆನ್ನಬಸಪ್ಪನವರನ್ನು. ೧೮೫೬ರಲ್ಲೇ ಅವರು ಧಾರವಾಡದಲ್ಲಿ ಕನ್ನಡ ಶಾಲೆಗಳ ಆರಂಭದ ದೊಡ್ಡ ಚಳುವಳಿಯನ್ನೇ ಆರಂಭಿಸಿದರು. ಆಧುನಿಕರಲ್ಲಿ ನಿಜವಾದ ಮೊದಲ ಕನ್ನಡ ಚಳುವಳಿಗಾರರೆಂದರೆ ಡೆಪ್ಯುಟಿ ಚೆನ್ನಬಸಪ್ಪ ಅವರೇ. ರಾಘವೇಂದ್ರ ರಾವ್ ಒಪ್ಪೋದಾದರೆ ನಾನು ಆಂಡಯ್ಯನನ್ನೇ ಮೊದಲ ಕನ್ನಡ ಚಳುವಳಿಕಾರ ಎಂದು ಕರೆಯುತ್ತೇನೆ! ನಂತರದಲ್ಲಿ ನಾವು ನೋಡುವ ಆಲೂರು ವೆಂಕಟರಾಯರು, ಬಿಎಂಶ್ರೀ ಮುಂತಾದವರು ಒಂದು ನೆಲೆಯಲ್ಲಿ, ಎಸ್. ನಿಜಲಿಂಗಪ್ಪ,

ಅಂದಾನಪ್ಪ ದೊಡ್ಡಮೇಟಿ ಮುಂತಾದವರು ಇನ್ನೊಂದು ನೆಲೆಯಲ್ಲಿ ಕರ್ನಾಟಕ ಚರಿತ್ರೆಯನ್ನು ಕಟ್ಟುವ ಕೆಲಸದಲ್ಲಿ ತೊಡಗಲಿಲ್ಲ.

ಆದರೆ, ಕರ್ನಾಟಕ ಏಕೆ ಏಕೀಕರಣವಾಗಬೇಕು? ಎಂಬ ಪ್ರಶ್ನೆಗೆ ಉತ್ತರವಾಗಿ ಚರಿತ್ರೆಯನ್ನು ಕಟ್ಟುವ ಈ ಪ್ರಕ್ರಿಯೆಯಲ್ಲಿ ಕರ್ನಾಟಕ ಒಂದು ಕಾಲದಲ್ಲಿ ಉಜ್ವಲ ರಾಷ್ಟ್ರವಾಗಿ, ಉಜ್ವಲ ಭಾಷೆಯಾಗಿ, ಉಜ್ವಲ ಸಂಸ್ಕೃತಿಯಾಗಿ ಇತ್ತು ಎಂದು ವಿಜಯನಗರ ಸಾಮ್ರಾಜ್ಯ ತೋರಿಸುತ್ತಾ ಗತ ವೈಭವದ ಕಾಲವನ್ನು ನೆನಪು ಮಾಡಿಕೊಳ್ಳುವ ಒಂದು ಪರಿಪಾಠ ನಮ್ಮಲ್ಲಿ ಬೆಳೆದುಬಂದುಬಿಟ್ಟಿದೆ. ಆ ಗತವೈಭವಗಳ ಕಾಲ ಇಂದು ಕನ್ನಡ ಚಳುವಳಿಕಾರರ ಮನಸ್ಸಿನಲ್ಲಿ ಕೆಲಸ ಮಾಡುತ್ತಿದೆ. ಗತ ವೈಭವದ ಕಾಲ ಹೊರಟು ಹೋಯಿತಲ್ಲ, ತಮಿಳರು, ಮುಸ್ಲಿಮರು, ತೆಲುಗರು, ಇವರೆಲ್ಲರೂ ಬಂದು ಕನ್ನಡದ ಅಸ್ಮಿತೆಯನ್ನು ಹಾಳುಮಾಡುತ್ತಿದ್ದಾರೆ ಎನ್ನುವ ಅಶಿಕ್ಷಿತ ಮನಸ್ಸು ಅಲ್ಲಿ ಉಳಿದುಹೋಗಿದೆ. ಆದ್ದರಿಂದ ಕನ್ನಡ ಭಾಷೆಯ, ಕನ್ನಡ ಮನಸ್ಸಿನ ಅಸ್ಮಿತೆ, ಒಂದು ರೀತಿಯಲ್ಲಿ ಉತ್ತರ ಭಾರತದಲ್ಲಿ ಕನ್ನಡಿಗರು ಎಂದರೆ ಜಗಳಗಂಟರು, ಸಂಕುಚಿತ ಬುದ್ಧಿಯವರು, ಉದಾ: ಕಾವೇರಿ ನದಿಯ ವಿವಾದವನ್ನು ಮಾತುಕತೆ ಮೂಲಕ ಪರಿಹರಿಸಿಕೊಳ್ಳಲಾಗದ ಗಲಾಟೆ ಮನುಷ್ಯರು ಎನ್ನುವಂತಾಗಿಬಿಟ್ಟಿದೆ! ಚಳುವಳಿಕಾರರಿಗೆ ಇಂದು ಕನ್ನಡಕ್ಕೆ ಕುತ್ತು ಬಂದಿರುವುದು ಯಾರಿಂದ ಮತ್ತು ಎಲ್ಲಿಂದ ಎಂಬುದೇ ತಿಳಿಯದೇ ಹೋಗಿರುವ ಪರಿಸ್ಥಿತಿ ಉಂಟಾಗಿದೆ. ಈ ಚಳುವಳಿಕಾರರಿಗೆ ತಮ್ಮ ಮಕ್ಕಳೂ ಸೇರಿದಂತೆ ಕನ್ನಡದ ಮಕ್ಕಳು ಇಂಗ್ಲಿಷ್ ಶಾಲೆಗೆ ಹೋಗುವುದು ಕನ್ನಡವನ್ನು, ಕನ್ನಡ ಸಂಸ್ಕೃತಿಯನ್ನು ಹೀಗಳೆಯುವ ಕೆಲಸ ಎನ್ನಿಸುವುದಿಲ್ಲ. ಇಂತಹ ವಿಸ್ಮೃತಿಗೆ ತಾವು ಈಡಾಗಿರುವಂತೆ ಮಾಡಿರುವ ಶಕ್ತಿಗಳಾವುವು ಎಂಬುದರ ಬಗ್ಗೆ ವಿವೇಚನೆ ಮಾಡುವ ವ್ಯವಧಾನವೂ ಅವರಿಗಿದ್ದಂತಿಲ್ಲ. ಹಾಗಾಗಿಯೇ ಅವರು ಕನ್ನಡದ ಶತ್ರುಗಳನ್ನು ಹೊರಗೆ ಹುಡುಕುತ್ತಾ, ಸಹಜವಾಗಿಯೇ ಆ ಕೆಲಸದ ಮೂಲಕ ಕನ್ನಡದಏಳಿಗೆ ಆಗುತ್ತಿಲ್ಲದಿರುವುದನ್ನು ಕಂಡು ಅಶಾಂತರಾಗುತ್ತಿದ್ದಾರೆನಿಸುತ್ತದೆ.

ಕನ್ನಡ ಕುಲ ಏನಾದರೂ ಇಂದು ತನ್ನ ಸಂಸ್ಕೃತಿಯನ್ನು, ತನ್ನ ಅಸ್ಮಿತೆಯನ್ನು, ತನ್ನ ಶಕ್ತಿಯನ್ನು ಉಳಿಸಿಕೊಳ್ಳುವುದಿದ್ದರೆ ಅದು ಕನ್ನಡ ಶಿಕ್ಷಣದ ಮೂಲಕ ಮಾತ್ರ ಸಾಧ್ಯ. ಕನ್ನಡಿಗ ತನ್ನ ಬದುಕನ್ನು ಕನ್ನಡ ಭಾಷಾ ಪರಂಪರೆ, ಚರಿತ್ರೆ, ಅದು ಕಟ್ಟಿಕೊಟ್ಟ ನುಡಿಗಟ್ಟು, ವಿವೇಕಗಳ ಮೂಲಕ ಕಟ್ಟಿಕೊಳ್ಳುವುದೊಂದೇ ಬದುಕಿನ ನಿಜವಾದ ಸಾರ್ಥಕತೆ ಅಥವಾ ಮುಕ್ತಿಯ ದಾರಿ ಎಂದು ಎಂದಿನವರೆಗೆ ಕಂಡುಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಅವನಿಗೆ ಶಾಂತಿಯಿಲ್ಲ. ಅವನು ಈ ದಾರಿ ಬಿಟ್ಟು ಅಥವಾ ಈ ದಾರಿ ಬಿಡಲು ಕಾರಣವಾಗಿರುವ ಜಾಗತೀಕರಣದ ಆಮಿಶಗಳಿಗೆ ಸಿಕ್ಕಿ ಎಷ್ಟೇ 'ಸುಖ' ಪಟ್ಟರೂ ಅವನಿಗೆ ಶಾಂತಿಯಿರಲಾರದು. ಏಕೆಂದರೆ ಅವನು ಆ ಮೂಲಕ ಒಂದು ಅಸ್ಥಿರ ಮತ್ತು ಅಶಾಂತ ಸಮಾಜವನ್ನು ಸೃಷ್ಟಿಸುತ್ತಿರುತ್ತಾನೆ.

ಈ ಕಾರಣದಿಂದಾಗಿಯೇ ಕಣ್ಮುಂದೆಯೇ ಕನ್ನಡ ಶಾಲೆಗಳು ಮುಚ್ಚಿಹೋಗುತ್ತಿದ್ದರೂ, ಕನ್ನಡಿಗರು ಸೊಲ್ಲೆತ್ತಲಿಲ್ಲ. ಆದರೆ ೩೦೦೦ ಕನ್ನಡ ಶಾಲೆಗಳು ಮುಚ್ಚುತ್ತಿರುವುದು ಒಂದು ದೊಡ್ಡ ಸುದ್ದಿಯಾದಾಗ ಜನ ಬೀದಿಗೆ ಬಂದರು, ಇದು ಅನ್ಯಾಯ, ಅಕ್ರಮ ಎಂದು ಕೂಗಿದರು. ಇದರಿಂದ ಇವರೇನೂ ಒಂದು ಪೈಸೆಯನ್ನು ಕಳೆದುಕೊಳ್ಳುವುದಿಲ್ಲ. ಏಕೆಂದರೆ ಇವರು ಮಕ್ಕಳನ್ನು ಕನ್ನಡ ಶಾಲೆಗೇ ಕಳುಹಿಸಿಲ್ಲ. ಇವರೆಲ್ಲಾ ತಮ್ಮ ಮಕ್ಕಳನ್ನು ಕನ್ನಡ ಶಾಲೆಗೆ ಕಳುಹಿಸಿದ್ದರೆ, ಕನ್ನಡ ಶಾಲೆಗಳು ಮುಚ್ಚುತ್ತಿರಲಿಲ್ಲ. ಕನ್ನಡ ಚಳುವಳಿಯ ವಾಟಾಳ್ ನಾಗರಾಜ್ ಆಗಲೀ, ನಾರಾಯಣ ಗೌಡ ಆಗಲೀ ಮತ್ತೊಬ್ಬರು, ಮಗದೊಬ್ಬರಾಗಲೀ ಸರ್ಕಾರ ವಿಶ್ವಬ್ಯಾಂಕ್ ಪ್ರೇರಿತ ಕನ್ನಡದ ಮೇಲಿನ ಇಂಗ್ಲಿಷ್ ಸವಾರಿ ಕಾರ್ಯಕ್ರಮಕ್ಕೆ ಪೀಠಿಕೆಯಾಗಿ ಒಂದನೇ ತರಗತಿಯಿಂದಲೇ ಇಂಗ್ಲೀಷ್ ಕಲಿಸಬೇಕೆಂದು ಹೊರಟಾಗ ಯಾರೊಬ್ಬರೂ ಬೀದಿಗೆ ಬರಲಿಲ್ಲ ಅಥವಾ ರಾಜ್ಯದ ಎಲ್ಲ ಶಾಲೆಗಳಲ್ಲಿ ಐದನೇ ತರಗತಿಯವರೆಗೆ ಕನ್ನಡ ಮಾಧ್ಯಮ ಕಡ್ಡಾಯ ಮಾಡಬೇಕೆಂದು ಸರ್ಕಾರ ಆಜ್ಞೆ ಹೊರಡಿಸಿದಾಗ, ಅದರ ವಿರುದ್ಧ ಇಂಗ್ಲೀಷ್ ಶಾಲೆಗಳು ದೊಡ್ಡ ಲಾಬಿ ಅಥವಾ ದೊಡ್ಡ ಆಂದೋಲನ ನಡೆಸಿದಾಗ ಅದನ್ನು ಒಬ್ಬ ಕನ್ನಡ ಚಳುವಳಿಗಾರನೂ ಪ್ರತಿಭಟಿಸಲಿಲ್ಲ. ಇದು ಇಂದಿನ ಕನ್ನಡ ಅಸ್ಮಿತೆ ಇಂದು ಎದುರಿಸುತ್ತಿರುವ ಬಿಕ್ಕಟ್ಟು.

ಇದಕ್ಕೆ ಕನ್ನಡದ ಕೆಲವು ಲೇಖಕರ ಮತ್ತು ಬುದ್ಧಿಜೀವಿಗಳ ಕುಮ್ಮಕ್ಕು ಇದೆ. ಇವರು ಶೆಟ್ಟರ್‌ರವರು ಕನ್ನಡ ಸಂಸ್ಕೃತಿ ಚರಿತ್ರೆಯ ಸಂಬಂಧವಾಗಿ ಕೊಟ್ಟ ಒಂದು ಹೊಸನೋಟವನ್ನು ತುಂಬಾ ಅಶ್ಲೀಲವಾಗಿ ಬಳಸಿಕೊಂಡರು. ಕನ್ನಡ ಭಾಷೆ ಮತ್ತು ಸಂಸ್ಕೃತಿ ಎಂಬುದು ತನ್ನ ಸೋದರ ದ್ರಾವಿಡ ಭಾಷೆ-ಸಂಸ್ಕೃತಿಗಳಿಗಿಂತ ಸಂಸ್ಕೃತದ ಜೊತೆಗೆ ಹೆಚ್ಚು ಬೆರೆತು ತನ್ನ ಚರಿತ್ರೆಯನ್ನು ಕಟ್ಟಿಕೊಂಡ ಭಾಷೆ, ಸಂಸ್ಕೃತಿ ಎಂಬ ಶೆಟ್ಟರ್ ಅವರ ಅಭಿಪ್ರಾಯವನ್ನು, ಕನ್ನಡವೆಂಬುದು ಒಂದು ಮೇಲ್ವರ್ಗದವರ, ಮೇಲ್ಜಾತಿಯವರ ಮಾರ್ಗದರ್ಶನದಲ್ಲಿ, ಯಜಮಾನಿಕೆಯಲ್ಲಿ ಬೆಳೆದ ಭಾಷೆ. ಅದರಿಂದಾಗಿ ಇದು ಹಿಂದುಳಿದವರಿಗೆ, ಶೂದ್ರರಿಗೆ, ದಲಿತರಿಗೆ ಅನುಕೂಲವಲ್ಲದ ಭಾಷೆ ಎಂದೆಲ್ಲ ಅರ್ಥೈಸಿದರು. ಯಾರು ಹತ್ತಿಪ್ಪತ್ತು ವರ್ಷಗಳ ಹಿಂದೆ, ಶಿಕ್ಷಣ ಕ್ರಮದಲ್ಲಿ ಇಂಗ್ಲೀಷ್ ಇರುವವರೆಗೆ ಶೂದ್ರರಿಗೆ, ದಲಿತ ವರ್ಗದವರಿಗೆ ಮೋಕ್ಷವಿಲ್ಲ ಎಂದು ಹೇಳುತ್ತಿದ್ದರೋ, ಅದೇ ಜನ ಇಂದು ಕನ್ನಡ ಕಲಿತರೆ ಇವರಿಗೆ ಮುಕ್ತಿಯಿಲ್ಲ ಎಂದು ಹೇಳಲು ಪ್ರಾರಂಭಿಸಿದ್ದಾರೆ. ಇವರ ಪ್ರಕಾರ ಅಂಬೇಡ್ಕರ್ ಎಲ್ಲೋ ಒಂದು ಕಡೆ "ಇಂಗ್ಲೀಷ್ ಎಂಬುದು ಸಿಂಹಿಣಿಯ ಹಾಲಿನಂತೆ" ಎಂದಿದ್ದಾರಂತೆ. ಅದಕ್ಕೆ ಇವರು ಸಿಂಹಿಣಿಯ ಹಾಲು ಕುಡಿಯಿರಿ ಶಕ್ತಿವಂತರಾಗಿ ಎಂದು ದಲಿತರಿಗೆ ಹಿಂದುಳಿದ ವರ್ಗದವರಿಗೆ ಹೇಳುತ್ತಿದ್ದಾರೆ. ಕನ್ನಡ ಭಾಷಾ ಪರಂಪರೆಯಲ್ಲಿ ಜಾತಿ ಶ್ರೇಣೀಕರಣದ ಅವಮಾನಗಳಿಗೆ, ನೆನಪುಗಳಿವೆಯಂತೆ. ಇಂತಹವರೆಲ್ಲರೂ ನಮ್ಮಲ್ಲಿ ಭಾಷಾ ಪಂಡಿತರು, ಭಾಷಾ ವಿಜ್ಞಾನಿಗಳು ಮತ್ತು ಸಂಸ್ಕೃತಿ ಚಿಂತಕರು! ಕನ್ನಡ ಭಾಷಾ ಚರಿತ್ರೆಯಲ್ಲಿ, ಸಂಸ್ಕೃತಿ ಚರಿತ್ರೆಯಲ್ಲಿ, ಸಾಹಿತ್ಯ ಚರಿತ್ರೆಯಲ್ಲಿ ಜಾತಿ ಶ್ರೇಣೀಕರಣದ ನೆನಪುಗಳಿವೆ

ನಿಜ. ಅದರೊಟ್ಟಿಗೆ ಇದರ ವಿರುದ್ಧ ನಡೆದ ಹೋರಾಟಗಳ ನೆನಪುಗಳೂ ಕೂಡ ಇವೆ. ಕನ್ನಡದ ವಿಶಿಷ್ಟ ಶಕ್ತಿಯೂ ಅದೇ ಆಗಿದೆ.

ಕಲ್ಬುರ್ಗಿಯವರು ಬೆಳಿಗ್ಗೆ ಉದ್ಘಾಟನಾ ಭಾಷಣದಲ್ಲಿ 'ಕನ್ನಡ ಚರಿತ್ರೆ' ಎಂಬುದು ಕಾದಾಟ ಮತ್ತು ಹೋರಾಟಗಳ ನೆನಪುಗಳು ಮತ್ತು ಹೋರಾಟಗಳ ಚರಿತ್ರೆ ಎಂದು ಹೇಳುತ್ತಿದ್ದರು. ಕನ್ನಡ ಚರಿತ್ರೆ ಅನೇಕ ಸ್ಥಿತ್ಯಂತರಗಳನ್ನು, ನೆನಪುಗಳನ್ನು ತನ್ನ ಉಡಿಯಲ್ಲಿ ಕಟ್ಟಿಕೊಂಡು ಬಂದಿದೆ. ಅದು ಯಾವುದೇ ಭಾಷೆಗೆ ಸಹಜ ಕೂಡ. ಆದರೆ ಇಂದು ಅದನ್ನು ತಮ್ಮ ರಾಜಕಾರಣಕ್ಕೆ ಬಳಸಿಕೊಂಡು ಕನ್ನಡವನ್ನು ಬದಿಗೆ ತಳ್ಳುವ ಮತ್ತು ಕನ್ನಡದಿಂದ ಮುಕ್ತಿಯಿಲ್ಲ ಎಂದು ಹೇಳುವ ಧೈರ್ಯ ಕೆಲವರಿಗೆ ಬಂದಿದೆ. ಇದು ಕನ್ನಡ ಭಾಷಾ ಸಂಸ್ಕೃತಿಯ ದುರಂತ. ಇದರಿಂದ ಬಿಡುಗಡೆ ಇಲ್ಲವೇ ಎಂದು ಕೇಳುವುದಾದರೆ ಇದು ಬಹಳ ದೊಡ್ಡ ಪ್ರಶ್ನೆ. ಏಕೆಂದರೆ ಇದು ಅಂತಿಮವಾಗಿ ಜೀವನ ದೃಷ್ಟಿಗೆ ಸಂಬಂಧಿಸಿದ ಪ್ರಶ್ನೆ. ಕನ್ನಡಕ್ಕೆ ಯಾಕೆ ಈ ರೀತಿಯ ಕುತ್ತು ಬಂದಿದೆ ಎಂದರೆ ನಾವು ಬದುಕಿನ ದೃಷ್ಟಿಯನ್ನೇ, ಬದುಕಿನ ಸಾರ್ಥಕತೆಯ ಅರ್ಥವನ್ನೇ ವಿಕ್ಷಿಪ್ತಗೊಳಿಸಿಕೊಂಡಿದ್ದೇವೆ.

ರಾಘವೇಂದ್ರರಾವ್ ಹೇಳುತ್ತಿದ್ದರು, ಕೊಳ್ಳು, ಕೊಳ್ಳು, ಕೊಳ್ಳು..... ಗಾಂಧಿಯವರು ಆಧುನಿಕ ನಾಗರೀಕತೆಯನ್ನು ಒಂದು ರೋಗ ಎಂದು ಕರೆಯುತ್ತಿದ್ದರು. ಇದು ಶರೀರ ಸುಖದ ನಾಗರೀಕತೆ ಎಂದು ಕರೆಯುತ್ತಿದ್ದರು. ಇಂದಿನ ಜಾಗತೀಕರಣದ ಸಂದರ್ಭದಲ್ಲಿ ಅದು ಉತ್ತುಂಗ ಶಿಖರವನ್ನು ಮುಟ್ಟಿದೆ. ಇಂದು ಎಷ್ಟು ಹಡಬೆ ಹಣ ಕೆಲವರಲ್ಲಿ ಸೇರಿದೆ ಎಂದರೆ, ಅವರೇ ಇಂದು ಎಲ್ಲರಿಗೂ ಆದರ್ಶವಾಗಿದ್ದಾರೆ. ಏನಾದರೂ ಮಾಡು, ಎಂತಾದರೂ ಮಾಡು ಹಣ ಮಾಡು, ಅದನ್ನು ತಡೆಯುವರ್‍ಯಾರೂ ಇಲ್ಲ. ಹೆಚ್ಚು ಎಂದರೆ, ಅದೂ ಅದೃಷ್ಟ ಕೆಟ್ಟರೆ ಮಾತ್ರ ಎಲ್ಲ ಸುಖಗಳನ್ನೂ ಅನುಭವಿಸಿದ ಮೇಲೆ ಸ್ವಲ್ಪ ದಿನ ಜೈಲಿಗೆ ಹೋಗಬೇಕಾಗುತ್ತದೆ ಅಷ್ಟೇ. ಅದಕ್ಕೂ ಅವರು ತಯಾರಾಗಿದ್ದಾರೆ. ಜೈಲಿಗೆ ಹೋದ ಮಾತ್ರಕ್ಕೆ, ಅಲ್ಲಿಂದ ಬಿಡಿಸಿಕೊಳ್ಳುವುದು ಗೊತ್ತಿರುವುದರಿಂದ ಅವರೇನೂ ಅಷ್ಟು ಚಿಂತಿಸುವುದಿಲ್ಲ. ನಮ್ಮಲ್ಲಿ ಅಂತಹ ಕಾನೂನುಗಳೂ ಸಹ ಇವೆ.

ಇಂದು ನಮ್ಮ ಸಂವಿಧಾನ ನಿಜವಾದ ಅಗ್ನಿಪರೀಕ್ಷೆಗೆ ಒಳಗಾಗಿದೆ. ಇಂದು ನಾವು ಸಂವಿಧಾನವನ್ನು ಮೂಲಭೂತವಾಗಿ ಒಂದು ವಿಷಯದಲ್ಲಿ ಪ್ರಶ್ನಿಸಬೇಕೆಂದು ಇಷ್ಟಪಡುತ್ತೇನೆ. ಅದು ಭಾರತದ ಒಕ್ಕೂಟವನ್ನು ಹೆಸರಿಗೆ ಮಾತ್ರ ಒಕ್ಕೂಟವಾಗಿ ಉಳಿಸಿ, ಏಕಾತ್ಮಕ ರಾಷ್ಟ್ರವನ್ನಾಗಿ ಮಾಡಿ, ಪ್ರಾದೇಶಿಕ ಭಾಷಾ ಸಂಸ್ಕೃತಿಯನ್ನು ಬದಿಗೆ ತಳ್ಳುತ್ತಿದೆ. ಒಕ್ಕೂಟ ಸಂಸ್ಕೃತಿಯಾಗಿ ಈ ಭಾರತ ಈಗ ಉಳಿದಿಲ್ಲ. ಭಾರತ ನಿಜವಾದ ಒಕ್ಕೂಟವಾದಾಗ ಮಾತ್ರ, ಪ್ರಾದೇಶಿಕ ಸಂಸ್ಕೃತಿ ಬೆಳೆದಾಗ ಮಾತ್ರ, ಪ್ರಾದೇಶಿಕ ಭಾಷಾ ಸಂಸ್ಕೃತಿ, ಕನ್ನಡ ಸಂಸ್ಕೃತಿ ಎಂದರೆ ಕನ್ನಡದ್ದೊಂದೇ ಅಲ್ಲ, ಕನ್ನಡ ಕುಟುಂಬ ಎಲ್ಲಾ ತನ್ನ ಭಾಷಾ ಸಹವಾಸಿಗಳೊಂದಿಗೆ ಬೆಳೆಯುವಂತಹ ಸಂಸ್ಕೃತಿಯನ್ನು ಕಟ್ಟಿಕೊಂಡಾಗ ಮಾತ್ರ ಅದೊಂದು

ಸುಭದ್ರ, ಸುಸ್ಥಿರ ಮತ್ತು ನೆಮ್ಮದಿಯ ರಾಜಕೀಯ ಘಟಕವಾಗಿ ಉಳಿಯಲು ಸಾಧ್ಯ. ಏಕೆಂದರೆ ನಾವಿಂದು ಜಾಗತೀಕರಣವೆಂಬ ದೊಡ್ಡ ಸಾಂಸ್ಕೃತಿಕ ಕಂದರದ ಬಳಿ ನಿಂತಿದ್ದೇವೆ. ಇದನ್ನು ದಾಟಲು ನಮಗೆ ನಮ್ಮ ಭಾಷೆ, ಸಂಸ್ಕೃತಿಯಿಂದ ಮಾತ್ರ ಪಡೆಯಬಲ್ಲ ವಿವೇಕ ಅಗತ್ಯವಾಗಿದೆ. ಆ ವಿವೇಕ ಮಿತಿಗಳುಳ್ಳ ಬದುಕು ಮಾತ್ರ ಸಾಧ್ಯ ಮಾಡುವ ಶಾಂತಿಯುತ ಸಹಬಾಳ್ವೆ. ಹಾಗಾಗಿ ನಾವು ನಮ್ಮ ಜೀವನ ಶೈಲಿ, ಕ್ರಮ ಮತ್ತು ದೃಷ್ಟಿಗಳನ್ನು ಬದಲಾಯಿಸಿಕೊಳ್ಳಲು ನಿಶ್ಚಯಿಸದ ಹೊರತು ಕನ್ನಡಕ್ಕೆ ಮುಕ್ತಿಯಿಲ್ಲ. ಕನ್ನಡ ಭಾಷಾ ಸಂಸ್ಕೃತಿ ಬಿಕ್ಕಟ್ಟಿನಲ್ಲಿಯೇ ಇರುತ್ತದೆ. ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ, ನಮಸ್ಕಾರ.

(ಆಳ್ವಾಸ್ ನುಡಿಸಿರಿ–೨೦೧೨)

ಹೆಗ್ಗೋಡಿನ ನೀನಾಸಮ್: ಕೆಲವು ಅನಿಸಿಕೆಗಳು

ಸುಮಾರು ಎರಡು ತಿಂಗಳ ಹಿಂದೆ ಅಕ್ಷರ ಅವರು ನನ್ನನ್ನು ನೀನಾಸಮ್ ಬಗ್ಗೆ ಅನಿಸಿಕೆಗಳನ್ನು ಹೇಳಲು ಕೇಳಿಕೊಂಡಾಗ ನಾನೊಂದು ಕ್ಷಣ ಬೆಚ್ಚಿಬಿದ್ದೆ. ಕಾರಣ, ನೀನಾಸಮ್‌ನ ಗಾತ್ರ ಹಾಗೂ ನೀನಾಸಮ್ ಎದುರಿಗೆ ನನ್ನ ಗಾತ್ರದ ಸ್ಪಷ್ಟ ಕಲ್ಪನೆ ನನಗಿತ್ತು. ನೀನಾಸಮ್ ಜೊತೆಗೆ ನನಗೆ ಅಂತಹ ಘನಿಷ್ಟವಾದ ಸಂಬಂಧವೇನೂ ಇಲ್ಲ. ಆದರೆ ದೀರ್ಘಕಾಲಿಕವಾದ ಸಂಬಂಧವಿದೆ. ಅಲ್ಲದೆ ನೀನಾಸಮ್‌ನ ಬಹುಪಾಲು ಚಟುವಟಿಕೆಗಳಲ್ಲಿ ನಾನು ಭಾಗವಹಿಸಿದ ಅನುಭವವೂ ಇಲ್ಲ.

ನನ್ನ ಮತ್ತು ನೀನಾಸಮ್ ಜತೆಗಿನ ಸಂಬಂಧಕ್ಕೆ ಹಿನ್ನೆಲೆಯಾಗಿ ಹೇಳುವುದಾದರೆ, ಸೆಂಟ್ರಲ್ ಕಾಲೇಜಿನಲ್ಲಿ ನಾನು ನನ್ನ ಕುಟುಂಬದ ಒತ್ತಾಯಕ್ಕೆ ಸಿಕ್ಕು ವಿಜ್ಞಾನದ ಅಭ್ಯಾಸ ಮಾಡುತ್ತಿರುವಾಗ–ನಾನು ನನ್ನ ಮನೋವೃತ್ತಿಯಿಂದ ವಿಜ್ಞಾನದ ವಿದ್ಯಾರ್ಥಿಯೇ ಅಲ್ಲ–ಅದರ ಒತ್ತಡಗಳಿಂದ ಪಾರಾಗಲು ಸಾಹಿತ್ಯ ಮತ್ತು ಸಂಸ್ಕೃತಿಗಳ ಅಧ್ಯಯನದ ಕಡೆ ಆಸಕ್ತಿ ಬೆಳೆಸಿಕೊಂಡೆ. ಅದು ಹೊಸ ಸಾಹಿತ್ಯ–ಸಂಸ್ಕೃತಿ ಚಳುವಳಿಗಳ ಏರುಗಾಲ. ಅಂದರೆ ಹೊಸ ಸಾಹಿತ್ಯ, ಹಾಗೆಯೇ ಹೊಸ ನಾಟಕಗಳ, ಹೊಸ ಸಿನಿಮಾಗಳ ಕಾಲವದಾಗಿತ್ತು. ಹೊಸ ಹೊಸ ರೀತಿಯ ಸಿನಿಮಾಗಳು ಬೆಂಗಳೂರಿಗೆ ಕಾಲಿಡಲು ಪ್ರಾರಂಭವಾಗಿತ್ತು. ಸುಚಿತ್ರಾ ಫಿಲ್ಮ್ ಸೊಸೈಟಿ ಪ್ರಾರಂಭವಾಗಿತ್ತು. ಸತ್ಯಜಿತ್ ರಾಯ್ ಮತ್ತು ಋತ್ವಿಕ್ ಘಟಕ್‌ರ ಜೊತೆಗೆ ಮಣಿ ಕೌಲ್, ಮೃಣಾಲ್‌ಸೇನ್ ಹೆಸರುಗಳು ಪ್ರಚಲಿತಗೊಳ್ಳುತ್ತಿದ್ದವು. ಬಿ.ವಿ. ಕಾರಂತರು ದೆಹಲಿಯಿಂದ ಬಂದು ಬೆಂಗಳೂರಿನಲ್ಲಿ ನಾಟಕವನ್ನು ಮಾಡಿಸಲು ಪ್ರಾರಂಭಿಸಿದ್ದರು, ಇನ್ನೊಂದೆಡೆ ಲಂಕೇಶ್, ತೇಜಸ್ವಿ ಮುಂತಾದವರು ಅಡಿಗರ ನಾಯಕತ್ವದಲ್ಲಿ ಭಿನ್ನಾಭಿಪ್ರಾಯವನ್ನು ಹೊಂದಿದವರಾಗಿ ಹೊಸ ನೆಲೆಗಳ ಸಾಂಸ್ಕೃತಿಕ ಚರ್ಚೆಗಳನ್ನು ಪ್ರಾರಂಭಿಸಿದ್ದರು. ಸೆಂಟ್ರಲ್ ಕಾಲೇಜಿನ ಆವರಣದಲ್ಲಿ ಎಂ.ಡಿ. ನಂಜುಂಡಸ್ವಾಮಿಯವರ

ಸಮಾಜವಾದಿ ಯುವಜನ ಸಭಾದ ಚಟುವಟಿಕೆಗಳು–ಅವುಗಳೊಂದಿಗೆ ನಾನು ಆಗ ಗುರುತಿಸಿಕೊಳ್ಳದಿದ್ದರೂ–ಆರಂಭವಾಗಿದ್ದವು. ಇಂತಹ ಸಂದರ್ಭದಲ್ಲಿ ಸೆಂಟ್ರಲ್ ಕಾಲೇಜಿನ ಲೈಬ್ರರಿಗೆ ಬರುತ್ತಿದ್ದ 'ಸಾಕ್ಷಿ' ನನ್ನ ಸಾಹಿತ್ಯ ಜೀವನದ ಬಾಗಿಲನ್ನು ತೆರೆಯಿತು. ಅದನ್ನು ಓದಲು ಸಾಹಿತ್ಯ ವಿದ್ಯಾರ್ಥಿಗಳಿಗಿಂತ ಹೆಚ್ಚಾಗಿ ನಾವು ಕೆಲವರು ವಿಜ್ಞಾನದ ವಿದ್ಯಾರ್ಥಿಗಳು ಮುಗಿಬೀಳುತ್ತಿದ್ದೆವು. ಹೀಗೆ 'ಸಾಕ್ಷಿ'ಯ ಮೂಲಕ ನನಗೆ ನೀನಾಸಮ್‌ನ ಪರಿಚಯವಾಯಿತು.

'ಸಾಕ್ಷಿ'ಯಲ್ಲಿ ನನಗೆ ಆಗ ವಿಶೇಷವಾದ ಆಸಕ್ತಿ ಕೆರಳಿಸಿದ್ದು ಸಿನೆಮಾ ಕುರಿತು ಬರಲಾರಂಭಿಸಿದ್ದ ಲೇಖನಗಳು. ನಾನು ನಾಟಕದ ಕುಟುಂಬದ ಹಿನ್ನೆಲೆಯವನಾಗಿದ್ದರೂ–ನನ್ನ ತಂದೆ ಕೇಳಿಕೆ–ನಾಟಕಗಳ ಮಾಸ್ತರರಾಗಿದ್ದರೂ–ನನ್ನ ಆಸಕ್ತಿ ಬಾಲ್ಯದಿಂದ ಸಿನೆಮಾ ಕಡೆಗೇ ಇದ್ದು, ಈ ಸಂದರ್ಭದಲ್ಲೆ ರೇ ಅವರ 'ಸೀಮಾಬದ್ಧ' ಚಿತ್ರ ನೋಡಿ, ಸಿನೆಮಾಗಳು ಹೀಗೂ ಇರಬಹುದಲ್ಲಾ ಎಂದು ನಾನು ಬೆರಗುಗೊಂಡೆನೆಂದೇ ಹೇಳಬೇಕು. ನಂತರ ನಾನು 'ಸುಚಿತ್ರಾ'ದಲ್ಲಿ ಅತಿಥಿ ಪ್ರೇಕ್ಷಕನಾಗಿ ಅನೇಕ ವಿದೇಶಿ ಚಿತ್ರಗಳನ್ನು ನೋಡಿದೆ. 'ಬೈಸಿಕಲ್ ಥೀವ್ಸ್' ನನಗೆ ಚೆನ್ನಾಗಿ ನೆನಪಿರುವ ಚಿತ್ರ, ಜೊತೆಗೆ ಮೃಣಾಲ್ ಸೇನರ, ಸತ್ಯಜಿತ್ ರೇಯವರ ಅನೇಕ ಹೊಸ ಹೊಸ ಸಿನೆಮಾಗಳನ್ನು ನೋಡಿದೆ. ಇವೆಲ್ಲಾ ನನ್ನಲ್ಲಿ ಹೊಸ ಬಗೆಯ ತಳಮಳ ಮತ್ತು ಕುತೂಹಲಗಳು ಮೂಡಲು ಕಾರಣವಾಗಿದ್ದವು. ಆ ಸಮಯಕ್ಕೆ ಸರಿಯಾಗಿ ಸುಬ್ಬಣ್ಣನವರು ಅಡಿಗರ ಸಂಪಾದಕೀಯದ ಸಾರಥ್ಯದಲ್ಲಿ 'ಸಾಕ್ಷಿ'ಯ ಸಿನೆಮಾ ಸಂಚಿಕೆ ತರಲು ಹೊರಟಿದ್ದರು. ಆಗ ಸಣ್ಣ ಪುಟ್ಟ ಕತೆ–ಕವನಗಳನ್ನು ಬರೆದು ಅಲ್ಲಿಲ್ಲಿ ಪ್ರಕಟಿಸಿಕೊಳ್ಳುವ ಸಾಹಸ ಮಾಡುತ್ತಿದ್ದ ಯುವಬರಹಗಾರನಾಗಿದ್ದ ನಾನು 'ಸಾಕ್ಷಿ'ಗೆ 'ಹೊಸ ಸಿನೆಮಾ ಹೊಸ ಭಾಷೆ' ಎಂದೇನೋ ಹೆಸರಿನ–ಹೆಸರು ಸ್ಪಷ್ಟವಾಗಿ ನೆನಪಿಲ್ಲ–ಒಂದು ಲೇಖನವನ್ನು ಬರೆದು ಕಳಿಸಿದೆ. ಇದಕ್ಕೆ ಸುಬ್ಬಣ್ಣನವರಿಂದ ನನಗೆ ಆಗ ರೋಮಾಂಚನವನ್ನೇ ಉಂಟು ಮಾಡಿದ ಎಂದು ಹೇಳಬಹುದಾದ ಉತ್ತರ ಬಂತು: 'ಹೊಸ ರೀತಿಯ ಸಿನೆಮಾಗಳ ಬಗ್ಗೆ ಇಂದು ಯಾರೂ ಬರೆಯುವವರೇ ಇಲ್ಲ. ಅಭಿಪ್ರಾಯಗಳನ್ನು ಹಂಚಿಕೊಳ್ಳುವವರೇ ಇಲ್ಲ, ನೀವಾರೋ ಗೊತ್ತಿಲ್ಲ, ಲೇಖನ ತುಂಬಾ ಚೆನ್ನಾಗಿದೆ, ನಿಮ್ಮ ಲೇಖನವನ್ನು ಪ್ರಕಟಿಸುತ್ತಿದ್ದೇನೆ' ಎಂದು. ಇದು ಸಾಹಿತ್ಯ ಪತ್ರಿಕೆಯಲ್ಲಿ–ಅಥವಾ ಸಾಹಿತ್ಯ ಪಾಂಡಿತ್ಯದ ಪತ್ರಿಕೆ ಎನ್ನಬಹುದೇನೋ ಗೊತ್ತಿಲ್ಲ–ಪ್ರಕಟವಾದ ನನ್ನ ಮೊದಲ ಲೇಖನವಾಗಿತ್ತು. ಈ ಲೇಖನ ಪ್ರಕಟವಾದ ನಂತರ ಆಗಾಗ್ಗೆ ಸುಬ್ಬಣ್ಣನವರಿಗೆ ನಾನು ಪತ್ರಗಳನ್ನು ಬರೆಯುತ್ತಿದ್ದೆ. ಅವರಿಂದಲೂ ತಪ್ಪದೆ ಉತ್ತರ ರೂಪದಲ್ಲಿ ನನ್ನ ಓದು–ಅಭಿರುಚಿಗಳನ್ನು ವಿಚಾರಿಸಿಕೊಂಡ ಪತ್ರಗಳು ಬರುತ್ತಿದ್ದವು.

೧೯೭೩ರಲ್ಲಿ ಗಣಿತಶಾಸ್ತ್ರದಲ್ಲಿ ಎಂ.ಎಸ್.ಸಿ ಪದವಿ ಮುಗಿಸಿದ ನಾನು ಶಾಶ್ವತವಾಗಿ ವಿಜ್ಞಾನಕ್ಕೆ ಬೆನ್ನು ಮಾಡಿ ಮರುವರ್ಷ ದೆಹಲಿಯ ಆಕಾಶವಾಣಿ ಕೇಂದ್ರದಲ್ಲಿ ಕನ್ನಡ ವಾರ್ತಾವಾಚಕನಾಗಿ ಕೆಲಸಕ್ಕೆ ಸೇರಿಕೊಂಡೆ. ಆಗ ಸುಬ್ಬಣ್ಣ 'ದೆಹಲಿ ಫಿಲ್ಮ್ ಸೊಸೈಟಿಗೆ ಒಂದು ಪತ್ರವನ್ನು ಕೊಡುತ್ತೇನೆ. ಅಲ್ಲಿ ನೀವು ಸಿನೆಮಾಗಳನ್ನು ನೋಡಬಹುದು' ಎಂದು

ಒಂದು ಪತ್ರದಲ್ಲಿ ತಿಳಿಸಿದರು. ಹೀಗೆ ದೆಹಲಿ ಫಿಲ್ಮ್ ಸೊಸೈಟಿ ಹಾಗೂ ಬಂಗಾಳಿ ಫಿಲ್ಮ್ ಸೊಸೈಟಿಗಳ ಸದಸ್ಯನಾದೆ, ಅಲ್ಲಿ ಜಗತ್ತಿನ ಅತ್ಯುತ್ತಮ ಚಿತ್ರಗಳನ್ನು ವೀಕ್ಷಿಸಿದೆ. ಬಂಗಾಳಿ ಫಿಲ್ಮ್ ಸೊಸೈಟಿಯಲ್ಲಿ ಋತ್ವಿಕ್ ಘಟಕ್‌ರ ಎಲ್ಲ ಮತ್ತು ರೇ ಅವರ ಆವರೆಗಿನ ಎಲ್ಲ ಚಿತ್ರಗಳನ್ನೂ ನೋಡಿದ್ದು ಒಂದು ಅಪೂರ್ವ ಅನುಭವ. ಅದೇ ಸಮಯಕ್ಕೆ ರಾಷ್ಟ್ರಾದ್ಯಂತ 'ತುರ್ತು ಪರಿಸ್ಥಿತಿ' ಘೋಷಣೆಯಾಯಿತು. ಹಾಗೆಯೇ ತುರ್ತು ಪರಿಸ್ಥಿತಿ ವಿರೋಧಿ ಚಳುವಳಿಯೂ ಆರಂಭವಾಗಿದ್ದು ನಾನೂ ಆಗ ಜವಹರಲಾಲ್ ನೆಹ್ರೂ ವಿಶ್ವವಿದ್ಯಾಲಯದಲ್ಲಿದ್ದ ಕರ್ನಾಟಕದ ನನ್ನ ಸಮಾನ ಮನಸ್ಕ ಗೆಳೆಯರ ಮೂಲಕ ಈ ಚಳುವಳಿಯೊಂದಿಗೆ ಗುರುತಿಸಿಕೊಳ್ಳಲಾರಂಭಿಸಿದ್ದೆ. ಈ ಸಮಯದಲ್ಲಿ ಸುಬ್ಬಣ್ಣನವರು ನನಗೆ 'ಗುಪ್ತ ಸಾಹಿತ್ಯ'ವೇನಾದರೂ ಇದ್ದರೆ ಕಳಿಸಲು ಪತ್ರ ಬರೆಯುತ್ತಿದ್ದರು. ನನಗೆ ಇದು ಮೊದಲು ಅರ್ಥವಾಗಲಿಲ್ಲ. ಅದೇ ಸಮಯಕ್ಕೆ 'ಜೆ.ಪಿ. ಯವರ 'ಪ್ರಿಸನ್ ಡೈರಿ' ಗುಪ್ತವಾಗಿ ಸಂಚಲನೆಯಾಗುತ್ತಿದೆಯಂತೆ. ನೀವು ಗಮನಿಸಿದ್ದೀರಾ?' ಎಂದು ತೇಜಸ್ವಿಯವರಿಂದ ಪತ್ರವೊಂದು ಬಂತು. ಆಗ ಗುಪ್ತ ಸಾಹಿತ್ಯವೆಂದರೇನೆಂದು ತಿಳಿದು, ಅಷ್ಟು ಹೊತ್ತಿಗೇ ಆ 'ಡೈರಿ'ಯ ಅನುವಾದವನ್ನು ಪ್ರಾರಂಭಿಸಿದ್ದ ನಾನು ಅದರ ಕೆಲ ಪುಟಗಳನ್ನೂ, ಅವುಗಳೊಂದಿಗೆ ನನಗೆ ದೊರೆತ ಒಂದೆರಡು ಕರಪತ್ರಗಳೊಂದಿಗೆ ಸುಬ್ಬಣ್ಣನವರಿಗೆ ಕಳಿಸಲು ಪ್ರಾರಂಭಿಸಿದೆ. 'ತುರ್ತು ಪರಿಸ್ಥಿತಿ'ಯ ನಂತರದಲ್ಲಿ ನೆಲಮನೆ ಪ್ರಕಾಶನದಿಂದ 'ಜೆಪಿ ಸೆರೆಮನೆಯ ದಿನಚರಿ' ಪ್ರಕಟವಾಯಿತು. ಹೀಗೆ ನಾನು ನೀನಾಸಮ್‌ಗೆ ನೇರವಾಗಿ ಭೇಟಿ ಕೊಟ್ಟಿರದೇ ಇದ್ದರೂ ಸುಬ್ಬಣ್ಣನವರೊಡನೆ ಬೆಳೆಸಿಕೊಂಡಿದ್ದ ಈ ಪತ್ರ ವ್ಯವಹಾರ ನೀನಾಸಮ್‌ನೊಡನೆ ನನ್ನ ಸಂಬಂಧ ಪರೋಕ್ಷವಾಗಿಯಾದರೂ ಸ್ಥಾಪಿತವಾಗಿತ್ತು.

ನಂತರದ ವರ್ಷಗಳಲ್ಲಿ–೧೯೮೨ರ ಹೊತ್ತಿಗೆ–ಆಕಾಶವಾಣಿಯಲ್ಲೇ ನಾನು ಕಾರ್ಯಕ್ರಮ ನಿರ್ವಾಹಕನಾಗಿ ಆಯ್ಕೆಯಾದೆ. ಆ ಹುದ್ದೆ ವಹಿಸಿಕೊಳ್ಳಲು ಭದ್ರಾವತಿ ಆಕಾಶವಾಣಿಗೆ ಬರುವ ಮುನ್ನ ದೆಹಲಿಯ ನನ್ನ ಕೊನೆಯ ಕೆಲ ವರ್ಷಗಳಲ್ಲಿ ರಾಷ್ಟ್ರೀಯ ನಾಟಕ ಶಾಲೆಯ ಪಕ್ಕದಲ್ಲಿಯೇ ನನ್ನ ಕೊಠಡಿಯಿದ್ದದ್ದರಿಂದ ಕರ್ನಾಟಕ ನಾಟಕ ಲೋಕದ ದಿಗ್ಗಜರುಗಳೊಡನೆಯ ಸಂಪರ್ಕ ಸಾಧ್ಯವಾಗಿತ್ತು. ಆಗ ಅಲ್ಲಿ ಇಂದಿನ ಕನ್ನಡ ರಂಗಭೂಮಿಯ ದೊಡ್ಡ ಹೆಸರುಗಳೆನಿಸಿರುವ–ಜಂಬೆ, ಅಕ್ಷರ, ರಘುನಂದನ, ಮಾಲತಿ, ನಾಯರಿ, ಕಿಟ್ಟಿ, ತಾತಾಚಾರಿ, ಪದ್ಮಶ್ರೀ, ಬಸವಲಿಂಗಯ್ಯ ಎಲ್ಲರೂ ವಿದ್ಯಾರ್ಥಿಗಳು. ಪ್ರಸನ್ನ ಆಗ ತಾನೇ ಪದವಿ ಮುಗಿಸಿ ಹೋಗಿ 'ಸಮುದಾಯ' ಆರಂಭಿಸಿದ್ದರು. ಫ್ರಿಟ್ಸ್ ಬೆನ್ವಿಟ್ಜ್‌ರ ಪರಿಚಯವೂ ಆಯಿತು. ಇದರಿಂದಾಗಿ ನಾನು ಇವರೆಲ್ಲರ ಒಡನಾಟದಲ್ಲಿ ಅನೇಕ ಹೊಸ ಹೊಸ ನಾಟಕಗಳನ್ನು ನೋಡಿದೆ. ಅಲ್ಲಿ ಬಿ.ಎಂ. ಷಾ ಅವರು ತಯಾರಿಸಿದ 'ವೀರ ಅಭಿಮನ್ಯು' ಎಂಬ ಪಾರ್ಸಿ ಶೈಲಿಯ ನಾಟಕ ನೋಡಿ ಪ್ರಭಾವಿತನಾಗಿ ನನ್ನ ಬಾಲ್ಯದ 'ಫೇವರಿಟ್' ಆದ ಕೊಟ್ಟೂರಪ್ಪನವರ 'ದಾನಶೂರ ಕರ್ಣ' ನಾಟಕವನ್ನು–ಅದೊಂದು ನನ್ನ ಪ್ರಕಾರ ಪರಿಪೂರ್ಣ ಸಂರಚನೆಯ ನಾಟಕ–ಪುನರ್‌ಸೃಷ್ಟಿಸಬೇಕೆಂದು

ಆಗಿನಿಂದ ಈಗಿನವರೆಗೆ ಹಲವರಿಗೆ ದುಂಬಾಲು ಬಿದ್ದು ವಿಫಲನಾಗಿದ್ದೇನೆ. ಅದೇನೇ ಇರಲಿ, ನಂತರದಲ್ಲಿ ಭದ್ರಾವತಿ ಆಕಾಶವಾಣಿ ಕೇಂದ್ರಕ್ಕೆ ಕಾರ್ಯಕ್ರಮ ನಿರ್ವಾಹಕನಾಗಿ ಬಂದ ನಂತರ ನೀನಾಸಮ್‌ಗೆ ಮೊದಲ ಭೇಟಿ ನೀಡಿದೆ. ಆ ಭೇಟಿಯಲ್ಲಿ ಮಣಿಪುರದಿಂದ ಬಂದಿದ್ದ ರಂಗ ತಂಡವೊಂದು ರಂಗಭೂಮಿಯಲ್ಲಿ ನಾನು ಅದುವರೆಗೆ ಕಂಡಿರದಿದ್ದ ಹಲವು ವಿಶಿಷ್ಟ ಮತ್ತು 'ಮಾಂತ್ರಿಕ'ವೆನ್ನಬಹುದಾದ ಚಲನೆಗಳ ಪ್ರಯೋಗ ಮಾಡಿ ನನ್ನ ಗಮನ ಸೆಳೆಯಿತು. ಅದಾದ ನಂತರ ನೀನಾಸಮ್‌ಗೆ ಅನೇಕ ಸಾರಿ ನಾಟಕಗಳನ್ನು ನೋಡಲು ಬರುತ್ತಿದ್ದೆ. ಆ ಸಂದರ್ಭದಲ್ಲಿ ಗಿರೀಶ್ ಕಾಸರವಳ್ಳಿ, ಬಿ.ವಿ. ಕಾರಂತರ ಪರಿಚಯವಾಯಿತು.

ನಂತರ ೧೯೮೪-೮೫ರ ಹೊತ್ತಿಗೆ ನನಗೆ ಮಂಗಳೂರು ಆಕಾಶವಾಣಿ ಕೇಂದ್ರಕ್ಕೆ ವರ್ಗಾವಣೆಯಾದಾಗ ಇಲ್ಲಿ ನಡೆಯುತ್ತಿದ್ದ ಚಲನಚಿತ್ರ ರಸಗ್ರಹಣ ಶಿಬಿರಕ್ಕೆ ಬಂದಿದ್ದೆ. ಇದಾದ ನಂತರ ಸುಮಾರು ಒಂದು ದಶಕದ ಕಾಲ ನನಗೂ ಮತ್ತು ನೀನಾಸಮ್‌ಗೂ ನೇರ ಸಂಪರ್ಕ ಸಾಧ್ಯವಾಗಲಿಲ್ಲ. ಸುಬ್ಬಣ್ಣ ನಾನು ಇದ್ದ ಕೆಲವಡೆಗೆ-ಹಾಸನ, ಮಡಿಕೇರಿ ಮುಂತಾದೆಡೆ-ಸಂಸ್ಕೃತಿ ಶಿಬಿರವೋ ಮತ್ತೊಂದಕ್ಕೋ ಬಂದಾಗ ಅವರನ್ನು ಆಕಾಶವಾಣಿಗಾಗಿ ಮಾತನಾಡಿಸಿರುವೆ. ಮನೆಗೆ ಕರೆದು ಆತಿಥ್ಯ ನೀಡಿ ಮುಕ್ತ ಮಾತುಕತೆ ನಡೆಸಿದ ಖುಷಿ ಇದೆ. ೨೦೦೬ರಲ್ಲಿ ಮೈಸೂರು ಆಕಾಶವಾಣಿಯ ಸಹಾಯಕ ನಿರ್ದೇಶಕನಾಗಿ ನಾನು ಕೆಲಸದಿಂದ ಸ್ವಯಂನಿವೃತ್ತಿ ಪಡೆದ ನಂತರ ನೀನಾಸಮ್‌ನೊಡನೆ ಸಂಪರ್ಕ ನನ್ನ ಅನೇಕ ಭೇಟಿಗಳ ಮೂಲಕ ಇನ್ನಷ್ಟು ಗಾಢವಾಗುತ್ತಾ ಬಂತು. ಇಲ್ಲಿ ನಡೆಯುವ ಅನೇಕ ನಾಟಕಗಳನ್ನು ನೋಡಿದ್ದೇನೆ. ಹಾಗೆಯೇ ಪ್ರತಿಯೊಂದು ಸಂಸ್ಕೃತಿ ಶಿಬಿರಕ್ಕೂ ನಿಯಮಿತವಾಗಿ ಬರುತ್ತಿದ್ದೇನೆ. ಹೊಸ ನಾಟಕಗಳ ಸುದ್ದಿಯನ್ನು ಕೇಳಿದರೆ ಮತ್ತು ಅದು ನನ್ನ ಆಸಕ್ತಿಯನ್ನು ಕೆರಳಿಸಿದರೆ ಇಲ್ಲಿಗೆ ನನ್ನ ಪತ್ನಿ ಮತ್ತು ಗೆಳೆಯರೊಂದಿಗೆ ಬಂದು ಅದನ್ನು ನೋಡುತ್ತೇನೆ.

ನೀನಾಸಮ್ ಎಂದರೆ ಕೇವಲ ನೀನಾಸಮ್ ರಂಗ ಶಿಕ್ಷಣ ಕೇಂದ್ರ, ನಾಟಕ ಪ್ರದರ್ಶನ ಇಷ್ಟೇ ಅಲ್ಲದೆ 'ಅಕ್ಷರ ಪ್ರಕಾಶನ' ಕೂಡ ನೀನಾಸಮ್‌ಗೆ ಪೂರಕವಾಗಿ ಜೊತೆ ಜೊತೆಯಲ್ಲಿಯೇ ಬೆಳೆಯಿತೆಂದು ಅನಿಸುತ್ತದೆ. ಅದು ಕರ್ನಾಟಕದ-'ನವ್ಯ'ವೆಂದು ಕರೆಯಲಾಗುವ-ಸಾಹಿತ್ಯ ಚಳುವಳಿಯನ್ನೇ ಕಟ್ಟಿದ ಒಂದು ಪ್ರಕಾಶನವಾಗಿದೆ. ಏಕೆಂದರೆ ಸಾಹಿತ್ಯ ಮಾತ್ರವಲ್ಲದೆ ನಾಟಕ-ಸಿನಿಮಾ ಸೇರಿ ವಿಸ್ತಾರಗೊಂಡ ಈ ಚಳುವಳಿಯ ಅನೇಕ ಕೃತಿಗಳನ್ನೂ, 'ಸಾಕ್ಷಿ' ಪತ್ರಿಕೆ ಮೂಲಕ ಅದರ ತಾತ್ವಿಕತೆಯನ್ನೂ ಅದು ಬೆಳೆಸಿದೆ. ಇನ್ನು ನೀನಾಸಮ್‌ನ ಮುಖವಾಣಿ ಎನಿಸಿರುವ 'ಮಾತುಕತೆ' ತ್ರೈಮಾಸಿಕ ಕರ್ನಾಟಕದ ಬೌದ್ಧಿಕ ಜಗತ್ತಿನ ಅನೇಕ ಮುಖ್ಯ ಚರ್ಚೆಗಳಿಗೆ, ಅವುಗಳ ವಿಸ್ತರಣೆಗೆ ವೇದಿಕೆಯಾಗಿದೆ. ನೀನಾಸಂನಲ್ಲಿ ಮೊದಲು ಚಲನಚಿತ್ರ ರಸಗ್ರಹಣ ಶಿಬಿರಗಳು ನಡೆಯುತ್ತಿದ್ದವು. ಈಗ ಸಂಸ್ಕೃತಿ ಶಿಬಿರ, ಅದರ ಭಾಗವಾಗಿ ನಾಟಕ, ಸಿನಿಮಾ, ಸಂಗೀತ ಸಾಹಿತ್ಯಕ್ಕೆ ಸಂಬಂಧಿಸಿದ ಪ್ರದರ್ಶನ, ಚರ್ಚೆಗಳು ನಡೆಯುತ್ತಿವೆ. ಹೀಗೆ ಕರ್ನಾಟಕದ ಅನೇಕ ಬುದ್ಧಿಜೀವಿಗಳ ನಡುವಿನ

ಚರ್ಚೆ, ಪರಾಮರ್ಶನಕ್ಕೆ ನೀನಾಸಮ್ ಸಾಕ್ಷಿಯಾಗಿದೆ. ಇವರ ಜೊತೆಗೆ ರಾಷ್ಟ್ರ ಮಟ್ಟದ ಸಂಸ್ಕೃತಿ ಚಿಂತಕರು ಚರ್ಚೆಗಳಲ್ಲಿ ಭಾಗವಹಿಸುತ್ತಿದ್ದಾರೆ. ನನ್ನ ಮಿತಿಯ ಕಾರಣ ಜಗತ್ತಿನ ಎಂದು ಹೇಳಲಾರೆನಾದರೂ ಭಾರತದಲ್ಲಿನ ಏಕೈಕ ಸಾಂಸ್ಕೃತಿಕ ಸಮಾಲೋಚನೆಯ ಗ್ರಾಮಾಂತರ ಕೇಂದ್ರವೆನಿಸಿರುವ ಮತ್ತು ಕರ್ನಾಟಕದ ಬೌದ್ಧಿಕ ಲೋಕವನ್ನು ದಟ್ಟವಾಗಿ ಪ್ರಭಾವಿಸಿದ ಮತ್ತು ಅದನ್ನು ಕಟ್ಟಲು ಗಣನೀಯ ಕೊಡುಗೆ ಸಲ್ಲಿಸಿರುವ ಈ ನೀನಾಸಮ್ ನಮ್ಮಲ್ಲಿದೆ, ನಮ್ಮ ಊರಿನ ಪಕ್ಕದಲೇ ಇದೆ, ಒಂದು ಹಳ್ಳಿಯಲ್ಲಿದೆ ಎನ್ನುವುದು ಕನ್ನಡಿಗನಾಗಿ ನನಗೆ ಹೆಮ್ಮೆಯ ವಿಷಯ ಎನಿಸಿದೆ.

ಇಂತಹ ಸಂಸ್ಥೆ ಬೆಳೆಯುತ್ತಾ ಇರುವಂತೆ, ಅದರ ಭಾಗವಾಗಿ ಸಂಸ್ಕೃತಿ ಚರಿತ್ರೆಯನ್ನು ಕಟ್ಟುವಲ್ಲಿ ಒಂದು ನಿರ್ಣಾಯಕ ಪಾತ್ರವನ್ನು ವಹಿಸಲು ಪ್ರಾರಂಭಿಸಿದೆ ಎನಿಸುತ್ತಿದ್ದಂತೆ ಎಲ್ಲರ ಗಮನ ಅದರ ಮೇಲೆ ಬೀಳಲು ಪ್ರಾರಂಭವಾಗಿದ್ದು ಸಹಜ. ಅದರ ಜೊತೆಗೇ ಸಲಹೆಗಳೂ, ಟೀಕೆಗಳೂ ಸಹಜ. ಸ್ವತಃ ನಾನೇ ಇಂತಹ ಕೆಲವು ಟೀಕೆಗಳನ್ನು ಮಾಡಿದ್ದೇನೆ. ಅವನ್ನು ಈ ಹಿಂದೆ ಸುಬ್ಬಣ್ಣ ಮತ್ತು ಇತ್ತೀಚೆಗೆ ಅಕ್ಷರ ಅವರ ಬಳಿಯೂ ಹೇಳಿದ್ದೇನೆ. ಎಪ್ಪತ್ತರ ದಶಕದಲ್ಲೇ ಅಕ್ಷರ ಪ್ರಕಾಶನ ಮತ್ತು ಅಡಿಗರ ಸಾರಥ್ಯದಲ್ಲಿ ಪ್ರಕಟವಾಗುತ್ತಿದ್ದ 'ಸಾಕ್ಷಿ'ಯ ಮೇಲೆ ಅನೇಕ ಟೀಕೆಗಳು ಬರಲಾರಂಭಿಸಿದವು. 'ಈ ಅಕ್ಷರ ಪ್ರಕಾಶನ ಮತ್ತು ಅಡಿಗರ 'ಸಾಕ್ಷಿ'ಯ ಹಿಂದೆ ಬಹು ದೊಡ್ಡ ಸಾಮಾಜಿಕ ರಾಜಕೀಯವಿದೆ, ನಮ್ಮ ಕನ್ನಡ ಸಾಹಿತ್ಯವನ್ನು ಅದರಿಂದ ಬಿಡುಗಡೆಗೊಳಿಸಬೇಕು' ಎಂಬ ಬಹು ದೊಡ್ಡ ಕೂಗು ಕೇಳಿಬಂತು. ತೇಜಸ್ವಿಯ ಮಾರ್ಗದರ್ಶನದ 'ಒಕ್ಕೂಟ' ಇದರ ವಿರುದ್ಧ 'ಸಾಮಾಜಿಕ ತತ್ವಶಾಸ್ತ್ರ'ವೆಂದು ಕರೆಯಬಹುದಾದ ಒಂದು ಪರ್ಯಾಯ ತಾತ್ವಿಕತೆಯನ್ನೇ ಒದಗಿಸಿಕೊಟ್ಟಿತು, ಇದರಿಂದಾಗಿ ಅನೇಕ ಬದಲಾವಣೆಗಳು ಕನ್ನಡ ಬೌದ್ಧಿಕ ಜಗತ್ತಿನಲ್ಲಿ ಜರುಗಿದವು. ಇದರ ಪರಿಣಾಮವಾಗಿ ಸುಬ್ಬಣ್ಣನವರ ಯೋಚನಾ ಲಹರಿಯಲ್ಲಿ ಆದ ಅನೇಕ ಬದಲಾವಣೆಗಳನ್ನು ನಾನು ಗಮನಿಸಿದ್ದೇನೆ. ಇದಕ್ಕೆ ಅವರು ಶ್ರೇಷ್ಠ ಸಾಹಿತ್ಯವನ್ನು ಕುರಿತು ಮಾಡಿದ ಭಾಷಣ ಮತ್ತು ನೀನಾಸಮ್‌ನಲ್ಲಿನ ನಾಟಕಗಳ ಸ್ವರೂಪದಲ್ಲಿ ಆದ ಬದಲಾವಣೆಗಳೇ ಸಾಕ್ಷಿ.

ಇನ್ನು ನೀನಾಸಂನ ಸಂಸ್ಕೃತಿ ಶಿಬಿರಗಳ ಬಗ್ಗೆನೂ ಕೆಲವು ಟೀಕೆಗಳು ಕೇಳಿಬರುತ್ತಿವೆ. ನೀನಾಸಂನ ಮುಖ್ಯ ಕಾಳಜಿ ಸಾಹಿತ್ಯ-ಸಂಸ್ಕೃತಿಯೇ ಆದರೂ ಅದರ ಒಟ್ಟು ಆಸಕ್ತಿ ಬಹುಮುಖಿಯಾಗಿದ್ದು ಅದು ಕೃಷಿ, ಗಿಡಮೂಲಿಕೆ, ವಿಜ್ಞಾನ, ತತ್ವಶಾಸ್ತ್ರಗಳ ಬಗ್ಗೆ ಕೂಡಾ ಕೆಲವು ವಿಶೇಷ ಶಿಬಿರಗಳನ್ನು ನಡೆಸಿದೆ. ಹಾಗೇ ವಾರ್ಷಿಕ ಸಂಸ್ಕೃತಿ ಶಿಬಿರದ ವಸ್ತುಗಳನ್ನು ಗಮನಿಸಿದರೆ ಇಲ್ಲಿ 'ದೇವ ದೇವಿಯರು', 'ಹಿಂಸೆಯ ಎಡ ಬಲ', 'ಗಾಂಧೀಜಿಯ 'ಹಿಂದ್ ಸ್ವರಾಜ್: ಮನೋಭೂಮಿಕೆಯಲ್ಲಿ', 'ಯುವ ಬರಹಗಾರರು' ಹೀಗೆ ಹತ್ತು ಹಲವು ವಿಷಯಗಳ ಮೇಲೆ ಶಿಬಿರಗಳು ನಡೆದಿವೆ. ಇಂತಹ ಶಿಬಿರಗಳ ಬಗ್ಗೆ ಕೇಳಿಬರುವ ಟೀಕೆಗಳು ಮುಖ್ಯವಾಗಿ ಶಿಬಿರದಲ್ಲಿ ಪ್ರದರ್ಶಿತಗೊಳ್ಳುವ ನೀನಾಸಮ್ ನಾಟಕಗಳ ಸ್ವರೂಪ ಮತ್ತು ಶಿಬಿರದಲ್ಲಿ ನಡೆಯುವ ಚರ್ಚೆಗಳ ಸ್ವರೂಪದ ಬಗ್ಗೆ. ಇಂತಹ ಶಿಬಿರಗಳಲ್ಲಿ ನಾನು ಒಂದು ಶಿಬಿರದಲ್ಲಿ

ಬಹುಪಾಲು ಭಾಗದಲ್ಲಿ ಭಾಗವಹಿಸಿದ್ದೇನೆ ಮತ್ತು ಅನೇಕ ಶಿಬಿರಗಳಲ್ಲಿ ಕೆಲದಿನಗಳ ಮಟ್ಟಿಗೆ ಭಾಗವಹಿಸಿದ್ದೇನೆ. ಅವುಗಳ ಚರ್ಚೆಗಳಲ್ಲಿ ಸಂಕ್ಷಿಪ್ತವಾಗಿಯಾದರೂ ಮಧ್ಯಪ್ರವೇಶ ಮಾಡಿರುವೆ. ಈ ಎಲ್ಲಾ ಶಿಬಿರಗಳನ್ನು, ಹಾಗೆಯೇ ನೀನಾಸಂನ ತಾತ್ವಿಕತೆಯ ಭಾಗವಾಗಿಯೇ ಪ್ರಕಟವಾಗುವ ಅಕ್ಷರ ಹಾಗೂ ಅವರ ಗೆಳೆಯರ ಬರವಣಿಗೆಯನ್ನು ಗಮನಿಸಿದಾಗ ನನಗನ್ನಿಸಿದ್ದು: ಒಂದು ಸಮಾಜಕ್ಕೆ ಬೌದ್ಧಿಕತೆ ಬೇಕು. ಅದೇ ಅದರ ಬುನಾದಿ ಕೂಡ. ಆದರೆ ಈ ಬೌದ್ಧಿಕತೆ ಬರೀ cerebral ಆದರೆ, ಬರೀ ಮಿದುಳಿಗೆ ಸಂಬಂಧಪಟ್ಟುದಾದರೆ, ಅಮೂರ್ತ ನೆಲೆಗಳಲ್ಲೇ ಕ್ರಿಯಾಶೀಲವಾದುದಾರೆ ಅದು ಸಮಸ್ಯಾತ್ಮಕವಾಗುತ್ತದೆ.

ಇದನ್ನು ನಾನು ಹಲವು ಬಾರಿ ಅಕ್ಷರ ಅವರಿಗೆ ಸೂಚ್ಯವಾಗಿ ಹೇಳಿದ್ದೀನಿ. ಬೌದ್ಧಿಕತೆ ಅನ್ನುವುದು ಲೌಕಿಕ ನೆಲೆಯಲ್ಲಿ ಅಂದರೆ ಏನಿರುವುದೋ ಮತ್ತು ಏನು ಇರಬೇಕೆಂದು ನಾವು ಭಾವಿಸುತ್ತೇವೆಯೋ ಅದರ ಮಧ್ಯವರ್ತಿಯಾಗಿ ಮಾತ್ರ ಇರಬೇಕೇ ಹೊರತು ಅದಕ್ಕೊಂದು ಸ್ವತಂತ್ರ ಅಸ್ತಿತ್ವವಿಲ್ಲ ಎಂದು ನಾನೆಂದುಕೊಂಡಿದ್ದೇನೆ. ಹಾಗಾಗಿ ಹಲವಾರು ಬಾರಿ ನನಗೆ Elflin ಚರ್ಚೆಗಳೆಲ್ಲ ಯಾರಿಗಾಗಿ ಮತ್ತು ಇದರಿಂದೇನು ಪ್ರಯೋಜನ, ಕೇವಲ ಮಾನಸಿಕ ಖುಷಿಗಾಗಿ ಮಾತ್ರ ಬೌದ್ಧಿಕತೆಯೇ, ಇದಕ್ಕೊಂದು purpose ಅನ್ನುವುದೇ ಇಲ್ಲವೇ ಅಂತ ಆಶ್ಚರ್ಯಪಟ್ಟಿದ್ದೇನೆ. ಒಮ್ಮೊಮ್ಮೆ ಇದು ನನ್ನ ಸಮಸ್ಯೆ ಮಾತ್ರವಾ ಅಂತ ಸಂದೇಹ ಬಂದು ನಾನು ಕಳೆದ ಎರಡು ಮೂರು ಶಿಬಿರಗಳಲ್ಲಿ ನನಗೆ ಪರಿಚಯವಾದ ಅನೇಕ ಶಿಬಿರಾರ್ಥಿಗಳನ್ನೂ ಕೇಳಿದ್ದೇನೆ. ಇಲ್ಲಿ ನಡೆಯುವ ಚರ್ಚೆಗಳು ಅವರಲ್ಲಿ ಬಹಳ ಜನರಿಗೆ ಅರ್ಥವಾಗುತ್ತಿಲ್ಲ, ಇಲ್ಲಿಗೆ ಯಾಕಪ್ಪಾ ಬಂದಿವೆ ಅನ್ನಿಸುವಷ್ಟು ಕಠಿಣವಾಗಿದೆ ಅನ್ನುವುದನ್ನು ನಾನು ಖಚಿತಪಡಿಕೊಂಡು ಈ ಮಾತುಗಳನ್ನಾಡುತ್ತಿದ್ದೇನೆ. ಆದರೆ ಇವರಲ್ಲಿ ಹಲವಾರು ಶಿಬಿರಾರ್ಥಿಗಳು ಪದೇ ಪದೇ ಶಿಬಿರಕ್ಕೆ ಬರುತ್ತಾರೆ. ಇದಕ್ಕೆ ಕಾರಣ ಇಲ್ಲಿನ ಪರಿಸರವಾಗಿರಬಹುದು, ಶಿಬಿರದ ಸಮಯದಲ್ಲಿ ಸೃಷ್ಟಿಯಾಗುವ ಒಂದು ವಿಶಿಷ್ಟ ಸಾಂಸ್ಕೃತಿಕ ವಾತಾವರಣವಿರಬಹುದು ಮತ್ತು ಇಲ್ಲಿನ ಉಪಚಾರ ವೈಶಿಷ್ಟ್ಯವಿರಬಹುದು. ಆದರೆ ಇಲ್ಲಿನ ವಿಚಾರ ಯಾರನ್ನು ಮತ್ತು ಯಾಕೆ ತಲುಪಬೇಕೆಂದು ಚರ್ಚೆಗಳು ನಡೆಯುತ್ತಿದೆಯೋ ಅವು ಆ ಅವರನ್ನು ತಲುಪುತ್ತಿಲ್ಲವೇನೋ ಎನ್ನುವ ಗಂಭೀರ ಅನುಮಾನ ನನ್ನಲ್ಲಿ ಇತ್ತೀಚೆಗೆ ಉಂಟಾಗಿದೆ.

ನೀವು ತುಂಬಾ ಶ್ರೇಷ್ಠ ಮಟ್ಟದ ಚರ್ಚೆಯನ್ನು ನಡೆಸಬೇಕೆಂಬ ಉದ್ದೇಶದಿಂದ ರಾಷ್ಟ್ರೀಯ–ಅಂತಾರಾಷ್ಟ್ರೀಯ ಖ್ಯಾತಿಯ ಚಿಂತಕರನ್ನು ಕರೆಸುವ ಬದ್ಧತೆಗೆ ಒಳಗಾಗಿದ್ದೀರಿ. ಅದು ಸರಿಯೇ. ಆದರೆ ಅವರೆಲ್ಲರೂ ಇಂಗ್ಲಿಷ್‌ನಲ್ಲಿ ಮಾತಾಡುವವರು. ಅವರ ಇಂಗ್ಲಿಷ್, ಹಲವು ಮಟ್ಟಗಳ ಮತ್ತು ಶೈಲಿಗಳ ಇಂಗ್ಲಿಷ್ ಭಾಷಣಗಳನ್ನು ಕೇಳಿರುವ ನನಗೇ ಕಷ್ಟವೆನ್ನಿಸುತ್ತದೆ. ಇನ್ನು ಸಾಮಾನ್ಯ ಶಿಬಿರಾರ್ಥಿಗಳ ಪಾಡೇನು? ನಿಜ, ಕನ್ನಡ ಅನುವಾದದ ಸೌಲಭ್ಯವಿದೆ. ಜಾಧವ್ ನಮ್ಮ ಅತ್ಯುತ್ತಮ ಅನುವಾದಕರು. ಆದರೆ ಇಂಗ್ಲಿಷ್ ಭಾಷಣದ ಕರಾರುವಾಕ್ ಅನುವಾದ ಮಾಡುವ ಅವರ ಉತ್ಸಾಹ ಮತ್ತು ಬದ್ಧತೆಗಳಲ್ಲಿ ಹಲವು

ಬಾರಿ ಅವರ ಕನ್ನಡ ಅನುವಾದವೇ ಮೂಲ ಇಂಗ್ಲಿಷ್‌ಗಿಂತಲೂ ಕ್ಲಿಷ್ಟವಾಗಿರುತ್ತದೆ. ಅದೇನೇ ಇರಲಿ, ಅದು ಅಷ್ಟು ಮುಖ್ಯವಲ್ಲ. ಮುಖ್ಯ ಸಂಗತಿ, ಇಲ್ಲಿ ಆಗತಿರತಕ್ಕಂತಹ ಚರ್ಚೆಗಳ ಮತ್ತು ತೆಗೆದುಕೊಳ್ಳುತ್ತಿರುವ ವಿಷಯಗಳ ಸ್ವರೂಪದ ಬಗ್ಗೆ ಹೇಳಬೇಕು. ಬುದ್ಧಿಲೋಕ ಬೇಕು, ಬುದ್ಧಿಜೀವಿಗಳೂ ಒಂದು ಸಮಾಜಕ್ಕೆ ಬೇಕು. ಬೇಕು ಅನ್ನೋದಕ್ಕಿಂತ ಅದು ಸಹಜವಾಗಿ ಇದ್ದೇ ಇರುತ್ತದೆ. ಏಕೆಂದರೆ ಅದೇ ನಾಗರಿಕ ಸಮಾಜದ ಬುನಾದಿ. ಅದೇ ನಮ್ಮನ್ನು ಕಟ್ಟಿರುವುದು. ಆದರೆ ನೀನಾಸಂ ಕಟ್ಟುತ್ತಿರುವ ಬುದ್ಧಿಲೋಕಕ್ಕೂ ಕರ್ನಾಟಕದ ಜನತೆಗೂ ಏನಾದರೂ ಸಂಬಂಧವಿದೆಯೇ ಎಂಬ ಪ್ರಶ್ನೆ ಕೇಳಿಕೊಂಡಾಗ ಉತ್ತರ ಹೇಳೋದು ಕಷ್ಟ ಅನ್ಸುತ್ತೆ. ಯಾಕೇಂದ್ರೆ ಇಲ್ಲವೇ ಇಲ್ಲಾಂತ ಹೇಳೋಕೂ ಆಗೊಲ್ಲ. ನಿಜ, ಅಡಿಗರು ಹೇಳುತ್ತಿದ್ದಂತೆ ಎಲ್ಲರಿಗೂ ಅರ್ಥವಾಗುವಂತೆ ಪದ್ಯ ಬರೆಯಬೇಕಾಗಿಲ್ಲ ಮತ್ತು ಎಲ್ಲರಿಗೂ ಅರ್ಥವಾಗುವಂತೆಯೇ ಸಾಹಿತ್ಯ–ಸಂಸ್ಕೃತಿ ಚರ್ಚೆಯನ್ನು ನಡೆಸಬೇಕಿಲ್ಲ, ಹಾಗೆ ಬೌದ್ಧಿಕತೆಯೂ ಕೂಡ. ಆದರೆ ನನ್ನ ಪ್ರಕಾರ, ಒಂದು ಪದ್ಯ ಅಥವಾ ಕಥೆ, ಅದನ್ನು ಓದುವ ಎಲ್ಲಾ ಜನರನ್ನೂ ಯಾವುದೋ ಒಂದು ಸ್ತರದಲ್ಲಿ ಮುಟ್ಟದಿದ್ದರೆ ಅದು ಏನೂ ಅಲ್ಲವೇ ಅಲ್ಲ. ಅಂದರೆ ಕನ್ನಡ ಬಲ್ಲವರು ಅದನ್ನು ಓದಿದಾಗ ಅಥವಾ ಒಂದು ನಾಟಕವನ್ನು ನೋಡಿದಾಗ ಅದು ಎಲ್ಲರನ್ನೂ ಒಂದೇ ಸ್ತರದಲ್ಲಿ ಅಲ್ಲದಿದ್ದರೂ ಒಂದಲ್ಲ ಒಂದು ಸ್ತರದಲ್ಲಿ ಎಲ್ಲರನ್ನೂ ಮುಟ್ಟಬೇಕು.

ಆದರೆ ಇಲ್ಲಿನ ಶಿಬಿರದಲ್ಲಿ ನಡೆಯುತ್ತಿರುವ ಚರ್ಚೆಗಳು ಯಾರನ್ನೂ ಮುಟ್ಟುತ್ತಿಲ್ಲವೇನೋ ಎಂಬ ಅನುಮಾನ ನನಗಂತೂ ಇದೆ. ಯಾರನ್ನೂ ಅಂದರೆ, ಈ ಚರ್ಚೆಗಳನ್ನು ಆಯೋಜಿಸುವ ಮತ್ತು ಅದರಲ್ಲಿ ಭಾಗವಹಿಸುವವರನ್ನು ಬಿಟ್ಟು; ಯಾರಿಗೆ ತಲುಪಬೇಕೆಂದು ನೀವು ಉದ್ದೇಶಿಸಿದ್ದೀರೋ ಅವರನ್ನು ತಲುಪುತ್ತಿಲ್ಲ. ಎಲ್ಲೋ ಒಂದು ಅಂತರ ಇದೆ. ನಿಜ, ಬೌದ್ಧಿಕ ಲೋಕಕ್ಕೂ ಸಾಮಾನ್ಯ ಲೋಕಕ್ಕೂ ಅಂತರ ಇರುತ್ತೆ. ಆದರೆ ಅದು full blank ಆಗಿರಬಾರದು. ಆಯ್ದುಕೊಳ್ಳುವ ವಿಷಯಗಳೂ ಅಷ್ಟೇನೇ. 'ಹಿಂದ್ ಸ್ವರಾಜ್' ಕುರಿತ ಶಿಬಿರಕ್ಕೆ ನಾನೂ ಬಂದಿದ್ದೆ ಸಂಪನ್ಮೂಲ ವ್ಯಕ್ತಿಯಾಗಿ. ಅದು 'ಮನೋಭೂಮಿಕೆಯಲ್ಲಿ ಹಿಂದ್ ಸ್ವರಾಜ್' ಆಗಿತ್ತು! ಯಾಕೆ, ಬರೀ ಹಿಂದ್ ಸ್ವರಾಜ್ ಎಂದು ನಡೆಯುತ್ತಿರಲಿಲ್ಲವೇ? ಇನ್ನು ಇವೊತ್ತಿನ ಜ್ವಲಂತ ಸಮಸ್ಯೆಗಳೇನಿವೆ, ಅವುಗಳ ಬಗ್ಗೆ ಮಾತನಾಡಬಲ್ಲವರೇನಿದ್ದಾರೆ–ನಾನು ಇಲ್ಲಿ ಅಗ್ಗವಾಗಿ ಮಾತಾಡ್ತಿಲ್ಲ; ಸಾಮಾಜಿಕ ಕಳಕಳಿ, ಸಾಮಾಜಿಕ ನ್ಯಾಯದ ಜನಪ್ರಿಯ ಘೋಷಣೆಯ ಬಗ್ಗೆ ನನಗೆ ನಂಬಿಕೆ ಇಲ್ಲ. ಆದರೆ ನೀವು ಸಹಜವಾಗಿ ಯೋಚಿಸುವವರಾಗಿದ್ದರೆ, ಅಲ್ಲಿ ಎಲ್ಲವೂ ಇರುತ್ತೆ ಅಂತ ನಂಬಿರೋನು ನಾನು. ನೀವು ಸಹಜವಾಗಿದ್ದರೆ, ನೀವು normal ಆಗಿ ಕೆಲಸ ಮಾಡ್ತಿದ್ದರೆ, ಮಾತಾಡ್ತಿದ್ದರೆ; ನಿಮ್ಮ ಸಂಬಂಧ ಸಮಾಜದ ಜೊತೆ ಸಹಜವೂ ಸಜೀವವೂ ಆಗಿದ್ದರೆ ಯಾರೂ ಹೇಳದೆ ಕೇಳದೆ ಸಾಮಾಜಿಕ ನ್ಯಾಯ ಅಂತ ಏನನ್ನು ನಾವು ಕರೇತೀವಿ ಅದು ತನ್ನ ವಿಶಾಲ

ಅರ್ಥದ ವ್ಯಾಪ್ತಿಯಲ್ಲಿ ಅಲ್ಲಿ ತಂತಾನೇ–ಸಹಜವಾಗಿ–ಇದ್ದೇ ಇರುತ್ತೆ. ಆದರೆ ಯಾವಾಗ ನೀವು ಸಹಜವಾಗಿ ಇರೋದಿಲ್ಲವೋ ಆಗ ಪ್ರಾತಿನಿಧ್ಯದ ಅಂದರೆ ಕೆಲ ಧ್ವನಿಗಳು ಕೇಳಿಸದಿರುವ, ಅಂದರೆ ಒಂದು ಧ್ವನಿಯಲ್ಲಿರಬೇಕಾದ ಕೆಲವು ತರಂಗಾಂತರಗಳು ಇಲ್ಲದೆ ಆ ಧ್ವನಿ ಕೀರಲಾಗಿ ಕೇಳಿಸುವಂತೆ ಎಲ್ಲವೂ ಅಸಹಜ ಅನ್ನಿಸಲಾರಂಭಿಸುತ್ತದೆ. ಪ್ರಾತಿನಿಧ್ಯ ಅಥವಾ ಧ್ವನಿಕ್ಷೀಣತೆ ಲೆಕ್ಕಾಚಾರದ ಮಾತಲ್ಲ. ಹಾಗೆ ನೋಡಿದರೆ ನಾನು ಸಂಸ್ಕೃತಿ ಕ್ಷೇತ್ರದಲ್ಲಿ ಮೀಸಲಾತಿಯ ಕಟು ವಿರೋಧಿ. ಆದರೆ ಇದು ಭಾವನೆಯ ಮತ್ತು ಅನುಭವದ ಮಾತು. ಶಿಬಿರದ ಚರ್ಚೆಗಳು ಬಹಳ ಜನ ಶಿಬಿರಾರ್ಥಿಗಳಿಗೆ ತಲುಪುತ್ತಿಲ್ಲ ಅಂದರೆ something fundamentally wrong with us ಅಂತ ನೀನಾಸಂ ತಿಳೀಬೇಕು.

ನನಗೆ ನೀನಾಸಂ ಬಗ್ಗೆ ಅನೇಕ ವಿಷಯಗಳಲ್ಲಿ ಮೆಚ್ಚುಗೆ ಇದೆ. ನಾನು ಅದರ ಅಭಿಮಾನಿ. ಇದೆಲ್ಲದರ ಹೊರತಾಗಿಯೂ ನೀನಾಸಂ ಕುರಿತ ನನ್ನ ಮುಖ್ಯ ಆಕ್ಷೇಪಣೆ ಎಂದರೆ ಅದು ಎಲ್ಲೋ ಒಂದು ಕಡೆ ಅತಿಯಾದ ವೈಯುಕ್ತಿಕತೆಗೆ ಶರಣಾಗಿದೆಯೇನೋ ಎನ್ನುವುದು. ಇದಕ್ಕೆ ಕಾರಣ ಇತ್ತೀಚಿನ ವರ್ಷಗಳಲ್ಲಿ ಸಾಮಾಜಿಕತೆಯ ಹೆಸರಿನಲ್ಲಿ ನಡೆದ ಅಗ್ಗದ ರೂಕ್ಷ ರಾಜಕಾರಣ ಇರಬಹುದು. ಇದು ಅದಕ್ಕೆ ಪ್ರತಿಕ್ರಿಯಿಸುತ್ತಿರುವ ರೀತಿ ಇರಬಹುದು. ಆದರೆ ಸಮಾಜಕ್ಕೂ ನನಗೂ ಸಂಬಂಧವಿಲ್ಲ, ಸಮಾಜ ಹಾಳಾದರೆ ಆಗಲಿ, ನನಗೇನು ಅಥವಾ ನಾವು ಸುಮ್ಮನೆ ನಮಗನಿಸಿದಂತೆ ಕೆಲಸ ಮಾಡುತ್ತಾ ಹೋದರೆ ಅದು ಎಂದೋ ಒಂದು ದಿನ ಸಮಾಜಕ್ಕೆ connect ಆಗುತ್ತೆ ಅಂತ ಊಹಿಸಿ ಅಥವಾ ಭಾವಿಸಿ ನೀನಾಸಂ ಕೆಲಸ ಮಾಡ್ತಿದೆ ಅಂತ ನನಗನ್ನಿಸುತ್ತಿದೆ. ಕೆಲವೊಮ್ಮೆ ನಾನು ಸುಬ್ಬಣ್ಣನವರಿಗೂ ಈ ಮಾತನ್ನು ಹೇಳುತ್ತಿದ್ದೆ. ಒಮ್ಮೆ 'ಸದಾರಮೆ' ನಾಟಕವನ್ನು ನೋಡಿದಾಗ 'ಸುಬ್ಬಣ್ಣ ನೀವು ಸದಾರಮೆ ನಾಟಕವನ್ನು ಹಾಳುಮಾಡಿಬಿಟ್ಟಿದ್ದೀರಿ' ಎಂದಿದ್ದೆ. ಏಕೆಂದರೆ ಎಲ್ಲೂ connect ಆಗದ ಬೌದ್ಧಿಕತೆಯ ಕಾರಣದಿಂದಾಗಿ ಸುಬ್ಬಣ್ಣ ಅದರ ಇಡಿಯಾದ ಸೌಂದರ್ಯವನ್ನು ಕೆಡಿಸಿಬಿಟ್ಟಿದ್ದರು. ನನ್ನ ಈ ಮಾತುಗಳನ್ನು ಅಂದು ಕೇಳಿದ ಅದರ ನಿರ್ದೇಶಕ ಬಿ.ವಿ. ಕಾರಂತರು 'ಟೈಟ್' ಆಗಿ ಕುಳಿತಿದ್ದರೂ 'Your are right' ಎಂದು ಅನುಮೋದಿಸಿದ್ದರು! ಅದೇನೇ ಇರಲಿ ಹೀಗೆ ಬೌದ್ಧಿಕತೆಯೆನ್ನುವುದು ನೀನಾಸಂನೊಳಗೆ ಜೀರ್ಣವಾಗದೆ ಒಂದು ರೀತಿಯ ಅನುಬಂಧದಂತೆ, ಭಾರದಂತೆ ಇದೆ ಅನ್ನಿಸುತ್ತದೆ.

ಅಕ್ಷರ ಪ್ರಸ್ತಾವನೆಯಲ್ಲಿ ಹೇಳಿದಂತೆ ನೀನಾಸಮ್‌ನಲ್ಲಿ ಶೇಕಡಾ ೮೦ರಷ್ಟು ಜನ ಹವ್ಯಕ ಬ್ರಾಹ್ಮಣರಿದ್ದೀರಿ. ಈ ಊರಿನ ಜನಸಂಖ್ಯೆಯ ಸ್ವರೂಪವೇ ಹಾಗಿದ್ದರೆ ಸಮಸ್ಯೆ ಇಲ್ಲ. ಆದರೆ ಹವ್ಯಕರು ಹವ್ಯಕರಾಗಿಯೇ ಉಳಿದರೆ ತುಂಬಾ ಸಮಸ್ಯೆಯಾಗುತ್ತದೆ. ಇಲ್ಲಿ ನಾನು ಜಾತಿಯ ನೆಲೆಯಲ್ಲಿ ಮಾತಾಡುತ್ತಿಲ್ಲ. ಅಭಿರುಚಿ, ಆಯ್ಕೆ, ನಂಬಿಕೆ ಮತ್ತು ಜೀವನ ದೃಷ್ಟಿಯ ನೆಲೆಗಳಿಂದ ಮಾತನಾಡುತ್ತಿದ್ದೇನೆ. ಏಕೆಂದರೆ ಹೆಗ್ಗೋಡು ಊರು

ಸ್ವತಂತ್ರ ಘಟಕವಲ್ಲ. ಅದು ಒಂದು ದೇಶದ ಒಂದು ರಾಜ್ಯದಲ್ಲಿ ಇದೆ. ಅಂದರೆ ಅದು ಇತರ ಸಮುದಾಯಗಳ ಜೊತೆಗೇ ಇದೆ. ಈ ಎಲ್ಲದರಿಂದಲೂ ಅದು ಪಡೀತಾ ಇದೆ. ಹಾಗಾಗಿ ನಾವು ಹವ್ಯಕರು, ನೀನಾಸಮ್ ಮುಖ್ಯವಾಗಿ ಹವ್ಯಕರದ್ದು, ನಮ್ಮ ಅಭಿರುಚಿಗೆ ತಕ್ಕಂತೆ ಅದನ್ನು ನಡೆಸ್ತೀವಿ ಅಂತ ಹೇಳೋಕೆ ಆಗೊಲ್ಲ. ಹಾಗೆ ನೋಡಿದರೆ ಇದೇ ಊರಲ್ಲಿರೋ 'ಚರಕ'ದ social profile ಬೇರೇನೇ ಇದೆ. ಇದಕ್ಕೆ ಕಾರಣ ಬೇರೆ ಬೇರೆ ಊರುಗಳಿಂದ ಜನ ನೌಕರಿಗೆ ಬರುತ್ತಿರುವುದು ಇರಬಹುದು. ನನಗೆ ಗೊತ್ತಿಲ್ಲ. ಆದರೆ ತಪ್ಪು ತಿಳೀಬೇಡಿ–ನಾನು ಎರಡನ್ನೂ ಹೋಲಿಸುತ್ತಿಲ್ಲ–ನಾನು ಅಲ್ಲಿಗೆ ಹೋದಾಗ ಇರುವಷ್ಟು ಸಲೀಸಾಗಿ ಇಲ್ಲಿರೋಕೆ ಆಗೊಲ್ಲ. ಯಾರೋ ಒಬ್ಬರು ಇದನ್ನು ಅತಿಗೆ ತೆಗೆದುಕೊಂಡು ಹೋಗಿ ನೀನಾಸಂಗೆ ಹೋದಾಗ ಉಸಿರುಗಟ್ಟಿದಂತಾಗುತ್ತದೆ ಅಂತ ಬರೆದಿದ್ದರು. ಅದಕ್ಕೆ ನಾನು ನೀವು ಅಲ್ಲಿಗೆ ಹೋದಾಗ ವೈದ್ಯರೊಬ್ಬರನ್ನು ಕರೆದುಕೊಂಡು ಹೋಗಿ ಅಂತ ಹಾಸ್ಯ ಮಾಡಿದ್ದೆ. ಆ ಥರ ಅಲ್ಲ.

ಇಲ್ಲಿಗೆ ನಾನು ಪ್ರೀತಿಯಿಂದಲೇ ಬರ್ತೀನಿ, ಅಕ್ಷರ ಮತ್ತು ಅವರ ಗೆಳೆಯರು ಬಹು ಆತ್ಮೀಯವಾಗೇ ನಮ್ಮನ್ನು ಉಪಚರಿಸ್ತಾರೆ. ಆದರೆ ಇಲ್ಲಿ ಒಂದು levelನಲ್ಲಿ ಏನೋ ಒಂದು ರೀತಿಯಲ್ಲಿ uncomfortable ಅನ್ನಿಸೋದಕ್ಕೆ ಶುರು ಮಾಡುತ್ತೆ. ಇದಕ್ಕೆ ಏನು ಕಾರಣ ಅಂತ ಯೋಚಿಸಿದರೆ... ಏನೂಂತ ಹೇಳೋದು... ಇಲ್ಲಿನ ಬೌದ್ಧಿಕ ತರಂಗಾಂತರವೇ ವಿಚಿತ್ರ ಅನ್ನಿಸುತ್ತದೆ. ಇಲ್ಲಿನ ವಾತಾವರಣ ಪೂರ್ಣವಾಗಿ ನನ್ನನ್ನು ಆವರಿಸಿಕೊಳ್ತಿದೆ, ತಬ್ಬಿಕೊಳ್ತಿದೆ ಅಂತ ನನಗೆ ಅನ್ನಿಸೋಲ್ಲ. ಅಥವಾ ಇಲ್ಲಿ ನಾನು ಪೂರ್ಣವಾಗಿ ಲೀನವಾಗೋಕ್ಕೆ ಸಾಧ್ಯವಾಗೊಲ್ಲ. ಎಲ್ಲೋ ನನ್ನ ಒಂದು ಭಾಗ–being–ಹೊರಗೇ ಉಳಿಯುತ್ತೆ. ನಾನು ಯಾವುದರಲ್ಲಾದರೂ ಪೂರ್ಣವಾಗಿ ಲೀನವಾಗಬೇಕಾದರೆ ಕೆಲವು ಜಗಳಗಳಾಗಬೇಕಾಗುತ್ತೆ. ಆ ಜಗಳಗಳು ಇಲ್ಲಿ ಆಗಿಲ್ಲ... ಮತ್ತೆ ಇದಕ್ಕೆ ಕಾರಣ, ನನ್ನ ಭಿನ್ನಾಭಿಪ್ರಾಯಗಳನ್ನು ಬಿಚ್ಚು ಮನಸ್ಸಿನಿಂದ ಅಥವಾ ತೀವ್ರವಾಗಿ ಹೇಳೋದಕ್ಕೆ ಇಲ್ಲಿ ಸಾಧ್ಯವಾಗಿಲ್ಲ. ಇದಕ್ಕೆಲ್ಲ ಕಾರಣ, ನನ್ನ social profile ಇರಬಹುದು ಅಥವಾ ನೀನಾಸಮ್‌ನ social profile ಇರಬಹುದು. ಇವೆರಡೂ ಪರಸ್ಪರ ಹೊಂದಿಕೆಯಾಗದೇ ಇರಬಹುದು.

ಆದರೆ ಇದೇನೂ ದೊಡ್ಡ ಸಮಸ್ಯೆಯಲ್ಲ ನನಗೆ. ನಾನು ಇಲ್ಲಿಗೆ ಬರ್ತಾನೇ ಇರ್ತೀನಿ. ನಾಟಕಗಳನ್ನು ನೋಡ್ತಿರ್ತೀನಿ. ಚೆನ್ನಾಗಿದ್ರೆ ಚೆನ್ನಾಗಿದೆ ಅಂತೀನಿ. ಚೆನ್ನಾಗಿಲ್ಲದಿದ್ದರೆ ಚೆನ್ನಾಗಿಲ್ಲ ಅಂತೀನಿ. ಅದರಿಂದ ನಮ್ಮ–ನಿಮ್ಮ ಪ್ರೀತಿಯೇನೂ ಹೆಚ್ಚು ಕಡಿಮೆ ಆಗಿಲ್ಲ. ಮೊನ್ನೆ ತಾನೇ ಎರಡು ನಾಟಕಗಳ ಬಗ್ಗೆ ಬರೆದೆ. ಆದರೆ ನೀನಾಸಮ್ ಕಟ್ಟುತ್ತಿರುವ ಬೌದ್ಧಿಕತೆ ಇದೆಯಲ್ಲ, ಹಾಗೇ ಅಕ್ಷರ ಅವರ ಆಧುನಿಕೋತ್ತರತೆ ಕುರಿತ ನಿಲುವುಗಳು–ಅಕ್ಷರ ಅವರೇನೋ ತಾವು ಆಧುನಿಕೋತ್ತರವಾದಿಯಲ್ಲ ಅಂತ ಒಂದು ಸೂಕ್ಷ್ಮವಾದ ವಾದ ಮಂಡಿಸುತ್ತಾರೆ–ಇರಲಿ; ಎರಡನೆಯದಾಗಿ ಜಾತಿ ವ್ಯವಸ್ಥೆ ಕುರಿತ ಬಾಲಗಂಗಾಧರರ ಪ್ರಮೇಯದ ಬಗೆಗೆ ನೀನಾಸಂ ತೋರಿಸುತ್ತಿರುವ ಸಕ್ರಿಯ ಆಸಕ್ತಿ ಬಗ್ಗೆ ನನ್ನ ತೀವ್ರ

ಅಸಮಾಧಾನವಿದೆ. ನಾನು ಖಂಡಿತ ಬಾಲಗಂಗಾಧರರನ್ನು ಚರ್ಚಿಸಬಾರದು, ವಿಮರ್ಶಿಸಬಾರದು, ಇಷ್ಟವಾದರೆ ಮೆಚ್ಚಬಾರದು ಎಂದು ಹೇಳುತ್ತಿಲ್ಲ. ಹಾಗೇ ಇವರು ಅವರ ಪುಸ್ತಕವನ್ನು ಪ್ರಕಟಿಸುವುದು ತಪ್ಪು ಎಂದೂ ಹೇಳುತ್ತಿಲ್ಲ. ಆದರೆ ಬಾಲಗಂಗಾಧರರನ್ನು ಓದಿರುವ, ಅವರನ್ನು ಭೇಟಿ ಮಾಡಿದ ಜಿಗುಪ್ಸೆಕರ ಅನುಭವ ಪಡೆದಿರುವ, ಅವರ ಪ್ರಮೇಯದ ಹಿಂದೆ ಕೆಲಸ ಮಾಡುತ್ತಿರುವ ಆರ್ಥಿಕ ಮತ್ತು ಸಾಮಾಜಿಕ ರಾಜಕಾರಣದ ಒಂದಿಷ್ಟು ಪರಿಚಯವಿರುವ ನನಗೆ ಅವರ ವಾದವನ್ನು ಕುರಿತ ನೀನಾಸಂನ ಅವಿಮರ್ಶಾತ್ಮಕ ಸಹಾನುಭೂತಿ ಮತ್ತು ಉತ್ಸಾಹಗಳ ಬಗ್ಗೆ ನನ್ನ ತೀವ್ರ ಬೇಸರವಿದೆ.

ಇನ್ನು ಇಲ್ಲಿ ನಡೆಯುತ್ತಿರುವ ಅನೇಕ ಕಾರ್ಯಕ್ರಮಗಳು ಒಂದು ರೀತಿ ಗುಪ್ತವಾಗಿ, ಗುಟ್ಟಾಗಿ ನಡೆಯುವುದೇಕೋ ನನಗೆ ತಿಳಿಯದಾಗಿದೆ. ಇಲ್ಲಿ ನಡೆಯುವ ಅನೇಕ ಚರ್ಚೆಗಳು ಅನೇಕ ಗೋಷ್ಠಿಗಳು ಹತ್ತಿರದಲ್ಲೇ-ಭೌತಿಕವಾಗಿ ಕೂಡಾ-ಇರುವ ನನ್ನಂಥವರಿಗೂ ಗೊತ್ತಾಗುವುದಿಲ್ಲ. ಮೊನ್ನೆ ತತ್ವಶಾಸ್ತ್ರದ ಬಗ್ಗೆ ಒಂದು ವಿಚಾರ ಸಂಕಿರಣ ನಡೆಯಿತಂತೆ. ಅದರ ವರದಿ ನೋಡೇ ನನಗೆ ಗೊತ್ತಾದದ್ದು. ಆಯ್ದ ಕೆಲವರಿಗಷ್ಟೇ ಇಂತಹ ಕಾರ್ಯಕ್ರಮಗಳಿದ್ದರೆ ನೀನಾಸಂನ ಗೊಡವೆ ನನ್ನಂತಹವರಿಗೆ ಬೇಡವೇ ಬೇಡ. ಅಂದರೆ ನಾನು ಹೇಳುತ್ತಿರುವುದಿಷ್ಟೆ: ನೀನಾಸಂ ಸ್ವಲ್ಪ ಮೈಚಳಿ ಬಿಟ್ಟು ಸಾಮಾಜಿಕವಾಗಿ ಇನ್ನಷ್ಟು ತೆರಕೊಳ್ಳಬೇಕು. ಇತ್ತೀಚೆಗೆ ಇಲ್ಲಿ ಒಂದು ಭರ್ಜರಿ ನಾಟಕೋತ್ಸವ ಮತ್ತು ವಿಚಾರ ಸಂಕಿರಣ ನಡೆಯಿತೆಂದು ಕೇಳಿದೆ. (ಇಂಡಿಯಾ ಥಿಯೇಟರ್ ಫೋರಮ್‌ನವರು ನಡೆಸಿದ ಸೆಮಿನಾರ್) ಅದನ್ನು ಕಂಡವರು ಹೇಳ್ತಾ ಇದ್ದರು, "ನೀವೆಲ್ಲ ನೀನಾಸಂನ ಸಂಸ್ಕೃತಿ ಕೆಲಸ ಗ್ರಾಮ ಕೇಂದ್ರಿತ ಅನ್ನುತ್ತೀರಿ. ಇಲ್ಲಿಗೆ ಬಂದು ನೋಡಬೇಕಿತ್ತು ನೀವು. ಮುಂಬೈನ ಥಳುಕು ಬಳುಕೆಲ್ಲ ನೀನಾಸಂ ಸುತ್ತಲೇ ನೆರೆದಿತ್ತು" ಅಂತ. ಈ ಎಲ್ಲದರ ಹಿನ್ನೆಲೆಯಲ್ಲಿ ಒಮ್ಮೊಮ್ಮೆ ನನಗೂ ಅನುಮಾನ ಬರುತ್ತೆ, ಇದು ಗ್ರಾಮಾಂತರದಲ್ಲಿರುವ ಸಂಸ್ಕೃತಿ ಕೇಂದ್ರವೋ ಅಥವಾ ಗ್ರಾಮಕೇಂದ್ರಿತ ಸಂಸ್ಕೃತಿ ಕೇಂದ್ರವೊ ಅಂತ. ಏಕೆಂದರೆ ಸುಬ್ಬಣ್ಣನವರು 'ನೀನಾಸಮ್ ಹಿನ್ನೆಲೆಯ ಸೆಲೆ' ಅಂತ ಒಂದು ಲೇಖನ ಬರೆದಿದ್ದಾರೆ. ಅದರಲ್ಲಿ ಅವರು ನೀನಾಸಂನ್ನು ಕಟ್ಟಿದ್ದರ ಹಿನ್ನೆಲೆಯನ್ನು ಹೇಳುತ್ತಾ, ಸ್ವಾತಂತ್ರ್ಯ ಹೋರಾಟದ ಆಶಯಗಳೇ, ಹಳ್ಳಿಗಳ ಪುನಾರಚನೆಯ ಉದ್ದೇಶವೇ ಇದರ ಹಿಂದೆ ಕೆಲಸ ಮಾಡಿದ್ದು ಅಂತ ಗಾಂಧೀಜಿಯ 'ಹಿಂದ್ ಸ್ವರಾಜ್'ನ್ನೂ ಸ್ಮರಿಸುತ್ತಾರೆ.

ಆದರೂ ನನಗೆ ಇಲ್ಲಿಗೆ ಬಂದಾಗಲೆಲ್ಲ ತುಂಬ ಖುಷಿಯಾಗುತ್ತೆ ಅಂತ ಹೇಳಲೇಬೇಕು ಏಕೆಂದರೆ, ನಿಜವಾದ ಹಳ್ಳಿಯ ಪರಿಸರ ಇಲ್ಲಿದೆ. ಊರು ವಿಶಾಲವಾಗಿದೆ. ನಮ್ಮ ಬಯಲು ಸೀಮೆಗಳ ಹಳ್ಳಿಗಳಲ್ಲಿರುವಂತೆ ಕೊಳಕಿಲ್ಲ. ಕೆಟ್ಟ ಬೈಗುಳಗಳಿಲ್ಲದ ಒಳ್ಳೆಯ ಕನ್ನಡ ಕೇಳಿಸುತ್ತೆ! ಒಳ್ಳೆಯ ನಾಟಕಗಳನ್ನೂ ಇಲ್ಲಿ ನೋಡಬಹುದು. ಹಾಗೆ ನೋಡಿದರೆ ನನ್ನ ಬದುಕಿನಲ್ಲಿ ಮತ್ತೆ ಮತ್ತೆ ಹೋಗಿ ಕೊಂಚ ಕಾಲ ಕೂತು ಬರಬಯಸುವ ಮೂರು ಜಾಗಗಳಿವೆ. ಒಂದು ನನ್ನೂರಿನ ಬಳಿಯ ಮಹಿಮಾಪುರದ ಗುಟ್ಟೆ ಮೇಲಿನ ಪುಟ್ಟ

ದೇವಸ್ಥಾನದ ಬಳಿಯ ಬೇವಿನ ಮರದ ಕೆಳಗಿನ ಸ್ಥಳ. ಬಾಲ್ಯದಲ್ಲಿ ಒಂದೆರಡು ಬಾರಿ ಅನುಭವಿಸಿದ ಜಗತ್ತನ್ನೇ ಮರೆಸುವ ಆ ಪ್ರಶಾಂತಿ ಈಗಲೂ ನನ್ನ ನೆನಪಿನಲ್ಲಿ ಉಳಿದಿದೆ. ಎರಡನೆಯದು, ದೆಹಲಿಯಲ್ಲಿದ್ದಾಗ ಸಮಾಜವಾದಿ ಅಧ್ಯಯನ ಶಿಬಿರಕ್ಕೆಂದು ಹೋಗಿದ್ದ ಹರ್ಯಾಣದ ಒಂದು ಹಳ್ಳಿಯಲ್ಲಿ ನಾನು ಒಂದು ಸಂಜೆ ಕಳೆದ ಜಾಗ ಅದು. ಜೆಪಿಯವರು ಭೂದಾನ ಚಳುವಳಿ ಸೇರಿ ಭೂದಾನ ಪಡೆದ ಮೊದಲ ಹಳ್ಳಿಯಂತೆ ಅದು. ಅಲ್ಲಿ ಒಂದು ವಿಶಾಲ ಬಂಡೆ ಪ್ರದೇಶದ–ಅಂತಹ ಬಂಡೆ ಜಾಗವಲ್ಲದೆ ಇನ್ನಾವ ಜಾಗ ಭೂದಾನಕ್ಕೆ ಅರ್ಹ?–ಒಂದು ತುದಿಯಲ್ಲಿದ್ದ ಒಂದೆರಡು ಹೊಂಗೆ ಮರದ ಕೆಳಗಿನ ತಂಪು. ಮೂರನೆಯದು ಈ ಹೆಗ್ಗೋಡಿನ ನೀನಾಸಂ ಕಾರ್ಯಾಲಯದ ಮುಂದೆ ಹಾಕಿರುವ ಅಡಿಕೆ ಮರದ ಮಂಚ. ಎದುರಿನ ಪುಟ್ಟ ಬಯಲು ಮತ್ತು ಅದರಾಚೆಗಿನ ಕಾಡು... ಒಳ್ಳೇ ಆಮ್ಲಜನಕ ಸಿಗುತ್ತೆ. ಜೊತೆಗೆ ಇಲ್ಲಿನ ಸುಸಂಸ್ಕೃತ ವಾತಾವರಣ. ಹವ್ಯಕ ಬ್ರಾಹ್ಮಣರೇ ಇರುವ ಪರಿಣಾಮ ಇರಬೇಕು... ನಾನು ಇಲ್ಲಿಗೆ ಪದೇ ಪದೇ ಬರಬೇಕು ಅನ್ನಿಸುತ್ತೆ, ಇಲ್ಲಿ ಸ್ವಲ್ಪ ಕಾಲ ಕಳೆಯುವುದಕ್ಕಾದರೂ....

ಆದರೆ ಇದರ ಬೌದ್ಧಿಕ ಸ್ವರೂಪದಲ್ಲಿ ಏನೋ ಒಂದು ದೋಷ, ಏನೋ ಒಂದು ಸಮಸ್ಯೆ ಇದೆ, there is something wrong ಅಂತ ಅನ್ನಿಸುತ್ತೆ. ಇವೊತ್ತಿನ ಸಮಾಜಕ್ಕೆ ಅಷ್ಟೇನೂ ಒಳ್ಳೆಯದಲ್ಲ ಇದು ಅನಿಸುತ್ತೆ. ಹೀಗೆ ನಾನು ಹೇಳಿದರೆ ಅದು ಸ್ವಲ್ಪ ತೀವ್ರವಾದ ಮಾತು ಅನ್ನಿಸಬಹುದು. ಆದರೆ ನಾನು ಹೇಳತಿರೋದು, ನಿಮ್ಮಿಂದ ನಿರೀಕ್ಷಿಸಬಹುದಾದ್ದನ್ನು ನೀವು ಮಾಡ್ತಿಲ್ಲ ಅನ್ನುವ ಮಾತನ್ನು. ಸುಬ್ಬಣ್ಣ ಕಟ್ಟಿದ ನೀನಾಸಂನಿಂದ ನಾವು ಇದನ್ನು ನಿರೀಕ್ಷಿಸಿರಲಿಲ್ಲ ಅನ್ನೋದು. ಯಾಕೇಂದ್ರೆ ಇವೊತ್ತು ಚರ್ಚಿಸಬೇಕಾದ ತುಂಬಾ ಸಮಸ್ಯೆಗಳಿವೆ. ಆದರೆ ನೀನಾಸಂಗೆ ರಾಜಕೀಯ ನೆಲೆಗಳ ಸಮಸ್ಯೆಗಳು ಅಂದ್ರೆ ಯಾಕೋ ಮಡಿ ಮೈಲಿಗೆ ಶುರುವಾಗುತ್ತೆ. ಹಾಗಾಗೇ ಅದು 'ಹಿಂದ್ ಸ್ವರಾಜ್'ನ್ನು ಚರ್ಚೆಗೆ ತಗೊಂಡಾಗ ಅದನ್ನು 'ಮನೋಭೂಮಿಕೆಯಲ್ಲಿ ಹಿಂದ್ ಸ್ವರಾಜ್' ಅಂತ ಮಾಡಿಬಿಡ್ತದೆ. ನಾನೇನೋ ಇಲ್ಲಿಗೆ ಬಂದಾಗ ಆ ಬಗ್ಗೆ ರಾಜಕೀಯ ನೆಲೆಯಲ್ಲೇ ಮಾತಾಡಿದೆ. ಇನ್ನು ತಂತ್ರಜ್ಞಾನದ ಪ್ರಶ್ನೆ, ಸಾಮಾಜಿಕ ನ್ಯಾಯ... ಸಾಮಾಜಿಕ ನ್ಯಾಯ ಅನ್ನೋದು ಇವೊತ್ತು ಒಂದು ಸಂಕೀರ್ಣ ಪ್ರಶ್ನೆಯಾಗಿದೆ. It has become so complex a problem... ಅದರ ಬಗ್ಗೆ ನಿಜವಾಗಿ ಇಂತಹ ಕಡೆ ಚರ್ಚೆ ನಡೀಬೇಕಿದೆ. ಯಾಕೇಂದ್ರೆ ಇಲ್ಲಿಗೆ ದೊಡ್ಡ ದೊಡ್ಡ ದೊಡ್ಡ ಚಿಂತಕರು ಬರ್ತಾರೆ. ಆಮೇಲೆ ಜಾಗತೀಕರಣದ ಸಮಸ್ಯೆ ಅಥವಾ ಸವಾಲುಗಳಿವೆ. ಜಾಗತೀಕರಣ ಕುರಿತ ಸುಬ್ಬಣ್ಣ ಮತ್ತು ಅಕ್ಷರ ಅವರ ನಿಲುವುಗಳಲ್ಲಿ ಸಾಕಷ್ಟು ಸಂದಿಗ್ಧಗಳಿವೆ. ಹಾಗೇ ಹಿಂದೂ ಕೋಮುವಾದ ಕುರಿತಂತೆ ಕೂಡ. ಕೆಲವರು ಸೂಚಿಸುವಂತೆ ನೀನಾಸಂ ಹಿಂದೂ ಕೋಮುವಾದದ ಪರೋಕ್ಷ ವಕ್ತಾರಿಕೆ ಮಾಡ್ತಿದೆ ಅಂತ ಖಂಡಿತ ನಾನು ಹೇಳ್ತಿಲ್ಲ. ಆದರೆ ಇವೊತ್ತು ನಮ್ಮನ್ನು ಕಾಡುತ್ತಿರುವ ತಂತ್ರಜ್ಞಾನ, ಸೆಕ್ಯುಲರಿಸಂ, ಸಾಮಾಜಿಕ ನ್ಯಾಯದಂತಹ ಇನ್ನೂ ಹಲವು ಜ್ವಲಂತ ಸಮಸ್ಯೆಗಳ ಚರ್ಚೆಗೆ ನೀನಾಸಂ ಸಕ್ರಿಯ

ಆಸಕ್ತಿ ತೋರಿಸುತ್ತಿಲ್ಲ. ಏಕೆ ಅನ್ನೋದು ನನ್ನಂತಹವರನ್ನು ಕಾಡುವ ಮುಖ್ಯ ಪ್ರಶ್ನೆ. ಹಾಗಾಗಿಯೇ ನನ್ನಂತಹ social profileನವರಿಗೆ ಇಲ್ಲಿಗೆ ಬಂದಾಗ ಸ್ವಲ್ಪ uncomfortable ಅನ್ನಿಸುತ್ತೇನೋ ಅಂತ ಹೇಳಿ ನನ್ನ ಆರಂಭಿಕ ಮಾತುಗಳನ್ನ ಮುಗಿಸ್ತೇನೆ. ನಮಸ್ಕಾರ.

(ಬರಹ ರೂಪಕ್ಕೆ: ತಪಸ್ವಿ ಹೆಚ್ ಎಂ.)

(೨೦೧೨ರ ಜುಲೈ ೧೬ರಂದು ನೀನಾಸಂ ಆಡಳಿತ ಮಂಡಳಿಯ ಚಿಂತನಾ ಶಿಬಿರದಲ್ಲಿ ಆಡಿದ ಮಾತುಗಳು; ನೀನಾಸಂನ 'ಮಾತುಕತೆ'ಯ ೧೦೪ನೇ ಸಂಚಿಕೆಯಲ್ಲಿ-ನವೆಂಬರ್, ೨೦೧೨- ಪ್ರಕಟ)

ನೀನಾಸಂ ಕುರಿತ ಚರ್ಚೆ : ಒಂದು ಪ್ರತಿಕ್ರಿಯೆ

ಪ್ರಿಯರೇ,

ಮಾತುಕತೆ-೧೦೪ರಲ್ಲಿ ಪ್ರಕಟವಾಗಿರುವ ನೀನಾಸಂ ಕುರಿತ ನನ್ನ ಹಾಗೂ ನನ್ನ ಇತರ ಮುವ್ವರು ಗೆಳೆಯರ ಮಾತುಗಳನ್ನೂ ಓದಿ ಈ ಪತ್ರ ಬರೆಯುತ್ತಿರುವೆ. ನಮ್ಮ ಮಾತುಗಳ ನಂತರ ನಡೆದ ಚರ್ಚೆಯನ್ನು ನೀವು ಪ್ರಕಟಿಸಿಲ್ಲವಾದ್ದರಿಂದ ಈ ನನ್ನ ಮುಂದಿನ ಮಾತುಗಳು ಓದುಗರ ಗಮನಕ್ಕೆ ಬರುವುದು ಉಚಿತವೆಂದು ನಾನು ಭಾವಿಸಿದ್ದೇನೆ.

೧. ಜಿ. ರಾಜಶೇಖರ್ ತಮ್ಮ ಮಾತುಗಳಲ್ಲಿ ಹೆಗ್ಗೋಡಿನಲ್ಲಿ ಎಷ್ಟು ಜನ ಹವ್ಯಕರಿದ್ದಾರೆ ಎಂದು ನಾನು ಕೇಳಿರುವೆನೆಂದೂ, ಈ ಪ್ರಶ್ನೆ ಅವೈಜ್ಞಾನಿಕವೂ ತರ್ಕವಿಹೀನವೂ ಆಗಿದೆ ಎಂದು ಹೇಳಿದ್ದಾರೆ. ಆದರೆ ನನ್ನ ಮಾತುಗಳೇ ಸೂಚಿಸುವಂತೆ, ನಾನಾಗಿ ನಾನು ಆ ಪ್ರಶ್ನೆಯನ್ನೇ ಕೇಳಿಲ್ಲ. ಮತ್ತೆ ನನ್ನ ಮಾತುಗಳೇ ಸೂಚಿಸುವಂತೆ, ನಾವು ನಾಲ್ವರ ಮಾತುಗಳಿಗೆ ಮುನ್ನ ಪ್ರಾಸ್ತವಿಕವಾಗಿ ಮಾತನಾಡಿದ ನೀನಾಸಂನ ಮುಖ್ಯಸ್ಥ ಕೆ.ವಿ. ಅಕ್ಷರ ಅವರು ಹೆಗ್ಗೋಡು ಪ್ರಧಾನವಾಗಿ ಹವ್ಯಕ ಬ್ರಾಹ್ಮಣರ ಊರು ಎಂದು ಹೇಳಿದಾಗ, ಕುತೂಹಲದಿಂದ ಹವ್ಯಕರು ಎಷ್ಟು ಜನ ಇದ್ದಾರೆ ಎಂದು ಸಾಂದರ್ಭಿಕವಾಗಿ ಕೇಳಿದೆನಷ್ಟೆ. ಅದಕ್ಕೆ ಅಕ್ಷರ ಕೊಟ್ಟ ಉತ್ತರವನ್ನನುಸರಿಸಿ ನಾನು ಆ ಸಂಬಂಧ ಕೆಲವು ಮಾತುಗಳನ್ನಾಡಿದ್ದೇನೆ. ಅದನ್ನು ಓದುಗರು ನನ್ನ ಮಾತುಗಳಲ್ಲಿ ಗಮನಿಸಬಹುದು.

೨. ಜೆ.ಎಸ್. ಸದಾನಂದ ಅವರು ತಮ್ಮ ಮಾತುಗಳಲ್ಲಿ ಕೆಲವು ವಿಷಯಗಳ ಚರ್ಚೆ ನನಗೆ ಮುಜುಗರವನ್ನುಂಟು ಮಾಡುತ್ತದೆಯೆಂದೂ; ಹಾಗಾಗಿ ಅಂತಹ ವಿಷಯಗಳ ಬಗ್ಗೆ ನೀನಾಸಂನ ಶಿಬಿರಗಳಲ್ಲಿ ಚರ್ಚೆಗಳು ಬೇಡವೆಂದೂ ನಾನು ಅಭಿಪ್ರಾಯಪಟ್ಟಿರುವುದಾಗಿ ಹೇಳಿದ್ದಾರೆ. ನಾನೆಲ್ಲಿ ಹಾಗೆ ಹೇಳಿರುವೆ? ಹಾಗೆ ನೋಡಿದರೆ-ನನ್ನ ಮಾತುಗಳಿಂದಲೇ

ತಿಳಿಯಬಹುದಾದಂತೆ–ನಾನು ಹೇಳಿರುವುದು, ಎಲ್ಲ ರೀತಿಯ ವಿಷಯಗಳ ಬಗ್ಗೆಯೂ ನೀನಾಸಂನಲ್ಲಿ ಚರ್ಚೆಯಾಗಬೇಕೆಂದು! ಬಹುಶಃ ಸದಾನಂದ ಅವರು ತಮ್ಮ ಇತ್ತೀಚಿನ ಗುರು ಬಾಲಗಂಗಾಧರರ ಪ್ರಮೇಯ ಅಥವಾ ಸಿದ್ಧಾಂತ ಕುರಿತ ನೀನಾಸಂನ ವಿಶೇಷ ಆಸಕ್ತಿ ಕುರಿತ ನನ್ನ ವೈಯುಕ್ತಿಕ ಅಸಮಾಧಾನದ ಮಾತುಗಳನ್ನು ಹೀಗೆ ಅರ್ಥೈಸಿ ಕೊಂಡಿರಬಹುದು. ಆದರೆ ನೀನಾಸಂ ಸದಾನಂದರ ಗುರುಗಳ ಅಥವಾ ಇನ್ನಾರದೇ ಆಗಲಿ, ವಿಚಾರಗಳನ್ನು ಚರ್ಚಿಸಬಾರದು ಎಂದು ನಾನು ಹೇಳಿಲ್ಲ.

೩. ಜಿ. ರಾಜಶೇಖರ್ ನೀನಾಸಂ ತನ್ನ ಸ್ವಾಯತ್ತತೆಯನ್ನು ಉಳಿಸಿಕೊಂಡು ಹೋಗುವ ಅಗತ್ಯವನ್ನು ಒತ್ತಿ ಹೇಳಿದ್ದಾರೆ. ಅದೇ ಅವರ ಒಟ್ಟು ಮಾತುಗಳ ಸಾರಾಂಶವೂ ಆಗಿದೆ. ಅದನ್ನು ಸಹಜವಾಗಿಯೇ ತಮ್ಮದೇ ಕಾರಣಗಳಿಗಾಗಿ ಸದಾನಂದ ಅವರು ಅನುಮೋದಿಸಿದ್ದಾರೆ. ಸ್ವಾಯತ್ತತೆ ತಾನೇ ತಾನಾಗಿ ಬಹು ಒಳ್ಳೆಯ ಶಬ್ದವೇ. ಆದರೆ ಯಾವುದರ ಸ್ವಾಯತ್ತತೆ ಎಂಬ ಪ್ರಶ್ನೆ ಬಂದಾಗ ಅದು ಸಮಸ್ಯಾತ್ಮಕವಾಗುತ್ತದೆ.

ಉದಾಹರಣೆಗೆ ನೀನಾಸಂನ ಸ್ವಾಯತ್ತತೆಯ ಪ್ರಶ್ನೆ. ನೀನಾಸಂ ಒಂದು ಸಮಾನ ಆಸಕ್ತರ ಮತ್ತು ಸಮಾನ ಹಿತಾಸಕ್ತಿಗಳ ಒಂದು ಖಾಸಗಿ ಟ್ರಸ್ಟ್. ಅದು ತನ್ನನ್ನು ತಾನು ಯಾವುದೇ ಪ್ರಜಾತಾಂತ್ರಿಕ ವಿಧಾನದ ಮೂಲಕ ರಚನೆ ಮಾಡಿಕೊಂಡಿಲ್ಲ ಎಂದುಕೊಂಡಿದ್ದೇನೆ. ನಿಯಮಗಳ ಪ್ರಕಾರ ಅದಕ್ಕೆ ಅದರ ಅಗತ್ಯವೂ ಇಲ್ಲ ಎಂಬುದು ಬೇರೆ ಮಾತು. ಆದರೆ ಅದು ಎಲ್ಲ ಟ್ರಸ್ಟ್‌ಗಳಂತೆಯೇ ತನ್ನ ಖಾಸಗಿತನವನ್ನು ಮೀರಿ ತನ್ನ ಮೂಲ ಉದ್ದೇಶಕ್ಕನುಗುಣವಾಗಿಯೇ ವಿಶಾಲ ಸಮಾಜದೊಂದಿಗೆ ಬೆರೆಯುವ, ಮುಖಾಮುಖಿಯಾಗುವ, ಸಂವಾದಿಸುವ ಪ್ರಯತ್ನ ಮಾಡುತ್ತಾ ತನ್ನ ಕ್ರಿಯಾಶೀಲತೆಯಲ್ಲಿ ಪ್ರಜಾತಾಂತ್ರಿಕವಾಗುವ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ. ಹಾಗಾಗಿಯೇ ಅದಕ್ಕೆ ಬೇರೆ ಬೇರೆ ನೆಲೆಗಳಲ್ಲಿ ಸರ್ಕಾರದ ಮತ್ತು ಸಮಾಜದ ಕೊಡುಗೆಗಳೂ ಸಲ್ಲುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ನೀನಾಸಂ ತನ್ನ ಸ್ವಾಯತ್ತತೆಯನ್ನು ಉಳಿಸಿಕೊಳ್ಳಬೇಕು ಎಂದರೆ ಏನರ್ಥ? ನೀನು ಸಮಾಜದಿಂದ ಏನೆಲ್ಲವನ್ನೂ ಪಡೆದುಕೋ; ಆದರೆ ಅದರ ಮಾತುಗಳಿಗೆ ಮಾತ್ರ ಕಿವಿಗೊಡಲೇ ಬೇಡ. ಏಕೆಂದರೆ ಅದರ ಬುದ್ಧಿ ನೆಟ್ಟಗಿಲ್ಲ ಎಂದರ್ಥವಲ್ಲವೇ? ಅದು ನಿಜವಿದ್ದರೆ, ಹೀಗೆ ಹೇಳುವವರ ಬುದ್ಧಿಯೂ ನೆಟ್ಟಗಿಲ್ಲ ಎಂದೂ ಅರ್ಥವಾಗುತ್ತದಲ್ಲವೇ? ಆದರೆ ಇದು ನಿಜವಲ್ಲ ಎಂದು ನಾನಾದರೂ ಭಾವಿಸಿರುವೆ.

ಆದರೆ ಅಲ್ಲಿಗೇ ನಿಲ್ಲದೆ ರಾಜಶೇಖರ್ ಮುಂದುವರೆದು, ಯಾವ ಸಿದ್ಧಾಂತಗಳಿಗೂ ಕಿವಿಗೊಡಬೇಡಿ ಎನ್ನುತ್ತಾರೆ. ಏಕೆಂದರೆ ಅವೆಲ್ಲವೂ ಕೊಲೆಗಡುಕ ಎನ್ನುತ್ತಾರೆ. ಇಂತಹ ಕೊಲೆಗಡುಕಗಳ ಅವರ ಪಟ್ಟಿಯಲ್ಲಿ ಅವರ ಮಾಜಿ ಸಿದ್ಧಾಂತ ಕಮ್ಯೂನಿಸಂ ಕೂಡ ಸೇರಿಕೊಂಡಿರುವುದರಿಂದ ಇದೆಲ್ಲ ಅವರ ಅನುಭವದ ಮಾತೇ ಇರಬೇಕು ಎಂದು ನಾವು ಭಾವಿಸಬೇಕಾಗುತ್ತದೆ. ಆದರೀಗ ಅವರು ತಮ್ಮನ್ನು ಸಮಾಜವಾದಿಯೆಂದು

ಗುರುತಿಸಿಕೊಂಡು ಆ ನೆಲೆಯಿಂದ ಈ ಮಾತುಗಳನ್ನಾಡುತ್ತಿರುವುದಾಗಿ ಹೇಳುತ್ತಾರೆ. ಸಮಸ್ಯೆಯೆಂದರೆ, ಅವರು ಮತ್ತೆ ಅಲ್ಲಿಗೇ ನಿಲ್ಲದೆ, 'ತಥಾಕಥಿತ ಸಮಾಜವಾದಿಗಳು' ಎಂಬ ಇನ್ನೊಂದು ಗುಂಪನ್ನು ಸೃಷ್ಟಿಸಿ ಅಂತಹವರ ಮಾತುಗಳನ್ನು ಕೇಳಬೇಡಿ ಎಂದೂ ಸಲಹೆ ನೀಡಿದ್ದಾರೆ. ಅಂದರೆ ಬಹುಶಃ ತಾವೊಬ್ಬರೇ ಇರುವ ಪರಿಶುದ್ಧ ಸಮಾಜ ವಾದವೊಂದಿದ್ದು, ಅದರ ವಕ್ತಾರಿಕೆ ಮಾಡುತ್ತಿರುವ ತಮ್ಮ ಮಾತನ್ನು ಮಾತ್ರ ಕೇಳಿ ಎಂದು ಅವರು ಹೇಳುತ್ತಿರುವಂತಿದೆ.

ಸಿದ್ಧಾಂತಗಳನ್ನು ಕುರಿತ ರಾಜಶೇಖರರ ಭಯ ಅವರು ಬಹುಕಾಲ ನಂಬಿದ್ದ ಸಿದ್ಧಾಂತದ ಅನುಭವದ ಹಿನ್ನೆಲೆಯಲ್ಲಿ ನಿಜವಿರಬಹುದು. ನನಗೆ ತಿಳಿಯದು. ಹಾಗೆಂದು ಅವರು ಸಿದ್ಧಾಂತದ ಕಲ್ಪನೆಯನ್ನು ಕುರಿತಂತೆಯೇ ಭಯ ಹುಟ್ಟಿಸುವುದು ಸಮಂಜಸವೆನ್ನಿಸುವುದಿಲ್ಲ. ಏಕೆಂದರೆ, ಸಾಮಾಜಿಕವಾದ ಪ್ರತಿಯೊಂದು ವಿಚಾರವೂ, ಅಭಿಪ್ರಾಯವೂ, ದೃಷ್ಟಿಕೋನವೂ, ಹಿತಾಸಕ್ತಿಯೂ ಮೂಲತಃ ಒಂದು ಸಿದ್ಧಾಂತವೇ. ರಾಜಶೇಖರ್ ಈಗೇನು ಸಿದ್ಧಾಂತವಿಲ್ಲದೆ ಬದುಕುತ್ತಿದ್ದಾರೆಯೇ? ಅಥವಾ ನೀನಾಸಂಗೇನೂ ಸಿದ್ಧಾಂತವಿಲ್ಲವೇ? ಯಾವುದೇ ಸಿದ್ಧಾಂತ ನಿರ್ವಾತದಲ್ಲಿ ಹುಟ್ಟುವುದಿಲ್ಲ. ಹೊಸ ಸಿದ್ಧಾಂತಗಳು ಹುಟ್ಟುವುದು ಹಳೆಯ ಸಿದ್ಧಾಂತಗಳ ಮುಖಾಮುಖಿಯಲ್ಲಿ. ಸಾಮಾಜಿಕ ಬದುಕೆಂಬುದು ಇಂತಹ ಮುಖಾಮುಖಿಗಳ ಸರಣಿಯಷ್ಟೆ. ಈ ಮುಖಾಮುಖಿ ಪ್ರಜಾತಾಂತ್ರಿಕವಾಗಿ ನಡೆದರೆ ಸಿದ್ಧಾಂತಗಳ ಸೃಷ್ಟಿ, ನಿರ್ನಾಮ, ಮರುಸೃಷ್ಟಿ ಒಳ್ಳೆಯದನ್ನೇ ಉಂಟು ಮಾಡಬಲ್ಲುದು. ಸಿದ್ಧಾಂತಗಳು ರಾಜಶೇಖರ್ ನಂಬಿದಂತೆ ಅಪಾಯಕಾರಿಯಾಗುವುದು ಅವು ಸೈನಿಕ ಶಿಸ್ತಿನಲ್ಲಿ ಸ್ಥಾಪಿತ ಹಿತಾಸಕ್ತಿಗಳಾಗಿ ಪ್ರಜಾತಾಂತ್ರಿಕ ಮುಖಾಮುಖಿಯನ್ನು ನಿರಾಕರಿಸತೊಡಗಿದಾಗ; ತಡೆಯತೊಡಗಿದಾಗ. ನೀನಾಸಂ ಅಂದು ನಾವು ನಾಲ್ವರನ್ನು ಕರೆಸಿ ಮಾತನಾಡಿಸಿ ಚರ್ಚಿಸಿದ್ದು ಒಂದು ರಚನಾತ್ಮಕ ಉದ್ದೇಶವಿದ್ದ ಪ್ರಜಾತಾಂತ್ರಿಕ ಮುಖಾಮುಖಿಯ ಪ್ರಯತ್ನವಾಗಿಯೇ ಎಂದು ನಾನು ಭಾವಿಸಿದ್ದೇನೆ. ಆದರೆ ರಾಜಶೇಖರ್ ಇದನ್ನು ನೀನಾಸಂನ ಮೂರ್ಖತನವೆಂಬಂತೆ, ಅದು ಎಲ್ಲಿ ಈ ಪ್ರಜಾತಾಂತ್ರಿಕ ಪ್ರಯೋಗದಲ್ಲಿ ಇತರರ ಮಾತು ಕೇಳಿ ಹಾಳಾಗುವುದೋ ಎಂದು ಆತಂಕಿತರಾಗಿ ಮಾತನಾಡಿದಂತಿದೆ.

ಇಂದಿನ ಹಾಳುಬಿದ್ದ ಸಿದ್ಧಾಂತಗಳ ರಾಜಕಾರಣದ ಹಿನ್ನೆಲೆಯಲ್ಲಿ ನೀನಾಸಂ ಕುರಿತ ರಾಜಶೇಖರರ ಕಳಕಳಿಯನ್ನು ಅರ್ಥ ಮಾಡಿಕೊಳ್ಳುತ್ತಲೇ, ಯಾರ ಮಾತು ಎಷ್ಟು ಕೇಳಬಹುದು ಎಂಬುದನ್ನು ಕುರಿತ ನೀನಾಸಂನ ವಿವೇಕದ ಬಗ್ಗೆ; ಹಾಗೇ ಒಟ್ಟಾರೆಯಾಗಿ ಪ್ರಜಾತಾಂತ್ರಿಕ ಪ್ರಕ್ರಿಯೆಯ ಸಾಧುತ್ವದ ಬಗ್ಗೆ ರಾಜಶೇಖರ್‌ಗೆ ಆದಷ್ಟು ಬೇಗ ನಂಬಿಕೆ ಬರಲಿ ಮತ್ತು ಸ್ವಾಯತ್ತತೆ ಎಂಬುದು ಇಂತಹ ಪ್ರಜಾತಾಂತ್ರಿಕ ಪ್ರಕ್ರಿಯೆಯ ಸಂದರ್ಭದಲ್ಲಷ್ಟೇ ತನ್ನ ಅರ್ಥ ಪಡೆಯುವುದು ಎಂಬ ತಿಳುವಳಿಕೆಯೂ ಉಂಟಾಗಲಿ ಎಂದು ಹಾರೈಸುತ್ತೇನೆ.

('ಮಾತುಕತೆ' : ೧೦೫-ಫೆಬ್ರುವರಿ, ೨೦೧೩ರಲ್ಲಿ- ಪ್ರಕಟ)

ಇಲ್ಲಿ ಪ್ರತಿ ಗಿಡಕ್ಕೂ ತೇಜಸ್ವಿ ಸ್ಪರ್ಶವಿದೆ:

ರಾಜೇಶ್ವರಿ ತೇಜಸ್ವಿಯವರೊಂದಿಗೆ ಒಂದು ಮಾತುಕತೆ

(ಇದು 'ಹೊಸ ಮನುಷ್ಯ' ಪತ್ರಿಕೆಯ ೨೦೧೩ರ ವಾರ್ಷಿಕ ವಿಶೇಷ (ಆಗಸ್ಟ್) ಸಂಚಿಕೆಗಾಗಿ ನಡೆಸಿದ ಮಾತುಕತೆ. ಪ್ರಶ್ನೆಗಳನ್ನು ಮೊದಲೇ ರಾಜೇಶ್ವರಿಯವರಿಗೆಗೆ ಕಳಿಸಿ ತರಿಸಿಕೊಂಡ ಉತ್ತರಗಳನ್ನು ಇಲ್ಲಿ ಪ್ರಕಟಿಸಲಾಗುತ್ತಿದೆ. ಈ ಮಾತುಕತೆಯಲ್ಲಿ ತೇಜಸ್ವಿಯವರ ವ್ಯಕ್ತಿತ್ವದ ಜೊತೆಗೇ ರಾಜೇಶ್ವರಿಯವರ ವ್ಯಕ್ತಿತ್ವವೂ ಹೊರಹೊಮ್ಮಿರುವುದನ್ನು ಓದುಗರು ಗಮನಿಸಬಹುದು. –ಡಿಎಸ್ಸೆನ್)

ನೀವು ತೇಜಸ್ವಿಯವರ ವ್ಯಕ್ತಿತ್ವದಲ್ಲಿ ಯಾವ ವಿಶೇಷಗಳನ್ನು ಕಂಡು ಆಕರ್ಷಿತರಾದಿರಿ?

ಶ್ರೀ ಪೂರ್ಣಚಂದ್ರ ತೇಜಸ್ವಿಯವರಲ್ಲಿ ನಾನು ತುಂಬ ಮೆಚ್ಚಿಕೊಳ್ಳುವುದು ಅವರ ಸರಳತೆಯನ್ನು. ನೋಡಿ, ನಮ್ಮ ಮದುವೆಗೆ ಐದಾರು ವರ್ಷದ ಮುಂಚೆ ನಮ್ಮ ಮನೆಗೆ ತೇಜಸ್ವಿ ಮೊಟ್ಟ ಮೊದಲಿಗೆ ಬಂದಾಗ, ಆಗ ನಮ್ಮದು ಮೂರು ಕೋಣೆ ಮನೆಯಲ್ಲಿ ಒಂದು ಕೋಣೆಗೆ ಮಾತ್ರ ಸಿಮೆಂಟಿನ ನೆಲ(ಅದೂ ನನ್ನ ಅಣ್ಣ ವಾಸುನೇ ಮಾಡಿದ್ದು.) ಉಳಿದೆರಡು ಕೋಣೆಗೆ ಸಗಣಿಯಲ್ಲಿ ಸಾರಿಸಿದ ಮಣ್ಣಿನ ನೆಲ.... ಹೀಗೆ ಕಷ್ಟದ ಬದುಕಾಗಿತ್ತು ಅಂತ ಹೇಳಬಹುದು. ಆದರೆ ತೇಜಸ್ವಿಗೆ ಇದ್ಯಾವುದರ ಕಡೆಗೆ ಲಕ್ಷ್ಯವೇ ಇಲ್ಲ. ಅವರ ಗಮನವೆಲ್ಲ ಮನೆ ಸುತ್ತ ಇದ್ದ ದಟ್ಟ ಕಾಡಿನ ಮೌನ. ಅದೇ ಅವರನ್ನು ಕಾಡಿದ್ದು.

ತೇಜಸ್ವಿ ಬಹುಮುಖ ಚಟುವಟಿಕೆ ಮತ್ತು ಆಸಕ್ತಿಗಳ ವ್ಯಕ್ತಿ. ಹಾಗಾಗಿ, ಕುಟುಂಬದಲ್ಲಿ ಓರ್ವ ಜವಾಬ್ದಾರಿಯುತ ಗಂಡನಾಗಿ ಮತ್ತು ತಂದೆಯಾಗಿ ತಮ್ಮ ಕರ್ತವ್ಯಗಳನ್ನು (ಸಾಂಸಾರಿಕ ವ್ಯವಹಾರಗಳನ್ನು) ನಿರ್ವಹಿಸುತ್ತಿದ್ದರಾ?

ಓಹೋ, ನೂರಕ್ಕೆ ನೂರು ಭಾಗ ನಿರ್ವಹಿಸಿದ್ದಾರೆ, ಖಂಡಿತವಾಗಿ. ಮನೆಯ ಎಲ್ಲ ಕೆಲಸ ಮಾಡುತ್ತಿದ್ದರು. ಬಚ್ಚಲ ಒಲೆ ಹಚ್ಚುತ್ತಿದ್ದರು, ಅದೂ ಶೆಡ್ಡಿಂದ ಸೌದೆ ತಂದುಕೊಂಡು.

ಅಡುಗೆ ಮಾಡುತ್ತಿದ್ದರು. ಒಟ್ಟಾಗಿ ಕೂತು ಸವಿಯುತ್ತಿದ್ದೆವು (ದಯವಿಟ್ಟು ದಿನಾಲೂ ಎಂದು ತಪ್ಪು ತಿಳಿಯಬೇಡಿ!) ಮಳೆ ಭರ್ರೆಂದು ಬಿದ್ದಾಗ ಮಧ್ಯರಾತ್ರಿ ಎದ್ದು ಹಾರೆ ತಗೊಂಡು ಹೋಗಿ ನಮ್ಮ ಮನೆಯಂಗಳದ ಕೆರೆ ತೂಬು ಸ್ವಚ್ಛ ಮಾಡಿ ಬಂದು ಮಲಗುತ್ತಿದ್ದರು "ಹಾಸಿಗೆ ಇದ್ದಷ್ಟು ಕಾಲು ಚಾಚು" ಎಂಬ ನನ್ನ ಪಾಲಸಿಯನ್ನು ಅವರೂ ಪಾಲಿಸುತ್ತಿದ್ದರು. ಹಾಗೇ ಮಾಡಿ ಹೀಗೇ ಮಾಡಿರೆಂದು ಮಕ್ಕಳಿಗೆ ಒತ್ತಾಯ ಹೇರದೇ ಮಾರ್ಗದರ್ಶನ ಮಾಡುತ್ತಿದ್ದರು. ಹೇಳ್ಬೇಕೆಂದರೆ ನಮ್ಮ ಮಕ್ಕಳಿಗೆ "ಅಣ್ಣ" (ತಂದೆ) ಬಗ್ಗೆನೇ ಹೆಚ್ಚು attachment. ಮಕ್ಕಳ ವಿದ್ಯಾಭ್ಯಾಸದ ಸಂಪೂರ್ಣ ಜವಾಬ್ದಾರಿ ನನಗೇ ಬಿಟ್ಟಿದ್ದರು. ಪಠ್ಯ ಪುಸ್ತಕ ಓದುವರಾ, ತರಗತಿಯಲ್ಲಿ ಅವರ performance ಹೇಗೆ ಎತ್ತ ಎಂದು ಏನೇನೂ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. General knowledge ಮಾತುಕತೆ ಆಡುತ್ತಿದ್ದರು. ಇಂಥವೆಲ್ಲ ಅವರವರ ಬದುಕನ್ನು ಹೇಗೆ ಉದ್ದೀಪನಗೊಳಿಸುತ್ತೆಂದರೆ ಕಳೆದವಾರ ಸುಸ್ಮಿತಾ ಕೀನ್ಯಾದಲ್ಲಿನ ಪ್ರಾಣಿ ಜಗತ್ತು ನೋಡಲು ಹೊರಟರೆ, ಈಶಾನ್ಯ ಲೇ ಲಡಾಕ್‌ಗೆ ತೆರಳಿ ಜಗತ್ತಿನ ಅತಿ ಎತ್ತರದ ಪ್ರದೇಶದಲ್ಲಿ ನಿಂತು ಜಗತ್ತನ್ನು ನೋಡಿ ಬಂದಳು. ಇಲ್ಲಿ ಇನ್ನೊಂದು ವಿಷಯ ಹೇಳಬೇಕು. ಮೊಮ್ಮಗಳು ವಿಹಾ ಹುಟ್ಟಿದಾಗ ಅವಳಮ್ಮ ಈಶಾನ್ಯೆ ಅವಳಿಗೆ ಅತ್ಯಾಧುನಿಕ ಅಂಗಿಯೊಂದನ್ನು ಹಾಕಿದ್ದಳು. ಅದನ್ನು ನೋಡಿದ ತೇಜಸ್ವಿ ಅದೆಲ್ಲ ಸರಿಯಲ್ಲವೆಂದು, ಈಶಾನ್ಯೆ ಮಗುವಾಗಿದ್ದಾಗ ನಾನೇ ಹೊಲೆದು ಅವಳಿಗೆ ಹಾಕಿದ್ದ ಅಂಗಿಯನ್ನು ನೆನೆದು, ಹಳೆಯ ಫೋಟೋವೊಂದರಲ್ಲಿದ್ದ ಅದನ್ನು ಗುರುತಿಸಿ ಸ್ಕ್ಯಾನ್ ಮಾಡಿಕೊಂಡು ಹೋಗಿ ಸ್ವತಃ ತಾವೇ ದರ್ಜಿ ಬಳಿ ಕೂತು ಹೊಲೆಸಿಕೊಂಡು ಬಂದು ಮೊಮ್ಮಗಳಿಗೆ ಹಾಕಿ ಸಂತೋಷ ಪಟ್ಟರು!

ಸಮಾಜವಾದವನ್ನು ಪ್ರತಿಪಾದಿಸುತ್ತಿದ್ದ ತೇಜಸ್ವಿಯವರಲ್ಲಿ ನೀವು ಯಾವ ಸಮಾಜವಾದಿ ಗುಣಗಳನ್ನು ಗುರುತಿಸುವಿರಿ?

ಅಲ್ರೀ, ನಮ್ಮ ಬದುಕಿನ ನೆಲೆಗಟ್ಟೇ ಹಾಗಿರುವಾಗ ಇವರಲ್ಲಿನ ಸಮಾಜವಾದಿ ಗುಣಗಳನ್ನು ಗುರುತಿಸಿ ಪಟ್ಟಿಮಾಡಬೇಕಾ ನಾನು? ಗ್ರಾಮೀಣ ಪ್ರದೇಶಕ್ಕೇ ಬಂದು ಬದುಕಿ ಬಿಟ್ಟೆವಲ್ಲ! ತೇಜಸ್ವಿ ಎಂ.ಎ. ಆದಮೇಲೆ ಇಲ್ಲಿ ಬದುಕುವೆನೆಂದು ನಿರ್ಧರಿಸಿದ್ದುದು ಹೊಟ್ಟೆಪಾಡಿಗಾಗಿ ಕಾಫಿತೋಟ ಮಾಡಿದ್ದುದು ಸಾಮಾನ್ಯ ವಿಚಾರವಲ್ಲ. ಸುಲಭದ ತುತ್ತಲ್ಲ. ಅದೂ ಅವರ ಅನ್ವೇಷಕ ಪ್ರತಿಭೆ ಮತ್ತು ಮನೆಯ ಹಿನ್ನೆಲೆಯಲ್ಲಿ ನೋಡಬೇಕು. ನಿಜಕ್ಕೂ Great. ಇದನ್ನು ನೆನೆದಾಗೆಲ್ಲ ಅಚ್ಚರಿಯ ಮೆಚ್ಚುಗೆ ಹೆಚ್ಚುತ್ತಲೇ ಹೋಗುತ್ತಿದೆ ನನಗೆ.

ತೇಜಸ್ವಿಯವರಿಗೆ ಹೆಂಗಸರೆಂದರೆ ಅಲರ್ಜಿ, ಸಂಕೋಚ, ಹಾಗಾಗಿಯೇ ಅವರ ಸಾಹಿತ್ಯದಲ್ಲಿ "ಕಿರಗೂರಿನ ಗಯ್ಯಾಳಿಗಳು" ಹೊರತಾಗಿ ಮಹತ್ವದ ಮಹಿಳಾ ಪಾತ್ರಗಳೇ ಇಲ್ಲ ಅಥವಾ ತುಂಬಾ ಕಡಿಮೆ ಎಂಬೆಲ್ಲ ಅಭಿಪ್ರಾಯಗಳಿವೆ. ನೀವೇನೆನ್ನುತ್ತೀರಿ?

ತೇಜಸ್ವಿ ಮಹಿಳೆಯರೆಂದರೆ ತುಂಬಾ ಸಂಕೋಚಪಟ್ಟುಕೊಳ್ಳುತ್ತಿದ್ದರು ಹೌದು. Shy. ನನಗೆ ಪರಿಚಯ ಆದಾಗ್ಲಿಂದ ಗಮನಿಸಿದ್ದೆ. ಯಾರೋ ಲೇಡೀಸ್ ಬಂದಿದಾರೆ ನೋಡು ಅನ್ನೋವ್ರು. ಆಗೆಲ್ಲ ನಗುತ್ತಿದ್ದೆ ನಾನು. ಅಲರ್ಜಿಯಂತ ಯಾರು ಹೇಳ್ತಾರೋ ಅವರ ನೋಡುವ ದೃಷ್ಟಿಯಲ್ಲೇ ಏನೋ ಒಂದು ಕೊಂಕೋ ಕೊರತೆಯೋ ಯಾಕಾಗಬಾರದು? ಅದು ಅವರ ಲಿಮಿಟೇಶನ್ಸ್ ಅಷ್ಟೆ.

ತೇಜಸ್ವಿಗೆ ಮಹಿಳೆಯರ ಬಗ್ಗೆ ಅತ್ಯಂತ ಗೌರವ. ಮಹಿಳೆಯರೇ ಆಗಲಿ ಮಹನೀಯರೇ ಆಗಲಿ ಮನೆಗೆ ಬಂದವರಲ್ಲಿ ಲೋಕಾಭಿರಾಮವಾಗಿ ಔಪಚಾರಿಕವಾಗಿ ಮಾತನಾಡುವುದು ಅವರಿಗೆ ತಿಳಿದಿರಲಿಲ್ಲ. ತಿಂಡಿ ಆಯ್ತಾ, ಯಾವ ಬಸ್ಸಿನಲ್ಲಿ ಬಂದಿರಿ ಇಂಥ ಮಾತುಗಳನ್ನು ಮಾತನಾಡಬೇಕಾಗಿ ಬಂದ ಸಂದರ್ಭದಲ್ಲಿ, ನೀನು ಹೋಗಿ ಮಾತಾಡಿಸಿ ಕಳಿಸಿ ಬಾ ಎಂದು ನನಗೆ ಹೇಳುತ್ತಿದ್ದರು. ಇದು Handicap ಆ? ನಿಮಗೆ ಹಾಗನ್ನಿಸುತ್ತಾ?

ನಮ್ಮ ಬದುಕಿನಕ್ರಮದ ಶಿಸ್ತಿನಲ್ಲಿ, ತೇಜಸ್ವಿ ಕ್ಲಬ್ಬು, ಪಾರ್ಟಿ ಇಂಥವುಗಳ ಕಡೆಗೆ ಮುಖ ಹಾಕುತ್ತಿರಲಿಲ್ಲ. ಕೆಲವೊಂದು ಸಂದರ್ಭಗಳಲ್ಲಿ ಬಫೆಗೆ ಊಟಕ್ಕೆ ಕರೆದರೂ ಮನೆಗೇ ಬಂದು ಊಟ ಮಾಡುತ್ತಿದ್ದರು. ಡ್ರಿಂಕ್ಸ್ ಇಲ್ಲೇ ಇಲ್ಲ. ನಮ್ಮ ಅನುಭವದ ಮೂಸೆಯಿಂದ ಮಾತ್ರ ಕಲ್ಪನೆಯ ಪಾತ್ರ ಸೃಷ್ಟಿಯಾಗುವುದು ತಾನೆ? ನಾವು ಗ್ರಾಮೀಣ ಪ್ರದೇಶದಲ್ಲಿ ಬದುಕು ಕಟ್ಟಿಕೊಂಡಿದ್ದರಿಂದ, ಇವರು ನೋಡುತ್ತಿದ್ದ ಪಾತ್ರಗಳೇ ಕಿರಗೂರಿನ ಗಯ್ಯಾಳಿಗಳಲ್ಲಿ ಸೃಷ್ಟಿಯಾಗಿರುವುದು.

ತೇಜಸ್ವಿ ತಮ್ಮ ಬರವಣಿಗೆಯನ್ನು ನಿಮ್ಮೊಂದಿಗೆ ಯಾವಾಗಲಾದರೂ ಚರ್ಚಿಸುತ್ತಿದ್ದರಾ? ಒಂದು ಕೃತಿ ಪೂರ್ಣವಾದ ನಂತರವಾದರೂ? ಅಥವಾ ಬೇರೆಯವರ ಸಾಹಿತ್ಯದ ಬಗ್ಗೆ ನಿಮ್ಮೊಂದಿಗೆ ಮಾತನಾಡುತ್ತಿದ್ದರಾ?

ತೇಜಸ್ವಿ ತಮ್ಮ ಬರವಣಿಗೆ ಬಗ್ಗೆ ಚರ್ಚಿಸುತ್ತಿದ್ದರು ಅಂತ ಹೇಳಿದರೆ ತಪ್ಪಾಗಬಹುದು. ಆದರೆ ಅವರು ಕಂಡುಂಡ ಅನುಭವ ಹಂಚಿಕೊಳ್ಳುತ್ತಿದ್ದರು. ಅಷ್ಟೇ ಅಲ್ಲ, ಆವತ್ತು ಮೊಟ್ಟೆ ಹಗರಣ ಬಂತು, ಅಯೋಧ್ಯೆಯ ರಾಮ ಬಂದ, ವಾಜಪೇಯಿಯ ದನದ ಮಾಂಸದ ಉಪಾಹಾರ ಸೇವನೆ ಸೇರಿತು, ಹೀಗೇ ಧರ್ಮ, ಜಾತಿ ಬಗ್ಗೆ ಚರ್ಚಿಸುತ್ತಿದ್ದರು. ಹಾಗಾಗಿ ಹೊರಗಿನವರೊಟ್ಟಿಗೆ ಮಾತನಾಡುವಾಗ ಮುಂದೆ ಇದೇ ಪಾಯಿಂಟ್ ಹೇಳ್ತಾರೆನ್ನುವುದು ನನಗೆ ಸ್ಪಷ್ಟ ತಿಳೀತಿತ್ತು. "ಚಿದಂಬರ ರಹಸ್ಯ" ಕಾದಂಬರಿ ರಚಿಸುವಾಗ ಮೊದಲ ಅಧ್ಯಾಯ ಬರೆದಿಟ್ಟಿದ್ದರು. ನಾನು ಓದಿ ನನ್ನ ಅಭಿಪ್ರಾಯ ವ್ಯಕ್ತಪಡಿಸಲು ಹೊರಟಾಗ, ಮೊದಲು ನಿಲ್ಲಿಸು, ನನ್ನನ್ನು ಪ್ರಭಾವಿಸಬೇಡ, ಅದು ಪೂರ್ತಿ ಆದನಂತರ ಓದು ಎಂದರು.

ಅದು ಹಾಗಾದರೆ, ತೇಜಸ್ವಿ Stein Beckನ "My Travels with Charley" ಓದುತ್ತಾ ಮುಂದುವರಿದಂತೆಲ್ಲ ರೋಮಾಂಚನಗೊಂಡು ನನ್ನೊಟ್ಟಿಗೆ ಅದರ

ರೋಚಕತೆಯನ್ನು ಹಂಚಿಕೊಳ್ಳುತ್ತಿದ್ದರು. "ಪ್ಯಾಪಿಲಾನ್" ಪುಸ್ತಕ ನೀವೂ ಓದಿರಬಹುದು. ಇಂಗ್ಲಿಷ್‌ನಲ್ಲಿ ತೇಜಸ್ವಿ ಓದುವಾಗ ಚೂರು ಚೂರು ಹೇಳಿದ್ರು, ಕನ್ನಡದಲ್ಲಿ ಬಂದನಂತರ ಮಂದುವರಿದ ಭಾಗ ಪೂರ್ತಿ ಹೇಳಿದ್ರು. ಇತ್ತಿತ್ತಲಾಗಿ ಒಬ್ಬ ಗುಲ್ಬರ್ಗಾದ ಮೆಡಿಕಲ್ ವಿದ್ಯಾರ್ಥಿ ಪ್ಯಾಪಿಲಾನು ಓದಿ ರೋಮಾಂಚನಗೊಂಡು ತೇಜಸ್ವಿ ಸರ್ ಅವರಲ್ಲಿ ಮಾತಾಡಬೇಕು ಮೇಡಂ, ಕರೆಯಿರಿ ಎಂದನು. "ಪ್ಯಾಪಿಲಾನ್" ಪುಸ್ತಕದ ಬಗ್ಗೆ ಮುಂದೇನು ಅಂತ ಕೇಳಬೇಕೆಂದ. ನಾನೇ ಎಲ್ಲ ಹೇಳಿದೆ. ಸರಿ, ಸರ್ ಅವರಲ್ಲೇ ಮಾತಾಡ್ಬೇಕು ಕರೆಯಿರಿ ಎಂದ. ಯಾಕೋ ಮಾರಾಯ, ನಿನಗೆ ಗುಲ್ಬರ್ಗ ತುಂಬಾ ದೂರ ಆಯ್ತೇನು, ಏನೂ ಗೊತ್ತಿಲ್ವ? ಎನ್ನುತ್ತಿದ್ದಂತೆ ತೇಜಸ್ವಿ ಈಗ ಇಲ್ಲದ್ದು ನೆನಪಾಗಿ ದೊಡ್ಡ ಶಾಕ್ ಹೊಡೆದಂತಾಗಿ ಥಟ್‌ಂತ "ಸಾರಿ ಮೇಡಂ" ಅಂತ ಹೇಳಿ ಫೋನು ಇಟ್ಟನು.

ನಾನು ಮೂರನೇ ಆನರ್ಸ್‌ನಲ್ಲಿದ್ದಾಗ "ಕಾನೂರು ಹೆಗ್ಗಡತಿ" ಕಾದಂಬರಿ ಓದಿದ್ದೆ. ಆಗಿನ್ನೂ ತೇಜಸ್ವಿ ಪರಿಚಯವಾಗಿರಲಿಲ್ಲ. ಮತ್ತು ಯಾವ ಸಾಹಿತಿಗಳ ಅಭಿಪ್ರಾಯಕ್ಕೂ ಒಳಗಾಗಿರಲಿಲ್ಲ. ಅಲ್ಲಿ, ಕೊಟ್ಟಿಗೆಯಿಂದ ಬರುವಾಗ ಅವಳ ಬಿಳಿಕಾಲು ಬೆರಳುಗಳ ಸಂದಿಯಿಂದ ಸೆಗಣಿ ಹೊರಬರುತ್ತಿತ್ತು ಎಂಬ ವಿವರಣೆ ಬರುತ್ತೆ. (ಈಗ ನೆನಪಿನಿಂದಲೇ ಬರೆಯುತ್ತಿರುವುದು) ಇದು ಅನಾವಶ್ಯಕವಾದ ವಿವರಣೆ ಎಂಬಂಥ ಟೀಕೆಗಳು ಬಂದಿದ್ದವು. ನಾವು ಚಿತ್ರಕೂಟದಲ್ಲಿದ್ದಾಗ ಇದರ ಬಗ್ಗೆ ತೇಜಸ್ವಿ ವಿವರಿಸಿದ್ದು ನೆನಪಿದೆ. ಅದು ಪೂರಕವಾಗಿ ಒಂದು ಕೃತಿಯಲ್ಲಿ ಹೇಗೆ ಹೊಮ್ಮುತ್ತೆ ಎಂಬುದನ್ನು ಹೇಳಿದಾಗ ನಾನು ತಪ್ಪು ತಿಳಿದುಕೊಂಡಿದ್ದು ಅರಿವಾಯ್ತು.

ಇನ್ನು 'ಭಾರತೀಪುರ' ಓದಿದ ನಂತರನೂ, ಅದರ ಬಗ್ಗೆ ಮಾತಾಡಿದ್ದರು. ಕೆಲವೊಂದು ಒಪ್ಪಿಗೆಯಾಗಿರಲಿಲ್ಲ. ಭಿನ್ನಾಭಿಪ್ರಾಯಗಳಿತ್ತು. ವಿಮರ್ಶಾತ್ಮಕವಾಗಿ ಹಲವು ಮಾತುಗಳನ್ನು ಹೇಳಿದ್ದರಾದರೂ, ಆ ಪುಸ್ತಕವನ್ನು ನಾನು ಓದಿದ್ದಿಲ್ಲದೇ ಇದ್ದುದರಿಂದ, ಅವರ ಮಾತುಗಳು ನನ್ನ ತಲೆಯಲ್ಲಿ record ಆಗಿಲ್ಲ. ನನಗೆ ಗೊತ್ತಿಲ್ಲ.

ಭೈರಪ್ಪನವರಿಂದ ಕನ್ನಡಿಗರಿಗೆ ಓದುವ ಹವ್ಯಾಸ ಹೆಚ್ಚಾಗಿದ್ದನ್ನೂ ಹೇಳಿರುವರು. ಆವರಣದ ಬಗ್ಗೆ ಎಲ್ಲೆಡೆ ಮಾತು ಕೇಳಿ ಬರುತ್ತಿದೆಯೆಂದು ಓದಲೇಬೇಕೆಂದು ಗೆಳೆಯ ಬಿ.ಎನ್.ಶ್ರೀರಾಂರಿಂದ ಪುಸ್ತಕ ತರಿಸಿಕೊಂಡು ಒಂದೂವರೆ ದಿನದಲ್ಲಿ ಓದಿ ಪೂರೈಸಿದ್ದು ನೆನಪುಂಟು......

ತೇಜಸ್ವಿ ಮತ್ತು ನಿಮ್ಮ ಬದುಕಿನಲ್ಲಿ ಕೊರತೆಗಳೆಂಬುವು ಮತ್ತು ವಿಷಾದಪಡುವಂತಹ ಸಂಗತಿಗಳೇನಾದರೂ ಇದ್ದುವೇ?

ಕೊರತೆನೂ ಇಲ್ಲ. ವಿಷಾದ ಮೊದಲೇ ಇಲ್ಲ. ಮದುವೆಗೆ ಬದುಕಿನಲ್ಲಿ ಏನೇನೋ ನಿರೀಕ್ಷಿಸಿಕೊಂಡು ಕೂತಾಗ ಕೊರತೆ ಎಂಬುದು ಇರುತ್ತೆ. ನಮಗೇನೂ ಇರಲಿಲ್ಲ.

ಒಂದಿವ್ಸ ನಾನು ಹೇಳಿದೆ, ಯಾರ್‍ಯಾರೋ ಹೇಳ್ತಾರೆ "ನಿಮ್ಮದು ಬಹಳ ಒಳ್ಳೆ ಅದೃಷ್ಟ" ಅಂತೆ ಅಂದೆ. ಹ್ಞೂಂ, ಒಬ್ಬರಿಗೆ ಅದೃಷ್ಟ ಮತ್ತೊಬ್ಬರಿಗೆ ದುರಾದೃಷ್ಟ ಯಾಕಾಗಬಾರ್ದು:" ಎಂದರು ನನ್ನನ್ನು ಛೇಡಿಸಲಿಕ್ಕಾಗಿ. ಹೌದು ತಾನೆ. ಇಬ್ಬರೂ ನಕ್ಕೆವು.

ತೇಜಸ್ವಿಯವರ ಅಗಲಿಕೆ/ನೆನಪನ್ನು ಹೇಗೆ ತುಂಬಿಕೊಳ್ಳುತ್ತಿರುವಿರಿ?

ತೇಜಸ್ವಿ ಇರಬೇಕಿತ್ತು ಅಂತ ಪ್ರತಿ ಗಳಿಗೆ ಅನ್ನಿಸುತ್ತಲೇ ಇರುತ್ತೆ. ಈಗ ಇಲ್ಲಿ ಓಡಾಡ್ತಿರ್ತಿದ್ರು ಅಂದುಕೊಳ್ಳುವೆ.... ಕೆಲವು ಸಲ ಅವರನ್ನು ಬೈದುಕೊಳ್ತೀನಿ.... ನಾನೊಬ್ಬಳೇ ಈಗ.... ಕಷ್ಟ.... ಏನು ಮಾಡುವುದು.

ಆದರೆ ಎಲ್ಲರಿಗೂ ತಿಳಿದಿರುವಂತೆ "ನನ್ನ ತೇಜಸ್ವಿ" ಪುಸ್ತಕ ಬರೆದೆ. ಸವಿತಾ ನಾಗಭೂಷಣರಿಗೆ ಅನಂತಾನಂತ ಕೃತಜ್ಞತೆಗಳು. ಬರೆಯಿರೆಂದು ಒತ್ತಾಸೆ ಕೊಟ್ಟರೆಲ್ಲಪ್ಪ. ಅದೆಷ್ಟು ಧನ್ಯತೆಯ ಭಾವ ಬರುತ್ತೆ. ತುಂಬಾ ತುಂಬಾ ಒಳ್ಳೆಯದಾಯ್ತು. ಇದು ತೇಜಸ್ವಿ ನೆನಪನ್ನು ಮಾತ್ರ ತುಂಬಿಕೊಟ್ಟಿದ್ದಲ್ಲ. ಶ್ರೀ ಜಿ. ಹೆಚ್. ನಾಯಕರ ಮಾತನ್ನೇ ಹೇಳ ಹೊರಟರೆ –ಕನ್ನಡಕ್ಕೆ ಮಹತ್ವದ ಕೃತಿ ಕೊಟ್ಟಿರಿ ಎಂದಾಗ ನನ್ನೊಳಗೇ ಧನ್ಯೋಸ್ಮಿ ಎಂದುಕೊಂಡೆ. ನಮ್ಮ ಪ್ರಕಾಶನದಿಂದಲೇ ಅಂದವಾಗಿ ಪ್ರಕಟಗೊಂಡಿತು. ಮರು ಮುದ್ರಣವೂ ಆಯ್ತು. ಅವರಿಗೂ ಕೃತಜ್ಞತೆಗಳು. ಅನಂತ ಧನ್ಯವಾದಗಳು.

ಇದೀಗ ನನ್ನ "ಅಮ್ಮ ನೇಯ್ದ ಬದುಕು" ಬಗ್ಗೆ ಬರೆಯುತ್ತಿರುವೆನು. ಕೆಂಡಸಂಪಿಗೆ.ಕಾಂ ನಲ್ಲಿ ಬರುತ್ತಿದೆ. ಇದು ಹೃದಯ ತುಂಬಿ ಬರುವ ಕೆಲಸವೇ. ಉಳಿದಂತೆ ಕಾಫಿ ತೋಟ ನೋಡಿಕೊಳ್ಳುವ ಕೆಲಸವಿದೆ. ತೇಜಸ್ವಿಯ ಸ್ಪರ್ಶ ಪ್ರತಿಯೊಂದು ಗಿಡಕ್ಕೂ ಇದೆ. ಹೂ ತೋಟ ಉತ್ಸಾಹ ತುಂಬುತ್ತೆ. ಇಷ್ಟಲ್ಲದೆ ತೇಜಸ್ವಿ ಅಭಿಮಾನಿಗಳು ತೇಜಸ್ವಿ ಓಡಾಡಿದ ಜಾಗ ನೋಡಲೆಂದೇ ಇಲ್ಲಿಗೆ ಬರುತ್ತಲೇ ಇರುವರು. ಎಲ್ಲರಿಗೂ ಮತ್ತೊಮ್ಮೆ ಧನ್ಯವಾದಗಳು.

ಅನಂತಮೂರ್ತಿಯವರ ಕೊನೆಯ ಸಂದರ್ಶನ:

ನಾವು ಕುವೆಂಪು ಅವರ ಮುಂದುವರಿಕೆ: ಯು.ಆರ್. ಅನಂತಮೂರ್ತಿ

(ಕನ್ನಡದ ಏಕೆ, ಭಾರತದ ಸಮಕಾಲೀನ ಲೇಖಕರ ಪೈಕಿ ಮಹತ್ವಪೂರ್ಣ ಲೇಖಕರಲ್ಲೊಬ್ಬರಾಗಿರುವ ಯು.ಆರ್. ಅನಂತಮೂರ್ತಿಯವರು ಲೇಖಕ ಮಾತ್ರವಲ್ಲ, ಸಾಂಸ್ಕೃತಿಕ ಮತ್ತು ರಾಜಕೀಯ ಚಿಂತಕ ಹಾಗೂ ವ್ಯಾಖ್ಯಾನಕಾರರಾಗಿಯೂ ಹೆಸರು ಮಾಡಿದವರು. ತಮ್ಮ ಹಲವು ವಿವಾದಾತ್ಮಕ ಹೇಳಿಕೆಗಳ ಮೂಲಕ ಈ ಮೂರೂ ಕ್ಷೇತ್ರಗಳಲ್ಲಿ ಬಿಸಿ ಬಿಸಿ ಹಾಗೂ ಅರ್ಥಪೂರ್ಣ ಚರ್ಚೆಗಳಿಗೆ ಕಾರಣರಾದವರು ಮತ್ತು ಟೀಕೆ–ನಿಂದನೆಗಳಿಗೂ ಸಿಕ್ಕಿ ಬಳಲಿದವರು. ಎಂಭತ್ತನ್ನೂ ಮೀರಿದ ತಮ್ಮ ಈ ಇಳಿ ವಯಸ್ಸಿನಲ್ಲಿಯೂ ಬತ್ತದ ಜೀವನೋತ್ಸಾಹದೊಂದಿಗೆ ಸಾರ್ವಜನಿಕ ಜೀವನದ ಎಲ್ಲ ಚರ್ಚೆಗಳಲ್ಲೂ ಪಾಲ್ಗೊಳ್ಳುತ್ತಿರುವ ಅನಂತಮೂರ್ತಿಯವರನ್ನು, ಈ ಎಲ್ಲ ಹಿನ್ನೆಲೆಯೊಂದಿಗೆ 'ಹೊಸ ಮನುಷ್ಯ'ಕ್ಕಾಗಿ ಇಲ್ಲಿ ಒಂದು ಬಿಚ್ಚುಮನಸ್ಸಿನ ಮಾತುಕತೆಗೆ ಎಳೆಯುವ ಪ್ರಯತ್ನ ಮಾಡಿದೆ. ಇದರ ಫಲವೆಂಬಂತೆ ಅವರ ಬಾಯಿಂದ ಕೆಲ ಹೊಸ ಸತ್ಯಗಳು ಹೊಮ್ಮಿ, ಕಳೆದ ಐವತ್ತು ವರ್ಷಗಳ ಕನ್ನಡ ಸಾಹಿತ್ಯ ಚರಿತ್ರೆಯ ಒಂದು ಪುನರ್‌ನಿರೂಪಣೆಯೂ ಸಾಧ್ಯವಾಗಿದೆ ಎನ್ನಿಸುತ್ತದೆ. ೨೦೧೪ರ ಜೂನ್ ೧೪ರಂದು ಅನಂತಮೂರ್ತಿಯವರ ಅಳಿಯ ವಿವೇಕ ಶಾನುಭಾಗರ ಮನೆಯಲ್ಲಿ ನಡೆದ ಈ ಸಂದರ್ಶನ ಬಹುಶಃ ಅವರೊಡನೆ ದಾಖಲಾದ ಕೊನೆಯ ಸಂದರ್ಶನವೆಂದು ಕಾಣುತ್ತದೆ)

ನೀವು ಕನ್ನಡದ ತುಂಬ ಮಹತ್ವದ ಲೇಖಕರು. ಲೇಖಕರು ಅಂದ್ರೆ ಬರೀ ಸೃಜನಶೀಲ ಅಂತ ಸಾಮಾನ್ಯವಾಗಿ ಕರೆಯುವಂತಹ ಲೇಖಕರು ಮಾತ್ರ ಅಲ್ಲ. ಸಾಹಿತ್ಯ–ಸಂಸ್ಕೃತಿ–ರಾಜಕಾರಣಗಳನ್ನು ಕುರಿತು ಒಟ್ಟೊಟ್ಟಿಗೇ ಚಿಂತಿಸಿರೋ, ಜಿಜ್ಞಾಸೆ ಮಾಡಿರೋ ಲೇಖಕರು ಕೂಡ. ನೀವು ನವ್ಯ ಸಾಹಿತ್ಯ ಸಂಪ್ರದಾಯದ ಒಬ್ಬ ಹರಿಕಾರರು ಕೂಡ ಅಂತ ಹೇಳಬಹುದೇನೋ. ಆದ್ದರಿಂದ ನಮ್ಮ ಮಾತುಕತೆಯನ್ನು ಅಲ್ಲಿಂದ ಆರಂಭಿಸಬಹುದೂಂತ ಕಾಣುತ್ತದೆ. ಈ ನವ್ಯ ಪಂಥದ ಬಗ್ಗೆ ಒಂದು ಅಭಿಪ್ರಾಯ ಇದೆ ಸರ್. ಅದು ಕನ್ನಡ ಸಾಹಿತ್ಯ ಆವರೆಗೆ ಸತತವಾಗಿ ಕಾಪಾಡಿಕೊಂಡು ಬಂದಿದ್ದ ತನ್ನ ಪರಂಪರೆಯೊಂದಿಗಿನ ಸಾವಯವ ಸಂಬಂಧವನ್ನು ಕಡಿದುಕೊಂಡಿತು ಅಥವಾ ಕಡಿದು ಹಾಕಿತು ಅಂತ. ಇದರ ಬಗ್ಗೆ ನೀವೇನು ಹೇಳ್ತೀರಾ ಸರ್?

ಕಡಿದು ಹೋಗಬಹುದಿತ್ತು, ಆದರೆ ಕಡಿದು ಹೋಗಲಿಲ್ಲ. ಅಸಂಗತವಾದದ ಹೆಸರಲ್ಲಿ ಕೆಲವು ಪ್ರಯೋಗಗಳು ನಡೆದವು. ನ.ರತ್ನ ಮಾಡಿದ್ದ, ಸದಾಶಿವ ಮಾಡಿದ್ದ, ನಾನೂ ಮಾಡಿದ್ದೆ. ಆದರೆ ಅಡಿಗರು ಮಾಡಿರಲಿಲ್ಲ. ಅವರ ಮಟ್ಟಿಗೆ ಅಡಿಗರು ಪರಂಪರೆಯಿಂದಲೇ ಬಂದವರು. ಅವರನ್ನು ನಾವು ದೃಢವಾಗಿ ಹಿಡಿದುಕೊಂಡಿದ್ದರಿಂದ ಕನ್ನಡವನ್ನ ಸರಿಯಾಗಿ ಬರೀಬೇಕು, ಛಂದಸ್ಸು ತಪ್ಪಬಾರದು, ಸಾಹಿತ್ಯದ ಮರ್ಯಾದೆಗಳನ್ನು ಮೀರಬಾರದು ಇದನ್ನು ಕಲಿತ್ವಿ ನಾವು. ಅಡಿಗರು ತಿದ್ದತಾ ಇದ್ದರು ನಮ್ಮನ್ನ. ಆದ್ರಿಂದ ನಾವು ಎತ್ಲೆತ್ಲೋ ಹೋಗ್ಲಿಲ್ಲ. ಮತ್ತು... ಈಗ ತೇಜಸ್ವಿ ತಗೊಳ್ಳಿ. ಅವನು ನಮ್ಮ ನವ್ಯರ ಜೊತೆಗೆ ಬರ್ದೇ ಇದ್ದಿದ್ರೆ, ಅವನು ಕುವೆಂಪು ಅವರ ಸುತ್ತ ಒಂದು ಗುಂಪಿತ್ತಲ್ಲ, ಅಲ್ಲೇ ಇದ್ದಿದ್ರೆ ಕ್ರಿಯೇಟೀವ್ ಆಗ್ತಿರಲಿಲ್ಲ. ಅದೇನೇ ನಾನು ಹೇಳೋದು... ಕೆದಕುವ, ಹುಡುಕುವ, ಪ್ರಶ್ನಿಸುವ ಅನುಮಾನಿಸುವ ಗುಣ ಇತ್ತು. ಅದು ಅತಿ ಆಗಿ ಇರ್ತಿತ್ತು ಕೆಲವು ಸಲ. ಯಾವಾಗಲೂ ನೀನು ಕಂಡ ಸತ್ಯವನ್ನು ಹೇಳಬೇಕು ಅಂತಿದ್ರೆ ಅತಿಗೆ ಹೋಗೋದಕ್ಕೆ ಹೆದರಬೇಡ ಅಂತ ಬ್ಲೇಕ್ ಹೇಳ್ತಾ ಇದ್ದ. Gateways of Heaven are open to those who go to the extreme. ಆದರೆ ನಾವು ಆ ಅತಿಗೆ ಹೋಗಲಿಲ್ಲ ಕಮೂ ತರ. ಕಮೂ ಹೋಗಿದ್ದ. ಕಮೂ ಈಸ್ ಎ ಗ್ರೇಟ್ ರೈಟರ್ ಇವೊತ್ತೂ!

ಆದರೆ ನವ್ಯ ಬಂದ ಮೇಲೆ ಕನ್ನಡದ ಓದುಗ ವರ್ಗದ ಸ್ವರೂಪವೇ ಬದಲಾಯಿತು ಮತ್ತು ಅದಕ್ಕಿಂತ ಹೆಚ್ಚಾಗಿ ಸಾಹಿತ್ಯ ಅನ್ನೋದು ಒಂದು ಪರಿಣತ ಅನ್ನಬಹುದಾದ ಸೀಮಿತ ವರ್ಗಕ್ಕೆ ಸಂಕುಚಿತಗೊಂಡ್ತು ಅನ್ನೋ ಮಾತು ಕೂಡ ಇದೆ.

ಅದನ್ನು ಮೊಕಾಶಿನೂ ಹೇಳ್ತಾ ಇದ್ರು, ಅವರು ಹೇಳೋರು, ತರಾಸುಗೆ ಒಂದು ಓದುಗ ವರ್ಗ ಇತ್ತು. ನೀವೂ ಅಂತದನ್ನ ಕಳಕೊಂಡ್ರಿ ಅಂತ. ನಾವು ಕೆಲವು ಸಲ ಉದ್ದೇಶಪೂರ್ವಕವಾಗಿಯೇ ಕಳಕೊಂಡ್ವಿ. ನಂಗೆ ಬಹಳ ಜನ ಓದಬೇಕು ಅಂತಾನೇ ಇರಲಿಲ್ಲ. ಒಂದು ಎಂಟು ಹತ್ತು ಜನ ಒಬ್ರಿಗೊಬ್ಬರು ನಮ್ಮೊಳಗೇ ಓದಿಕೊಂಡ್ರೆ ಸಾಕು. ನನಗೆ ನಾನೇ ಹೇಳಿಕೊಂಡ್ರೆ ಸಾಕು. ಅಷ್ಟರಮಟ್ಟಿಗೆ ಹೋಗಿದ್ರಿಂದಲೋ ಏನೋ ಒಂದು ಹೊಸತನ್ನ ಹುಟ್ಟಿಸೋಕೆ ನಮ್ಮ ಮೂರೂ ಜನಕ್ಕೆ–ನಾನು, ಲಂಕೇಶ್, ತೇಜಸ್ವಿಗೆ–ಸಾಧ್ಯ ಆಯಿತು.

ಆದರೆ ಸಾಹಿತ್ಯ ಕೆಲವರಿಗೆ ಮಾತ್ರ ಅಂತಾಗಿ ಅದು ಒಂದು ದೊಡ್ಡ ಓದುಗ ವರ್ಗವನ್ನು ಕಳಕೊಂಡಿದ್ದಂತೂ ನಿಜವಲ್ಲವಾ ಸರ್?

ಈಗ ಪಡೆದಿದೆ. ಕ್ರಮೇಣ ಪಡೀತಾ ಇದೆ.

ಹೀಗೆ ಕಳಕೊಂಡಿದ್ದರ ಹಿಂದೆ ನವೋದಯದ ಲೇಖಕರು ಪಶ್ಚಿಮದ ವಿಚಾರಗಳನ್ನ, ಪ್ರಭಾವಗಳನ್ನ ಅರಗಿಸಿಕೊಂಡು internalise ಮಾಡಿಕೊಂಡಂತೆ–ರಕ್ತಗತ ಮಾಡಿಕೊಂಡಂತೆ ನೀವು ನವ್ಯರು ಮಾಡಿಕೊಳ್ಳಕ್ಕಾಗದ ಕೊರತೆನೂ ಇದೆ ಅಂತ ಅನ್ನಿಸುತ್ತೆ.

ಇಲ್ಲ. ಇಲ್ಲ ನಾವು ಸಿಕ್ಕಾಪಟ್ಟೆ ಮಾಡಿಕೊಂಡ್ವಿ. ನಾನು ಇಡೀ ಬ್ರಾಹ್ಮಣ ವರ್ಗವನ್ನ ಟೀಕಿಸಿದ ಕ್ರಮ ಇದೆಯಲ್ಲ ಅದರಲ್ಲಿ ಪಶ್ಚಿಮದ ಪ್ರಭಾವ ಒಂತರದಲ್ಲಿ ಇದೆ. ಹೇಗೆ ಕುವೆಂಪು ಆಗಿನ ಕಾಲದ ಸಾಹಿತ್ಯದ ಐರೋಪ್ಯೀಕರಣದ ಮುಖ್ಯ ಲೇಖಕರೋ He got more from Europe than any other writer. We are a continuation of Kuvempu and not Gokak. ಕುವೆಂಪೂನ ಪ್ರಶ್ನಿಸ್ತಾನೇ ನಾವು ಕುವೆಂಪೂನ continue ಮಾಡಿದ್ವಿ.

ಹಾಗಿದ್ದರೆ 'ಗತಿಸ್ಥಿತಿ' ಅಂತಹ ಕಾದಂಬರಿ ಬಂದಾಗ ಅದನ್ನ ಸಿಕ್ಕಾಪಟ್ಟೆ ಹೊಗಳಿ ಅಟ್ಟಕ್ಕೇರಿಸಿದ ನೀವು 'ಮಲೆಗಳಲ್ಲಿ ಮದುಮಗಳು'ನಂತಹ ಕಾದಂಬರಿ ಬಂದಾಗ ಅದೊಂದು ಮಹತ್ವದ ಕಾದಂಬರಿ ಅಂತ ಗುರುತಿಸೋದಕ್ಕೆ ಏಕೆ ಸಾಧ್ಯವಾಗಲಿಲ್ಲ ಸರ್?

ಆಗ ನಾವು ತುಂಬ ತಪ್ಪು ಮಾಡಿದೀವಿ. ನಂಗೆ ಅದು ಗ್ರೇಟ್ ನಾವೆಲ್ ಅಂತ ಅನ್ನಿಸಿದ್ದು ಆಮೇಲೆ. ಆಗ ನಾನು ಏನಂದೆ, ಅದು ವಿವರಗಳಲ್ಲಿ ಸೊಕ್ಕಿದೆ, ಜಾಸ್ತಿ ಇದೇಂತ ಹೇಳಿದೆ. ಅದಕ್ಕೆ ಒಂದು ಕಾರಣ ಇತ್ತು. ನನಗೊಂದು ಸಿದ್ಧಾಂತ ಇತ್ತು. ಈಗ ನೋಡಿ, ಮೇಜನ್ನ ವರ್ಣಿಸುವಾಗ ಅದರಲ್ಲಿರುವ ಎಲ್ಲ ವಿವರಗಳನ್ನೂ ಹೇಳ್ತಾ ಹೋದ್ರೆ ಮೇಜೇ ಕಣ್ಮರೆಯಾಗುತ್ತೆ. ಮುಖ್ಯವಾದ ವಿವರಗಳನ್ನ ಒಟ್ಟಿಗೇ ಹೇಳಿದಾಗ ಮೇಜು ಕಾಣುತ್ತದೆ. ಅದನ್ನು ನಾವು significant details ಅಂತೀವಿ. ನಾನು ಏನು ತಿಳಕೊಂಡಿದ್ದೆ ಅಂದ್ರೆ 'ಮಲೆಗಳಲ್ಲಿ ಮದುಮಗಳು'ನಲ್ಲಿ ಅವರು significant details ಹುಡುಕ್ತಾ ಇಲ್ಲ, ಎಲ್ಲವನ್ನೂ ಒಟ್ಟಿಗೇ ಹೇಳ್ತಾರೆ. ಅದಕ್ಕೆ ತೇಜಸ್ವಿ ಹೇಳಿದ್ದ, ನೀನು ಒಂದು ಅಪಾರವಾದ ಬಯಲನ್ನು ಕಂಡ್ರೆ ಹೇಗೆ ಸುಖಿಸ್ತೀಯೋ ಹಾಗೆ ಅಂತಹ ಅಪಾರವಾದ ಬಯಲನ್ನು ಕುವೆಂಪು ತೆರೀತಾ ಇದಾರೇಂತ. ಆದ್ರೆ ಅವನ ಜೊತೆಗೂ ನಾನು ಜಗಳ ಆಡ್ತಾ ಇದ್ದೆ.

ಅಂದರೆ ಸಾಹಿತ್ಯ ಅಂದರೇನು ಅನ್ನುವ ನಿಮ್ಮ ಗ್ರಹಿಕೆಯ ದೋಷ ಇದು...

ಇರಬಹುದೇನೋ. ಆದರೆ ನನಗೆ ಅಚ್ಚುಕಟ್ಟಾದ, ಬಿಗಿಯಾದ ಬಂಧದ ಪದ್ಯ ರೂಪದಲ್ಲಿ ಸಾಹಿತ್ಯ ಇರಬೇಕು ಅನ್ನುವ ನಂಬಿಕೆ ಇತ್ತು.

ಸಾಹಿತ್ಯದ ಈ ಡೆಫಿನೆಷನ್ ಅಥವಾ ನಿಮ್ಮ ಈ ನಂಬಿಕೆ ಸರಿ ಅನಿಸುತ್ತಾ ಸರ್ ಈಗ?

ಈಗ ಕೆಲವರಿಗೆ ಸರಿ ಅನ್ನಿಸದೇ ಇರಬಹುದು. ಆದರೆ ಆಗ ನಮಗೆ ಆ ರೀತಿಯ ಬರವಣಿಗೆ ಅಗತ್ಯ ಅನಿಸಿತ್ತು. I won't regret it. ಆಗ ನಾನು 'ಘಟಶ್ರಾದ್ಧ' ಬರೆದೆನಲ್ಲ... ಒಂದು ಮಗುವನ್ನು ಹಿಡಿದು ಆ ಮಗುವಿನ ಕಣ್ಣಿನ ಮೂಲಕವೇ ನೋಡ್ತಾ–ಅದರಲ್ಲಿ ಯಾವ ಬೇರೆ ವಿಷಯವನ್ನೂ ತರದೆ–ಒಂದು ಹೆಣ್ಣು ಮತ್ತು ಒಂದು ಮಗು ಒಬ್ಬರಿಗೊಬ್ಬರು ಹತ್ತಿರ ಆಗೋದು, ಅವಳ ಗರ್ಭದಲ್ಲಿ ಇರುವ ಮಗುವೇ ಇವನಾಗೋದು... ಇವನು ಗರ್ಭದಲ್ಲಿ ಇರೋ ಮಗುವಾಗೋದು ಬರೆದೆ. ನೋಡಿ ಎಷ್ಟು ಟೈಟ್ ಆದ construction. ಕನ್ನಡಕ್ಕೆ ಅದು ಬೇಕಿತ್ತು. (ಅಡಿಗರ) 'ಭೂತ'ದಂತಹ construction ಬೇಕಿತ್ತು.

ಇಡೀ ಕನ್ನಡದಲ್ಲಿ ಬೇಂದ್ರೆ ಅವರ ಕೆಲವು ಪದ್ಯಗಳಲ್ಲಿ ಆ ತರದ ರಚನೆ ಇದೆ. ಕುವೆಂಪು ಕಾದಂಬರಿಗಳಲ್ಲಿ ಆ ತರದ ರಚನೆಗೆ ವಿರೋಧವಾದ ಒಂದು ಬಾಹುಳ್ಯ ಇದೆ. ಆದರೆ ಈ ಬಿಗಿಯಾದ ರಚನೆಗೆ ಜಾಗ ಇದೆ. ಅದು ಏನಪ್ಪಾ ಅಂದ್ರೆ ಅದು ಮೂರ್ತರೂಪ ಪಡೆದು ಅತ್ತಿತ್ತ ಹರಿಯಲ್ಲ.

ಇದೇ ಸಂದರ್ಭದಲ್ಲಿ ಪ್ರಸ್ತಾಪಿಸಬಹುದಾದಂತಹ ಒಂದು ಚಾರಿತ್ರಿಕ ಸಂಗತಿ ಅಂದರೆ, ಇಂತಹ ಸಾಹಿತ್ಯ ಮೀಮಾಂಸೆಯನ್ನು ನಮ್ಮ ಜಾತಿ ಪದ್ಧತಿಯ ಹಿನ್ನೆಲೆಯಲ್ಲಿ ವಿಶ್ಲೇಷಿಸ್ತಾ, ವಿರೋಧಿಸ್ತಾ ಅಖಿಲ ಕರ್ನಾಟಕ ಬರಹಗಾರರ ಒಕ್ಕೂಟ ಹುಟ್ಟಿಕೊಳ್ತು. ನಿಮ್ಮ 'ಭಾರತೀಯ ಸಂಸ್ಕೃತಿ ಮತ್ತು ಕನ್ನಡ ಲೇಖಕ' ಅನ್ನೋ ನಿಮ್ಮ ಲೇಖನವನ್ನೇ ಪ್ರಧಾನವಾಗಿ ಇಟ್ಟುಕೊಂಡು ಅದನ್ನು ಕಟುವಾಗಿ ಟೀಕಿಸ್ತಾ ತೇಜಸ್ವಿ ಹೊಸ ಸಾಹಿತ್ಯ ಮೀಮಾಂಸೆಯನ್ನ ಮಂಡಿಸಿದರು. ಈ ಒಕ್ಕೂಟಕ್ಕೆ ನಮ್ಮ ಸಾಹಿತ್ಯ ಚರಿತ್ರೆಯಲ್ಲಿ ಒಂದು ಮಹತ್ವದ ಸ್ಥಾನ ಇದೇಂತ ಅನ್ನಿಸುತ್ತಾ ನಿಮಗೆ?

ಖಂಡಿತ ಇದೆ. ಇನ್ನೊಂದು ಹೇಳ್ತೀನಿ. ಆ ಒಕ್ಕೂಟ ನನ್ನನ್ನ ಒಳಗೆ ಬಿಟ್ಕೊಳ್ಳಲಿಲ್ಲ. ಅದರಿಂದ ಆಲನಹಳ್ಳಿ ಕೃಷ್ಣ ಸಿಟ್ಟಿಗೆದ್ದ. ತೇಜಸ್ವಿ ಮಧ್ಯರಾತ್ರೀಲಿ ನನ್ನ ಮನೆಗೆ ಬಂದು ನನ್ನನ್ನ ಎಬ್ಬಿಸಿ, 'ನಿಮ್ಮನ್ನ ಬಹಳ ಕೆಟ್ಟದಾಗಿ ಬೈಯ್ತಾ ಇದ್ದೀವಿ... ಆದ್ರೆ ಇದರಿಂದ ನೀವು ಜಾತಿವಾದಿ ಆಗ್ಬಾರ್ದು' ಅಂತ ಹೇಳ್ದ. It was a very affectionate Statement. ನಾವು ಹೀಗೇ ಹೇಳ್ತೀವೀಂತ ನೀವು ತಿರುಗೇಟು ನೀಡಬಾರ್ದು ಅಂತ.

ಆಗ ಲಂಕೇಶ್ ಕೂಡ ಅಸಮಾಧಾನಗೊಂಡಿದ್ರೂಂತ ಕೇಳಿದ್ದೀನಿ.

ಆಗ ನಾನು ಲಂಕೇಶನಿಗೆ ಹೇಳ್ದೆ. ನೀನು ಲಿಂಗಾಯತ, ನಿನಗೆ ಬ್ರಾಹ್ಮಣರನ್ನು ಬೈಯೋದಕ್ಕೆ, ಜಾತಿ ಮೇಲೆ ಒಗ್ಗಟ್ಟಾಗೋದಕ್ಕೆ ಹತ್ತು ಪರ್ಸೆಂಟ್ ಅಧಿಕಾರ ಇದೆ. ಹೊಲೇರವನಿಗೆ ಅಂಥ ನೂರು ಪರ್ಸೆಂಟ್ ಅಧಿಕಾರ ಇದೆ. ಗೌಡ್ರಿಗೊಂದು ೫೦ ಪರ್ಸೆಂಟ್ ಅಧಿಕಾರ ಇದೆ ನನಗೆ ಯಾವ ಪರ್ಸೆಂಟೂ ಅಂಥ ಅಧಿಕಾರ ಇಲ್ಲಾಂತ ತಿಳಕೊಂಡೋನು ನಾನು. ಆಗ ಕೆಲವು ಬ್ರಾಹ್ಮಣ ಲೇಖಕರು ಬಂದು ನಾವೂ ಒಂದು ಒಕ್ಕೂಟ ಮಾಡ್ಕೊಂಡು ಒಗ್ಗಟ್ಟಾಗಬೇಕು ಅಂತ ಅಂದ್ರು, ನಾನು ಹೇಳ್ದೆ, ನಾವು ಆಗಬಾರ್ದು. ಯಾಕೆ ಆಗ್ಬಾರ್ದು ಅಂದ್ರೆ, ಶೂದ್ರರಲ್ಲಿ ಪಬ್ಲಿಷರ್ಸ್ ಇರಲಿಲ್ಲ, ಪತ್ರಿಕೆಗಳಲ್ಲಿ ಅವರು ಇರಲಿಲ್ಲ. ಎಲ್ಲ ಬ್ರಾಹ್ಮಣಮಯ ಆಗಿತ್ತು. ಆಗ ಇಂತಹ ಒಂದು ಚಳುವಳಿ ಬಂದ ನಂತರ ಹೊಸ ಪ್ರಕಾಶಕರು ಹುಟ್ಟಿಕೊಂಡ್ರು, ಹೊಸ ಲೇಖಕರು ಬಂದ್ರು, ಅದಕ್ಕೇ ನಾನು ಅದನ್ನು ವಿರೋಧ ಮಾಡ್ಲಿಲ್ಲ. ಆದರೆ ಅವರ ಪರವಾಗಿ ನಿಂತು ಸಿಕ್ಕಾಪಟ್ಟೆ ಮಾತಾಡೋದು ಕೂಡ ಅವರನ್ನು ಓಲೈಸುವ ಗುಣ ಅಂತ ಕಾಣುವ ಸಾಧ್ಯತೆ ಇತ್ತು. ಚೆನ್ನಾಗಿದ್ರೆ ಚೆನ್ನಾಗಿದೆ ಅಥವಾ ಚೆನ್ನಾಗಿಲ್ಲ ಅನ್ನಿಸಿದ್ರೆ ಚೆನ್ನಾಗಿಲ್ಲ ಅಂತ ಹೇಳೋ ನಿಲುವಿಗೆ ಬಂದೆ ನಾನು.

ಆ ಒಕ್ಕೂಟದ ಭಾಷಣದಲ್ಲಿ ತೇಜಸ್ವಿ ನವ್ಯ ಸಾಹಿತ್ಯ ಅನ್ನೋದು ವೈದಿಕ ರಾಜಕಾರಣದ ವಿಸ್ತರಣೆ ಅನ್ನೋ ರೀತಿ ವಿಶ್ಲೇಷಣೆ ಮಾಡ್ತಾರೆ. ಅದನ್ನು ನೀವು ಒಪ್ತೀರಾ ಸರ್?

ಅದು ತಪ್ಪು ಅಂತ ಹೇಳ್ತೀನಿ. ವೈದಿಕ ಅನ್ನೋ ಶಬ್ದಾನ ಧಾರಾಳವಾಗಿ, ಬಹು ಸುಲಭವಾಗಿ ಬಳಸ್ತಾ ಇದೀವಿ. ಒಂದು ನೋಡ್ರಿ, Kuvempu attacked ವೈದಿಕ ಸಂಸ್ಕೃತಿ. ಅದ್ರಿಂದ ವೈದಿಕ ಸಂಸ್ಕೃತಿ ಬೆಳಗೋ ಹಂಗೆ ಮಾಡಿದ್ರು, ಉಪನಿಷತ್ತು ಬೆಳಗೋ ಹಂಗೆ ಮಾಡಿದ್ರು, ಪರಮಹಂಸರು ಬೆಳಗೋ ಹಂಗೆ ಮಾಡಿದ್ರು, ನಾರಾಯಣ ಗುರು attacked ವೈದಿಕ ಸಂಸ್ಕೃತಿ. But he saved ವೈದಿಕ ಸಂಸ್ಕೃತಿ. ಯಾಕೆ ವೈದಿಕ ಸಂಸ್ಕೃತಿಯನ್ನ attack ಮಾಡಿದವರೆಲ್ಲರೂ ವೈದಿಕ ಸಂಸ್ಕೃತಿಯನ್ನೇ ಉಳಿಸಿ ಬೆಳೆಸಿದರು? ಮತ್ತಷ್ಟು ತಿದ್ದಿ ಅದನ್ನು ಸರಿ ಮಾಡಿದ್ರು? ಅನ್ನೋದನ್ನ historical ಪ್ರಶ್ನೆಯಾಗಿ ನಾವು ತಗೊಳ್ಳಬೇಕು. ಅದನ್ನ ಟ್ಯಾಗೋರ್ ತಗೊಂಡಿದಾರೆ. ಬೌದ್ಧರು ಇಡೀ ಭಾರತವನ್ನೇ change ಮಾಡೋಕೆ ಶುರು ಮಾಡಿದಾಗ ಒಂದು ರೀತಿಯ ಅರಾಜಕತೆ ಉಂಟಾಯಿತು. ಬ್ರಾಹ್ಮಣರು ಬಂದು ಅದನ್ನು save ಮಾಡಿದರು. ಎಲ್ಲೋ ಒಂದು ಕಡೆ ವೈದಿಕ ಸಂಸ್ಕೃತಿಯ ಅತಿಗೆ ಹೋಗದೇ ಇರುವ ಒಂದಿದೆ. ಅದು intensityಗೆ ಅವಕಾಶ ಮಾಡಿಕೊಡ್ತು. ಈ intensityಗೆ ಅವಕಾಶ ಮಾಡಿಕೊಡಬೇಕಾದ್ರೆ ನೀನು ಬಸವಣ್ಣನ ಹಾಗೆ ಆಗಬೇಕು. ಜನಿವಾರ ಕಿತ್ತು ಒಗೀಬೇಕು. Intensity ಇಲ್ದೆ ಎಲ್ಲರ ಜೊತೆ ಒಪ್ಪಂದ ಮಾಡಿಕೊಂಡ್ರೆ, ಸರಿ ಮಾಡಿಕೊಳ್ಳಬೇಕಾದ್ರೆ ಅದನ್ನ ಹಾಕ್ಕೋಬೇಕು. ಹಾಕ್ಕೋಬೇಕು ಅಂತ ಅಲ್ಲ. ನಾನು ತಾತ್ವಿಕವಾಗಿ ಹೇಳ್ತಾ ಇರೋದು. ಅರ್ಥ ಆಯ್ತಲ್ಲಾ? ಆವಾಗ ಏನಾಯ್ತು? ನಾರಾಯಣ ಗುರು ಮತ್ತೆ ಇದಕ್ಕೇ ಬಂದ್ರು. ಎಲ್ಲರೂ ವೈದಿಕ ಸಂಸ್ಕೃತಿಯನ್ನ attack ಮಾಡಿದವರು critical insiders. ಪುಟ್ಟಪ್ಪ was a critical insider of whole ವೈದಿಕ ಸಂಸ್ಕೃತಿ. ಅದರಲ್ಲಿ ತಗೋಬೇಕಾದ್ದೂ ಇದೆ, ಬಿಡಬೇಕಾದ್ದೂ ಇದೆ. ಅದರಲ್ಲಿ ಅತ್ಯಂತ ಹೀನವಾದದ್ದು ಏನೂಂದ್ರೆ ಅದು ಸೃಷ್ಟಿಸುವ ವರ್ಣ ವ್ಯವಸ್ಥೆ. ಮೇಲು-ಕೀಳು ಅನ್ನೋ ವ್ಯವಸ್ಥೆ. ಅದು ಎಷ್ಟು ಜಾಣ ವ್ಯವಸ್ಥೆ ಅಂದ್ರೆ ಇದರಲ್ಲಿ ಕೆಳಗಿನವರು ಮೇಲೆ ಬರೋದಕ್ಕೆ ಯಾವತ್ತೂ ಅವಕಾಶವನ್ನು ಅದು ಹೊರಗಿಟ್ಟಿತ್ತು. ನಮ್ಮ ರಾಜರೆಲ್ಲ ಶೂದ್ರರೇ. ಬ್ರಾಹ್ಮಣರೆಲ್ಲ ಹೊಗಳ್ತಾ ಇದ್ದದ್ದು ಇಂತಹ ರಾಜರನ್ನೇ. India went on being what it is. ಅದಕ್ಕೇನೇ ಅಡಿಗರ 'ಬತ್ತಲಾರದ ಗಂಗೆ' a great poem. ಈ ಗಂಗೆ ಬತ್ತೋಕ್ಕೆ ಸಾಧ್ಯವೇ ಇಲ್ಲ. ಇಲ್ದೇ ಹೋಗಿದ್ರೆ ಒಂದು ಹೊಸಸಂಸ್ಕೃತಿ ಹುಟ್ತಾ ಇತ್ತು.

ಆದ್ರೆ ಅಡಿಗರು 'ಮತ್ತೆ ಮೊಳಗಲಿ ಪಾಂಚಜನ್ಯ' ಮತ್ತು 'ನಾನು ಹಿಂದೂ ನಾನು ಬ್ರಾಹ್ಮಣ' ಅನ್ನೋ ಪದ್ಯಗಳನ್ನೂ ಬರೆದಿದ್ದಾರೆ!

ಕೆಟ್ಟ ಪದ್ಯಗಳು ಅವು.

ಅವು ಬರೀ ಕೆಟ್ಟ ಪದ್ಯಗಳಲ್ಲ ಅಂತ ಅನ್ಕೊಂಡಿದ್ದೀನಿ...

ಯಾಕೇಂದ್ರೆ ಬ್ರಾಹ್ಮಣರ ಮೇಲಿನ attack ಇದೆಯಲ್ಲ, ಅದ್ರಿಂದ ಬರೆದ ಪದ್ಯಗಳು. ಅದರಿಂದ ನೊಂದು ಬಿಟ್ಟಿದ್ರೆ ನಾನೂ ಆ ತರಹ ಬರೆದುಬಿಡ್ತಿದ್ನೇನೋ.

ಎಷ್ಟು ಸುಲಭವಾಗಿ ಈ ಮಾತುಗಳನ್ನ ಹೇಳ್ತೀರಿ ಸರ್ ನೀವು! ಪ್ರಜ್ಞಾ ಸ್ತರದಲ್ಲಿ ಆ heightನಲ್ಲಿದ್ದ ಒಬ್ಬ ಕವಿ ಈ ಪಾತಾಳಕ್ಕೆ ಇಳಿಯೋದು ಅಂದ್ರೆ?

Attack was strong and he was a Brahmin. ನಾನಲ್ಲ.

In a sense, ಇದು ನೀವು ಹೇಳ್ತಿರೋ ಹೊಸ 'ಸತ್ಯ' ಸರ್! ಅದನ್ನೇ ತೇಜಸ್ವಿ ಆಗ ಹೇಳಿದ್ದು ಅಂತ ಕಾಣುತ್ತೆ!

ಹೌದಯ್ಯ. He was a great poet and he could overcome all these… ಹೆಂಗೆ ಲಂಕೇಶ್ ಅನೇಕ ಸಾರಿ ಮೀರುತ್ತಿದ್ದನೋ ಈ ಮೀರೋ ಗುಣಗಳು ಯಾರ್‍ಯಾರ ಹತ್ರ ಇತ್ತೋ ಆ ಮೀರುವಿಕೆಯ ಗುಣ ಅಡಿಗರಲ್ಲೂ ಇದೆ. ಕುವೆಂಪುನಲ್ಲಿ ಇದೆ. ಕುವೆಂಪು ಶೂದ್ರ ಸಮಾವೇಶಕ್ಕೆ ಹೋಗಿ–ನೀವೆಲ್ಲ ಅವರನ್ನ ಬೈತೀರಾ ಈಗ, ಆದರೆ ನೀವೆಲ್ಲ ದಡ್ಡಬಡ್ಡರಾಗಿದ್ದಾಗ ನಿಮಗೊಂದು ಸಂಸ್ಕೃತಿ ಮಾಡಿಕೊಟ್ಟವರು ಅವರು ಅಂತ ಏನು ಹೇಳ್ತಾರೆ, ಅದನ್ನ ಶೂದ್ರ ಸಮ್ಮೇಳನದಲ್ಲಿ ಯಾರೂ ಹೇಳೋಕೆ ತಯಾರಿರಲಿಲ್ಲ. ಆದ್ರೆ ಕುವೆಂಪು ಹೇಳಿದ್ರು, ಯಾಕೇಂದ್ರೆ ಅವರಿಗೆ awareness ಇತ್ತು.

ಇರಲಿ ಸರ್, ಈಗ ಒಕ್ಕೂಟದಲ್ಲಿ ತೇಜಸ್ವಿ ಏನು ಮಾತಾಡಿದ್ರು, ಅದನ್ನ, ಆ ವಾದದ ತರ್ಕವನ್ನು ನೀವು ಒಪ್ತೀರಾ?

ನೋಡಿ, ಸಾಹಿತ್ಯದಲ್ಲಿ ಇದೆಲ್ಲ ಇರುತ್ತೆ. ಲಂಕೇಶ್ ತೇಜಸ್ವಿ ಮೇಲೆ ಬಿದ್ದ ಆಗ ಅವನು ಸುಬ್ಬಣ್ಣನನ್ನೂ attack ಮಾಡಿದ. ನೀವು hypocritical ಆಗಿ ನಿಮ್ಮ ರಂಗಮಂದಿರಕ್ಕೆ ಕಾರಂತರ ಹೆಸರನ್ನ ಇಟ್ಟಿದೀರಾ ಅಂತ. ಇದೆಲ್ಲ ಯಾಕೆ ಹೇಳ್ತೀನಿ ಅಂದ್ರೆ ತೇಜಸ್ವಿ, ಲಂಕೇಶ್ ಇಬ್ರಿಗೂ ನನಗೆ ಇರೋ ಹಾಗೆ ಪುಟ್ಟಪ್ಪನವರ ಬಗ್ಗೆ ಅನುಮಾನಗಳಿದ್ದವು. ಯಾವುದು? ಅತಿ ವಿಸ್ತಾರದ ಬರವಣಿಗೆ ಬಗ್ಗೆ. ನಾವೆಲ್ಲ ಯೂರೋಪಿನ ನವ್ಯ ಸಾಹಿತ್ಯದ ಪ್ರೇರಣೆಗೆ ಒಳಪಟ್ಟವ್ರು, ಅದರಿಂದ ಕನ್ನಡಕ್ಕೆ ಒಂದು ಓಘ, ಹೊಳಪು ಬಂತು. ಆಗ ಮರಾಠಿಯಲ್ಲಿ ಹೀಗಾದವ್ರು ಮಹಾರಾಷ್ಟ್ರದ ಉಳಿದ ಸಾಹಿತ್ಯದ ಜೊತೆಗೆ ಮುಖಾಮುಖಿಯಾಗಲೇ ಇಲ್ಲ. ಕನ್ನಡದ ಮಟ್ಟಿಗೆ ನಾವೆಲ್ಲ ಕನ್ನಡದ ನವೋದಯದ ಜೊತೆ ಮುಖಾಮುಖಿ ಆದೆವು.

ಒಂದು ಮಾತು. ನಾನು ಆಗ ಒಬ್ಬ ಕಿರಿಯ ಸಾಹಿತ್ಯದ ಅಭ್ಯಾಸಿಯಾಗಿ ಗಮನಿಸಿದ ಹಾಗೆ, ಒಕ್ಕೂಟದ ನಂತರ ಇಡೀ ಕನ್ನಡ ಸಾಹಿತ್ಯದಲ್ಲಿನ ಗಂಭೀರ ಬರವಣಿಗೇಂತ ನಾವು ಏನು ಕರೀಬಹುದು, ಅದು ಒಂದೆರಡು ವರ್ಷ ಸ್ತಬ್ಧವಾಗಿ ಹೋಯಿತು. ಆನಂತರ ಕನ್ನಡದಲ್ಲಿ ಹೊಸ ರೀತಿಯ ಬರವಣಿಗೇನೇ ಶುರುವಾಯ್ತು. ನೀವು 'ನವಿಲುಗಳು' ಬರೆದ್ರಿ, ಚಿತ್ತಾಲರು 'ಕತೆಯಾದಳು ಹುಡುಗಿ' ಬರೆದ್ರು, ಲಂಕೇಶ್ 'ಉಮಾಪತಿಯ ಸ್ಕಾಲರ್‌ಶಿಪ್ ಯಾತ್ರೆ', 'ಮುಸ್ಸಂಜೆ ಕಥಾ ಪ್ರಸಂಗ' ಬರೆದ್ರು, ಎಲ್ಲ ಸಂಪೂರ್ಣ ಬೇರೆ ತರದ ಬರವಣಿಗೆ. ಅಂದ್ರೆ ಒಕ್ಕೂಟ ಕನ್ನಡ

ಸಾಹಿತ್ಯದ ದಿಕ್ಕು ದೆಸೆಗಳ ಸ್ವರೂಪದ ಮೇಲೆ ಒಂದು ದೊಡ್ಡ ರೀತಿಯ ಪ್ರಭಾವ ಬೀರಿತು ಅಂತ ಅನ್ನಿಸೋಲ್ವ ಸರ್ ನಿಮಗೆ?

ಬೀರಿದೆ. ಉದಾಹರಣೆಗೆ ಹೇಳ್ತೀನಿ. ಅದು ಎಲ್ಲೂ ಲಿಖಿತವಾಗಿಲ್ಲ. ಯಶವಂತ ತಬ್ಬಿಬ್ಬಾಗಿ ಬಿಟ್ಟಿದ್ದ. ಯಾಕೇಂದ್ರೆ ಒಂದು ಮುಗ್ಧ, ಬರೀ ಸಾಹಿತ್ಯ ಮುಖವಾಗಿ ಬರೆದದ್ದು, ನನ್ ಜಾತಿ ಏನು, ಅದು ಇದು ಎಲ್ಲ ಇದೆ, ಆದ್ರೆ ಇದೆಲ್ಲ ಮುಖ್ಯವಾದದ್ದಲ್ಲ ಅಂತ ತಿಳಿದವನು ಅವ್ನು. He was a great writer in his own way. We cannot deny it. ಅವ್ನು ಒಂದು ಕಥೆ ಬರ್ದ. ಅದು ಏನೂಂದ್ರೆ ಮಹಾದೇವನಿಗೆ ಒಂದು ರೀತಿಯಲ್ಲಿ ಮುಖಾಮುಖಿಯಾಗಿ ಬರೆದದ್ದು. ಒಬ್ಬ ಬಡ ಬ್ರಾಹ್ಮಣ ಹುಡುಗ ಎಷ್ಟು ಪೇಚಿಗೆ ಸಿಕ್ತಾನೆ, ದುಃಖ ಪಡ್ತಾನೆ ಅಂತ. ಅದೆಲ್ಲ ಹೆಂಗೆ ಬರೆದಿದ್ದ ಅಂದ್ರೆ ಇವೊತ್ತು ಬರೀ ದಲಿತರಷ್ಟೇ ಅಲ್ಲ ದುಃಖದಲ್ಲಿರೋದು, ಬ್ರಾಹ್ಮಣರೂ ದುಃಖದಲ್ಲಿದಾರೇಂತ. ಅದು ನಿಜ ಕೂಡ. ಆದ್ರೆ ಅವನು ಬರೆಯೋ ಕ್ರಮದಲ್ಲಿ ಹೆಂಗೆ ಬರೆದ ಅಂದ್ರೆ ಅವರೂ ದುಃಖದಲ್ಲಿದಾರೆ ಇವ್ರೂ ದುಃಖದಲ್ಲಿದಾರೇಂತ ಅಲ್ಲ. ಅವರು ಮಾತ್ರ ದುಃಖದಲ್ಲಿರೋದಲ್ಲ, ನಮ್ಮ ಮಟ್ಟಿಗೆ ನಾವೂ ದುಃಖದಲ್ಲಿದ್ದೇವಂತ. ಇದೇ ವ್ಯತ್ಯಾಸ ಆಯ್ತು ನೋಡು. ಅದಕ್ಕೇ ಮಹಾದೇವ ಹೇಳ್ದ, ಅದ್ಯಾಕೆ ಹಂಗೆ ಹೇಳಬೇಕು ಸಾರ್? ನಮ್ಮಲ್ಲೂ ದುಃಖಿಗಳಿದಾರೆ ಅವರಲ್ಲೂ ದುಃಖಿಗಳಿದಾರೇಂತ ಯಾಕೆ ಹೇಳಬಾರ್ದೂಂತ. ಅಂದ್ರೆ ಆಗಿದ್ದು ಮುಖ್ಯವಾಗಿ ನೋಡ್ಡೋ ಕ್ರಮದಲ್ಲಿ.

ಒಕ್ಕೂಟ ಆದ ಮೇಲೆ ಅದರಿಂದ ಸಾವಯವವಾಗಿ ಪ್ರತ್ಯೇಕವಾದಂತೆ ಎರಡು ಮೂರು ವರ್ಷಗಳಲ್ಲೇ ಬಂಡಾಯ ಸಾಹಿತ್ಯಾಂತ ಬಂತು. ಸಮ್ಮೇಳನ ನಡೀತು. ಆದ್ರೆ ಇವೊತ್ತು ನಿಂತುಕೊಂಡು ನೋಡಿದ್ರೆ ಅದರ ಬಗ್ಗೆ ನಿರಾಶೆ ಆಗತ್ತೆ. ಇದನ್ನು ಹೇಳಿ ನಾನು ಬಹಳ ಜನ ಶತ್ರುಗಳನ್ನು ಕಟ್ಟಿಕೊಂಡಿದ್ದೀನಿ. ಪರವಾಗಿಲ್ಲ. ಆ ಸಾಹಿತ್ಯದಿಂದ ಸೃಜನಾತ್ಮಕವಾಗಿಯಾಗಲಿ ಸೃಜನೇತರವಾಗಿಯಾಗ್ಲಿ, ಅಂದರೆ ಸಾಹಿತ್ಯ ವಿಮರ್ಶೆ, ಚಿಂತನೆಯಲ್ಲಾಗ್ಲೀ ಗಮನಾರ್ಹವಾದದ್ದೂಂತ ಏನೂ ಬರಲೇ ಇಲ್ಲ. ಬದಲಿಗೆ ಸಾಹಿತ್ಯದ ಕಲ್ಪನೆಯನ್ನೇ ಅದು ಒಂದು ರೀತಿಯಲ್ಲಿ ರೂಕ್ಷ ಮಾಡಿಬಿಡ್ತು ಅನ್ನಿಸುತ್ತೆ. ನಿಮಗೇನನ್ನಿಸುತ್ತೆ ಸರ್? ಯಾಕೆ ಹೀಗಾಯ್ತು?

ನಿಮ್ಮ ಅಭಿಪ್ರಾಯವೇ ನನ್ನದು. ಯಾಕೆ ಹೀಗಾಯ್ತು ಅಂದ್ರೆ, ಅವರು ಕೋಗಿಲೆ ಮತ್ತು ಸೋವಿಯತ್ ರಷ್ಯಾ ಪದ್ಯ ಓದಿರಲಿಲ್ಲ. ಓದಿದ್ದರೆ ಅವರು ಆಡುತ್ತಿದ್ದ ಬಂಡಾಯದ ಮಾತುಗಳನ್ನ ಆಡ್ತಿರಲಿಲ್ಲ. ಅವರು ವರ್ಗವಿಶ್ಲೇಷಣೆಯ ರೀತಿಯ ಸಮಾಜವಾದಿ ನುಡಿಗಟ್ಟನ್ನ ಹುಡುಕ್ತಾ ಹೋದ್ರು. ಇಂತಹ ನುಡಿಗಟ್ಟು ನಮ್ಮಲ್ಲಿ ನಡೆಯೋದಿಲ್ಲ. ನಡೆಯೋವಾಗಿದ್ದರೆ ಕಮ್ಯೂನಂತಹ ಬರಹಗಾರರಾಗಬೇಕಿತ್ತು. ಆದ್ದರಿಂದ ಅವರೆಲ್ಲ ನಿಜವಾದ experienceನಿಂದ ವಂಚಿತರಾದ್ರು. ಜೊತೆಗೆ ಅವರು ಎಷ್ಟು ಬೇಗ ಸರ್ಕಾರದ ಹತ್ತಿರಕ್ಕೆ ಹೋದ್ರು ಅಂದ್ರೆ– ನೋಡಿ, ಈಗ ಹಿಂದೆ ಸರ್ಕಾರದ ನೀತಿಗಳೂ ಒಂಥರಾ ಸೋಷಲಿಸ್ಟ್ ಆಗಿದ್ದವು. ನಾವೂ ಸೋಷಲಿಸ್ಟ್ ಆಗಿದ್ದೆವು.. ಆದ್ದರಿಂದ ಯಾವುದೇ ಅಪಾಯವಿಲ್ಲದೆ ಮಾತಾಡಬಹುದಿತ್ತು.

ಈಗ ಏನಾಯ್ತು ಅಂದರೆ ಏಕಕಾಲಕ್ಕೆ ಸರ್ಕಾರಕ್ಕೂ ಬೇಕಾದವರೂ, ಬಂಡಾಯಗಾರರೂ ಆಗಬೇಕಾದದ್ದರಿಂದ corruptionಗೆ ಅವಕಾಶವಾಯ್ತು.

ಅವರಿಗೆ ಆಗಿದ್ದು ನಮಗೂ ಆಗಬಹುದಿತ್ತು, ಹೆಗ್ಡೆ ಕಾಲದಲ್ಲಿ, ಪಟೇಲನ ಕಾಲದಲ್ಲಿ. ಆದ್ರೆ ಹೆಚ್ಚೆಚ್ಚು ಆತ್ಮವಿಮರ್ಶೆ ಮಾಡಿಕೊಂಡು ಬರೆಯೋ ನನಗೆ ಹಾಗೆ ಆಗೋದು ಕಡಿಮೆ ಸಾಧ್ಯತೆ ಇತ್ತು. ಅದಲ್ಲದೆ, ನಿತ್ಯವೂ ಬರೀ ಬಹಿರಂಗದಲ್ಲೇ ಇರುವವನಿಗೆ, ಅಂತರಂಗದ ಸತ್ಯವಿಲ್ಲದೆ ಬಹಿರಂಗ ಸತ್ಯ ಹೇಳ ಹೊರಟವನಿಗೆ–ಬಸವಣ್ಣ ಹೇಳ್ತಾನಲ್ಲ ಅಂತರಂಗ ಸತ್ಯ ಮತ್ತು ಬಹಿರಂಗ ಸತ್ಯ ಒಂದೇ ಆಗಿರಬೇಕೂಂತ–ಅದು ನಿಜವಾದ ಸಾಹಿತ್ಯ. ಬಂಡಾಯ ಸಾಹಿತ್ಯ ಅದಾಗಲಿಲ್ಲ. ಸೋವಿಯತ್ ಯೂನಿಯನ್‌ನಲ್ಲೂ ಫೇಲಾಯ್ತು. ಅದನ್ನ ಇವೊತ್ತು ಯಾರೂ ಓದ್ತಿಲ್ಲ. ಅದು 'ಕೋಗಿಲೆ ಮತ್ತು ಸೋವಿಯತ್ ರಷ್ಯಾ' ಬರೆದ ಕುವೆಂಪುಗೂ ಗೊತ್ತಿತ್ತು. ಇವರಿಗೆ ಗೊತ್ತಾಗಲಿಲ್ಲ. ಅದು ಬಂಡಾಯದ ಸಮಸ್ಯೆ ಅನಿಸುತ್ತೆ.

ಬಂಡಾಯದಲ್ಲಿ ಲೋಹಿಯಾ ಸೋಷಲಿಸ್ಟರೂ ಇದ್ರು ಸರ್! ದೇವನೂರ ಮಹಾದೇವ ಸಮ್ಮೇಳನವನ್ನು ಉದ್ಘಾಟನೆ ಮಾಡಿದ್ರು, ಸಿ.ಜಿ.ಕೆ, ರೆಡ್ಡಿ ಅಲ್ಲಿ ಮುಖ್ಯ ಅತಿಥಿಗಳಾಗಿದ್ರು, ಚಂಪಾ, ಕಾಳೇಗೌಡ ಇದ್ರು.

ಇದ್ರೂಂದ್ರೆ, ಏನೋ ದೊಡ್ಡದು ಆಗುತ್ತೆ ಅನ್ನೋ ನಿರೀಕ್ಷೆಯಲ್ಲಿ ಇದೆಲ್ಲ ಆಯಿತು. ಆದ್ರೆ..

ಬಂಡಾಯದವರ ಬಗ್ಗೆ ನೀವು ಹೇಳಿದ್ದಕ್ಕೆ ಸಂಬಂಧಿಸಿದಂತೆ ನಿಮ್ಮ ಬಗ್ಗೆನೂ ಒಂದು ಟೀಕೆ ಇದೆ ಸರ್. ಅಧಿಕಾರದ ಸಮೀಪವಿದ್ದಾಗ ನೀವು ಆ ಸಾಮೀಪ್ಯವನ್ನು, ನಿಮ್ಮದೇ ಭಾಷೆಯಲ್ಲಿ ಹೇಳೋದಾದ್ರೆ, ಸುಖಿಸಿದಿರೇ ಹೊರತು ಅಧಿಕಾರದಲ್ಲಿದ್ದ ನಿಮ್ಮ ಗೆಳೆಯರು ತಪ್ಪು ಮಾಡಿದಾಗ ಅವರಿಗೆ ಬುದ್ಧಿ ಹೇಳಲಿಲ್ಲ, ಅದನ್ನ ಖಂಡಿಸಲಿಲ್ಲ ಅಂತ.

ಹಾಗಲ್ಲ ಅದು. ಹೆಗ್ಡೆಗೆ ನಾನೇ ಹೇಳಿದ್ದೆ ನಿಮಗೆ passion ಇಲ್ಲಾಂತ. ಅಂದ್ರೆ ದೊಡ್ಡ ವಿಚಾರಗಳ passion ಇಲ್ಲ ಅಂತ. ದೇವರಾಜ ಅರಸ್‌ಗೆ ಅದಿತ್ತು. ಇಲ್ಲ, ತನಗೂ ಇದೇಂತ ಹೆಗ್ಡೆ ಹೇಳ್ತಿದ್ರು, ನೋಡಿ, ಅಧಿಕಾರದ ವಿಕೇಂದ್ರೀಕರಣದ ಕೆಲಸ ನಜೀರ್ ಸಾಬ್ ಮಾಡಿದ್ರೂ ಅದರ ಹಿಂದೆ ಇದ್ದೋರು ಹೆಗ್ಡೆ. ಬೊಮ್ಮಾಯಿ ಮತ್ತು ದೇವೇಗೌಡ were opposed to it. ನಾವು ಆಗ ಯಾವುದನ್ನು ಬೆಂಬಲಿಸ್ತಾ ಇದ್ವೋ ಅದರ ಹಿಂದೆ ಜನಹಿತಾತ್ಮಕತೆ ಇತ್ತು. ಅದೆಂತಹ ಕಾಲ! ನಜೀರ್ ಸಾಬು ಹೋಗಿ ಬಂದು, 'ಇವೊತ್ತು ನಾನು ಹೊಲೇರ ಕಾಲೋನಿಗೇ ಹೋಗಿ ಬೋರ್‌ವೆಲ್ ಹೊಡಿಸಿ ಬಂದೆ, ಅವ್ರಿಗೆ ನೀರು ಇನ್ಮೇಲೆ ಅವರಿದ್ದಲ್ಲೇ ಸಿಕ್ಕುತ್ತೆ' ಅಂತ ಹೇಳ್ತಿದ್ದ...

ಆದ್ರೆ ನಿಮ್ಮ ಗೆಳೆಯರು ತಪ್ಪು ಮಾಡಿದಾಗ ಏನು ಮಾಡಿದ್ರಿ? ಉದಾಹರಣೆಗೆ ಪಟೇಲ್ ದಾರಿ ತಪ್ಪಿದಾಗ? ಬಹುಶಃ ಕರ್ನಾಟಕದ ರಾಜಕೀಯ ಇತಿಹಾಸದಲ್ಲೇ ಪಟೇಲ್ ತಮ್ಮ

ಬೇಜವಾಬ್ದಾರಿ ಮಾತು ಮತ್ತು ವರ್ತನೆಗಳಿಂದ ಪಡೆದಷ್ಟು ಕೆಟ್ಟ ಹೆಸರನ್ನ ಇನ್ನಾರೂ ಪಡೀಲಿಲ್ಲ ಅಂತ ಕಾಣುತ್ತೆ.

ತಪ್ಪು. ಅವನ ಅಧಿಕಾರ ಹೋದ ನಂತರ ಎಸ್.ಎಂ. ಕೃಷ್ಣರನ್ನ ನಾನು ಟಿವಿಗಾಗಿ ಇಂಟರ್‌ವ್ಯೂ ಮಾಡ್ದೆ. ಕ್ಯಾಮೆರಾ ಆಫ್ ಆದ ಮೇಲೆ ಅವರನ್ನು ಕೇಳ್ದೆ, ಪಟೇಲರ ಆಡಳಿತ ಹೇಗಿತ್ತು ಅಂತ. ಅದಕ್ಕೆ ಅವರು, ಅವರ ಕಾಲದಲ್ಲಿ infrastructure ಕ್ಷೇತ್ರದಲ್ಲಿ ಬಹಳ ಕೆಲಸ ಆಗಿದೆ ಅಂದ್ರು. ಅಲ್ದೆ ನಾಗಭೂಷಣ, ಇನ್ನೊಂದು ಮಾತು. ಲಿಂಗಾಯ್ತರಲ್ಲಿ ಆಗ ಅವನೊಬ್ಬನೇ ಕಮ್ಯೂನಲ್ ಆಗದಿದ್ದವನು. ಹೀಗೇ...

ಆದ್ರೆ ಪಟೇಲರೇ ತಾನೆ ಬಿಜೆಪಿ ಜೊತೆಗೆ ಸಖ್ಯಕ್ಕೂ ಕಾರಣರಾದವರು?

ಅದಕ್ಕೆ ನಿಜವಾದ ಕಾರಣ, ಜಾರ್ಜ್. ಪಟೇಲ್‌ಗೆ ಜಾರ್ಜ್ ಕಂಡ್ರೆ ತುಂಬ ಪ್ರೇಮ. ಜಾರ್ಜ್ ಪ್ರಧಾನ ಮಂತ್ರಿ ಆಗಬೇಕೂ ಅಂತ ಅವನಿಗೆ ದೊಡ್ಡ ಆಸೆಯಿತ್ತು. ನನಗೂ ಇತ್ತು. ಅವನಿಗೆ ಆ ಶಕ್ತಿ ಇತ್ತೂಂತ ನಾನು ತಿಳಿದಿದ್ದೆ. ಮೊರಾರ್ಜಿನೂ ಹಾಗೆ ಭಾವಿಸಿದ್ರು. ಆದರೆ ಆತ ಎಲ್ಲಿ ಚೆಲ್ಲಿ ಹೋದನೋ, ಯಾಕೆ ಹುಸಿಯಾದನೋ ನನಗೆ ಈವರೆಗೆ ಬಿಡಿಸಲಾಗಿಲ್ಲ. ದಾಸ್ತೊವಸ್ಕಿಯಂತಹ ಲೇಖಕನಾಗಿದ್ರೆ ಅದನ್ನ ಹುಡುಕ್ತಿದ್ನೇನೋ!

ಆದರೆ ಜಾರ್ಜ್‌ಗೆ ನಿಜವಾಗಿ ಆ ಶಕ್ತಿ ಇತ್ತಾ? ಒಮ್ಮೆ ಕಿಷನ್ ಪಟ್ನಾಯಕ್ ನನಗೆ ಹೇಳಿದ್ದು ಜ್ಞಾಪಕ, ಜಾರ್ಜ್‌ದು ಆಳವಿಲ್ಲದ ಬಹು ತೆಳು ವ್ಯಕ್ತಿತ್ವ ಅಂತ.

ಕಿಷನ್ ಅದನ್ನ ನನಗೂ ಹೇಳಿದ್ರು. ಸ್ವಲ್ಪ ಅವನು ಜನಪ್ರಿಯತೆಯ ಅಬ್ಬರಕ್ಕೆ ಬಿದ್ದುಹೋದ ಅಂತ ಕಾಣುತ್ತೆ. ಅಲ್ಲದೆ ಜಾರ್ಜ್ ಬಗ್ಗೆ ನನಗೆ ಪ್ರೀತಿ ಜಾಸ್ತಿ ಇತ್ತು. ಅವನ ಬಗ್ಗೆ ನಾನು ಸ್ವಲ್ಪ ಉದಾರವಾಗಿ ಯೋಚಿಸಿದೆ ಅಂತ ಕಾಣುತ್ತೆ.

(ಇದಕ್ಕೆ ಪೂರಕವಾಗಿ ಅನಂತಮೂರ್ತಿಯವರು ದೀರ್ಘವಾಗಿ ಜಾರ್ಜ್ ಆಸ್ತಿ ವಿವಾದ, ಅದನ್ನು ಅವರು ಪರಿಶೀಲಿಸಿದ್ದು, ನಂತರ ಜಯಾ ಜೈಟ್ಲಿ ಕಥೆ ಎಲ್ಲ ಹೇಳಿ, ಕೊನೆಗೆ ಲೇಖಕ ಹೇಗೆ opinionated ಆಗದೆ ಎಲ್ಲ ವಿವರಗಳನ್ನು ಗಮನಿಸ್ತಾ ಇರ್ತಾನೆ ಎನ್ನುವುದನ್ನು ಹೇಳಿದರು)

ಆಮೇಲೆ ಸರ್, ನಿಮ್ಮ ಪತ್ನಿಯವರೇ ಒಮ್ಮೆ ಹೇಳಿದ ಹಾಗೆ ಯಾವಾಗ್ಲೂ ಸುದ್ದಿಯಲ್ಲಿರೋಕೆ ಇಷ್ಟಪಡ್ತೀರಿ. ನಾನು ನಿಮ್ಮನ್ನು ಗಮನಿಸ್ತಾ ಇರುವಾಗಿನಿಂದ್ಲೂ ವಿವಾದಗಳನ್ನು ಸೃಷ್ಟಿಸೋದ್ರಲ್ಲಿ ಎತ್ತಿದ ಕೈ ಆಗಿದ್ದೀರಿ!

ನೋಡಿ ಬೆಳಿಗ್ಗೆ ಪಕ್ಕದ ಪಾರ್ಕ್‌ಗೆ ವಾಕಿಂಗ್ ಹೋಗಿದ್ದೆ. ಅಲ್ಲಿ ಒಬ್ಬ ಹೆಂಗಸು ಇನ್ನೊಬ್ಬ ಹೆಂಗಸಿಗೆ ಹೇಳ್ತಾ ಇದ್ಲು. ಯಾರೋ ಜ್ಞಾನಪೀಠ ಬಂದವನಂತೆ; ಕಲ್ಲಿನ ಮೇಲೆ ಉಚ್ಚೆ ಹುಯ್ದನಂತೆ ಅಂತ. ಇದನ್ನೆಲ್ಲ ಕೇಳಿದಾಗ ನನ್ನ ಹೆಂಡತಿಗೆ ನೋವಾಗೋದು ಸಹಜ.

ಇದು ಬಿಡಿ ಸರ್. ಇದು ಕಲ್ಬುರ್ಗಿಯವರ ಮಾತನ್ನ ಕೆಲ ಬುದ್ಧಿಗೇಡಿ ಮಾಧ್ಯಮಗಳು ಪ್ರಚಾರ ಮಾಡಿದ ರೀತಿಯಿಂದ ಆದದ್ದು. ಆದ್ರೆ ನೀವೇ ಸೃಷ್ಟಿಸಿದ ಹಲವಾರು ವಿವಾದಗಳು ಇವೆ. ಉದಾಹರಣೆಗೆ ಜಾತಿ ಸೃಜನಶೀಲ ಅಂದ್ರಿ, ಆ ಮೇಲೆ ಗೋಕಾಕ್ ಚಳುವಳಿ ಸಂದರ್ಭದಲ್ಲಿ ನೀವೊಬ್ರೇ ಅದನ್ನು ಯಾವುದೋ ಕಾರಣ ಕೊಟ್ಟು ವಿರೋಧಿಸಿದ್ರಿ

ಏನು ಮಾಡೋದು. ನಾನು ಚೆನ್ನಾಗಿ ಮಾತಾಡ್ತೀನಿ. ಹಾಗಾಗಿ...

ಬರೀ ಚೆನ್ನಾಗಿ ಮಾತಾಡೋದಷ್ಟೇ ಅಲ್ಲ, ನೋಡೋಕೂ ಚೆನ್ನಾಗಿದೀರಿ... ಅದೇ ನಿಮಗೆ ಪ್ರಾಬ್ಲೆಮ್ಮಾಗಿರೋದು...

ಈಗ ನೋಡಿ, ಜಾತಿ ಸೃಜನಶೀಲ ಅಂದಾಗ ಅದನ್ನು ವಿಶಾಲಾರ್ಥದಲ್ಲಿ ತಗೋಬೇಕು. ಜಾತಿಯಲ್ಲಿ ಇರೋವನಿಗೆ ಜಾತಿ ಸೃಜನಶೀಲವೇ. ಅವನು ಅದರಲ್ಲಿ ಹುಟ್ತಾನೆ, ಬೆಳೀತಾನೆ, ಮದುವೆ ಆಗ್ತಾನೆ, ನಂಟಸ್ತಿಕೆ ಮಾಡ್ತಾನೆ, ಆಶ್ರಯ ಪಡೀತಾನೆ. ಕಷ್ಟ ಆದಾಗ ಮಕ್ಕಳನ್ನ ಜಾತಿ ಹಾಸ್ಟೆಲ್‌ಗೆ ಸೇರ್ಸಿ ಓದಿಸ್ತಾನೆ. ಅಲ್ಲೇ ಸಾಯ್ತಾನೆ. ಜಾತಿಯನ್ನೋದು complete ಆಗಿ ಸಾಕುತ್ತೆ.

ಇದು ಜಾತಿಯ ಸೃಜನಶೀಲತೆ ಹೇಗಾಗುತ್ತೆ ಸರ್?

ಇಲ್ಲಿ ಸ್ವಲ್ಪ ಕೇಳಿ. ಇವೊತ್ತು ಕರ್ನಾಟಕದಲ್ಲಿ ಹೊಸ ಮನಸ್ಸುಗಳು ಹೊಸ ಜಾತಿಗಳಲ್ಲಿ ಹುಟ್ಟಿದ್ರೆ ಅದಕ್ಕೆ ಎರಡು ಕಾರಣ. ಒಂದು ಲಿಂಗಾಯ್ತ ಮಠಗಳು ಅವ್ರು ಈ ಐವತ್ತು ವರ್ಷಗಳಲ್ಲಿ ಶಿಕ್ಷಣ ಕೊಡೋದ್ರಲ್ಲಿ ಎಷ್ಟು ಕೆಲಸ ಮಾಡಿದ್ರು ಅಂದ್ರೆ, ಇವೊತ್ತು ಅವರು ಎಲ್ಲ ಮುಖ್ಯ ಸ್ಥಾನಗಳಲ್ಲಿ ಅವರನ್ನು ಕೂರ್ಸಿದ್ದಾರೆ. ಬ್ರಾಹ್ಮಣರು ಮಾಡದ್ದನ್ನು ಇವರು ಮಾಡಿದ್ರು.

ಇದು ಆ ಜಾತಿಯನ್ನ ಒಂದು ಪಟ್ಟಭದ್ರ ಹಿತಾಸಕ್ತಿಯನ್ನಾಗಿಯೂ ಮಾಡಿದೆ ಸರ್! ಅದನ್ನೂ ನಾವು ಗಮನಿಸಿ ಯೋಚಿಸಬೇಕು.

ಅದು ಆಗಿದ್ದು ಆಮೇಲೆ. ಚರಿತ್ರೆಯಲ್ಲಿ ಆಗಿದ್ದು, ಮಾಡಿದ್ದಲ್ಲ. ಹೊಸ ಮನಸ್ಸನ್ನು ಹುಟ್ಟಿಸಿರೋ ಇನ್ನೊಂದು ಅಂದ್ರೆ ಮೀಸಲಾತಿ. ಇತ್ತೀಚೆಗೆ ಒಂದು ವಿ.ವಿ.ಗೆ ಕುಲಪತಿ ಹುಡುಕೋ ಕೆಲಸದಲ್ಲಿ ತೊಡಗಿದ್ದಾಗ ನನಗೆ ಇದು ಗೊತ್ತಾಯ್ತು, ಮೀಸಲಾತಿಯಿಂದ ಮೇಲೆ ಬಂದವರ ಸಂಖ್ಯೆ ಎಷ್ಟಿದೇಂತ.

ಇದು ನಿಮ್ಮ ಹಳೆ tuff ಬಿಡಿ ಸರ್! ಇಲ್ಲಿ ಜಾತಿಗೂ ಸೃಜನಶೀಲತೆಗೂ ಏನು ಸಂಬಂಧ ಅಂತ!

ಇಲ್ಲಿ ಕೇಳಿ. ಈ ಗೌಡ್ರದ್ದು, ಲಿಂಗಾಯತ್ರದ್ದು, ಕುರುಬ್ರದ್ದು ಜಾತಿ ಸಂಘಟನೆಗಳು active ಆಗಿ ಇದ್ದದ್ದಕ್ಕೇ ಅವರಿಗೆ ಅವಕಾಶ ಸಿಕ್ಕಿ ಅವರು ಸೃಜನಶೀಲರಾಗಿದ್ದು.

ಬಿಡಿ ಸರ್, ಇದೆಲ್ಲ ಜಾತಿ ವ್ಯವಸ್ಥೆ ಕುರಿತ ನಮ್ಮ ತಿಳುವಳಿಕೆಯಿಂದ, ಜಾತಿ ಅನ್ನೋದು ಚರಿತ್ರೆಯಲ್ಲಿ ಏನು ಮಾಡಿದೆ ಅನ್ನೋ ತಿಳುವಳಿಕೆಯಿಂದ ಆಗಿರೋದೇ ಹೊರತು ನೀವು ಹೇಳುವ ರೀತಿಯಲ್ಲಲ್ಲ. ಇದು ಬಹಳ ಅಪಾಯದ ತರ್ಕ ಸರ್.

ಮೀಸಲಾತಿ gave them seats, jobs, security. ಇದು ಅವನನ್ನ ಸೃಜನಶೀಲನನ್ನಾಗಿ ಮಾಡುತ್ತೆ ಇಲ್ಲ ಭ್ರಷ್ಟನನ್ನಾಗಿಯೂ ಮಾಡಬಹುದು. ಅದು ಬೇರೆ ವಿಷಯ. ಈ ಎರಡೂ ಇಲ್ಲದಿದ್ರೆ ನಿಮ್ಮಲ್ಲಿ ಎಷ್ಟು ಜನ ಮೇಲಕ್ಕೆ ಬರೋದಕ್ಕೆ ಸಾಧ್ಯಾಗ್ತಾ ಇತ್ತು? ಬರೀ ಬ್ರಾಹ್ಮಣರೇ ತುಂಬಿಕೊಂಡಿರ್ತಿದ್ರು, ಈ ದೇಶದಲ್ಲಿ ಎಲ್ಲವನ್ನೂ ಸರ್ಕಾರನೇ ಮಾಡೋಕ್ಕಾಗೊಲ್ಲ. ಅನೇಕ ಅಗತ್ಯಗಳಿಗೆ ಜಾತಿಯನ್ನ ಆಶ್ರಯಿಸಬೇಕಾಗುತ್ತೆ ಇಲ್ಲಿ. ಅಂದ್ರೆ ನಾನು ಜಾತಿ ಇರಬೇಕೂಂತ ಹೇಳ್ತಿಲ್ಲ. ಜಾತಿ ಅನ್ನೋದು ಇದೆ ಅಂತ ಹೇಳ್ತಿದೀನಿ. ಜಾತಿಯೊಳಗೆ ಇರೋ ಸೃಜನಶೀಲತೆ ಬಗ್ಗೆ ಹೇಳ್ತಾನೇ, ಜಾತಿಯನ್ನು ಮೀರಿದಾಗ ಇನ್ನೂ ದೊಡ್ಡ ಸೃಜನಶೀಲತೆಯನ್ನ ಸಾಧಿಸೋದಕ್ಕೆ ಆಗುತ್ತೆ ಅನ್ನೋದೂ ನಿಜ. ಆದ್ರೆ ಇರೋ ಜಾತಿಯನ್ನ ಕಿಂಚಿತ್ತಾದರೂ ಅರ್ಥ ಮಾಡಿಕೊಳ್ಳೋಕೆ ನೀವು ತಯಾರಿಲ್ಲ ಅಂದ್ರೆ.. ಏನು ಹೇಳೋದು. ನಿಜ, We have created a middle class which is ugly. ಇವರೆಲ್ಲ ಮೋದಿಗೆ ಓಟು ಹಾಕಿದಾರೆ. ಇದರಲ್ಲಿ ಎಲ್ಲ ಜಾತಿಗಳೂ ಇವೆ, ಶೂದ್ರರೂ ಇದ್ದಾರೆ, ಬ್ರಾಹ್ಮಣರೂ ಇದಾರೆ, ಸಾಬರೂ ಇದ್ದಾರೆ. ಈ ಶಕ್ತಿಗಳೆಲ್ಲ ಲೋಹಿಯಾರ ಜಾತಿ ನೀತಿಯಿಂದ ಸೃಷ್ಟಿಯಾದೋವು.

ಈ ಮಾತುಗಳನ್ನ ಹಿರಿಯ ಲೋಹಿಯಾವಾದಿಯೊಬ್ಬರ ಬಾಯಿಂದ ಕೇಳಿ ನನಗೆ ಸದ್ಯಕ್ಕೆ ಇದಕ್ಕಿಂತ ದೊಡ್ಡ ಸಂಗತಿಯಿಲ್ಲ ಅನ್ನಿಸ್ತಿದೆ!

ಲೋಹಿಯಾ, ನಾನು ಶೂದ್ರರ ಬಗ್ಗೆ ಮಾತಾಡ್ತಿದ್ರೂ ನನಗೆ ಹತ್ತಿರವಾದೋನು ಮಧು ಲಿಮಯೆ ಅನ್ತಿದ್ರು, ಕೆಲವು ಮಧ್ಯಮ ಜಾತಿಗಳು ಮೇಲಕ್ಕೆ ಬರ್ತಾ disappoint ಮಾಡಿವೆ ಅನ್ತಿದ್ರು,

ಕೆಳ ಜಾತಿಗಳು ಮೇಲಕ್ಕೆ ಬರ್ತಾ ಮೇಲ್ಜಾತಿಗಳನ್ನ ಅನುಕರಿಸುವ, ಅವುಗಳ ದುರ್ಲಕ್ಷಣಗಳನ್ನು ಗಳಿಸಿಕೊಳ್ಳುವ ಅಪಾಯಗಳ ಬಗ್ಗೆ ಲೋಹಿಯಾ ಎಚ್ಚರಿಸಿದ್ದರು. ಇವೊತ್ತು ಈ ಸ್ಥಿತಿಯಲ್ಲಿ ಲೋಹಿಯಾ ಅವರ ಜಾತಿ ನೀತಿಯನ್ನು ನಾವು ನಿಷ್ಠುರವಾಗಿ ಪುನರ್‌ವಿಮರ್ಶಿಸಬೇಕಾಗಿದೇಂತ ನನಗಂತೂ ಅನ್ನಿಸ್ತಿದೆ. ಆದ್ರೆ ನೀವು ಜಾತಿ ಕುರಿತಂತೆ ಇನ್ನೊಂದು ಅಪಾಯಕಾರಿ ಹೇಳಿಕೆಯನ್ನೂ ಕೊಟ್ಟು ನಮ್ಮನ್ನ ಗಾಬರಿಗೊಳಿಸಿದ್ದೀರಿ. ಅದೂಂದ್ರೆ, ಜಾತಿ ಬಿಟ್ಟರೂ ಜಾತಿ ಸಂಸ್ಕೃತಿಯನ್ನು ಬಿಡಬೇಡಿ ಅನ್ನೋದು. ಸರ್ ನಿಮ್ಮ ಪ್ರಕಾರ ಜಾತಿ ಸಂಸ್ಕೃತಿ ಅಂದ್ರೆ ಏನು ಸರ್?

ಜಾತಿ ಸಂಸ್ಕೃತಿ ಊಟದ ಕ್ರಮದಲ್ಲಿದೆ, ಆಚರಣೆಗಳಲ್ಲಿವೆ, ಅನೇಕ ವಿಚಾರಗಳಲ್ಲಿವೆ. ಜಾತಿಗಳ ಮೇಲೆ ಭಾಷೆ ನಿಂತಿದೆ. ನಂನಮ್ಮ ಜಾತಿಗಳ ಜೊತೆ ಸಂಪರ್ಕ ಇಟ್ಟುಕೊಂಡ

ಮಟ್ಟಿಗೆ ಭಾಷೆ ಉಳಿದಿರುತ್ತೆ. ಉದಾಹರಣೆಗೆ ಅಂತರ್‌ಜಾತಿ ವಿವಾಹಗಳಲ್ಲಿ ಕನ್ನಡ ಹೊರಟು ಹೋಗುವಷ್ಟು ಇನ್ನಾವುದರಿಂದಲೂ ಹೊರಟು ಹೋಗಲ್ಲ. ಅದೃಷ್ಟಕ್ಕೆ ನೀನು ಕನ್ನಡತಿಯನ್ನು ಮದುವೆಯಾದಿ. ನಿನ್ನ ಕುಟುಂಬದಲ್ಲಿ ಕನ್ನಡ ಉಳಿದಿದೆ.

ಸರ್ ಇದೆಲ್ಲ ಜಾತಿಗೆ ನಿರ್ದಿಷ್ಟವಾಗಿ ಸಂಬಂಧಿಸಿರೋ ವಿಷಯಗಳಲ್ಲ. ಅವು ನಿಮ್ಮ ಸಾಮಾನ್ಯ ವಿವೇಕಕ್ಕೆ, ನನಗೆ ಯಾವುದು ಬೇಕು, ಯಾವುದು ಬೇಡ, ಯಾವುದು ಒಳ್ಳೆಯದು, ಯಾವುದು ಕೆಟ್ಟದು ಅಂತ ತೀರ್ಮಾನಿಸೋ ಶಕ್ತಿಗೆ ಸಂಬಂಧಿಸಿದ್ದು ಅಲ್ಲವಾ ಸರ್?

ಅದೂ ಇರಬಹುದು. ಆದ್ರೆ ಇವೆಲ್ಲ ಜಾತಿ ಆಧಾರಿತವಾದ ನಮ್ಮ ದೇಶದ ಕೊಡುಗೆಗಳು. ನೋಡಿ ನೀವು ಹಳ್ಳಿಗೆ ಹೋದ್ರೆ ಮುಸ್ಲಿಮರನ್ನ ಒಂದು ಜಾತಿ ಅಂತಾರೆ. ಆದ್ದರಿಂದ ದ್ವೇಷ ಇಲ್ಲ. ಮತ ಅಂದುಬಿಟ್ರೆ ಬೇರೇನೇ ಆಗಿಹೋಗುತ್ತೆ. ಇದನ್ನೆಲ್ಲ ನೀವು ಗಮನಿಸೋಲ್ಲ.

ನೀವು ಏನೇ ಹೇಳಿದ್ರೂ ಇದನ್ನೆಲ್ಲ ಜಾತಿಗೆ ಕನೆಕ್ಟ್ ಮಾಡೋದನ್ನ ಒಪ್ಪೋಕೆ ಸಾಧ್ಯ ಇಲ್ಲ ಸರ್. ಈಗ ಸ್ವಲ್ಪ ರಾಜಕೀಯಕ್ಕೆ ಬಂದು ಅಲ್ಲಿನ ನಿಮ್ಮ ಒಂದು ವಿವಾದಾಸ್ಪದ ಹೇಳಿಕೆಯನ್ನ ನೋಡೋಣ. ಇತ್ತೀಚೆಗೆ ನೀವು ಮೋದಿ ಪ್ರಧಾನಮಂತ್ರಿ ಆದ್ರೆ ನಾನು ಈ ದೇಶದಲ್ಲಿ ಇರೋದಕ್ಕೆ ಇಷ್ಟಪಡೋಲ್ಲ ಅನ್ನೋ ಅರ್ಥದ ಹೇಳಿಕೆ ಕೊಟ್ಟು ಈಗ ತೊಂದರೆಗಳನ್ನ ಅನುಭವಿಸ್ತಿದೀರಿ. ನಿಮ್ಮ ಹೇಳಿಕೆಯನ್ನ ಅಪವ್ಯಾಖ್ಯಾನ ಮಾಡಲಾಯ್ತು ಮತ್ತು ಅದನ್ನ ಬಳಸಿಕೊಂಡ ಕೆಲವು ಪುಂಡಶಕ್ತಿಗಳು ನಿಮಗೆ ತೊಂದರೆ ಕೊಡ್ತಿರೋದನ್ನ ನಾವಾರೂ ಒಪ್ಪೋಲ್ಲ. ಅದನ್ನ ಖಂಡಿಸ್ತೀವಿ. ಆದರೆ ನೀವು ಮೋದಿ ವಿರುದ್ಧ ಆ ಹೇಳಿಕೆ ಕೊಟ್ಟಿದ್ದು ಮುಖ್ಯವಾಗಿ ಎರಡು ಕಾರಣಗಳ ಮೇಲೆ ಅಂತ ನಾನು ತಿಳ್ಕೊಂಡಿದೀನಿ. ಒಂದು, ೨೦೦೨ರಲ್ಲಿ ಅವರು ಮುಖ್ಯಮಂತ್ರಿಯಾಗಿದ್ದಾಗ ನಡೆದ ಹತ್ಯಾಕಾಂಡ. ಇನ್ನೊಂದು ಅವರ ಅಭಿವೃದ್ಧಿ ಮಾದರಿ. ನಿಮ್ಮ ಹೇಳಿಕೆಯ ತೀವ್ರತೆಗೆ ಮುಖ್ಯವಾಗಿ ಕಾರಣವಾಗಿದ್ದು ಮುಸ್ಲಿಮರ ಆ ಸಾಮೂಹಿಕ ಹತ್ಯೆ ಅಂತಲೇ ನಾನು ಭಾವಿಸಿದ್ದೀನಿ. ಈ ಹಿನ್ನೆಲೆಯಲ್ಲಿ ಈ ಪ್ರಶ್ನೆ. ಆ ಹತ್ಯಾಕಾಂಡ ನಡೆದಾಗ ನೀವು ಏನನ್ನೂ ಹೇಳದೆ ಈಗ ಇಷ್ಟು ತೀವ್ರ ಹೇಳಿಕೆ ನೀಡಿದ್ದು ಯಾಕೆ ಸರ್?

ನಾನು ಆಗ ಎಲ್ಲಿದ್ದೆ, ಏನು ಮಾಡ್ತಿದ್ದೆ, ಏನು ಹೇಳಿದೆ, ಏನು ಹೇಳಲಿಲ್ಲ ಅನ್ನೋದು ನನಗೆ ಈಗ ನೆನಪಿಲ್ಲ.

ನನಗೆ ನೆನಪಿದೆ ಸರ್. ಅದನ್ನ ನನ್ನ ಅಂಕಣವೊಂದರಲ್ಲಿ ಬರೆದಿದ್ದೇನೆ ಕೂಡ. ಆಗ ವಾಜಪೇಯಿಯವರ ಎನ್.ಡಿ.ಎ. ಸರ್ಕಾರ ಇತ್ತು. ಆಗ ನೀವು ಪುಣೆ ಫಿಲ್ಮ್ ಇನ್‌ಸ್ಟಿಟ್ಯೂಟ್‌ನ ಛೇರ್ಮನ್ ಏನೋ ಆಗಿದ್ರಿ, ಹತ್ಯಾಕಾಂಡದ ಬಗ್ಗೆ, ಅದರಲ್ಲಿ ಮೋದಿ ಪಾತ್ರದ ಬಗ್ಗೆ ನೀವೇನೂ ಹೇಳದಿರುವುದನ್ನು ಗಮನಿಸಿ, ಆ ಬಗ್ಗೆ ಲೇಖನ ಮಾಡುತ್ತಿದ್ದ ಔಟ್‌ಲುಕ್ ಪತ್ರಿಕೆಯ ವರದಿಗಾರನೊಬ್ಬ ನಿಮ್ಮನ್ನು ಗುಜರಾತ್ ಹತ್ಯಾಕಾಂಡದ ಬಗ್ಗೆ ನಿಮಗೇನೂ ಅನ್ನಿಸುತ್ತಿಲ್ಲವೇ ಅಂತ ಪ್ರಶ್ನೆ ಕೇಳಿದಾಗ ನೀವು ಕೊಟ್ಟ ಉತ್ತರ: 'Both Modi and Lalu are not good

for the country'. ಅಂದರೆ ಆಗಿನ ಕಾಲಕ್ಕೆ ಒಂದು ರಾಜಕೀಯ balancing statement ಆಗಿತ್ತು ಅದು.

ನಾನೊಬ್ಬ ಲೇಖಕ. ಒಬ್ಬ ಲೇಖಕನನ್ನ ಈ ರೀತಿ ಪ್ರಶ್ನಿಸೋಕ್ಕೇ ಆಗೊಲ್ಲ. ಬಹಳ ವಿಷಯ ಜನಕ್ಕೆ ಗೊತ್ತಿರೋಲ್ಲ. ನಾನು ಆಗ ಅಹಮದಾಬಾದ್‌ನಲ್ಲಿರೋ ಗಾಂಧಿ ವಿದ್ಯಾಪೀಠಕ್ಕೆ ಹೋಗಿ ಗಾಂಧಿಯ ಅಹಿಂಸೆ ಬಗ್ಗೆ ಮಾತಾಡಿದ್ದೀನಿ. ಆಮೇಲೆ, ಗಾಂಧಿಯವರ ಕಾರ್ಯದರ್ಶಿ ಇದ್ದರಲ್ಲ (ಮಹದೇವ ದೇಸಾಯಿ), ಅವರ ಮಗ ನಾರಾಯಣ ದೇಸಾಯಿ ಗಾಂಧಿ ಜೀವನ ಚರಿತ್ರೆ ಬರೆದಿದ್ದರು. ಅದನ್ನ ತಾನು ಬಿಡುಗಡೆ ಮಾಡಬೇಕೂಂತ ಮೋದಿ ಹೇಳಿದ್ದ. ಆದ್ರೆ ಗುಜರಾತ್‌ನ ಲೇಖಕರು-ಕಲಾವಿದರು ಅದನ್ನ ತಪ್ಪಿಸೋಕೆ-ಗಣೇಶ್ ದೇವಿ ಅವರೆಲ್ಲ ಸೇರಿ-ಪುಸ್ತಕದ ಬಿಡುಗಡೆಯನ್ನ ಮುಂಬೈಯಲ್ಲಿ ಏರ್ಪಡಿಸಿ ನನ್ನನ್ನ ಕರೆದು ಬಿಡುಗಡೆ ಮಾಡಿಸಿದ್ರು, ಆಗ ಯಾರ ಮೇಲಾದ್ರೂ ಮೋದಿ ಕೃಪಾಕಟಾಕ್ಷ ಬಿದ್ರೆ ಅವನನ್ನ ಅಸ್ಪೃಶ್ಯನ ಹಾಗೆ ನೋಡೋರು. ಇವೊತ್ತು ಮೋದಿ ಎಲ್ಲರಿಗೆ ಬೇಕಾಗಿದ್ದಾನೆ. ಗುಜರಾತ್‌ನ ಒಬ್ಬ ಕವಿ ಇದ್ದಾನೆ. ಅವನು ಲೋಹಿಯಾಗೆ ಹತ್ತಿರವಾಗಿದ್ದವನು. ನನಗೂ ಹತ್ತಿರವಾಗಿದ್ದವನು. ಅವನು ಹೇಳ್ತಿದ್ದ ಮೋದಿ ಮುಸ್ಲಿಮರ ಬಾಯಿ ಮುಚ್ಚಿಸಿದ್ದಾನೆ ಅಂತ, ಅದರಿಂದ ಒಳ್ಳೇದಾಗಿದೆ ಅನ್ನೋ ಅರ್ಥದಲ್ಲಿ ಹೇಳಿದ್ದ. ಇವರಿಗೆಲ್ಲ ಏನಾಗಿದೆ ಅಂತ ಕೇಳ್ತೀನಿ. ಕನ್ನಡದ ಕವಿ ಮಿತ್ರನೊಬ್ಬ ನನಗೆ ಪತ್ರ ಬರೆದು ಮೋದಿ ಭದ್ರ ಸರ್ಕಾರ ರಚಿಸಿ ನಿಷ್ಠ ಆಡಳಿತ ಕೊಟ್ರೆ ನಾವ್ಯಾಕೆ ಸ್ವಾಗತಿಸಬಾರ್ದು ಅಂತಾನೆ. ನಮ್ಮ ಕೊಡಗಿನ ವೀರ ಸುಬ್ಬಯ್ಯ ಮೋದಿ ಏನೇ ಮಾಡಿರಲಿ ಆತನ ಪ್ರಧಾನಮಂತ್ರಿ ಅವತಾರದಿಂದ ಒಳ್ಳೆಯದಾಗುತ್ತೆ ಅಂತ ಹೇಳ್ತಿದ್ದಾರಂತೆ. ನಾನು ಎರಡು ತುದಿಯನ್ನೂ ನೋಡಿದ್ದೇನೆ. ಆ ತುದಿಯಿಂದ ಈ ತುದಿಗೆ ಬಂದವರನ್ನ.

ಮೋದಿ ಭಯ ಇದಕ್ಕೆಲ್ಲ ಕಾರಣಾಂತ ಅನ್ನಿಸುತ್ತೆ

ಇಲ್ಲ. ಮೋದಿ ಇವರ ನಿರೀಕ್ಷೆಯಂತೆ ಕೆಲಸ ಮಾಡಿಬಿಡಬಹುದು. ಜನ ಕೆಲಸ ಮಾಡೋ ಹಾಗೆ ಮಾಡಬಹುದು. ಅದು ಲೋಹಿಯಾ ಹೇಳುತ್ತಿದ್ದ Maximum efficiency ನೆಲೆಯಲ್ಲಿ. Total efficiency ನೆಲೆಯಲ್ಲಿ ಅಲ್ಲ. ಅದರಿಂದ ಬಡವರ ಮೇಲೆ ಒತ್ತಡ ಹೆಚ್ಚಬಹುದು ಅವರು ಕೀಳರಿಮೆಗೆ ಒಳಗಾಗಬಹುದು. ಇದನ್ನೆಲ್ಲ ಬರಿತಿದೀನಿ.

ಬರೀರಿ ಸರ್. ಈ efficiencyಗಳ ಮಾತನ್ನೆಲ್ಲ ಲೋಹಿಯಾ ಆಡಿದ್ದು ನಾಗರಿಕತೆಗಳ ಉತ್ಥಾನ ಮತ್ತು ಪತನದ ಸಂದರ್ಭಗಳಿಗೆ ಸಂಬಂಧಿಸಿದಂತೆ ಅಂತ ಕಾಣುತ್ತೆ. ಇರಲಿ, ಈಗ ಕೊನೆಯದಾಗಿ ಮೊದಲಿಗೇ, ಸಾಹಿತ್ಯದ ವಿಷಯಕ್ಕೇ ಬರೋಣ. ನಿನ್ನೆ ನಿಮ್ಮತ್ರ ಮಾತಾಡ್ತಿದ್ದಾಗ ಕಷ್ಟ ಮುಜುಗರದ ಪ್ರಶ್ನೆ ಅಂತ ನೀವು ಹೇಳಿದ್ದ ಪ್ರಶ್ನೆಯನ್ನ ಕೇಳಲೇಬೇಕು ಅನ್ನಿಸ್ತಿದೆ. ಉತ್ತರಿಸೋದು ಬಿಡೋದು ನಿಮಗೆ ಬಿಟ್ಟದ್ದು. ನೀವು ಒಬ್ಬ ಸಾಹಿತ್ಯದ ಓದುಗರಾಗಿ ಹೇಳಿ ಸರ್, ನೀವು, ಲಂಕೇಶ್, ತೇಜಸ್ವಿ-ಇವರಲ್ಲಿ ನಿಮ್ಮ ಪ್ರಕಾರ ಲೇಖಕರಾಗಿ ನಂಬರ್ ಒನ್ ಯಾರು?

ನನಗೆ ಈ ಮೂರು ಜನರಲ್ಲಿ ಹೆಚ್ಚು ಇಷ್ಟ ಲಂಕೇಶ್, ಬರವಣಿಗೇನಲ್ಲಿ. ಆದ್ರೆ ನಾವು ಮೂರೂ ಜನ ಲೇಖಕರು ಇಲ್ದೆ ಇದ್ರೆ ಕನ್ನಡದಲ್ಲಿ ಏನೋ ಒಂದು ಶೂನ್ಯ ಇರ್ತಾ ಇತ್ತು. ನಾವು ಮೂರೂ ಜನ ಅಗತ್ಯ.

ನಿಮಗೆ ಲಂಕೇಶ್ ಹೆಚ್ಚು ಇಷ್ಟ ಯಾಕೆ?

He was a deeply disturbed man. ಅವನು ಒಂಥರಾ ನ್ಯೂರಾಟಿಕ್. ತೇಜಸ್ವಿನೂ ಹಾಗೇ ಹೇಳ್ತಿದ್ದ. ಯಾಕೆ ಅಂದ್ರೆ ನ್ಯೂರಾಟಿಕ್ ಆದವನು ಒಂದು ಸಲ ಈ ಕಡೆ ಇದ್ರೆ ಇನ್ನೊಂದು ಸಲ ಆ ಕಡೆ ಇರ್ತಾನೆ. ಅದಕ್ಕೆ ಸಮರ್ಥನೆ ಇರೋದಿಲ್ಲ. ಅವನ ಒಂದು ನಾಟಕದಲ್ಲಿ ಮೂರು ಜನ ಬಂದು ಒಬ್ಬನ್ನ ಬೈದು ಬೈದು ಅವನನ್ನ ನೇಣಿಗೆ ಹಾಕಬೇಕು ಅನ್ನುವಾಗ ನಾಟಕ ಸಂಪೂರ್ಣವಾಗಿ ತಿರುಗುಮುರುಗಾಗಿ ಬಿಡುತ್ತೆ. ಅದೊಂದು ನ್ಯೂರಾಟಿಕ್ ನಾಟಕ. ಈ ನ್ಯೂರಾಟಿಕ್ ಆದ ಎನರ್ಜಿ ಇದೆಯಲ್ಲ, ಅದು ಕೆಲವು ಪ್ರಾಮಾಣಿಕವಾದ ಸತ್ಯಗಳನ್ನ ಹೊರಕ್ಕೆ ತಂದುಬಿಡುತ್ತೆ. ಒಂದು, ಮಾಸ್ತಿಯವರ ತರಹ ಎಲ್ಲವನ್ನೂ ಮುಚ್ಚಿಟ್ಟುಕೊಳ್ಳುವುದು. ಅದು ಮುಚ್ಚಿಟ್ಟುಕೊಳ್ಳುವ ಭಾಷೆ. ಇನ್ನೊಂದು ಲಂಕೇಶನದು ಮುಚ್ಚಿಡಲಾರದವನ ಭಾಷೆ. ಅದು ಬಿಚ್ಚುವ ಭಾಷೆ ಅವನ 'ಬಿಚ್ಚು' ಕವನ ಸಂಕಲನ ಬಿಡುಗಡೆಯಾದಾಗ ಅಡಿಗರು ಹೇಳಿದ್ರು, ಕಟ್ಟುವ ಕಾಲ ಒಂದಿರುತ್ತೆ, ಬಿಚ್ಚುವ ಕಾಲ ಒಂದಿರುತ್ತೆ ಅಂತ.

ಹಾಗೆ ನಾವು ಮೂರೂ ಜನ ಮುಖ್ಯ. ನನಗೇನೋ ಜ್ಞಾನಪೀಠ ಬಂತು. ಲಂಕೇಶ್‌ಗೆ ಬರಲಿಲ್ಲ, ತೇಜಸ್ವಿಗೂ ಬರಲಿಲ್ಲ. ಅಡಿಗರಿಗೂ ಬರಲಿಲ್ಲ, ಪು.ತಿ.ನ.ಗೆ ಕೂಡ. ಅವರೆಲ್ಲ ನನಗಿಂತ ದೊಡ್ಡವರಲ್ವಾ? ಅಡಿಗರು ನನಗಿಂತ ದೊಡ್ಡವರೂಂತ ಇವೊತ್ತಿಗೂ ತಿಳಿದಿದ್ದೀನಿ ನಾನು.

ನನಗೆ ಈ ಮೂವರನ್ನೂ ಜೊತೆಯಾಗಿ ನೋಡಿದಾಗ ತರತಮ ಗೊತ್ತಾಗಲ್ಲ. ಆದ್ರೂ ಎಲ್ಲೋ ಲಂಕೇಶ್ ಮೂವರಲ್ಲಿ ವಿಶಿಷ್ಟ ಅಂತ feel ಮಾಡ್ತಿದ್ದೆ ಅಷ್ಟೆ. ಅವರ್ದು intensity ಜಾಸ್ತಿ. ಆದ್ರೆ reachನಲ್ಲಿ ತೇಜಸ್ವಿ ಜಾಸ್ತಿ ಅನ್ನಿಸುತ್ತೆ. ಅಂದ್ರೆ horizontal reachನಲ್ಲಿ

ತೇಜಸ್ವಿಯಲ್ಲಿ horizontal reach ಬಹಳ ಇದೆ. ಅವನು ತನ್ನ ಅಪ್ಪನ ಗುಣವನ್ನ ಇದರಲ್ಲಿ ಪಡೆದುಕೊಂಡಿದ್ದಾನೆ.

ಸರ್ ಬಹಳ ಮಾತಾಡಿದೀವಿ. ನಿಮಗೆ ದಣಿವಾಗಿರಬೇಕು. ಇಲ್ಲಿಗೆ ಈ ಮಾತುಕತೆ ಸಾಕು ಅಂತ ಕಾಣುತ್ತದೆ. ಥ್ಯಾಂಕ್ಸ್, ನಮಸ್ಕಾರ.

ನಮಸ್ಕಾರನಪ್ಪ.

(ಧ್ವನಿಯಿಂದ ಲಿಪಿಗೆ: ಸವಿತಾ ನಾಗಭೂಷಣ)

('ಹೊಸ ಮನುಷ್ಯ' ಆಗಸ್ಟ್ (ವಾರ್ಷಿಕ ವಿಶೇಷ ಸಂಚಿಕೆ), ೨೦೧೪)

ಭಾಷೆಯ ಪ್ರಶ್ನೆ: ಸಮಾಜವಾದಿ ಹಿನ್ನೆಲೆಯಲ್ಲಿ

ಭಾಷೆಯ ವಿಷಯಕ್ಕೆ ಸಂಬಂಧಿಸಿದಂತೆ ಈಗ ಉಂಟಾಗಿರುವ ಬಿಕ್ಕಟ್ಟನ್ನು ಅರ್ಥ ಮಾಡಿಕೊಳ್ಳಲು ಸಮಾಜವಾದಿ ಹಿನ್ನೆಲೆಯ ವಿಶೇಷ ನೋಟವೇನೂ ಬೇಕಿಲ್ಲ. ಸಾಮಾನ್ಯ ವಿವೇಕದ ನೋಟ ಸಾಕು. ಮನುಷ್ಯ ತನ್ನ ಸುತ್ತಲಿನ ಜಗತ್ತನ್ನು ಮೊದಲು ಗುರುತಿಸುವುದು ತನ್ನ ಮಾತೃಭಾಷೆಯ ಮೂಲಕ. ಜಗತ್ತಿನ ಸಚರಾಚರ ವಸ್ತು-ಸಂಗತಿಗಳ ಸಂಬಂಧವನ್ನು ಗ್ರಹಿಸುವುದು ತನ್ನ ಭಾಷೆಯ ನುಡಿಗಟ್ಟುಗಳ ಮೂಲಕ. ಅಂದರೆ ಮನುಷ್ಯ ತನ್ನ ಸುತ್ತಲಿನ ಜಗತ್ತನ್ನು ತನ್ನ ಪ್ರಜ್ಞೆಯ ಭಾಗವಾಗಿ ಮಾಡಿಕೊಳ್ಳುವುದು ತನ್ನ ಭಾಷೆಯ ಮೂಲ ಮಾತೃಕೆಗಳ ಮೂಲಕವೇ. ಹಾಗಾಗಿ ತನ್ನ ಸುತ್ತಲಿನ ಜಗತ್ತನ್ನು ಕುರಿತ ಜಿಜ್ಞಾಸೆಯೇ ಆದ ಶಿಕ್ಷಣ ಮತ್ತು ಅದರ (ತನ್ನ ಸುತ್ತಲಿನ ಜಗತ್ತಿನ) ನಿರ್ವಹಣೆಯೇ ಆದ ಆಡಳಿತವೂ ಅವನ ಭಾಷೆಯಲ್ಲೇ ಇರಬೇಕಾದದ್ದು ಸಹಜ.

ನಮ್ಮ ದೇಶದ ಎಲ್ಲ ಸಹಜವನ್ನೂ ಅಸಹಜ ಎಂದು ಮಾಡಿದ ನಮ್ಮ ವಸಾಹತುಶಾಹಿ ಅನುಭವದಿಂದ ಪೂರ್ಣವಾಗಿ ಪಾರಾಗುವಂತಹ ರಾಜಕಾರಣವನ್ನು ಕಟ್ಟಿಕೊಳ್ಳುವಲ್ಲಿ ನಾವು ಈವರೆಗೂ ವಿಫಲವಾಗಿದ್ದೇವೆ. ಇದೇ ಭಾಷೆಯ ಪ್ರಶ್ನೆಯನ್ನು ನಾವು ಇನ್ನೂ ಚರ್ಚೆಯ ವಸ್ತುವನ್ನಾಗಿ ಮಾಡಿಕೊಂಡಿರುವುದಕ್ಕೆ ಕಾರಣ. ಸಮಾಜವಾದ ಹೇಳುವುದೂ ಇದನ್ನೇ. ವಸಾಹತುಶಾಹಿ ತಾನು ಭದ್ರವಾಗಿ ಬೇರೂರಲು ನಮ್ಮ ಭಾಷೆಯೂ ಸೇರಿದಂತೆ ನಮ್ಮ ಬದುಕಿನ ಸಕಲ ಪರಿಕರಗಳ ಬಗೆಗೆ ನಮ್ಮಲ್ಲಿ ಕೀಳರಿಮೆಯನ್ನು ಬೆಳೆಸಿತು. ಆ ಕೀಳರಿಮೆ ನಮಗೆ ಗೊತ್ತಾಗದಂತೆ ಅದು ನೀಡಿದ ಇಂಗ್ಲಿಷ್ ಎಂಬ ಚುಚ್ಚುಮದ್ದಿನ ಪ್ರಭಾವ ನಮ್ಮ ಸಾಮಾಜಿಕ ದೇಹದಿಂದ ಇನ್ನೂ ಇಳಿದಿಲ್ಲ. ಈ ಇಂಗ್ಲಿಷ್ ಎಂಬುದು (ಇತರೆಲ್ಲ ಭಾಷೆಗಳಂತೆಯೇ) ಕೇವಲ ಒಂದು ಭಾಷೆ ಮಾತ್ರವಾಗಿರದೆ, ಒಂದು ಬದುಕಿನ ಮಾದರಿಯ ನುಡಿಗಟ್ಟೂ ಆಗಿರುವುದರಿಂದ ಮತ್ತು ಆ ಬದುಕಿನ ಮಾದರಿಯೇ ಶ್ರೇಷ್ಠ

ಎಂಬುದನ್ನು ನಮ್ಮಲ್ಲಿ ರಕ್ತಗತಗೊಳಿಸುವುದೇ ಆ ಇಂಗ್ಲಿಷ್ ಚುಚ್ಚುಮದ್ದು ನೀಡಿದ್ದರ ಉದ್ದೇಶವೂ ಆಗಿದ್ದುದರಿಂದ (ಮೆಕಾಲೆಯ ಮಾತುಗಳನ್ನು ನೆನಪಿಸಿಕೊಳ್ಳಿ.) ಭಾಷೆಯ ವಿಷಯ ನಮ್ಮ ಬದುಕಿನ ಸ್ವಾಯತ್ತತೆಗೆ ಮತ್ತು ಅರ್ಥಪೂರ್ಣತೆಗೆ ಸಂಬಂಧಿಸಿದ್ದು ಎಂಬುದು ನಮ್ಮಲ್ಲಿ ಬಹಳ ಜನಕ್ಕೆ ಗೊತ್ತೇ ಆಗಿಲ್ಲ. ಸಮಾಜವಾದ ಭಾಷೆಯ ವಿಷಯದಲ್ಲಿ ಹೇಳಲು ಪ್ರಯತ್ನಿಸಿದ್ದು ಈ ಸತ್ಯವನ್ನೇ.

ಸಮಾಜವಾದ–ನಿರ್ದಿಷ್ಟವಾಗಿ ಲೋಹಿಯಾ ವಿಚಾರಧಾರೆ–ಭಾರತೀಯ ಬದುಕನ್ನು ತನ್ನ ವಸಾಹತುಶಾಹಿ ವಿಸ್ಮೃತಿಯಿಂದ ಹೊರತಂದು ಅದಕ್ಕೊಂದು ಸ್ವಾಯತ್ತತೆ ಮತ್ತು ಅರ್ಥಪೂರ್ಣತೆಯನ್ನು ಒದಗಿಸುವ ಒಂದು ಪ್ರಯತ್ನ ಮಾಡಿತಷ್ಟೆ. ಗಾಂಧೀಜಿಯ ಮಿತಿಗಳುಳ್ಳ ಬದುಕಿನ ಕಲ್ಪನೆಯ ಸ್ಫೂರ್ತಿಯಲ್ಲಿ ಈ ಪ್ರಯತ್ನ ನಡೆಯಿತು. ಆದರೆ ಈ ಪ್ರಯತ್ನ ಆಧುನಿಕತೆ ಮತ್ತು ಅಭಿವೃದ್ಧಿಗಳ ಹೆಸರಿನಲ್ಲಿ ನಡೆದ ಮಿತಿಗಳಿಲ್ಲದ (ಸುಖದ) ಬದುಕಿನ ಮಾದರಿಯನ್ನಾಧರಿಸಿದ ಪಾಶ್ಚಾತ್ಯೀಕರಣದ ರಾಜಕಾರಣದ ಎದುರು ಸೋತಿರುವುದು ಸಹಜವೇ ಆಗಿದೆ. ಅಂದರೆ ಇದೆಲ್ಲ ಕಾಲಧರ್ಮಕ್ಕನುಗುಣವಾಗಿಯೇ ಇದೆ. ಏಕೆಂದರೆ ನಮ್ಮ ಬದುಕಿನ ವಿಸ್ತರಣೆಗೆ ಚೌಕಟ್ಟು ಹಾಕಿರುವ ನಮ್ಮ ಸಂವಿಧಾನವೂ ಪಾಶ್ಚಾತ್ಯ ಪ್ರಜಾಪ್ರಭುತ್ವದ ಮೌಲ್ಯಗಳನ್ನೇ ಆದರ್ಶಗಳೆಂದು ನಂಬಿ ರಚಿತವಾಗಿದೆ. ಹಾಗಾಗಿಯೇ ನಮ್ಮ ನ್ಯಾಯಾಂಗವೂ ಭಾಷೆಯ ಪ್ರಶ್ನೆಯನ್ನು ಪ್ರಜೆಗಳ ಹುಟ್ಟು ಅಥವಾ ಸಹಜ ಹಕ್ಕುಗಳ ಚೌಕಟ್ಟಿನಲ್ಲಿ ನೋಡದೆ, ಇಂತಹ ಸಂವಿಧಾನದಿಂದ ದತ್ತವಾದ ನಾಗರಿಕ ಹಕ್ಕುಗಳ ಚೌಕಟ್ಟಿನಲ್ಲಿ ನೋಡಿದೆ. ಶಾಲಾ ಶಿಕ್ಷಣದ ಮಟ್ಟಿಗಾದರೂ ಮಾತೃ ಭಾಷಾ ಮಾಧ್ಯಮವನ್ನು ಕಡ್ಡಾಯ ಮಾಡುವ ಸರ್ಕಾರದ ಉಪಕ್ರಮವು ನಾಗರಿಕ ಹಕ್ಕುಗಳ ಉಲ್ಲಂಘನೆಯಾಗಿದೆ ಎಂದು ಘೋಷಿಸಿದೆ. ಸಹಜ ಬದುಕಿನ ಹಂಬಲದ ಜನ ಇದನ್ನು ಈಗ ಅಸಹಾಯಕವಾಗಿ ನೋಡುವಂತಾಗಿದೆ.

ಹಾಗಾಗಿ ನಮ್ಮ ರಾಜಕಾರಣ ಸಹಜ (ಅಂದರೆ ನಮ್ಮ ನೆಲ–ಜಲ–ಆಕಾಶಗಳ ಮಿತಿಗಳಿಗೆ ಅನುಗುಣವಾದ) ಬದುಕಿನ ಹಂಬಲವನ್ನು ವ್ಯಕ್ತ ಮಾಡುವಂತಾಗುವವರೆಗೆ, ಅಂದರೆ ಅಂತಹ ರಾಜಕಾರಣ ಸಾಧ್ಯವಾಗುವಂತಹ ಇಚ್ಛಾಶಕ್ತಿ ಜನತೆಯಲ್ಲಿ ಸಂಘಟಿತವಾಗುವವರೆಗೂ ಭಾಷೆಯ ಪ್ರಶ್ನೆ ಅಸಹಜ ಸಂದರ್ಭದಲ್ಲೇ ಸ್ಥಿತವಾಗಿರುತ್ತದೆ. ಅಂದರೆ ಜನ ಇಂಗ್ಲಿಷ್‌ನ ಹಿಂದೆ ಬೀಳಲು (ಅಂದರೆ ಜನ ಆಕಾಶಕ್ಕೆ ಏಣಿ ಹಾಕಿಕೊಳ್ಳಲು) ಏನು ಕಾರಣಗಳಿವೆಯೋ ಆ ಕಾರಣಗಳು ಆತ್ಯಂತಿಕವಾಗಿ ನಮ್ಮ ಬದುಕನ್ನು ಮುಕ್ಕಾಗಿಸುತ್ತವೆ; ಹಾಗಾಗಿ ಕಷ್ಟಪಟ್ಟು ಸಂಪಾದಿಸಿಕೊಂಡ ರಾಷ್ಟ್ರದ ಸ್ವಾಯತ್ತತೆಯನ್ನೂ ಭಂಗಗೊಳಿಸುತ್ತದೆ ಎಂಬ ಆಳದ ತಿಳುವಳಿಕೆ ವ್ಯಾಪಕವಾಗಿ ಮೂಡಬೇಕಿದೆ. ಇಂತಹ ತಿಳುವಳಿಕೆ ಒಟ್ಟಾರೆಯಾಗಿ ಜನತೆಯ ಬದುಕನ್ನು ಮುನ್ನಡೆಸುವ ಹೊಣೆ ಹೊತ್ತ ರಾಜಕೀಯ ನಾಯಕತ್ವದಲ್ಲಿ ಮೂಡುವವರೆಗೆ ಪರಿಸ್ಥಿತಿ ಹೀಗೇ ಇರುವುದರ ಹೊರತಾಗಿ ಬೇರೆ ಮಾರ್ಗವಿಲ್ಲ.

ಹಾಗಾಗಿ ಕರ್ನಾಟಕದ ಸಂದರ್ಭಕ್ಕೇ ಸೀಮಿತವಾಗಿ ಹೇಳುವುದಾದರೆ, ಕನ್ನಡದ ಪ್ರಶ್ನೆಗೆ ಸಂಬಂಧಿಸಿದಂತೆ ತೋರುಗಾಣಿಕೆಯ ಬದ್ಧತೆಯನ್ನು ಮಾತ್ರ ಪ್ರದರ್ಶಿಸುತ್ತಿರುವಂತೆ ಕಾಣುವ ರಾಜ್ಯ ಸರ್ಕಾರದ ಮೇಲೆ ಕನ್ನಡಪರ ಶಕ್ತಿಗಳು ಕನ್ನಡಪರವಾದ ಒತ್ತಡ ಹೇರಬೇಕಿದೆ. ಮಾತೃಭಾಷಾ ಶಿಕ್ಷಣದ ಅನನ್ಯ ಮಹತ್ವವನ್ನು ನಿರಾಕರಿಸಿದ ಸರ್ವೋಚ್ಚ ನ್ಯಾಯಾಲಯದ ತೀರ್ಪು ಬಂಧನವಾಗದಂತೆ ಹೊಸ ದಾರಿ ಹುಡುಕಿ ಕನ್ನಡ ಶಿಕ್ಷಣವನ್ನು ಕನ್ನಡದ ಮಕ್ಕಳಿಗೆ ಸಹಜವಾಗಿ ಒದಗಿಸುವ ಕಾನೂನೊಂದನ್ನು ರೂಪಿಸಿ, ಶಾಸನಸಭೆಯ ಒಪ್ಪಿಗೆಯನ್ನೂ ಪಡೆದು ರಾಷ್ಟ್ರಪತಿಗಳ ಅಂಕಿತಕ್ಕೆ ಕಳಿಸಲಾಗಿದೆ ಎಂದು ಒಂದು-ಒಂದೂವರೆ ವರ್ಷದ ಹಿಂದೆ ರಾಜ್ಯ ಸರ್ಕಾರ ಹೇಳಿತ್ತು. ಈಗ ಅದನ್ನು ಅದು ಪೂರ್ತಿ ಮರೆತಂತೆ ವರ್ತಿಸುತ್ತಿರುವುದನ್ನು ಕೂಡಲೇ ಪ್ರಶ್ನಿಸಬೇಕಿದೆ. ಹಾಗೇ, ಹೊಸ ಹುರುಪಿನ ರಾಷ್ಟ್ರೀಯತೆಯ ಹೆಸರಿನಲ್ಲಿ ದೇಶಿ ಮೌಲ್ಯಗಳನ್ನು ಮರುಸ್ಥಾಪಿಸುವ ಸಂಕಲ್ಪವನ್ನು ಘೋಷಿಸಿರುವ ಸದ್ಯದ ಕೇಂದ್ರ ಸರ್ಕಾರದ ಮುಂದೆ ಭಾರತೀಯ ಭಾಷೆಗಳ ಅಸಹಾಯಕತೆಯನ್ನು ವಿವರಿಸಿ, ಸಾರ್ವಜನಿಕ ಬದುಕಿನ ಎಲ್ಲ ಕ್ಷೇತ್ರಗಳಲ್ಲಿ ಅವುಗಳಿಗೆ ಸಹಜ ಮಹತ್ವ ಒದಗಿಸುವಂತಹ ಸಾಂವಿಧಾನಿಕ ಉಪಕ್ರಮಕ್ಕೂ ರಾಜ್ಯ ಸರ್ಕಾರ ಒತ್ತಾಯಿಸಬೇಕಿದೆ. ಇಂತಹ ಒಂದು ಪ್ರಯತ್ನ ರಾಜ್ಯ ಸರ್ಕಾರದ ವಲಯಗಳಲ್ಲಿ ಹಲವು ಬಾರಿ ಪ್ರಸ್ತಾಪಿತವಾಗಿದ್ದರೂ, ಅದೇಕೋ ಮೂರ್ತ ರೂಪ ಪಡೆದಿಲ್ಲ. ಈ ಎರಡು ಕಾರಣಗಳಿಂದಾಗಿಯೇ ಭಾಷೆ ಕುರಿತ ರಾಜ್ಯ ಸರ್ಕಾರದ ಬದ್ಧತೆ ಈಗ ಅನುಮಾನಾಸ್ಪದವೆನ್ನಿಸಿರುವುದು.

ನಿಜ, ಭಾಷಾ ಪ್ರಶ್ನೆಯ ಈ ಬಿಕ್ಕಟ್ಟಿನ ಪರಿಹಾರ ನಮ್ಮ ರಾಜ್ಯ ಸರ್ಕಾರದ ಪ್ರಯತ್ನವೊಂದರಿಂದಲೇ ಸಾಧ್ಯವಾಗದು. ಎಲ್ಲ ಭಾಷಾ ಪ್ರದೇಶಗಳ/ರಾಜ್ಯಗಳ ಸರ್ಕಾರಗಳಿಂದಲೂ ಪ್ರಯತ್ನಗಳು ಆರಂಭವಾಗಬೇಕು. ಅಂದರೆ, ಭಾರತೀಯ ಭಾಷೆಗಳ ಪರವಾದ ಒಂದು ಹೊಸ ಹುರುಪಿನ ವಾತಾವರಣವನ್ನು ನಿರ್ಮಿಸಬೇಕು. ಆ ದಿಸೆಯಲ್ಲಿ ಕರ್ನಾಟಕ ಸರ್ಕಾರ ಮೊದಲ ಹೆಜ್ಜೆ ಇಡಬೇಕು. ಏಕೆಂದರೆ, ಈ ರಾಜ್ಯದಲ್ಲಿ ಕನ್ನಡ ತಬ್ಬಲಿಯಾಗಿರುವಷ್ಟು ಯಾವ ರಾಜ್ಯದಲ್ಲೂ ಅಲ್ಲಿನ ಪ್ರಾದೇಶಿಕ ಭಾಷೆಗಳು ತಬ್ಬಲಿಗಳಾಗಿಲ್ಲ.

(ಟಿಪ್ಪಣಿ: ಇಲ್ಲಿ ಮಾತೃ ಭಾಷೆಗೆ ಅನ್ವಯವಾಗುವ ಎಲ್ಲ ಮಾತುಗಳೂ ಪರಿಸರ ಭಾಷೆಗೂ ಅನ್ವಯವಾಗುತ್ತವೆ ಎಂಬುದನ್ನು ಗಮನಿಸಬೇಕು)

ಮೈಸೂರಿನ 'ನೃಪತುಂಗ' ಕನ್ನಡ ಶಾಲೆಯ ಬೆಳ್ಳಿ ಹಬ್ಬದ ನೆನಪಿನ ಸಂಚಿಕೆಗೆ ಬರೆದ ಲೇಖನ-೨೦೧೫)

ಮೂರು ವ್ಯಕ್ತಿ ಚಿತ್ರಗಳು

ರಮಣ ಭಕ್ತಿಯಲ್ಲಿ ಮಾಗಿದ ಜೀವ : ಡಾ.ಎ.ಎಸ್. ವೇಣುಗೋಪಾಲರಾವ್

ಡಾ. ಎ.ಎಸ್. ವೇಣುಗೋಪಾಲರಾಯರನ್ನು ನಾನು ಸುಮಾರು ಮುವ್ವತ್ತು ವರ್ಷಗಳ ಹಿಂದಿನಿಂದ ಬಲ್ಲೆ. ೧೯೮೦ರ ದಶಕದ ಆರಂಭದಲ್ಲಿ ನಾನು ಭದ್ರಾವತಿ ಆಕಾಶವಾಣಿ ಕೇಂದ್ರಕ್ಕೆ ಕಾರ್ಯಕ್ರಮ ನಿರ್ವಹಣಾಧಿಕಾರಿಯಾಗಿ ಬಂದಾಗ ವೇಣುಗೋಪಾಲರಾಯರು ಶಿವಮೊಗ್ಗಾದ ಕಮಲಾ ನೆಹರೂ ಮಹಿಳಾ ಪದವಿ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿದ್ದರು. ೧೯೮೦ರ ದಶಕದಲ್ಲಿ ಆಕಾಶವಾಣಿ ಎಂದರೆ ಏಕೈಕ ವಿದ್ಯುನ್ಮಾನ ಮಾಧ್ಯಮ. ದೂರದರ್ಶನ ಅಥವಾ ಖಾಸಗಿ ಟಿವಿ ವಾಹಿನಿಗಳ ಹೆಸರೂ ಕೂಡಾ ಇರಲಿಲ್ಲ. ಜೊತೆಗೆ ಇದ್ದ ಪತ್ರಿಕೆಗಳ ಸಂಖ್ಯೆ ಮತ್ತು ವೈವಿಧ್ಯವೂ ಕಡಿಮೆ. ಹಾಗಾಗಿ ಎಲ್ಲ ವರ್ಗಗಳ ಜನ ಮಾಹಿತಿ, ಮತ್ತು ಮನರಂಜನೆಗಾಗಿ ಆಕಾಶವಾಣಿಯನ್ನೇ ಬಹುತೇಕ ಅವಲಂಬಿಸಿದ್ದರು. ಆದರೆ ಆಗ ಆಕಾಶವಾಣಿ ಭದ್ರಾವತಿ ಕೇಂದ್ರ ಶೇಕಡಾ ನೂರಕ್ಕೆ ನೂರು ಮರುಪ್ರಸಾರ ಕೇಂದ್ರವಾಗಿತ್ತು. ಅಲ್ಲಿಂದ ಮೂಲ ಪ್ರಸಾರವಾಗುತ್ತಿದ್ದುದು ಚಲನಚಿತ್ರ ಗೀತೆಗಳು ಮಾತ್ರ, ನಾನು ಬಂದ ಮೇಲೆ ಕೊಂಚ ಉತ್ಸಾಹದಿಂದ, ಸ್ಥಳೀಯ ಸಿಬ್ಬಂದಿಯ ಸಹಕಾರದಿಂದ, ಕೇಂದ್ರದ ಹಣಕಾಸಿನ ಮಿತಿಯಲ್ಲೇ ಸಾರ್ವಜನಿಕರು ಈ ಆಕಾಶವಾಣಿ ಕೇಂದ್ರದಲ್ಲಿ ಕಾರ್ಯಕ್ರಮ ನೀಡುವ ಮೂಲಕ ಭಾಗವಹಿಸುವಂತಹ ಕೆಲವು ಕಾರ್ಯಕ್ರಮಗಳನ್ನು ಆರಂಭಿಸಿದೆ. ಆಗ ಪರಚಿತರಾದವರು ಡಾ. ಎ.ಎಸ್.ವೇಣು ಗೋಪಾಲರಾಯರು.

ಹಾಗೆ ನೋಡಿದರೆ ನಾನು ವೇಣುಗೋಪಾಲರಾಯರ ಹೆಸರನ್ನು ನನ್ನ ವಿದ್ಯಾರ್ಥಿ ದೆಸೆಯಲ್ಲೇ, ಅಂದರೆ ಅಂದಿಗೆ ಒಂದು ದಶಕದ ಹಿಂದೆಯೇ ಕೇಳಿದ್ದೆ. ಅವರಿಗೆ ಆಗ

'ಸುಧಾ' ಕಾದಂಬರಿ ಸ್ಪರ್ಧೆಯಲ್ಲಿ ಅವರ 'ಆಲದ ಮರ' ಕಾದಂಬರಿಗೆ ಬಹುಮಾನ ಬಂದಿತ್ತು. ವಿದ್ಯಾರ್ಥಿಯಾಗಿದ್ದಾಗಲೇ ಅದನ್ನು ಓದಿ ಮೆಚ್ಚಿದ್ದೆ. ಜೊತೆಗೆ ಅವರು ಕನ್ನಡಕ್ಕೆ ಅನುವಾದಿಸಿದ್ದ ಬಂಗಾಳಿ ಕಾದಂಬರಿ 'ಮಹಾನಗರ'ವನ್ನೂ(ಇದು ಸತ್ಯಜಿತ್‌ರಾಯ್ ಅವರಿಂದ ಚಲನಚಿತ್ರವೂ ಆಗಿದೆ) ಆ ಹೊತ್ತಿಗೆ ಓದಿ ಆನಂದಿಸಿದ್ದೆ. ಹೀಗೆ ನನಗೆ ಸ್ವಲ್ಪ ಸಾಹಿತ್ಯಾಭಿರುಚಿಯೂ ಇದ್ದುದರಿಂದ ವೇಣುಗೋಪಾಲರಾಯರು ಆಕಾಶವಾಣಿ ಸಂಬಂಧದಾಚೆಗೂ ನನಗೆ ಪ್ರಿಯರಾಗಿದ್ದವರಾಗಿದ್ದರು. ಅವರು ನಾನು ಆಕಾಶವಾಣಿಯಲ್ಲಿದ್ದಾಗ 'ರಶ್ಮಿ' ಎಂಬ ಬೆಳಗಿನ ಬಹು ಜನಪ್ರಿಯ ಕಿರು ಭಾಷಣಗಳ ಕಾರ್ಯಕ್ರಮ ಮತ್ತು 'ಚಂದನ' ಎಂಬ ಸಾಹಿತ್ಯ ಕಾರ್ಯಕ್ರಮದಲ್ಲಿನ ಸಾಹಿತ್ಯ ಕೃತಿಗಳ ಪರಿಚಯ/ವಿಮರ್ಶೆ/ಚರ್ಚೆಗಳ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ವೇಣುಗೋಪಾಲರಾಯರದ್ದು ಬಹುಶ್ರುತ ಪಾಂಡಿತ್ಯ. ಕನ್ನಡ ಮತ್ತು ಸಂಸ್ಕೃತ ಸಾಹಿತ್ಯಗಳೆರಡರಲ್ಲೂ ಅಭಿರುಚಿ ಹೊಂದಿದವರು. ಹಾಗಾಗಿ ಅವರ ಬರಹಗಳು ಶುಚಿ-ರುಚಿಗಳೆರಡರಿಂದಲೂ ಸಮೃದ್ಧವಾಗಿರುತ್ತಿದ್ದವು. ಅವರು ತಮ್ಮ ಸಹೋದ್ಯೋಗಿ ಪ್ರೊ.ಪಂಚಾಕ್ಷರಿಯವರಂತೆಯೇ ಕುವೆಂಪು ಪ್ರೇಮಿ. ಆದರೆ ಕುವೆಂಪು ಅವರಾಚೆಗೂ ಅವರ ಸಾಹಿತ್ಯ ಪ್ರೀತಿ ಬಹು ಹರಡಿತ್ತು. ಪುತಿನ ಬಗ್ಗೆ ಅವರಿಗೆ ವಿಶೇಷ ಒಲವು ಎಂದು ನೆನಪು. ಅವರು ತಮಗೆ ಕೊಟ್ಟ ಅಥವಾ ತಾವೇ ಆರಿಸಿಕೊಂಡ ವಿಷಯದ ಬಗ್ಗೆ ಸಂಪೂರ್ಣ ಸಿದ್ಧತೆಯೊಂದಿಗೆ ಧ್ವನಿಮುದ್ರಣಕ್ಕೆ ಬರುತ್ತಿದ್ದರು. ಪ್ರಸಾರಕ್ಕೆ ಸಂಬಂಧಿಸಿದಂತೆ, ಅವರ ಹಸ್ತಪ್ರತಿಯ ಬಗ್ಗೆ ಯಾವುದೇ ತಕರಾರು, ತಿದ್ದುಪಡಿಗೆ ಪ್ರಯತ್ನಿಸಿದ ನೆನಪು ನನಗಿಲ್ಲ. ಅವರು ತಮ್ಮ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸುವ ರೀತಿಯಲ್ಲೂ ಅದೇ ಅಚ್ಚುಕಟ್ಟು. ಕೇಳುಗರಿಗೆ ಒಮ್ಮೆ ಕೇಳಿದ ಕೂಡಲೇ ವಿಷಯ ಮನಹೊಗುವ ರೀತಿಯಲ್ಲಿ-ಸ್ಪಷ್ಟ ಉಚ್ಚಾರ, ಅಗತ್ಯವಿದ್ದೆಡೆ ಒತ್ತು, ಮಾತಿನ ಉಚಿತ ಓಘ-ಭಾಷಣದ ಪ್ರಸ್ತುತಿ. ಅವರು ನಮ್ಮ ಜನಪ್ರಿಯ(ಇದರ ಒಳ್ಳೆಯ ಅರ್ಥದಲ್ಲಿ) ರೇಡಿಯೋ ಮಾತುಗಾರರಲ್ಲಿ ಒಬ್ಬರಾಗಿದ್ದರು.

ಆದರೆ ವೇಣುಗೋಪಾಲರಾಯರ ವ್ಯಕ್ತಿತ್ವದಲ್ಲಿ ಒಂದು ಮಿತಿಯನ್ನು ನಾನು ಗಮನಿಸಿದ್ದೆ. ಅದನ್ನು ಮಿತಿ ಎಂದು ಕರೆಯುವುದು ಎಷ್ಟು ಉಚಿತವೋ ತಿಳಿಯದು. ಅದು ಅವರ ಗುಣವಿಶೇಷವಿರಬಹುದು. ಅವರು ಸ್ವಲ್ಪ ಸಂಪ್ರದಾಯಸ್ಥರು. ಸಾಹಿತ್ಯದ ವಿಷಯದಲ್ಲಿಯೂ. ಅವರಿಗೆ ನವೋದಯ ಸಾಹಿತ್ಯದ ಬಗ್ಗೆ ವಿಶೇಷ ಪ್ರೀತಿ. ಆಗ ನವ್ಯದ ಭರಾಟೆ. ಜೊತೆಗೆ ವಿಚಾರವಾದದ ಗಲಾಟೆ. ಇದನ್ನು ಅವರು ಇಷ್ಟಪಡುತ್ತಿರಲಿಲ್ಲ. ಆದರೆ ಎಂದೂ ಇವುಗಳ ಬಗ್ಗೆ ಅವರು ದುರಾಗ್ರಹದಿಂದ ಮಾತನಾಡಿದ ನೆನಪಿಲ್ಲ. ಹಾಗಾಗಿಯೇ, ಒಮ್ಮೆ ಶಿವಮೊಗ್ಗದಲ್ಲಿ ಆಯೋಜಿತವಾಗಿದ್ದ ವಿಚಾರವಾದಿ ಸಭೆಯೊಂದರಲ್ಲಿ ನನ್ನ ವಿಚಾರವಾದಿ ಗೆಳೆಯರೊಬ್ಬರ ಮೇಲೆ ನಡೆದ ದೈಹಿಕ ಹಲ್ಲೆಯ ಹಿಂದೆ ವೇಣುಗೋಪಾಲರಾಯರ ಕೈವಾಡ ಇದೆಯೆಂದು ನನಗೆ ನನ್ನ ಆಪ್ತರೇ ಹೇಳಿದರೂ

ನಾನು ನಂಬಲಿಲ್ಲ. ಇಂದೂ ನಂಬಿಲ್ಲ. ಏಕೆಂದರೆ ವೇಣುಗೋಪಾಲರಾಯರು ಅಪ್ಪಟ ನಿಷ್ಠಾವಂತ ಸಂಪ್ರದಾಯಸ್ಥರಾಗಿದ್ದರು ಎಂಬುದು ನನ್ನ ನಂಬಿಕೆ. ಸಂಪ್ರದಾಯಸ್ಥಿಕೆಯಲ್ಲಿ ಸುಸಂಸ್ಕೃತತನವೂ ಸೇರಿರುತ್ತದೆಯಲ್ಲವೇ?

ಅವರ ಈ ಸಂಪ್ರದಾಯಸ್ಥಿಕೆಯ ಇನ್ನೊಂದು ಮುಖ ನನಗೆ ವ್ಯಕ್ತವಾಗಿದ್ದು ಹೀಗೆ. ಒಮ್ಮೆ, ಬಿ.ಆರ್. ಪ್ರಾಜೆಕ್ಟ್‌ನಲ್ಲಿ ಆಗ ಇದ್ದ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಸ್ನಾತಕೋತ್ತರ ಕೇಂದ್ರದಲ್ಲಿನ ವಿಚಾರ ಸಂಕಿರಣವೊಂದಕ್ಕೆ ನಾನು ರಾಯರು ಒಂದೇ ವಾಹನದಲ್ಲಿ ಹೋಗಬೇಕಾಯಿತು. ರಾಯರು ಆಗ ಮುಖಕ್ಕೆ ಸ್ವಲ್ಪ ಹೆಚ್ಚೇ ಎನಿಸುವ ಪೌಡರು ಹಚ್ಚಿಕೊಂಡು, ಗರಿ ಗರಿ ಹಸಿರು ಶಾಲು ಹೊದ್ದು ಹಳೆ ಅರಮನೆ ಪಂಡಿತರಂತೆ ಆಗಮಿಸಿದ್ದನ್ನು ಕಂಡು ನನಗೆ ಸ್ವಲ್ಪ ತಮಾಷೆಯೆನಿಸಿತ್ತು. ಆದರೆ ಈ ತಮಾಷೆಯನ್ನು ಅವರೊಂದಿಗೆ ಹಂಚಿಕೊಳ್ಳಲು ಅಡ್ಡಿಯಾದಂತೆ ಆ ವಾಹನಕ್ಕೆ ದೇಜಗೌ ಮತ್ತು ಸುಜನಾ ಕೂಡ ಹತ್ತಿದರು. ರಾಯರು ಭಯಭಕ್ತಿಯಿಂದ ದೇಜಗೌಗೆ ನಮಸ್ಕರಿಸಿ ನನ್ನತ್ತ ನೋಡಿದರು. ನಾನು ನನಗೆ ಆತ್ಮೀಯರಾಗಿದ್ದ ಸುಜನಾರೊಂದಿಗೆ ಮಾತನಾಡುತ್ತಾ ಕುಳಿತುಬಿಟ್ಟೆ. ವಾಹನದಿಂದ ಇಳಿದ ಮೇಲೆ ರಾಯರಿಗೆ ನನ್ನ ಮೇಲೆ ಎಲ್ಲಿಲ್ಲದ ಕೋಪ ಬಂದಿತ್ತೆಂದು ಗೊತ್ತಾಯಿತು. ದೇಜಗೌರಂತಹ ಹಿರಿಯರು ಸನಿಹದಲ್ಲೇ ಕೂತಿದ್ದರೂ ಲೆಕ್ಕಿಸದೆ, ಸೌಜನ್ಯಕ್ಕೂ ಒಂದು ನಮಸ್ಕಾರ ಹೇಳದೆ ಕುಳಿತ ನನ್ನದು ಉದ್ಧಟತನವೆಂದು ಅವರ ನನ್ನ ಗೆಳೆಯರೊಬ್ಬರ ಬಳಿ ಹೇಳಿದ್ದುಂಟು. ಅದು ಅವರ ವ್ಯಕ್ತಿತ್ವದ ಶೈಲಿ. ನನ್ನದು ನನ್ನ ಶೈಲಿ!

ಆದರೆ ಅವರ ಈ ಅಸಮಾಧಾನ ತಾತ್ಕಾಲಿಕವಾಗಿತ್ತು. ನಾನು ೧೯೮೪ರಲ್ಲಿ ಸವಿತಾಳನ್ನು ಮದುವೆಯಾದಾಗ, ಮದುವೆಗೆ ಬರಲು ಸಾಧ್ಯವಾಗದ ವೇಣುಗೋಪಾಲರಾಯರು ನವ ದಂಪತಿಗಳನ್ನು ತಮ್ಮ ಕಾಲೇಜಿನ ಕನ್ನಡ ಸಂಘಕ್ಕೆ ಆಹ್ವಾನಿಸಿ ಸತ್ಕರಿಸಿದರು. ನನ್ನಿಂದ ಸಾಹಿತ್ಯ ಕುರಿತು ಮಾತನಾಡಿಸಿದರು. ಸವಿತಾಳಿಂದ ಪದ್ಯ ಓದಿಸಿದರು. ವಿದ್ಯಾರ್ಥಿನಿಯರೊಂದಿಗೆ ತಾವೂ ಸೇರಿ ನಮ್ಮನ್ನು ಅಭಿನಂದಿಸುತ್ತಾ ಸವಿತಾ ಹೆಸರನ್ನು 'ಸವಿ–ತಾ' ಎಂದು ಒಡೆದು ವಿನೋದ ಮಾಡಿದ್ದು ನನಗಿನ್ನೂ ನೆನಪಿದೆ.

೧೯೮೫ರಲ್ಲಿ ನನಗೆ ಭದ್ರಾವತಿಯಿಂದ ವರ್ಗವಾಗಿ ಹೋದನಂತರ ವೇಣುಗೋಪಾಲ ರಾಯರೊಡನೆ ನಮ್ಮ ಸಂಪರ್ಕ ಕಳೆದುಹೋಯಿತೆಂದೇ ಹೇಳಬೇಕು. ಮತ್ತೆ ಅವರೊಡನೆ ನಮ್ಮ ಸಂಪರ್ಕವೇರ್ಪಟ್ಟದ್ದು ೧೯೯೫ರಲ್ಲಿ. ನಾವು ಮಡಿಕೇರಿಯಲ್ಲಿದ್ದಾಗ. ಅಂದರೆ ಸುಮಾರು ಹತ್ತು ವರ್ಷಗಳ ನಂತರ. ನಾನು ಆ ಹೊತ್ತಿಗೆ ರಮಣ ಮಹರ್ಷಿಗಳ ಚಿಂತನೆಯಿಂದ ಪ್ರಭಾವಿತನಾಗಿದ್ದು ರಮಣಾಶ್ರಮಕ್ಕೆ ಹೋಗಿ ಬರುವ ಆಸೆಯಲ್ಲಿದ್ದೆನು. ಅದೇನು ಯೋಗಾಯೋಗವೋ ಅದೇ ಹೊತ್ತಿನಲ್ಲಿ 'ತರಂಗ' ಪತ್ರಿಕೆಯಲ್ಲಿ ರಮಣರನ್ನು ಕುರಿತಂತೆ ವೇಣುಗೋಪಾಲರಾಯರ ಲೇಖನವೊಂದು ಅವರ ವಿಳಾಸದೊಂದಿಗೆ ಪ್ರಕಟವಾಗಿತ್ತು. ಆಗ ಅವರು ರಮಣಾಶ್ರಮವಿರುವ ತಿರುವಣ್ಣಾಮಲೈಯಲ್ಲಿ ನೆಲೆಸಿದ್ದರು.

ನಾನು ಕೂಡಲೇ ಅವರಿಗೆ ನನ್ನ ನೆನಪು ತಿಳಿಸಿ ಪತ್ರ ಬರೆದು, ರಮಣಾಶ್ರಮಕ್ಕೆ ಬರುವ ಬಗೆ ಹೇಗೆ ಎಂದು ಕೇಳಿದೆ. ಅವರು ಎಲ್ಲ ವಿವರ ತಿಳಿಸಿ ಉತ್ತರ ಬರೆದರು. ನನಗಾದ ಸಂತೋಷ ಅಷ್ಟಿಷ್ಟಲ್ಲ.

ನಂತರ ಒಂದು ತಿಂಗಳಲ್ಲೇ ನಾನು ಮತ್ತು ಸವಿತಾ ತಿರುವಣ್ಣಾಮಲೈಗೆ ಹೋದೆವು. ರಮಣಾಶ್ರಮ ಒದಗಿಸಿದ ಕೊಠಡಿಯಲ್ಲಿ ಐದು ದಿವಸ ತಂಗಿದ್ದೆವು. ಅದು ನಮ್ಮ ಬದುಕಿನ ಒಂದು ಮಹತ್ತರ ಮತ್ತು ನಿರ್ಣಾಯಕ ಘಟ್ಟವೆಂದೇ ಹೇಳಬೇಕು. ಏಕೆಂದರೆ ರಮಣರು ಆ ಹೊತ್ತಿಗೆ ನನ್ನನ್ನು ಸಂಪೂರ್ಣ ಆವರಿಸಿದ್ದರು. ನನ್ನ ಬದುಕಿನಲ್ಲಿ ಆವರೆಗೆ ನನಗೆ ಎದುರಾದ ಬಹುತೇಕ ಎಲ್ಲ ಪ್ರಶ್ನೆಗಳಿಗೆ ರಮಣರಲ್ಲಿ ನಾನು ಉತ್ತರ ಕಂಡುಕೊಂಡಿದ್ದೆ. ಅವರ ವಿಧಿ-ನಿಷೇಧಗಳಿಲ್ಲದ ಸರಳ ಜ್ಞಾನಮಾರ್ಗ ನನಗೆ ಪ್ರಿಯವಾಗಿತ್ತು ಮತ್ತು ನನ್ನ ಬದುಕಿಗೆ ಒಂದು ಹೊಸ ಲಯ ಮತ್ತು ಹದ ಒದಗಿಸಿತ್ತು. ತಿರುವಣ್ಣಾಮಲೈನಲ್ಲಿದ್ದ ವೇಣುಗೋಪಾಲರಾಯರಿಂದಾಗಿ ರಮಣಾಶ್ರಮ ನನಗೆ ಅಪರಿಚಿತವೆನಿಸಲಿಲ್ಲ. ಆಶ್ರಮವೂ ಹಾಗೇ ಇತ್ತು. ಸರಳ-ಸುಂದರ-ಅನೌಪಚಾರಿಕ. ರಾಯರು ನಮ್ಮನ್ನು ಒಂದು ಮುಂಜಾನೆ ಗಿರಿಪ್ರದಕ್ಷಿಣೆಗೆ ಕರೆದೊಯ್ದರು. ಅದು ಅರುಣಾಚಲ ಬೆಟ್ಟವನ್ನು ಒಂದು ಸುತ್ತು ಪ್ರದಕ್ಷಿಣೆ ಹಾಕುವ ಅತಿ ಆನಂದದ ಕೆಲಸ. ಸುಮಾರು ಹದಿನಾಲ್ಕು ಕಿ.ಮೀ. ಪರಿಕ್ರಮ. ಆಗ, ಅಂದರೆ ೨೦ ವರ್ಷಗಳ ಹಿಂದೆ ಆ ಪರಿಕ್ರಮ ಬೆಟ್ಟದ ಸುತ್ತಲಿನ ಗಿಡ-ಮರ ಮತ್ತು ಗ್ರಾಮೀಣ ಪರಿಸರದಿಂದಾಗಿ ಒಂದು ಮನೋಹರ ಅನುಭವವಾಗಿತ್ತು. ವೇಣುಗೋಪಾಲರಾಯರು ಗಿರಿಪ್ರದಕ್ಷಿಣೆಯ ಸಂದರ್ಭದಲ್ಲಿ ಎದುರಾದ ಎಲ್ಲ ಪವಿತ್ರ ಐತಿಹಾಸಿಕ ಸ್ಥಳ-ಕುರುಹುಗಳನ್ನೂ ನಮಗೆ ವಿವರಿಸಿ ಹೇಳಿದರು. ಅದನ್ನೊಂದು ಸ್ಮರಣಾರ್ಹ ಅನುಭವವನ್ನಾಗಿ ಪರಿವರ್ತಿಸಿದರು. ಆ ಸಂದರ್ಭದಲ್ಲಿ ನನ್ನ ಶ್ರದ್ಧೆಯನ್ನು ಗಮನಿಸಿ ಅವರು, 'ನಿಮ್ಮನ್ನು ಏನೆಂದೋ ತಿಳಿದಿದ್ದೆ. ನೀವು ಗುಪ್ತಭಕ್ತರ ಗುಂಪಿಗೆ ಸೇರಿದವರು!' ಎಂದದ್ದು ಈಗಲೂ ನೆನಪಿದೆ.

ಅದೇ ದಿನ ನಾವು ಅವರ ಮನೆಯ ಅತಿಥಿಗಳಾದೆವು. ಅವರ ಪತ್ನಿ ಮತ್ತು ಮಗಳ ಪರಿಚಯವಾಯ್ತು. ಅಂದು ಶಿವರಾತ್ರಿ, ಹಬ್ಬದ ವಿಶೇಷ ಊಟ. ಅವರ ಪತ್ನಿ ನಮ್ಮನ್ನು ತಮ್ಮ ಬಂಧುಗಳಂತೆಯೇ ಸತ್ಕರಿಸಿ ನನ್ನ ಪತ್ನಿಗೆ ಕುಬುಸದ ಉಡುಗೊರೆ ನೀಡಿ ಪ್ರೀತಿ ತೋರಿದರು. ಸಂಜೆಗೆ ಎರಡೂ ಕುಟುಂಬದವರೂ ಅರುಣಾಚಲ ದೇವಸ್ಥಾನಕ್ಕೆ ಹೋಗಿ ಆ ವಿಶಾಲ ದೇವಸ್ಥಾನದಲ್ಲಿ ವಿಹರಿಸಿದೆವು. ಅರುಣಾಚಲನ ದರ್ಶನ ಮಾಡಿದೆವು. ರಮಣರು ಬಾಲಕರಾಗಿ ಈ ದೇವಸ್ಥಾನದ ಪ್ರಾಂಗಣಕ್ಕೆ ಬಂದು ಓಡಾಡಿದ ಹಲವು ಸ್ಥಳಗಳನ್ನು ಮತ್ತು ಅವರು ಧ್ಯಾನಕ್ಕೆ ಕೂತ ಪಾತಾಳಲಿಂಗಂ ಗುಹೆಯನ್ನು ಅವರು ನಮಗೆ ತೋರಿಸಿದರು. ನಮ್ಮ ತಿರುವಣ್ಣಾಮಲೈ ಭೇಟಿ ಆನಂದದಾಯಕವಾಗಿದ್ದರಲ್ಲಿ ವೇಣುಗೋಪಾಲರಾಯ ದಂಪತಿಗಳ ಪಾಲು ದೊಡ್ಡದು ಎಂದು ನಾನು ಭಾವಿಸಿದ್ದೇನೆ.

ಆನಂತರವೂ ನಾವು ತಿರುವಣ್ಣಾಮಲೈಗೆ ಅನೇಕ ಬಾರಿ ಹೋಗಿದ್ದೇವೆ. ಈಗಲೂ ಪ್ರತಿ ವರ್ಷ ಹೋಗಿಬರುತ್ತೇವೆ. ಆದರೆ ನಂತರದ ಭೇಟಿಯ ಹೊತ್ತಿಗೆ ರಾಯರು ಏಕೋ ತಿರುವಣ್ಣಾಮಲೈ ಊರನ್ನು ಬಿಟ್ಟಿದ್ದರು. ಆದರೆ ಅವರ ಮತ್ತು ರಮಣರ ಸಂಬಂಧ ಅಮರವಾದದ್ದು. ಅವರು ರಮಣ ಮಹರ್ಷಿಗಳ ಸಮಗ್ರ ಬೋಧನೆಯನ್ನೊಳಗೊಂಡ 'Talks with Sri Ramana Maharshi' ಎಂಬ ಬೃಹತ್ ಗ್ರಂಥವನ್ನು 'ರಮಣರೊಡನೆ ಮಾತುಕತೆ' ಎಂಬ ಶೀರ್ಷಿಕೆಯಡಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಅದನ್ನು ಶ್ರೀರಮಣಾಶ್ರಮವೇ ಪ್ರಕಟಿಸಿದ್ದು ಹಲವಾರು ಮುದ್ರಣಗಳನ್ನು ಕಂಡು ಕನ್ನಡ ಜನತೆ ರಮಣರ ಚಿಂತನೆಯನ್ನು ತಿಳಿಯಲು ಬಹು ನೆರವಾಗಿದೆ. ಈ ಪುಸ್ತಕದ ಅನುವಾದಕ್ಕಾಗಿ ರಾಯರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನವೂ ಸಂದಿದೆ. ಇಷ್ಟೇ ಅಲ್ಲದೆ, ಪಾಲ್ ಬ್ರಂಟನ್‌ರ 'A search in secret India' ದಲ್ಲಿನ ಆತ ರಮಣರನ್ನು ಕಂಡ ಸಂದರ್ಭ ಕುರಿತ ಅಧ್ಯಾಯವನ್ನು ಅನುವಾದ ಮಾಡಿದ್ದಾರೆ. ಈ ಅನುವಾದವನ್ನು ಓದುವುದೇ ಒಂದು ಸುಖಾನುಭವ. ಆದರೆ ಅವರು ರಮಣ ಸುಪ್ರಭಾತವೊಂದನ್ನು ಬರೆದು ಪ್ರಕಟಿಸಿದಾಗ ನಾನು ಅದನ್ನು ಇಷ್ಟಪಡಲಿಲ್ಲ. ಅದು ರಮಣ ಮಾರ್ಗಕ್ಕೆ ಸರಿಹೊಂದುವುದಿಲ್ಲ ಎಂಬುದು ನನ್ನ ಅಭಿಪ್ರಾಯವಾಗಿತ್ತು. ವೇಣುಗೋಪಾಲರಾಯರು ರಮಣ ಭಕ್ತಿಯಲ್ಲಿ ಮುಳುಗಿಹೋಗಿದ್ದವರಾಗಿದ್ದರು.

ನಾನು ೨೦೦೫ರಲ್ಲಿ ಆಕಾಶವಾಣಿ ಸೇವೆಯಿಂದ ಸ್ವಯಂನಿವೃತ್ತಿ ಪಡೆದು ಶಿವಮೊಗ್ಗದಲ್ಲಿ ನೆಲೆಸಲೆಂದು ಬಂದಾಗ ವೇಣುಗೋಪಾಲರಾಯರು ಹಾಸನದಲ್ಲೋ, ಭದ್ರಾವತಿಯಲ್ಲೋ ಇದ್ದರು. ಆ ಸಮಯದಲ್ಲಿ ಅವರಿಗೆ ಪತ್ನಿ ವಿಯೋಗವಾಗಿತ್ತು. ಕೇಳಿ ವಿಷಾದವೆನಿಸಿತು. ಆದರೆ ಇತ್ತೀಚಿನ ದಿನಗಳಲ್ಲಿ ಅವರು ಶಿವಮೊಗ್ಗಕ್ಕೇ ಬಂದು ನೆಲೆಸಿದ್ದಾರೆ. ಆಗಾಗ ಕರ್ನಾಟಕ ಸಂಘದ ಸಭೆಗಳಲ್ಲಿ ತಮ್ಮ ಮಗಳೊಂದಿಗೆ ಸಿಗುತ್ತಿರುತ್ತಾರೆ. ಈ ಮಧ್ಯೆ ಅವರು ಜೀವನದಲ್ಲಿ ಅನೇಕ ಕೌಟುಂಬಿಕ ಕಷ್ಟಗಳನ್ನು ಎದುರಿಸಬೇಕಾಗಿ ಬಂತೆಂದು ಕೇಳಿದ್ದೇನೆ. ಆದರೆ ಅವುಗಳಿಂದ ಅವರು ಆಘಾತಗೊಂಡಂತೆ ತೋರುವುದಿಲ್ಲ. ಅವೆಲ್ಲವನ್ನೂ ಧೈರ್ಯದಿಂದ ಎದುರಿಸಿದ್ದಾರೆ ಎಂಬುದನ್ನು ಈ ಇಳಿವಯಸ್ಸಿನಲ್ಲಿಯೂ ಅವರ ಅವರ ಮೊಗದಲ್ಲಿ ಕಾಣುವ ಸ್ಥಿತಪ್ರಜ್ಞತೆ-ಪ್ರಶಾಂತಿ ಸೂಚಿಸುತ್ತದೆ. ಬಹುಶಃ ರಮಣರಲ್ಲಿನ ಅವರ ಅಚಲ ನಂಬಿಕೆ ಅವರನ್ನು ಕಾಪಾಡಿರುವಂತೆ ತೋರುತ್ತದೆ. ಇತ್ತೀಚೆಗೆ ನಾನು ರಮಣ ಮಹರ್ಷಿಗಳನ್ನು ಕುರಿತು ಬರೆದ ಒಂದು ಪುಟ್ಟ ಪುಸ್ತಕವನ್ನು ಅವರಿಗೆ ಕಳಿಸಿದಾಗ ಅವರು ತುಂಬಾ ಸಂತೋಷಪಟ್ಟರು. ಅಲ್ಲದೆ, ಬೇಡವೆಂದರೂ ಹಣ ಕೊಟ್ಟು ನಾಲ್ಕು ಪುಸ್ತಕ ಖರೀದಿಸಿ ತಮಗೆ ಬೇಕಾದವರಿಗೆ ಕಳಿಸಿಕೊಟ್ಟರು. ಈ ಹಿರಿತನದ ಘನತೆ ಅವರದ್ದು.

ಲೋಕದ ಚೇಷ್ಟೆಗೆ ಸಿಕ್ಕು ಎಲ್ಲಿಗೋ ಎಸೆಯಲ್ಪಟ್ಟ ಕಲ್ಲು ತನ್ನ ಪಯಣ ಮುಗಿಸಿ ಭೂಮಿಗೆ ಬಂದು ಸೇರಿ ವಿಶ್ರಮಿಸುವಂತೆ, ಎ.ಎಸ್.ವೇಣುಗೋಪಾಲರಾಯರು ಶಿವಮೊಗ್ಗ

ಬಿಟ್ಟು ಎಲ್ಲೆಲ್ಲೋ ಹೋಗಿ ವಾಪಸ್ಸು ಶಿವಮೊಗ್ಗಕ್ಕೆ ಬಂದು ನೆಲೆಸಿದ್ದಾರೆ. ಅವರು ಶಿವಮೊಗ್ಗದ ಸಾಂಸ್ಕೃತಿಕ ಲೋಕದ ಒಬ್ಬ ಹಿರಿಯ ವಕ್ತಾರ ಎಂದೇ ಹೇಳಬಹುದು. ಅವರಿಂದ ಪಾಠ ಕಲಿತ ಅನೇಕ ಶಿಷ್ಯರು ಇಲ್ಲಿದ್ದಾರೆ. ಇಂತಹ ಶಿಷ್ಯರೊಬ್ಬರು ರಾಯರು ರಚಿಸಿರುವ 'ಮಹಾಕಾವ್ಯ'ವೊಂದರ ಗಮಕವಾಚನ ಏರ್ಪಡಿಸಿದ್ದನ್ನು ನಾನು ಕೇಳಿ ಆನಂದಿಸಿದ್ದೇನೆ. ಇಂತಹ ಅಪಾರ ಶಿಷ್ಯರ–ಸ್ನೇಹಿತರ ನಡುವೆ ವೇಣುಗೋಪಾಲರಾಯರು ಇನ್ನಷ್ಟು ಕಾಲ ಆಯುರಾರೋಗ್ಯ ಭಾಗ್ಯಗಳಿಂದ ನಮ್ಮೊಡನೆ ಇರಲಿ ಎಂದು ಹಾರೈಸುತ್ತೇನೆ.

(ವೇಣುಗೋಪಾಲರಾಯರ ಅಭಿನಂದನ ಗ್ರಂಥಕ್ಕಾಗಿ ಬರೆದ ಲೇಖನ–೨೦೧೪. ಶ್ರೀಯುತರು ೩೦.೧೨.೨೦೧೬ರಂದು ಶಿವಮೊಗ್ಗದಲ್ಲಿ ನಿಧನರಾದರು.)

ಕೆ. ರಾಮದಾಸ್ ನೆನಪು*

ಒಂದು ವರ್ಷದ ಹಿಂದೆ ಸಂಪೂರ್ಣ ಕೈತೊಳೆದುಕೊಂಡಿದ್ದ ಜವಾಬ್ದಾರಿ ಮತ್ತೆ ನನ್ನ ಕೊರಳಿಗೆ ಸುತ್ತಿಕೊಂಡಿದೆ! ಈ ಸಂಪುಟದ ಕೆಲಸವನ್ನು ಎಚ್.ಎಲ್.ಕೇಶವಮೂರ್ತಿ ಅವರೊಡಗೂಡಿ ಪೂರ್ಣ ಮುಗಿಸಿ, ಮುದ್ರಣಕ್ಕೆ ಕೊಡಲಾಗಿತ್ತು. ಅಷ್ಟೇ ಅಲ್ಲ, ಸಂಪುಟದ ಬಿಡುಗಡೆಯ ಸಮಾರಂಭದ ದಿನಾಂಕ ಮತ್ತು ಇತರ ವಿವರಗಳನ್ನು ಎಚ್. ಎಲ್. ಕೆ ಸಿದ್ಧಪಡಿಸಿ ನನಗೆ ತೋರಿಸಿದ್ದರು. ಆದರೆ ಕೊನೇ ನಿಮಿಷದಲ್ಲಿ ರಾಮದಾಸ್ ಅವರ ಮೈಸೂರಿನ ಅಭಿಮಾನಿಗಳಲ್ಲಿ ಕೆಲವರು, ಮುಖ್ಯರಾದವರ ಲೇಖನಗಳೇ ಸಂಪುಟದಲ್ಲಿ ಇಲ್ಲವೆಂದೋ, ಮತ್ತೊಂದೋ ಕಾರಣ ನೀಡಿ ಅದರ ಪ್ರಕಟಣೆಯನ್ನು ತಡೆದಿದ್ದರು. ಹಾಗೂ ಅವರಲ್ಲಿ ಕೆಲವರು ಅಂತಹವರಿಂದ ಲೇಖನಗಳನ್ನು ತರಿಸಿಕೊಡುವ ಜವಾಬ್ದಾರಿಯನ್ನೂ ಹೊತ್ತಿದ್ದರೆಂದು ಕೇಳಿರುವೆ. ಆದರೆ ಆರು ತಿಂಗಳುಗಳ ನಂತರವೂ ಸಂಬಂಧಪಟ್ಟವರಿಂದ ಲೇಖನಗಳು ಬರದೆ ಸಂಪುಟದ ಪ್ರಕಟಣೆ ನೆನೆಗುದಿಗೆ ಬಿದ್ದಿತು. ಹೀಗಾಗಿ, ಕಳೆದ ೩೦ ವರ್ಷಗಳಿಂದ ಯಾವ ಕೆಲಸ ಮಾಡಹೊರಟರೂ ಎದುರಾಗುವ ಇಂತಹ 'ಸಮಾಜವಾದಿ' ತಕರಾರುಗಳನ್ನು ನೋಡಿ ಬೇಸತ್ತಿದ್ದ ನಾನು, ಈ ಸಂಪುಟಕ್ಕೂ ನನಗೂ ಇನ್ನು ಸಂಬಂಧವಿಲ್ಲವೆಂದು ಹೇಳಿಬಿಟ್ಟಿದ್ದೆ.

ಸಂಪಾದಕ ಮಂಡಳಿಯಲ್ಲಿದ್ದ ನಾನು ಮತ್ತು ಎಚ್.ಎಲ್. ಕೇಶವಮೂರ್ತಿಯವರು ಕೆ.ಮುದ್ದುಕೃಷ್ಣ ಅವರೊಡನೆ ಶಿವಮೊಗ್ಗದ ನಮ್ಮ ಮನೆಯಲ್ಲಿ ಕೂತು, ರಾಮದಾಸರ ಸಂಪರ್ಕವಿದ್ದ ಎಲ್ಲರ ಹೆಸರುಗಳನ್ನು ಪಟ್ಟಿಮಾಡಿ, ಬರೆಯಬಲ್ಲವರೆಲ್ಲರಿಂದ ನಮಗೆ ಸೂಕ್ತ ಕಂಡ ವಿಷಯ ನೀಡಿ ಲೇಖನಗಳನ್ನು ಆಹ್ವಾನಿಸಿದ್ದೆವು. ನಾವು ನೀಡಿದ್ದ ಕೊನೆಯ

* (ಕೆ. ರಾಮದಾಸ್‌ಅವರ ಸ್ಮರಣ ಗ್ರಂಥ 'ಉರಿದ ಪಂಜು'ಗೆ ಬರೆದ ಮುನ್ನುಡಿ)

ದಿನಾಂಕದ ನಂತರವೂ, ಎಚ್.ಎಲ್.ಕೆ ಮತ್ತು ಮುದ್ದುಕೃಷ್ಣ ಲೇಖನ ಕಳಿಸದವರಿಗೆ ನೆನಪಿನೋಲೆ ಬರೆದಿದ್ದರು. ಹಾಗೆ ಬಂದ ಲೇಖನಗಳ ಜೊತೆ ರಾಮದಾಸ್ ನಿಧನರಾದ ಸಂದರ್ಭದಲ್ಲಿ ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾದ ಬರಹಗಳನ್ನು ವಿಳಾಸ ಲಭ್ಯವಿದ್ದವರೆಲ್ಲರ ಅನುಮತಿ ಪಡೆದು ಜೋಡಿಸಿ ಸಂಪುಟವನ್ನು ರೂಪಿಸಿದ್ದೆವು. ಇದಾದ ಒಂದು ವರ್ಷದ ನಂತರವೂ ಆ 'ಮುಖ್ಯ'ರಿಂದ ಲೇಖನಗಳು ಬರದೆ, ಬೇರೆ ಮೂರು–ನಾಲ್ಕು ಲೇಖನಗಳಷ್ಟೇ ಈ ಸಂಪುಟ ಸೇರಿಕೊಂಡು ಈಗ ಮತ್ತೆ ಅಂತಿಮ ರೂಪುರೇಷೆಗಳಿಗಾಗಿ ನನ್ನ ಮುಂದೆ ಬಂದಿದೆ. ರಾಮದಾಸ್ ಅವರ ಮೇಲಿನ ಪ್ರೀತಿಯಿಂದಷ್ಟೇ ನಾನು ಈ ಕೆಲಸವನ್ನು ಮತ್ತೆ ಕೈಗೆತ್ತಿಕೊಳ್ಳಬೇಕಿದೆ.

ಏಕೆಂದರೆ ರಾಮದಾಸ್ ನನ್ನ ಮೂವತ್ತು ವರ್ಷಗಳ ಗೆಳೆಯ, ಹಿರಿಯ ಗೆಳೆಯ ಎಂದೂ ಹೇಳಬೇಕು. ಇಲ್ಲದಿದ್ದರೆ ಅವರಿರುವೆಡೆಯಲ್ಲೇ ಸಿಟ್ಟಾದಾರು! ಅವರು ತಮ್ಮ ಹಿರಿತನವನ್ನು ಸ್ಪಷ್ಟಪಡಿಸಿಕೊಂಡೇ, ಕಾಪಿಟ್ಟುಕೊಂಡೇ ಗೆಳೆತನವನ್ನು ಬೆಳೆಸಿಕೊಂಡವರು. ನಾನು ಅವರ ಹಿರಿತನವನ್ನೊಪ್ಪಿಕೊಂಡೇ ಅವರ ಗೆಳೆತನವನ್ನು ಉಳಿಸಿಕೊಂಡವನು! ಈ ಒಪ್ಪಿಗೆ ಅಪ್ರಜ್ಞಾಪೂರ್ವಕವಾಗಿ ಉಲ್ಲಂಘನೆಯಾದಾಗಲೆಲ್ಲ ಘರ್ಷಣೆಗಳಾಗಿವೆ. ಘರ್ಷಣೆಗಳ ನಂತರ ಗೆಳೆತನ ಮುಂದುವರೆದಿದೆ. ನಾನೆಲ್ಲಿದ್ದರೂ, ಮೈಸೂರಿಗೆ ಬಂದಾಗಲೆಲ್ಲ ಅವರ ಮನೆಯಲ್ಲಿ ಉಳಿಯಬೇಕೆಂಬುದು ಅವರ ಕಟ್ಟಪ್ಪಣೆ. ಹಾಗೆ ಹೋದ ಒಂದರೆ ತಾಸಿನಲ್ಲೇ ಯಾವುದೋ ಮಾತುಕತೆ ಮಧ್ಯೆ ಭಿನ್ನಾಭಿಪ್ರಾಯ ಉಂಟಾದೊಡನೆ ಅವರು 'I say get out of my house!' ಎಂದು ಆಜ್ಞಾಪಿಸಬಲ್ಲವರೂ ಆಗಿದ್ದರು!

ಇಂತಹ ರಾಮದಾಸ್ ಬಗ್ಗೆ ನೆನಪಿನ ಸಂಪುಟ ಮಾಡುವುದು ಕಷ್ಟ ಅಥವಾ ವಿಚಿತ್ರ ಜವಾಬ್ದಾರಿಯ ಕೆಲಸ. ರಾಮದಾಸ್ ನಿಧನರಾದ ಕೆಲವೇ ದಿನಗಳ ನಂತರ ಅವರ ಮನೆಯಲ್ಲಿ ಸಭೆ ಸೇರಿದ್ದ ಅವರ ಮೈಸೂರು ಅಭಿಮಾನಿ ಗೆಳೆಯರ ಬಳಗದ ಪರವಾಗಿ ಎಚ್.ಎಲ್.ಕೇಶವಮೂರ್ತಿ ಮತ್ತು ರಾಜಶೇಖರ ಕೋಟಿ ನನಗೆ ದೂರವಾಣಿ ಕರೆ ಮಾಡಿ, ಈ ಸಂಪುಟದ ಪ್ರಸ್ತಾವನೆಯನ್ನಿರಿಸಿದರು. ಅದರ ಸಂಪಾದನೆಯ ಜವಾಬ್ದಾರಿಯನ್ನು ವಹಿಸಿಕೊಳ್ಳುವಂತೆ ಕೋರಿ ಅವರು ಆಗ್ರಹಿಸಿದಾಗ, ಕಳೆದ ೩೦ ವರ್ಷಗಳಲ್ಲಿ ನಾನು ಕಂಡ ರಾಮದಾಸ್ ಚಿತ್ರಗಳು ನನ್ನ ಕಣ್ಮುಂದೆ ಹಾದು ಹೋದವು. ಈ ಕಲಸು ಮೇಲೋಗರವನ್ನು ಒಂದು ಹದಕ್ಕೆ ತಂದು, ಒಂದು ಸುಸಂಗತ ಚಿತ್ರ ಮೂಡಿಸುವುದೇ ಈ ಸಂಪುಟದ ಮೂಲಕ ನಾನು ಮಾಡಬೇಕಾದ ಕೆಲಸ ಎಂಬುದು ಅರಿವಾದಾಗ ಕೊಂಚ ಗಾಬರಿಯೇ ಆಯಿತು. ಆದರೆ ರಾಮದಾಸ್‌ರಂತಹವರ ಋಣ ನಮ್ಮಂತಹವರ ಮೇಲೆ ಇದ್ದೇ ಇದೆ. ಹಾಗೆ ನೋಡಿದರೆ ನಾವೆಲ್ಲರೂ ಪರಸ್ಪರ ಋಣದಲ್ಲೇ ಬೆಳೆದಿರುವುದು. ಅವರು ನಮ್ಮನ್ನು ಬೆಳೆಸುತ್ತಾ, ನಾವು ಅವರನ್ನು ಬೆಳೆಸುತ್ತಾ; ಅವರ ಬದುಕನ್ನು ನಾವು ರೂಪಿಸುತ್ತಾ, ನಮ್ಮ ಬದುಕನ್ನು ಅವರು ರೂಪಿಸುತ್ತಾ; ಒಟ್ಟಾರೆ ನಮ್ಮೆಲ್ಲರದೆಂಬ ಬದುಕನ್ನು ತಕ್ಕಮಟ್ಟಿಗೆ ಸಹ್ಯವೂ, ಸುಂದರವೂ, ಅರ್ಥಪೂರ್ಣವನ್ನಾಗಿಯೂ

ಮಾಡಿಕೊಳ್ಳಲು ಯತ್ನಿಸಿದ್ದೇವೆ. ಹಾಗಾಗಿ ನಾನು ಈ ಜವಾಬ್ದಾರಿಯನ್ನು ಒಪ್ಪಿಕೊಂಡೆ. ಜೊತೆಗಿರುವ ಎಚ್.ಎಲ್.ಕೆ ಈ ಜವಾಬ್ದಾರಿಯ ಭಾರವನ್ನು ಹಗುರಗೊಳಿಸಿದ್ದಾರೆ.

ರಾಮದಾಸ್ ಸ್ವಾತಂತ್ರ್ಯೋತ್ತರ ಭಾರತದ ಮೊದಲ ಕೆಲವು ದಶಕಗಳಲ್ಲಾದರೂ ನಮ್ಮ ಪ್ರಜಾಪ್ರಭುತ್ವ ನಿಜವಾದ ಅರ್ಥದಲ್ಲಿ ಕ್ರಿಯಾಶೀಲವಾಗಿದ್ದುದರ ದ್ಯೋತಕವೇ ಆಗಿದ್ದಾರೆ. ಹಾಗೇ ಆ ಕ್ರಿಯಾಶೀಲತೆ ನಂತರದ ದಶಕಗಳಲ್ಲಿ ಅವನತಿಗೊಳ್ಳುತ್ತಾ ಬಂದುದರ ದ್ಯೋತಕವೂ ಆಗಿದ್ದಾರೆ–ಇನ್ನೊಂದು ಅರ್ಥದಲ್ಲಿ. ಮೊದಲ ಘಟ್ಟದಲ್ಲಿ ರಾಮದಾಸ್ ಕನ್ನಡ ನಾಡಿನ ಒಂದು ಅಜ್ಞಾತ ಗ್ರಾಮದ ಒಂದು ಅಜ್ಞಾತ ಜಾತಿಯ ಬಡ ಕುಟುಂಬದಲ್ಲಿ ಹುಟ್ಟಿದ ಹುಡುಗನಾಗಿ ತನ್ನ ಬದುಕನ್ನು ಯಶಸ್ವಿಯಾಗಿ ಕಟ್ಟಿಕೊಳ್ಳಲು ಅನುವು ಮಾಡಿಕೊಟ್ಟ ಪ್ರಜಾಪ್ರಭುತ್ವದ ಮೌಲ್ಯಗಳ ಪ್ರತಿನಿಧಿಯಾದರೆ, ಎರಡನೇ ಘಟ್ಟದಲ್ಲಿ ಈ ಮೌಲ್ಯಗಳು ಅವನತಿಯ ಹಾದಿ ಹಿಡಿದಾಗ ಅದರ ವಿರುದ್ಧ ವೈಯಕ್ತಿಕ ತುರ್ತಿನೊಂದಿಗೆ ದನಿ ಎತ್ತಿದ ಹಲವು ಸಮೂಹಗಳು, ಆಂದೋಲನಗಳ ಪ್ರತಿನಿಧಿಯೂ ಆಗಿದ್ದಾರೆ. ಅವರು ತಮ್ಮ ಬದುಕಿನ, ಪ್ರತಿಭಟನೆಯ ತಿರುಳು ಮತ್ತು ದಿಕ್ಕುಗಳನ್ನು ಲೋಹಿಯಾ ಸಮಾಜವಾದಿ ಆಂದೋಲನದಿಂದ ಪಡೆದುಕೊಂಡರಾದರೂ, ಎಲ್ಲ ರೀತಿಯ ಅನ್ಯಾಯಗಳ ವಿರುದ್ಧ ದನಿ ಎತ್ತಲು ಅವರು ಅದನ್ನು ಒಂದು ಮಿತಿಯನ್ನಾಗಿಯೇನೂ ಪರಿಗಣಿಸಲಿಲ್ಲ. ಇಂತಹ ಉಲ್ಲಂಘನೆಗಳ ಮೂಲಕವೇ ಲೋಹಿಯಾ ವಿಚಾರಗಳಿಗೆ, ಸಮಾಜವಾದಿ ಆಂದೋಲನದ ಛಿದ್ರೀಕರಣದ ನಂತರವೂ ಅವರು ಚಲಾವಣೆಯನ್ನು ಒದಗಿಸಿಕೊಟ್ಟರು; ಅವುಗಳ ಕ್ರಿಯಾಶೀಲ ಜೀವಂತಿಕೆಯನ್ನು ಕಾಪಾಡುತ್ತಾ ಹೋದರು ಎಂದೇ ಹೇಳಬೇಕು. ರಾಮದಾಸ್ ಪೆರಿಯಾರ್ ಮೂಲದ ವಿಚಾರವಾದಿಯೂ ಆಗಿದ್ದುದರಿಂದ ಅವರ ವ್ಯಕ್ತಿತ್ವ ಯಾವಾಗಲೂ ಸಮಾಜವಾದಿ ತಾಂತ್ರಿಕ ಚೌಕಟ್ಟಿನಲ್ಲೇ ಇರುತ್ತಿತ್ತೆಂದು ಹೇಳಲೂ ಆಗುತ್ತಿರಲಿಲ್ಲ. ಇದರಿಂದಾಗಿ ಅವರು ಆಗಾಗ್ಗೆ ತಮ್ಮ ವೈಯಕ್ತಿಕ ನಿಲುವುಗಳ ಮೂಲಕ ಸಮಾಜವಾದಿ ಗೆಳೆಯರನ್ನು ಬೆಚ್ಚಿ ಬೀಳಿಸುತ್ತಿದ್ದರು. ಅದರಲ್ಲಿ ಖುಷಿಯನ್ನೂ ಪಡೆಯುತ್ತಿದ್ದರು.

ಹೀಗೆ ಕ್ರಮೇಣ ಒಂದು ಸುಸಂಗತ ವೈಚಾರಿಕ ಚೌಕಟ್ಟಿಗೆ ಸಿಗದೆ ಬೆಳೆದ ರಾಮದಾಸ್, ಸಹಜವಾಗಿಯೇ ಸ್ಥೂಲವಾಗಿ ಪ್ರಗತಿಪರವೆಂದು ಕರೆಯಬಹುದಾದ ಎಲ್ಲ ನಿಲುವುಗಳಿಗೂ, ಚಟುವಟಿಕೆಗಳಿಗೂ ಆಶ್ರಯದಾತರೋ, ಸ್ಫೂರ್ತಿ ಕೇಂದ್ರವೋ ಆಗತೊಡಗಿದ್ದರು. ಈ ಸಂಪುಟದ ಹಲವು ಲೇಖನಗಳು ಹಲವು ರಾಜಕೀಯ ನೆಲೆಗಳ ಜನರಿಂದ ರಾಮದಾಸರನ್ನು ತಮ್ಮವರೆಂದೇ ಪರಿಗಣಿಸಿ, ಹಲವು ಪ್ರಶ್ನೆಗಳನ್ನು ಎತ್ತುತ್ತಲೇ ಪ್ರೀತಿಯಿಂದ ಬರೆಯಲ್ಪಟ್ಟಿರುವುದನ್ನು ನೋಡಬಹುದು. ಇನ್ನು ರಾಮದಾಸ್ ಅವರ ಪತ್ರಿಕಾ ಹೇಳಿಕೆಗಳ ವಿಭಾಗ, ಅವರ ವೈವಿಧ್ಯಮಯ 'ಆಸಕ್ತಿ'ಗಳನ್ನಲ್ಲದೆ, ಅವರ ನಿರಂತರ ಅಶಾಂತತೆಯ ಹಲವು ಮೂಲಗಳನ್ನೂ ಗುರುತಿಸಬಲ್ಲುದಾಗಿದೆ. ತಮ್ಮ ವರ್ತಮಾನದೊಂದಿಗೆ ನಿರಂತರ ಸಂವಾದ, ಸಂಘರ್ಷದಲ್ಲಿದ್ದ ವ್ಯಕ್ತಿ ರಾಮದಾಸ್. ಇಂತಹ ವ್ಯಕ್ತಿ ಹಲವು ಭಾವನಾತ್ಮಕ ಮತ್ತು ವೈಚಾರಿಕ ಕುರುಡುಗಳಿಗೆ ಒಳಗಾದದ್ದೂ ಸಹಜವೇ. ಅವುಗಳ ಸೂಕ್ಷ್ಮ ನಿರೂಪಣೆಗಳೂ ಇಲ್ಲಿನ ಹಲವು ಲೇಖನಗಳಲ್ಲಿ

ಇರುವುದನ್ನು ನೀವು ಗಮನಿಸಬಹುದು. ಹಾಗೇ ತುಂಬಾ ಹತ್ತಿರಕ್ಕೆ ಬಂದು ಅವರನ್ನು ಮುಟ್ಟಿ ನೋಡದವರ ಸ್ವಲ್ಪ ಉತ್ಪ್ರೇಕ್ಷೆಯ ನೋಟಗಳೂ ಇಲ್ಲಿವೆ. ಇವರ ಜೊತೆಗಾರರಾಗಿದ್ದ ತೇಜಸ್ವಿ, ನಂಜುಂಡಸ್ವಾಮಿ, ಲಂಕೇಶರು ಸಾಹಿತಿಯಾಗಿಯೋ, ಸಂಘಟನಕಾರರಾಗಿಯೋ ಅಥವಾ ಪತ್ರಕರ್ತರಾಗಿಯೋ ಸಾರ್ವಜನಿಕ ಮಹತ್ವ ಗಳಿಸಿದ್ದವರು. ಆದರೆ ಇಂತಹ ಯಾವುದೇ ಸಾರ್ವಜನಿಕ ಮಹತ್ವದ ಸ್ಥಾನವಿಲ್ಲ, ಬರೀ ಪ್ರತಿಭಟನಾಗಾರರಾಗಿ ಕರ್ನಾಟಕದಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಜನಮನ ಗೆದ್ದ ಏಕೈಕ ವ್ಯಕ್ತಿ ಎಂದರೆ ರಾಮದಾಸ್‌ರೇ ಎಂದು ಕಾಣುತ್ತದೆ. ಈ ನಾಲ್ವರಲ್ಲಿ ಇವರು ಕೊನೆಯವರಾಗಿ ನಿರ್ಗಮಿಸಿ ಶೂನ್ಯವನ್ನು ಸೃಷ್ಟಿಸಿದ್ದೂ ಅವರ ಸಾರ್ವಜನಿಕ ಮಹತ್ವವನ್ನು ಇನ್ನಷ್ಟು ಹೆಚ್ಚಿಸಿತ್ತೆಂದು ತೋರುತ್ತದೆ. ಹಾಗಾಗಿಯೇ ಈ ತಲ್ಲಣ, ಸಂಪುಟ ರೂಪಿಸುವ ಈ ತುರ್ತು.

ಅದೇನೇ ಇರಲಿ, ರಾಮದಾಸ್ ಬರೀ ಪ್ರತಿಭಟನಾಕಾರ ಅಥವಾ ಪರಿಣಾಮಕಾರಿ ವಾಕ್ಪಟು ಮಾತ್ರವಾಗಿರಲಿಲ್ಲ. ಅವರಿಗೊಂದು ಖಾಸಗಿ ವ್ಯಕ್ತಿತ್ವವೂ ಇತ್ತು. ಅವರ ಕೌಟುಂಬಿಕ ಮುಖಗಳ ಹಲವು ಚಹರೆಗಳನ್ನು ಅವರ ಪತ್ನಿ, ಮಗಳು ಮತ್ತು ಅಳಿಯ ಇಲ್ಲಿ ಚಿತ್ರಿಸಿದ್ದಾರೆ. ಹಾಗೇ 'ನೇರ ಮಾತು' ವಿಭಾಗದಲ್ಲಿ ರಾಮದಾಸ್‌ರಲ್ಲಿ ಹೇಗೆ ಒಳ್ಳೆಯ ಲವಲವಿಕೆಯ, ಸ್ವಾರಸ್ಯಕರ ಗದ್ಯಕಾರನೂ ಇದ್ದ ಎಂಬುದನ್ನು ಪರಿಚಯಿಸುವ ನಾಲ್ಕಾರು ಲೇಖನಗಳಿವೆ. ಇನ್ನು 'ಮುಖಾಮುಖಿ'ಯಲ್ಲಿ ಅವರ ವಿಚಾರಗಳು ತಮ್ಮದೇ ವಿಶಿಷ್ಟತೆಗಳೊಂದಿಗೆ ಹರಳುಗಟ್ಟಲು ಪ್ರಯತ್ನಿಸಿರುವುದನ್ನು ಕಾಣಬಹುದು.

ಇನ್ನು 'ಪ್ರಚಲಿತ' ವಿಭಾಗದಲ್ಲಿ ರಾಮದಾಸ್‌ರಿಗೆ ಪ್ರಿಯವಾಗಿದ್ದ ಚರ್ಚೆಯ ವಿಷಯಗಳಾದ ವೈಜ್ಞಾನಿಕ ಮನೋಭಾವ, ಜಾತಿಪದ್ಧತಿ, ಕೋಮುವಾದ, ಸೆಕ್ಯುಲರಿಸಂ ಮತ್ತು ಸಮಾಜವಾದಿ ಆಂದೋಲನ ಕುರಿತು ಪರಿಣತರು ಬರೆದಿರುವ ಲೇಖನಗಳಿವೆ. ಇದು ಸಂಪುಟದ ಪೂರಕ ಭಾಗ. ಆದರೆ ಈ ಲೇಖನಗಳಲ್ಲಿನ ನಿಲುವುಗಳನ್ನು ರಾಮದಾಸ್ ಅವರು ಎಷ್ಟರಮಟ್ಟಿಗೆ ಒಪ್ಪುತ್ತಿದ್ದರೋ ನಾವು ಹೇಳಲಾರೆವು. ಹಾಗೇ ಅಲ್ಲಿರುವ ವಿಚಾರಗಳನ್ನು ಸಂಪಾದಕೀಯ ಮಂಡಳಿ ಒಪ್ಪುತ್ತದೆ ಎಂದೇನೂ ಅಲ್ಲ. ಅಲ್ಲದೆ ಈ ಲೇಖನಗಳು ಸಂಪುಟ ತಡವಾದದ್ದರಿಂದ ಹಳತೂ ಆಗತೊಡಗಿವೆ.

ಹೀಗೆ ರಾಮದಾಸ್‌ರ ನೆನಪಿನ ಸಂಪುಟವನ್ನು ಅವರ ವರ್ಣಮಯ ವ್ಯಕ್ತಿತ್ವವನ್ನು ಹಿಡಿದಿಡುವ ಪ್ರಯತ್ನವಾಗಿ ನೋಡಿದರೆ, ಅದು ಯಶಸ್ವಿಯಾಗಿದೆ ಎಂದೇ ಹೇಳಬಹುದೇನೋ. ಆದರೆ ಈ ಸಂಪುಟವನ್ನು ಸಿದ್ಧಪಡಿಸಲು ಕೂತಾಗ ನಮ್ಮ ಉದ್ದೇಶವಿದ್ದುದು ಏನು ಎಂಬುದನ್ನು ಇಲ್ಲಿ ಸೂಚಿಸಬಯಸುತ್ತೇವೆ. ರಾಮದಾಸರ ವ್ಯಕ್ತಿತ್ವವನ್ನು, ಅವರ ಚಟುವಟಿಕೆಗಳ ಮೂಲಕ ಕಟ್ಟಿಕೊಡುವಾಗ; ಆ ಕಾಲದ ಜನಪರ ಹೋರಾಟದ ಸ್ವರೂಪವನ್ನು ಪರಿಚಯ ಮಾಡಿಕೊಡುತ್ತಾ, ಅದರ ಶಕ್ತಿ ದೌರ್ಬಲ್ಯಗಳೆರಡನ್ನೂ ನಿರೂಪಿಸುವ ಮೂಲಕ ಈ ಹೋರಾಟ ಪರಂಪರೆಗೆ ಒಂದು ಆತ್ಮವಿಮರ್ಶೆಯ ಆಯಾಮ ನೀಡುವುದೇ

ಆಗಿತ್ತು. ಆದರೆ ಈ ಉದ್ದೇಶ ಕೆಲವು ಲೇಖನಗಳಲ್ಲಿ ಅಲ್ಲಲ್ಲಿ ಪ್ರತಿಫಲಿತವಾಗಿದೆಯಾದರೂ ಒಟ್ಟಾರೆ ಅದು ಸಾಧಿತವಾಗಿದೆ ಎಂದು ಹೇಳಲಾರೆವು. ನಾವು ಒಬ್ಬ ವ್ಯಕ್ತಿ ಬದುಕಿದ್ದಾಗ ಆಡಬಲ್ಲ ಮಾತುಗಳನ್ನು, ಆತ ಕಣ್ಮರೆಯಾದ ನಂತರ ಆಡಲಾಗದವರು. ಅದು ನಮ್ಮ 'ಸಂಸ್ಕೃತಿ'. ಈ 'ಸಂಸ್ಕೃತಿ'ಯಿಂದಾಗಿ ಇಲ್ಲಿ ರಾಮದಾಸ್‌ರ ವ್ಯಕ್ತಿತ್ವ ಮತ್ತು ಹೋರಾಟಗಳೆರಡೂ ಏಕಮುಖವಾಗಿಯೇ ಚಿತ್ರಿತವಾಗಿದೆ ಎಂಬ ಅನುಮಾನ ನಮ್ಮದು. ಇದಕ್ಕೆ ಇನ್ನೊಂದು ಕಾರಣ, ಅವರನ್ನು ಒಳಹೊಕ್ಕು ನೋಡಿದವರಾಗಿದ್ದ; ಹಾಗಾಗಿ ಅವರನ್ನು ವಿಮರ್ಶೆಗೆ ಒಡ್ಡಬಲ್ಲವರಾಗಿದ್ದ ಹಲವರು ತಮ್ಮದೇ ಕಾರಣಗಳಿಂದಾಗಿ ಈ ಸಂಪುಟಕ್ಕೆ ಬರೆಯದಿರುವುದು.

ಹಾಗಾಗಿ ಇಲ್ಲಿ ರಾಮದಾಸ್ ಸಾರಾಸಗಟಾಗಿ 'ಹೀರೋ' ಆಗಿಯೇ ಚಿತ್ರಿತವಾಗಿರುವ ಸಂಭವವಿದೆ. ಆದರೆ ಅವರನ್ನು ಹತ್ತಿರದಿಂದ ಬಲ್ಲವರಿಗೆ ಅವರು ಎಲ್ಲ ಸಂದರ್ಭಗಳಲ್ಲೂ ಹೀರೋ ಏನೂ ಆಗಿರಲಿಲ್ಲ ಎಂಬುದೂ ಗೊತ್ತಿದೆ. ಎಲ್ಲ ಸಾಮಾನ್ಯ ಮನುಷ್ಯರಂತೆ ಅವರು ಅಹಂಕಾರಿಯಾಗಿಯೂ, ಕೆಟ್ಟ ಹಠವಾದಿಯಾಗಿಯೂ, ಅತಿ ವೈಯಕ್ತಿಕವಾದಿಯಾಗಿಯೂ, ಕುರುಡು ವ್ಯಕ್ತಿನಿಷ್ಠೆಯಿಂದಲೂ ವರ್ತಿಸಿದ ಹಲವು ಸಂದರ್ಭಗಳುಂಟು. ಮೈಸೂರಿನ ಹಲವು ಗೆಳೆಯರು ಅವರ ಮುಂಗೋಪ, ಅಸಹನೆ, ಸಿಟ್ಟು ಸೆಡವು ಮತ್ತು ಅಸಮರ್ಥನೀಯ ಆರೋಪ ಮತ್ತು ಕಟು ಟೀಕೆಗಳಿಂದ ನೊಂದು ಅವರಿಂದ ಕೆಲವರು ದೀರ್ಘಕಾಲಿಕವಾಗಿ, ಇನ್ನು ಕೆಲವರು ಶಾಶ್ವತವಾಗಿ ದೂರವಾದ ಸಂದರ್ಭಗಳೂ ಉಂಟು. ಇದರಿಂದಾಗಿ ಅವರೇ ರೂಪಿಸುತ್ತಿದ್ದ, ಪೋಷಿಸುತ್ತಿದ್ದ, ಬೆಂಬಲಿಸಿ ಭಾಗವಹಿಸುತ್ತಿದ್ದ ಅನೇಕ ಕಾರ್ಯಕ್ರಮಗಳಿಗೆ, ಆಂದೋಲನಗಳಿಲ್ಲದೆ ಸಾಕಷ್ಟು ಹಾನಿಯೂ ಆಗಿದೆ. ಅವರಿಗೆ ಎಲ್ಲರಿಗಿದ್ದಂತೆ ಸಣ್ಣಪುಟ್ಟ ಸಾರ್ವಜನಿಕ ಆಸೆಗಳಿದ್ದುವಾದರೂ (ಅವರ ರಾಜಕೀಯ ಸ್ನೇಹಿತರೇ ಉದ್ದೀಪಿಸಿದ್ದ ಎಂ.ಎಲ್.ಸಿ ಗಿರಿ ಅಥವಾ ಕೆಪಿಎಸ್‌ಸಿ ಸದಸ್ಯತ್ವ ಇತ್ಯಾದಿ) ಯಾವುದೇ ಆಂದೋಲನವನ್ನು ತಮ್ಮ ಯಾವುದೇ ಸ್ವಾರ್ಥಕ್ಕೆ ಅವರು ಬಲಿಗೊಡದಷ್ಟು Integrity ಇದ್ದ ಮನುಷ್ಯರಾಗಿದ್ದುದರಿಂದ! ಇಂತಹ ಹಾನಿಗಳನ್ನು ಅವರ ಗೆಳೆಯರು ಮನಸ್ಸಿಗೆ ಹಾಕಿಕೊಳ್ಳದೇ ಅವರ ಕೊನೆಯ ದಿನದವರೆಗೂ ಅವರ ಜೊತೆಗೆ ಕೈಗೂಡಿಸಿ ನಡೆದಿದ್ದಾರೆ. ಹೀಗೆ ರಾಮದಾಸ್ ಎಂಬ 'ಉರಿದ ಪಂಜು'ಗೆ ಇಂಧನಗಳು ಹಲವಾರು!

ಆದರೂ ಇವನ್ನೆಲ್ಲ ಲೆಕ್ಕಕ್ಕೆ ತೆಗೆದುಕೊಳ್ಳದೆ, ಒಬ್ಬ ಮನುಷ್ಯನ ವ್ಯಕ್ತಿತ್ವವನ್ನು ಮತ್ತು ಆ ವ್ಯಕ್ತಿತ್ವ ರೂಪಿಸಿದ ಮತ್ತು ಭಾಗವಹಿಸಿದ ಸಾರ್ವಜನಿಕ ಜೀವನವನ್ನು ಸರಿಸುಮಾರಾಗಿಯೂ ಅಂದಾಜು ಮಾಡಲಾಗದು. ಸತ್ತ ಮೇಲೆ ಒಬ್ಬ ವ್ಯಕ್ತಿಯ ಬಗ್ಗೆ ಕೆಟ್ಟ ಮಾತನಾಡಬಾರದೆಂಬುದು ನಮ್ಮ ಸತ್ಸಂಪ್ರದಾಯ. ಇದನ್ನು ವ್ಯಕ್ತಿಯ ಮಟ್ಟಿಗೆ ಆದರಿಸಬಹುದು. ಆದರೆ ನಾವು ಈ ಸಂಪುಟದ ಮೂಲಕ ಪ್ರಸ್ತುತಪಡಿಸಹೊರಟದ್ದು ರಾಮದಾಸ್‌ರನ್ನು ಓರ್ವ ವ್ಯಕ್ತಿಯನ್ನಾಗಿ ಮಾತ್ರವಲ್ಲ; ಒಂದು ಕಾಲದ ಜನಪರ ಹೋರಾಟದ ಒಂದು ಪ್ರತೀಕವಾಗಿ ಕೂಡಾ. ಅದು ಇಲ್ಲಿ ನಾವು ಉದ್ದೇಶಿಸಿದಷ್ಟು ಸ್ಫುಟವಾಗಿ

ಮೂಡಿಬಂದಿಲ್ಲ ಎಂಬ ಅಳುಕಿನೊಂದಿಗೆ ಈ ಸಂಪುಟವನ್ನು ನಿಮ್ಮ ಕೈಗಿಡುತ್ತಿದ್ದೇವೆ. ಆದರೆ ಒಟ್ಟಾರೆಯಾಗಿ ಒಂದು ಕಾಲದ ಸಾಮಾಜಿಕ ಚರಿತ್ರೆಯ ಒಂದು ಮುಖವನ್ನಾದರೂ ಸ್ಥೂಲವಾಗಿಯಾದರೂ ಇದು ಕಟ್ಟಿಕೊಟ್ಟಿದೆ ಎಂದು ಭಾವಿಸಿದ್ದೇವೆ.

(೨೦೧೨)

'ನಮ್ಮ ಶಾಮಣ್ಣ'*

ಕಳೆದ ಇಪ್ಪತ್ತು-ಇಪ್ಪತ್ತೈದು ವರ್ಷಗಳಲ್ಲಿ ನಮ್ಮ ಬದುಕು ಎಷ್ಟು ವೇಗವನ್ನು ಗಳಿಸಿಕೊಂಡಿದೆಯೆಂದರೆ, ಈ ಅವಧಿಗೆ ಮುಂಚಿನ ಬದುಕಿನ ಮಾದರಿ-ಮೌಲ್ಯಗಳೆಲ್ಲವೂ ಈಗ ಬಹು ಪ್ರಾಚೀನವೆಂಬಂತೆ ಕಾಣತೊಡಗಿವೆ. ಅಷ್ಟೇ ಅಲ್ಲ, ಈ ವೇಗಕ್ಕೆ ಆ ಕಾಲದ ನಮ್ಮ ನೆನಪುಗಳೂ ಎಷ್ಟು ಅಸ್ತವ್ಯಸ್ತವಾಗುತ್ತಿವೆಯೆಂದರೆ ಆ ಮಾದರಿಗಳು ಮತ್ತು ಮೌಲ್ಯಗಳು ಇಂದು ಅಪ್ರಸ್ತುತವೂ, ಅಸಂಗತವೂ ಆಗಿ ಕಾಣತೊಡಗುವ ಅಪಾಯಕ್ಕೀಡಾಗಿವೆ. ಇಂತಹ ಸಂದರ್ಭದಲ್ಲಿ ಇಂತಹ ಬದುಕಿನ ಮಾದರಿ ಮತ್ತು ಮೌಲ್ಯಗಳನ್ನು ಪ್ರತಿನಿಧಿಸುವ ಕಡಿದಾಳು ಶಾಮಣ್ಣನವರನ್ನು ಕುರಿತ ಗೌರವಗ್ರಂಥ ಪ್ರಕಟವಾಗುತ್ತಿದೆ. ಅಥವಾ ಈ ಗ್ರಂಥದ ಸಂಪಾದಕನೊಬ್ಬನಾಗಿ ಹೇಳುವುದಾದರೆ, ಈ ಕಾರಣದಿಂದಲೇ ಇಂತಹ ಗ್ರಂಥವನ್ನು ಹೊರತರುವ ತುರ್ತು ಮತ್ತು ಒತ್ತಾಯಗಳು ಹುಟ್ಟಿಕೊಂಡಿವೆ. ಈ ಅರ್ಥದಲ್ಲಿ ಈ ಗ್ರಂಥ ಸಾತತ್ಯವಿಲ್ಲದೆಯೇ ಕಳೆದುಹೋಗುತ್ತಿರುವ ಮತ್ತು ಕಳೆದುಹೋಗಬಾರದ ಕಾಲವೊಂದರ ನೆನಪುಗಳನ್ನು ದಾಖಲಿಸುವ ಗ್ರಂಥ. ಆ ಮೂಲಕ ಆ ಕಾಲಕ್ಕೆ ಈ ಕಾಲದೊಂದಿಗೆ ಸಾತತ್ಯವನ್ನು ಕಲ್ಪಿಸಲೆತ್ನಿಸುವ ಗ್ರಂಥವೂ ಆಗಿದೆ.

ಈ ಗೌರವ ಗ್ರಂಥವನ್ನು ರೂಪಿಸುವಾಗ ನಾವು ಲೇಖಕರನ್ನು ಆಯ್ಕೆ ಮಾಡಿಕೊಂಡದ್ದೂ ಈ ಹಿನ್ನೆಲೆಯಲ್ಲೇ. ಅದು ಒಂದು ವ್ಯಕ್ತಿತ್ವವನ್ನು ಪರಿಚಯಿಸುತ್ತಿರುವಾಗಲೇ, ಆ ಕಾಲವನ್ನೂ ಪರಿಚಯಿಸುವಂತಿರಬೇಕು. ಅವರು ನಿಜ ಸಮಾಜವಾದಿಯಾಗಿ ಬದುಕಿ ಸಮಾಜವಾದದ ಗೌರವವನ್ನು ಕಾಪಾಡಿಕೊಂಡು ಬಂದಿದ್ದಾರೆ. ಸಮಾಜವಾದಿ ಮಾದರಿಯ ಬದುಕು ಎಂದರೇನು ಎಂಬುದನ್ನು ಬದುಕಿ ತೋರಿಸಿದ್ದಾರೆ. ಅವರ ಹಿರಿಯ ಗೆಳೆಯ, ಗುರು ಸರೋದ್ ವಾದಕ ಪಂಡಿತ್ ರಾಜೀವ್ ತಾರಾನಾಥ್ ಶಾಮಣ್ಣನ ವ್ಯಕ್ತಿತ್ವವನ್ನು ಕಟ್ಟಿಕೊಟ್ಟಿರುವ ಈ ಬಗೆ ಇದನ್ನು ಸಮರ್ಥವಾಗಿ ವಿವರಿಸುತ್ತದೆ: 'ಇವತ್ತಿನ ದಿನ ಎಲ್ಲಾ ಕಡೆ ಜನರ ತಲೆ ಕೆಡಿಸುವ ಫ್ಯಾಸಿಸಂ ಬೆಳೆಯುತ್ತಿದೆ. ದೇಶದಲ್ಲಿ ಇರುವುದೇ ಬೇಡ ಎನ್ನಿಸುವಂತ ಸ್ಥಿತಿಯನ್ನು

---

*ಕಡಿದಾಳು ಶಾಮಣ್ಣ ಗೌರವ ಗ್ರಂಥದ ಸಂಪಾದಕೀಯ

ನಿರ್ಮಿಸುತ್ತಿದ್ದಾರೆ. ಅದನ್ನು ಎದುರಿಸಲು ಶಾಮಣ್ಣನಂತ ಶಕ್ತಿಗಳು ಇರಬೇಕು. ಜನಗಳಲ್ಲಿ ಆರೋಗ್ಯವಾದ ಮನಸ್ಸು, ಆರೋಗ್ಯಕರ ಧೋರಣೆ, ಆರೋಗ್ಯಕರ ವ್ಯಕ್ತಿತ್ವವನ್ನು ಬೆಳೆಸುವಲ್ಲಿ ಶಾಮಣ್ಣ ಧೈರ್ಯವಾಗಿ ತೊಡಗಿಸಿಕೊಂಡಿದ್ದಾರೆ. ಅದು ಬಹುಮುಖ್ಯ.

...ಲೆಕ್ಚರ್‌ಬಾಜಿ ಅವರ ಧಾಟಿ ಅಲ್ಲ. ಬದುಕಿನ ಸರಳತೆ, ಚೊಕ್ಕತನ, ಮನವ ತೆರೆದಿಟ್ಟ ಬಗೆಯ ಒಂದು ಗೆಳೆತನ, ತೆರದ ಮನಸ್ಸು ಅವರ ವಿಶೇಷ. ಅವರ ಜೊತೆಗಿದ್ದವರಿಗದು ಗೊತ್ತಾಗುತ್ತದೆ. ಅದಕ್ಕಿಂತ ಇನ್ನೇನು ಬೇಕು? ಅಂಥವರಿರಬೇಕು; ಸುಮ್ಮನೆ ಬದುಕಿ ಅವರ ಪ್ರಭಾವ ಹಬ್ಬಬೇಕು. ಟೈಮ್ ಸಿಕ್ಕಾಗ ಕೊಂಚ ಸರೋದ್ ನುಡಿಸಬೇಕು. ಅದರ ಗೀಳನ್ನು ಯಾವತ್ತೂ ಇಟ್ಕೋಬೇಕು; ಇಟ್ಕೊಂಡಿದ್ದಾರೆ ಕೂಡ.'

ಇದಷ್ಟೇ ಅಲ್ಲ, ಶಾಮಣ್ಣನವರ ಸಹಪಾಠಿ ಮತ್ತು ಜೀವದ ಗೆಳೆಯ ಸೈಯ್ಯದ್ ಅಬ್ದುಲ್ ಖಾಜಿ ಹೇಳುವ ಈ ಮಾತು ಶಾಮಣ್ಣನಂತವರು ಸಮಾಜವಾದವನ್ನು ಕೇವಲ ಒಂದು ರಾಜಕೀಯ ಚಿಂತನೆಯಾಗಿ ಮಾತ್ರ ಅರ್ಥೈಸಿಕೊಳ್ಳದೆ ಅದನ್ನೊಂದು ನೈತಿಕ ಪ್ರಜ್ಞೆಯಾಗಿಯೂ ಗ್ರಹಿಸಿ ಪರಿಪಾಲಿಸಿಕೊಂಡು ಬಂದ ಪರಿಯನ್ನು ಸೂಚಿಸುತ್ತದೆ: 'ನನ್ನ ಬದುಕಿನ ಬಹು ದೊಡ್ಡ ಸಂಪಾದನೆ ಎಂದರೆ ಶಾಮಣ್ಣ, ತೇಜಸ್ವಿ ಒಡನಾಟ. ಎಲ್ಲಾ ಬೇಸಿಗೆ ರಜೆಯಲ್ಲೂ ಮಲೆನಾಡಿನ ಅವರ ಮನೆಗಳಿಗೆ ಹೋಗಿದ್ದೇನೆ. ಅವರ ನಂಟರುಗಳ ಮನೆಗೆ ಹೋಗಿದ್ದೇನೆ. ಕೋಣಂದೂರು ಲಿಂಗಪ್ಪನ ಜೊತೆಯೂ ತಿರುಗಿದ್ದೇನೆ. ಬಹಳ ಒಳ್ಳೆ ದಿನಗಳವು. ಶಾಮಣ್ಣ, ತೇಜಸ್ವಿ ಒಡನಾಟದಿಂದ ನಾನು ಬದುಕಿನಲ್ಲಿ ನೈತಿಕತೆ ಉಳಿಸಿಕೊಂಡು ಬಂದೆ. ಯಾವುದೇ ಸಂದರ್ಭದಲ್ಲಿ ಲಂಚ ರುಶುವತ್ತು ನನ್ನ ಬಳಿ ಸುಳಿಯದಂತೆ ನೋಡಿಕೊಂಡೆ. ಹಾಗಾಗಿ ಈಗಲೂ ಬಾಡಿಗೆ ಮನೆಯಲ್ಲಿದ್ದೇನೆ. ನನಗೊಂದು ಮೂರುವರೆ ಸಾವಿರ ಪಿಂಚಣಿ ಬರುತ್ತಿದೆ. ಮಕ್ಕಳು ಓದಿ ಅವರ ಕಾಲ ಮೇಲೆ ನಿಂತುಕೊಂಡಿದ್ದರಿಂದ ನೆಮ್ಮದಿಯಾಗಿದ್ದೇನೆ.'

ಶಾಮಣ್ಣನವರಲ್ಲಿ ಅರಳಿಕೊಂಡ ಲೋಹಿಯಾ ಸಮಾಜವಾದಕ್ಕೆ ಇದಕ್ಕಿಂತ ದೊಡ್ಡ ಅರ್ಹತಾ ಪತ್ರ ಬೇಕೆ? ಶಾಮಣ್ಣನ ಸಮಾಜವಾದ ಒಂದು ವೈಯಕ್ತಿಕ ನೈತಿಕ ಪ್ರಜ್ಞೆಯಾಗಿ ಮಾತ್ರವಲ್ಲದೆ, ಒಂದು ದಟ್ಟ ಸಾಮಾಜಿಕ ಪ್ರಜ್ಞೆಯಾಗಿಯೂ ಕ್ರಿಯಾಶೀಲವಾದ ಹಲವು ಬಗೆಗಳನ್ನು ಮೇಲೆ ತಿಳಿಸಿದ ಹಲವು ಆಂದೋಲನಗಳ ವಿವರಗಳ ಮೂಲಕ–ಇಲ್ಲಿ ಹಲವರು ವರ್ಣಿಸಿದ್ದಾರೆ. ಆದರೆ ಅವೆಲ್ಲ ಕೆಲವರಿಗೆ ಇತಿಹಾಸದಂತೆ ಕಾಣಬಹುದು. ಆದರೆ ಶಾಮಣ್ಣ ಆ ಇತಿಹಾಸವನ್ನು ಇಂದಿನ ವರ್ತಮಾನಕ್ಕೂ ವಿಸ್ತರಿಸಿಕೊಂಡಿರುವ ಪರಿಯನ್ನು ಅರ್ಥ ಮಾಡಿಕೊಳ್ಳಬೇಕಾದರೆ, ಅವರ ಕಿರಿಯ ಗೆಳೆಯ ಲೈಬ್ರರಿ ವಿಶ್ವನಾಥ್‌ರ ಈ ಮಾತುಗಳನ್ನು ಗಮನಿಸಬೇಕು:

'ಮೈದೊಳಲು, ಅಗರದಹಳ್ಳಿ, ಭಗವತೀಕೆರೆ ಈ ಗ್ರಾಮೀಣ ಪ್ರದೇಶದಲ್ಲಿ ಅಪರೂಪದ ವ್ಯಕ್ತಿಯೊಂದು ನಮ್ಮ ಹಳ್ಳಿಗರ ಜೊತೆ ಬೆರೆಯುತ್ತ ಓಡಾಡುತ್ತಿರುವುದು ತಾರುಣ್ಯದಲ್ಲಿ

ಪ್ರಾಪ್ತಿಯಾದ ನಮ್ಮ ಹೊಸ ಕಣ್ಣುಗಳಿಗೆ ಗೋಚರಿಸಿತು. ಅವರ ಸರಳತೆ, ವಿಶ್ವಾಸ ತುಂಬಿದ ಮಾತುಕತೆಗಳು ನಮ್ಮನ್ನು ಆಕರ್ಷಿಸಿದವು. ಅವರ ಆಕಾರದಿಂದಲೇ ನಮಗೆ ಎಲ್ಲಿಂದಲೊ ಬಂದ ಪ್ರವಾದಿಯಂತೆ ಕಾಣುತ್ತಿದ್ದರು. ಅವರ ನಡವಳಿಕೆಯಲ್ಲಿ ಜಾತಿಪಾತಿಗಳ ವಾಸನೆಯಿರಲಿಲ್ಲ. ದೇವರು ದಿಂಡಿರ ಸಹವಾಸವಿರಲಿಲ್ಲ. ಪ್ರೀತಿ-ಪ್ರೇಮ ಸಹಬಾಳ್ವೆಯ ವಿವೇಕ ಅವರ ಬಾಯಿಂದ ಬರುತ್ತಿದ್ದವು. ಸಹಜವಾಗಿ ನಮಗೆ ಶಾಮಣ್ಣನವರನ್ನು ಕಂಡರೆ ಇವರೇ ನಮ್ಮ ನಿಜವಾದ ನಾಯಕರು ಅನ್ನಿಸಿತು.

..... ಶಾಮಣ್ಣನವರು ಮಲೆನಾಡನ್ನು ಬಿಟ್ಟು ನಮ್ಮ ಪ್ರದೇಶಕ್ಕೆ ಬಂದು ನೆಲೆಸಿದ್ದೇ ನಮ್ಮ ಭಾಗ್ಯ ಎಂದುಕೊಂಡಿದ್ದೇವೆ. ಶ್ರೀದೇವಕ್ಕ ಮತ್ತು ಶಾಮಣ್ಣನವರು ನಮ್ಮಲ್ಲಿ ಇರುವುದೇ ನಮಗೊಂದು ಹೆಮ್ಮೆಯ ಸಂಗತಿ. ನಾವು ಎಲ್ಲೇ ಹೋದರೂ ಶಾಮಣ್ಣನವರ ಜೊತೆಗಿದ್ದೇವೆ ಎಂದು ಹೇಳಿಕೊಳ್ಳುವುದೇ ಸಂಭ್ರಮವೆನಿಸಿದೆ. ತಾಲೂಕಾಫೀಸು, ಡಿ.ಸಿ. ಕಛೇರಿ, ಪೋಲಿಸ್ ಠಾಣೆ ಹೀಗೆ ಸರಕಾರಿ ಕಛೇರಿಗಳಲ್ಲಿ ಶಾಮಣ್ಣ ಕಳುಹಿಸಿದ್ದಾರೆ ಎಂದರೆ ಸರಕಾರಿ ಜನ ನಮ್ಮ ಕಡೆ ತುಸು ಗಮನ ಕೊಡುತ್ತಾರೆ. ಅವರ ಮನೆಗೆ ಹೋಗಿ ಬಂದರೆ ಹೊಸ ಆಲೋಚನೆಯನ್ನು ನಮ್ಮ ತಲೆಗೆ ಬಿಟ್ಟು ಕಳುಹಿಸುತ್ತಾರೆ. ಅವರ ತೋಟ, ಮನೆ, ಜಾತಿ ಮತಗಳನ್ನು ಮೀರಿ, ಇದು ನಮ್ಮ ಅಯ್ಯನವರ ಮನೆ, ತೋಟ ಎಂಬ ಭಾವನೆ ಬರುವಂತೆ ಅವರು ಇಲ್ಲಿ ಬಾಳಿದ್ದಾರೆ. ನಾನೀಗಲೂ ಅವರ ಜೊತೆ ಇದ್ದೇನೆ. ಮೈದೊಳಲಿಗೆ ಬಂದರೆ ನಮ್ಮ ಲೈಬ್ರರಿಗೆ ಬರದೇ ಹೋಗುವುದಿಲ್ಲ.'

ಹೀಗೆ ಕುವೆಂಪು ತಮ್ಮ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ರೂಪಕ ಭಾಷೆಯಲ್ಲಿ ಹೇಳುವ 'ಸ್ಥಳೀಯ ದೇವತೆ'ಗಳನ್ನು ಜಾಗೃತಗೊಳಿಸುವ ಕೆಲಸವನ್ನು ಜೀವನಪೂರ್ತಿ ಮಾಡುತ್ತಾ ಬಂದಿರುವ ಶಾಮಣ್ಣ, ನಮ್ಮ ಲೌಕಿಕ ಪ್ರಭುತ್ವವನ್ನೂ ಪ್ರಭಾವಿಸಿರುವ ರೀತಿ ಬೆರಗುಗೊಳಿಸುವಂತಹದ್ದು. ಆ ಬೆರಗನ್ನು ಗೆಳೆಯ ರಾಜೇಂದ್ರ ಚೆನ್ನಿ ಚಿತ್ರಿಸಿರುವ ರೀತಿ ಇದು: 'ಪ್ರಭುತ್ವದ ಅಧಿಕಾರದ ಕಣ್ಣಿಗೆ ರಾಚುವಂಥ ಸಂಕೇತಗಳಾದ ಪೋಲೀಸ್/ಗೃಹ ಇಲಾಖೆಯ ವಾಹನಗಳ, ರಾಜಧಾನಿಯ ಪ್ರಧಾನ ರಸ್ತೆಯಲ್ಲಿ ನಿಂತಿದ್ದು, ಗೃಹಮಂತ್ರಿಗಳು ಚಲಿಸುತ್ತಿದ್ದ ವಾಹನದಿಂದಲೇ ಶಾಮಣ್ಣನನ್ನು ನೋಡಿ ಇಡೀ ಟ್ರಾಫಿಕ್ ನಿಲ್ಲಿಸಿ ಶಾಮಣ್ಣನನ್ನು ಮಾತನಾಡಿಸಲು ಬಂದಿದ್ದು ಇದೆಲ್ಲಾ ಶಾಮಣ್ಣನ ವ್ಯಕ್ತಿತ್ವದ ಅವ್ಯಕ್ತ ಘನತೆಯು ರೂಪಕವಾಗಿ ನನಗೆ ಕಂಡಿದೆ. (ಎಂ.ಪಿ.) ಪ್ರಕಾಶರು ಗೃಹಮಂತ್ರಿಗಳೆನ್ನುವುದನ್ನು ಗಮನಿಸದೇ ಇದ್ದಂತ ಶಾಮಣ್ಣನ ನಿಲುವು, ನಿಂತುಕೊಂಡ ರೀತಿ ರೈತ ಸಂಘದ ಮೊದಲ ಹುರುಪಿನ ದಿನಗಳಲ್ಲಿ ತಮ್ಮ ಘನತೆಯಿಂದ ಪ್ರಭುತ್ವವನ್ನು ಮಣಿಸಿದ ರೈತರ ನೆನಪನ್ನು ಹೊತ್ತು ತಂದಿತು.'

ಚೆನ್ನಿಯವರು ಹೇಳುವ ಪ್ರಭುತ್ವವನ್ನು ಮಣಿಸಿದ ಘನತೆಯ ರೈತಸಂಘವನ್ನು ಕಟ್ಟಿದ ಪ್ರಮುಖರಲ್ಲಿ ಶಾಮಣ್ಣ ಕೂಡ ಒಬ್ಬರು. ಅದರ ವಿವರಗಳನ್ನು-ಅದರೆಲ್ಲ ಬಣ್ಣ

ಬೆಡಗುಗಳೊಂದಿಗೆ–ಈ ಗ್ರಂಥದಲ್ಲಿ ಅವರ ರೈತ ಹೋರಾಟದ ಒಡನಾಡಿಗಳು ಬರೆದಿದ್ದಾರೆ. ಈ ಚಳುವಳಿಯ ಭಾಗವಾಗಿ ಒಮ್ಮೆ ಜೈಲುಪಾಲಾಗಿದ್ದ ಒಬ್ಬ ಹೋರಾಟಗಾರ್ತಿಯ ಚಿಕ್ಕಮಗುವನ್ನು ಒಂದು ಇಡೀ ರಾತ್ರಿ ನೋಡಿಕೊಳ್ಳುವ ಹೊಣೆ ಹೊತ್ತ ಶಾಮಣ್ಣನ ಚಿತ್ರ ಈ ಚಳುವಳಿಯೊಂದಿಗೆ ಇದ್ದ ಅವರ ಕರುಳ ಸಂಬಂಧಕ್ಕೆ ಹಲವು ಅರ್ಥಗಳಲ್ಲಿ ಒಂದು ರೂಪಕದಂತಿದೆ. ಆಗ ರೈತರ ಪರ ವಕೀಲರಾಗಿದ್ದ ಕಿಮ್ಮನೆ ರತ್ನಾಕರ ಅವರು ನೀಡಿರುವ ಚಿತ್ರವಿದು: 'ಆಗ ಕಡಿದಾಳ್ ಶಾಮಣ್ಣನವರು ಮಗುವನ್ನು ನೋಡಿಕೊಂಡ ರೀತಿ, ರಾತ್ರಿಯೆಲ್ಲಾ ಮಗುವಿನ ಅರಚಾಟ, ಮಗುವಿನ ಶೌಚ ಕಾರ್ಯಗಳ ನಿರ್ವಹಣೆ... ಹಾಗೇ, ಆ ಕೇಸಿನಲ್ಲಿ ಸದರಿ ಆರೋಪಿಯನ್ನು ಜೈಲಿನಿಂದ ಹೊರತರಲು ಪಟ್ಟ ಶ್ರಮದ್ದೇ ಒಂದು ಕಥೆ.'

ಆಧುನಿಕ ಕರ್ನಾಟಕದ ಅತ್ಯಂತ ಪ್ರಭಾವಶಾಲಿ ಆಂದೋಲನವೆನಿಸಿದ್ದ ರೈತ ಚಳುವಳಿಗೆ ಸ್ಫೂರ್ತಿಯಾಗಿದ್ದ ಸಮಾಜವಾದಿ ಮೌಲ್ಯಗಳಿಂದ ಸಂಘಟನೆ ವಿಮುಖವಾಗುತ್ತಿದೆ ಎನಿಸಿದಾಗ ಎಚ್ಚರಿಕೆ ನೀಡಿದ್ದೇ ತಪ್ಪಾಗಿ, ಅದು ಶಾಮಣ್ಣನವರನ್ನು ಸಂಘಟನೆಯಿಂದ ಹೊರದೂಡಲು ಕಾರಣವಾಗಿ ಅದರ ವಿಚ್ಛಿದ್ರೀಕರಣಕ್ಕೆ ನಾಂದಿಯಾಯಿತು. ರೈತ ಚಳುವಳಿಯ ಪರವಾಗಿ ಜನತೆಯ ಅಭ್ಯರ್ಥಿಯಾಗಿ ಒಮ್ಮೆ ಚುನಾವಣೆಗೆ ನಿಂತಿದ್ದ ನ್ಯಾ. ಎ.ಜೆ.ಸದಾಶಿವ ಅವರು ಈ ಸಂದರ್ಭವನ್ನು ವಿಷಾದದಿಂದ ನೆನಪಿಸಿಕೊಳ್ಳುವುದು ಹೀಗೆ: 'ರಾಜ್ಯದ ಒಂದು ಪ್ರಬುದ್ಧ, ಪ್ರಬಲ ಸಂಘಟನೆ–ಲಕ್ಷಾಂತರ ಜನರಿಗೆ ಆಸರೆಯಾಗಬೇಕಿದ್ದ, ಆಸರೆಯಾಗಿದ್ದ ಸಂಘಟನೆ–ತನ್ನ ನಾಯಕರ ತಪ್ಪು ಹೆಜ್ಜೆಯಿಂದಾಗಿ ಛಿದ್ರವಾಗಿ ಲಕ್ಷಾಂತರ ರೈತರನ್ನು ನಿಸ್ಸಹಾಯಕತೆಗೆ ದೂಡಿತು. ಇದೆಲ್ಲ ನೆನಪಾದಾಗ ಶ್ರೀ ಶಾಮಣ್ಣ ಮೌನಿಯಾಗುತ್ತಾರೆ. ಅವರ ಹಾಸ್ಯ ತುಂಬಿದ ವ್ಯಂಗ್ಯ (ಸಂಘಟನೆಗೆ) ಆತ್ಮಶೋಧಕವಾಗಬೇಕಿತ್ತು. ನೋವು ತುಂಬಿದ ದನಿ ಎಚ್ಚರಿಕೆಯಾಗಬೇಕಿತ್ತು. ಕಣ್ಣೆದುರು ನಡೆದ ದುರಂತವನ್ನು ನೆನೆಸಿಕೊಳ್ಳುವಾಗ ಮರಗಟ್ಟಿದ ಮನಸ್ಸನ್ನು ನೋಡಲಾಗದು.'

ಶಾಮಣ್ಣ ಈ ಆಘಾತದಿಂದ ಇನ್ನೂ ಪೂರ್ಣ ಚೇತರಿಸಿಕೊಂಡಂತಿಲ್ಲ. ಆದರೂ ಅವರ ವ್ಯಕ್ತಿತ್ವದ ಸಮಗ್ರತೆಗೆ ಕುಂದುಂಟಾಗಿಲ್ಲ. ಶಾಮಣ್ಣನವರ ಹೋರಾಟಗಳ ಓರ್ವ ಒಡನಾಡಿ ದಿ. ಕೆ. ರಾಮದಾಸ್‌ರ ಮಗಳು ಸ್ನೇಹಾ ಈಗಲೂ ಶಾಮಣ್ಣನವರನ್ನು ಕಾಣುವುದು ಹೀಗೆ: 'ಶಾಮಣ್ಣ ಇರುವುದೇ ಹೀಗೆ: ೭೫ರ ಹರೆಯದಲ್ಲೂ, ಚಿಕ್ಕವರೂ ನಾಚಿಕೊಳ್ಳುವಷ್ಟು ಬತ್ತದ ಉತ್ಸಾಹ. ತಮ್ಮದೇ ಲೋಕದಲ್ಲಿ ವಿಹರಿಸುತ್ತಿರುವಂತೆ ಕಂಡರೂ, ಕಣ್ಣ ವ್ಯಾಪ್ತಿಯಲ್ಲಿ ವಾಸ್ತವದೆಡೆಗಿನ ಚಿಕಿತ್ಸಕ ನೋಟ ಸದಾ ಜಾಗರೂಕ. 'ಹಿಂಗೆಲ್ಲ ಆಗ್ತದಲ್ಲ, ಎಂತದ್ರೀ ಮಾರಾಯ್ರೆ' ಎಂದು ತಳಮಳಿಸುತ್ತಿದ್ದಾರೆಂದರೆ ಶಾಮಣ್ಣ ಏನಕ್ಕೋ ಬೇಸರಗೊಂಡಿದ್ದಾರೆ ಎಂದರ್ಥ. ಇದ್ದ ತಾವಿನಿಂದ ಎದ್ದು ಹೊರಟರೆಂದರೆ, ತಾನಿರುವುದಕ್ಕೆ ಇದು ಲಾಯಕ್ಕಾದ ಜಾಗ ಅಲ್ಲ ಎಂದು ಭಾವಿಸಿದ್ದಾರೆ ಎಂದುಕೊಳ್ಳಬೇಕು. ನುಡಿಯಲ್ಲಿ, ನಡೆಯಲ್ಲಿ ಯಾವುದೇ ಕಾರಣಕ್ಕೂ, ಯಾವತ್ತೂ ಎಚ್ಚರ ತಪ್ಪಿದವರಲ್ಲ.'

'ಸಣ್ಣ ಜಲಮೂಲವೊಂದು ಉಕ್ಕುತ್ತ, ಹರಿಯುತ್ತ, ಮುಂದೆ ಮುಂದೆ ಸಾಗುತ್ತ, ಸಣ್ಣ ಸಣ್ಣ ಹಳ್ಳಗಳನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತ ತೊರೆಯಾಗಿ, ನದಿಯಾಗಿ ರೂಪಾಂತರ ಹೊಂದುವ ರೂಪಕವೇ ಈ ಶಾಮಣ್ಣ' ಎಂದೆನ್ನುವ ಲೇಖಕ ಜಿ.ಪಿ. ಬಸವರಾಜು ಅವರ ಮಾತಿನಂತೆ ಸ್ನೇಹಳಂಥಹ ಹಲವು ಜನ ಯುವ ತಲೆಮಾರಿನವರನ್ನು-ಇಂತಹ ಎಷ್ಟೊಂದು ಜನ ಈ ಗೌರವ ಗ್ರಂಥಕ್ಕಾಗಿ ಬರೆದಿದ್ದಾರೆ!-ತಮ್ಮ ವ್ಯಕ್ತಿತ್ವದ ಸಮಗ್ರತೆಯಿಂದ ಈಗಲೂ 'ಸ್ಪರ್ಶಿ'ಸುತ್ತಿರುವ ಈ ಶಾಮಣ್ಣ ಒಮ್ಮೆಗೇ ನೋಡಿದರೆ ಹೇಗೆ ಕಾಣುವರು? ಲೇಖಕಿ ವೈದೇಹಿಯವರ ಕಣ್ಣಿಗೆ ಕಂಡ ಈ ಶಾಮಣ್ಣನೇ ನಮ್ಮೆಲ್ಲರಿಗೂ ಪ್ರಿಯವಾಗಿರುವ ಶಾಮಣ್ಣ: 'ಶಾಮಣ್ಣ ತಾನೇ ಪರಿಚಯ ಹೇಳಿಕೊಳ್ಳುತ್ತ ಒಳಗೆ ಬಂದರು. ಅವರು ಪರಿಚಯ ಹೇಳುತ್ತಿದ್ದಂತೆ, ಅಯ್ಯ, ಈತ ನಮಗೆಲ್ಲ ಗೊತ್ತು ಎಂಬ ಭಾವ ಬಂತು. ಮತ್ತು ಅಂದಿನಿಂದ ಇಂದಿಗೂ ಅವರು ಇರುವುದು ಹೀಗೆಯೆ. ಈತ ನಮಗೆಲ್ಲ ಗೊತ್ತು ಎಂಬಂತೆಯೇ. ನಡುವೆ ತಿಂಗಳುಗಳ ಕಾಲ ನೋಡದೆ ಮಾತಾಡದೆ ಇದ್ದರೂ. ಇದು ಒಂಚೂರೂ ಅತ್ತಿತ್ತಾಗಲಿಲ್ಲ. ಅಂಥವರು ಶಾಮಣ್ಣ. ಒಮ್ಮೆ ನೋಡಿದೆವೆಂದರೆ, ಮಾತಾಡಿದೆವೆಂದರೆ ಎದುರಿಗಿರುವವರ ಮನಸ್ಸಿನೊಳಗೆ ಇಳಿದು ಬಿಡುವ ತಿಳಿಗೊಳದಂಥ ವ್ಯಕ್ತಿ.' ವೈದೇಹಿಯವರು ಅವರ ವರ್ಣನೆಯನ್ನು ಅಲ್ಲಿಗೇ ಮುಗಿಸದೆ ಈ ಮಾತುಗಳಲ್ಲಿ ಮುಂದುವರೆಯುತ್ತಾರೆ ಅಥವಾ ಮಾತು ಮುಗಿಸುತ್ತಾರೆ: 'ಇವರು ಸಾಮಾನ್ಯವಾಗಿ ತನ್ನ ಸಂತೋಷವನ್ನು ಹಂಚಿಕೊಳ್ಳುವ ಹೊತ್ತಿಗೆ ಇನ್ನೊಬ್ಬರಿಗೆ ಕರೆಕರೆಯಾದೀತು, ರಗಳೆಯಾದೀತು ಎಂದೆಲ್ಲ ಯೋಚಿಸುವವರಲ್ಲ. ಆ ಯೋಚನೆಗಳನ್ನೆಲ್ಲ ಶ್ರೀದೇವಿಯೇ ಮಾಡಬೇಕು!'

ಇದೀಗ ಶಾಮಣ್ಣನ ವ್ಯಕ್ತಿತ್ವದ ಪೂರ್ಣತೆಯ ಮಾತು! ಅಥವಾ ತಿಳಿಗೊಳದಂತಹ ವ್ಯಕ್ತಿ ರೂಪುಗೊಂಡದ್ದು ಬರೀ ಸಾರ್ವಜನಿಕ ಜೀವನದ ಒಡನಾಟದಲ್ಲಲ್ಲ ಎಂಬ ಸತ್ಯ ಹೊರಬೀಳುವ ಸಂದರ್ಭ! ಶಾಮಣ್ಣನವರನ್ನು ಅವರ ಕುಟುಂಬದ ಪರಿಸರದಲ್ಲಿ ಕಂಡಿರುವ ಎಲ್ಲರೂ-ಇಲ್ಲಿನ ಹಲವು ಲೇಖಕರೂ-ಪ್ರಸ್ತಾಪಿಸುವ ಅವರ ಪತ್ನಿ 'ಶ್ರೀದೇವಕ್ಕ'ನ ಸಂಗತಿ ಇದು. ತಮ್ಮ ಲೇಖನವನ್ನು ಶಾಮಣ್ಣನ ಬಗ್ಗೆ ಒಂದು ದೂರು ದಾಖಲಿಸುತ್ತಾ ಮುಗಿಸುವ ಮುನ್ನ ಅವರ ಗೆಳೆಯ ಎಚ್.ಎಲ್. ಕೇಶವಮೂರ್ತಿಯವರು ಅದೇ ಧಾಟಿಯಲ್ಲಿ ಈ ಮಾತುಗಳನ್ನೂ ಬರೆಯುವರು: 'ಕೊನೆಯಲ್ಲಿ ಇದನ್ನು ಹೇಳಲೇಬೇಕು. ಹಲವು ಕ್ಷೇತ್ರಗಳಲ್ಲಿ ಅಭಿರುಚಿ ಇರುವ ಶಾಮಣ್ಣ ರೈತರಾಗಿದ್ದೂ, ರೈತರಾಗಿರಲಿಲ್ಲ! ವ್ಯವಸಾಯದ ಸಂಪೂರ್ಣ ಜವಾಬ್ದಾರಿ ಶ್ರೀದೇವಿ ಅವರದ್ದು. ಶಾಮಣ್ಣನಿಗೆ ಶ್ರೀದೇವಿ ಬಾಳಸಂಗಾತಿಯಾಗಿರದಿದ್ದರೆ, ಈಗಿನ ಶಾಮಣ್ಣ ಆಗಿರುತ್ತಿರಲಿಲ್ಲ.' ನಾನು ಮುಂದೆ ಪ್ರಸ್ತಾಪ ಮಾಡಲಿರುವ ಕೇಶವಮೂರ್ತಿಯವರ ದೂರಿನಲ್ಲಿ ಸತ್ಯ ಇರದೇ ಇರಬಹುದು; ಆದರೆ ಆ ದೂರಿನ ಮುಂದುವರಿಕೆಯಂತೆ ಕಾಣುವ ಮೇಲಿನ ಮಾತುಗಳು ಮಾತ್ರ ಸತ್ಯಸ್ಯ ಸತ್ಯ. ಅಂದರೆ ಇದರರ್ಥ ಇಷ್ಟೇ: ಶಾಮಣ್ಣ ಎಷ್ಟು ಸಾರ್ವಜನಿಕ ವ್ಯಕ್ತಿಯೋ ಅಷ್ಟು ಕುಟುಂಬದ ವ್ಯಕ್ತಿಯೂ

ಹೌದು. ಬಹಳಷ್ಟು ಸಮಾಜವಾದಿಗಳ ಜೀವನದಲ್ಲಿ ಕಾಣದ ಗುಣವಿದು. ಇದನ್ನು ಮತ್ತೋರ್ವ ಚಳುವಳಿಕಾರ, 'ಚರಕ'ದ ಪ್ರಸನ್ನ ಇನ್ನಷ್ಟು ವಿವರಿಸುವರು: 'ಶಾಮಣ್ಣ ಭಾಗ್ಯಶಾಲಿ. ಒಳ್ಳೆಯ ಮಡದಿ, ಒಳ್ಳೆಯ ಮಕ್ಕಳನ್ನು ಪಡೆದವರು ಅವರು. ಮಡದಿ ಮಕ್ಕಳು ಅವರಿಗೆ ಒಳ್ಳೆಯವರಾಗಿ ಪರಿಣಮಿಸುವುದು ಕೇವಲ ಭಾಗ್ಯದಿಂದ ಮಾತ್ರವಲ್ಲ. ಅದರಲ್ಲಿ ಗಂಡನ ಪ್ರಯತ್ನವೂ ಇದೆ ಎಂದು ನಂಬುವವನು ನಾನು'. ಈ ಪುಸ್ತಕದಲ್ಲಿರುವ 'ಮನೆಯಂಗಳದಿಂದ...' ವಿಭಾಗದ ಬರಹಗಳು ಶಾಮಣ್ಣನ ವ್ಯಕ್ತಿತ್ವದ ಈ ಭಾಗದ –ಕುಟುಂಬಸ್ಥಿಕೆಯ–ಮೇಲೆ ಬೆಳಕು ಚೆಲ್ಲುತ್ತವೆ. ಈ ಸಂದರ್ಭದಲ್ಲಿ ಉಲ್ಲೇಖಿಸಲೇಬೇಕಾದ ಒಂದು ಮಾತೆಂದರೆ, ಶಾಮಣ್ಣನವರನ್ನು, ಅವರ ಭಾವಮೈದುನ ಡಾ. ಎಚ್.ಎಸ್. ಈಶ್ವರ ಅವರ ಪ್ರಕಾರ, ಹೆಣ್ಣು ಕೊಟ್ಟ ಅವರ ಮಾವ 'ಶ್ಯಾಮದೇವರು' ಎಂದು ಕರೆಯುತ್ತಿದ್ದರೆಂಬುದು! ಶಾಮಣ್ಣನವರಿಗೆ ಇದಕ್ಕಿಂತ ದೊಡ್ಡ ಬಿರುದು ಇನ್ನೆಲ್ಲಿ ಸಿಕ್ಕೀತು?

ಈ ಬಿರುದಿನೊಂದಿಗೇ ಅವರ ಆಪ್ತ ಬಂಧುವೂ, ಬಾಲ್ಯದ ಗೆಳೆಯರೂ ಆದ ಕೆ.ಟಿ. ಮೋಹನ್ ದಾಖಲಿಸುವ ಈ ಮಾತುಗಳನ್ನೂ ಗಮನಿಸಬೇಕು : 'ಕಾಯಾ–ವಾಚಾ–ಮನಸಾ ಅವನೆಷ್ಟು ಸರಳ ವ್ಯಕ್ತಿ ಎಂದರೆ, ಮೇಲುನೋಟಕ್ಕೆ ಹಲವರಿಗೆ ಅವನೊಬ್ಬ ಜವಾಬ್ದಾರಿ ಇಲ್ಲದ ವ್ಯಕ್ತಿಯಾಗಿ ಕಂಡಿರಲೂ ಸಾಕು. ಆದರೆ ಅವನದ್ದು ಬೇಜವಾಬ್ದಾರಿಯ ವರ್ತನೆಯಲ್ಲ ಎಂಬುದು ಗೊತ್ತಿದ್ದವರಿಗೆ ಮಾತ್ರ ಗೊತ್ತು. ಅವನು ತನ್ನ ಬದುಕಿನ ಪ್ರತಿಕ್ಷಣಗಳನ್ನು, ಸಂಗತಿಗಳನ್ನು ತನ್ನದೇ ಆದ ರೀತಿಯಲ್ಲಿ ಅನುಭವಿಸುತ್ತಾ ಬದುಕಿದವನು. ಅವನು ತನ್ನ ಜೀವನವನ್ನು, ಯಾರಿಗೂ ಯಾವ ರೀತಿಯಲ್ಲೂ ತೊಂದರೆ ಕೊಡದೇ, ಸದಾ ಒಳ್ಳೆಯದನ್ನೇ ಚಿಂತಿಸುತ್ತಾ, ಬದುಕು ರೂಪಿಸಿಕೊಂಡ ಒಬ್ಬ ಸಜ್ಜನ ವ್ಯಕ್ತಿ.'

ಈ ಎಲ್ಲ ಹಿನ್ನೆಲೆಯಲ್ಲಿ ಶಾಮಣ್ಣನ ಬಗೆಗಿನ ಅವರ ಆಪ್ತ ಗೆಳೆಯರ ದೂರನ್ನು ಗಮನಿಸೋಣ. ಮುಖ್ಯವಾದ ದೂರೆಂದರೆ, ಶಾಮಣ್ಣ ದಾಕ್ಷಿಣ್ಯದ ಮನುಷ್ಯ, ಹೇಳಬೇಕಾದ್ದನ್ನು ನೇರವಾಗಿ ಹೇಳುವುದಿಲ್ಲ, 'ತುಂಬ ಒಳ್ಳೆಯತನ ತುಂಬ ಕೆಟ್ಟದು' ಇತ್ಯಾದಿ. ಶಾಮಣ್ಣನ ಸಮಾಜವಾದಿ ಚಳುವಳಿಯ ದಿನಗಳ ಗೆಳೆಯರೇ ಆದ ಬಿ.ಎನ್. ಶ್ರೀರಾಮ್ ಮತ್ತು ಎಚ್.ಎಲ್. ಕೇಶವಮೂರ್ತಿಯವರು, ಅವರ ಈ ಗುಣಕ್ಕೆ ಉದಾಹರಣೆಯೆಂಬಂತೆ ಉಲ್ಲೇಖಿಸುವ ಘಟನೆ ಎಂದರೆ, ಕಳೆದ ವರ್ಷದ ದಸರಾ ಉದ್ಘಾಟನೆಗೆ ತಮ್ಮ ಗೆಳೆಯ ಸಿದ್ಧರಾಮಯ್ಯನವರಿಂದ ಆಹ್ವಾನ ಪಡೆದ ಶಾಮಣ್ಣ ತಾವು ಹಿಂದೊಮ್ಮೆ ದಸರಾ ಆಚರಣೆಯನ್ನು ರಾಜಪ್ರಭುತ್ವದ ಸಂಕೇತವೆಂದು ವಿರೋಧಿಸಿ ಪ್ರತಿಭಟನೆ ನಡೆಸಿದುದನ್ನು ಮರೆತು, ಈ ಉದ್ಘಾಟನೆಗೆ ಬರುವುದಿಲ್ಲ ಎಂದು ಹೇಳಲು ಆ ತಾತ್ವಿಕ ಕಾರಣ ನೀಡದೆ, ರೈತರ ಆತ್ಮಹತ್ಯೆ, ಬೆಳೆಗೆ ಬೆಲೆ ಇಲ್ಲ ಇತ್ಯಾದಿ ಕಾರಣಗಳನ್ನು ನೀಡುತ್ತಾ ತಾವು ವಿಧಾನಸೌಧದ ಕಸ ಬೇಕಾದರೆ ಹೊಡೆಯುವೆ ಎಂಬಿತ್ಯಾದಿ ಅಸಂಬದ್ಧ ಮಾತುಗಳನ್ನಾಡಿದರು ಎಂಬುದು.

ಈ ಗೌರವ ಗ್ರಂಥದ ಸಂಪಾದಕನಾಗಿ ನಾನು ಶಾಮಣ್ಣ ಅವರ ಪರ ವಹಿಸಿ ಮಾತನಾಡುವ ಅವಶ್ಯಕತೆ ಏನಿಲ್ಲ. ಆದರೂ ದೂರುದಾರರಾದ ಈ ಹಿರಿಯ ಗೆಳೆಯರಿಗೆ ಒಂದು ಮಾತು ಹೇಳಬಹುದು: ಗೋಪಾಲಗೌಡರ ಕಾಲದಲ್ಲಿ ದಸರಾ ಭಾಗವಾಗಿ ನಡೆಯುತ್ತಿದ್ದುದು ಮಹಾರಾಜರ ಜಂಬೂ ಸವಾರಿ. ಅದು 'ಓರೋರ್ವರ ಗರ್ವದ ಕಾಲ'ದ ಪ್ರತಿಬಿಂಬದಂತಿದ್ದ ರಾಜಪ್ರಭುತ್ವದ ಸಂಕೇತ. ಆದರೀಗ ಮಹಾರಾಜರ ಜಂಬೂಸವಾರಿ ಇಲ್ಲ. ದಸರಾ ಈಗ ಒಂದು ಪರಂಪರೆಯ ಸಾಂಸ್ಕೃತಿಕ ನೆನಪಿನ ಆಚರಣೆಯಾಗಿ ತನ್ನ ಸ್ವರೂಪವನ್ನು ಬದಲಿಸಿಕೊಂಡಿದೆ. ನಾವು ಹಳೆಯ ಶೈಲಿಯ ಆಭರಣಗಳನ್ನು ಕರಗಿಸಿ ಹೊಸ ಕಾಲದ ಆಭರಣಗಳನ್ನು ಮಾಡಿಕೊಳ್ಳುವಂತೆ ನಮ್ಮ ಪರಂಪರೆಯನ್ನು ಆಧುನಿಕ ರೂಪಗಳಿಗೆ ಅಳವಡಿಸಿಕೊಳ್ಳಬೇಕು ಎಂಬ ತಮ್ಮ ವೈಚಾರಿಕ ಗುರು ಕುವೆಂಪು ಅವರ ಮಾತನ್ನು ಶಾಮಣ್ಣ ಒಪ್ಪಿ ಈಗಿನ ದಸರಾ ಆಚರಣೆಗಳನ್ನು ಮಾನ್ಯಮಾಡಿರಲೂಬಹುದು. ಇದನ್ನು ಖಚಿತಪಡಿಸಿಕೊಳ್ಳದೆ ಈ ಗೆಳೆಯರು ಹೀಗೆ ದೂರುವುದು ಸರಿಯಲ್ಲವೆಂದೇ ನನ್ನ ಅಭಿಪ್ರಾಯ. ಶಾಮಣ್ಣ ಕುವೆಂಪು ಅವರ ವಿಚಾರಶೀಲತೆಯನ್ನು ಅನುಸರಿಸಿದವರು ಎಂಬುದನ್ನೂ ನಾವಿಲ್ಲಿ ಗಮನಿಸಬೇಕಲ್ಲವೆ?

ಹೀಗೇ ಶಾಮಣ್ಣನವರ ಬಗ್ಗೆ ಸಣ್ಣಪುಟ್ಟ ಟೀಕೆಗಳು ಇವೆ. ಶಾಮಣ್ಣ ಮತ್ತು ಅವರ ಸೋದರ ದಯಾನಂದ ಅವರಿಗೆ ಸಂಬಂಧಿಸಿದಂತೆ ಚಾಲ್ತಿಯಲ್ಲಿದ್ದ 'ಆಕ್ಷೇಪಾರ್ಹ ಘಟನೆ'ಯೊಂದರ ಬಗ್ಗೆ ಸ್ವತಃ ದಯಾನಂದರೇ ಇಲ್ಲಿ ಒಂದು ಸ್ಪಷ್ಟ ಚಿತ್ರ ನೀಡಿ, ವಿವಾದದ ಸುತ್ತಲಿದ್ದ ಮಂಜನ್ನು ಕರಗಿಸಿದ್ದಾರೆ. ಸಾರ್ವಜನಿಕ ಜೀವನವನ್ನು ಇಷ್ಟು ದೀರ್ಘ ಕಾಲ ಮತ್ತು ಇಷ್ಟು ವಿಶಾಲ ತೆಕ್ಕೆಯಲ್ಲಿ ಅಪ್ಪಿಕೊಂಡ ಶಾಮಣ್ಣನ ಬಗ್ಗೆ ದೂರು–ಟೀಕೆ–ಆಕ್ಷೇಪಗಳು ಇರಲೂ ಸಾಕು. ಇದನ್ನೆಲ್ಲ ಸಂಪಾದಕರಲ್ಲೊಬ್ಬರಾದ ಗೆಳೆಯ ಎಂ.ಬಿ. ನಟರಾಜ್ ನೋಡುವುದು ಹೀಗೆ: 'ಅವರ ಸ್ವಭಾವದ ವೈಪರೀತ್ಯವನ್ನು ಅನೇಕರು 'ಏ... ಅವರದು ರಾಜಿಯಾಗುವ ಮನೋಭಾವ' ಎಂದು ವಿಶ್ಲೇಷಿಸುತ್ತಾರೆ. ಒಂದು ದಿನ, ನಾವು ಗೆಳೆಯರೆಲ್ಲ ಮಾತನಾಡುತ್ತಿರುವಾಗ, ಆರ್.ಎಸ್.ಎಸ್.ನವರ ಉಪಟಳದ ಬಗ್ಗೆ 'ಕೆರಳಿದ' ಶಾಮಣ್ಣ "ರೀ... ನಮ್ಮ ಮೇಲೆ ಕೈಹಾಕಿದ ಆ ಕಿಡಿಗೇಡಿಗಳ ವಿರುದ್ಧ ನಾವು ಯಾವಾಗ ರೀ ಸೇಡು ತೀರಿಸಿಕೊಳ್ಳೋದು...?" ಎನ್ನುತ್ತ ಬೇಸರದಿಂದ, ಅಸಹಾಯಕತೆ ಯಿಂದ ಹೊರಟರು. ಮತ್ತೆ ಎಷ್ಟೋ ದಿನ ಅವರು ಭೇಟಿಯಾಗಲಿಲ್ಲ.

ಶಾಮಣ್ಣನವರಿಗೆ ಗುರಿ ಯಾವುದೋ...? ಅವರಿಗೆ ಅವರದೇ ಆದ ದಾರಿ, ಅವರದೇ ಆದ ನಡಿಗೆ!'

ಹೌದು, ಬದುಕಿದ್ದಾಗಲೇ ಒಂದು ನಾಟಕದ ನಾಯಕ ಪಾತ್ರವಾಗಿ (ಇದನ್ನು ರಚಿಸಿರುವವರು ನಮ್ಮ ಇನ್ನೋರ್ವ ಸಂಪಾದಕರಾದ ಬಿ. ಚಂದ್ರೇಗೌಡರು) ಅಚ್ಚರಿ ಹುಟ್ಟಿಸುವ ಬದುಕು ನಡೆಸುತ್ತಿರುವ ಶಾಮಣ್ಣನಂತಹ ಹಿರಿಯ ಜೀವಗಳಿಗೆ ಅವರದೇ

ಗುರಿ. ಅವರದ್ದೇ ಆದ ದಾರಿ, ಅವರದೇ ಆದ ನಡಿಗೆ ಇರುತ್ತವೆ. ಹಾಗಾಗಿ ಅವನ್ನು ಆ ನಾಟಕವನ್ನು ಸಾವಿರಾರು ಜನ ನೋಡಿರುವಂತೆ ಅಚ್ಚರಿಯಿಂದ ನೋಡುವ ಮುಕ್ತ ಮನಸ್ಸುಗಳಷ್ಟೇ ನಮಗೆ ಸಧ್ಯಕ್ಕೆ ಬೇಕಾಗಿರುವುದು. ಆಗ ಇಂತಹ ಟೀಕೆಗಳು ಸ್ವತಃ ನಮ್ಮ ಮನಸ್ಸಿನ ಗಂಟುಗಳು ಎಂಬ ಅರಿವಾಗುತ್ತದೆ. ಈ ಗ್ರಂಥ ಇಂತಹ ಮುಕ್ತ ಮನಸ್ಸುಗಳನ್ನು ಹೆಚ್ಚೆಚ್ಚು ಸಂಖ್ಯೆಯಲ್ಲಿ ಸೃಷ್ಟಿಸುವಂತಾಗಲಿ ಎಂದೇ ಸಂಪಾದಕರ ಆಶಯ ಮತ್ತು ಹಾರೈಕೆ.

ಕೊನೆಯಲ್ಲಿ ಎಚ್.ಎಲ್. ಕೇಶವಮೂರ್ತಿಯವರು ಉಲ್ಲೇಖಿಸಿರುವ, ಶಾಮಣ್ಣ ಮತ್ತವರ ಗೆಳೆಯರ ಬಗ್ಗೆ ಅವರ ಗುರುಗಳಾದ ಡಾ. ಪ್ರಭುಶಂಕರ ಅವರು ಆಡಿದ ಮಾತುಗಳನ್ನು ಉಲ್ಲೇಖಿಸಿಯೇ ನನ್ನ ಈ ಮಾತುಗಳನ್ನು ಮುಗಿಸಿ ಈ ಮುನ್ನುಡಿ ಮಾತುಗಳ ಕ್ಷಿತಿಜವನ್ನು ಕಾಣಿಸಬೇಕಿದೆ. ಆ ಮಾತುಗಳೆಂದರೆ, 'ರಾಮದಾಸ್, ತೇಜಸ್ವಿ, ಸುಂದರೇಶ್, ಶಾಮಣ್ಣ ಇವರೆಲ್ಲ ನನ್ನ ವಿದ್ಯಾರ್ಥಿಗಳು ಅಂತ ಹೇಳ್ತಾರೆ. ಆದರೆ ಅವರನ್ನು ನಾನು ತರಗತಿಯಲ್ಲಿ ನೋಡಿದ ನೆನಪೇ ಇಲ್ಲ. ಹೀಗೆ ಬಾರದಿದ್ದುದರಿಂದಲೇ ಅವರು ಏನನ್ನಾದರೂ ಸಾಧಿಸಲು ಸಾಧ್ಯವಾಯಿತು'. ಆ ಮಾತುಗಳನ್ನು ಅವರು ಲಘುಧಾಟಿಯಲ್ಲಿ ಹೇಳಿರುವರಾದರೂ ಅದರಲ್ಲಿ ಸತ್ಯ ಇತ್ತು. ಇವರೆಲ್ಲ ಪಾರಂಪರಿಕ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಲ್ಲ. ಜನತಾ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು. ಅಲ್ಲಿ ಅವರು ಕಲಿತದ್ದೇ ಹೆಚ್ಚು.

ಹಾಗಾಗಿಯೇ ಶಾಮಣ್ಣ ಎಂದರೆ ಒಬ್ಬ ವ್ಯಕ್ತಿಯಲ್ಲ. ಒಂದು ಮೌಲ್ಯ; ಒಂದು ಬದುಕಿನ ಮಾದರಿ; ಒಂದು ಕಾಲ; ಮುಗಿಯದ ಒಂದು ಇತಿಹಾಸ.

೧೪ ಏಪ್ರಿಲ್ ೨೦೧೬

ಎಂಟು ಪುಸ್ತಕ ವಿಮರ್ಶೆಗಳು

ಆಡಾಡುತ್ತಲೇ ಮಹಾ ಪರಿವರ್ತನೆ ಸಾಧಿಸಿದವರ ಕಥೆ!

ಪುಸ್ತಕ: ಕಾಡತೊರೆಯ ಜಾಡು (ಕಡಿದಾಳು ಶಾಮಣ್ಣನವರ ಬದುಕು ಹೋರಾಟಗಳ ಕಥನ) ಸಂಗ್ರಹ ಮತ್ತು ಕೃತಿರೂಪ:**ಅಕ್ಷತಾ ಕೆ.** ಪ್ರ : **ಅಭಿನವ**, ಬೆಂಗಳೂರು **ಪುಟ: ೩೦೦ ಬೆಲೆ : ರೂ. ೧೫೦/–**

ಹಿರಿಯ ಸಮಾಜವಾದಿ ಹಾಗೂ ರೈತ ಮುಖಂಡ ಕಡಿದಾಳು ಶಾಮಣ್ಣನವರ ಬದುಕು ಹೋರಾಟಗಳ ಈ ಕಥನ ಒಂದು ರೀತಿಯಲ್ಲಿ ಅವರ ಆತ್ಮಕಥನವೆಂದರೂ ನಡೆದೀತು. ಈ ಪುಸ್ತಕದಲ್ಲಿ ಶಾಮಣ್ಣ ತಮ್ಮ ಕಥೆಯನ್ನು ಬಾಲ್ಯದಿಂದ ಈವರೆಗಿನ ನೆನಪುಗಳ ಆಧಾರದ ಮೇಲೆ, ಅವುಗಳಿಂದ ಹೆಕ್ಕಿದ ಸ್ವಾರಸ್ಯಕರ ಮತ್ತು ಕೆಲವೆಡೆ ಹೃದಯಂಗಮವೆನಿಸುವ ಪ್ರಸಂಗಗಳನ್ನು ನಿರೂಪಿಸುತ್ತಾ, ಒಂದು ಪಕ್ಕದಿಂದ ನೋಡಿದರೆ ಕಳೆದ ಅರುವತ್ತು ವರ್ಷಗಳ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಂತೆಯೂ ಕಾಣುವ ವಿಶಿಷ್ಟ ಕಥನವೊಂದನ್ನು ನಮ್ಮ ಮುಂದಿಟ್ಟಿದ್ದಾರೆ. ಇದು ವೈಯುಕ್ತಿಕ ಮತ್ತು ಸಾಮಾಜಿಕ ನೆಲೆಗಳೆರಡರಲ್ಲೂ ತುಯ್ದಾಡುತ್ತಾ ಸೃಜನ ಮತ್ತು ಸೃಜನೇತರಗಳೆಂಬ ವಿಂಗಡಣೆಗಳನ್ನು ಒಡೆದು ನಿಲ್ಲುವ ಹೊಸದೊಂದು ಸೊಬಗಿನ ಇತಿಹಾಸ ಕಥನವೂ ಆಗಿದೆ

ಎಲ್ಲ ಘನ ಸಮಾಜವಾದಿಗಳಂತೆಯೇ, ಶಾಮಣ್ಣ ಸಾಹಿತ್ಯ, ಸಂಗೀತ, ಕಲೆ, ಕೃಷಿ, ಶಿಕಾರಿ, ಅಲೆದಾಟ, ಸಮಾಜ ಸುಧಾರಣೆ, ಚಳುವಳಿ, ರಾಜಕಾರಣ ಹೀಗೆ ಬದುಕಿನ ಆಸಕ್ತಿ ಮತ್ತು ಕುತೂಹಲಗಳ ಎಲ್ಲ ಕ್ಷೇತ್ರಗಳಿಂದಲೂ ಸಾರ ಪಡೆದು ಒಂದು ಆವೃತ ಜೀವನ ದೃಷ್ಟಿಕೋನವನ್ನು ರೂಪಿಸಿಕೊಂಡ ಪರಿ ಈ ಕೃತಿಯಲ್ಲಿ ಎಷ್ಟು ವರ್ಣರಂಜಿತವಾಗಿ ನಿರೂಪಿತವಾಗಿದೆ ಎಂದರೆ, ಇದು ಲೌಕಿಕ–ಪಾರಮಾರ್ಥಿಕಗಳ ನಡುವಣ ಭೇದವನ್ನೂ ಅಳಿಸಿಹಾಕಿಬಿಡುತ್ತದೆ. ಈ ಅರ್ಥದಲ್ಲಿ ಈ ಕೃತಿ ಲೋಹಿಯಾ ರಾಜಕಾರಣದ ತಾತ್ವಿಕತೆಯನ್ನು

ಅದರ ಪಾರಿಭಾಷಿಕ ಹುದಲಿನಿಂದ ಹೊರತೆಗೆದು ಜೀವಂತ ಜೀವನ ವಿವರಗಳ ಮೂಲಕವೇ ಅದನ್ನು ಸಾಮಾನ್ಯರಿಗೂ ಪ್ರಸ್ತುತಪಡಿಸುವ ಪ್ರಯತ್ನ ಮಾಡುತ್ತದೆ. ಶಾಮಣ್ಣನವರ ಮುಖದ ಮೇಲೆ ಸದಾ ಕಂಡೂ ಕಾಣದಂತೆ ಮಿನುಗುವ ತುಂಟ ನಗೆ ಈ ಪುಸ್ತಕದುದ್ದಕ್ಕೂ ಹಾಯ್ದು ಹೋಗಿದ್ದು, ಮೂರುನೂರು ಪುಟಗಳನ್ನು ಆಯಾಸವಿಲ್ಲದಂತೆ-ಒಮ್ಮೊಮ್ಮೆ ಬಿದ್ದು ಬಿದ್ದು ನಗುವಂತೆ ಮಾಡಿಯೂ-ಓದಿಸಿಕೊಂಡು ಹೋಗುತ್ತದೆ.

ಈ ಕೃತಿಯನ್ನು ಓದುತ್ತಿದ್ದಂತೆ 'ಆಡಾಡುತ್ತಾ ಆಯುಷ್ಯ' ಎಂಬ ಗಾದೆಗೆ ಸಮನಾಂತರವಾಗಿ 'ಆಡಾಡುತ್ತಾ ಪರಿವರ್ತನೆ' ಕೂಡ ಎಂಬ ಹೊಸ ಅರಿವು ಹುಟ್ಟಿಸುವ ಘಟನಾವಳಿಗಳು ನಿಮ್ಮ ಕಣ್ಮುಂದೆ ಹಾದು ಹೋಗುತ್ತವೆ. ಶಾಮಣ್ಣ ತಮ್ಮ ಸಮಾಜವಾದಿ ಗೆಳೆಯರಾದ ತೇಜಸ್ವಿ, ಎಂಡಿಎನ್, ಸುಂದರೇಶ್, ಶ್ರೀರಾಂ, ಲಂಕೇಶ್, ರಾಮದಾಸ್ ಮುಂತಾದವರೊಂದಿಗೆ ಮೇಲ್ನೋಟಕ್ಕೆ ಹುಡುಗಾಟದಂತೆ ಕಾಣುವ ಚಟುವಟಿಕೆಗಳ ಮೂಲಕವೇ ಕರ್ನಾಟಕದ ಜನರ ಮಾನಸಿಕತೆಯಲ್ಲಿ ಎಂತಹ ನಿರ್ಣಾಯಕ ಸ್ಥಿತ್ಯಂತರಗಳಿಗೆ ಕಾರಣರಾಗಿದ್ದಾರೆ ಎಂದು ಆಶ್ಚರ್ಯವಾಗುತ್ತದೆ. ಇದೆಲ್ಲದರ ಹಿಂದೆ ಒಂದೆಡೆ ಕುವೆಂಪು ಮತ್ತೊಂದೆಡೆ ಗೋಪಾಲಗೌಡರು ಇದ್ದಾರೆಂಬುದನ್ನೂ ಇಲ್ಲಿ ದಾಖಲಿಸಬೇಕು. ಕರ್ನಾಟಕದಲ್ಲಿ ಸಮಾಜವಾದಿ ರಾಜಕಾರಣ ಸಂಪೂರ್ಣ ವಿಫಲವಾಗಿದೆ ಎನ್ನುವವರಿಗೆ ನಿಜವಾಗಿ ರಾಜಕಾರಣವೆಂದರೇನು ಎಂಬುದು ಗೊತ್ತಿಲ್ಲ ಎಂಬುದನ್ನು ಈ ಕೃತಿ ಸಾರಿ ಹೇಳುತ್ತದೆ.

ಅಕ್ಷತಾ, ಶಾಮಣ್ಣನವರ ಈ ಕಥನವನ್ನು ಅವರು ಹೇಳಿದ ಭಾಷೆಯಲ್ಲೇ, ಅದರ ಸರಳ ಸೌಂದರ್ಯ ಮತ್ತು ಸೊಗಡು-ಸುಭಗತೆಗಳು ಭಂಗಗೊಳ್ಳದಂತೆ ನಿರೂಪಿಸಿ, ಈ ಪುಸ್ತಕದ ಯಶಸ್ಸಿಗೆ ತಾವೂ ಕಾರಣರಾಗಿದ್ದಾರೆ. ಅಪಾರ ಅವರ ಮುಖಪುಟ ವಿನ್ಯಾಸ ಈ ಕೃತಿಯ ಸೊಬಗನ್ನು ಹೆಚ್ಚಿಸಿದೆ.

('ನವ ಮಾನವ', ಸೆಪ್ಟಂಬರ್, ೨೦೧೧)

ಸಮಾಜವಾದಿ ಚಿಂತನೆಗೆ ಹೊಸ ಆಯಾಮ ಮತ್ತು ತೀವ್ರತೆ

ಪುಸ್ತಕ: ಪ್ರತಿಚಿಂತನ ಲೇ: ಕಿಷನ್ ಪಟ್ನಾಯಕ್ ಕನ್ನಡಕ್ಕೆ: ಹಸನ್ ನಯೀಂ ಸುರಕೋಡ ಪ್ರ: ಲೋಹಿಯಾ ಪ್ರಕಾಶನ, ಬಳ್ಳಾರಿ, ಪು: ೩೭೨ ಬೆಲೆ: ರೂ. ೧೫೦/-

'ಲೋಹಿಯಾರನ್ನು, ಅವರ ಜೀವಿತ ಕಾಲದಲ್ಲಿ ವಿಶ್ವವಿದ್ಯಾಲಯಗಳ ಆವರಣದೊಳಕ್ಕೆ ಪ್ರವೇಶಿಸದಂತೆ ನೋಡಿಕೊಂಡ ನಮ್ಮ ಅಧ್ಯಾಪಕ-ಬುದ್ಧಿಜೀವಿಗಳ ವ್ಯೂಹ ಒಂದು ನೀಚರ ವ್ಯೂಹ' ಎಂದು ತೇಜಸ್ವಿ ಬರೆದಿದ್ದಾರೆ. ಈ ಮಾತು ನನಗೆ ಮತ್ತೆ ಮತ್ತೆ ನೆನಪಿಗೆ

ಬರುತ್ತಿದ್ದುದು, ಲೋಹಿಯಾರ ನಿಜ ತಾತ್ವಿಕ ವಾರಸುದಾರರೆನಿಸಿರುವ ಮತ್ತು ಕರ್ನಾಟಕದ ಅಳಿದುಳಿದ ಸಮಾಜವಾದಿಗಳ ಆಪ್ತ ಒಡನಾಡಿಯೆನಿಸಿ ತಮ್ಮ ನಿಧನ ಕಾಲದವರೆಗೂ ರಾಜ್ಯಕ್ಕೆ ವರ್ಷದಲ್ಲಿ ಹಲವು ಸಲ ಬಂದು ಹೋಗುತ್ತಿದ್ದ ಕಿಷನ್ ಪಟ್ನಾಯಕರನ್ನು ನೋಡಿದಾಗ. ಕಾಲ ಬದಲಾಗಿಲ್ಲ. ಅವರನ್ನು, ಅವರ ವಿಚಾರಗಳನ್ನು ನಮ್ಮ ವಿಶ್ವವಿದ್ಯಾಲಯಗಳ ಬುದ್ಧಿಜೀವಿಗಳು ತಮ್ಮ ವಿದ್ಯಾರ್ಥಿ ಸಮುದಾಯಕ್ಕಾಗಲೀ, ಸಂಶೋಧಕ ಸಮೂಹಕ್ಕಾಗಲೀ ಪರಿಚಯಿಸುವ ಆಸಕ್ತಿ ತೋರಲಿಲ್ಲ. ಈ ವಿಶ್ವವಿದ್ಯಾಲಯಗಳಲ್ಲಿ ಇಂತಹ ವಿಸ್ತರಣಾ ಕೆಲಸಗಳಿಗೆಂದೇ ಸ್ಥಾಪಿಸಲಾಗಿರುವ ಹಲವು ಅಧ್ಯಯನ ಪೀಠಗಳಿದ್ದರೂ!

ಕಿಷನ್ ಪಟ್ನಾಯಕರ ಆಯ್ದ ಹಿಂದಿ ಲೇಖನಗಳ ಕನ್ನಡ ಅನುವಾದ ಸಂಗ್ರಹ 'ಪ್ರತಿಚಿಂತನೆ'ಯನ್ನು ಪಟ್ಟಾಗಿ ಕೂತು ಓದತೊಡಗಿದ್ದ ಸಮಯದಲ್ಲಿ ಈ ಎಲ್ಲ ಆಲೋಚನೆಗಳು ನನ್ನ ಮನಸ್ಸಿನಲ್ಲಿ ಹಾದು ಹೋದವು. ಲೋಹಿಯಾ, ಗಾಂಧಿ ನಂತರ ಭಾರತ ಕಂಡ ಅತ್ಯಂತ ಉಜ್ವಲ ಚಿಂತಕ ಎಂದು ಬಲ್ಲವರು ಹೇಳುವುದುಂಟು. ಬಹುಶಃ ಕಿಷನ್ ಲೋಹಿಯಾ ನಂತರದ ಬಹು ಮುಖ್ಯ ಚಿಂತಕರಲ್ಲೊಬ್ಬರು ಎಂಬ ಭಾವನೆ ಈ ಪುಸ್ತಕವನ್ನು ಓದಿದ ಯಾರಲ್ಲಾದರೂ ಮೂಡಿದರೆ ಆಶ್ಚರ್ಯವಿಲ್ಲ. ಕಳೆದ ಮುವ್ವತ್ತು ವರ್ಷಗಳಲ್ಲಿ ಅವರು ಬರೆದ ಸುಮಾರು ೪೫ ಲೇಖನಗಳನ್ನು ಹಸನ್ ನಯೀಂ ಸುರಕೋಡರು ಇಲ್ಲಿ ಕನ್ನಡಕ್ಕೆ ಅನುವಾದಿಸಿ ನೀಡಿದ್ದಾರೆ. ಲೋಹಿಯಾ ಪ್ರಕಾಶನದ ಚೆನ್ನಬಸವಣ್ಣ ಇದನ್ನು ಪ್ರಕಟಿಸಿದ್ದಾರೆ. ಈ ಇಬ್ಬರನ್ನೂ ಕನ್ನಡ ವಿಚಾರವಂತ ಜನತೆ ಹೃತ್ಪೂರ್ವಕವಾಗಿ ಅಭಿನಂದಿಸಬೇಕಿದೆ. ಏಕೆಂದರೆ, ಕನ್ನಡ ವಿಚಾರಲೋಕಕ್ಕೆ ಸಮಾಜವಾದಿ ರಾಜಕೀಯ ಚಿಂತನೆಯ ವಿವಿಧ ಮಗ್ಗಲುಗಳು ಹೊಸದೇನಲ್ಲವಾದರೂ, ಇಲ್ಲಿನ ಲೇಖನಗಳಲ್ಲಿ ಅವುಗಳಿಗೆ ಒದಗಿರುವ ಹೊಸ ಆಯಾಮ ಮತ್ತು ತೀವ್ರತೆಗಳು ಬೆರಗನ್ನುಂಟುಮಾಡುವಂತಹವು. 'ವಿಕಲ್ಪಹೀನ್ ನಹೀಂ ದುನಿಯಾ' ಎಂಬ ಮೂಲ ಹಿಂದಿ ಲೇಖನಗಳ ಸಂಗ್ರಹದ ಶೀರ್ಷಿಕೆಯೇ ಸೂಚಿಸುವಂತೆ, ಕಿಷನ್ ಈ ಲೇಖನಗಳಲ್ಲಿ ಆಧುನಿಕ ನಾಗರಿಕತೆಯನ್ನು ಗಾಂಧಿ, ಮಾರ್ಕ್ಸ್ ಮತ್ತು ಲೋಹಿಯಾ ಅವರ ವಿಚಾರಗಳ ನೆಲೆಯಿಂದ ನೋಡುತ್ತಲೇ, ವಿವರಗಳಲ್ಲಿ ಇಂದಿಗೆ ಅನ್ವಯಿಸಿದಂತೆ ಅವುಗಳ ಮಿತಿಗಳನ್ನೂ ಗುರುತಿಸಿ ವಿಸ್ತರಿಸುವಲ್ಲಿ ತೋರುವ ಪ್ರತಿಭೆ ಉಜ್ವಲವೆನಿಸುವಂತಿದೆ. ವಿಶೇಷವಾಗಿ ಗಾಂಧೀಜಿಯನ್ನು ವಿಮರ್ಶೆಗೆ ಗುರಿ ಮಾಡುವ ಅವರ ವಿಶಿಷ್ಟ ಶೈಲಿ. ಇದಕ್ಕೊಂದು ಸಣ್ಣ ಉದಾಹರಣೆ, ಕುತೂಹಲಕಾರಿ ಶೀರ್ಷಿಕೆಯ 'ಗಾಂಧಿಯ ಡಂಭಾಚಾರ' ಎಂಬ ಲೇಖನ.

ಮುಖ್ಯವಾಗಿ 'ನಾಗರಿಕತೆಯ ಬಿಕ್ಕಟ್ಟು', 'ಗಾಂಧಿಯ ಮರ್ಮ', 'ಬುದ್ಧಿಜೀವಿ, ಪತ್ರಿಕೋದ್ಯಮ ಹಾಗೂ ಪ್ರತಿಕ್ರಾಂತಿ' ಮತ್ತು 'ಜಾತ್ಯತೀತತೆ ಹಾಗೂ ಅದರ ಸೋಗು' ಎಂಬ ನಾಲ್ಕು ವಿಭಾಗಗಳಲ್ಲಿ ವಿಂಗಡಿತವಾಗಿರುವ ಇಲ್ಲಿನ ಲೇಖನಗಳಲ್ಲಿ ಕಿಷನ್ ತಮ್ಮ ಗುರು ಲೋಹಿಯಾ ಮತ್ತು ಅವರ ಗುರು ಗಾಂಧಿಯವರ ಚಿಂತನೆಗಳನ್ನು ಅಪ್ರಸ್ತುತಗೊಳಿಸುವಂತಹ ರಾಜಕೀಯ ವಾತಾವರಣ ನಿರ್ಮಾಣವಾದ ಬಗೆ ಮತ್ತು ಈ

ಇಂತಹ ಸಂದರ್ಭದಲ್ಲಿ ಸಮಾಜವಾದಿಗಳೆನಿಸಿಕೊಂಡವರು ಕಂಡುಕೊಳ್ಳಬೇಕಾದ ಆಲೋಚನೆಗಳ ಹೊಸ ದಿಕ್ಕುಗಳನ್ನು ಕುರಿತು ಅಪೂರ್ವವೆನಿಸುವ ಒಳನೋಟಗಳೊಂದಿಗೆ ಬರೆಯುತ್ತಾರೆ. ನಮ್ಮ ಪ್ರಸಿದ್ಧ ವಿದ್ವಾಂಸರು ತಮ್ಮ ವರ್ಣ ಮತ್ತು ವರ್ಗ ಹಿನ್ನೆಲೆಗಳೇ ಕಾರಣವಾಗಿ ಈವರೆಗೆ ಹೆಚ್ಚು ಗಮನ ನೀಡದಿದ್ದ ಚರಿತ್ರೆಯ ಹಲವು ಸಂಗತಿಗಳನ್ನು, ವಿವರಗಳನ್ನು ಮುನ್ನೆಲೆಗೆ ತಂದುಕೊಂಡು ಅವರು ಈ ಲೇಖನಗಳನ್ನು ಎಷ್ಟು ತೀಕ್ಷ್ಣವಾಗಿ ಬರೆದಿದ್ದಾರೆಂದರೆ, ಓದುವ ನಾವು ನಮ್ಮ ಬೌದ್ಧಿಕ ಒಳಗನ್ನು ಒಮ್ಮೆ ಮುಟ್ಟಿ ನೋಡಿಕೊಳ್ಳುವಂತಾಗುತ್ತದೆ. 'ಗಾಂಧಿಯ ಭಾರತ ಬಿಟ್ಟು ತೊಲಗಿ ಆಂದೋಲನ' ಎಂಬ ಲೇಖನ ಇದಕ್ಕೊಂದು ಉದಾಹರಣೆ.

'ನಾವು ಸಮರ್ಥಿಸುವಂತಹ ಸಾಮಾಜಿಕ ಬದಲಾವಣೆ ಹಾಗೂ ನಾವು ಪ್ರೋತ್ಸಾಹಿಸುವಂತಹ ನೀತಿಗಳನ್ನು ಕಡೆಗೂ ಪರೀಕ್ಷಿಸಬೇಕಾದರೆ, ಇವುಗಳಿಂದ ನೈತಿಕತೆ ವೃದ್ಧಿಸುತ್ತದೆಯೇ, ಅಸಮಾನತೆಗಳು ತಗ್ಗುತ್ತವೆಯೇ ಎನ್ನುವುದೇ ಒರೆಗಲ್ಲು' ಎಂಬ ಸ್ಪಷ್ಟ ಮತ್ತು ದೃಢನಂಬಿಕೆಯಿಂದ ಜಾಗತೀಕರಣಕ್ಕೆ ಪರ್ಯಾಯವಾಗಿ ಹೊಸ ಹದದ ರಾಜಕೀಯ ಚಿಂತನೆಯನ್ನು ಅನ್ವೇಷಿಸಹೊರಟಂತಿರುವ ಕಿಷನ್ ಇದಕ್ಕೆ ಅಗತ್ಯವಾದ ಗಂಭೀರ ಚರ್ಚೆಗಳ ವಾತಾವರಣವನ್ನೇ ತಮ್ಮ ರೋಚಕ 'ಮಾತಿನ ಪ್ರದರ್ಶನ'ಗಳ ಮೂಲಕ ಇಲ್ಲವಾಗಿಸುತ್ತಿರುವ ನವಮಾಧ್ಯಮಗಳು ಮತ್ತು ಅವುಗಳನ್ನು ಪೋಷಿಸುತ್ತಿರುವ ನವ ಬುದ್ಧಿಜೀವಿಗಳ ನಡುವಣ ರಾಜಕೀಯ ಜಾಲವನ್ನು ತಮ್ಮ ಲೇಖನಗಳಲ್ಲಿ ಸೂಕ್ಷ್ಮ ಪರಿಶೀಲನೆಗೆ ಒಡ್ಡುತ್ತಾರೆ. ಆ ಮೂಲಕ ಜಾಗತೀಕರಣದ ಶಕ್ತಿಗಳು ಹುಟ್ಟಿಹಾಕಿರುವ ಹೊಸ ಬೌದ್ಧಿಕತೆಯ ಹುಸಿತನವನ್ನೂ ಬಯಲುಗೊಳಿಸುತ್ತಾರೆ.

ಹೀಗೆ ಒಟ್ಟಾರೆ ಶ್ರೇಷ್ಠ ಸಮಾಜವಾದಿಯೊಬ್ಬನ ಆವೃತ ಜೀವನ ದೃಷ್ಟಿಯನ್ನು ಅದರೆಲ್ಲ ತಾತ್ವಿಕ ಸೌಂದರ್ಯದೊಂದಿಗೆ ಅನಾವರಣಗೊಳಿಸುವ ಈ ಪುಸ್ತಕದ ಅನುವಾದ ಅಲ್ಲಲ್ಲಿ ತೊಂದರೆ ಕೊಡುವುದೂ ನಿಜ. ಆದರೆ ಇದು ಪುಸ್ತಕದ ಒಟ್ಟಾರೆ ಬೌದ್ಧಿಕ ಘನತೆಯನ್ನು ಅರಿಯುವಲ್ಲಿ ಅಡ್ಡಿಯಾಗಲಾರದು. ಈ ಪುಸ್ತಕ ಹೊರಬಂದು ಎರಡು ವರ್ಷಗಳಾದರೂ ಈ ಪುಸ್ತಕದ ಬಗ್ಗೆ ಕನ್ನಡ ಬೌದ್ಧಿಕ ಲೋಕದಲ್ಲಿ ಎಲ್ಲೂ ಸೊಲ್ಲೇ ಇಲ್ಲ ಎಂಬುದು ಏನನ್ನು ಸೂಚಿಸುತ್ತದೆ ಎಂಬ ಪ್ರಶ್ನೆಯನ್ನು ಇಲ್ಲಿ ಕೇಳುವುದು ಅಪ್ರಸ್ತುತವಾಗಲಾರದು.

('ನವ ಮಾನವ', ನವೆಂಬರ್, ೨೦೧೧)

ವಿಶಿಷ್ಟ ಸಾಂಸ್ಕೃತಿಕ–ರಾಜಕೀಯ ನೋಟದ ಅಂಕಣ ಬರಹಗಳು

ಪುಸ್ತಕ: ಹುಡುಕಾಟ ಲೇ: ಎನ್.ಎಸ್.ಶಂಕರ್, ಪ್ರ: ಪ್ರೆಸ್‌ಕ್ಲಬ್ ಪ್ರಕಾಶನ, ಬೆಂಗಳೂರು ಪು: ೩೩೦+iv ಬೆಲೆ: ರೂ.೨೦೦/-

ಎನ್.ಎಸ್.ಶಂಕರ್ ನಮ್ಮ ತಲೆಮಾರಿನ ಬಹುಮುಖ ಪ್ರತಿಭೆಗಳಲ್ಲೊಬ್ಬರು. ಆದರೆ ಇತರ ಇಂತಹ ಬಹುಪಾಲು ಪ್ರತಿಭೆಗಳಂತೆ ಸಾರ್ವಜನಿಕವಾಗಿ ಗದ್ದಲ ಮಾಡದೆ ಸದಾ ಸಾರ್ವಜನಿಕ ಜೀವನದ ಹಿನ್ನೆಲೆಯಲ್ಲಿದ್ದುಕೊಂಡೇ ಅದಕ್ಕೆ ತಮ್ಮ ಪ್ರತಿಭೆ, ಜಾಣ್ಮೆ ಹಾಗೂ ವಿವೇಕಗಳ ಕೊಡುಗೆ ನೀಡುತ್ತಿರುವವರು. ಅವರ 'ಹುಡುಕಾಟ' ಎಂಬ ಈ ಅಂಕಣ ಬರಹಗಳ ಸಂಕಲನವನ್ನು ಅವರು ಸಮಕಾಲೀನ ಬರಹಗಳು ಎಂದು ಕರೆದುಕೊಂಡಿದ್ದಾರೆ. ಅದಕ್ಕೆ ತಕ್ಕಂತೆ ಇಲ್ಲಿನ ಸುಮಾರು ನಲವತ್ತೈದು ಬರಹಗಳು ಕಳೆದ ಐದು ವರ್ಷಗಳಲ್ಲಿನ ಸಾರ್ವಜನಿಕ ವಿದ್ಯಮಾನಗಳಿಗೆ ಬರೆದ ವ್ಯಾಖ್ಯಾನಗಳಂತಿವೆ.

ಶಂಕರ್ ಅವರ ಬಹುಮುಖ ಆಸಕ್ತಿಗಳಿಗೆ ತಕ್ಕಂತೆ ಈ ಬರಹಗಳು ರಾಜಕಾರಣ, ಸಾಹಿತ್ಯ, ಸಿನಿಮಾ, ಚಳುವಳಿ, ತಾತ್ವಿಕ ದರ್ಶನ ಇತ್ಯಾದಿ ಕ್ಷೇತ್ರಗಳಲ್ಲಿ ಹರಡಿಕೊಂಡಿವೆ. ತಾವು ಮೆಚ್ಚಿ ತಮ್ಮ ನೋಟದ ತಾತ್ವಿಕತೆಯಾಗಿ ಒಪ್ಪಿಕೊಂಡಂತೆ ಕಾಣುವ ಲೋಹಿಯಾ ತತ್ವಚಿಂತನೆಯ ಬೆಳಕಲ್ಲಿ ಅವರು ತಮ್ಮ ಸುತ್ತಲಿನ ವಿದ್ಯಮಾನಗಳನ್ನು ಗ್ರಹಿಸಿ ವಿಮರ್ಶೆಗೆ ಒಡ್ಡುತ್ತಾರೆ. ಲೋಹಿಯಾ ಎಂದ ಮೇಲೆ ಅಲ್ಲಿ ಗಾಂಧಿ ಮತ್ತು ಅಂಬೇಡ್ಕರ್ ಇರಲೇಬೇಕಲ್ಲ! ಎಷ್ಟಾದರೂ ಶಂಕರ್ ಸ್ವಾತಂತ್ರ್ಯ ಹೋರಾಟಗಾರನೊಬ್ಬನ ಮಗ ಹಾಗೂ ಕರ್ನಾಟಕ ಕಂಡ ಎರಡು ಮಹತ್ವದ ಚಳುವಳಿಗಳೆನಿಸಿದ ದಲಿತ ಮತ್ತು ರೈತ ಚಳುವಳಿಗಳ ಒಡನಾಡಿ. ಹಾಗಾಗಿ ಇಲ್ಲಿನ ಬಹಳಷ್ಟು ಬರಹಗಳಿಗೆ ತುರ್ತು, ತೀವ್ರತೆ ಮತ್ತು ಜೀವಂತಿಕೆಗಳು ತಾವಾಗಿ ಒದಗಿ ಬಂದಿವೆ. ಭೈರಪ್ಪನವರ 'ಅನಾವರಣ' ಹಾಗೂ ದಲಿತ–ರೈತ ಚಳುವಳಿಗಳ 'ಅವಸಾನ' ಕುರಿತ ಬರಹಗಳನ್ನು ಬಿಟ್ಟರೆ ಇಲ್ಲಿರುವ ಬಹುಪಾಲು ಬರಹಗಳು 'ಉಷಾ ಕಿರಣ' ಎಂಬ ವಾರ ಪತ್ರಿಕೆಗೆ ಬರೆದ ಕಿರುಅಂಕಣಗಳು, ಒಂದೆರಡು, ಧಾರಾವಾಹಿಗಳಾಗಿ ಸ್ವಲ್ಪ ಅತಿಯೆನಿಸುವಷ್ಟು ಉದ್ದವಿದ್ದವಿರುವುದು. ಹಾಗಾಗಿ ಇಲ್ಲಿ 'ತಲಸ್ಪರ್ಶಿ' ಎನ್ನಬಹುದಾದ ವಿಷಯಗಳು ಕಡಿಮೆ. ಆದರೆ ಒಂದು ವಿದ್ಯಮಾನದ ಕೇಂದ್ರವನ್ನು ತಮ್ಮದೇ ವಿಶಿಷ್ಟ ಸಾಂಸ್ಕೃತಿಕ–ರಾಜಕೀಯ ನೋಟದ ಮೂಲಕ ಹಿಡಿದಿಡುವ ಪ್ರತಿಭೆಯನ್ನು ಈ ಎಲ್ಲ ಅಂಕಣಗಳಲ್ಲಿಯೂ ಕಾಣಬಹುದು. 'ಗೋರಿ ಸೀಳುವ ತವಕ', 'ಪರ್ಯಾಯ ರಾಜಕಾರಣ', 'ತತ್ವದ ಪರದೆಗಳು', 'ಬಂದೂಕಿನ ಭಾಷೆ', 'ತಲಪರಿಗೆ', 'ಕೂಚಂಭಟ್ಟರ ಪುರಾಣ', 'ಗಾಂಧಿಯೋ ಅಂಬೇಡ್ಕರರೋ?', 'ರಾಜ್ ಕೊಟ್ಟದ್ದೇನು?' ಇತ್ಯಾದಿಗಳು ಈ ಪ್ರತಿಭೆಗೆ ಸಾಕ್ಷಿಯಂತಿವೆ. ಹಾಗೇ ಇಂದಿರಾ, ಅರಸು ಮತ್ತು ಎರಡು ಚುನಾವಣೆಗಳನ್ನು ಕುರಿತ ವಿಶ್ಲೇಷಣೆಗಳು, ಬೆಂಗಳೂರು ಐ.ಟಿ.ಉದ್ಯಮ ಹಾಗೂ ಹೆಗಡೆ ರಾಜಕಾರಣ ಕುರಿತ ಬರಹಗಳು, ಲೋಹಿಯಾವಾದಿ ಸಾಮಾಜಿಕ ನ್ಯಾಯದ ರಾಜಕಾರಣ ಇನ್ನೂ ಕೆಲವರಲ್ಲಾದರೂ ತನ್ನ ಸಮತೋಲನವನ್ನು ಉಳಿಸಿಕೊಂಡಿರುವುದರ ಬಗ್ಗೆ ಭರವಸೆ ನೀಡುತ್ತವೆ.

'ಸಾವಿನ ಹೊಸ್ತಿಲಲ್ಲಿ', 'ನಿಶ್ಯಬ್ದದ ಭೀತಿ', 'ಒಡೆದು ಬಿದ್ದ ಕೊಳಲ ನಾದ...' ಮತ್ತು ಮಾಂಟೋ ಕುರಿತ ಬರಹಗಳಲ್ಲಿ ಶಂಕರ್ ಅವರ ತೀವ್ರ ಸಂವೇದನೆಯ ಸೂಕ್ಷ್ಮಗಳು

ಭಾಷೆಯಲ್ಲಿ ಒಡಮೂಡುವ ಪರಿ ಅವರನ್ನೊಬ್ಬ ಸೃಜನಶೀಲ ಲೇಖಕನ್ನಾಗಿಯೂ ಪ್ರಸ್ತುಪಡಿಸುವಂತಿವೆ. ನಮ್ಮ ವಿಶಿಷ್ಟ ಸಿನಿಮಾ ನಿರ್ದೇಶಕರೂ ಆದ ಶಂಕರ್ ಇಲ್ಲಿ ಸಿನಿಮಾ ಲೋಕ ಮತ್ತು ಪುಸ್ತಕಗಳನ್ನು ಕುರಿತು ಬರೆದಿರುವ ಬರಹಗಳು ಅವರ ಸಾಂಸ್ಕೃತಿಕ ಪ್ರಜ್ಞೆಯ ಸಮಗ್ರತೆಯನ್ನು ಪರಿಚಯ ಮಾಡಿಕೊಡುವಂತಿವೆ. ಆದರೆ ದಲಿತ-ರೈತ ಚಳುವಳಿ ಕುರಿತ ಮಹತ್ವಾಕಾಂಕ್ಷೆಯ ಬರಹ ಅದರ ಮಹತ್ವಾಕಾಂಕ್ಷೆಯ ಭಾರದಿಂದಲೇ ನಲುಗಿದಂತಿದೆ. ಅಲ್ಲಿ ಇನ್ನೂ ಆಳವಾದ ಚಾರಿತ್ರಿಕ ನೋಟದ ಮತ್ತು ಅಗತ್ಯ ಸಹಾನುಭೂತಿಯ ಕೊರತೆ ಕಾಣುತ್ತದೆ. ಪ್ರತಿವಾರ ಓದುಗರ ಕುತೂಹಲ ಉಳಿಸಿಕೊಂಡು ಬರೆಯುವುದು ಪ್ರಯಾಸದ ಕೆಲಸವೇ ಸರಿ. ಆ ಪ್ರಯಾಸ ಇಲ್ಲಿ ಕೆಲವು ಲೇಖನಗಳಲ್ಲೂ ಕಾಣಸಿಗುತ್ತದೆ. ಉದಾ: 'ಆ ಕಮಲ್ ಎಲ್ಲಿ?', 'ಒಂದು ತಾರ್ಕಿಕ ಕಥೆ' ಇತ್ಯಾದಿ. ಅಲ್ಲದೇ, ಕುತೂಹಲ ಉಳಿಸಿಕೊಳ್ಳಲು, ಹೇಳಬೇಕಾದುದನ್ನು ಆಕರ್ಷಕವಾಗಿ ಕಥನ ರೂಪದಲ್ಲಿ ಹೇಳುವ ಜನಪ್ರಿಯ ಪತ್ರಿಕಾ ಬರಹದ ಶೈಲಿ ಇಲ್ಲಿ ಹಲವೆಡೆ ವಿಷಯವೊಂದರ ಗಹನತೆ ಮತ್ತು ಪರಿಣಾಮಶೀಲತೆಯನ್ನು ಭಂಗಗೊಳಿಸಿವೆ ಎಂದೂ ಅನ್ನಿಸದಿರದು.

('ನವ ಮಾನವ', ಫೆಬ್ರುವರಿ, ೨೦೧೨)

ವಿದ್ವತ್ಪೂರ್ಣತೆಯ ಬೆಡಗಿನಲ್ಲಿ ಲೋಹಿಯಾ

ಪುಸ್ತಕ: ಮತ್ತೆ ಮತ್ತೆ ಲೋಹಿಯಾ ಲೇ: ರಾಜಾರಾಮ ತೋಳ್ಪಾಡಿ ಪ್ರ: ಅಹರ್ನಿಶಿ ಪ್ರಕಾಶನ, ಶಿವಮೊಗ್ಗ ಪು:೧೧೨ ಬೆಲೆ: ರೂ. ೭೫/

ಕಳೆದ ತೊಂಭತ್ತರ ದಶಕದಲ್ಲಿ ಅಂಬೇಡ್ಕರ್ ಅವರ ಜನ್ಮ ಶತಮಾನೋತ್ಸವ ಆಚರಣೆ ಅಂಬೇಡ್ಕರ್ ಕುರಿತಂತೆ ಒಟ್ಟಾರೆ ಸಮಾಜದಲ್ಲಿ ಹೊಸ ಜಾಗೃತಿ ಮತ್ತು ಅಧ್ಯಯನಗಳಿಗೆ ಕುಮ್ಮಕ್ಕು ನೀಡಿತು. ಹಾಗೇ, ಈ ದಶಕದ ಲೋಹಿಯಾ ಅವರ ಜನ್ಮ ಶತಮಾನೋತ್ಸವವು ಅಂಬೇಡ್ಕರರ ಶತಮಾನೋತ್ಸವದಂತೆ ಅಧಿಕೃತ ಮಾನ್ಯತೆ ಮತ್ತು ಸಂಭ್ರಮದೊಂದಿಗೆ ಆಚರಿಸಲ್ಪಡಲಿಲ್ಲವಾದರೂ, ಲೋಹಿಯಾ ಕುರಿತು ಹೊಸ ಆಸಕ್ತಿ ಮತ್ತು ಉತ್ಸಾಹಗಳನ್ನು ವಿದ್ವದ್ವಲಯಗಳಲ್ಲಾದರೂ ಉದ್ದೀಪಿಸಿರುವುದನ್ನು ನಾವು ಕಾಣಬಹುದು. ನಮ್ಮ ರಾಜಕೀಯ ಅಧ್ಯಯನಗಳು ಜಾಗತೀಕರಣದೆದುರು ಒಂದು ರೀತಿಯ ತಾತ್ವಿಕ ಸ್ಥಗಿತತೆಗೆ ಬಂದು ತಲುಪಿರುವುದೂ, ಲೋಹಿಯಾ ಚಿಂತನೆಗಳು ಇದಕ್ಕೆ ಹೊರದಾರಿಯ ಸೂಚನೆಗಳನ್ನು ನೀಡಬಲ್ಲವೆಂಬ ಅರಿವೂ ಇದಕ್ಕೆ ಕಾರಣವಾಗಿರಬಹುದು. ಕಳೆದ ಎರಡು ಮೂರು ವರ್ಷಗಳಲ್ಲಿ ನಿರ್ದಿಷ್ಟವಾಗಿ ಕನ್ನಡದಲ್ಲಿ ಲೋಹಿಯಾ ಕುರಿತಂತೆ ಹತ್ತಾರು ಪುಸ್ತಕಗಳು ಹೊರಬಂದಿವೆ. ಅವುಗಳಲ್ಲಿ ಈ ಪುಸ್ತಕ ವಿಶಿಷ್ಟವೆನಿಸುವ ಒಂದು ಕೃತಿ.

ಲೋಹಿಯಾ ಕರ್ನಾಟಕದ ಸಾರ್ವಜನಿಕ ಬದುಕಿಗೆ ಹಾಗೂ ಕನ್ನಡ ಪ್ರಜ್ಞೆಗೆ ಅಪರಿಚಿತರೇನೂ ಅಲ್ಲ. ರಾಜ್ಯದ ರಾಜಕಾರಣವಲ್ಲದೆ, ಸಾಹಿತ್ಯಿಕ-ಸಾಂಸ್ಕೃತಿಕ ಕ್ಷೇತ್ರಗಳಲ್ಲೂ

ಅವರ ನೆನಪು ಈಗಲೂ ಸ್ಥಾಯಿಯಾಗಿ ಉಳಿದಿದೆ. ಇದಕ್ಕೆ ಲೋಹಿಯಾರ ರಾಜಕಾರಣ ಆತ್ಯಂತಿಕವಾಗಿ ಸಾಂಸ್ಕೃತಿಕ ಆಶಯವುಳ್ಳದ್ದಾಗಿದ್ದೂ ಕಾರಣವಾಗಿರಬಹುದು. ತೋಳ್ಪಾಡಿಯವರ ಈ ಪುಸ್ತಕ ಇದನ್ನು ಪ್ರಧಾನವಾಗಿ ಗುರುತಿಸಿ ಲೋಹಿಯಾರ ರಾಜಕಾರಣ ಒಬ್ಬ ದಾರ್ಶನಿಕನ ಸತ್ಯಾನ್ವೇಷಣೆಯ ಪ್ರಯೋಗದಂತೆಯೂ ಪರಿಭಾವಿಸಬಹುದಾಗಿದೆ ಎಂಬ ಅರಿವಿನಲ್ಲಿ ಅವರ ವ್ಯಕ್ತಿ ಚಿತ್ರವನ್ನು ಕಟ್ಟಿಕೊಡುತ್ತದೆ. ತೋಳ್ಪಾಡಿ ಮೂಲತಃ ವಿಶ್ವವಿದ್ಯಾಲಯದ ಅಧ್ಯಯನಕಾರರಾದ್ದರಿಂದ, ಅವರ ಗ್ರಹಿಕೆ ಮತ್ತು ಸಹಜವಾಗಿ ಅವರ ಬರವಣಿಗೆಯೂ ಬೌದ್ಧಿಕ ಪರಿಭಾಷೆ ಮತ್ತು ಶೈಲಿಯಲ್ಲಿದ್ದು ಒಂದು ವಿದ್ವತ್ಪೂರ್ಣತೆಯ ಬೆಡಗನ್ನೂ ಪಡೆಯುತ್ತದೆ. ಆದರೂ ಎಲ್ಲವನ್ನೂ ನಮ್ಮ ವಿಶ್ವವಿದ್ಯಾಲಯಗಳ ಆಳುವ ಭಾಷೆಯಾದ ಕಲಿತ ಇಂಗ್ಲಿಷ್ ಭಾಷೆಯ ಜಾಯಮಾನ ಮತ್ತು ಅದು ಒತ್ತಾಯಿಸುವ ಅದರ ಅನುವಾದಕ ಭಾಷೆಯಲ್ಲೇ ಹೇಳಬೇಕಾದ ದೌರ್ಬಲ್ಯವೂ ಅಲ್ಲಲ್ಲಿ ಎದ್ದು ಕಂಡು, ಲೋಹಿಯಾರಂತಹ ಲೋಹಿಯಾರೂ ನಮ್ಮ ಬೌದ್ಧಿಕತೆಯ ಮಾತೃಕೋಶಕ್ಕೆ ಅಪರಿಚಿತರಾಗಿ ಕಾಣುವಂತಾಗುತ್ತಾರೆ! ಈ ದೌರ್ಬಲ್ಯದ ಹೊರತಾಗಿ, ಈ ಪುಸ್ತಕ ಲೋಹಿಯಾರ ಬೌದ್ಧಿಕ ವ್ಯಕ್ತಿತ್ವ ಮತ್ತು ರಾಜಕೀಯ ಹೋರಾಟಗಳ ವ್ಯಕ್ತಿತ್ವಗಳೆರಡನ್ನೂ ಅವುಗಳೆಲ್ಲ ತಾತ್ವಿಕ ಸಂಕೀರ್ಣತೆಗಳೊಂದಿಗೆ ಪರಿಚಯ ಮಾಡಿಕೊಡುವಲ್ಲಿ ಯಶಸ್ವಿಯಾಗಿದೆ. ಈ ದೃಷ್ಟಿಯಿಂದ ಈ ಪುಸ್ತಕ ಕನ್ನಡದಲ್ಲಿನ ಲೋಹಿಯಾ ಸಾಹಿತ್ಯಕ್ಕೆ ಒಂದು ಮೌಲಿಕ ಕೊಡುಗೆಯೇ ಹೌದು.

ಅದರೆ ತೋಳ್ಪಾಡಿಯವರು ಈ ಪುಸ್ತಕದಲ್ಲಿ ಲೋಹಿಯಾ ರೂಪಿಸಿಕೊಂಡ ಲೋಕಗ್ರಹಿಕೆಯ ವಿಧಾನಕ್ಕೆ ಸಂಬಂಧಪಟ್ಟಂತೆ ಒಂದು ಬಹುಮುಖ್ಯ ತಾತ್ವಿಕ ಅಂಶದ ಕಡೆಗೆ ಗಮನ ಹರಿಸದಿರುವುದು ಆಶ್ಚರ್ಯಕರವೆನ್ನಿಸುತ್ತದೆ. ಲೋಕವನ್ನು ಐತಿಹಾಸಿಕ ನೆಲೆಯಲ್ಲಿ ಅರ್ಥೈಸಿಕೊಳ್ಳಲು ಯೂರೋಪ್‌ನಲ್ಲಿ ನಡೆದಿದ್ದ ವೈಚಾರಿಕ ಪ್ರಯತ್ನಗಳ ಮೂಲ ಲಕ್ಷಣವಾದ ಭೌತ-ಅಭೌತಗಳೆಂಬ ವಿಂಗಡಣೆಯನ್ನೂ ಮತ್ತು ಅದರಿಂದ ರೂಪಿತವಾದ ದ್ವಂದ್ವಮಾನತೆಯ ವಿಧಾನವನ್ನೂ ಅವರು ಸಂಶಯದಿಂದ ನೋಡಿದ್ದರು. ಇತಿಹಾಸಕ್ಕೆ ಇತಿಹಾಸವೇ ಇಲ್ಲದಿರಲೂಬಹುದು ಎಂಬುದು ಅವರ ಪ್ರಸಿದ್ಧ ಮಾತು. ಲೋಹಿಯಾರ ಇತಿಹಾಸ ಚಕ್ರ ಕಲ್ಪನೆಯ ವೈಶಿಷ್ಟ್ಯವೂ ಇದರಿಂದಲೇ ಹೊರಹೊಮ್ಮಿರುವುದು. ಈ ಪುಸ್ತಕದ ಈ ಮುಖ್ಯ ಕೊರತೆಯನ್ನು ಗುರುತಿಸಿದಾಗ, ಈ ಪುಸ್ತಕದ ಹಿನ್ನುಡಿಯಲ್ಲಿ ಪ್ರೊ. ಕೆ. ರಾಘವೇಂದ್ರರಾವ್ ಮತ್ತು ಮುನ್ನುಡಿಯಲ್ಲಿ ಜಿ. ರಾಜಶೇಖರ್ ಅವರು ಆಡಿರುವ; ಲೋಹಿಯಾಗೆ ಮಾರ್ಕ್ಸ್‌ವಾದದ ಪೂರ್ಣ ಅರಿವಿರಲಿಲ್ಲ, ಕಮ್ಯೂನಿಸ್ಟರ ಬಗ್ಗೆ ಅಂಧ ಅಸಹನೆಯಿತ್ತು ಮುಂತಾದ ವಿಮರ್ಶೆಯ ಮಾತುಗಳು ಅಷ್ಟು ಪ್ರಸ್ತುತ ಅನ್ನಿಸುವುದಿಲ್ಲ. ಹಾಗೆ ನೋಡಿದರೆ ಜಿ. ರಾಜಶೇಖರ್ ತಮ್ಮ ದೀರ್ಘ ಮುನ್ನುಡಿಯಲ್ಲಿ ಲೋಹಿಯಾರನ್ನು ಇಂದಿನ ರಾಜಕೀಯ ಸಂದರ್ಭದಲ್ಲಿರಿಸಿ ಅವರ ಚಿಂತನೆ ಮತ್ತು ರಾಜಕಾರಣಗಳ ಮೌಲಿಕತೆಯನ್ನು ರಾಜಶೇಖರ್‌ಗೇ ವಿಶಿಷ್ಟವೆನ್ನಿಸುವ ಸ್ಪಂದನಶೀಲತೆಯೊಂದಿಗೆ

ವಿಶ್ಲೇಷಿಸಿರುವುದನ್ನು ಓದುವುದೇ ಒಂದು ಖುಷಿಯೆನ್ನಿಸುತ್ತದೆ.

ಅದರೆ ಅವರು ಲೋಹಿಯಾ ಬಗ್ಗೆ ಸುಬ್ಬಣ್ಣ-ಅನಂತಮೂರ್ತಿ-ಲಂಕೇಶ್-ತೇಜಸ್ವಿಯವರ ತಲೆಮಾರಿನಾಚೆಗೆ ಕನ್ನಡದಲ್ಲಿ ಸೃಜನಾತ್ಮಕವಾಗಿ ಏನೂ ನಡೆದಿಲ್ಲವೇನೋ ಎಂಬಂತೆ ಅಲವತ್ತುಕೊಂಡು ಈ ಪುಸ್ತಕವನ್ನು ಆನಂತರದ ತಲೆಮಾರಿನವರು ಬರೆದಿರುವ ಮೊದಲ ಪುಸ್ತಕವೆಂಬ ಸಂಭ್ರಮದಲ್ಲಿ ಸ್ವಾಗತಿಸಿರುವುದು, ಈ ಕ್ಷೇತ್ರದಲ್ಲಿ ಇತ್ತೀಚಿನ ವರ್ಷಗಳಲ್ಲಿ ನಡೆದಿರುವ ಹಲವು ವೈವಿಧ್ಯಮಯ ಪ್ರಯತ್ನಗಳ ಹಿನ್ನೆಲೆಯಲ್ಲಿ ಸ್ವಲ್ಪ ಅಸಮಂಜಸ ಎನಿಸುತ್ತದೆ. ರಾಜಶೇಖರರ ದೃಷ್ಟಿವ್ಯಾಪ್ತಿ ಈ ನೆಲೆಯಲ್ಲಿ ವಿಸ್ತಾರವಾಗಬೇಕು. ಹಾಗೇ ಲೋಹಿಯಾ ಬಗ್ಗೆ ಇನ್ನಷ್ಟು ಆಳವಾದ ಮತ್ತು ವ್ಯಾಪಕವಾದ ಅಧ್ಯಯನ ಮಾಡಬೇಕು. ಆಗ ಲೋಹಿಯಾ ಬಗ್ಗೆ ಅವರು ಅಪಾರ ಮೆಚ್ಚುಗೆಯ ಜೊತೆಗೇ ಮಾಡಿರುವ ಕೆಲವಾದರೂ ಟೀಕೆಗಳಿಗೆ ಆಧಾರವಿಲ್ಲ ಎಂಬುದು ಗೊತ್ತಾಗಬಹುದು. ಜೊತೆಗೆ, ಕನಿಷ್ಟ ಕನ್ನಡದಲ್ಲಾದರೂ ಲೋಹಿಯಾರನ್ನು ಕುರಿತಂತೆ ಕೇವಲ ಆರಾಧನಾ ಅಥವಾ ಪರಿಚಯಾತ್ಮಕ ಸಾಹಿತ್ಯ ಮಾತ್ರವಲ್ಲ, ವಿಮರ್ಶೆ ಮತ್ತು ವಿಸ್ತರಣೆಯ ಸಾಹಿತ್ಯ ತಕ್ಕಮಟ್ಟಿಗೆಯಾದರೂ ಬಂದಿದೆ ಎಂಬುದರ ಅರಿವಾದೀತು.

('ನವ ಮಾನವ ', ಜುಲೈ, ೨೦೧೨)

ಸ್ವರಾಜ್ಯ ನಿಜವಾಗಬಹುದಾದ ಬಗೆ

ಪುಸ್ತಕ: ಸ್ವರಾಜ್ಯ ಲೇ: ಅರವಿಂದ ಕೇಜ್ರಿವಾಲ್ ಕನ್ನಡಕ್ಕೆ: ಪ್ರಿಯದರ್ಶಿನಿ ಭಟ್ ಪ್ರ: ವಾಸನ್ ಪಬ್ಲಿಕೇಷನ್ಸ್, ಬೆಂಗಳೂರು ಪು: ೧೮೦ ಬೆಲೆ: ರೂ. ೯೫/-

ಈ ಪುಸ್ತಕದ ಒಂದು ಅಧ್ಯಾಯವೊಂದರಲ್ಲಿ ಲೇಖಕ ಅರವಿಂದ್ ಕೇಜ್ರಿವಾಲ್ ಒಂದು ಪ್ರಶ್ನೆಯನ್ನು ಕೇಳುತ್ತಾರೆ, 'ಮಕ್ಕಳ ಬಗ್ಗೆ ಶಿಕ್ಷಣ ಕಾರ್ಯದರ್ಶಿಗೆ ಹೆಚ್ಚು ಪ್ರೀತಿಯೋ ಅಥವಾ ತಂದೆ ತಾಯಿಗಳಿಗೋ?' ಎಂದು. ಈ ಪ್ರಶ್ನೆಯ ಮೂಲಕ ಅವರು ಸ್ವರಾಜ್ಯ ಎಂದರೆ ಏನು ಮತ್ತು ಇದಕ್ಕೂ ಸದ್ಯದ ಪ್ರಾತಿನಿಧಿಕ ಪ್ರಜಾಪ್ರಭುತ್ವಕ್ಕೂ ಇರುವ ವ್ಯತ್ಯಾಸಗಳನ್ನು ಭಾವಪೂರ್ಣವಾಗಿ ನಿರೂಪಿಸಿ ಬಿಡುತ್ತಾರೆ. ಕೇಜ್ರಿವಾಲ್ ಕಳೆದ ಐದಾರು ವರ್ಷಗಳಿಂದ ತಮ್ಮ ಗೆಳೆಯರೊಂದಿಗೆ 'ಸ್ವರಾಜ್ಯ' ಆಂದೋಲನವನ್ನು ನಡೆಸುತ್ತಿರುವವರು. ಅದರ ರಾಜಕೀಯ ಪ್ರಾಯೋಗಿಕತೆಗಾಗಿ ಇತ್ತೀಚೆಗೆ 'ಆಮ್ ಆದ್ಮಿ' ಪಕ್ಷವನ್ನು ಸ್ಥಾಪಿಸಿ ಸುದ್ದಿ ಮಾಡಿರುವವರು. ಆ ಕಾರಣದಿಂದಾಗಿ ತಮ್ಮ ನಾಯಕ, ಮಾರ್ಗದರ್ಶಿ ಅಣ್ಣಾ ಹಜಾರೆಯುವರ ನೇತೃತ್ವದ ಭ್ರಷಾಚಾರ ವಿರೋಧಿ ಆಂದೋಲನದಿಂದ ದೂರವಿರಿಸಲ್ಪಟ್ಟಿರುವವರು. ಆದರೆ ಧೃತಿಗೆಡದೆ, ಬರಲಿರುವ ದೆಹಲಿ ವಿಧಾನಸಭಾ ಚುನಾವಣೆಗಳಲ್ಲಿ ತಮ್ಮ ಪಕ್ಷದ ಯಶಸ್ಸಿಗಾಗಿ ಸತತವಾಗಿ ಶ್ರಮಿಸುತ್ತಿರುವವರು.

ವರಮಾನ ತೆರಿಗೆ ಇಲಾಖೆಯಲ್ಲಿ ಉನ್ನತ ದರ್ಜೆಯ ಅಧಿಕಾರಿಯಾಗಿದ್ದ ಅರವಿಂದ್ ಪ್ರಜಾಪ್ರಭುತ್ವವೆನ್ನುವುದೇ ನಮ್ಮ ದೇಶದಲ್ಲಿ ಕ್ರಮೇಣ ಪಕ್ಷ ಪ್ರಭುತ್ವವಾಗಿ ಅವನತಿಗೊಳ್ಳುತ್ತಿರುವ ಅಪಾಯವನ್ನು ಮನಗಂಡು, ನಾಗರಿಕ ಹಕ್ಕುಗಳ ಆಂದೋಲನವನ್ನು ಸಂಘಟಿಸಲು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಮಾಹಿತಿ ಹಕ್ಕು ಕಾಯಿದೆ ಈ ಆಂದೋಲನದ ಫಲವೆಂದೇ ಹೇಳಬಹುದು. ಇದರ ಮುಂದುವರಿಕೆಯಾಗಿ, ಗಾಂಧೀಜಿಯ 'ಹಿಂದ್ ಸ್ವರಾಜ್'ನಿಂದ ಪ್ರಭಾವಿತರಾಗಿ ತಮ್ಮ ಹೋರಾಟವನ್ನು ಸ್ವರಾಜ್ಯ ಆಂದೋಲನವೆಂದು ಕರೆದುಕೊಂಡು ಪ್ರಜಾಪ್ರಭುತ್ವವೆನ್ನುವುದು ನಿಜವಾಗಿ ಪ್ರಭುಗಳ ಪ್ರಭುತ್ವವೆನ್ನಿಸುವುದು ಸ್ವರಾಜ್ಯ ಸ್ಥಾಪನೆಯ ಮೂಲಕ ಮಾತ್ರವೆಂಬ ನಂಬಿಕೆಯಿಂದ ಅದರ ಸಾಕಾರಕ್ಕಾಗಿ ದುಡಿಯುತ್ತಿದ್ದಾರೆ. ಅದನ್ನು ಸಾಮಾನ್ಯ ಜನತೆಗೆ ವಿವರಿಸಲು ಮಾಡಿರುವ ಪ್ರಯತ್ನವೇ ಈ ಪುಸ್ತಕ.

ಈ ಪುಸ್ತಕ ನಮ್ಮ ಸದರಿ ಪ್ರಾತಿನಿಧಿಕ ಪ್ರಜಾಪ್ರಭುತ್ವ ಬೇಜವಾಬ್ದಾರಿತನ, ಅದಕ್ಷತೆ ಮತ್ತು ಭ್ರಷ್ಟಾಚಾರಗಳ ಮೂಲಕ ಹೇಗೆ ಅಧಿಕಾರಶಾಹಿ, ಬಂಡವಾಳಶಾಹಿ ಮತ್ತು ವಿದೇಶೀ ವ್ಯಾಪಾರಶಾಹಿಗಳ ಕೈಗೊಂಬೆಯಾಗಿ ಜನದೂರ ಮತ್ತು ಜನವಿರೋಧಿಯಾಗುತ್ತಿದೆ ಎಂಬುದನ್ನು ಉದಾಹರಣೆಗಳೊಂದಿಗೆ ವಿವರಿಸುತ್ತಾರೆ. ಹಾಗೇ, 'ಸ್ವರಾಜ್ಯ'ದ ಆಶಯದಿಂದ ಸ್ಫೂರ್ತಿಗೊಂಡು ರೂಪಿತವಾದದ್ದೆಂದು ಹೇಳಲಾದ 'ಪಂಚಾಯತ್ ರಾಜ್' ವ್ಯವಸ್ಥೆ ಕೂಡಾ ಸರ್ಕಾರದ ಬಿಗಿ ಹಿಡಿತದಲ್ಲಿ ಸಿಕ್ಕಿ ಹಾಕಿಕೊಂಡು ಹೇಗೆ ಜನರ ಕಣ್ಣಿಗೆ ಮಣ್ಣೆರಚುತ್ತಿದೆ ಎಂಬುದನ್ನು ಮತ್ತೆ ಉದಾಹರಣೆಗಳ ಮೂಲಕ ವಿಷದೀಕರಿಸುತ್ತಾರೆ. ಅದೇ ವೇಳೆಗೆ ಹಲವು ಕಡೆ ಜನರ ಸಂಕಲ್ಪಶಕ್ತಿಯಿಂದಾಗಿ ಈ ವ್ಯವಸ್ಥೆ ಯಶಸ್ವಿಯಾಗಿ ಪ್ರಯೋಗಗೊಂಡು ಆಸೆ ಹುಟ್ಟಿಸಿದೆ ಎಂಬುದನ್ನು ತಮ್ಮ ಕ್ಷೇತ್ರಕಾರ್ಯದ ಅನುಭವದ ಭಾಗವಾಗಿ ಹೇಳುತ್ತಾರೆ. ಜೊತೆಗೆ, 'ಸ್ವರಾಜ್ಯ'ದ ಕಲ್ಪನೆಯ ಬಗ್ಗೆ ಇರುವ ಕೆಲವು ಅನುಮಾನಗಳನ್ನು–ಉದಾ: ಇದು ದಲಿತರ ದಮನಕ್ಕೆ ಕಾರಣವಾಗುತ್ತದೆ, ಅದಕ್ಷತೆ, ಭ್ರಷ್ಟಚಾರ, ಅರಾಜಕತೆಗೆ ಎಡೆ ಮಾಡಿಕೊಡುತ್ತದೆ ಇತ್ಯಾದಿ–ತಪ್ಪು ತಿಳುವಳಿಕೆಗಳೆಂದು ಪರಿಹರಿಸುವ ಪ್ರಯತ್ನ ಮಾಡುತ್ತಾರೆ. ಕೊನೆಯಲ್ಲಿ ಈ 'ಸ್ವರಾಜ್ಯ' ಒಂದು ಭ್ರಮಾ ಕಲ್ಪನೆಯಾಗಿರದೆ ಈ ದೇಶದಲ್ಲಿ ಹೇಗೆ ವ್ಯಾವಹಾರಿಕವಾಗಿ ಜಾರಿಗೆ ತರಬಹುದೆಂಬುದನ್ನು–ನಿಜ ಅಧಿಕಾರ ವಿಕೇಂದ್ರೀಕರಣದ ರೀತಿ ನೀತಿಗಳನ್ನು–ವೈಧಾನಿಕವಾಗಿ ವಿವರಿಸುತ್ತಾರೆ. ಇದರ ಭಾಗವಾಗಿ 'ನಗರ ರಾಜ್' ಪರಿಕಲ್ಪನೆಯನ್ನೂ ಪ್ರಸ್ತುತಪಡಿಸುತ್ತಾರೆ.

ಈ ಪುಸ್ತಕದ ದೊಡ್ಡ ಯಶಸ್ಸು ಎಂದರೆ, ಗಾಂಧೀಜಿಯ 'ಹಿಂದ್ ಸ್ವರಾಜ್' ಮೀಮಾಂಸೆಯನ್ನು ನಮ್ಮ ಬೌದ್ಧಿಕ ಲೋಕದಲ್ಲೀಗ ಚಾಲ್ತಿಯಲ್ಲಿರುವ ಒಂದು ಅಮೂರ್ತ ಕಲ್ಪನೆಯಂತೆ ಮಾತ್ರ ನೋಡಿ, ಅದನ್ನು ಮನೋಭೂಮಿಕೆಗೆ ಮಾತ್ರ ಸೀಮಿತಗೊಳಿಸಿ, ರೂಪಕ ಮಾತ್ರವಾಗಿ ಕಾಣುವ ಪ್ರವೃತ್ತಿಗೆ ಸಂವಾದಿಯಾಗಿ ಅದು ವ್ಯಾವಹಾರಿಕ

ರೂಪದಲ್ಲಿಯೂ ಇಂದು ಪ್ರಸ್ತುತವಾಗಬಲ್ಲುದು ಎಂಬುದನ್ನು ನಮಗೆ ಅಷ್ಟೇ ಮುಖ್ಯವಾಗಿ, ಇಂದು ರಾಷ್ಟ್ರವನ್ನು ಒಳಗಡೆಯಿಂದ ಮತ್ತು ಹೊರಗಡೆಯಿಂದ ನಡೆಯುತ್ತಿರುವ ಲೂಟಿಯಿಂದ ರಕ್ಷಿಸುವ ದಾರಿ ಇದೊಂದೇ ಎಂಬುದನ್ನು ಮನದಟ್ಟು ಮಾಡುತ್ತದೆ. ಪುಸ್ತಕ ಅತಿ ಸರಳ ಶೈಲಿಯಲ್ಲಿದ್ದು, ಕನ್ನಡಕ್ಕೆ ಅಷ್ಟೇ ಸರಳ ಶೈಲಿಯಲ್ಲಿ ಅನುವಾದಿತವಾಗಿದೆ. ಎಲ್ಲರೂ ಓದಬೇಕಾದ ಪುಸ್ತಕವಿದು.

ಆದರೆ ಈ ಪುಸ್ತಕಾದಾಚೆಗೆ ಕೇಜ್ರಿವಾಲ್ ಮತ್ತು ಅವರ ಸ್ನೇಹಿತರ 'ಸ್ವರಾಜ್ಯ ಆಂದೋಲನ'ದ ಬಗೆಗೆ ಇರುವ ನನ್ನದೊಂದು ತಕರಾರನ್ನೂ ಇಲ್ಲಿ ದಾಖಲಿಸಬೇಕು. ಅದೆಂದರೆ, ಇವರು ತಮ್ಮ 'ಸ್ವರಾಜ್ ಆಂದೋಲನ'ದ ರಾಜಕೀಯ ವೇದಿಕೆಯಾಗಿ ಆರಂಭಿಸಿರುವ ಪಕ್ಷಕ್ಕೆ ಈ ರಾಷ್ಟ್ರದ ಬಹಳ ಜನಕ್ಕೆ ಅಪರಿಚಿತವಾದ ಮತ್ತು ಆತ್ಮೀಯವೆನ್ನಿಸದ ಅಪ್ಪಟ ಹಿಂದಿ ಶಬ್ದವಾದ ಆಮ್ ಆದ್ಮಿ ಎಂದೇಕೆ ಹೆಸರಿಟ್ಟರು ಎಂಬುದು. 'ಸ್ವರಾಜ್ಯ' ಎಂಬುದು ರಾಷ್ಟೀಯ ವ್ಯಾಪ್ತಿಯ ಪರಿಕಲ್ಪನೆಯಾಗಿರುವುದಾದರೆ, ಅದರ ಮೂಲ ಭಾವನೆಗೇ ಇದು ಘಾಸಿ ಉಂಟುಮಾಡುವುದಿಲ್ಲವೇ? ಜೊತೆಗೆ, ಇವರು ತಮ್ಮ ಪಕ್ಷವನ್ನು ನಮ್ಮ ರಾಜ್ಯದಲ್ಲಿ ಬೆಳೆಸಲು ಕಳಿಸಿರುವುದಾದರೂ ಎಂತಹ ಜನರನ್ನು? ಕರ್ನಾಟಕದ ಸಂಸ್ಕೃತಿ ಇರಲಿ, ಪ್ರಾಥಮಿಕ ಭೌಗೋಳಿಕತೆಗೇ ಅಪರಿಚಿತರೆನ್ನಿಸುವ, ಹರಕು ಮುರುಕು ಕನ್ನಡ ಮಾತಾಡುವ ಹೈಫೈ ಪಡ್ಡೆಗಳಂತೆ ಕಾಣುವ ಯುವಜನರನ್ನು. 'ಸ್ವರಾಜ್ಯ' ಎಂದರೆ ದೂರವನ್ನು ನಿವಾರಿಸುವ ಸ್ಥಳೀಯತೆಯ ಪರಿಮಳವಲ್ಲವೇ? ಕೇಜ್ರಿವಾಲ್, ಯೋಗೇಂದ್ರ ಯಾದವ್ ಮುಂತಾದವರು ಯೋಚಿಸಬೇಕು.

('ಹೊಸ ಮನುಷ್ಯ' 'ಸೆಪ್ಟಂಬರ್, ೨೦೧೩)

ಆತ್ಮೀಯ ದೇವತೆಗಳ ಆಕರ್ಷಕ ಆರಾಧನೆ

ಪುಸ್ತಕ: ಇಂತೀ ನಮಸ್ಕಾರಗಳು ಲೇ: ನಟರಾಜ್ ಹುಳಿಯಾರ್ ಪ್ರ: ಪಲ್ಲವ ಪ್ರಕಾಶನ, ಚನ್ನಪಟ್ಟಣ ಪು: ೨೩೩ ಬೆಲೆ: ರೂ.೧೮೦/-

ಲಂಕೇಶ್ ಮತ್ತು ಡಿ.ಆರ್. ನಾಗರಾಜ್ ನಮ್ಮ ಕಾಲ ಕಂಡ ಕನ್ನಡದ ಎರಡು ವಿಶೇಷ ಪ್ರತಿಭೆಗಳು. ಈ ಇಬ್ಬರೂ ಮೂಲತಃ ಸಾಹಿತ್ಯ ಕ್ಷೇತ್ರಕ್ಕೆ ಸಂಬಂಧಿಸಿದ ವ್ಯಕ್ತಿತ್ವಗಳಾದರೂ, ಇಬ್ಬರೂ ಅದರ ಎಲ್ಲೆಗಳನ್ನು ದಾಟಿ, ಮುಖ್ಯವಾಗಿ ಸಂಸ್ಕೃತಿ ಮತ್ತು ರಾಜಕಾರಣದ ಚರ್ಚೆಗಳಲ್ಲೂ ಸಕ್ರಿಯವಾಗಿ ಭಾಗವಹಿಸಿ ಸಾಹಿತ್ಯವೆಂಬ ಪರಿಕಲ್ಪನೆಯನ್ನು ಅರ್ಥಪೂರ್ಣವಾಗಿ ಹಿಗ್ಗಿಸಿದರು. ಇವರಲ್ಲಿ ಲಂಕೇಶ್ ಪತ್ರಕರ್ತರಾಗಿ ಈ ಕೆಲಸಮಾಡಿದರೆ, ನಾಗರಾಜ್ ಒಬ್ಬ ಬಹುಶಿಸ್ತೀಯ ಚಿಂತಕ, ಸಂಶೋಧಕ ಮತ್ತು ಬುದ್ಧಿಜೀವಿಯಾಗಿ ಈ

ಕೆಲಸ ಮಾಡಿದರು. ಇವರಿಬ್ಬರಿಗೂ ಬೇರೆ ಬೇರೆ ನೆಲೆಗಳಲ್ಲಿ 'ಶಿಷ್ಯ'ರಾಗಿದ್ದ ನಟರಾಜ್ ಹುಳಿಯಾರ್ ಈ ಎರಡೂ ವ್ಯಕ್ತಿತ್ವಗಳು ತಮ್ಮ ಪ್ರಜ್ಞೆಯಲ್ಲಿ ಬೆರೆತು ತಮ್ಮ ವ್ಯಕ್ತಿತ್ವವನ್ನು ದಟ್ಟವಾಗಿ ಪ್ರಭಾವಿಸಿರುವ ಬಗೆಯನ್ನು ಒಂದು ಸೃಜನಶೀಲ ಸಂಯೋಜನೆಯ ರೂಪದ ಬರವಣಿಗೆಯಲ್ಲಿ ಇಲ್ಲಿ ದಾಖಲಿಸಿದ್ದಾರೆ. ನಟರಾಜ್ ಲಂಕೇಶರಿಗೆ ಅವರ ಸಾಹಚರ್ಯ ಮತ್ತು ಅವರ ಪತ್ರಿಕೆಯಲ್ಲಿನ ಬರವಣಿಗೆ ಮೂಲಕ ಶಿಷ್ಯರಾದರೆ, ನಾಗರಾಜ್‌ಗೆ ಅವರು ಪಿ.ಎಚ್.ಡಿ. ಶಿಷ್ಯ, ಕನ್ನಡ ಸಾಹಿತ್ಯಕ್ಕೆ ಒಂದು ಹೊಸ ರೀತಿಯ ಕೊಡುಗೆ ಎಂದೇ ಹೇಳಬೇಕು.

ಈ ಪುಸ್ತಕ ಆರಂಭದಲ್ಲಿ ಲಂಕೇಶ್ ಕಥನ ಮತ್ತು ನಾಗರಾಜ್ ಕಥನ ಎಂದು ವಿಂಗಡಿಸಬಹುದಾದ ರೀತಿಯಲ್ಲಿ ಸಂಯೋಜಿತವಾಗಿರುವುದಾದರೂ, ಮುಂದೆ ಈ ಎರಡನ್ನೂ ಆಳದಲ್ಲಿ ಕೂಡಿಸುವ ಯೋಜನೆಯೊಂದಿಗೇ ಅವನ್ನು ಕಟ್ಟಲಾಗಿರುವ ಸುಳಿವು ಮತ್ತು ಹೊಳಹುಗಳು ನಮಗೆ ಈ ಎರಡೂ ಕಥನಗಳಲ್ಲಿ ಸಿಗುತ್ತವೆ. ಅಂದರೆ ನಾಗರಾಜರನ್ನು ಕುರಿತ ತಮ್ಮ ಕಥೆ ಹೇಳಲು ಅನುವಾಗುವಂತೆ ಲಂಕೇಶರ ಕಥೆಯನ್ನು ಇಲ್ಲಿ ನಟರಾಜ್ ಹೇಳಿ, ನಂತರ ಇವರಿಬ್ಬರ ಮುಖಾಮುಖಿಯ ತಮ್ಮ ಕಥೆಯನ್ನು ಹೇಳಲು ವೇದಿಕೆಯನ್ನು ಸಿದ್ಧಪಡಿಸಿಕೊಳ್ಳುತ್ತಾರೆ. ಈ ಎರಡೂ ಕಥೆಗಳಲ್ಲಿ ಅವರು ಇವರಿಬ್ಬರ ಸಾಹಿತ್ಯ ಮತ್ತು ಅದರಾಚೆಗಿನ ವ್ಯಕ್ತಿತ್ವಗಳನ್ನು ತಮ್ಮ ವಿಮರ್ಶೆಯ ಕಣ್ಣು ಕಂಡಂತೆ ಪರಿಚಯಿಸುತ್ತಾ ಹೋಗುತ್ತಾರೆ. ಆನಂತರ ನಟರಾಜರ ಪ್ರಕಾರ ಇವರಿಬ್ಬರ ನಡುವಣ ಇದ್ದ ಪ್ರೀತಿ-ದ್ವೇಷ, ಮತ್ಸರ-ಸ್ಪರ್ಧೆಗಳ ಹಿಂದಿನ ತರ್ಕವನ್ನು ಹಲವು ತಾತ್ವಿಕ ಉದಾಹರಣೆ ಮತ್ತು ವಾಸ್ತವ ದೃಷ್ಟಾಂತಗಳ ಮೂಲಕ ವಿವರಿಸುತ್ತಾರೆ. ಪುಸ್ತಕದ ಈ ಭಾಗ ನಟರಾಜರ ಸಾಹಿತ್ಯ ಮತ್ತು ಸಂಸ್ಕೃತಿ ವಿಮರ್ಶೆಯ ಹಿಂದಿನ ಪರಿಶ್ರಮ ಮತ್ತು ಪ್ರತಿಭೆಗಳೆರಡನ್ನೂ ಪರಿಚಯಿಸುವಂತಿದೆ. ಇವರ ಎಲ್ಲ ನಿಲುವು ಮತ್ತು ಅಭಿಪ್ರಾಯಗಳನ್ನು ಒಪ್ಪಲಾಗದಾದರೂ.

ಲಂಕೇಶರ ಎರಡು ದಶಕಗಳಿಗೂ ಮೀರಿದ ಪತ್ರಿಕೋದ್ಯಮ ಬದುಕಿನಲ್ಲಿ ಗುಣಾತ್ಮಕತೆಯ ನೆಲೆಯಲ್ಲಿ ಹಲವು ಏರಿಳಿತಗಳಿದ್ದುದನ್ನು ಪತ್ರಿಕೆಯ ನಿಯಮಿತ ಓದುಗರೆಲ್ಲರೂ ಬಲ್ಲವರಾಗಿದ್ದರು. ಪುಸ್ತಕದ ಸದರಿ ವಿಮರ್ಶಕನೂ ಸೇರಿದಂತೆ ಅವರ ಈ ಪತ್ರಿಕೋದ್ಯಮ ಬದುಕಿಗೆ ಸಾಕ್ಷಿಯಾದ ಹಲವರಿದ್ದಾರೆ. ಈ ಹಿನ್ನೆಲೆಯಲ್ಲಿ ಈ ಮಾತು: 'ಅಣ್ಣನ ನೆನಪು' ಪುಸ್ತಕದಲ್ಲಿ ತೇಜಸ್ವಿ ತಮ್ಮ ತಂದೆ ಕುವೆಂಪುರನ್ನು ಚಿಕಿತ್ಸಕವಾಗಿ ನೋಡಿಲ್ಲ (ಹಾಗೆ ನೋಡುವ ಉದ್ದೇಶವೇ ಆ ಪುಸ್ತಕಕ್ಕೆ ಇಲ್ಲದೇ ಇರಬಹುದು ಎಂಬ ಸಾಹಿತ್ಯಿಕ ನೆದರೇ ಇಲ್ಲದೆ) ಎಂಬ ಲಂಕೇಶರ ಟೀಕೆಯನ್ನು ಅನುಮೋದಿಸುವ ನಟರಾಜ್, ಸ್ವತಃ ತಾವೇ ಇಂತಹ ಟೀಕೆಯನ್ನು ಆಹ್ವಾನಿಸುವ ರೀತಿಯಲ್ಲಿ ಲಂಕೇಶರ ಪತ್ರಿಕಾ ಪಾತಿವ್ರತ್ಯ ಧರ್ಮದ ಬಗ್ಗೆ ಇಲ್ಲಿ ಬರೆದಿರುವುದು ಚೋದ್ಯವೆನಿಸುತ್ತದೆ. ಕನಿಷ್ಠ, ನಟರಾಜ್‌ರು ಇಲ್ಲಿ ಸಾಕಷ್ಟು ವಿಸ್ತಾರವಾಗಿಯೇ ಚರ್ಚಿಸುವ, ಲಂಕೇಶ್ ತಮ್ಮ ಸಾಹಿತ್ಯ ಮತ್ತು ಪತ್ರಿಕಾ ಬರವಣಿಗೆಯಲ್ಲಿ ಎದುರಿಸಿದ ಕೇಡಿನ ಪ್ರಶ್ನೆಯನ್ನು ಮೊದಲು, ಲಂಕೇಶ್

ಪ್ರಕಾರ ಕೇಡು ಎಂದರೆ ಏನು ಎಂಬ ಪ್ರಶ್ನೆಯ ಹಿಂದೆ ಬಿದ್ದಿದ್ದರೆ, ಈ ಕುರಿತ ನಟರಾಜರ ಚರ್ಚೆ ಕೇವಲ 'ರೊಮಾಂಟಿಕ್' ಆಗದೆ ಉಳಿದು ಲಂಕೇಶರ ವ್ಯಕ್ತಿತ್ವದ ಇನ್ನಷ್ಟು ಆಳದ ಶೋಧನೆಗೆ ಕಾರಣವಾಗಬಹುದಿತ್ತು.

ಲಂಕೇಶ್ ಕಥನಕ್ಕೆ ಹೋಲಿಸಿದರೆ ನಾಗರಾಜರ ಕಥನ ಹೆಚ್ಚು ಸಮತೋಲನದಲ್ಲಿದ್ದಂತಿದೆ. ನಾಗರಾಜರ ಬೌದ್ಧಿಕ ಸಾಧನೆಗಳ ವಿಶಿಷ್ಟತೆಗಳನ್ನು ವಿವರವಾಗಿ ಗುರುತಿಸುತ್ತಲೇ ಅವರ ವ್ಯಕ್ತಿತ್ವದಲ್ಲಿದ್ದ ಮಿತಿಗಳನ್ನೂ-ಪ್ರದರ್ಶನಪ್ರಿಯತೆ, ಉಡಾಫೆ, ಸ್ವಯಂವೈಭವೀಕರಣಕ್ಕಾಗಿ 'ಶತ್ರು ಸಂಹಾರ' ಕಾರ್ಯಕ್ರಮಗಳು ಇತ್ಯಾದಿ–ಸವಿವರವಾಗಿ ಗುರುತಿಸುತ್ತಲೇ, ಇವಕ್ಕೂ ಅವರ ಕೆಲ ವಾದಗಳಲ್ಲಿನ ವಿವರಗಳಲ್ಲಿ ತಾವು ಕಂಡ ಕೆಲ ಅರಕೆ ಮತ್ತು ಹುಸಿತನಕ್ಕೂ ಇರುವ ಸಂಬಂಧಗಳ ಕಡೆ ಬೊಟ್ಟುಮಾಡುತ್ತಾರೆ. ನಾಗರಾಜರ 'ಆದಿಮ' ವರ್ಷಗಳ ಸಾಹಿತ್ಯಿಕ ಮತ್ತು ರಾಜಕೀಯ ಸಾಹಸಗಳು ನಟರಾಜರಿಗೆ ಪರಿಚಯವಿದ್ದಲ್ಲಿ ಈ ಕಥನಭಾಗ ಇನ್ನಷ್ಟು ತಾತ್ವಿಕ ಅನ್ವೇಷಣೆಗಳಿಗೆ ಕಾರಣವಾಗಬಹುದಿತ್ತು. (ವಿಶೇಷವಾಗಿ ಸಿ.ಪಿ.ಎಂ ಪಕ್ಷದ ಎಂ.ಕೆ.ಭಟ್ಟರ ಜೊತೆ ಸೇರಿ ಬಂಡಾಯ ಸಾಹಿತ್ಯವೆಂಬ ರೂಕ್ಷ ರಾಜಕೀಯ ಸಾಹಿತ್ಯ ಚಳುವಳಿಯೊಂದನ್ನು ಹುಟ್ಟಿಹಾಕಿ ಸಾಕಷ್ಟು ಕಾಲ ಅದರ ಪೋಷಕರಾಗಿ ಮಾಡಿದ ಭಾನಗಡಿಯ ಪರಿಣಾಮಗಳನ್ನು ಇಂದೂ ಕಾಣುತ್ತಿದ್ದೇವೆ) ಆದರೆ ಮತ್ತೆ ಇಲ್ಲಿಯೂ ಅದೇ ದೋಷವಿದೆ: ನಾಗರಾಜರ ಎಲ್ಲ ಮುಖ್ಯ ತಾತ್ವಿಕ ಪ್ರಮೇಯಗಳನ್ನೂ–ಎಲ್ಲವನ್ನೂ ತಾತ್ವೀಕರಿಸುವುದು ಅವರಿಗೊಂದು ವ್ಯಸನವೇ ಆಗಿತ್ತೆಂದು ಹೇಳುತ್ತಲೇ–ಸಮೂಹ ಸನ್ನಿಗೆ ಒಳಗಾದವರಂತೆ ಪ್ರಶ್ನೆಯಿಲ್ಲದೆ ಅವನ್ನು ಒಪ್ಪುತ್ತಾರೆ. ಅದೂ ತಮ್ಮ ಪ್ರತಿ ಬರವಣಿಗೆಯ ನಂತರ ಅದರ ಬಗ್ಗೆ ಅಸಮಧಾನ ಬೆಳೆಸಿಕೊಳ್ಳುತ್ತಿದ್ದರೆಂದು ನಟರಾಜರೇ ಹೇಳುವ ನಾಗರಾಜರ ಬಗ್ಗೆ!

ಈ ಸಂಬಂಧವಾಗಿ ನಾಗರಾಜರ ಪ್ರಮೇಯಗಳಲ್ಲಿ ನನಗೆ ಕಂಡ ಸಮಸ್ಯೆಗಳ ಬಗ್ಗೆ ಮೂರು ಸಂಗತಿಗಳನ್ನು ಇಲ್ಲಿ ಹೇಳಬೇಕು. ಒಂದು, ಅವರು ಭಾರತಕ್ಕೆ ಮುಕ್ತಿದಾಯಕವಾಗಬಹುದೆಂದು ಗುರುತಿಸುವ ಅವೈದಿಕ ಸಾಂಸ್ಕೃತಿಕ ಧಾರೆಗಳು ತಮ್ಮ ಬಹುತ್ವದಿಂದಾಗಿಯೇ ಅರ್ಥಪೂರ್ಣ ಮತ್ತು ಧಾರಣೀಯವಾಗುವುದು (sustainable) ಇಂದಿನ ಸ್ವರೂಪದ ಆಧುನಿಕ ರಾಷ್ಟ್ರ ಪ್ರಭುತ್ವದಿಂದ (Modern Nation State) ದೂರವಾದ ವಿಕೇಂದ್ರೀಕರಣ ತತ್ವದ ಚೌಕಟ್ಟಿನಲ್ಲಿ ಮಾತ್ರ ಎಂಬುದನ್ನು ನಾಗರಾಜ್ ಎಲ್ಲಿಯೂ ಗಮನಿಸದಿರುವುದು. ಮತ್ತು ಆ ಕಾರಣದಿಂದಾಗಿಯೇ ಅವರ ನುಡಿಗಟ್ಟು ಅಖಿಲ ಭಾರತ ದೃಷ್ಟಿಕೋನಕ್ಕೆ ಬಂಧಿತವಾಗಿ ಅವರ ಪ್ರಮೇಯಗಳು ಎಷ್ಟೇ ಬೌದ್ಧಿಕ ಪರಿಶ್ರಮದಿಂದ ತುಡಿಯುತ್ತಿದ್ದರೂ ತಂತಾನೇ ವಿರೋಧಾಭಾಸಕ್ಕೂ ಪಕ್ಕಾಗಿರುವುದು. ಎರಡನೆಯದು, ಈ ವಿರೋಧಾಭಾಸದ ನೇರ ಫಲ: ಅವೈದಿಕ ಧಾರೆಗಳನ್ನು (ಇವನ್ನು ಶ್ರಮಣ ಧಾರೆಗಳೆನ್ನುವುದೇ ಸೂಕ್ತವಾದರೂ) ಇವರು ಅನಾತ್ಮವಾದಿ ನೆಲೆಯಲ್ಲಿ ನೋಡುವ ಪ್ರಯತ್ನವನ್ನೇ ಮಾಡದೆ ಆತ್ಮವಾದಿ ನೆಲೆಯಲ್ಲೇ ನಿಂತು ತಮ್ಮ ಪ್ರಮೇಯಗಳನ್ನು

ಮಂಡಿಸುವುದು. ಮೂರನೆಯದು: ಇವರು ಹೇಳುವ 'ವಿಸ್ಮೃತಿ'ಗೂ ಆಧುನಿಕತೆಯ ದಾಹಕ್ಕೂ ಇರುವ ಸಂಬಂಧಗಳನ್ನು ವಿಶ್ಲೇಷಿಸದೆ ಹೋಗಿರುವುದರಿಂದ 'ವಿಸ್ಮೃತಿ' ಪರಿಕಲ್ಪನೆಯನ್ನು ಸಾವಯವವಾಗಿ ಶೋಧಿಸಲಾಗದಿರುವುದು.

ನಟರಾಜರ ಈ ಪುಸ್ತಕ ಒಳಗೊಂಡ ವಿಶಿಷ್ಟ ಕಥನದ ಎಲ್ಲ ವಿವರಗಳನ್ನೂ ಈ ಪತ್ರಿಕೆಯ ಈ ಅಂಕಣದಲ್ಲಿ ಚರ್ಚಿಸುವುದು ಸಾಧುವೂ ಅಲ್ಲ, ಸಾಧ್ಯವೂ ಅಲ್ಲ. ಏಕೆಂದರೆ, ಇಲ್ಲಿ ನಟರಾಜರು ಈ ಎರಡೂ ವ್ಯಕ್ತಿತ್ವಗಳು ಮತ್ತು ಅವುಗಳ ಮುಖಾಮುಖಿಯ ಬಗ್ಗೆ ಸಾಕಷ್ಟು ವಿಸ್ತಾರವಾಗಿ ಮತ್ತು ಆಳಕ್ಕೆ ಇಳಿದು ನೋಡಬೇಕಾದ ಹಲವು ತಾತ್ವಿಕ ವಿಶ್ಲೇಷಣೆಗಳೊಂದಿಗೆ ಬರೆದಿದ್ದಾರೆ. ಆದರೆ ಒಂದು ಮಾತನ್ನಂತೂ ಹೇಳಬಹುದು: ಪುಸ್ತಕವನ್ನು ಓದುತ್ತಾ ಹೋದಂತೆ ನಟರಾಜರ ಬರವಣಿಗೆ ಲಂಕೇಶರ ಬರವಣಿಗೆಯ ವಿಚಿತ್ರ ಆಕರ್ಷಣೆ ಮತ್ತು ನಾಗರಾಜರ ಬೌದ್ಧಿಕತೆಯ ವೈಭವಗಳು ಹದವಾಗಿ ಬೆರೆತು ಓದಿನ ಒಂದು ಹೊಸ ರುಚಿಯನ್ನು ಸೃಷ್ಟಿಸುತ್ತದೆ. ಇದಕ್ಕೆ ಈ ಬರವಣಿಗೆಯ ಹಿಂದೆ ಒಂದು ಸುಪ್ತ ಆರಾಧನೆಯ ಅಂಶವೂ ಕೆಲಸ ಮಾಡಿರುವುದು ಕಾರಣವಾಗಿರಬಹುದು. ನಿಜ, ಅವರು ಈ ಇಬ್ಬರ ವ್ಯಕ್ತಿತ್ವಗಳ ಹಲವು ಕೊರೆಗಳ ಬಗ್ಗೆ ಬರೆದಿರುವರಾದರೂ, ಅವು ಈ ಆರಾಧನೆಯ ಶೈಲಿಗೆ ತಕ್ಕುನಾಗಿಯೇ 'ಕ್ಷಮಾರ್ಹ' ಎಂದು ಹೇಳಲು ಅವರು ಬಳಸಿರುವ ತರ್ಕ ಸ್ವಲ್ಪ ಅನುಮಾನಾಸ್ಪದವಾದುದೇ ಆಗಿ ಕಾಣುತ್ತದೆ.

ಒಂದೇ ಮಾತಲ್ಲಿ ಹೇಳುವುದಾದರೆ, ಈ ಕೊರೆಗಳು ಬರೀ ಯಃಕಶ್ಚಿತ್ ಕೊರೆಗಳೇ ಅಥವಾ ಅವು ಎಲ್ಲಿಯಾದರೂ, ನಟರಾಜ್ ಚಿತ್ರಿಸುವ ಇವರಿಬ್ಬರ–ಬರವಣಿಗೆಯೂ ಸೇರಿದಂತೆ–ವ್ಯಕ್ತಿತ್ವಗಳು ಪರಸ್ಪರ ಮುಖಾಮುಖಿಗಳ ಮೂಲಕ ಕಟ್ಟಲ್ಪಟ್ಟಿದೆಯೆಂದು ಹೇಳಲಾಗುವ ಒಂದು ಕನ್ನಡ ಮನಸ್ಸಿನ ಮಾದರಿಯ ಸಮಗ್ರತೆಗೆ ಭಂಗ ಉಂಟುಮಾಡಿವೆಯೇ ಎಂಬ ಪ್ರಶ್ನೆಯನ್ನು ಚರ್ಚಿಸುವ ಗೋಜಿಗೇ ನಟರಾಜ್ ಇಲ್ಲಿ ಹೋಗಿಲ್ಲ. ಹಾಗಾಗಿ, ಇಂತಹ ಚರ್ಚೆಗಳಲ್ಲಿ ಲಂಕೇಶರನ್ನು ಮುಂದಿಟ್ಟುಕೊಂಡು ಅವರು ಇಡೀ ಪುಸ್ತಕದುದ್ದಕ್ಕೂ ಎತ್ತಿ ಹಿಡಿಯುವ ಸಾರ್ವಜನಿಕ ಚರ್ಚೆಗಳ ನೈತಿಕ ನೆಲೆಯ ಪ್ರಶ್ನೆಯ ಜವಾಬ್ದಾರಿಯನ್ನು ಸ್ವತಃ ಇವರೇ ಮರೆತಿದ್ದಾರೆ ಎಂದು ಹೇಳಬೇಕಾಗುತ್ತದೆ. ಇದರ ಹಿಂದೆ, ಒಂದೆಡೆ ಲಂಕೇಶ್ ಮತ್ತು ನಾಗರಾಜ್ ಒಂದು ಸಂಗತಿಯ ಬಗ್ಗೆ ವಿಭಿನ್ನ ನಿಲುವುಗಳನ್ನು ತಳೆದುದನ್ನು ವಿಶ್ಲೇಷಿಸುತ್ತಾ, ಇದರಲ್ಲಿ ಲಂಕೇಶ್ ನಿಲುವು ನೈತಿಕ ನೆಲೆಯಲ್ಲೂ, ನಾಗರಾಜರ ನಿಲುವು ಬೌದ್ಧಿಕ ನೆಲೆಯಿಂದಲೂ ಸರಿ ಎಂದು ತೀರ್ಮಾನ ಕೊಡುವ–ನೈತಿಕ ಮತ್ತು ಬೌದ್ಧಿಕ ನೆಲೆಗಳೆರಡರಲ್ಲೂ ಪ್ರಶ್ನಾರ್ಹವಾಗಿರುವ–ನಟರಾಜರ ನಿಲುವಿದ್ದಂತಿದೆ. ಜೊತೆಗೆ ಇಂಗ್ಲಿಷ್ ಮೇಷ್ಟ್ರಾಗಿ ನಟರಾಜ್ ತಾವು ಓದಿಕೊಂಡಿದ್ದನ್ನೆಲ್ಲ ಈ ಎರಡು ವ್ಯಕ್ತಿತ್ವಗಳ ವಿಷದೀಕರಣಕ್ಕಾಗಿ ಉಲ್ಲೇಖಗಳ ರೂಪದಲ್ಲಿ ಚೆಲ್ಲಾಡಿರುವುದನ್ನು ಮತ್ತು ಲಂಕೇಶರ ಮುದ್ದು ಶಬ್ದಗಳೆನಿಸಿದ ವಿಸ್ಮಯ, ಚಕಿತ, ಕಾತರ, ದುಗುಡ, ಬಲ್ಲೆ ಮುಂತಾದವನ್ನು ಶಬ್ಧಮುಗ್ಧರಾದಂತೆ ವಿಪುಲವಾಗಿ ಬಳಸುತ್ತಾ ಲಂಕೇಶರಂತೆಯೇ

ಬರೆಯಲು ಪ್ರಯತ್ನಪಟ್ಟಿರುವುದನ್ನು ನೋಡಿದರೆ, ಅವರು ಒಂದು ಸರಳ ಮಂತ್ರಮುಗ್ಧತೆಯಲ್ಲಿ ಈ ಕಥನವನ್ನು ಕಟ್ಟಿರುವ ಭಾವನೆ ಮೂಡುತ್ತದೆ. ಜೊತೆಗೆ ಈ ಕಥನವನ್ನು ಇವರ ಕಾಲದ ಸಾಂಸ್ಕೃತಿಕ ಚರಿತ್ರೆಯ ಭಾಗವಾಗಿ ಕಟ್ಟದೇ ಹೋಗಿರುವ– ಅಂದರೆ ಈ ಕಥನದಲ್ಲಿ ಇವರಿಬ್ಬರ ಕಥೆಗೆ ಇನ್ನಾರ ಕಥೆಯೂ ಕಿರುಧಾರೆಯಾಗಿ ಕೂಡ ಜೋಡಣೆಯಾಗದೆ ಹೋಗಿರುವ – ಕಾರಣದಿಂದಾಗಿ ಕಥನದ ಉದ್ದೇಶವೂ ಅಷ್ಟು ಘನವೆನಿಸುವುದಿಲ್ಲ.

ಹಾಗಾಗಿ ಈ ಪುಸ್ತಕ ಕನ್ನಡದ ಸಂಸ್ಕೃತಿ ಲೋಕದ ಇಬ್ಬರು 'ನಾಯಕ'ರ ವ್ಯಕ್ತಿತ್ವ ಆರಾಧನೆಯ ಒಂದು ವಿಶಿಷ್ಟ ರೋಚಕ ಶೈಲಿಯಿಂದಾಗಿ ಇತ್ತೀಚೆಗೆ ಸಾಹಿತ್ಯ ಲೋಕವನ್ನು ಪ್ರವೇಶಿಸುವ ಎಳೆಯರನ್ನೂ ಮತ್ತು ಕನ್ನಡ ಮನಸ್ಸನ್ನು ತಮ್ಮದೇ ರೀತಿಯಲ್ಲಿ ಕಟ್ಟಿದ ಎರಡು ಸೃಜನಶೀಲ ಮನಸ್ಸುಗಳ ಚಲನವಲನಗಳನ್ನು ಆಸಕ್ತಿದಾಯಕವಾಗಿ ಪರಿಶೀಲಿಸುವ ಪ್ರಯತ್ನವೊಂದಾಗಿ ಸಾಹಿತ್ಯದ ಗಂಭೀರ ಓದುಗರನ್ನೂ ಮೊದಲ ನೋಟಕ್ಕೇ ಸೆಳೆಯುವಂತಿದೆಯಾದರೂ, ಇದರ ಸಾರ್ಥಕತೆ ನಿಜವಾಗಿ ಒರೆಗೆ ಹಚ್ಚಲ್ಪಡುವುದು ಅದರ ವ್ಯವಧಾನದ ಓದಿನಲ್ಲಿ ಮತ್ತು ಚರ್ಚೆಯಲ್ಲಿ ಮಾತ್ರ ಎಂದು ಕಾಣುತ್ತದೆ.

('ಹೊಸ ಮನುಷ್ಯ': ಆಗಸ್ಟ್, ೨೦೧೪)

ಮೋದಿ ವಿಜಯದ ಆಘಾತದಲ್ಲಿ ಗಾಂಧಿ ಸ್ಮರಣೆ

ಪುಸ್ತಕ : **ಹಿಂದುತ್ವ ಅಥವಾ ಹಿಂದ್ ಸ್ವರಾಜ್ ಲೇ: ಯು.ಆರ್. ಅನಂತಮೂರ್ತಿ ಪ್ರ: ಆಭಿನವ,** ಬೆಂಗಳೂರು **ಪು: ೮೮ ಬೆಲೆ: ರೂ. ೧೦೦/–**

ಇದು ಡಾ. ಯು.ಆರ್. ಅನಂತಮೂರ್ತಿಯವರ ಕೊನೆಯ ಪುಸ್ತಕ. ಎಷ್ಟು ಕೊನೆಯದಾದ ಪುಸ್ತಕ ಎಂದರೆ, ಅದಕ್ಕೆ ಲೇಖಕನ ಮಾತುಗಳನ್ನು ಬರೆಯುವ ಮುನ್ನವೇ ಅವರು ಅಸುನೀಗಿದ್ದರು. ನಮ್ಮ ಹಿರಿಯ ಸಮಾಜವಾದಿ ಚಿಂತಕರೂ ಆಗಿದ್ದ ಅನಂತಮೂರ್ತಿಯವರು ಭಾರತೀಯ ಸಮಾಜವಾದಿ ಚಿಂತನೆಗೆ ಒಂದು ತಾತ್ವಿಕ ಭಿತ್ತಿಯಂತಿದ್ದ ಗಾಂಧಿ ಚಿಂತನೆಗೆ ಮತ್ತು ಆ ಮೂಲಕ ಆ ಚಿಂತನೆ ಕಟ್ಟಿಕೊಟ್ಟಿದ್ದ ಬಹುತ್ವ ಪ್ರಧಾನವಾದ ರಾಷ್ಟ್ರದ ಪರಿಕಲ್ಪನೆಗೆ ಈಗ 'ಮೋದಿಯುಗದ ಆರಂಭದಲ್ಲಿ–ತೀವ್ರ ಅಪಾಯಗಳು ಒದಗಿವೆ ಎಂಬ ಅವರ ಆತಂಕವೂ ಈ ಕೃತಿಯನ್ನು ಕಟ್ಟಿದಂತಿದೆ. ಇದರ ಭಾಗವಾಗಿ ಅವರು ತಮ್ಮ ಸಮಾಜವಾದಿ ಚಿಂತನೆಗೆ ಮೂಲ ಸ್ಫೂರ್ತಿಯಂತಿದ್ದ ಡಾ. ರಾಮಮನೋಹರ ಲೋಹಿಯಾ ಅವರ ಕೆಲ ನಿಲುವುಗಳನ್ನು ಪುನರಾವಲೋಕಕ್ಕೂ ಈಡುಮಾಡಿದ್ದಾರೆ. ಈ ದೃಷ್ಟಿಯಿಂದ ಈ ಕೃತಿಯನ್ನು ಅನಂತಮೂರ್ತಿಯವರ ಕೊನೆಯ

ಕೃತಿ ಹೇಗೋ ಹಾಗೇ ಅವರ ಚಿಂತನೆಯ ಆತ್ಯಂತಿಕ ಹಂತದ ಕೃತಿ ಎಂದೂ ಗುರುತಿಸಬಹುದು.

ನಮಗೆಲ್ಲ ತಿಳಿದಂತೆ ಅನಂತಮೂರ್ತಿಯವರಿಗೆ ಅವರ ಬದುಕಿನ ಕೊನೆಯ ದಿನಗಳಲ್ಲಿ ಮೋದಿ ರಾಜಕಾರಣವೆಂಬುದು ಅವರ ಜೀವನದ ಒಂದು ವ್ಯಸನವಾಗಿಬಿಟ್ಟಿತ್ತೇನೋ–ಆತ ಪ್ರಧಾನಿಯಾದರೆ ತಾವು ಈ ದೇಶದಲ್ಲಿರಲು ಇಷ್ಟಪಡುವುದಿಲ್ಲ ಎಂದು ಅವರು ಹೇಳುವಷ್ಟರ ಮಟ್ಟಿಗೆ–ಅವರನ್ನು ಕಾಡಿತ್ತು. ಅದರಿಂದಾಗಿ ಅವರು ಕೆಲ ವಲಯಗಳಿಂದ ವೈಯಕ್ತಿಕ ಅವಹೇಳನವನ್ನೂ ಎದುರಿಸಬೇಕಾಯಿತು. ಕೊನೆಗೆ ಮೋದಿ ಭಾರಿ ಬಹುಮತದಿಂದ ಗೆದ್ದಾಗ ಅವರು ಆಘಾತಗೊಂಡಿದ್ದರು. ಈ ಎಲ್ಲ ನೋವು–ಆಘಾತ–ತಲ್ಲಣಗಳು ಈ ಕೃತಿಯ ವಾಸ್ತುವನ್ನು ನಿರ್ಣಯಿಸಿದೆ.

ಈ ಕೃತಿ ಮುಖ್ಯವಾಗಿ ಭಾರತವನ್ನು ಕುರಿತ ಆಧುನಿಕ ಪರಿಕಲ್ಪನೆಯು ಗಾಂಧಿ ಮತ್ತು ಸಾವರ್ಕರ್ ಚಿಂತನೆಗಳೆಂಬ ಎರಡು ಮಾದರಿಗಳ ನಿರಂತರ ಸಂಘರ್ಷದಲ್ಲಿ ಮೂಡಿದೆ ಎಂಬ ಒಂದು ಐತಿಹಾಸಿಕ ಹಿನ್ನೋಟದಲ್ಲಿ ಕಟ್ಟಲ್ಪಟ್ಟಿದೆ. ಎಲ್ಲ ನೆಲೆಗಳ ಭಿನ್ನತೆಗಳೂ ರಾಷ್ಟ್ರ ಕಲ್ಪನೆಗೆ ಅಡ್ಡಿ ಎಂದು ಭಾವಿಸುವ ಸಾವರ್ಕರ್, ಭಿನ್ನತೆಗಳೇ ಭಾರತವನ್ನು ಉಳಿಸಿರುವ, ಉಳಿಸುವ ಜೀವಾಳ ಎಂದು ನಂಬಿದ ಗಾಂಧಿ 'ರಾಷ್ಟ್ರ ಪ್ರಭುತ್ವ'ವೆಂಬ ಆಧುನಿಕ ಪರಿಕಲ್ಪನೆಯನ್ನು ಕಟ್ಟಿಕೊಂಡ ರೀತಿಗಳನ್ನು ಕ್ರಮವಾಗಿ ಇವರಿಬ್ಬರ ಮುಖ್ಯ ಕೃತಿಗಳಾದ 'Essential of Hindutva' ಮತ್ತು 'ಹಿಂದ್ ಸ್ವರಾಜ್'ಗಳನ್ನು ಈ ಕೃತಿ ಸಂಕ್ಷಿಪ್ತವಾಗಿ ವಿಶ್ಲೇಷಿಸಲೆಳಸುತ್ತದೆ. ಇದರ ಭಾಗವಾಗಿ ಸಾವರ್ಕರರ ಅನುಯಾಯಿ ಹಾಗೂ ಗಾಂಧಿ ಹಂತಕ ನಾಥೂರಾಂ ಗೋಡ್ಸೆ ನ್ಯಾಯಾಲಯದಲ್ಲಿ ನೀಡಿದ ಅಂತಿಮ ಹೇಳಿಕೆಯನ್ನೂ ಸಾರಾಂಶದಲ್ಲಿ ದಾಖಲಿಸಿ ಅದನ್ನು ಪರಿಶೀಲಿಸುವ ಪ್ರಯತ್ನವನ್ನೂ ಮಾಡುತ್ತದೆ. ಈ ಎಲ್ಲ ವಿಶ್ಲೇಷಣೆ–ಪರಿಶೀಲನೆಗಳ ತಾರ್ಕಿಕ ಅಂತ್ಯವೆಂಬಂತೆ, ಅನುಬಂಧದಲ್ಲಿ ಡಗ್ಲಸ್ ಲುಮ್ಮೀಸ್ ಎಂಬ ಗಾಂಧಿ ಚಿಂತಕನ 'ಕಲ್ಪಿಸಿಕೊಳ್ಳಬಲ್ಲಷ್ಟು ಕ್ವಚಿತ್ತಾದ ಸೇನೆ' ಎಂಬ ಲೇಖನವನ್ನು ಸಂಗ್ರಹಿಸಿ ನೀಡಿ ಮೋದಿ ರಾಜಕಾರಣ ಕಟ್ಟಲೆತ್ನಿಸುತ್ತಿರುವ 'ಬಲಿಷ್ಠ ಭಾರತ'ದ ಅಪಾಯಗಳೆದುರು ಗಾಂಧೀಜಿಯ 'ಸಾತ್ವಿಕ ಭಾರತ'ದ ವ್ಯಾವಹಾರಿಕತೆ ಮತ್ತು ಮೌಲಿಕತೆಗಳನ್ನು ಎತ್ತಿ ಹಿಡಿಯುವ ಪ್ರಯತ್ನವನ್ನೂ ಈ ಕೃತಿಯಲ್ಲಿ ಮಾಡಲಾಗಿದೆ.

ಈ ಎಲ್ಲ ವಿವೇಚನೆಗೆ ಪೀಠಿಕೆಯಾಗಿ ಲೇಖಕರು ಎಲ್ಲ ಧರ್ಮಗಳಲ್ಲಿರುವ–ಮುಖ್ಯವಾಗಿ ಹಿಂದೂ ಮತ್ತು ಕ್ರಿಶ್ಚಿಯನ್–ಒಳ್ಳೆಯತನ ಮತ್ತು ಕೆಟ್ಟತನಗಳ ಬಗೆಗಿರುವ ನಂಬಿಕೆಗಳ ಪರಾಮರ್ಶೆಯನ್ನೂ–ಸಾಹಿತ್ಯ ಸಂಕಥನಗಳಲ್ಲಿನ ಈ ಸಂಬಂಧದ ಕಥೆ–ಉಪಕಥೆಗಳ ಹಿನ್ನೆಲೆಯೊಂದಿಗೆ–ಮಾಡುತ್ತಾರೆ. ಇಲ್ಲೆಲ್ಲ ಅನಂತಮೂರ್ತಿಯವರ ಅಪಾರ ಓದು ಮತ್ತು ವಿದ್ವತ್ತು ಎದ್ದು ಕಾಣುವಂತಿದೆ. ಆದರೆ, ಇದೆಲ್ಲವೂ ಸಡಿಲ ವಾಕ್ಯಗಳು ಮತ್ತು ವಿಚಾರಗಳು ಅಸ್ತವ್ಯಸ್ತವಾಗಿ ಚೆಲ್ಲಾಡಿದಂತೆ ವಿಂಗಡಿಸಲ್ಪಟ್ಟಿರುವ ಅಧ್ಯಾಯಗಳಿಂದಾಗಿ ಈ ಕೃತಿ ಒಂದು

ದೃಷ್ಟಿಕೇಂದ್ರವನ್ನು ಪಡೆದುಕೊಳ್ಳುವುದಿಲ್ಲ. ಇದನ್ನು ಅವರ ಅನಾರೋಗ್ಯದ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬಹುದಾದರೂ, ಈ ಕೃತಿ ಮಾಡುವ ವಿವೇಚನೆ ಎತ್ತುವ ಗಾಂಧಿ ಪ್ರಭಾವದಲ್ಲಿ ತನ್ನೆಲ್ಲ ಅಪಾಯಗಳ ಮುನ್ಸೂಚನೆಗಳೊಂದಿಗೆ ಹಿನ್ನೆಲೆಗೆ ಸರಿದು ಅಪ್ರಸ್ತುತವೆನಿಸಿಹೋಗಿದ್ದ ಸಾವರ್ಕರ್ ಭಾರತ ಇಂದೇಕೆ–ಅದೂ ಇದ್ದಕ್ಕಿದ್ದಂತೆ–ಮುನ್ನೆಲೆಗೆ ಬರಲು ಸಾಧ್ಯವಾಗಿದೆ ಎಂಬ ಬಹು ಮುಖ್ಯ ಪ್ರಶ್ನೆಯನ್ನು ಲೇಖಕರು ಆಳದಲ್ಲಿ ಮುಖಾಮುಖಿಯಾಗಲು ಏಕೋ ಹಿಂಜರಿದಿದ್ದಾರೆ ಎಂಬ ಸಂಗತಿ ಈ ಕೃತಿಯ ಪ್ರಾಮುಖ್ಯತೆ ಮತ್ತು ಪ್ರಸ್ತುತತೆಗಳಿಗೆ ಕುಂದುಂಟು ಮಾಡಿದೆ ಎಂದೇ ಹೇಳಬೇಕು.

ಏಕೆಂದರೆ, ಗಾಂಧಿಯ ಆದರ್ಶವಾದಿ ಸಾತ್ವಿಕ ರಾಷ್ಟ್ರ ಕಲ್ಪನೆಗೆ ಆಧುನಿಕ ಜಗತ್ತಿನ ಪರಿಪ್ರೇಕ್ಷ್ಯದಲ್ಲಿ ವ್ಯಾವಹಾರಿಕ ಬೆನ್ನುಮೂಳೆ ಒದಗಿಸಲೆತ್ನಿಸಿದ ನೆಹರೂ–ಲೋಹಿಯಾ–ಅಂಬೇಡ್ಕರರ ತ್ರಿಕೋನಾತ್ಮಕವೆಂದು ಕರೆಯಬಹುದಾದ ಪ್ರಯತ್ನಗಳನ್ನು ಗಾಂಧಿ ಅಭಿಮಾನದ ಮಂಜುಗಣ್ಣಿನಿಂದಷ್ಟೇ ಇಲ್ಲಿ ನೋಡಲಾಗಿದೆ. ಬದಲಿಗೆ, ಅವನ್ನು ಒಂದಷ್ಟು ವಿವರವಾದ ವಿಮರ್ಶೆಗೆ ಒಳಪಡಿಸಿದ್ದಲ್ಲಿ ಈ ಕೃತಿ ಮಿಡಿಯುವ ಜೀವದೊಂದಿಗೆ ಒಂದಿಷ್ಟು ಉಸಿರಾಡತೊಡಗುವ ಸಾಧ್ಯತೆ ಇರುತ್ತಿತ್ತು. ಬದಲಿಗೆ ಅನಂತಮೂರ್ತಿಯವರು ಇಲ್ಲಿ ತಾವು ಇತ್ತೀಚಿನ ದಿನಗಳಲ್ಲಿ ಸಂಭ್ರಮಪೂರ್ಣವಾಗಿ ಬೆಂಬಲಿಸುತ್ತಿದ್ದ ಕಾಂಗ್ರೆಸ್ ಪಕ್ಷ ಮತ್ತು ಅದರ ನಾಯಕರ ದೌರ್ಬಲ್ಯಗಳನ್ನು ಅಲ್ಲಲ್ಲಿ ಟೀಕಿಸುವ ಪ್ರಯತ್ನ ಮಾಡುವರಾದರೂ, ಅದು ಕೃತಿಯ ಒಟ್ಟು ತರ್ಕದ ಭಾಗವಾಗದೆ, ಕೃತಿ ಕಟ್ಟಿಕೊಡಲೆಣಿಸುವ ತಾತ್ವಿಕ ವಿಶ್ಲೇಷಣೆ ಅನುಮಾನಾಸ್ಪದವೆನಿಸುತ್ತದೆ. ಇದಕ್ಕಿಂತ ನಿರಾಶೆ ಹುಟ್ಟಿಸುವ ಸಂಗತಿಯೆಂದರೆ, ಮೋದಿ ವಿಜಯಕ್ಕೆ ಮಾಧ್ಯಮಗಳ ವರ್ತನೆಯನ್ನು ಹೊಣೆ ಮಾಡುವ ಲೇಖಕರ ಸುಲಭ ರೀತಿ ನೀತಿಗಳು.

ಒಟ್ಟಾರೆಯಾಗಿ, ಮೋದಿ ಆಗಮನ ಕೆಟ್ಟದೇ ಆಗಿರುವುದಾದರೆ, ಅದು ಈ ಕೃತಿ ಸೂಚಿಸುತ್ತಿರುವ ಹಾಗೆ ಇದ್ದಕ್ಕಿದ್ದಂತೆ ಸಂಭವಿಸಿದ್ದಲ್ಲ; ಅದು ಕಳೆದ ಅರವತ್ತು ವರ್ಷಗಳ ಕಾಲ ನಡೆದ ದೀರ್ಘ ರಾಜಕೀಯ ನಾಟಕದ ತಾರ್ಕಿಕ ಫಲವಾಗಿದ್ದು, ಇದರಲ್ಲಿ ನಮ್ಮೆಲ್ಲರ ಒಂದಲ್ಲ ಒಂದು ರೀತಿಯ ಪಾತ್ರವಿದೆ ಎಂಬ ಅರಿವಿನ ಸೂಚನೆ ಇಲ್ಲಿ ಸುತರಾಂ ಕಾಣೆಯಾಗಿ, ಕೃತಿ ರಕ್ತ ಪರಿಚಲನೆಯ ಕೊರತೆಯಿಂದಾಗಿ ತಣ್ಣಗೆ ಕೊರೆಯುತ್ತದೆ.

ಈ ಕೃತಿಯ ಬಗ್ಗೆ ದಾಖಲಿಸಬಹುದಾದ ಇನ್ನೆರಡು ಅಸಮಾಧಾನಗಳೆಂದರೆ, ಯುಗ ಚಿಂತಕನಾಗಿ ಮಹಾತ್ಮನೆನಿಸಿದ ಗಾಂಧಿಯನ್ನು ಕಾಲದ ಇಕ್ಕಟ್ಟುಗಳಿಗೆ ಸಿಲುಕಿ ಜಡನಾದಂತೆ ತೋರುವ ಸಾವರ್ಕರ್ ಎಂಬ ಸಂಕುಚಿತವಾದಿ ಚಿಂತಕನೆದುರಿಗಿಟ್ಟು ಚರ್ಚಿಸುವ ಇಲ್ಲಿನ ಪ್ರಯತ್ನ ಗಾಂಧಿಯ ಅಪಮೌಲ್ಯೀಕರಣಕ್ಕೆ ಎಡೆಮಾಡಿಕೊಟ್ಟಿದೆಯಲ್ಲದೆ, ಸಾವರ್ಕರ್‌ಗೆ ಸಲ್ಲದ ಗೌರವಾನ್ವಿತತೆಯನ್ನು ಒದಗಿಸುವಂತಿದೆ. ಇನ್ನೊಂದು, ಗೋಡ್ಸೆ ತಾನು ಗಾಂಧಿಯನ್ನು ಕೊಂದುದನ್ನು ಸಮರ್ಥಿಸುವ ಭಾವಪ್ರಚೋದಕ ಹೇಳಿಕೆಯನ್ನು ಅನಗತ್ಯವಾಗಿ ಎರಡು

ಪುಟಗಳಷ್ಟು ವಿಸ್ತಾರವಾಗಿ ನಿರೂಪಿಸುವ ಈ ಕೃತಿ, ಅದರ ದೋಷಗಳನ್ನು, ಇದು ಸಾವರ್ಕರ್ ಚಿಂತನೆಯ ಫಲ ಎಂದು ಎರಡೇ ಸಾಲುಗಳಲ್ಲಿ ತಿರಸ್ಕರಿಸುವ ಮೂಲಕ ಗೊತ್ತಿದ್ದೋ ಗೊತ್ತಿಲ್ಲದೆಯೋ ಸುಪ್ತ ಗೋಡ್ಸೆವಾದವನ್ನು ಬಡಿದೆಬ್ಬಿಸಲು ಆಸ್ಪದ ನೀಡಿದೆ.

ಈ ಅನಾಹುತಗಳಿಗೆಲ್ಲ ಮುಖ್ಯ ಕಾರಣ ಈ ಕೃತಿಯ ಆರಂಭದಲ್ಲಿ ಸೂಚಿತವಾಗಿ, ಈ ಕೃತಿಯ ಹಿಂದೆ ಕೆಲಸ ಮಾಡಿದಂತಿರುವ; ಸಮಸ್ಯೆ ಏನಿದ್ದರೂ ಹಿಂದೂತ್ವದ್ದೇ ಹೊರತು ಹಿಂದೂ ಧರ್ಮದ್ದಲ್ಲ ಎಂಬ ಪ್ರದರ್ಶನಪ್ರಿಯ, ಭೋಳೆ (ಯಾರನ್ನೋ ಮೆಚ್ಚಿಸಲು ಹವಣಿಸುವ) ಪ್ರತಿಪಾದನೆಯೇ ಆಗಿದೆ. ನೀವು ಒಳ್ಳೆಯದೆಂದು ನಂಬಿ ಆಚರಿಸುವ ಧರ್ಮಕ್ಕೆ ಒಂದು ನಿರ್ದಿಷ್ಟ ಹೆಸರಿನ ಹೆಮ್ಮೆಯ ಪ್ರದರ್ಶನಪ್ರಿಯತೆ ಏಕೆ? ಧರ್ಮ ರಾಜಕಾರಣವಾಗಿ ಪರಿವರ್ತಿತವಾಗುವುದೂ, ಎಲ್ಲ ಅನಾಹುತಗಳು ಆರಂಭವಾಗುವುದೂ ಅಲ್ಲಿಯೇ.

(‘ಹೊಸ ಮನುಷ್ಯ’, ಡಿಸೆಂಬರ್, ೨೦೧೪)

ಗಾಂಧಿ ಉಲ್ಲೇಖ–ಉವಾಚಗಳ ಗೊಂಡಾರಣ್ಯ

ಪುಸ್ತಕ: ಗಾಂಧಿ ಪ್ರಣೀತ ಧರ್ಮದರ್ಶಿತ್ವ ಲೇ. ಪ. ಮಲ್ಲೇಶ್ ಪ್ರ:ಅನನ್ಯ ಪ್ರಕಾಶನ, ಮೈಸೂರು ಪು: ೧೬೮ ಬೆಲೆ: ರೂ ೧೬೦/–

ಲೇಖಕ ಪ. ಮಲ್ಲೇಶ್ ಹಿರಿಯ ಸಮಾಜವಾದಿಗಳು. ಮೂಲ ಸಮಾಜವಾದಿ ಪಕ್ಷದ ಸದಸ್ಯರಾಗಿದ್ದವರು. ಸಮಾಜವಾದಿ ಪಕ್ಷದ ಲೇಖಕ–ಬುದ್ಧಿಜೀವಿ ಗುಂಪು ೭೦–೮೦ರ ದಶಕಗಳಲ್ಲಿ ಕೈಗೊಂಡ ಜಾತಿವಿನಾಶ ಸಮ್ಮೇಳನ, ಅಖಿಲ ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಒಕ್ಕೂಟ, ‘ಮಾನವ’ ಪತ್ರಿಕೆಯ ಪ್ರಕಾಶನ, ನವನಿರ್ಮಾಣ ಸಮಿತಿ ಹಾಗೂ ಜೆಪಿಯವರ ಸಂಪೂರ್ಣ ಕ್ರಾಂತಿ ಆಂದೋಲನಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದವರು. ಸಮಾಜವಾದಿ ಪಕ್ಷ ಜನತಾಪಕ್ಷದಲ್ಲಿ ಲೀನಾವಾದ ನಂತರ ಆ ಪಕ್ಷದ ಅಧಿಕೃತ ಸದಸ್ಯರಾಗಿ ಅದರ ರಾಜಕಾರಣದಲ್ಲೂ ಭಾಗಿಯಾಗಿ ಒಮ್ಮೆ ಚುನಾವಣೆಗೆ ನಿಂತೂ ಅದರ ‘ಸವಿ’ ಅನುಭವಿಸಿದವರು. ಬಹಳಷ್ಟು ಸಮಾಜವಾದಿಗಳಂತೆ ಗಾಂಧಿ ವಿಚಾರಗಳ ಬಗ್ಗೆ ಒಲವುಳ್ಳವರಾಗಿ ಹಲವು ಗಾಂಧಿವಾದಿ ಸಂಘ–ಸಂಸ್ಥೆಗಳೊಂದಿಗೂ ಸಂಪರ್ಕವಿರಿಸಿಕೊಂಡವರು. ಅವರನ್ನು ನಾನು ಮುವ್ವತ್ತೈದು ವರ್ಷಗಳಿಂದ ಬಲ್ಲೆ. ಎಪ್ಪತ್ತರ ಹರೆಯದಲ್ಲೂ ಹದಿವಯಸ್ಸಿನವರ ಉತ್ಸಾಹದೊಂದಿಗೆ ಅವರು ಗಾಂಧಿವಾದಿ–ಸಮಾಜವಾದಿ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವವರು.

ಮಲ್ಲೇಶ್ ಅವರ ಬರವಣಿಗೆಯ ಹವ್ಯಾಸದ ಹೆಚ್ಚು ಪರಿಚಯವಿಲ್ಲದ ನಾನು ಅವರ ಈ ಪುಸ್ತಕವನ್ನು ಸಾಕಷ್ಟು ಕುತೂಹಲದಿಂದಲೇ ಓದಿದೆ. ಪುಸ್ತಕವನ್ನು ಮಲ್ಲೇಶ್, ಗಾಂಧಿವಾದದ ವಿವಿಧ ಪರಿಕಲ್ಪನೆಗಳನ್ನು–ಸತ್ಯ, ಅಹಿಂಸೆ, ಸತ್ಯಾಗ್ರಹ, ಅಪರಿಗ್ರಹ, ಸರ್ವೋದಯ ಇತ್ಯಾದಿ–ಎಂಟು ಅಧ್ಯಾಯಗಳಲ್ಲಿ ವಿಂಗಡಿಸಿ ಪರಿಚಯಿಸುವ ಪ್ರಯತ್ನ ಮಾಡಿದ್ದಾರೆ. ಕೊನೆಯ ಒಂಬತ್ತನೇ ಅಧ್ಯಾಯದಲ್ಲಿ ಲೋಹಿಯಾ ಅವರು ಗಾಂಧಿಯ ಧರ್ಮದರ್ಶಿತ್ವದ ಪರಿಕಲ್ಪನೆಗೆ ಒಂದು ವಾಸ್ತವ ಆಕಾರ ಕೊಡಲು ತಮ್ಮ ಜೀವನದ ಕೊನೆಯ ದಿನಗಳಲ್ಲಿ ಲೋಕಸಭೆಯಲ್ಲಿ ಮಂಡಿಸಲೆತ್ನಿಸಿದ ಭಾರತೀಯ ಧರ್ಮದರ್ಶಿತ್ವ ೧೯೬೭ರ ಕರಡು ಮಸೂದೆಯ ಕನ್ನಡಾನುವಾದವನ್ನು ನೀಡಿದ್ದಾರೆ.

ಈ ಪುಸ್ತಕವನ್ನು ಬರೆಯಲು ಲೇಖಕರು ಸಾಕಷ್ಟು ಪರಿಶ್ರಮಿಸಿದ್ದಾರೆ. ಗಾಂಧಿ ಸಾಹಿತ್ಯ ಮತ್ತು ಗಾಂಧಿ ಕುರಿತ ಸಾಹಿತ್ಯದ ವ್ಯಾಪಕ ಅಧ್ಯಯನದ ಸಾಕ್ಷಿಗಳು ಈ ಪುಸ್ತಕದ ತುಂಬಾ ಉಲ್ಲೇಖಗಳ ಮೇಲೆ ಉಲ್ಲೇಖಗಳ ರೂಪದಲ್ಲಿ ಕಾಣಸಿಗುತ್ತವೆ. ಆದರೆ ತೊಂದರೆ ಎಂದರೆ, ಲೇಖಕರು ಆ ಉಲ್ಲೇಖಗಳ ರಾಶಿಯಲ್ಲೇ ಮುಳುಗಿಹೋಗಿ ದಾರಿಗಾಣದೆ ಆ ರಾಶಿಯ ಸುತ್ತಲೇ ಗಿರಕಿ ಹೊಡೆಯುತ್ತಾ ತಾವು ಹೇಳಬೇಕಾದ್ದನ್ನು ಸ್ಪಷ್ಟವಾಗಿ ಹೇಳಲಾಗದೆ ಭಾರಿ ಭಾರಿ ಶಬ್ದಗಳ ಹೆಣಿಗೆಯ ಉರುಳಲ್ಲಿ ತಾವೇ ಸಿಕ್ಕಿಹಾಕಿಕೊಳ್ಳುತ್ತಾರೆ. ಈ ಕೆಲವು ಉದಾಹರಣೆಗಳನ್ನು ನೋಡಿ:

'ಅಧ್ಯಾತ್ಮ ಮತ್ತು ನೈತಿಕತೆಯ ಪ್ರಭಾವವಲಯದಲ್ಲಿ ಗಾಂಧಿ ಆರ್ಥಿಕ ಸುಳಿವುಗಳನ್ನು ಧ್ವನಿತವಾಗಿ ಪರಿಭ್ರಮಿಸಿದರು. ವ್ಯಕ್ತಿಗಳ ಜೀವನದಲ್ಲಿ ಧರ್ಮ ಪವಾಡಸದೃಶ ಕ್ರಿಯೆಯಲ್ಲಿ ತೊಡಗುವುದಲ್ಲದೆ ಮಾದರಿ ಬದುಕಿನ ಪ್ರಮುಖ ಅಂಗವಾಗಿ ಕೈಂಕರ್ಯ ಪಡೆಯುತ್ತದೆ'(ಪು೧೯)

'ಸಾಮ್ರಾಜ್ಯಶಾಹೀ, ವಸಾಹತುಶಾಹೀ ಮತ್ತು ಬಂಡವಾಳಶಾಹಿಗಳ ಬಿಗಿಮುಷ್ಠಿಯಲ್ಲಿ ಭಾರತದ ಅಸ್ತವ್ಯಸ್ತವಾದ ಚರಿತ್ರೆ ಹಸಿರಾಗಿರುವಾಗಲೇ ಜಾಗತಿಕ ಕೈಗಳಲ್ಲಿ ಸಂಪತ್ತು ಕೇಂದ್ರೀಕೃತಗೊಂಡು ಸಾರ್ವತ್ರಿಕ ಬದುಕು ಪಕ್ಷಾತೀತವಾಗಿ ಚದುರಿಹೋಗಿವೆ' (ಪು: ೪೬)

'ಕ್ರಿಯಾಶೀಲತೆ, ಧೈರ್ಯಗಳಲ್ಲಿ ಮೂಲಭೂತ ಬದಲಾವಣೆ ಅಗತ್ಯ ಇಲ್ಲದೇ ಹೋದಲ್ಲಿ ಅನಾಸಕ್ತಿ ಹೇಡಿತನ ತಲೆ ಹಾಕುತ್ತದೆ. ಜತೆಗೆ ನಿರ್ಬಂಧ ಬಂಧದಲ್ಲಿ ಹಿಂಸೆ ಇಣುಕಬಾರದು ಹಾಗೂ ಪ್ರಗಲ್ಭರು ಕಟ್ಟಿಕೊಳ್ಳುವ ಸ್ವಾರ್ಥಪರ ಕೋಟೆಗಳಲ್ಲಿ ಕ್ರಿಯಾಶೀಲತೆಯನ್ನು ದೂರವಿಡಬೇಕು.'(ಪು: ೬೧)

'ಈ ವಿಶಿಷ್ಟವಾದ, ನಿಯತವಾದ, ಕರಾರುವಾಕ್ಕಾದ ಹಂಚಿಕೆಯಲ್ಲಿ ಅಹಿಂಸೆ ಜೀವತಂತುವಾಗಿ ಲುಬ್ಧವಾಗಿರುತ್ತದೆ ಮತ್ತು ಧರ್ಮದರ್ಶಿತ್ವಕ್ಕೆ ಶ್ರೀರಕ್ಷೆಯಾಗಿ ನಿಲ್ಲುತ್ತದೆ.' (ಪು: ೭೩)

'ಅವರ ನಿರೀಕ್ಷೆ ವ್ಯಕ್ತಿಯ ಸಮಷ್ಟಿಯ ಪ್ರಾಪಂಚಿಕ ಜೀವನದಲ್ಲಿ ಅವಿನಾಭಾವ ಸಂಬಂಧಗಳನ್ನು ಗುರುತಿಸುವ, ತಮ್ಮೊಳಗೇ ಅಂತರ್ಗತವಾಗಿ ನೆಲೆ ನಿಂತಿರುವ ಜವಾಬ್ದಾರಿ ತ್ಯಾಗಗಳ ಸಮನ್ವಯ ಕ್ರಿಯೆಯಯನ್ನು'.(ಪು: ೧೧೨)

'ಒಟ್ಟಾರೆ ಸಮಾಜದ ಆರೋಗ್ಯದ ಹಿತದೃಷ್ಟಿಯುಳ್ಳ ಸಮಂಜಸ ಪ್ರತಿಕ್ರಿಯೆಯ ಬದ್ಧತೆಯಿಂದ ವ್ಯವಹರಿಸಬೇಕು' (ಪು: ೧೪೫)

ಲೇಖಕರು ತಮ್ಮ ಪರಿಚಯದಲ್ಲಿ, ತಾವು ಡಿಎಲ್ಎನ್ ಮತ್ತು ತೀನಂಶ್ರೀ ಅವರಿಂದ ಕನ್ನಡ ಕಲಿತದ್ದು ಎಂದು ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. ಆದರೆ ಈ ಕನ್ನಡವನ್ನು ಏನೆಂದು ಓದಿ ಅರ್ಥ ಮಾಡಿಕೊಳ್ಳುವುದು? ಪುಸ್ತಕದ ಮೊದಲಿಂದ ಕೊನೆವರೆಗೆ ಆವರಿಸಿರುವ ಅರ್ಥಸಂದಿಗ್ಧತೆಗಳನ್ನು ಹೊತ್ತ ಭಾರಿ ಶಬ್ದಗಳ ಹೆಬ್ಬಂಡೆಗಳ ಮಧ್ಯೆ ದಾರಿ ಮಾಡಿಕೊಂಡು, ಕಾಲು ಕಾಲಿಗೆ ತೊಡರಿಕೊಳ್ಳುವ ಗಾಂಧಿ ಮತ್ತು ಗಾಂಧಿ ವಿದ್ವಾಂಸರ ಉವಾಚಗಳ ಹೆಬ್ಬಳ್ಳಿಗಳನ್ನು ನಿವಾರಿಸಿಕೊಂಡು ಪುಸ್ತಕವನ್ನು ಅಂತೂ ಓದಿ ಮುಗಿಸಿದಾಗ ಸ್ಥೂಲವಾಗಿ ನಮಗೆ ಗೊತ್ತಾಗುವುದು, ಇವರು ಹೇಳುತ್ತಿರುವುದು ಸಮಾಜವಾದಿಗಳು, ವಿಶೇಷವಾಗಿ ಸರ್ವೋದಯ ಸಮಾಜವಾದಿಗಳು ಪುರಾತನ ಕಾಲದಿಂದಲೂ ಹೇಳುತ್ತಿರುವ ರಾಜಕೀಯ ಕಥೆಯನ್ನೇ ಎಂದು. ಅದೆಂದರೆ, ನೆಹ್ರೂ ಅವರು ಗಾಂಧಿ ಅರ್ಥಶಾಸ್ತ್ರದ ಸೂತ್ರಗಳನ್ನು ಪಾಲಿಸಲು ನಿರಾಕರಿಸಿದ ಪರಿಣಾಮವಾಗಿ ದೇಶ ಸಂಕಷ್ಟಕ್ಕೆ ಸಿಲುಕಿ, ಇಂದಿನ ಜಾಗತೀಕರಣಕ್ಕೆ ಕಾರಣವಾಗಿದ್ದು, ಗ್ರಾಮ ಸ್ವರಾಜ್ಯ ಸ್ಥಾಪನೆಯ ಮೂಲಕ ಈ ಎಲ್ಲ ಸಮಸ್ಯೆಗಳನ್ನು ಪರಿಹರಿಸಬಹುದು. ಮಲ್ಲೇಶ್ ಅವರ ಮಾತುಗಳಲ್ಲೇ ಹೇಳುವುದಾದರೆ: 'ಗಾಂಧೀಜಿಯ ಗ್ರಾಮ ಸ್ವರಾಜ್ಯವನ್ನು ನಿಷ್ಠೆಯಿಂದ ಪರಿಪಾಲಿಸಿದ್ದೇ ಆದರೆ ಗ್ರಾಮೀಣ ಭಾರತ ಕಾಯಕದಲ್ಲಿ ತಲ್ಲೀನನಾಗಿ ಅಭಿವೃದ್ಧಿಯತ್ತ ದಾಪುಗಾಲು ಹಾಕುತ್ತದೆ' (ಪು: ೧೨೦).

ನಲವತ್ತು-ಐವತ್ತು ವರ್ಷಗಳ ಕಾಲ ಸಮಾಜವಾದಿ ರಾಜಕಾರಣ ಮಾಡಿರುವ ಮಲ್ಲೇಶ್ ಅವರಿಗೆ ಇಂತಹ ಗ್ರಾಮ ಸ್ವರಾಜ್ಯದ ಕನಸು ಇನ್ನೂ ಬೀಳುತ್ತಿದೆ ಎಂಬುದು ಸಂತೋಷದ ವಿಚಾರವೇ ಆದರೂ, ಅವರ ಈ ರಾಜಕಾರಣ, ಅದನ್ನಿನ್ನೂ ಕನಸಾಗಿ ಮಾತ್ರ ಏಕೆ ಕಾಣುವಂತಾಗಿದೆ ಎಂದು ಕೇಳಿಕೊಳ್ಳುವಂತೆ ಮಾಡಿದ್ದರೆ, ಅವರು ಇಂತಹ ಪುರಾಣ ಪುಸ್ತಕವನ್ನು ಬರೆಯುತ್ತಿರಲಿಲ್ಲ. ಬದಲಿಗೆ ಈ ಜಾಗತೀಕರಣದ ಪರಿಣಾಮಗಳ ಮಧ್ಯೆ ಗಾಂಧಿ ಇದ್ದರೆ ಅವರ ಗ್ರಾಮ ಸ್ವರಾಜ್ಯದ ಮತ್ತು ಅದಕ್ಕೆ ಬೆನ್ನೆಲುಬಾಗಿರಬಹುದಾದ ಧರ್ಮದರ್ಶಿತ್ವ ಪರಿಕಲ್ಪನೆ ಹೇಗಿರುತ್ತಿತ್ತು ಎಂಬುದರ ಹೊಳಹುಗಳನ್ನು ಕುರಿತ ಪುಸ್ತಕವನ್ನು ಬರೆಯಬಹುದಿತ್ತೇನೋ. ಅದೇನೇ ಇರಲಿ, ಈ ಉವಾಚ-ಉಲ್ಲೇಖಗಳ ಗೊಂಡಾರಣ್ಯದ ನಡುವೆಯೂ ಇಂತಹ ಸುಲಭ ಸುಂದರ ಕನಸು ಕಾಣುವಂತಹ ಲೇಖಕರ ಭೋಳೆತನದಿಂದಾಗಿಯೋ ಏನೋ ಇಲ್ಲಿ 'ಚರ್ಚಿತ'ವಾಗಿರುವ ಸತ್ಯ, ಅಹಿಂಸೆ, ಸತ್ಯಾಗ್ರಹ,

ಅಪರಿಗ್ರಹ, ಸರ್ವೋದಯ, ಗ್ರಾಮ ಸ್ವರಾಜ್ಯ, ಧರ್ಮದರ್ಶಿತ್ವ ಇತ್ಯಾದಿಗಳು ಹೇಗೆ ಒಂದಕ್ಕೊಂದು ಸಾವಯವವಾಗಿ ಸಂಬಂಧಿಸಿಕೊಂಡು ಒಂದು ಬದಲಿ ಬದುಕಿನ ಕ್ರಮದ ದರ್ಶನವನ್ನು ನೀಡುತ್ತವೆ ಎಂಬುದರ ಹೊಳಹನ್ನೂ ಈ ಪುಸ್ತಕ ನೀಡದಾಗಿದೆ. ಹಾಗಾಗಿಯೇ ಇವರು ಕೊನೆಯಲ್ಲಿ ಅನುವಾದ ಮಾಡಿಕೊಟ್ಟಿರುವ ಲೋಹಿಯಾ ಅವರ ಧರ್ಮದರ್ಶಿತ್ವ ಕರಡು ಮಸೂದೆಯ ತಲೆಬುಡವಾವುದೂ ಅರ್ಥವಾಗದಂತಿದೆ.

ಆದರೆ ಈ ಪುಸ್ತಕವನ್ನೋದಿದ್ದರಿಂದ ಒಂದು ಪ್ರಯೋಜನವಂತೂ ನನಗಾಗಿದೆ. ಇಲ್ಲಿನ ಕೆಲವು ಅಪರೂಪದ ಉವಾಚ-ಉಲ್ಲೇಖಗಳು ಗಾಂಧಿಯನ್ನು ಕುರಿತ ನನ್ನ ಆಸಕ್ತಿಯನ್ನು ಹೆಚ್ಚಿಸಿವೆ ಮತ್ತು ವಿಸ್ತರಿಸಿವೆ. ಹಾಗೆ ನೋಡಿದರೆ ಮಲ್ಲೇಶ್ ಈ ಪುಸ್ತಕವನ್ನು ಬರೆಯುವುದರ ಬದಲಾಗಿ ಇಲ್ಲಿನ ಉಲ್ಲೇಖ-ಉವಾಚಗಳನ್ನೇ ವ್ಯವಸ್ಥಿತವಾಗಿ ಜೋಡಿಸಿ ಪ್ರಕಟಿಸಿದ್ದರೆ ಗಾಂಧಿ ಅಧ್ಯಯನಕ್ಕೆ ಹೆಚ್ಚು ಪ್ರಯೋಜನವಾಗುತ್ತಿತ್ತು.

('ಹೊಸ ಮನುಷ್ಯ', ಜುಲೈ, ೨೦೧೫)

ಕೆಲ ಸಮಕಾಲೀನ: ಫೇಸ್‌ಬುಕ್ ಬರಹಗಳು

ರಾಜ್ಯೋತ್ಸವದ ಕನ್ನಡ ಬಡಾಯಿ

ಮುಖ್ಯಮಂತ್ರಿ ಸಿದ್ಧರಾಮಯ್ಯನವರು ರಾಜ್ಯೋತ್ಸವದ ಸಮಾರಂಭವೊಂದರಲ್ಲಿ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣದ ಮಾಧ್ಯಮವಾಗಿ ಕನ್ನಡ ಕಡ್ಡಾಯ ಮಾಡಲು ಸಂವಿಧಾನ ತಿದ್ದುಪಡಿ ಮಾಡಲು ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಕೇಂದ್ರವನ್ನು ಆಗ್ರಹಿಸಿದ್ದಾರೆ! ಇದೇ ಸಂದರ್ಭದಲ್ಲಿ, ಅವರು ಕನ್ನಡ ಭಾಷೆ ಕುರಿತ ತಮ್ಮ ಬದ್ಧತೆಯನ್ನು ಘಂಟಾಘೋಷವಾಗಿ (ಇದು ರಾಜ್ಯೋತ್ಸವ ಸಂದರ್ಭವಲ್ಲವೆ?) ಹೇಳಿಕೊಂಡಿರುವರಾದರೂ, ಅದನ್ನು ಕನ್ನಡಿಗರು ನಂಬುವ ಸ್ಥಿತಿಯಲ್ಲಿಲ್ಲ. ಏಕೆಂದರೆ, ಪ್ರಾಥಮಿಕ ಶಿಕ್ಷಣ ಮಾಧ್ಯಮ ಕುರಿತು ನಮ್ಮ ಸರ್ವೋಚ್ಚ ನ್ಯಾಯಾಲಯದ ಮಾರಕ ತೀರ್ಪು ಬಂದು ಒಂದು ವರ್ಷದ ಮೇಲಾಯಿತಾದರೂ, ರಾಜ್ಯ ಸರ್ಕಾರ ಅದರ ಮಾರಕತೆಯನ್ನು ಪರಿಹರಿಸಿಕೊಳ್ಳಲು ಏನು ಮಾಡಿದೆ ಎಂದು ಈ ಸಂದರ್ಭದಲ್ಲಿ ಕೇಳಬೇಕಿದೆ. ಈ ಪ್ರಶ್ನೆಗೆ ಉತ್ತರವೆಂದರೆ: ಏನೂ ಮಾಡಿಲ್ಲ. ಹಾಗಾಗಿ ಸಿದ್ಧರಾಮಯ್ಯನವರ ಮಾತು ರಾಜ್ಯೋತ್ಸವ ಸಂದರ್ಭದ ಔಪಚಾರಿಕ ಮಾತೆಂದೇ ಪರಿಗಣಿಸಬೇಕಾಗಿದೆ.

ಸಿದ್ಧರಾಮಯ್ಯನವರಿಗೆ ಕನ್ನಡ ಭಾಷೆ ಮತ್ತು ಕನ್ನಡ ಮಕ್ಕಳ ಶೈಕ್ಷಣಿಕತೆಗಳ ಬಗ್ಗೆ ನಿಜವಾದ ಬದ್ಧತೆ–ಕಳಕಳಿ ಇದ್ದಿದ್ದರೆ, ಈ ಹೊತ್ತಿಗೆ ಸಂವಿಧಾನ ತಿದ್ದುಪಡಿಗೆ ಅಗತ್ಯವಾದ ತಮ್ಮ ಪಾಲಿನ ಕ್ರಮಗಳನ್ನು ಕೈಗೊಂಡಿರುತ್ತಿದ್ದರು. ಅಂದರೆ, ಪ್ರಧಾನಿಯನ್ನು ಭೇಟಿಯಾಗಿ ಈ ಸಂಬಂಧ ಮಾತುಕತೆಯಾಡುತ್ತಿದ್ದರು ಮತ್ತು ಇದಕ್ಕೆ ಪೂರಕವಾಗಿ ಇತರ ರಾಜ್ಯಗಳ ಮುಖ್ಯಮಂತ್ರಿಗಳೊಂದಿಗೆ ಸಮಾಲೋಚನೆಗಳನ್ನು ಆರಂಭಿಸಿರುತ್ತಿದ್ದರು. ಮುಖ್ಯವಾಗಿ, ನಮ್ಮ ರಾಜ್ಯದ ಸಂಸತ್ ಸದಸ್ಯರಿಗೆ, ವಿಶೇಷವಾಗಿ ತಮ್ಮ ಕಾಂಗ್ರೆಸ್ ಪಕ್ಷದ ಸಂಸತ್ ಸದಸ್ಯರಿಗೆ ಈ ಕುರಿತು ಸಂಸತ್ನಲ್ಲಿ ಪ್ರಸ್ತಾಪವನ್ನಾದರೂ ಮಾಡುವಂತೆ ಸೂಚಿಸುವ ಔಪಚಾರಿಕ ಕೆಲಸವನ್ನಾದರೂ ಮಾಡುತ್ತಿದ್ದರು.

ಸಿದ್ಧರಾಮಯ್ಯನವರು ತಮ್ಮ ಕನ್ನಡ ಬದ್ಧತೆಯ ಹೊರತಾಗಿಯೂ ಹಾಗೆ ಮಾಡಿಲ್ಲವೆಂದರೆ, ಶಿಕ್ಷಣದಲ್ಲಿ ಭಾರತೀಯ ಭಾಷೆಗಳ ಬಳಕೆ ವಿರುದ್ಧವಾದ ಲಾಬಿಯೊಂದು ಸರ್ಕಾರದ ನೀತಿ ನಿರ್ಣಯಗಳ ಉನ್ನತ ವಲಯಗಳಲ್ಲಿ ಕೆಲಸ ಮಾಡುತ್ತಿದೆ ಎಂದು ಊಹಿಸಬೇಕಾಗುತ್ತದೆ. ಹತ್ತು-ಹನ್ನೆರಡು ವರ್ಷಗಳ ಹಿಂದೆ ನಮ್ಮ ಸರ್ಕಾರಿ ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿಸಬೇಕೆಂಬ ಸಾರ್ವಜನಿಕ ಒತ್ತಡ ನಿರ್ಮಿಸಿದ ಶಕ್ತಿಗಳ ಹಿಂದೆ ಯಾರಿದ್ದರು ಎಂಬುದನ್ನು ನೆನಪಿಸಿಕೊಳ್ಳಿ. ಒಂದನೇ ತರಗತಿಯಿಂದಲೇ ನಮ್ಮ ಮಕ್ಕಳಿಗೆ ಇಂಗ್ಲಿಷ್ ಕಲಿಸಲಾರಂಭಿಸಬೇಕೆಂದು ಒತ್ತಾಯಿಸಿದ ಇವರಾರೂ ಇದಕ್ಕೆ ಮೊದಲು ಶಿಕ್ಷಣ ಮಾಧ್ಯಮವಾಗಿ ಕನ್ನಡವನ್ನು ಕಡ್ಡಾಯ ಮಾಡಿದ ನಂತರ ಇದನ್ನು ಮಾಡಿ ಎಂದು ಹೇಳಲಿಲ್ಲ ಎಂಬುದನ್ನೂ ಗಮನಿಸಿ.

ಇತ್ತೀಚಿನ ವರ್ಷಗಳಲ್ಲಿ ಒಂದು ಸಂಗತಿಯಂತೂ ಸ್ಪಷ್ಟವಾಗಿದೆ: ನಾಡು-ನುಡಿಗಳ ಉತ್ಕರ್ಷದ ವಿಷಯಗಳನ್ನು ಸಾರ್ವಜನಿಕ ಜೀವನದ ಮುಂಚೂಣಿಗೆ ತರಬೇಕಾದ ನಮ್ಮ ಲೇಖಕ-ಬುದ್ಧಿಜೀವಿಗಳಿಗೆ ಕನ್ನಡ ಶಿಕ್ಷಣ ಈಗ ಪ್ರಮುಖ ವಿಷಯವಾಗಿಲ್ಲ. ಕಾರಣ, ಅವರ ಬುದ್ಧಿಜೀವತ್ವದ ಆಧಾರಗಳೇ ಈ ನೆಲದಲ್ಲಿ ಬೇರುಬಿಟ್ಟವಗಳಾಗಿಲ್ಲ. ಅವರದ್ದು ಒಡಕು ವ್ಯಕ್ತಿತ್ವಗಳು. ಉದಾಹರಣೆಗೆ ನೋಡಿ. ನೃಪತುಂಗ ಪ್ರಶಸ್ತಿಯನ್ನೂ, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನವನ್ನೂ ಶಿಕ್ಷಣ ಮಾಧ್ಯಮದ ಪ್ರಶ್ನೆಯನ್ನು ಮುಂದೊಡ್ಡಿ ನಿರಾಕರಿಸಿದ ನಮ್ಮ ಲೇಖಕ-ಬುದ್ಧಿಜೀವಿಗಳಲ್ಲೇ ಶ್ರೇಷ್ಠ ವ್ಯಕ್ತಿತ್ವದವರೆನಿಸಿದ್ದ ದೇವನೂರ ಮಹಾದೇವ ಅವರು ಈಗ ಕುವೆಂಪು ಪ್ರಶಸ್ತಿಯನ್ನು (ಮೊದಲಿನೆರಡು ಮಾನ್ಯತೆಗಳಂತೆಯೇ ಅವರು ಇದಕ್ಕೂ ನಿಜವಾಗಿಯೂ ಅರ್ಹರೇ) ಯಾವುದೇ ತಕರಾರಿಲ್ಲದೆ ಸ್ವೀಕರಿಸಲು ಒಪ್ಪಿದ್ದಾರೆ. ಬಹುಶಃ ಅವರೂ ಕನ್ನಡ ಶಿಕ್ಷಣ ಮಾಧ್ಯಮವೆಲ್ಲ ಆಗಹೋಗದ ವಿಷಯ ಎಂದು ತೀರ್ಮಾನಿಸಿ ಕೈಚೆಲ್ಲಿದ್ದಾರೆಂದು ಕಾಣುತ್ತದೆ. ಚೆಲ್ಲಿದ ಆ ಕೈಗಳಿಂದಲೇ 'ಕನ್ನಡಕ್ಕಾಗಿ ಕೈಯೆತ್ತು, ನಿನ್ನ ಕೈ ಕಲ್ಪವೃಕ್ಷವಾಗುತ್ತದೆ' ಎಂದು ಕರೆಕೊಟ್ಟ ಕುವೆಂಪು ಅವರ ಹೆಸರಿನ ಐದು ಲಕ್ಷ ರೂಪಾಯಿಗಳ ಮೌಲ್ಯದ ಪ್ರಶಸ್ತಿಯನ್ನು ಸ್ವೀಕರಿಸಿ ತಮ್ಮ ಕೈಗಳನ್ನು ಕಲ್ಪವೃಕ್ಷ ಮಾಡಿಕೊಳ್ಳಲು ತೀರ್ಮಾನಿಸಿದಂತೆ ಕಾಣುತ್ತದೆ. ಅಥವಾ ನಮ್ಮ ಮುಖ್ಯಮಂತ್ರಿಗಳು ರಾಜ್ಯೋತ್ಸವ ಸಂದರ್ಭದ ಕನ್ನಡ ಬದ್ಧತೆಯ ಘೋಷಣೆಯಂತೆಯೇ, ಇವರೂ ಪ್ರಶಸ್ತಿ ಸ್ವೀಕರಿಸುವ ಸಂದರ್ಭದಲ್ಲಿ ಕನ್ನಡ ಕುರಿತ ಕುವೆಂಪು ಬದ್ಧತೆಗೆ ತಾವೂ ಬದ್ಧರಾಗಲು ಹೇಗೆ ಹೆಣಗಾಡುತ್ತಿದ್ದೇನೆ ಎಂಬುದನ್ನು ತಮ್ಮದೇ ವಿಶಿಷ್ಟ ಶೈಲಿಯಲ್ಲಿ ಗೊಣಗಾಡಿ ತಮ್ಮ ಅಭಿಮಾನಿಗಳ ಮೆಚ್ಚುಗೆಗಳಿಸಬಹುದು.

ಕನ್ನಡದ ಅಂದರೆ ಸಾಮಾನ್ಯ ಕನ್ನಡಿಗರ ಬದುಕಿನ ಮೌಲಿಕತೆಯ ವಿಷಯವನ್ನು ಇನ್ನು ಮುಂದೆ ಸಾಮಾನ್ಯ ಕನ್ನಡಿಗರೇ ತಾರಾ ಮೌಲ್ಯದ ನಾಯಕರ ಹಂಗಿಲ್ಲದೆ ಕೈಗೆತ್ತಿಕೊಳ್ಳಬೇಕಾದ ಕಾಲವೀಗ ಸನ್ನಿಹಿತವಾಗಿದೆ. ಇದನ್ನು ಸಾಧಿಸುವ ಸುಲಭದ ದಾರಿಗಳೆಂದರೆ, ಇಂಗ್ಲಿಷ್ ಮಾಧ್ಯಮದ ಖಾಸಗಿ ಶಾಲೆಗಳನ್ನು ಬಹಿಷ್ಕರಿಸುವುದು ಮತ್ತು

ಸಹಕಾರಿ ತತ್ವದ ಆಧಾರದ ಮೇಲೆ ನಮ್ಮದೇ ಕನ್ನಡ ಶಾಲೆಗಳನ್ನು ಆರಂಭಿಸುವುದು. ಇಂತಹ ಪ್ರಯತ್ನಗಳು ಸದ್ದಿಲ್ಲದೆ ರಾಜ್ಯಾದ್ಯಂತ ಅನೇಕ ಕಡೆ ನಡೆದಿವೆ.

ಕೊನೆಯ ಮಾತು : ಸಿದ್ಧರಾಮಯ್ಯ ಕನ್ನಡ ಶಿಕ್ಷಣಕ್ಕೆ ಸಂಬಂಧಿಸಿದಂತೆ ಇತ್ತೀಚೆಗೆ ಮಾಡಿದ ಸುಲಭದ ಕೆಲಸವೆಂದರೆ ತಮ್ಮ ಗೆಳೆಯರೊಬ್ಬರು ಮೈಸೂರಿನಲ್ಲಿ ನಡೆಸುತ್ತಿರುವ ಖಾಸಗಿ ಕನ್ನಡ ಶಾಲೆಗೆ ಎರಡು ಕೋಟಿ ರೂಪಾಯಿಗಳ ಅನುದಾನ ನೀಡಿದ್ದು! ಆದರೆ ಆ ಶಾಲೆಯ ಗುಣಮಟ್ಟ? ಕೇಳುವಂತೆಯೇ ಇಲ್ಲ ಎಂಬುದು ಮೈಸೂರಿಗರ ಅಂಬೋಣ.

(ಫೇಸ್‌ಬುಕ್ ಬರಹ : ೨.೧೧.೨೦೧೬)

'ಉಡುಪಿ ಚಲೋ' ಸರಿ! ಆದರೆ 'ಬಳ್ಳಾರಿ ಚಲೋ' ಏಕಿಲ್ಲ?

(ಕರ್ನಾಟಕದ ರಾಜಕೀಯ ಮತ್ತು ಬೌದ್ಧಿಕ ಅವನತಿಯ ಒಂದು ಕಥೆ)

ಇಂದು ಕರ್ನಾಟಕಕ್ಕೆ ಯಾರೂ ದಾತರೆಂಬುವವರೇ ಇಲ್ಲದಂತಾಗಿದೆ. ರಾಜ್ಯಕ್ಕೀಗ ರಾಜಕೀಯ ಮತ್ತು ಬೌದ್ಧಿಕ ನಾಯಕತ್ವಗಳೆರಡೂ ಇಲ್ಲದಂತಾಗಿದೆ. ಅವು ಇದ್ದರೂ ಹೆಸರಿಗೆ, ತಾಂತ್ರಿಕವಾಗಿ ಮಾತ್ರ ಇದ್ದಂತೆ ತೋರುತ್ತಿವೆ. ಹಳೆಯ ಬೌದ್ಧಿಕ ನಾಯಕತ್ವದ ಬಹುಭಾಗ ರಾಜಕೀಯ ನಾಯಕತ್ವದ ಚೇಲಾಗಿರಿಗೆ ತನ್ನನ್ನು ಒಪ್ಪಿಸಿಕೊಂಡಿದೆ. ಸ್ಥಾನಮಾನ, ಪ್ರಶಸ್ತಿ–ಪುರಸ್ಕಾರಗಳಿಗಾಗಿ ಅತೃಪ್ತ ಆತ್ಮಗಳಾಗಿ ಭೂತ–ಪಿಶಾಚಿಗಳಂತೆ ಅವರೆಲ್ಲ ರಾಜಕೀಯ ನಾಯಕತ್ವದ ಸುತ್ತ ಅಂಡಲೆಯುತ್ತಲೇ ಇದ್ದಾರೆ. ಹೀಗಾಗಿ ರಾಜಕೀಯ ನಾಯಕತ್ವ ಬೌದ್ಧಿಕ ನಾಯಕತ್ವವನ್ನು ನಿಕೃಷ್ಟವಾಗಿ ಕಾಣತೊಡಗಿ ಬಹಳ ದಿನಗಳೇ ಆಗತೊಡಗಿವೆ. ರಾಜ್ಯದ ರಾಜಕೀಯ ಇತಿಹಾಸದಲ್ಲೇ ವಿಧಾನ ಪರಿಷತ್ತಿನಲ್ಲಿ ಈ ಸರ್ಕಾರ ಬಂದಾಗಿನಿಂದಲೂ ಸಾಹಿತ್ಯ–ಸಂಸ್ಕೃತಿಗಳ ಪ್ರತಿನಿಧಿಯೊಬ್ಬರು ಇಲ್ಲದಂತಾಗಿದೆ. ಆದರೆ ಈ ಬಗ್ಗೆ ಪ್ರಶ್ನೆ ಮಾಡುವವರೇ ಇಲ್ಲವಾಗಿದ್ದಾರೆ. ಇನ್ನು ಪ್ರಥಮ ಬಾರಿಗೆ ರಾಜ್ಯ ಸರ್ಕಾರದಲ್ಲಿ ಸಂಪುಟ ದರ್ಜೆಯ ಓರ್ವ ಮಹಿಳಾ ಸಚಿವರೂ ಇಲ್ಲದ ಪರಿಸ್ಥಿತಿ ಉಂಟಾಗಿದೆ. ಆದರೆ ಯಾವ ಪ್ರಗತಿಪರ ಅಥವಾ ಸ್ತ್ರೀವಾದಿ ಗುಂಪೂ ಇದರ ಬಗ್ಗೆ ಸೊಲ್ಲೆತ್ತುತ್ತಿಲ್ಲ. ಏಕೆ?

'ಪ್ರಗತಿಪರ' ಎಂಬುದು ಕೇವಲ 'ಬಿಜೆಪಿ ವಿರೋಧ' ಎಂಬ ಸೀಮಿತ ಅರ್ಥಕ್ಕೆ ಸಂಕುಚಿತವಾಗಿ ಹೋಗಿದೆ. ಇಂತಹ ಪ್ರಗತಿಪರರು ಕಾಂಗ್ರೆಸ್ ಸರ್ಕಾರವನ್ನು ಹೇಗಾದರೂ ವಿಮರ್ಶಿಸಿಯಾರು? ಸರ್ಕಾರ ಅಧಿಕಾರ ಸ್ಥಾನಗಳನ್ನು ಹಂಚಲು ಹೊರಡುವ ಪ್ರತಿಸಲವೂ ತಮ್ಮೆಡೆಗೆ ಬೀಳಬಹುದಾದ ಅಧಿಕಾರದ ರೊಟ್ಟಿಚೂರಿಗಾಗಿ ಕಾದು ಕುಳಿತಿರುವ ಈ ಗುಂಪು ಪೂರಾ ಸ್ವಾರ್ಥಪರವಾಗಿ ಲೌಕಿಕ ರುಚಿಗೆ ಬಿದ್ದು ತನ್ನ ಬೌದ್ಧಿಕ ಸಮಗ್ರತೆಗೇ ಚ್ಯುತಿ ತಂದುಕೊಂಡಿದೆ. ಅದು ಕರ್ನಾಟಕದ ಸಮಷ್ಟಿ ಹಿತವನ್ನು ಕೈಬಿಟ್ಟಿದೆ. ಸಾಕಷ್ಟು

ವಯಸ್ಸಾದವರಿಂದ ಕೂಡಿದ ಈ ಗುಂಪು ಸಾಯುವ ಮುನ್ನ ಚೂರುಪಾರು ಅಧಿಕಾರ ಅನುಭವಿಸಿ ಕೃತಾರ್ಥರಾಗುವ ಅವಸರದಲ್ಲಿದ್ದಂತಿದೆ. ಲಂಕೇಶ್-ತೇಜಸ್ವಿ ಪರಂಪರೆಯಿಂದ ಸಂಪೂರ್ಣ ಕರುಳುಬಳ್ಳಿ ಕತ್ತರಿಸಿಕೊಂಡಿರುವ ಈ ಗುಂಪು ತನ್ನ ಬೌದ್ಧಿಕತೆಗೆ ಜಾತಿ-ಪ್ರದೇಶ-ಲಿಂಗ ರಾಜಕಾರಣವನ್ನಷ್ಟೇ ಆಶ್ರಯಿಸಿರುವುದು ಸಹಜವೇ ಆಗಿದೆ ಇದು ಕರ್ನಾಟಕದ ದೊಡ್ಡ ದುರದೃಷ್ಟವೇ ಸರಿ.

ಇದಕ್ಕೆ ಪರಿಹಾರವೆಂದರೆ, ಹೊಸ ತಲೆಮಾರಿನ ಬೌದ್ಧಿಕ ನಾಯಕತ್ವವನ್ನು ಮುನ್ನೋಡುವುದು ಮತ್ತು ಪ್ರೋತ್ಸಾಹಿಸುವುದೇ ಆಗಿದೆ. ಇಲ್ಲಿನ ತೊಂದರೆ ಎಂದರೆ, ದದ್ದು ಬಿದ್ದು ಹೋಗಿರುವ ಈ ಹಳೆಯ ಬೌದ್ಧಿಕ ನಾಯಕತ್ವ ಹೊಸ ತಲೆಮಾರಿನ ಚೇಲಾ ಗುಂಪುಗಳನ್ನು ಸಂಘಟಿಸಿ ಸ್ಥಾಪಿಸಿಕೊಂಡಿರುವುದು. ಹಾಗಾಗಿ ಈಗ ಹೊಸ ಬೌದ್ಧಿಕ ನಾಯಕತ್ವ ಮೂಡಬೇಕಾದುದು ಜಾತಿ-ಪ್ರದೇಶ-ಲಿಂಗ ತತ್ವಗಳನ್ನು ಮೀರಿದ ಒಂದು ಸಮಗ್ರ ಬೌದ್ಧಿಕ ತತ್ವ ಮೀಮಾಂಸೆಯಿಂದ ಮಾತ್ರ ಇಂತಹ ಒಂದು ಪರಂಪರೆ ಕರ್ನಾಟಕದ ಬೌದ್ಧಿಕತೆಗೆ ಇದೆ. ಅದು ನಮ್ಮ ನವೋದಯ ಸಾಂಸ್ಕೃತಿಕ ಪರಂಪರೆಯಲ್ಲಿ ಇನ್ನೂ ಜೀವಂತವಿದ್ದು, ಅದರೊಳಗಿಂದ ಅದನ್ನು ಎತ್ತಿಕೊಳ್ಳಬೇಕಿದೆ.

ಮುಖ್ಯಮಂತ್ರಿಗಳು ತಮ್ಮ ಅಧಿಕಾರಾವಧಿಯ ಕೊನೆಯ ಹದಿನೆಂಟು ತಿಂಗಳುಗಳ ಅವಧಿಗಾಗಿ ಸುಮಾರು ನೂರಕ್ಕೂ ಹೆಚ್ಚು ನಿಗಮ-ಮಂಡಳಿಗಳ ವಿವಿಧ ಪದಾಧಿಕಾರಗಳನ್ನು ಹಂಚಲು ಹೊರಟಿದ್ದಾರೆ. ಈ ಕೆಲವು ನೇಮಕಾತಿಗಳು ಈಗಾಗಲೇ ಆಗಿವೆ. ಸರ್ಕಾರದ ಬೊಕ್ಕಸಕ್ಕೆ ಸುಮಾರು ೨೫ ಕೋಟಿ ರೂಪಾಯಿಗಳ ಹೊರೆ ಹೊರಿಸುವ ಈ ಪದಾಧಿಕಾರಗಳ ನೇಮಕಾತಿ ಸರ್ಕಾರದ ಕಾರ್ಯದಕ್ಷತೆಯನ್ನು ಹೆಚ್ಚಿಸಿ ಜನಹಿತದ ಪ್ರಮಾಣವನ್ನು ಹೆಚ್ಚಿಸುವುದೇ? ಇದನ್ನು ಯಾರೂ ಪರಿಶೀಲಿಸುವ ಗೋಜಿಗೇ ಹೋಗಿಲ್ಲ. ದೀರ್ಘಕಾಲದ ರಾಜಕೀಯ ಸಂಧಾನ ಮತ್ತು ಚೌಕಾಶಿಗಳಿಂದಾಗಿ ಬಹಳಷ್ಟು ಕಾಲ ಈ ಪದಾಧಿಕಾರಗಳು ಖಾಲಿ ಬಿದ್ದಿರುತ್ತವೆ. ಆಗ ಈ ನಿಗಮ-ಮಂಡಳಿಗಳ ಕಾರ್ಯಕ್ಷಮತೆ ಕಡಿಮೆಯಾದ ಸುದ್ದಿ ಅಥವಾ ವರದಿಗಳೇನೂ ಇಲ್ಲ. ಅಥವಾ ಈ ನೇಮಕಾತಿಗಳ ನಂತರ ಅದು ಹೆಚ್ಚಿದ ಸುದ್ದಿ ಅಥವಾ ವರದಿಗಳೂ ಇಲ್ಲ. ಹಾಗಾದರೆ ಈ ನೇಮಕಾತಿಗಳಾದರೂ ಏಕೆ? ಇದೆಲ್ಲವನ್ನೂ ಒಟ್ಟಿಗೆ ಸೇರಿಸಿ ಹೇಳುವುದಾದರೆ, ಈ ಪದಾಧಿಕಾರಗಳನ್ನು ಸೃಷ್ಟಿಸಲಾಗಿರುವುದೇ, ಆಳುವ ಪಕ್ಷಗಳ ಅಧಿಕಾರ ಆಕಾಂಕ್ಷಿಗಳ ಅಹಂಕಾರ ತೃಪ್ತಿಗಾಗಿ. ಈ ಬಗ್ಗೆ ನಮ್ಮ ಬೌದ್ಧಿಕ ವಲಯದಿಂದ ಒಂದು ಸೊಲ್ಲೂ ಇಲ್ಲ. ಏಕೆ? ಏಕೆಂದರೆ, ಈ ವಲಯದ ಜೀವಿಗಳೂ ಇಂತಹ ಅಹಂಕಾರ ಈಡೇರಿಕೆಗೆ ಬಕ ಪಕ್ಷಿಗಳಂತೆ ಕಾದು ನಿಂತಿರುವವವರೇ ಆಗಿದ್ದಾರೆ.

ಉದಾಹರಣೆಗೆ, ನಮ್ಮ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮತ್ತು ಪುಸ್ತಕ ಪ್ರಾಧಿಕಾರಗಳ ಅಧ್ಯಕ್ಷ ಸ್ಥಾನಗಳನ್ನೇ ಗಮನಿಸಿ. ಈವರೆಗೆ ಈ ಪ್ರಾಧಿಕಾರಗಳ ಅಧ್ಯಕ್ಷರಾಗಿದ್ದವರ ಅವಧಿಗಳಲ್ಲಿ

ಕನ್ನಡ ಅಥವಾ ಪುಸ್ತಕ ಸಂಸ್ಕೃತಿಯ ಅಭಿವೃದ್ಧಿ ಯಾವ ರೀತಿ ಆಗಿದೆ? ಇವುಗಳನ್ನು ಸ್ಥಾಪಿಸಿದ ಉದ್ದೇಶ ಎಷ್ಟರಮಟ್ಟಿಗೆ ಈಡೇರಿದೆ ಎಂಬ ಅನೌಪಚಾರಿಕ ಸಮೀಕ್ಷೆಯನ್ನಾದರೂ ಯಾರಾದರೂ ಮಾಡಿದ್ದಾರೆಯೇ? ಹದಿನೆಂಟು ತಿಂಗಳುಗಳ ಅವಧಿಯಲ್ಲಿ ಯಾರಾದರೂ ಏನಾದರೂ ಯೋಜನೆ ರೂಪಿಸಿ ಅನುಷ್ಠಾನ ಮಾಡಲು ಸಾಧ್ಯವೇ? ಹಾಗೇ ನೋಡಿದರೆ ಈ ಪ್ರಾಧಿಕಾರಗಳ ಸ್ಥಾಪನೆಯಾದಾಗಿನಿಂದ ಸಾರ್ವಜನಿಕ ಜೀವನದಲ್ಲಿ ಕನ್ನಡದ ಸ್ಥಾನಮಾನ ಕುಸಿಯುತ್ತಲೇ ಹೋಗಿದೆ; ಮತ್ತು ಪುಸ್ತಕ ಸಂಸ್ಕೃತಿ ಎಂಬುದು ಉಚಿತ ಪುಸ್ತಕ ವಿತರಣೆಯ ಹಾಸ್ಯಾಸ್ಪದ ಸರ್ಕಾರಿ ಕಾರ್ಯಕ್ರಮ ಮಾತ್ರವೆನಿಸಿದೆ! ಆದರೂ ಈ ಅಧಿಕಾರ ಸ್ಥಾನಗಳಿಗಾಗಿ ನಮ್ಮ ಬುದ್ಧಿಜೀವಿಗಳ ನೂಕು ನುಗ್ಗಲು! ಜೊತೆಗೆ ಒಂದು ಪ್ರಾಧಿಕಾರದ ಅಧಿಕಾರ ರುಚಿ ಕಂಡವರು ಇನ್ನೊಂದು ಪ್ರಾಧಿಕಾರದ ರುಚಿಗಾಗಿ ತೋರುವ ನಿರ್ಲಜ್ಜ ಹಪಾಹಪಿ. ಇದರರ್ಥ ಇಷ್ಟೇ: ಬುದ್ಧಿಜೀವತ್ವ ಎಂಬುದು ಕರ್ನಾಟಕದಲ್ಲಿ ಸಂಪೂರ್ಣ ನಾಶವಾಗಿದೆ.

ಇದಕ್ಕೆ ಪೂರಕವಾಗಿಯೇ ಇದೆ, ಗಾಲಿ ಜನಾರ್ದನ ರೆಡ್ಡಿಯ ಮಗಳ ಮದುವೆಯ ಅಸಹ್ಯ ಸಂಭ್ರಮ. ಆಹ್ವಾನ ಪತ್ರಿಕೆಗೆ ಐದು ಕೋಟಿ ರೂಪಾಯಿ ಖರ್ಚು. ಮುಖ್ಯ ಮಂತ್ರಿಯೂ ಸೇರಿದಂತೆ ರಾಜ್ಯದ ಮತ್ತು ರಾಷ್ಟ್ರದ ಗಣ್ಯರೆಲ್ಲರಿಗೂ ರೆಡ್ಡಿಯಿಂದ ಖುದ್ದು ಆಹ್ವಾನ! ಅಂದರೆ ಈತನಿಗೆ ತಾನು ಮಾಡಿರುವ ದುಷ್ಟ ಕೆಲಸಗಳ ಬಗ್ಗೆ ಕಿಂಚಿತ್ತೂ ನಾಚಿಕೆಯಾಗಲೀ, ಪಾಪಪ್ರಜ್ಞೆಯಾಗಲೀ ಇಲ್ಲವಾಗಿದೆ! ಅಪರಾಧ ಎಂಬುದು ಇಂದು ಒಂದು ನೈತಿಕತೆಗೆ ಸಂಬಂಧಿಸಿದ ವಿಷಯವಾಗದೆ, ಕೇವಲ ಕಾನೂನು ವ್ಯಾಖ್ಯಾನಗಳ ತಾಂತ್ರಿಕ ವಿದ್ಯಮಾನವೆನಿಸಿಬಿಟ್ಟಿದೆ. ಆತ ಇನ್ನೂ ಆರೋಪಿ. ಅವನು ನಿರಪರಾಧಿಯೆಂದು ನಮ್ಮ ನ್ಯಾಯಾಲಯಗಳಿಂದ ಘೋಷಿತವಾದರೂ ಆಗಬಹುದೆಂಬ ಸಣ್ಣ ಅನುಮಾನವಷ್ಟೇ ಅಲ್ಲ, ನಿರೀಕ್ಷೆಯೂ ಜನರಲ್ಲಿದೆ! ಇದು ನಮ್ಮ ನ್ಯಾಯಾಂಗದ ಬಗೆಗಿನ ವ್ಯಾಖ್ಯಾನ ಹೇಗೋ ಹಾಗೇ ನಮ್ಮ ಜನರ ಸಾಮಾಜಿಕ ನೈತಿಕತೆಯ ಬಗೆಗಿನ ವ್ಯಾಖ್ಯಾನವೂ ಆಗಿದೆ. ಬಳ್ಳಾರಿ-ಹೊಸಪೇಟೆ ಸುತ್ತಮುತ್ತಲ ಬೆಟ್ಟ-ಗುಡ್ಡಗಳೆಲ್ಲ ಬೋಳಾಗಿ ಭೂಮಿ ಸುಲಿದ ಚರ್ಮದಂತಾಗಿರುವುದರ ಪರಿಣಾಮಗಳ ಬಗ್ಗೆ ಮತ್ತು ಜನರ ಅಥವಾ ಸರ್ಕಾರದ ಸಂಪನ್ಮೂಲಗಳನ್ನು ಒಬ್ಬ ವ್ಯಕ್ತಿ ಲೂಟಿ ಮಾಡಿರುವುದರ ಬಗ್ಗೆ ಜನಕ್ಕೆ ತೀವ್ರವಾಗಿ ಏನೂ ಅನ್ನಿಸದೇ ಇರದಂತಹ ದಟ್ಟ ದರಿದ್ರ ಸ್ಥಿತಿಗೆ ನಾವು ತಲುಪಿದ್ದೇವೆ. ಹಾಗಾಗಿಯೇ ಆ ರೆಡ್ಡಿ ಬಳ್ಳಾರಿಗೆ ಮೆರವಣಿಗೆಯಲ್ಲಿ ಬರುತ್ತಾನೆ. ಅವನನ್ನು ಸ್ವಾಗತಿಸಲು ಜನ ಕುಡಿದು ಕುಪ್ಪಳಿಸುತ್ತಾ ಜಮಾಯಿಸಿ ನಗರದ ಸಂಚಾರ ವ್ಯವಸ್ಥೆಯೇ ಅಸ್ತವ್ಯಸ್ತವಾಗುತ್ತದೆ. ಅದನ್ನು (ಜನರನ್ನಲ್ಲ) ನಿಯಂತ್ರಿಸಲು ನಮ್ಮ ಪೋಲೀಸ್ ವ್ಯವಸ್ಥೆ ಕೆಲ ರಸ್ತೆಗಳಲ್ಲಿ ಜನ ಸಂಚಾರವನ್ನೇ ಬಂದ್ ಮಾಡಿ ಮೆರವಣಿಗೆ ಸುಗಮವಾಗಿ ನಡೆಯಲು ವ್ಯವಸ್ಥೆ ಮಾಡುತ್ತದೆ. ಇಡೀ ಕರ್ನಾಟಕ ಇದನ್ನೆಲ್ಲ ಮೂಕವಾಗಿ ನೋಡುತ್ತದೆ! ಮಾಧ್ಯಮದವರು ಪ್ರಶ್ನಿಸಿದಾಗ ಮಾತ್ರ ಸರ್ಕಾರ ಒಂದು ಗೊಣಗಾಟದಂತಹ ಪ್ರತಿಕ್ರಿಯೆ ನೀಡುತ್ತದೆ. ಕನ್ನಡಿಗರ ಮತ್ತು ಅವರ ಸರ್ಕಾರದ ಸಾಮಾಜಿಕ ನೈತಿಕ ಪ್ರಜ್ಞೆ ಬಹುಶಃ ಇದಕ್ಕಿಂತ ಕೆಳಗೆ ಇಳಿಯಲಾರದು.

ಇದು ಇಂದಿನ ಕರ್ನಾಟಕ! ಇದು ನಿಜವಾಗಿಯೂ ಘೋರವಲ್ಲವೆ? ಇದಕ್ಕೆ ಯಾರು ಹೊಣೆ? ಜನಾರ್ದನ ರೆಡ್ಡಿಯ ಮಗಳ ಮದುವೆಯ ಕರೆಯೋಲೆಗಾಗಿ ಹಾಡು ಬರೆದು ಸಂಗೀತ ನೀಡಿದವನ ಮತ್ತು ಅದನ್ನು ನಿರ್ಮಿಸಿಕೊಟ್ಟ ತಂತ್ರಜ್ಞನಿಗೆ ಈಗಾಗಲೇ ನಾವು ಸಾರ್ವಜನಿಕವಾಗಿ ಛೀಮಾರಿ ಹಾಕಬೇಕಿತ್ತು. ಈ ಮದುವೆಯನ್ನು ಆಯೋಜಿಸುತ್ತಿರುವ ರೀತಿಯು ಕರ್ನಾಟಕದ ಜನತೆಗೆ ಮಾಡಲಾಗುತ್ತಿರುವ ಸಾರ್ವಜನಿಕ ಅವಮಾನವೆಂದು ಬಗೆದು ಅದನ್ನು ಹಾಗೆ ನಡೆಸುವುದನ್ನು ತಡೆಯುವ ಜನಾಂದೋಲನವೊಂದು ಆರಂಭವಾಗಬೇಕಿತ್ತು. 'ಉಡುಪಿ ಚಲೋ' ಸಂಘಟಿಸುವ ನಾವು ರೆಡ್ಡಿ ಮಗಳ ಮದುವೆಯೆಂಬ ಸಂಪತ್ತಿನ ಅಶ್ಲೀಲ ಪ್ರದರ್ಶನದ ವಿರುದ್ಧ 'ಬಳ್ಳಾರಿ ಚಲೋ'ವನ್ನೂ ಸಂಘಟಿಸಬೇಕಿತ್ತು. ಆದರೆ ನಮ್ಮ ಬೌದ್ಧಿಕತೆ 'ಉಡುಪಿ ಚಲೋ'ದಂತಹ ಚಲೋಗಳನ್ನು ಮಾತ್ರ ಸಂಘಟಿಸುವಷ್ಟು ಸಂಕುಚಿತವಾಗಿ ಹೋಗಿದೆ. ಇಂತಹ ಸಂಕುಚಿತತೆಗಳನ್ನು ಮೀರಿದಂತಹ ಒಂದು ಸಮಗ್ರ ಸಾಮಾಜಿಕ ಜಾಗೃತಿ ಉಂಟಾಗಿ ಅದರ ಅಭಿವ್ಯಕ್ತಿಗಳು ಕಾಣಿಸಿಕೊಳ್ಳಲಾರಂಭಿಸಿದಾಗ ಮಾತ್ರ ಕನಾಟಕದ ಬೌದ್ಧಿಕ ನಾಯಕತ್ವ ಹೊಸಹುಟ್ಟು ಪಡೆದಿದೆ ಎಂದು ನಂಬಬಹುದು.

ಈ ಮಧ್ಯೆ ಕರ್ನಾಟಕ ಅಭಿವೃದ್ಧಿ ಪಥದಲ್ಲಿ ಜಾರಿರುವ ಗತಿ ನೋಡಿ. ಮೂರು ದಶಕಗಳ ಹಿಂದೆ ಅಭಿವೃದ್ಧಿ ನಕ್ಷೆಯಲ್ಲಿ ಮೊದಲ ಮೂರು ಅಥವಾ ನಾಲ್ಕನೇ ಸ್ಥಾನದಲ್ಲಿರುತ್ತಿದ್ದ ರಾಜ್ಯವೀಗ ಆರು-ಏಳು-ಎಂಟನೇ ಸ್ಥಾನಕ್ಕೆ ಕುಸಿಯುತ್ತಿದೆ. ಅದೂ ಮಾಹಿತಿ ತಂತ್ರಜ್ಞಾನ ಉದ್ಯಮಕ್ಕೆ ಸಂಬಂಧಿಸಿದಂತೆ ರಾಷ್ಟ್ರದ ಬಹುಪಾಲು ಆದಾಯ ಕರ್ನಾಟಕದಲ್ಲೇ ಉತ್ಪತ್ತಿಯಾಗುತ್ತಿರುವಾಗಲೂ!

ಇದೆಲ್ಲದಕ್ಕೆ ಕಿರೀಟವಿಟ್ಟಂತಿದೆ ನಮ್ಮ ರಾಜ್ಯದ ರಾಜಕೀಯ ಭೀಷ್ಮಾಚಾರ್ಯ ದೇವೇಗೌಡರು ತಮ್ಮ ಮಗನನ್ನು ಸಮರ್ಥಿಸಿಕೊಳ್ಳುತ್ತಾ ಆಡಿರುವ ಮಾತು. ಸಮಾಜ ಪರಿವರ್ತನಾ ಸಮುದಾಯದ ಎಸ್. ಆರ್. ಹಿರೇಮಠರು ಕುಮಾರಸ್ವಾಮಿ ರಾಮನಗರ ಬಳಿ ೨೦೦ ಎಕರೆ ಭೂ ಕಬಳಿಕೆ ಮಾಡಿದ್ದಾರೆಂಬ ದಾಖಲೆ ಸಮೇತವಾದ ಆರೋಪಕ್ಕೆ ಅವರು ನೀಡಿದ ಪ್ರತಿಕ್ರಿಯೆ: 'ಕುಮಾರಸ್ವಾಮಿಗೆ ಎಲ್ಲಿ ಬಂತು ಅಷ್ಟು ಜಮೀನು: ಏನೋ ಒಂದು ಎಪ್ಪತ್ತು-ಎಂಬತ್ತು ಎಕರೆ ಮಾಡಿಕೊಂಡಿರಬಹುದು!' ದೇವೇಗೌಡರು ಹೇಳಿದ ಈ 'ನಿಷ್ಠುರ ಸತ್ಯ' ಕುರಿತ ನಮ್ಮ ರಾಜಕೀಯ ಮತ್ತು ಬೌದ್ಧಿಕ ವಲಯದ ಈವರೆಗಿನ ಮೌನ ಪ್ರತಿಕ್ರಿಯೆ ನಮ್ಮೆಲ್ಲರ ಕಿವಿಗಡಚಿಕ್ಕುವಂತಿದೆ.

(ಫೇಸ್‌ಬುಕ್ ಬರಹ: ೩.೧೧.೨೦೧೬)

(ಒಂದು ತಿದ್ದುಪಡಿ: ಈ ಮೇಲಿನ ಬರಹದಲ್ಲಿ ಈಗಿನ ಕರ್ನಾಟಕ ಸರ್ಕಾರದಲ್ಲಿ ಒಬ್ಬರೂ ಸಂಪುಟ ದರ್ಜೆಯ ಮಹಿಳಾ ಸಚಿವರಿಲ್ಲ ಎಂದು ಬರೆದಿರುವೆ. ಆದರೆ ಉಮಾಶ್ರೀಯವರನ್ನು ಹೋದ ವರ್ಷವೇ

ಸಂಪುಟ ದರ್ಜೆಗೆ ಏರಿಸಲಾಗಿದೆ ಎಂದು ಗೆಳೆಯ ಚೆನ್ನಬಸವಣ್ಣನವರು ಕರೆ ಮಾಡಿ ತಿಳಿಸಿದ್ದಾರೆ. ಈ ತಿದ್ದುಪಡಿಗಾಗಿ ಅವರಿಗೆ ವಂದನೆಗಳನ್ನು ಸೂಚಿಸುತ್ತಲೇ, ಈ ಸಂಗತಿಯೇನೂ ನಾನು ಹೇಳಲೆತ್ನಿಸುತ್ತಿದ್ದ ವಸ್ತುಸ್ಥಿತಿಯನ್ನು ಗಣನೀಯವಾಗಿ ಬದಲಾಯಿಸುವುದಿಲ್ಲ ಎಂದೂ ತಿಳಿಸಬಯಸುತ್ತೇನೆ. ಏಕೆಂದರೆ ಮೂರು ಕೋಟಿ ಮಹಿಳಾ ಜನಸಂಖ್ಯೆಯ ರಾಜ್ಯವೊಂದರ ಮುವ್ವತ್ತುಮೂರು ಸದಸ್ಯ ಬಲವುಳ್ಳ ಸಂಪುಟದಲ್ಲಿ ಓರ್ವ ಮಹಿಳೆಗೆ ಮಾತ್ರ ಸ್ಥಾನವೇ? ಅದೂ ಎಳಸು ಪ್ರತಿಭೆಯ ಉಮಾಶ್ರೀಯವರಿಗೆ? ಮಾತು ಮಾತಿಗೆ ನೂರಕ್ಕೂ ಹೆಚ್ಚು ವರ್ಷಗಳ ಇತಿಹಾಸವನ್ನು ಕೊಚ್ಚಿಕೊಳ್ಳುವ ಕಾಂಗ್ರೆಸ್ಸಿಗೆ ಉಮಾಶ್ರೀ ಅವರಿಗಿಂತಲೂ ಪ್ರಬುದ್ಧರಾದ ಮಹಿಳಾ ನಾಯಕಿಯೊಬ್ಬರನ್ನು ಸೃಷ್ಟಿಸಲು ಅಥವಾ ಆರಿಸಿಕೊಳ್ಳಲು ಸಾಧ್ಯವಾಗಿಲ್ಲ ಎಂಬುದೇ ಈ ಸರ್ಕಾರದ ಸಾರ್ವತ್ರಿಕ ಯೋಗ್ಯತೆಯನ್ನೂ, ಅದರ ಬುದ್ಧಿಜೀವಿ ಬೆಂಬಲಿಗರ ಪ್ರಗತಿಪರತೆಯ ಹುಸಿತನವನ್ನೂ ಬಯಲು ಮಾಡುವಂತಿದೆ.)

(೪.೧೧. ೨೦೧೬, ಫೇಸ್‌ಬುಕ್‌ನಲ್ಲಿ)

ಇದು ನಾಗರಿಕ ಹಕ್ಕುಗಳ ಕಟ್ಟೆಚ್ಚರದ ಕಾಲ

ದೇಶದ ಮಾಜಿ ಯೋಧ ರಾಮ್‌ಕಿಶನ್ ಗ್ರೇವಾಲ್ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ತಮಗೆ 'ಒಂದು ಶ್ರೇಣಿ-ಒಂದು ಪಿಂಚಣಿ' ಯೋಜನೆಯ ಅನ್ವಯ ಬರಬೇಕಾದಷ್ಟು ಪಿಂಚಣಿ ಬರುತ್ತಿಲ್ಲವೆಂದೂ, ಇದನ್ನು ಸರಿಪಡಿಸಿಕೊಳ್ಳಲು ತಾನು ನಡೆಸಿದ ಪ್ರಯತ್ನಗಳು ವಿಫಲವಾದ ಹತಾಶೆಯಲ್ಲಿ ತನ್ನ ಜೀವ ನೀಗಿಕೊಳ್ಳುತ್ತಿರುವುದಾಗಿಯೂ ಆತ ತನ್ನ ಮರಣಪತ್ರದಲ್ಲಿ ಬರೆದಿದ್ದಾರೆ ಎಂದು ಹೇಳಲಾಗಿದೆ. ಈ ದುರಂತವನ್ನು ನೆಪ ಮಾಡಿಕೊಂಡು ಕಾಂಗ್ರೆಸ್ ಮತ್ತು ಆಮ್ ಆದ್ಮಿ ಪಕ್ಷಗಳು ಬಿಜೆಪಿ ಸರ್ಕಾರದ ವಿರುದ್ಧ ದೆಹಲಿ ಮಟ್ಟಿಗಾದರೂ ದೊಡ್ಡ ರಾಜಕೀಯ ಆಂದೋಲನವನ್ನೇ ಆರಂಭಿಸಿವೆ. ತಾನು ಮಾಜಿ ಸೈನಿಕರ ಬಹುವರ್ಷಗಳ ಬೇಡಿಕೆಯಾದ 'ಒಂದು ಶ್ರೇಣಿ-ಒಂದು ಪಿಂಚಣಿ' ಯೋಜನೆಯನ್ನು ಜಾರಿಗೆ ತಂದಿದ್ದಾಗಿ ಹೇಳಿಕೊಳ್ಳುತ್ತಿದ್ದ ಬಿಜೆಪಿ ಸರ್ಕಾರದ ನಿಜ ಬಣ್ಣ ಇಲ್ಲಿ ಬಯಲಾಗಿದೆ ಎಂದು ಅವು ಹೇಳುತ್ತಿವೆ. ಇದಕ್ಕೆ ಪ್ರತಿಯಾಗಿ ಬಿಜೆಪಿ ರಾಮ್‌ಕಿಶನ್‌ರ ಪಿಂಚಣಿ ಲೆಕ್ಕಾಚಾರದಲ್ಲಿ ಆಗಿರುವ ವ್ಯತ್ಯಾಸ ತಾಂತ್ರಿಕವಾಗಿದ್ದು, ಅದನ್ನು ಇಂತಹುದೇ ಕಾರಣಗಳಿಗಾಗಿ ಆಗಿರುವ ಇತರ ಮಾಜಿ ಸೈನಿಕರ ಪಿಂಚಣಿಯ ವ್ಯತ್ಯಾಸಗಳೊಂದಿಗೇ ಸರಿಪಡಿಸಲು ಸಿದ್ಧವಾಗಿರುವುದಾಗಿಯೂ, ವಿರೋಧ ಪಕ್ಷಗಳು ಇದನ್ನು ಭಾವನಾತ್ಮಕಗೊಳಿಸಿ ರಾಜಕೀಯೀಕರಣಗೊಳಿಸುತ್ತಿರುವುದಾಗಿಯೂ ಆಪಾದಿಸುತ್ತಿದೆ.

ಆದರೆ ಇಲ್ಲಿ ಮುಖ್ಯ ವಿಷಯ ಪಿಂಚಣಿ ವ್ಯತ್ಯಾಸಕ್ಕೆ ಏನು ಕಾರಣ, ಅದನ್ನು ಪರಿಹರಿಸಲಾಗುವುದೋ ಇಲ್ಲವೋ ಎಂಬುದಲ್ಲ. ಪಿಂಚಣಿ ಲೆಕ್ಕಾಚಾರಗಳಲ್ಲಿ ವ್ಯತ್ಯಾಸಗಳಾಗುವುದು, ಅದೂ ಈ 'ಏಕ ಶ್ರೇಣಿ-ಏಕ ಪಿಂಚಣಿ' ಯೋಜನೆಯಂತಹ

ಸಂಕೀರ್ಣ ಯೋಜನೆಯ ಅನ್ವಯಗಳಲ್ಲಿ ಸಾಮಾನ್ಯ. ಹಾಗೇ, ಸರ್ಕಾರದ ವಿರುದ್ಧ ದಾಳಿ ಮಾಡಲು ಸಿಕ್ಕ ಅವಕಾಶಗಳನ್ನು ಚೆನ್ನಾಗಿ ಬಳಸಿಕೊಳ್ಳುವುದು ವಿರೋಧ ಪಕ್ಷಗಳ ರಾಜಕೀಯ ಧರ್ಮವೂ ಹೌದು. ಬಿಜೆಪಿ ವಿರೋಧ ಪಕ್ಷವಾಗಿದ್ದಾಗ ಇಂತಹ ಎಷ್ಟು ಅವಕಾಶಗಳನ್ನು ಬಳಸಿಕೊಂಡು ಇಂದಿನಂತೆಯೇ ಜನರಿಗೆ ರೇಜಿಗೆಯಾಗುವಷ್ಟು ರಂಪ ಎಬ್ಬಿಸಿಲ್ಲ? ಹಾಗಾಗಿ, ಈ ಇಡೀ ಪ್ರಕರಣದಲ್ಲಿ ವಿರೋಧ ಪಕ್ಷಗಳ ರಂಪಗಳ ಹೊರತಾಗಿಯೂ, ಜನರ ಆತಂಕಕ್ಕೆ ಕಾರಣವಾಗಿ ಅವರ ಗಮನ ಸೆಳೆದಿರುವ ಎರಡು ಮೂರು ಅಂಶಗಳನ್ನು ನಾವಿಲ್ಲಿ ಗಮನಿಸಬೇಕು. ಅವೆಂದರೆ, ಗ್ರೇವಾಲ್‌ರ ಸಾವಿನ ಬಗ್ಗೆ ಸರ್ಕಾರದ ವಕ್ತಾರರು ಪ್ರತಿಕ್ರಿಯಿಸುತ್ತಿರುವ ರೀತಿ ಮತ್ತು ಅದರ ಹಿಂದಿನ ಕಾರಣಗಳು ಹಾಗೂ ಈ ಇಡೀ ಪ್ರಕರಣದಲ್ಲಿ ಅದು ಪೋಲೀಸ್ ವ್ಯವಸ್ಥೆಯನ್ನು ಬಳಸಿಕೊಳ್ಳುತ್ತಿರುವ ರೀತಿ.

ಮುಜಾಫರ್‌ಪುರದಲ್ಲಿ ಗೋಮಾಂಸ ಪ್ರಕರಣದ ಸಂಬಂಧವಾಗಿ ಅಖ್ಲಾಕ್ ಎಂಬುವವರನ್ನು ಕೊಂದ ಪ್ರಮುಖ ಆರೋಪಿ ಸತ್ತಾಗ ಅವನ ಶವದ ಮೇಲೆ ತ್ರಿವರ್ಣ ಧ್ವಜ ಹೊದಿಸಿ ಆತನನ್ನು 'ಹುತಾತ್ಮ' ಎಂದು ಬಣ್ಣಿಸಿದ ಬಿಜೆಪಿ ನಾಯಕರು ಈಗ ರಾಮ್ ಕಿಶನ್‌ರನ್ನು ವಿರೋಧ ಪಕ್ಷಗಳು 'ಹುತಾತ್ಮ' ಎಂದು ಬಣ್ಣಿಸಿದರೆ, ಅವರನ್ನು ಹಾಗೆ ಕರೆಯಕೂಡದು ಎನ್ನುತ್ತಿದೆ! ಆತ ಆತ್ಮಹತ್ಯೆ ಮಾಡಿಕೊಳ್ಳಲು ಆತ ಕಾಂಗ್ರೆಸ್ ಕಾರ್ಯಕರ್ತನಾಗಿದ್ದುದೇ ಕಾರಣ ಎನ್ನುತ್ತಿದೆ! ಇದಕ್ಕಿಂತ ಅವಿವೇಕದ ಟೀಕೆ ಇನ್ನೊಂದಿರಲಾರದು. ಯಾರೇ ಯಾವ ಪಕ್ಷದ ಕಾರ್ಯಕರ್ತನಾಗಿದ್ದರೂ ಸಹ, ಆ ತನ್ನ ಪಕ್ಷಕ್ಕೆ ಸಹಾಯವಾಗುವುದೆಂದು ತನ್ನ ಕುಟುಂಬದ ಜವಾಬ್ದಾರಿಗಳನ್ನೆಲ್ಲ ಮರೆತು ತನ್ನ ಜೀವವನ್ನೇ ನೀಗಿಕೊಳ್ಳಲು ಮುಂದಾಗುತ್ತಾನೆಯೇ? ಜೀವ ತೆಗೆದುಕೊಳ್ಳುವುದೆಂದರೆ ಈ ಬಿಜೆಪಿ ವಕ್ತಾರರು ಭಾವಿಸದಷ್ಟು ಸರಳ ಕೆಲಸವೇ. ಇದು ತೀರಾ ಅಗ್ಗದ ಮಾತು. ಇನ್ನು ಕೇಂದ್ರ ಸಚಿವ ಮತ್ತು ಭಾರತೀಯ ಸೇನೆಯ ಮಾಜಿ ದಂಡನಾಯಕ ವಿ.ಕೆ. ಸಿಂಗ್ ಅವರು ಇನ್ನೂ ಮುಂದೆಹೋಗಿ, ಆತನ ಮಾನಸಿಕ ರೋಗಿಯಾಗಿದ್ದಿರಬಹುದು ಎಂದು ಷರಾ ಬರೆದಿದ್ದಾರೆ! ಇವರೆಲ್ಲ ತಾವೊಬ್ಬ ಮಾಜಿ ಯೋಧನ ಬಗ್ಗೆ ಮತ್ತು ಆತನ ಕುಟುಂಬ ಕುಟುಂಬದ ಯಜಮಾನನ ಅಗಲಿಕೆಯ ದುಃಖದಲ್ಲಿದ್ದಾಗ ಮಾತನಾಡುತ್ತಿದ್ದೇವೆ ಎಂಬುದನ್ನೇ ಮರೆತಂತಿದೆ.

ಇದೆಲ್ಲದಕ್ಕಿಂತ ಸಾರ್ವಜನಿಕವಾಗಿ ಮುಖ್ಯವಾದ ವಿಷಯವೆಂದರೆ, ರಾಮ್‌ಕಿಶನ್ನರ ದೇಹ ದೆಹಲಿಯ ಆಸ್ಪತ್ರೆಯೊಂದರಲ್ಲಿದ್ದಾಗ ಶ್ರದ್ಧಾಂಜಲಿ ಸಲ್ಲಿಸಲು ಅಲ್ಲಿಗೆ ಹೋದ ದೆಹಲಿಯ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಹಾಗೂ ಕಾಂಗ್ರೆಸ್ ಉಪಾಧ್ಯಕ್ಷ ರಾಹುಲ್ ಗಾಂಧಿಯವರನ್ನು ದೆಹಲಿ ಪೋಲೀಸರು ಬಂಧಿಸಿ ಅವರನ್ನು ಆಸ್ಪತ್ರೆಯ ಒಳಕ್ಕೇ ಬಿಡದಿದ್ದುದು. ಇದು ಈವರೆಗೆ ಎಲ್ಲಿಯೂ ಕಾಣದಂತಹ, ಕೇಳದಂತಹ ಪೋಲೀಸ್ ದುರ್ವರ್ತನೆ. ಪೋಲೀಸರು ಇದಕ್ಕೆ ನೀಡುತ್ತಿರುವ ಕಾರಣ, ಆಸ್ಪತ್ರೆಯಲ್ಲಿ ದೊಂಬಿಯಾಗುವ ಆತಂಕವಿತ್ತೆಂಬುದು. ಆದರೆ ಅಂತಹುದನ್ನು ತಡೆದು, ಸಾರ್ವಜನಿಕ ಜೀವನದ

ಜವಾಬ್ದಾರಿಗಳನ್ನು ಹೊತ್ತ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಹಾಗೂ ಸಂಸತ್ ಸದಸ್ಯರಂತಹ ಜನಪ್ರತಿನಿಧಿಗಳಿಗೆ ದಾರಿ ಮಾಡಿಕೊಡಲೆಂದೇ ಅಲ್ಲಿ ಪೋಲೀಸರ ನಿಯೋಜನೆಯ ಮುಖ್ಯ ಉದ್ದೇಶಗಳಲ್ಲೊಂದೆಂದು ಅವರಿಗೆ ತಿಳಿದಿಲ್ಲವೆ? ಇಂತಹ ಹಲವು ಪ್ರಸಂಗಗಳನ್ನು ಅವರು ನಿರ್ವಹಿಸಿಲ್ಲವೆ? ಈ ಇಡೀ ಪ್ರಸಂಗದ ವಿರುದ್ಧ ಮಾರನೆಯ ದಿವಸ ಶಾಂತಿಯುತ ಪ್ರತಿಭಟನೆಯ ನೇತೃತ್ವ ವಹಿಸಲು ಹೋದಾಗಲೂ ರಾಹುಲ್ ಗಾಂಧಿಯವರನ್ನು ಬಂಧಿಸಲಾಗಿದೆ! ಈ ಸಂಬಂಧ ಅವರು ಪೋಲೀಸ್ ಥಾಣೆಗೆ ದೂರು ಕೊಡಲು ಹೋದಾಗಲೂ ಅವರ ದೂರನ್ನು ಸ್ವೀಕರಿಸಲು ನಿರಾಕರಿಸಲಾಗಿದೆ. ಇದು ನಿಜವಾಗಿಯೂ ಗಂಭೀರ ಸ್ಥಿತಿಗತಿ.

ಇಷ್ಟೇ ಆಗಿದ್ದರೆ, ಇದು ಕಾನೂನು ಪ್ರಕ್ರಿಯೆಯ ಮೂಲಕ ಹೇಗೋ ಪರಿಹರಿಸಿಕೊಳ್ಳಬಹುದಾದ ಕೆಳಮಟ್ಟದ ರಾಜಕೀಯವೆಂದು ಸುಮ್ಮನಾಗಬಹುದಿತ್ತು. ಆದರೆ ಪೋಲೀಸರು ರಾಮ್‌ಕಿಶನ್‌ರ ಮಗ ಸಾರ್ವಜನಿಕರೊಂದಿಗೆ ಬೆರೆಯಲು, ಮಾತಾಡಲು ಆಗದಂತೆ ಆತನನನ್ನು ಬಲಪ್ರಯೋಗದಿಂದ ತಡೆದು, ನೂಕಿ ಎಳೆದಾಡಿ ಆತನ ಕುಟುಂಬದ ಇತರ ಸದಸ್ಯರೊಂದಿಗೆ ಪ್ರತಿಬಂಧನದಲ್ಲಿರಿಸಿದರು. ಏಕೆ? ಇದೆಂತಹ ಪ್ರಜಾತಂತ್ರ? ದೆಹಲಿ ಪೋಲೀಸ್ ಕೇಂದ್ರ ಸರ್ಕಾರದ ಸುಪರ್ದಿಯಲ್ಲಿದೆ ಎಂಬುದನ್ನು ನೆನಪಿಸಿಕೊಂಡಾಗ ಮೋದಿ ನೇತೃತ್ವದ ಈ ಕೇಂದ್ರ ಸರ್ಕಾರದ ಬಗ್ಗೆ ಈ ಮುನ್ನ ವ್ಯಕ್ತಪಡಿಸಲಾಗಿದ್ದ ಆತಂಕಗಳು ನಿಜವಾಗತೊಡಗಿವೆಯೇನೋ ಎನ್ನಿಸಹತ್ತಿದೆ.

ಯಾವುದೇ ಪೋಲೀಸ್ ವ್ಯವಸ್ಥೆ ಮೇಲಿನ ನಿರ್ದಿಷ್ಟ ಆದೇಶಗಳ ಹೊರತಾಗಿ ಹೀಗೆ ಸಾರ್ವಜನಿಕವಾಗಿ ಉದ್ಧಟತನದಿಂದ ವರ್ತಿಸಲು ಕಾರಣಗಳಿರಲಾರದು. ಹಾಗಾದರೆ ಮೇಲಿನಿಂದ ಇಂತಹ ಆದೇಶಗಳು ಏಕೆ ಬಂದಿರಬಹುದು? ಕೇಂದ್ರ ಸರ್ಕಾರ ಈ ರಾಮ್ ಕಿಷನ್ ಪ್ರಕರಣದಿಂದ ಏಕೆ ಇಷ್ಟರ ಮಟ್ಟಿಗೆ ತಲ್ಲಣಿಸಿದೆ? ಇದಕ್ಕೆ ಮುಖ್ಯ ಕಾರಣ, ಬರಲಿರುವ ವಿಧಾನ ಸಭಾ ಚುನಾವಣೆಗಳಿಗಾಗಿ, ಮುಖ್ಯವಾಗಿ ಉತ್ತರಪ್ರದೇಶದ ಚುನಾವಣೆಗಳಿಗಾಗಿ ಬಿಜೆಪಿ ಮಾಡಿಕೊಳ್ಳಲಾರಂಭಿಸಿದ್ದ ಸುಯೋಜಿತ ಕಾರ್ಯತಂತ್ರಕ್ಕೆ ಇದರಿಂದ ಹಿನ್ನಡೆಯಾಗಬಹುದೆಂಬ ಆತಂಕ. ಬಿಜೆಪಿ ಸರ್ಕಾರದ ವೀರಾವೇಶದ ಹೊರತಾಗಿಯೂ ಪಾಕಿಸ್ತಾನದ ಕಡೆಯಿಂದ ಗಡಿಯಲ್ಲಿನ ಪಠಾಣ್‌ಕೋಟ್ ಮತ್ತು ಉರಿಯಂತಹ ನಮ್ಮ ಅತಿ ಸೂಕ್ಷ್ಮ ಸೇನಾನೆಲೆಗಳ ಮೇಲೆ ನಡೆಯುತ್ತಿದ್ದ ಉಗ್ರರ ದಾಳಿಯನ್ನು ತಡೆಯಲಾಗದೆ ಜನರ ಆಕ್ರೋಶಕ್ಕೆ ತುತ್ತಾಗಿದ್ದ ಮೋದಿ ಸರ್ಕಾರ ಒಂದು ದಿನ ಇದ್ದಕ್ಕಿದ್ದಂತೆ 'ನಿರ್ದಿಷ್ಟ ದಾಳಿ' ನಡೆಸಿ ಪಾಕಿಸ್ತಾನದಲಿದ್ದ ಉಗ್ರ ನೆಲೆಗಳನ್ನು ನಾಶ ಮಾಡಿದ್ದಾಗಿ ಹೇಳಿಕೊಂಡು ಎದೆ ತಟ್ಟಿಕೊಳ್ಳುತ್ತಾ ದೇಶಾದ್ಯಂತ ಸೈನ್ಯದ ವೈಭವೀಕರಣದ ಮೂಲಕ ದಿಢೀರ್ ದೇಶಭಕ್ತಿಯ ಅಲೆಯೆಬ್ಬಿಸಿ ಜನರ ಆಕ್ರೋಶವನ್ನು ತಣ್ಣಗಾಗಿಸುವ ಪ್ರಯತ್ನ ಮಾಡುತ್ತಿತ್ತು. ಜೊತೆಗೆ ಪ್ರಧಾನಿ ಮೋದಿಯವರು ಹೋದಲ್ಲೆಲ್ಲ ಒಂದು ಶ್ರೇಣಿ–ಒಂದು ಪಿಂಚಣಿ ಯೋಜನೆಯ ಜಾರಿಯ ತನ್ನ ಸರ್ಕಾರದ ಕೀರ್ತಿ ಪತಾಕೆಯನ್ನು

ಹಾರಿಸುತ್ತಾ ಸೈನ್ಯವನ್ನು ಸಾರ್ವಜನಿಕ ಚರ್ಚೆಗಳ ಮಧ್ಯೆ ಸ್ಥಿತಗೊಳಿಸುವಂತಹ ಪ್ರಚಾರಾಂದೋಲನ ನಡೆಸತೊಡಗಿದ್ದರು. ಈ ವೇಳೆಯಲ್ಲೇ ಈ ಮಾಜಿ ಯೋಧ ರಾಮ್‌ಕಿಶನ್‌ನ ಆತ್ಮಹತ್ಯೆ ಪ್ರಕರಣ ನಡೆದು ಅದು ದೊಡ್ಡ ಸುದ್ದಿಯಾಗತೊಡಗಿ, ಇದು ಬಿಜೆಪಿಯ ಸೈನ್ಯ ವೈಭವೀಕರಣ ಆಧಾರಿತ ಚುನಾವಣಾ ತಂತ್ರಕ್ಕೆ ಪೆಟ್ಟು ಕೊಡಬಹುದೆಂದು ಸರ್ಕಾರ ಭಾವಿಸಿದಂತಿದೆ. ಅದಕ್ಕೇ ಇಷ್ಟೆಲ್ಲ ಅವಸರದ, ಅವಿವೇಕದ ಪ್ರಜಾತಂತ್ರ ವಿರೋಧಿಯಾದ ಮೂಲಭೂತ ಹಕ್ಕುಗಳ ಬಹಿರಂಗ ಉಲ್ಲಂಘನೆಯ ಪ್ರದರ್ಶನಗಳಂತಿರುವ ಈ ಕಾರ್ಯಾಚರಣೆಗಳು. ಈ ಸಂಬಂಧ ವಿರೋಧ ಪಕ್ಷಗಳು ಮಾಡಿದ್ದನ್ನು ಸಂಕುಚಿತ ರಾಜಕಾರಣವೆನ್ನುವುದಾದರೆ, ಅದಕ್ಕೆ ಪ್ರತಿಯಾಗಿ ಕೇಂದ್ರ ಸರ್ಕಾರ ಮಾಡಿದ್ದು, ಬಹು ಆತಂಕಕಾರಿಯಾದ ರಾಜಕಾರಣವೆನ್ನಬಹುದು.

ಬಿಜೆಪಿ ಸರ್ಕಾರದ ಬಗ್ಗೆ ಹೀಗೆಲ್ಲ ಯೋಚಿಸಲು ಇದರ ಬೆನ್ನೆಲ್ಲೇ ನಡೆದ ಇನ್ನೊಂದು ಬೆಳವಣಿಗೆಯೂ ಕಾರಣವಾಗಿದೆ. ಅದೆಂದೆರೆ, ಮಧ್ಯಪ್ರದೇಶದ ರಾಜಧಾನಿ ಭೂಪಾಲ್‌ನ ಕೇಂದ್ರ ಕಾರಾಗೃಹದಿಂದ ತಪ್ಪಿಸಿಕೊಂಡು ಓಡಿಹೋದರೆಂದು ಹೇಳಲಾಗುತ್ತಿರುವ ವಿಚಾರಣಾಧೀನ ಕೈದಿಗಳನ್ನು ಪೋಲೀಸ್ ಎನ್‌ಕೌಂಟರ್ ಮೂಲಕ ಹತ್ಯೆ ಮಾಡಿದ ಪ್ರಕರಣ. ಈ ಸಂಬಂಧ ದಿನೇ ದಿನೇ ಸಾರ್ವಜನಿಕ ವಲಯದಲ್ಲಿ ಪ್ರಕಟವಾಗುತ್ತಿರುವ ಸಾಕ್ಷ್ಯಗಳು ಇದೊಂದು ಎನ್‌ಕೌಂಟರ್ ಹೆಸರಿನಲ್ಲಿ ನಡೆದ ಸಾಮೂಹಿಕ ಹತ್ಯೆ ಎಂಬ ಅನುಮಾನವನ್ನು ಪುಷ್ಟೀಕರಿಸುತ್ತಿವೆ. ಇದನ್ನು ಮಧ್ಯಪ್ರದೇಶದ ಬಿಜೆಪಿ ಸರ್ಕಾರ ಮತ್ತು ಆ ಪಕ್ಷದ ರಾಷ್ಟ್ರೀಯ ವಕ್ತಾರರು, ಸತ್ತಿರುವ ಕೈದಿಗಳು ಭಯಂಕರವಾದ ಅಪರಾಧಗಳ ಆರೋಪ ಹೊತ್ತ ಬಹಿಷ್ಕೃತ 'ಸಿಮಿ' ಮುಸ್ಲಿಂ ವಿದ್ಯಾರ್ಥಿ ಸಂಘನೆಯ ಉಗ್ರರು ಎಂಬುದನ್ನು ಮತ್ತೆ ಮತ್ತೆ ಹೇಳುತ್ತಾ ಇಂತಹವರ ಪರವಾಗಿ ಸಹಾನುಭೂತಿ ಹುಟ್ಟಿಸಿ ನಮ್ಮ ಪೋಲೀಸರ ವಿರುದ್ಧ ಭಾವನೆಗಳನ್ನು ಕೆರಳಿಸುವುದು ದೇಶಭಕ್ತಿಯ ಕೊರತೆಯ ಪ್ರದರ್ಶನ ಎಂದು ವಾದಿಸುತ್ತಿದ್ದಾರೆ. ಮತ್ತೆ ಇದು ಎಲ್ಲದಕ್ಕೂ ದೇಶಭಕ್ತಿಯನ್ನು ಮಧ್ಯದಂತೆ ಬೆರೆಸಿ, ಈ ದೇಶದ ಜನಜೀವನವನ್ನು ಈವರೆಗೂ ಆದಷ್ಟೂ ಸ್ಥಿರವಾಗಿ ಕಾಪಾಡಿಕೊಂಡು ಬಂದಿರುವ ನಾಗರಿಕ ಹಕ್ಕುಗಳ ಸಿಂಧುತ್ವವನ್ನು ಹಿನ್ನೆಲೆಗೆ ಸರಿಸುವ ಅಮಲಿನ ಆತಂಕಕಾರಿ ಆಟವೆಂದೇ ಹೇಳಬೇಕಿದೆ.

ಮೊದಲಿಗೆ, ಆ ಎಂಟು ಜನ ಕೈದಿಗಳು ಗೋಡೆ ಹಾರಿ ಪಲಾಯನ ಮಾಡಿದರು ಎಂಬ ಆರೋಪವೇ ಕಟ್ಟುಕಥೆ ಎಂಬ ಅನುಮಾನವಿದೆ. ಏಕೆಂದರೆ, ಭೂಪಾಲ್ ಸೆರೆಮನೆ ಮೂರು ಸುತ್ತುಗಳ ಇಪ್ಪತ್ತನಾಲ್ಕು ಅಡಿ ಎತ್ತರದ ಗೋಡೆಗಳ ಭದ್ರ ಕೋಟೆಯಂತಿದೆ. ಅಲ್ಲಿ ೨೪ ಗಂಟೆಗಳ ನಿರಂತರ ಪಹರೆ ವ್ಯವಸ್ಥೆ ಇದೆ. ಹೀಗಿರುವಾಗ ಬೆಡ್‌ಶೀಟ್ ಬಳಸಿ ಅದೂ ಎಂಟು ಜನ ಗೋಡೆ ಹತ್ತಿ ಪರಾರಿಯಾಗುವುದು ದುಸ್ಸಾಧ್ಯ ಎಂಬ ವಾದವಿದೆ. ಒಳಗಿನ ಒಬ್ಬರ 'ಸಂಪೂರ್ಣ' ಸಹಕಾರವಿಲ್ಲದೆ ಇಂತಹ ಪರಾರಿ ಸಾಧ್ಯವಿಲ್ಲ ಎಂದೂ ಹೇಳಲಾಗುತ್ತಿದೆ. ಹಾಗಾಗಿ, ಪರಾರಿಯಾದ ಕೈದಿಗಳು ಕೊಂದರೆಂದು ಹೇಳಲಾಗುವ

ಸೆರೆಮನೆಯ ರಕ್ಷಕ ಸಿಬ್ಬಂದಿಗೆ ಸೇರಿದ ಪೋಲೀಸ್ ಪೇದೆಯನ್ನು ನಿಜವಾಗಿ ಕೊಂದವರಾರು ಎಂಬುದೂ ಚರ್ಚಾರ್ಹವಾಗಿದೆ. ಆದರೆ ಈತನ ಸಾವನ್ನು ವೈಭವೀಕರಿಸುತ್ತಾ ಎಂಟುಜನ ಕೈದಿಗಳ ಅಕ್ರಮವೆಂದು ಅನುಮಾನಿಸಲಾಗುತ್ತಿರುವ ಹತ್ಯೆಯನ್ನು ಸಮರ್ಥಿಸಲು ಬಿಜೆಪಿ ಯತ್ನಿಸುತ್ತಿರುವುದು ಕಾನೂನು ಆಳ್ವಿಕೆಯಲ್ಲಿ ನಂಬಿಕೆ ಇರಿಸಿರುವ ಯಾರಿಗಾದರೂ ಜಿಗುಪ್ಸೆ ತರುವಂತಿದೆ. ಒಟ್ಟಿನಲ್ಲಿ, ಈ ಮುಸ್ಲಿಂ ಉಗ್ರರ ವಿಚಾರಣೆ ಅಂತಿಮಘಟ್ಟ ತಲುಪಿದ್ದು, ಅವರು ಖುಲಾಸೆಗೊಳ್ಳುವ ಅನುಮಾನ ಹೆಚ್ಚಾಗಿ ಸರ್ಕಾರ ಈ ದೊಡ್ಡ ಮುಜುಗರವನ್ನು ತಪ್ಪಿಸಿಕೊಳ್ಳಲು ಖುಲಾಸೆಯ ಮುನ್ನವೇ ಅವರನ್ನು ಮುಗಿಸಲು ಈ ತಂತ್ರ ಹೂಡಿದೆ ಎಂಬುದು ಈ ಎಲ್ಲ ಊಹಾವಾದಗಳ ಹಿಂದಿರುವ ತರ್ಕ.

ಇದೆಲ್ಲ ಊಹೆ ಮಾತ್ರ, ಕೈದಿಗಳು ಪರಾರಿಯಾಗಲು ಯತ್ನಿಸಿದ್ದು ನಿಜವೆಂದೇ ಭಾವಿಸಿ ಒಂದು ಕ್ಷಣ ಅದನ್ನು ತಳ್ಳಿ ಹಾಕೋಣ. ಆದರೆ ಸಾರ್ವಜನಿಕವಾಗಿ ಲಭ್ಯವಿರುವ ಮಧ್ಯಪ್ರದೇಶದ ಮಂತ್ರಿಗಳ ಮತ್ತು ಪೋಲೀಸ್ ಅಧಿಕಾರಿಗಳ ಈ ಪರಾರಿ ಕುರಿತ ಪರಸ್ಪರ ವಿರೋಧಾಭಾಸದ ಹೇಳಿಕೆಗಳು ಮತ್ತು ಎನ್‌ಕೌಂಟರ್ ಕುರಿತ ವಿಡಿಯೋ ಸಾಕ್ಷ್ಯಗಳೆಲ್ಲವೂ ಇದೊಂದು ಹುಸಿ ಎನ್‌ಕೌಂಟರ್ ಎಂದು ಸಾರಿ ಹೇಳುತ್ತಿವೆಯಲ್ಲ? ಪರಾರಿಯಾಗಿದ್ದ ಕೈದಿಗಳು ಶರಣರಾಗಲು ಸಿದ್ಧವಿರುವ ಚಿತ್ರಗಳು ತೆರೆಯ ಮೇಲೆ ಕಾಣುತ್ತಿವೆಯಲ್ಲ? ಶರಣಾಗಲು ಕೈಯೆತ್ತಿರುವ ಖೈದಿಯೊಬ್ಬನ್ನು ಮೂರಡಿ ಹತ್ತಿರದಿಂದ ಪೋಲೀಸರು ಗುಂಡಿಟ್ಟು ಕೊಲ್ಲುತ್ತಿರುವ ಚಿತ್ರವೂ ಲಭ್ಯವಿದೆಯಲ್ಲ? ಜೊತೆಗೆ ಹತ್ಯೆಯಾದವರ ಶವಪರೀಕ್ಷೆಯ ವರದಿಗಳೂ ಅವರನ್ನು ಬಹು ಹತ್ತಿರದಿಂದಲೇ ನಿರ್ದಿಷ್ಟವಾಗಿ ಎದೆ-ಹೊಟ್ಟೆಗಳಿಗೆ ಗುರಿಯಿಟ್ಟು ಕೊಲ್ಲಲಾಗಿದೆ ಎಂದು ಸೂಚಿಸುತ್ತಿವೆಯಲ್ಲಾ? ಇನ್ನು ಇತ್ತೀಚೆಗೆ ಲಭ್ಯವಾಗಿರುವ ಪೋಲೀಸ್ ನಿಯಂತ್ರಣ ಕೊಠಡಿಯ ಮಾತುಕತೆಯ ಧ್ವನಿಸುರುಳಿಯಲ್ಲಿ, ಹತ್ಯೆಗೈಯ್ಯಲು ನೇರ ಆದೇಶಗಳನ್ನು ನೀಡಿದ ಮತ್ತು ಇಂತಹ ಹುಸಿ ಎನ್‌ಕೌಂಟರ್‌ಗಳ ಇನ್ನಷ್ಟು ಅಗತ್ಯವಿದೆ ಎಂದು ಹಿರಿಯ ಪೋಲೀಸ್ ಅಧಕಾರಿ ಹೇಳುವ ಮಾತುಗಳೂ ದಾಖಲಾಗಿವೆಯಲ್ಲಾ? ಮಧ್ಯಪ್ರದೇಶ ಸರ್ಕಾರ ಈವರೆಗೆ ಈ ದೃಶ್ಯ ಮತ್ತು ಧ್ವನಿಗಳು ಹುಸಿಯಾದವುಗಳೆಂದು ಹೇಳಿಲ್ಲವೆಂಬುದೂ ಇಲ್ಲಿ ಗಮನಾರ್ಹ. ಹಾಗಾಗಿಯೇ ಸುಪ್ರೀಂ ಕೋರ್ಟಿನ ನಿವೃತ್ತ ನ್ಯಾಯಾಧೀಶ ಮಾರ್ಕಂಡೇಯ ಕಾಟ್ಜುರಂತಹವರೂ ಮಾಧ್ಯಮಗಳ ಮುಂದೆ ಬಂದು ಇದು ಸಾಮೂಹಿಕ ಹತ್ಯೆಯ ಹುಸಿ ಎನ್‌ಕೌಂಟರ್ ಎಂದು ಘಂಟಾಘೋಷವಾಗಿ ಹೇಳುತ್ತಿದ್ದಾರೆ.

ನಿಜ ಇದೆಲ್ಲವೂ ಕ್ರಮಬದ್ಧ ನ್ಯಾಯಾಂಗ ವಿಚಾರಣೆಯಿಂದ ಅನುಮಾನವಿಲ್ಲದೆ ಸಾಬೀತಾಗಬೇಕು. ಅದನ್ನೇ ಕಾನೂನಿನ ಆಳ್ವಿಕೆ ಎನ್ನುವುದು. ಪ್ರಜಾತಂತ್ರ ಅನ್ನುವುದು. ಆದರೆ ನಮ್ಮ ಉನ್ನತ ನ್ಯಾಯಾಂಗ ವ್ಯವಸ್ಥೆಯಲ್ಲಿ ಕೆಲಸ ಮಾಡಿದ ಕಾಟ್ಜು ಅವರೇ ಇಂತಹ ವಿಚಾರಣೆಗಳ ನಿಷ್ಪಕ್ಷಪಾತತೆಯ ಬಗ್ಗೆಯೇ ಅಪನಂಬಿಕೆ ವ್ಯಕ್ತಪಡಿಸುತ್ತಿದ್ದಾರೆ. ಜೊತೆಗೆ ಇಂತಹ ವಿಚಾರಣೆಗಳು ಮುಗಿಯಲು ಎಷ್ಟು ವರ್ಷಗಳು ಬೇಕು? ಇದೆಲ್ಲವನ್ನೂ

ಮೀರಿ ಗಮನಿಸಬೇಕಾದ್ದೆಂದರೆ, ಮಧ್ಯಪ್ರದೇಶ ಸರ್ಕಾರ ಈವರೆಗೆ ಯಾವುದೇ ತೆರೆನಾದ ನ್ಯಾಯಾಂಗ ತನಿಖೆಗೆ ಒಪ್ಪಿಲ್ಲ ಎಂಬುದು ಏಕೆ?

ಅದೇನೇ ಇರಲಿ, ಇಂತಹ ಅನುಮಾನಾಸ್ಪದ ಹತ್ಯೆಗಳನ್ನು ಬಿಜೆಪಿ ವಕ್ತಾರರು ಅವರು ಉಗ್ರರು; ಅವರಿಗೆ ಸಹಾನುಭೂತಿಯ ಅಗತ್ಯವಿಲ್ಲ; ಹಾಗೇ ಸಹಾನುಭೂತಿ ತೋರುವುದು ದೇಶನಿಷ್ಠೆಯ ಲಕ್ಷಣವಲ್ಲ ಎಂಬಂತೆ ವಾದ ಮಂಡಿಸುತ್ತಿರುವುದು ಜೀವದ ಹಕ್ಕೂ ಸೇರಿದಂತಿರುವ ನಾಗರಿಕ ಹಕ್ಕುಗಳ ಸಂರಕ್ಷಣೆಯ ದೃಷ್ಟಿಯಿಂದ ಆತಂಕ ಹುಟ್ಟಿಸುವಂತಿದೆ. ಆ ಖೈದಿಗಳು ಉಗ್ರರೆಂದು ಇನ್ನೂ ಸಾಬೀತಾಗಬೇಕಾದವರು ಎಂಬುದನ್ನೇ ಬಿಜೆಪಿ ಮುಚ್ಚಿಡಲು ಯತ್ನಿಸುತ್ತಿದೆ. ಹೀಗೆ ಆರೋಪ ಹೊತ್ತು ಹತ್ತಾರು ವರ್ಷಗಳ ಕಾಲ ಸೆರೆಮನೆಯಲ್ಲಿ ಕೊಳೆತು ಕೊನೆಗೆ ನ್ಯಾಯಾಲಯಗಳಿಂದ ಆರೋಪಮುಕ್ತರಾಗಿ ಖುಲಾಸೆಯಾದ ಅನೇಕ ಉದಾಹರಣೆಗಳಿವೆ ಎಂಬುದನ್ನು ಇವರು ಬೇಕೆಂತಲೇ ಮರೆಯುತ್ತಿದ್ದಾರೆನಿಸುತ್ತದೆ. ಒಂದು ವೇಳೆ ಅವರು ನಿಜವಾಗಿ ಉಗ್ರರೇ ಆಗಿದ್ದರೆ, ಅದು ಸಾಬೀತಾಗಿ ಅವರಿಗೆ ಉಗ್ರ ಶಿಕ್ಷೆಯಾಗುವವರೆಗೆ ಕಾಯುವುದು ನಾಗರಿಕ ಸಮಾಜದ ಲಕ್ಷಣ ಮತ್ತು ಕರ್ತವ್ಯ. ಈ ನೀತಿಸಂಹಿತೆಯನ್ನೇ ಬಿಜೆಪಿ ದಮನ ಮಾಡಲು ಹೊರಟಂತಿದೆ. ತಾನು ನಂಬಿದ್ದೇ ಸತ್ಯ, ಅದನ್ನು ಒಪ್ಪುವವರು ಮಾತ್ರ ದೇಶಭಕ್ತರು, ಉಳಿದವರೆಲ್ಲ ದಮನಕ್ಕೆ, ಹಿಂಸೆಗೆ, ಹತ್ಯೆಗೆ ಅರ್ಹರಾದ ದೇಶದ್ರೋಹಿಗಳೆಂದು ಅದು ಗಟ್ಟಿಯಾಗಿ ನಂಬಿದಂತಿದೆ.

ಇದಕ್ಕೆ ಕಾರಣ ಬಿಜೆಪಿ ದೇಶವೆಂದರೇನು ಎಂಬುದನ್ನು ಗ್ರಹಿಸಿರುವ ರೀತಿಯಲ್ಲೇ ದೋಷವಿರುವುದು. ಮೊದಲು ಇವರು ಅರಿಯಬೇಕಾದದ್ದು, ನಾವೆಲ್ಲ ಮೂಲಭೂತವಾಗಿ ಭಗವಂತನ ಅಥವಾ ಪ್ರಕೃತಿಯ ಮಕ್ಕಳು. ಹಾಗಾಗಿ ನಮ್ಮ ನೈಸರ್ಗಿಕ ಹಕ್ಕುಗಳು ಬಹುಪವಿತ್ರ. ನಂತರ ನಾವು ನಾಗರಿಕರಾಗಿ ಬೆಳೆದು ಕೆಲವು ನಾಗರಿಕ ಹಕ್ಕುಗಳನ್ನು ನಮ್ಮದನ್ನಾಗಿಸಿಕೊಂಡಿದ್ದೇವೆ. ಅವನ್ನು ನಾವು ಪ್ರಜಾತಂತ್ರದ ದೃಷ್ಟಿಯಿಂದ ಕಾಪಾಡಿಕೊಳ್ಳಬೇಕಾಗಿದೆ. ಆ ನಂತರ ಬರುವುದು ದೇಶ. ದೇಶ ಎಂದರೆ ಸರ್ಕಾರವೂ ಅಲ್ಲ, ಸೈನ್ಯವೂ ಅಲ್ಲ. ಜನ. ಅವರ ಈ ನೈಸರ್ಗಿಕ ಮತ್ತು ನಾಗರಿಕ ಹಕ್ಕುಗಳನ್ನು ಕಾಪಾಡಲೆಂದೇ ಈ ದೇಶ ಅಥವಾ ರಾಷ್ಟ್ರ, ಸರ್ಕಾರ, ಆಡಳಿತ ಯಂತ್ರ, ತಂತ್ರ, ಸೈನ್ಯ ಇತ್ಯಾದಿಗಳನ್ನು ರೂಪಿಸಿಕೊಂಡಿರುವುದು. ಮೋದಿಯವರನ್ನು ನಾವು ಪ್ರಧಾನ ಮಂತ್ರಿಯನ್ನಾಗಿ ಆರಿಸಿರುವುದು ಈ ಸಂಕೀರ್ಣ ವ್ಯವಸ್ಥೆಯ ಉಸ್ತುವಾರಿ ನೋಡಿಕೊಳ್ಳಲೆಂದೇ ಹೊರತು, ತಾನು ಅಥವಾ ತಮ್ಮ ಪಕ್ಷ ವೈಯಕ್ತಿಕವಾಗಿ ಅಥವಾ ಸಾಮೂಹಿಕವಾಗಿ ನಂಬಿದ ಒಂದು ನಿರ್ದಿಷ್ಟ ಸಿದ್ಧಂತವನ್ನು ಜಾರಿಗೆ ತರಲಲ್ಲ. ಈ ದೇಶ ಪರಾಧೀನವಾಗಿದ್ದಾಗ ಅದನ್ನು ಸ್ವತಂತ್ರಗೊಳಿಸಿ ಮೋದಿಯವರವರೆಗೆ ಅದರ ಅಧಿಕಾರವನ್ನು ದಾಟಿಸಿದ ಕಥೆ ತುಂಬ ಸಂಕೀರ್ಣವಾದದ್ದು. ಅದು ರಾಷ್ಟ್ರ ನಿರ್ಮಾಣದ ಕಥೆ. ಅಲ್ಲಿಂದಲೇ ನಮ್ಮ ರಾಷ್ಟ್ರದ ರಾಜಕೀಯ ಕಲ್ಪನೆ ಆರಂಭವಾಗುವುದು. ಅದರಲ್ಲಿ ಹಲವರ ದರ್ಶನ, ತತ್ವ,

ತ್ಯಾಗ, ಬಲಿದಾನಗಳು ಮಿಳಿತವಾಗಿವೆ (ಇದರಲ್ಲಿ ಮೋದಿಯವರ ಪಕ್ಷದ ಪಾಲು ಇಲ್ಲವೇ ಇಲ್ಲವೆನ್ನಬಹುದಾದಷ್ಟು ಕಡಿಮೆ). ಅದನ್ನು ಸ್ಥೂಲವಾಗಿಯಾದರೂ ನಮ್ಮ ಸಂವಿಧಾನದಲ್ಲಿ ಪ್ರತಿಬಿಂಬಿಸಲಾಗಿದೆ. ಆದರೆ ಮೋದಿಯವರು ಸಂವಿಧಾನವೇ ನಮ್ಮ ಧರ್ಮಗ್ರಂಥ ಎಂದು ಬಾಯಲ್ಲಿ ಹೇಳುತ್ತಿದ್ದರೂ, ಅವರ ಸರ್ಕಾರದ ಮತ್ತು ಅವರ ಚೇಲಾಗಳ ವರ್ತನೆ ಅವರ ಈ ಮಾತನ್ನು ಪುಷ್ಟೀಕರಿಸುತ್ತಿಲ್ಲ. ಅದರ ಪರಿಣಾಮಗಳೇ, ರಾಮ್ ಕಿಶನ್ ಮತ್ತು ಭೂಪಾಲ್ ಎನ್‌ಕೌಂಟರ್‌ನಂತಹ ಅನುಮಾನಾಸ್ಪದ ಮತ್ತು ಆತಂಕಕಾರಿ ಪ್ರಕರಣಗಳು.

ಹಾಗಾಗಿ, ದೈವದತ್ತ ಮತ್ತು ನಾಗರಿಕ ಹಕ್ಕುಗಳನ್ನು ಪ್ರೀತಿಸುವ ಪ್ರಜೆಗಳು ಸದಾ ಕಟ್ಟೆಚ್ಚರದಿಂದ ಇರಬೇಕಾದ ಕಾಲವಿದು.

(ಫೇಸ್‌ಬುಕ್ ಬರಹ : ೪.೧೧.೨೦೧೬)

ಸಾಮಾಜಿಕ ನ್ಯಾಯವೋ? ಜಾತಿ ರಾಜಕಾರಣವೋ?

ಇತ್ತೀಚೆಗೆ ರಾಜ್ಯ ಶ್ರೇಷ್ಠ ನ್ಯಾಯಾಲಯ ನಾವೆಲ್ಲ ಗಮನಿಸಬೇಕಾದ ಒಂದು ಮಹತ್ವದ ತೀರ್ಪು ನೀಡಿದೆ. ಅದೆಂದರೆ, ಸಾಮಾನ್ಯವಾಗಿ ಸರ್ಕಾರದ ಎಲ್ಲ ಅರ್ಜಿ ನಮೂನೆಗಳಲ್ಲಿ ಕಂಡುಬರುವ ಜಾತಿ ವಿವರದ ಕಾಲಂನ್ನು ತುಂಬುವ ಅಥವಾ ಬಿಡುವ ಸ್ವಾತಂತ್ರ್ಯ ಪ್ರಜೆಗಳಿಗಿದೆ ಎಂಬುದು. ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ಹುದ್ದೆಗೆ ಸಲ್ಲಿಸಿದ ಅರ್ಜಿಯಲ್ಲಿ ತಮ್ಮ ಜಾತಿ ನಮೂದಿಸದೆ ಬಿಟ್ಟ ಇಬ್ಬರು ಯುವತಿಯರ ಅರ್ಜಿಗಳನ್ನು ಮಾನ್ಯ ಮಾಡದಿದ್ದ ಸರ್ಕಾರದ ಕ್ರಮವನ್ನು ಆ ಯುವತಿಯರು ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದರು. ನ್ಯಾಯಾಲಯ ಸರ್ಕಾರದ ಕ್ರಮವನ್ನು ಅಸಿಂಧುಗೊಳಿಸಿ ಯುವತಿಯರು ಉದ್ಯೋಗಕ್ಕಾಗಿ ಹಾಕಿದ್ದ ಅರ್ಜಿಗಳನ್ನು ಮಾನ್ಯ ಮಾಡುವಂತೆ ಸೂಚಿಸಿದೆ. ಆ ಮೂಲಕ ಯಾರೇ ಆಗಲಿ ಸಾರ್ವಜನಿಕ ವ್ಯವಹಾರಗಳಲ್ಲಿ ತಮ್ಮ ಜಾತಿಯನ್ನು ಬಹಿರಂಗಗೊಳಿಸುವುದು ಕಡ್ಡಾಯವಲ್ಲ ಎಂದು ನ್ಯಾಯಾಲಯ ಘೋಷಿಸಿದೆ. ಈ ತೀರ್ಪು ಮಹತ್ವದ್ದೇಕೆನಿಸಿದೆ ಎಂದರೆ, ನಮಗೆ ಇಷ್ಟವಿರಲಿ, ಇರದಿರಲಿ ನಾವು (ಆಕಸ್ಮಿಕವಾಗಿ) ಹುಟ್ಟಿದ ಜಾತಿ ಸಾರ್ವಜನಿಕ ಜೀವನದಲ್ಲಿ ನಾವು ಸದಾ ಹೊತ್ತುಕೊಂಡು ತಿರುಗಬೇಕಾದ ಭಾರದ ಮೂಟೆ ಎಂಬಂತೆ ನಮ್ಮ ಸಾರ್ವಜನಿಕ ಜೀವನದಲ್ಲಿ ಜಾತಿಯನ್ನು ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಅಂತರ್ಗತಗೊಳಿಸುವ ರೀತಿಯಲ್ಲಿ ನಮ್ಮ ಸಾರ್ವಜನಿಕ ಜೀವನವನ್ನು ರೂಪುಗೊಳಿಸಲಾಗುತ್ತಿದೆ. ಈ ದೃಷ್ಟಿಯಿಂದ ಮೊದಲಿಗೆ, ನಿಜವಾದ ಅರ್ಥದಲ್ಲಿ ಜಾತ್ಯತೀತತೆಯನ್ನು ಮೆರೆದ ಮತ್ತು ಅದನ್ನು ಮಾನ್ಯ ಮಾಡದ ಸರ್ಕಾರಿ ವ್ಯವಸ್ಥೆಯ ವಿರುದ್ಧ ನ್ಯಾಯಾಂಗ ಹೋರಾಟ ನಡೆಸಿ ಗೆದ್ದ ಇಬ್ಬರು ಯುವತಿಯರಿಗೆ ಅಭಿನಂದನೆಗಳನ್ನು

ಸಲ್ಲಿಸಬೇಕಿದೆ. ಹಾಗೂ ಈ ಹೋರಾಟ ಕೂಡ ನಿಜವಾದ ಸಾಮಾಜಿಕ ನ್ಯಾಯಕ್ಕಾಗಿ ನಡೆದ ಹೋರಾಟವೇ ಆಗಿದೆ ಎಂಬುದನ್ನು ನಾವು ಇಲ್ಲಿ ಗಮನಿಸಬೇಕಿದೆ. ಇದು ಹೇಗೆಂದರೆ–

ಇತ್ತೀಚಿನ ವರ್ಷಗಳಲ್ಲಿ ನಮ್ಮ ಎಲ್ಲ ಸರ್ಕಾರಿ ದಾಖಲೆಗಳಲ್ಲೂ ಜಾತಿಯನ್ನು ದಾಖಲಿಸುವಂತೆ ಕೇಳುವ ವಿಧಿ-ವಿಧಾನಗಳು ಸಾಮಾನ್ಯವಾಗಿ ಹೋಗಿವೆ. ಇದಕ್ಕೆ ಮುಖ್ಯ ಕಾರಣ, ಸರ್ಕಾರ ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಒದಗಿಸುತ್ತಿರುವ ಹಲವು ರಿಯಾಯ್ತಿ/ ವಿನಾಯ್ತಿ/ಮೀಸಲಾತಿಗಳಿಗೆ ಜಾತಿಯೇ ಮುಖ್ಯ ಆಧಾರವಾಗಿದ್ದು (ಇದು ಸರಿಯೂ ಹೌದು) ಇವು ವ್ಯಾವಹಾರಿಕ ರಾಜಕೀಯ ಕಾರಣಗಳಿಂದಾಗಿ ಸಮಾಜದ ಮುಕ್ಕಾಲು ಪಾಲಿಗೂ ಹೆಚ್ಚು ಜಾತಿಗಳಿಗೆ ಅನ್ವಯಿಸುವಂತೆ ಜಾರಿಗೊಳಿಸಲಾಗುತ್ತಿರುವುದರಿಂದ, ಸರ್ಕಾರದೊಡನೆಯ ಜನರ ಬಹುಪಾಲು ವ್ಯವಹಾರಗಳಲ್ಲಿ ಜಾತಿಯ ಪಾತ್ರ ಇರುವುದೇ ಆಗಿದೆ. ಹೀಗಾಗಿ ಸರ್ಕಾರಿ ಇಲಾಖೆಗಳು ರೂಢಿಗತವಾಗಿ ತಮ್ಮೆಲ್ಲ ಅರ್ಜಿಗಳಲ್ಲೂ ಜಾತಿ ಕಾಲಮನ್ನು ಸಾಮಾನ್ಯಗೊಳಿಸಿಬಿಟ್ಟಿವೆ. ಹಾಗೇ ಸಮಾಜದ ಹೆಚ್ಚಿನ ಜನ ಕೂಡ ತಂತಮ್ಮ ಜಾತಿಗಳಿಗೆ ಅಂಟಿಕೊಂಡಿರುವುದರಿಂದ ಜಾತಿ ನಮೂದಿಸುವುದನ್ನು ಸಹಜವೆಂದೇ ಭಾವಿಸಿ ಯಾವುದೇ ಪ್ರಶ್ನೆ ಅಥವಾ ಮುಜುಗರವಿಲ್ಲದೆ ಅದನ್ನು ದಾಖಲಿಸುತ್ತಿದ್ದಾರೆ. ಹಾಗಾಗಿ ಜಾತಿ ನಮೂದಿಸಲು ನಿರಾಕರಿಸುವ ಪ್ರಸಂಗಗಳನ್ನು ಸರ್ಕಾರ ಅಸಾಮಾನ್ಯವೆಂದೇ ಭಾವಿಸಿ ಅಂತಹವನ್ನು ನಿಯಮಬಾಹಿರವೆಂದೂ ಪರಿಗಣಿಸಲಾರಂಭಿಸಿದೆ. ಉದಾಹರಣೆಗೆ, ಮಕ್ಕಳನ್ನು ಶಾಲೆಗೆ ಸೇರಿಸುವಾಗಲೂ, ಅರ್ಜಿಯ ಜಾತಿ ಕಾಲಂನಲ್ಲಿ 'ಜಾತ್ಯತೀತ' ಎಂದೋ, 'ಭಾರತೀಯ' ಎಂದೋ ಅಥವಾ ಜಾತಿಯಿಲ್ಲ ಎಂದೋ ಬರೆಯುವ ಪೋಷಕರನ್ನು ಶಾಲೆಗಳ ಆಡಳಿತಗಾರರು ವಿಚಿತ್ರವಾಗಿ ನೋಡುತ್ತಾ, ಕಾಲಂನ್ನು 'ಸರಿ'ಯಾಗಿ ತುಂಬಲು ಆಗ್ರಹಿಸುವುದೂ ಉಂಟು. ಸುಮ್ಮನೆ ಅವರೊಂದಿಗೆ ವಾದವೇಕೆಂದು ಈ ಆಗ್ರಹಕ್ಕೆ ಮಣಿದು ಬಹಳಷ್ಟು ಪೋಷಕರು ಇಷ್ಟವಿಲ್ಲದಿದ್ದರೂ ತಮ್ಮ ಜಾತಿ-ಧರ್ಮಗಳ ಕಾಲಂಗಳನ್ನು ಹೀಗೆ 'ಸರಿ'ಯಾಗಿ ತುಂಬುವ ಮೂಲಕ ಈ 'ಅಸಾಮಾನ್ಯತೆ'ಯನ್ನು 'ಸಾಮಾನ್ಯ'ಗೊಳಿಸುವುದೂ ಉಂಟು.

ಆದರೆ ಅಸಾಮಾನ್ಯವಾದುದೆಲ್ಲವೂ ನಿಯಮಬಾಹಿರ ಅಥವಾ ಕಾನೂನು ಬಾಹಿರವಾಗಲಾರದು. ಆದರೆ ಈ ಪ್ರಜ್ಞೆ ಸರ್ಕಾರಕ್ಕೆ (ಅಂದರೆ ಆಡಳಿತಗಾರರಿಗೆ) ಇಲ್ಲದೆ ಕಾನೂನನ್ನು ಕುರಿತ ಅವರ ಅರಿವು ಸ್ಥೂಲ ಅಥವಾ ಅಸ್ಪಷ್ಟಗೊಳ್ಳಲು ಕಾರಣವೆಂದರೆ, ಸರ್ಕಾರದ ಅಧಿಕಾರ ವಲಯದ ಪ್ರಜ್ಞೆ ಸಾಮಾನ್ಯ ಜನತೆಯ ಪ್ರಜ್ಞೆಯಂತೆಯೇ ಜಾತಿಮಯತೆಯಿಂದ ಮಂಕಾಗಿ ಹೋಗಿರುವುದು. ಇದಕ್ಕೆ ಮತ್ತೆ ಕಾರಣ, ಸರ್ಕಾರದ ಆಡಳಿತದಲ್ಲಿ 'ಜಾತಿ'ಯನ್ನು ನಿವಾರಿಸಿಕೊಳ್ಳಬೇಕಾದ ಒಂದು ಸಾಮಾಜಿಕ ಸಂಗತಿ ಎಂಬಂತೆ ನಿರ್ವಹಿಸಲಾಗದೆ ಅದನ್ನೊಂದು ಸಾಮಾಜಿಕವಾಗಿ ಅನಿವಾರ್ಯವಾದ ಮತ್ತು ಎಲ್ಲ ಕಾಲಕ್ಕೂ ಪ್ರಯೋಜನಕಾರಿಯಾದ ಸಂಗತಿಯೆಂಬಂತೆಯೇ ನಿರ್ವಹಿಸಲಾಗುತ್ತಿರುವುದು.

ಇದು ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿಯುತ್ತಾ ಸಂವಿಧಾನ ಹೇಳುವ ಜಾತಿರಹಿತ-ವರ್ಗರಹಿತ ಸಮಾಜ ನಿರ್ಮಾಣದ ಉದ್ದೇಶಕ್ಕೇ ವ್ಯತಿರಿಕ್ತವಾಗಿದೆ.

ಸರ್ಕಾರಿ ಹುದ್ದೆಗಳಿಗಾಗಿ ಸಲ್ಲಿಸಿದ್ದ ತಮ್ಮ ಅರ್ಜಿಗಳಲ್ಲಿ ಜಾತಿ ನಮೂದಿಸಲು ನಿರಾಕರಿಸಿದ ಇಬ್ಬರು ಯುವತಿಯರಿಗೆ ರಾಜ್ಯದ ಶ್ರೇಷ್ಠ ನ್ಯಾಯಾಲಯ ನೀಡಿರುವ ನ್ಯಾಯ ನಮ್ಮ ಸರ್ಕಾರವು ಜಾತಿ ಕುರಿತು ತಳೆದಿರುವ ವ್ಯಾವಹಾರಿಕ ನಿಲುವು ಹೇಗೆ ಸಂವಿಧಾನ ವಿರೋಧಿಯಾಗಿದೆ ಎಂಬುದನ್ನೇ ಹೇಳುತ್ತಿದೆ. ಅಂದರೆ ಈ ತೀರ್ಪು ಸರ್ಕಾರದ ಆಡಳಿತವು ಜಾತಿಯನ್ನು ಸಾರ್ವಜನಿಕ ಬದುಕಿನ ಅವಿಭಾಜ್ಯ ಅಂಗವೆಂದು ಮಾನ್ಯ ಮಾಡುವುದನ್ನು ಅಸಿಂಧುಗೊಳಿಸುವ ಮೂಲಕ ಸರ್ಕಾರವು ಸಮಾಜವೆಂದಾಕ್ಷಣ ಜಾತಿ ಸಮಾಜವೆಂದೇ ಗ್ರಹಿಸುವ ಆಲೋಚನಾ ಕ್ರಮವನ್ನೇ ಪ್ರಶ್ನಿಸಿದೆ. ಈ ಪ್ರಕರಣದ ಬಗ್ಗೆ 'ಪ್ರಜಾವಾಣಿ' ಪತ್ರಿಕೆಯು ಬರೆದಿರುವ ಸಂಪಾದಕೀಯ ಹೇಳುವಂತೆ, ಇದರ ಹಿಂದಿರುವ ಮನಸ್ಸಿನದು 'ದುಷ್ಟತನದ ಪರಮಾವಧಿ'ಯೇ ಸರಿ. ಆದರೆ ಸರ್ಕಾರದ ಈ ಆಲೋಚನಾ ಕ್ರಮ ರೂಢಿಗತವಾಗಲು ಕಾರಣ, ಸರ್ಕಾರ ನಡೆಸುವವರೂ ಈ ಜಾತಿಯನ್ನು ಒಪ್ಪಿಕೊಂಡ ಸಮಾಜದಿಂದಲೇ ಬಂದಿರುವವರಾಗಿದ್ದು, ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ನ್ಯಾಯದ ಹೆಸರಿನಲ್ಲಿ ನಡೆಯಲು ಅವಕಾಶವಾಗಿರುವ ಜಾತಿ ರಾಜಕಾರಣವೇ ಆಗಿದೆಯೆಂದು ತೋರುತ್ತದೆ.

ನಮ್ಮ ಸಂವಿಧಾನದ ಮೂಲ ಉದ್ದೇಶ ಸಾಮಾಜಿಕ ನ್ಯಾಯ ಸಾಧನೆಯೇ ಆಗಿದ್ದು ಅದು ಜಾತಿಯನ್ನು ತನ್ನ ಪ್ರಮುಖ ಆಧಾರಗಳಲ್ಲೊಂದನ್ನಾಗಿ ಮಾನ್ಯ ಮಾಡಿದ್ದರೂ, ಅದರ ಆತ್ಯಂತಿಕ ಉದ್ದೇಶ ಜಾತಿರಹಿತ ಸಮಾಜದ ನಿರ್ಮಾಣವಾಗಿದೆ ಎಂಬುದನ್ನು ನಮ್ಮ ರಾಜಕಾರಣಿಗಳು ಮರೆತಂತಿದೆ. ಅಂದರೆ, ಜಾತಿಯನ್ನು ಇಲ್ಲಿ ಲೌಕಿಕ ಸಮಾನತ್ವದ ವಿಶೇಷ ಅವಕಾಶಗಳ ಮೂಲಕ ಸಾಧಿಸಬೇಕಾದ ಇಡೀ ಸಮಾಜದ ಭಾವನಾತ್ಮಕ ಏಕತೆಗಾಗಿ ಬಳಸಿ ಬಿಸಾಕಬೇಕಾದ ಕೇವಲ ಒಂದು ತಾತ್ಪೂರ್ತಿಕ ಸಾಧನವಾಗಿ ಮಾತ್ರ ಪರಿಗಣಿಸಬೇಕಾಗಿದೆ. ಆದರೆ ಸಾಮಾಜಿಕ ನ್ಯಾಯ ರಾಜಕಾರಣದ ಜಾತ್ಯತೀತತೆಯ ಈ ಮೂಲಪಾಠವನ್ನೇ ಅವರು ಕೈಬಿಟ್ಟಿದ್ದಾರೆ. ಇದು ಹೆಣ ಸುಡಲು ಬಳಸುವ ಕೋಲನ್ನು ಅಂತಿಮವಾಗಿ ಹೆಣದ ಬೆಂಕಿಗೆ ಎಸೆದಂತೆ. ಬದಲಿಗೆ ನಮ್ಮ ಸರ್ಕಾರಗಳು ಜಾತಿ ಸಮಾಜವನ್ನು ಗಟ್ಟಿಗೊಳಿಸುವ ಜಾತಿಕೇಂದ್ರಿತ ಕಾರ್ಯಕ್ರಮಗಳನ್ನು ರೂಪಿಸುತ್ತಾ ಜಾತಿ ಅಸ್ಮಿತೆಯನ್ನು ಅದರೆಲ್ಲ ಸಂಕುಚಿತೆಗಳೊಂದಿಗೆ ಬಲಪಡಿಸುವ ರೀತಿಯಲ್ಲಿ ಅವನ್ನು ಜಾರಿಗೊಳಿಸುತ್ತಿವೆ.

ಇಂದು ಆಡಳಿತಕ್ಕೆ ಯಾವುದೇ ಪಕ್ಷ ಬರಲಿ, ಅದು ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಮಾಡುವ ಮೊದಲ ಕೆಲಸವೆಂದರೆ, ಪ್ರತಿ ಜಾತಿಯನ್ನೂ ಒಂದು ಮತ ಬ್ಯಾಂಕ್‌ನಂತೆ ಪರಿಗಣಿಸುತ್ತಾ, ಪ್ರತಿ ಜಾತಿಯ ಚರಿತ್ರೆಯನ್ನೂ ಆ ದೃಷ್ಟಿಯಿಂದಲೇ ಕೆದಕಿ ಅದರೊಳಗಿನ ಒಬ್ಬ ನಾಯಕನನ್ನು ಹುಡುಕಿ, ಅವನ ವ್ಯಕ್ತಿತ್ವದ ಅಧ್ಯಾತ್ಮಿಕತೆಯನ್ನೆಲ್ಲ

ಕಳಚಿ ಅವನನ್ನು ಜಾತಿ ನಾಯಕನನ್ನಾಗಿ ಕಡೆದು ಆತನ ಜಯಂತಿಗಳಿಗೆ ಅಧಿಕೃತ ಮಾನ್ಯತೆ ಕೊಡಲಾರಂಭಿಸಿ, ಆ ಸಮುದಾಯಗಳ ಜಾತಿ ಅಸ್ಮಿತೆಗಳನ್ನು ಕೆರಳಿಸುವುದೇ ಆಗಿದೆ. ಆ ಮೂಲಕ ಅವುಗಳಲ್ಲಿನ ಸಾಂಸ್ಕೃತಿಕ ಸತ್ವವನ್ನು ಸಾಂಸ್ಕೃತಿಕ ಅಹಂಕಾರವನ್ನಾಗಿ ಮಾರ್ಪಡಿಸಿ ಅದು ಮಾಡುವ ಈ ಸಾಮಾಜಿಕ ನ್ಯಾಯ ರಾಜಕಾರಣ ಸಾಮಾಜಿಕ ವಿಭಜನೆಯ ಜಾತಿ ರಾಜಕಾರಣವೇ ಆಗಿದೆ. ಇತ್ತೀಚಿನ ದಿನಗಳಲ್ಲಿ, ನೇರವಾಗಿ ಜಾತಿಗಳ ಹೆಸರಿನಲ್ಲಿ ಸರ್ಕಾರ ಅಭಿವೃದ್ಧಿ ಮಂಡಳಿಗಳನ್ನು ರಚಿಸುವ ಧೈರ್ಯ ತೋರುತ್ತಿದೆ ಎಂದರೆ ಏನು ಹೇಳುವುದು? ಹೀಗಾಗಿ ಸಾಮಾಜಿಕ ನ್ಯಾಯವೆಂಬುದು ಕೇವಲ ಜಾತಿ ನ್ಯಾಯವಾಗಿ ಕುಬ್ಜಗೊಂಡು, ಆಯಾ ಜಾತಿಗಳ ಕೆಲವರ ಲೌಕಿಕ ಅಭಿವೃದ್ಧಿಗಷ್ಟೇ ಕಾರಣವಾಗುತ್ತಿದೆ. ಆದರೆ ಅದೇ ಹೊತ್ತಿನಲ್ಲಿ ಅದು ಪ್ರಜಾಪ್ರಭುತ್ವದ ಬಹು ಆಶಯಗಳಿಗೆ ಅಗತ್ಯವಾದ ಸಾಮಾಜಿಕ ನಾಯಕತ್ವಕ್ಕೆ ಬದಲಾಗಿ ಜಾತಿ ನಾಯಕರ ನಿರ್ಮಾಣಕ್ಕೆ ಕಾರಣವಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ.

ಇದು, ಬೇರೆ ಆಶಯಗಳಿರಲಿ, ಸಾಮಾಜಿಕ ನ್ಯಾಯವೆಂಬುದನ್ನೂ ವಿಕೃತಗೊಳಿಸುವ ಅಪಾಯವನ್ನು ಹುಟ್ಟು ಹಾಕಿದೆ. ಹಾಗಾಗಿಯೇ ಇಂದು ಸಾಮಾಜಿಕ ನ್ಯಾಯವು ನಿಜವಾಗಿ ಸಲ್ಲಬೇಕಾದವರಿಗೆ ಮಾತ್ರ ಸಲ್ಲದೆ, ಅಧ್ಯಯನಶೀಲವಾದ ಆಯೋಗಗಳ ಶಿಫಾರ್ಸುಗಳು ಲೆಕ್ಕಕ್ಕಿಲ್ಲದೇ ಹೋಗಿ ಸಕಲೆಂಟು ಜಾತಿಗಳಿಗೂ ರಾಜಕಬೂಲಿ ಮೂಲಕ ಹಂಚುವ ದುಷ್ಟ ಜಾತಿ ರಾಜಕಾರಣವಾಗಿ ಮಾರ್ಪಾಡಾಗಿದೆ. ಸಾಮಾಜಿಕ ನ್ಯಾಯ ಎಂಬುದರಲ್ಲಿ ಸಮಾಜವೇ ಕಾಣದಂತಾಗಿ ಬರೀ ಜಾತಿಗಳು ಕಾಣುವಂತಾಗಿದೆ. ಇದರ ಜೊತೆಗೆ ಇಂದಿನ ದುರಾಸೆಯ ಗ್ರಾಹಕ ಸಮಾಜ ಸೃಷ್ಟಿಸಿರುವ ನಿಷ್ಠುರ ಸ್ಪರ್ಧಾತ್ಮಕತೆಯ ಒತ್ತಡಗಳೂ ಕೂಡಿಕೊಂಡು ಈ ಸ್ಪರ್ಧಾತ್ಮಕತೆಯನ್ನು ಎದುರಿಸಲು ಜಾತಿ ಸಂಘಟನೆ ಅನುಕೂಲ ವ್ಯವಸ್ಥೆಯಾಗಿ ಕಂಡುಬರತೊಡಗಿ, ಪ್ರತಿಯೊಂದು ಜಾತಿಯೂ ಹಿಂದುಳಿದ ಜಾತಿಗಳ ಪಟ್ಟಿಗೆ ಸೇರಲು ತಮ್ಮೆಲ್ಲ ಜಾತಿಬಲಗಳನ್ನು ಪ್ರದರ್ಶಿಸುವ ನಿರ್ಲಜ್ಜತೆಗೆ ಈಡಾಗಿವೆ.

ಇದಕ್ಕೆ ಮುಖ್ಯ ಕಾರಣ ಜಾತಿ ಸಂಬಂಧಿತ ಅನ್ಯಾಯಗಳಿಗೆ ಕಾರಣವಾಗಿರುವ ಜಾತಿ ವ್ಯವಸ್ಥೆ ಕುರಿತಂತೆ ನಮ್ಮ ಸಂವಿಧಾನ ಯಾವುದೇ ನಿರ್ದಿಷ್ಟ ನಿಲುವನ್ನು ತಳೆಯದೇ ಇರುವುದೇ ಆಗಿದೆ. ಜಾತಿ ವ್ಯವಸ್ಥೆಯ ಎಲ್ಲ ಅನ್ಯಾಯವೂ ಅಸ್ಪೃಶ್ಯತೆಯ ಆಚರಣೆಯಲ್ಲಷ್ಟೇ ಅಡಗಿದ್ದು ಅದರ ನಿವಾರಣೆ ಜಾತಿ ವ್ಯವಸ್ಥೆಯಲ್ಲಿನ ಅನ್ಯಾಯಗಳನ್ನೂ ನಿವಾರಿಸುತ್ತದೆ ಎಂದು ಭಾವಿಸಿದಂತಿದೆ. ಇಲ್ಲದಿದ್ದರೆ ಅದು ಭಾರತದ ಇಡೀ ಜಾತಿ ವ್ಯವಸ್ಥೆಯನ್ನು ಆಧುನಿಕ ಕಾನೂನು ಪರಿಭಾಷೆಯಲ್ಲಿ ವ್ಯಾಖ್ಯಾನಿಸುವ ಪ್ರಯತ್ನ ಮಾಡಿ, ನಿಜವಾದ ಸಮಾನತ್ವದ ನೆಲೆಯ ಸಮಾಜಕ್ಕೆ ಅಡ್ಡಿಯಾಗುವ ಅದರ ಒಳ ತತ್ವವನ್ನು ನಿಷ್ಕ್ರಿಯಗೊಳಿಸುವಂತಹ ಕಾನೂನುಗಳನ್ನು ಅದು ರೂಪಿಸುತ್ತಿತ್ತು. ಕನಿಷ್ಠ ತನ್ನ ನಿರ್ದೇಶಕ ತತ್ವಗಳಲ್ಲೊಂದಾಗಿಯಾದರೂ ಜಾತಿನಾಶವನ್ನು ಅದು ಸೂಚಿಸುತ್ತಿತ್ತೇನೋ. ಬದಲಿಗೆ ಅದು ಜಾತಿ ವ್ಯವಸ್ಥೆಯ ಹೊರರೂಪವನ್ನಷ್ಟೇ ಬದಲಿಸುವ ಸಾಮಾಜಿಕ ನ್ಯಾಯವೆಂಬ

ಸುಲಭ ದಾರಿಯನ್ನು ಆಯ್ದುಕೊಂಡಂತಿದೆ. ಹೀಗಾಗಿ 'ಸಂವಿಧಾನ- ಮನುಧರ್ಮ ಶಾಸ್ತ್ರ' ಎಂಬುದು ಅರ್ಧ ಸತ್ಯದ ಮಾತಾಗಿದ್ದು, 'ಸಂವಿಧಾನದೊಳಗೂ ಮನು' ಎಂಬ ಮಾತನ್ನು ಅದಕ್ಕೆ ಸೇರಿಸಿ ಸತ್ಯವನ್ನು ಪೂರ್ಣಗೊಳಿಸಬೇಕಿದೆ.

ಟಿಪ್ಪು ಜಯಂತಿ ಚರ್ಚೆಯ ಅಸಂಗತತೆ

ಇಂತಹ ವಿಕ್ಷಿಪ್ತ ಸಾಮಾಜಿಕ ನ್ಯಾಯದ ಪರಿಕಲ್ಪನೆಯ ವಿಸ್ತರಣೆಯಾಗಿಯೇ ಇಂದು ರಾಜಕಾರಣಿಗಳು ಸೆಕ್ಯುಲರಿಸಂನ ಅರ್ಥವನ್ನೂ ಕುಲಗೆಡಿಸತೊಡಗಿರುವುದು. ಇದಕ್ಕೆ ಇತ್ತೀಚಿನ ಉದಾಹರಣೆ ಎಂದರೆ, ನಮ್ಮ ರಾಜ್ಯ ಸರ್ಕಾರ ಟಿಪ್ಪು ಜಯಂತಿಯನ್ನು ಅಧಿಕೃತವಾಗಿ ಆಚರಿಸಹೊರಟಿರುವುದು. ಈ ಸಂಬಂಧವಾಗಿ ಇಂದು ಟಿಪ್ಪು ಆದರ್ಶ ದೊರೆಯೋ ಅಲ್ಲವೋ ಎಂಬ ಪ್ರಶ್ನೆಯ ಬಗ್ಗೆ ಎರಡೂ ಕಡೆಯಿಂದ ನಡೆಯುತ್ತಿರುವ ಚರ್ಚೆ-ವಾದಗಳೇ ಅಸಂಬದ್ಧ. ಏಕೆಂದರೆ ಅವನ ಹೆಸರಲ್ಲೇ ಇರುವಂತೆ ಅವನೊಬ್ಬ ಸುಲ್ತಾನ. ಹಾಗಾಗಿ ಅವನ ರಾಜಕೀಯ ಪರಿಯೇ ಬೇರೆ. ಹಾಗಾಗಿ ಅವನ ವ್ಯಕ್ತಿತ್ವ ಮತ್ತು ಆಳ್ವಿಕೆಗಳನ್ನು ಆ ರಾಜಕೀಯ ಪರಿಪ್ರೇಕ್ಷ್ಯದಲ್ಲಿ ಮೌಲ್ಯಮಾಪನ ಮಾಡಬಹುದೇ ಹೊರತು, ನಮ್ಮ ಇಂದಿನ ಆಧುನಿಕ ಪ್ರಜಾಸತ್ತಾತ್ಮಕ ಗಣರಾಜ್ಯದ ರಾಜಕೀಯ ಪರಿಪ್ರೇಕ್ಷ್ಯದಲ್ಲಿ ಅಲ್ಲ. ಹಾಗೆ ಮಾಡಹೊರಡುವುದೇ ತತ್ಕಾಲೀನ ರಾಜಕೀಯ ಲಾಭಗಳಿಗಾಗಿ ನಡೆಸುವ ಅಚಾರಿತ್ರಿಕವೆನ್ನಬಹುದಾದ ಕಸರತ್ತು ಮಾತ್ರವಾಗುತ್ತದೆ. ಟಿಪ್ಪು ಒಳ್ಳೆಯ ದೊರೆಯೇ ಇರಬಹುದು. ಆದರೆ ಅದು ಅವನ ರಾಜ್ಯದ ಜನತೆಯ ಹಿತದೃಷ್ಟಿಯಿಂದ ಮಾತ್ರ; ಅದೂ ಅವನ ಕಾಲದ ರಾಜಕೀಯ ನೀತಿ ಸಂಹಿತೆಯ ಮಾನದಂಡದಲ್ಲಿ.

ಮೊದಲಾಗಿ ನಾವು ಗಮನಿಸಬೇಕಾದದ್ದು, ಟಿಪ್ಪು ಆಳಿದ ರಾಜ್ಯ ಈಗಿನ ಕರ್ನಾಟಕವಲ್ಲ. ಭೌಗೋಳಿಕವಾಗಿಯೂ, ರಾಜಕೀಯವಾಗಿಯೂ. ಅವನ ರಾಜ್ಯ ಹೆಚ್ಚೆಂದರೆ, ಈಗಿನ ಕರ್ನಾಟಕದ ಮೂರನೇ ಒಂದು ಭಾಗದಷ್ಟಾಗಬಹುದು. ಹಾಗಾಗಿ ಟಿಪ್ಪು ಈಗಿನ ಕರ್ನಾಟಕದ ಉಳಿದ ಮೂರನೇ ಎರಡು ಭಾಗಕ್ಕೆ ಸಂಬಂಧಿಸಿದವನೇ ಅಲ್ಲ. ಅಷ್ಟೇ ಅಲ್ಲ, ಈ ಉಳಿದ ಭಾಗದ ಕೆಲವು ಭಾಗಗಳ ಜನರ ನೆನಪಿನಲ್ಲಿ ಆತನ ಬಗ್ಗೆ ಸದಭಿಪ್ರಾಯವೇನಿಲ್ಲ. ಹೀಗಾಗಿ ಅವನ ಜಯಂತಿಯನ್ನು ಇಂದಿನ ವಿಶಾಲ ಕರ್ನಾಟಕದ ಜನತೆಯನ್ನು ಪ್ರತಿನಿಧಿಸುವ ಸರ್ಕಾರ ಆಚರಿಸುವುದು ಉಚಿತವಲ್ಲ.

ಇನ್ನು ಟಿಪ್ಪುವನ್ನು ಸ್ವಾತಂತ್ರ್ಯ ಹೋರಾಟಗಾರ ಎಂದು ಬಿಂಬಿಸುವುದು ಹಾಸ್ಯಾಸ್ಪದವೇ ಸರಿ. ಏಕೆಂದರೆ, ಭಾರತದ ಸ್ವಾತಂತ್ರ್ಯ ಎಂಬುದಕ್ಕೆ ರಾಷ್ಟ್ರೀಯತೆ ಎಂಬೊಂದು ಪರಿಪ್ರೇಕ್ಷ್ಯವಿದೆ. ಅದರ ಹಿಂದೆ ಕೆಲ ನಿರ್ದಿಷ್ಟ ಆದರ್ಶಗಳ ಮತ್ತು ಮೌಲ್ಯಗಳ ಒಂದು ತಾತ್ವಿಕ ರಚನೆ ಇದೆ. ಅಂತಹ ರಚನೆ ಸಂಘಟನೆಗೊಳ್ಳತೊಡಗಿದ್ದು ಟಿಪ್ಪುವಿನ ಕಾಲಾನಂತರ. ಜೊತೆಗೆ

ಅವನು ಬ್ರಿಟಿಷರ ವಿರುದ್ಧ ಮಾಡಿದ್ದು ಯುದ್ಧ; ಹೋರಾಟವಲ್ಲ. ಈ ಯುದ್ಧಕ್ಕೆ ತನ್ನ ರಾಜ್ಯ ಸಂರಕ್ಷಣೆ ಮತ್ತು ವಿಸ್ತರಣೆಯ ಉದ್ದೇಶವಿತ್ತೇ ಹೊರತು, ಇನ್ನಾವುದೇ ದೇಶಪ್ರೇಮದ ಆದರ್ಶವಿದ್ದಂತೆ ಕಾಣುವುದಿಲ್ಲ. ಹಾಗಾಗಿ ಅವನನ್ನು–ಅದೂ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿಕೊಳ್ಳುವ ಮಧ್ಯಕಾಲೀನ ತಹತಹದ ದೊರೆಯೊಬ್ಬನನ್ನು– ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟಗಾರ ಎಂದು ಕರೆಯುವುದು ಅಸಂಬದ್ಧವಷ್ಟೇ ಅಲ್ಲ; ಚಾರಿತ್ರಿಕವಾಗಿ ಸರಿಯೂ ಅಲ್ಲ.

ಟಿಪ್ಪು ತನ್ನ ರಾಜ್ಯದ ಜನತೆಯ ಹಿತದೃಷ್ಟಿಯಿಂದ ತುಂಬ ಒಳ್ಳೆಯ ಕೆಲಸಗಳನ್ನು ಮಾಡಿ ಆದರ್ಶ ದೊರೆ ಎನಿಸಿಕೊಂಡಿರಬಹುದು. ಅದರ ನೆನಪುಗಳು ಯಾವ ಜನತೆಯ ಸ್ಮೃತಿಕೋಶದ ಒಂದು ಭಾಗವಾಗಿದೆಯೋ ಆ ಜನತೆ ಅದನ್ನು ಕೃತಜ್ಞತಾಪೂರ್ವಕವಾಗಿ ನೆನಪಿಸಿಕೊಳ್ಳಲಿ. ಅದಕ್ಕೆ ಬೇಕಾದರೆ ಸರ್ಕಾರವೇ ಸೂಕ್ತ ವ್ಯವಸ್ಥೆ ಮಾಡಿಕೊಡಲಿ. ಅದಕ್ಕೆ ಯಾರ ಅಭ್ಯಂತರವೂ ಇರಲಾರದು. ಆದರೆ ಅವನ ಬಗ್ಗೆ ಚಾರಿತ್ರಿಕವಾಗಿ ಮಿಶ್ರ ಮತ್ತು ಏನೂ ನೆನಪುಗಳೇ ಇಲ್ಲದ ಒಂದು ವಿಶಾಲ ಜನಸ್ತೋಮವನ್ನು ಒಳಗೊಂಡ ಇಂದಿನ ಕರ್ನಾಟಕವನ್ನು ಪ್ರತಿನಿಧಿಸುವ ಸರ್ಕಾರ ಅವನ ಜಯಂತಿಯನ್ನು ಆಚರಿಸಹೊರಟಿರುವುದು ಕೇವಲ ಸಂಕುಚಿತ ರಾಜಕೀಯ ನಡೆ ಮಾತ್ರ ಎನಿಸಿಕೊಳ್ಳುತ್ತದೆ. ಅದೂ ಇದನ್ನು ಸೆಕ್ಯುಲರಿಸಂ ತತ್ವದ ಹೆಸರಿನಲ್ಲಿ ಮಾಡಹೊರಡುವುದು ಈಗಾಗಲೇ ಘಾಸಿಗೊಂಡಿರುವ ಈ ತತ್ವವನ್ನು ಮತ್ತಷ್ಟು ಘಾಸಿಗೊಳಿಸಬಲ್ಲುದಷ್ಟೆ.

ಆದರೆ ಕೊನೆಯಲ್ಲಿ ಒಂದು ಮಾತು: ವ್ಯಾಪಕವಾದ ಮತ್ತು ವಸ್ತುನಿಷ್ಠ ಚಾರಿತ್ರಿಕ ಅಧ್ಯಯನ ಮತ್ತು ಆಲೋಚನೆಗಳನ್ನಾಧರಿಸಿದ ವಾದ ಮಂಡಿಸಿ ಜನರಿಗೆ ರಚನಾತ್ಮಕ ರೀತಿಯಲ್ಲಿ ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡದೆ, ಬಿಜೆಪಿಯು ಟಿಪ್ಪು ಒಬ್ಬ ಮುಸ್ಲಿಂನಾದುದರಿಂದ ಅವನ ಜಯಂತಿ ಬೇಡ ಎನ್ನುತ್ತಿದೆ ಎಂಬ ಅನುಮಾನ ಬರುವ ರೀತಿಯಲ್ಲಿ ಅದು ತನ್ನ ಟಿಪ್ಪು ಜಯಂತಿ ವಿರೋಧಿ ಆಂದೋಲನವನ್ನು ಬಹು ರೂಕ್ಷವಾಗಿ, ಮತೀಯ ನೆಲೆಯಲ್ಲಿ ಸಂಘಟಿಸುತ್ತಿರುವಂತಿದೆ. ಇದು ಟಿಪ್ಪು ಕುರಿತ ಚರ್ಚೆಯನ್ನೂ ಕೋಮುವಾದೀಕರಣದ ಆರೋಪಕ್ಕೆ ಸಿಲುಕಿಸಿ, ಸೆಕ್ಯಲರಿಸಂನ್ನು ಎತ್ತಿ ಹಿಡಿಯಲಾದರೂ ಟಿಪ್ಪು ಜಯಂತಿ ಆಚರಣೆ ಇಂದು ಅಗತ್ಯ ಎಂಬ ವಾದಕ್ಕೆ ಕೆಲ ವಲಯಗಳಲ್ಲಿ ಬೆಲೆ ಸಿಗುವಂತಾಗಿದೆ ಎಂಬುದನ್ನೂ ಇಲ್ಲಿ ಗಮನಿಸಬಹುದು. ಇದು ಸೆಕ್ಯುಲರಿಸಂನ್ನು ರಕ್ಷಿಸುವ ಅಪಾಯದ ಹಾದಿ ಎಂಬುದನ್ನೂ ಇಲ್ಲಿ ಹೇಳಬೇಕು. ಏಕೆಂದರೆ ಸೆಕ್ಯುಲರಿಸಂಗೆ ಒಂದು ಸ್ವಾಯತ್ತ ಅರ್ಥವಿದೆ. ಅದು ಕೋಮುವಾದದ ವಿರೋಧದಲ್ಲಿ ಮಾತ್ರ ತನ್ನ ಅರ್ಥ ಮತ್ತು ಅಸ್ತಿತ್ವವನ್ನು ಹೊಂದಿಲ್ಲ. ಹಾಗಾಗಿ ಅದರ ಸಮಗ್ರ ರಚನೆಗೆ ಚ್ಯುತಿಯಾಗದಂತೆ ವರ್ತಿಸುವ ಜವಾಬ್ದಾರಿಯೂ ಸೆಕ್ಯುಲರಿಸ್ಟರ ಮೇಲೆ ಇದೆ.

(ಫೇಸ್‌ಬುಕ್ ಬರಹ : ೫.೧೧.೨೦೧೬)

ನೋಟುಗಳ ರದ್ದತಿಯೂ ಹಣಕ್ಕಾಗಿ ಜನರ ಖುಷಿಯ ಪರದಾಟವೂ...

ನಾನು ಶಿವಮೊಗ್ಗ ನಗರದಲ್ಲಿ ಓಡಾಡಲು ನಮ್ಮ ಮನೆಯ ಸನಿಹದಲ್ಲೇ ಇರುವ ಓರ್ವ ಆಟೋರಿಕ್ಷಾ ಚಾಲಕನನ್ನು ಗೊತ್ತು ಮಾಡಿಕೊಂಡಿರುವೆ. ಮೊನ್ನೆ ನಾನು ಮತ್ತು ನನ್ನ ಪತ್ನಿ ಅಸ್ಸಾಂ-ಮೇಘಾಲಯ ಪ್ರವಾಸ ಮುಗಿಸಿ ಶಿವಮೊಗ್ಗ ರೈಲು ನಿಲ್ದಾಣದಲ್ಲಿ ಇಳಿದಾಗ ನಮ್ಮನ್ನು ಮನೆಗೆ ಕೊಂಡೊಯ್ಯಲು ಈತನೇ ಬಂದಿದ್ದ. ನಾವಿನ್ನೂ ನಮ್ಮ ಗಂಟು-ಮೂಟೆಗಳನ್ನು ರಿಕ್ಷಾದೊಳಕ್ಕೆ ಸರಿಯಾಗಿ ಇರುಕಿರಲಿಲ್ಲ. ಆಗಲೇ ಆತ ಇಷ್ಟಗಲ ಬಾಯಿ ತೆರೆದು 'ನೋಡಿದಿರಾ ಸಾರ್, ಮೋದಿ ಮಾಟ!' ಎಂದು ಮಾತಿನ ಮಳೆಯನ್ನೇ ಶುರು ಮಾಡಿದ. ಅವನು ಸಾವಿರ ಮತ್ತು ಐದು ನೂರು ರೂ. ಗಳ ನೋಟುಗಳ 'ರದ್ದತಿ' ಮೂಲಕ ಮೋದಿಯವರು ಬಡವರ ಪರವಾಗಿ ಹೂಡಿರುವ 'ಯುದ್ಧ'ದ ಬಗ್ಗೆ ನನಗೆ ಮನವರಿಕೆ ಮಾಡಿಕೊಡುವ ಆತುರದಲ್ಲಿದ್ದಾನೆ ಎಂಬುದು ನನಗೆ ಗೊತ್ತಾಯಿತು.

ಇದಕ್ಕೆಲ್ಲ ಒಂದು ಹಿನ್ನೆಲೆಯಿತ್ತು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಯಡಿಯೂರಪ್ಪ-ಈಶ್ವರಪ್ಪ ಮಹಾ ಭ್ರಷ್ಟರು ಎಂದು ಹೇಳುತ್ತಾ ಕಾಂಗ್ರಸ್ಸಿಗೆ ಮತ ಹಾಕಿದ್ದ ಈತ ಲೋಕಸಭಾ ಚುನಾವಣೆಯ ಹೊತ್ತಿಗೆ ಮೋದಿ ಭಕ್ತನಾಗಿಬಿಟ್ಟಿದ್ದ! ಅದಕ್ಕೂ ಒಂದು ಕಾರಣವಿತ್ತು. ರಿಕ್ಷಾ ಚಾಲಕರ ಸಂಘದ ಗಲಾಟೆಯೊಂದರಲ್ಲಿ ಶಾಂತಿಪ್ರಿಯನೇ ಆದ ಈತನಿಗೆ ಮುಸ್ಲಿಂ ಚಾಲಕನೊಬ್ಬನಿಂದ ಒದೆ ಬೀಳುವ ಸಂದರ್ಭವೊಂದು ಉಂಟಾಗಿ, ಆಗ ಅವನ ರಕ್ಷಣೆಗೆ ಬಂದ ಹಿಂದೂವಾದಿ ಸಂಘಟನೆಗೆ ಸೇರಿದ ರಿಕ್ಷಾಚಾಲಕನೊಬ್ಬ ಈ ಅವಕಾಶ ಬಳಸಿಕೊಂಡು ಈತನಿಗೆ ಮೋದಿ ದೀಕ್ಷೆ ನೀಡಿದ್ದ! ಅಂದಿನಿಂದ ಆತ ನಾನು ಆತನ ರಿಕ್ಷಾ ಬಳಸಿದಾಗಲೆಲ್ಲ, ಹೇಗೆ ಮುಸ್ಲಿಮರಲ್ಲಿ ಒಗಟ್ಟಿದ್ದು ಆ ಒಗ್ಗಟಿನ ಬಲದಿಂದ ಹಿಂದೂಗಳ ಮೇಲೆ ದಾಳಿ ಮಾಡಲು ಸಾಧ್ಯವಾಗಿದೆ ಎಂಬುದನ್ನು ತನಗೆ ಮೋದಿ ದೀಕ್ಷೆ ಕೊಟ್ಟವನು ಹೇಳಿದ ಕಥೆಗಳನ್ನು ಉದಾಹರಿಸುತ್ತಾ ನನಗೆ ಹೇಳತೊಡಗಲಾರಂಭಿಸಿದ್ದ. 'ನನಗೆ ಕಥೆಗಳು ಬೇಡ, ಅನುಭವದ ಪ್ರಸಂಗಗಳಿದ್ದರೆ ಹೇಳು. ಯಾವುದೇ ಸಮುದಾಯದ ಬಗ್ಗೆ ಹಾಗೆ ಸಾರಾಸಗಟಾಗಿ ದ್ವೇಷ ಮಾಡುವುದು ಸಲ್ಲದು' ಎಂದು ಎಷ್ಟೇ ಹೇಳಿದರೂ, ಆತ ಇತ್ತೀಚೆಗೆ ಓದಲಾರಂಭಿಸಿದ್ದ 'ಬಿಜೆಪಿ ವಾಣಿ' ಎಂದೇ ಕುಪ್ರಸಿದ್ಧವಾದ ಕನ್ನಡದ ದಿನಪತ್ರಿಕೆಯೊಂದರಲ್ಲಿ ಪ್ರಕಟವಾಗುತ್ತಿದ್ದ ಲೇಖನಗಳನ್ನು ಉಲ್ಲೇಖಿಸಿ 'ನಿಮ್ಮಂಥ ಈ ದೇಶದ ಬುದ್ಧಿಜೀವಿಗಳು ಹಾಗೇ ಬಿಡಿ ಸರ್! ಯಾವಾಗಲೂ ಹಿಂದೂ ವಿರೋಧಿಗಳು!!' ಎಂದು ನನ್ನನ್ನು ಛೇಢಿಸತೊಡಗಿದಾಗ, ಈತನಿಗೆ ಆಗಿರುವ ಹೊಸ ದೀಕ್ಷೆಯ ಆಳ-ಅಗಲಗಳು ನನ್ನನ್ನು ಬೆಚ್ಚಿಬೀಳಿಸಿದವು. ನನಗನ್ನಿಸಿದ್ದು, ಒಂದು ಹಿಂದುಳಿದ ಜಾತಿಗೆ

ಸೇರಿದ ಈ ಬಡಜೀವಿಗೆ ಈವರೆಗೆ ಯಾರೂ ಕೊಡದ ಒಂದು ಮಾನ್ಯತೆಯನ್ನು ಅವನ ಹೊಸ ದೀಕ್ಷಾಕಾರರು ಕೊಟ್ಟು ಅವನಲ್ಲಿ ಒಂದು ಮಾನಸಿಕ 'ಸುಭದ್ರತೆ'ಯ ಭಾವ ತುಂಬಿದ್ದಾರೆ. ಅದಕ್ಕಾಗಿ ಅವನು ಅವರಿಗೆ ಋಣಿಯಾಗಿದ್ದಾನೆ. ಇದು ಮಾನವನ ಸಹಜ ಸ್ವಭಾವವಲ್ಲವೆ? ಆದರೆ, ಹಿಂದೂವಾದ, ಕೋಮುವಾದ ಎಂದು ಅರಚುತ್ತಾ ಓಡಾಡುವ ಜಾತ್ಯತೀತರೆಂದು ಕರೆದುಕೊಳ್ಳುವ ನಾವು ಏನು ಮಾಡುತ್ತಿದ್ದೇವೆ? ಈ ಪ್ರಶ್ನೆ ನನ್ನನ್ನು ಹಲವು ಬಾರಿ ಕಾಡಿದೆ. ಇರಲಿ.

ನಮ್ಮ ಚಾಲಕ ತನ್ನ ರಿಕ್ಷಾವನ್ನು ಚಾಲೂ ಮಾಡಿ ಶಿವಮೊಗ್ಗದ ಯಾರ್‍ಯಾರ ಮನೆಯಲ್ಲಿ ಎಷ್ಟೆಷ್ಟು ನಗದಿದ್ದು, ಅದೆಲ್ಲ ಇನ್ನು ಹೇಗೆ ಬೀದಿ/ಚರಂಡಿ ಪಾಲಾಗಲಿದೆ ಎಂದು ಆನಂದತುಂದಿಲನಾಗಿ ಹೇಳತೊಡಗಿದ. ನಾನು ಮಧ್ಯೆ ಬಾಯಿ ಹಾಕಿ 'ನಿನ್ನಂಥವರಿಗೇನೂ ತೊಂದರೆ ಇರಲಾರದು. ಏಕೆಂದರೆ ನಿನ್ನ ಗ್ರಾಹಕರು ಬಾಡಿಗೆಯನ್ನು ಸಣ್ಣ ಪುಟ್ಟ ನಗದಿನಲ್ಲಿ ಕೊಡುತ್ತಾರೆ. ಬೇರೆಯವರ ಗತಿಯೇನು? ನೀನು ಬ್ಯಾಂಕುಗಳ ಮುಂದೆ ಮೈಲುದ್ದ ಸಾಲುಗಳನ್ನು ನೋಡಿಲ್ಲವಾ?' ಎಂದೆ. ಅದಕ್ಕಾತ, ನಾವು ಸಾಗುತ್ತಿದ್ದ ರಸ್ತೆಯುದ್ದಕ್ಕೂ ಇದ್ದ ಹಲವು ಬ್ಯಾಂಕ್ ಶಾಖೆಗಳ ಮುಂದೆ ಯಾವ ಸಾಲೂ ಇಲ್ಲದಿದ್ದುದನ್ನು ತೋರಿಸುತ್ತಾ, 'ಮೋದಿ ಎಲ್ಲ ಸಿದ್ಧತೆ ಮಾಡಿಯೇ ಈ ಯುದ್ಧ ಸಾರಿರುವುದು ಸಾರ್! ಇವೊತ್ತು ಪತ್ರಿಕೆ ನೋಡಿಲ್ಲವಾ? ಮೋದಿ ತಾವು ಮನೆ-ಮಠ-ಸಂಸಾರ-ಹೆಂಡತಿ ಎಂಬುದನ್ನೆಲ್ಲ ಬಿಟ್ಟು ದೇಶ ಸೇವೆಗೆ ಅರ್ಪಿಸಿಕೊಂಡಿರುವುದಾಗಿ ಹೇಳಿದ್ದಾರಲ್ಲಾ! ಅಷ್ಟೇ ಅಲ್ಲ ಸಾರ್, ಇನ್ನು ಬೇನಾಮಿ ಆಸ್ತಿಗಳಿಗೆ ಕೈಹಾಕುವುದಾಗಿಯೂ ಸೂಚನೆ ಕೊಟ್ಟಿದ್ದಾರಲ್ಲಾ! ಇಂತಹ ಪ್ರಧಾನಿ ನಿಮಗೆ ಎಲ್ಲಿ ಸಿಕ್ಕುತ್ತಾರೆ ಸಾರ್?' ಎಂದು ಪ್ರಶ್ನಿಸುತ್ತಾ ಗಾಡಿಯ ಆಕ್ಸಿಲೇಟರನ್ನು ಒತ್ತಿ ಮೋದಿ ಸರ್ಕಾರದ ವೇಗಕ್ಕೆ ತನ್ನ ಗಾಡಿಯ ವೇಗವನ್ನು ಹೊಂದಿಸಲು ಯತ್ನಿಸುತ್ತಾ ನಮ್ಮ ಗಾಬರಿ ಹೆಚ್ಚಿಸಿದ!

ಆಗ ಮಧ್ಯಾಹ್ನ ಮೂರು ಗಂಟೆ. ಶಿವಮೊಗ್ಗದ ಬೀದಿಯಲ್ಲಿ ಬ್ಯಾಂಕುಗಳ ಮುಂಭಾಗ ಬಿಕೋ ಎನ್ನುತ್ತಿದುದನ್ನು ಕಂಡು ನನಗೆ ಒಂದು ಕ್ಷಣ ಆಶ್ಚರ್ಯವೂ, ಇಂದೇ ಹೋಗಿ ಸ್ವಲ್ಪ ಹಣ ಪಡೆಯುವುದೆಂಬ ಆಸೆಯಿಂದ ಒಂದು ಕ್ಷಣ ಸಂತೋಷವೂ ಆಯಿತು. ಏಕೆಂದರೆ ನಮ್ಮ ಪ್ರವಾಸದಲ್ಲಿ ನಮ್ಮ ಪ್ರವಾಸ ನಿರ್ವಾಹಕನೂ ಸೇರಿದಂತೆ ನಮ್ಮ ಸಹ ಪ್ರವಾಸಿ ಗೆಳೆಯರು ದಿನ ನಿತ್ಯ ಅಗತ್ಯವಾಗುವ ಮತ್ತು ಸ್ಥಳೀಯ ವಸ್ತುಗಳನ್ನು ಕೊಳ್ಳುವ ಸಣ್ಣಪುಟ್ಟ ಖರ್ಚುಗಳಿಗಾಗಿ ಚಿಲ್ಲರೆ ಹಣ ಇಲ್ಲದೆ ಪರದಾಡಿ ಹೇಗೋ ಪ್ರವಾಸ ಮುಗಿಸಿ ಬಂದಿದ್ದೆವು. ಅಸ್ಸಾಂ-ಮೇಘಾಲಯಗಳಲ್ಲಿನ ನಾವು ಹೋದ ಎಲ್ಲ ಊರುಗಳ (ಗೌಹಾತಿ-ನೌಗಾಂಗ್-ಷಿಲ್ಲಾಂಗ್‌ಗಳಲ್ಲಂತೂ ಕೇಳುವುದೇ ಬೇಡ!) ಬ್ಯಾಂಕುಗಳ ಮುಂದೆ ಉದ್ದುದ್ದ ಸರತಿ ಸಾಲುಗಳನ್ನು ಕಂಡು ಹಣ ಪಡೆಯಲಾಗದೆ ನಿರಾಶರಾಗಿದ್ದೆವು. ಇದನ್ನು ನಮ್ಮ ಚಾಲಕನಿಗೆ ಹೇಳಿದರೆ, ಆತ ಹೇಳಿದ್ದು, 'ಆ ದೇಶಗಳಲ್ಲಿ ಜನಸಂಖ್ಯೆ ಜಾಸ್ತಿ ಸಾರ್! ಜೊತೆಗೆ ಆತುರ-ಗಾಬರಿ ಹೆಚ್ಚು. ನಮ್ಮ ಕರ್ನಾಟಕದವರು ಹಾಗಲ್ಲ. ಶ್ರೀಮಂತರ ವಿರುದ್ಧ ಮೋದಿ ಹೂಡಿರುವ ಯುದ್ಧಕ್ಕೆ ಬೆಂಬಲವಾಗಿ ನಮ್ಮ ಜನ ಶಾಂತಿ ಕಾಪಾಡುತ್ತಿದ್ದಾರೆ.'

ನಮ್ಮ ಮನೆ ಬಂತು. ನಾನು ಐದು ನೂರು ರೂಪಾಯಿಯ ನೋಟು ಕೊಟ್ಟೆ. ತಕ್ಷಣವೇ ಅವನು ಗಾಬರಿಯಾಗಿ, 'ಬೇಡ ಸರ್! ಇದನೆತ್ತಿಕೊಂಡು ಬ್ಯಾಂಕಿಗೆ ಹೋದರೆ ನನ್ನ ಬಾಡಿಗೆಗೆ ತೊಂದರೆ ಆಗುತ್ತೆ! ಎಂದು ನಿರಾಕರಿಸಿದಾಗ ನನ್ನ ಕಣ್ಣಲ್ಲಿ ನಗೆ ಮಿಂಚಿತ್ತು. ಅವನ ಮುಖ ಹುಳ್ಳಗಾಗತೊಡಗಿದ್ದನ್ನು ನಾನು ಗಮನಿಸಿಯೂ ಅವನಿಗೆ ಬಾಡಿಗೆಯಾಗಿ ನನ್ನಲ್ಲಿ ಉಳಿದಿದ್ದ ಚಿಲ್ಲರೆ ಹಣ ನೀಡಿದೆ. ಹುಳ್ಳ ಮುಖವನ್ನು ಸುಧಾರಿಸಿಕೊಳ್ಳುತ್ತಲೇ ಅವನು ಅದನ್ನು ಸ್ವೀಕರಿಸಿದ. ಜೊತೆಗೆ ಹತ್ತಿರ ಸರಿದು ಮೆಲ್ಲಗೆ, 'ನಿಮ್ಮ ಹತ್ತಿರ ಹಳೆಯ ನೋಟುಗಳಿದ್ದರೆ ಕೊಡಿ ಸರ್. ನನ್ನ ರಿಕ್ಷಾ ಸಾಲ ತೀರಿಸಲು ಬಳಸಿಕೊಳ್ಳುತ್ತೇನೆ' ಎಂದ. ಇವನ ಮಾತಿನಿಂದ ಕ್ಷಣ ಕಾಲ ಗಾಬರಿಯಾದಂತಾದರೂ, ನನ್ನ ಬುಡಕ್ಕೇ ಕೈಹಾಕುವ ಧೈರ್ಯ ಇವನಿಗೆ ಈಗ ಎಲ್ಲಿಂದ ಬಂತು ಎಂಬ ಯೋಚನೆಯೂ ನನ್ನನ್ನು ಆವರಿಸಿತು. ಹಸಿವಿನಿಂದ ಸುಸ್ತಾಗಿದ್ದ ನಾನು ಸ್ವಲ್ಪ ಸಿಟ್ಟಿನಿಂದಲೇ, 'ಅರೇ ಹೋಗಯ್ಯ, ಹನುಮಂತ ಹಗ್ಗ ಕಡೀತಿದ್ರೆ ಪೂಜಾರಿ ಶಾವಿಗೆ ಕೇಳಿದ್ನಂತೆ' ಎಂದು ಹೇಳುತ್ತಾ ಈ ಕ್ಷಣದಲ್ಲಿ ನಾನೂ ಅವನೂ ಒಂದೇ ಸ್ಥಿತಿಯಲ್ಲಿದ್ದೇವೆ ಎಂದು ಅವನನ್ನು ನಂಬಿಸಿ ಅವನ ಮುಖದಲ್ಲಿ ಒಂದು ಸಮಾಧಾನದ ಕಿರುನಗೆ ಅರಳಿಸುವಲ್ಲಿ ಯಶಸ್ವಿಯಾದೆ!

ನಮ್ಮ ಗಂಟು-ಮೂಟೆ ಇಳಿಸಿಕೊಂಡು ಅವನಿಗೆ ವಿದಾಯ ಹೇಳುತ್ತಾ, 'ಅಂತೂ ನಿನ್ನ ಮೋದಿಗೆ ಚುನಾವಣೆಗಳ ಸಮಯದಲ್ಲಿ ತಾನು ಕೊಚ್ಚಿಕೊಂಡಿದ್ದಂತೆ ವಿದೇಶಗಳಲ್ಲಿದ್ದ ಕಪ್ಪು ಹಣ ತಂದು ನಿನ್ನ-ನನ್ನ ಖಾತೆಗೆ ತಲಾ ೧೫ ಲಕ್ಷ ರೂ. ಜಮಾ ಮಾಡಲಾಗಲಿಲ್ಲ. ಹಾಗಾಗಿ ಈ ಹೂಟ ಹೂಡಿದ್ದಾರೆ' ಎಂದು ನನ್ನ ಯಾವುದೋ ಸಮಾಧಾನಕ್ಕಾಗಿ ಛೇಢಿಸಲು ಪ್ರಯತ್ನಿಸಿದೆ. ಇದರಿಂದ ಒಂದು ಕ್ಷಣ ವಿಚಲಿತನಾದಂತೆ ಕಂಡರೂ ಅವನು ಮರುಕ್ಷಣವೇ ಸಾವರಿಸಿಕೊಂಡು, 'ಅಯ್ಯೋ ನಿಮಗೆ ಗೊತ್ತೇ ಇಲ್ಲವಾ ಸಾರ್! ಮೋದಿ ಆ ಖಾತೆಗಳಿಗೆಲ್ಲ ಕೈ ಹಾಕುತ್ತಿದ್ದಂತೆ ಆ ಖದೀಮರು ತಮ್ಮ ಕಳ್ಳ ಹಣವನ್ನೆಲ್ಲ ಒಂದು ಕಾಸೂ ಬಿಡದೆ ಗೋರಿಕೊಂಡು ಹೋಗಿದ್ದಾರೆ!'

ಇವನಿಗೆ ಇವನ ದೀಕ್ಷಾಕಾರರಿಂದ ಸಾಕಷ್ಟು 'ಶಿಕ್ಷಣ' ದೊರೆತಿದೆ ಎಂದುಕೊಂಡ ನಾನು, 'ಹಲವು ಪತ್ರಿಕೆ ಓದುವ, ಹಲವು ಟಿವಿ ವಾಹಿನಿಗಳನ್ನು ನೋಡುವ ನನಗೇ ಇದು ಗೊತ್ತಾಗಿಲ್ಲ. ನಿನಗೆ ಹೇಗೆ ಗೊತ್ತಾಯಿತು?' ಎಂದು ಅವಸರದಲ್ಲಿಯೇ ಕೇಳಿದೆ. ಆತ 'ಏನೇನನ್ನೋ ಓದಬೇಡಿ ಸಾರ್! ಈ ಪತ್ರಿಕೆ ಓದಿ. ಎಲ್ಲ ಚೆನ್ನಾಗಿ ಗೊತ್ತಾಗುತ್ತೆ!' ಎಂದು ತನ್ನ ಗಾಡಿಯ ಮುಂಭಾಗದಲ್ಲಿ ಸಿಲುಕಿಸಿದ್ದ ತನ್ನ ಮೆಚ್ಚಿನ ಪತ್ರಿಕೆಯನ್ನು ಎಳೆದು ತೋರಿಸುತ್ತಾ, ನನಗೆ ಆ 'ಬಿಜೆಪಿ ವಾಣಿ' ಪತ್ರಿಕೆಯ ದೀಕ್ಷೆ ಕೊಡಲು ಯತ್ನಿಸುತ್ತಾ ತನ್ನ ಗಾಡಿ ಚಾಲೂ ಮಾಡಿ ಮುಂದೆ ನಡೆದ. ಅವನದು ಘಾತುಕತನವೋ, ಮೂರ್ಖತನವೋ, ಮುಗ್ಧತೆಯೋ ತಕ್ಷಣಕ್ಕೆ ನನಗೆ ಗೊತ್ತಾಗದೆ, ಭರ್ರೆಂದು ಮುಂದೆ ಸಾಗಿದ ಅವನ ಬಡಕಲು ರಿಕ್ಷಾವನ್ನೇ ಒಂದರೆ ಕ್ಷಣ ನೋಡುತ್ತಾ ನಿಂತೆ.

ನನ್ನ ಪತ್ನಿ ಹತ್ತು ನಿಮಿಷ ವಿಶ್ರಾಂತಿ ಪಡೆದು ದಿನವಹಿ ಖರ್ಚಿಗೆ ಹಣ ತರಲು ಎಟಿಎಂಗಳನ್ನು ಹುಡುಕುತ್ತಾ ಹೋದವಳು ಒಂದು ತಾಸಿನ ತನಕ ಹತ್ತಾರು ಬ್ಯಾಂಕುಗಳನ್ನು ಸುತ್ತಿ ನಿರಾಶಳಾಗಿ ಮನೆಗೆ ಬಂದಳು. ಎಲ್ಲ ಎಟಿಎಂಗಳಲ್ಲಿ ಹಣ ಖಾಲಿಯಾಗಿ ಅವು ಮುಚ್ಚಿದ್ದವು. ಮಾರನೇ ಬೆಳಿಗ್ಗೆ ಮತ್ತೆ ಹೋದಳು. ಎಲ್ಲ ಎಟಿಎಂಗಳನ್ನು ಮುಚ್ಚಲಾಗಿತ್ತು. ಬ್ಯಾಂಕುಗಳ ಮುಂದೆ ಹನುಮಂತನ ಬಾಲದಂತೆ ಸಾಲುಗಳು ಬೆಳೆದಿದ್ದವು. ಅಂತೂ ನಡುಮಧ್ಯಾಹ್ನದ ಹೊತ್ತಿಗೆ ಅಂಚೆ ಕಛೇರಿಯಿಂದ ಒಂದಿಷ್ಟು ಹಣ ತರುವಲ್ಲಿ ಯಶಸ್ವಿಯಾಗಿದ್ದಳು. ಸುಸ್ತಾಗಿ ಬಂದು ಕೂರುತ್ತಾ, 'ಅಲ್ಲಾ, ನಮ್ಮ ರಿಕ್ಷಾ ಚಾಲಕನೇಕೆ ಇಷ್ಟು ಸುಳ್ಳು ಹೇಳತೊಡಗಿದ್ದಾನೆ? ಅವನು ಹಾಗೆ ಸುಳ್ಳು ಹೇಳುವವನಲ್ಲ ಅಲ್ಲವಾ?' ಎಂದು ಆಳದ ಧ್ವನಿಯಲ್ಲಿ ಗೊಣಗುತ್ತಲೇ ಮನೆ ಸಾಮಾನು ತರಲು ಅಂಗಡಿಗಳತ್ತ ಹೋಗಲು ಸಿದ್ಧವಾದಳು.

**** *** ****

ಇದು, ಎರಡು ದೊಡ್ಡ ನೋಟುಗಳ ರದ್ದತಿಗೆ ಸಂಬಂಧಿಸಿದ ಪ್ರಸ್ತುತ ಸಾರ್ವಜನಿಕ ಸಂಕಥನದ ಒಂದು ಇಣುಕು ನೋಟ. ನಮ್ಮ ರಿಕ್ಷಾಚಾಲಕ ಈಗ ಬಿಜೆಪಿ ಬೆಂಬಲಿಗ. ಇದಕ್ಕೆ ಕಾರಣವಾದ ಸಂದರ್ಭವನ್ನು ಈ ಮೊದಲೇ ಹೇಳಿದ್ದೇನೆ. ಹೊಸ ಮತಾಂತರಿಯ ಹುರುಪು-ಉತ್ಸಾಹಗಳು ಅವನಲ್ಲಿವೆ. ಆದರೆ ಆತ ಬಡವನೆಂಬುದನ್ನೂ ಗಮನಿಸಬೇಕು. ಜೊತೆಗೆ, ತಾನು ಕ್ಷತ್ರಿಯ ಮೂಲದ ಜಾತಿಗೆ ಸೇರಿದವನೆಂಬ ಹಮ್ಮು ಇರುವಂತೆ ತೋರಿದರೂ, ಸಾರ್ವಜನಿಕ ಜೀವನದಲ್ಲಿ ಅವನನ್ನು ಗುರುತಿಸುವುದು ಒಂದು ಹಿಂದುಳಿದ ಜಾತಿಗೆ ಸೇರಿದವನೆಂದೇ. ಒಮ್ಮೆ ಆತ ನನ್ನನ್ನು ಕೇಳಿದ್ದ, 'ಮೋದಿ ಓಬಿಸಿಯಂತೆ ಹೌದಾ ಸಾರ್?' ಎಂದು. ಆಗ ಅವನ ಕಣ್ಣಲ್ಲಿ ಸುಖಸುದ್ದಿಯೊಂದರ ನಿರೀಕ್ಷೆ ಇದ್ದಂತಿತ್ತು.

ಇದನ್ನೆಲ್ಲ ನಾನು ಇಲ್ಲಿ ಏಕೆ ಹೇಳುತ್ತಿದ್ದೇನೆಂದರೆ, ಮೋದಿ ರಾಜಕಾರಣವನ್ನು ಇಂದು_ ಈ ನೋಟು ರದ್ದತಿ ಸಂದರ್ಭದಲ್ಲಿ- ಅರ್ಥೈಸಲು ಕೇವಲ ಹಿಂದೂ ಕೋಮುವಾದದ ಅಥವಾ ಬಲಪಂಥೀಯ ಆರ್ಥಿಕ ನೀತಿಯ ಪರಿಕರಗಳು ಸಾಲದು ಎಂದು ತಿಳಿಸಲು. ತುಂಬ ಸಂಕೀರ್ಣವಾದ ವಿಶ್ಲೇಷಣೆಯನ್ನು ಬೇಡುವ ಸಂಗತಿ ಇದು. ಹಾಗಾಗಿಯೇ ನಮ್ಮ ಪ್ರಗತಿಪರ, ಜಾತ್ಯತೀತ ಅಥವಾ ಎಡಪಂಥೀಯರೆಂದು ಕರೆದುಕೊಳ್ಳುವವರ ರಾಜಕಾರಣ ಈಗ ಸಂಪ್ರದಾಯದ ಜಡತೆಗೆ ಸಿಕ್ಕಿದಂತಾಗಿ, ಮೋದಿ ರಥವನ್ನು ತಡೆಯಲು ಸಾಧ್ಯವಾಗದೆ ವಿಲಿ ವಿಲಿ ಒದ್ದಾಡುತ್ತಿದೆ.

ನೋಟು ರದ್ದತಿ ಮೂಲಕ ಮೋದಿ ಶ್ರೀಮಂತರ ಮಿತ್ರ, ಬಡವರ ಶತ್ರು ಎಂಬ ಸಾಂಪ್ರದಾಯಿಕ ಭಾವನೆಯನ್ನು ಜನಸಾಮಾನ್ಯರ ಮಟ್ಟದಲ್ಲಾದರೂ ಒಂದೇ ಏಟಿಗೆ- ಅದು ಎಷ್ಟೇ ತತ್ಕಾಲೀನವೆಂದು ಮುಂದೆ ಸಾಬೀತಾಗಬಹುದಾದರೂ-ಬದಲಾಯಿಸಿದ್ದಾರೆ. ದೇಶದಲ್ಲಿ ಚಲಾವಣೆಯಲ್ಲಿದ್ದ ಹಣದ ಮುಕ್ಕಾಲು ಪಾಲನ್ನು ಪ್ರತಿನಿಧಿಸುವ ಈ

ನೋಟುಗಳ ರದ್ದತಿ ಸಹಜವಾಗಿಯೇ ದಿನ ನಿತ್ಯದ ಜೀವನ ಮತ್ತು ವ್ಯವಹಾರ-ವಹಿವಾಟುಗಳಿಗೆ ಧಕ್ಕೆ ಮಾಡಿದೆ. ದಿನಗೂಲಿಯನ್ನು ನಂಬಿ ಬದುಕುವವರ ಬಾಳಂತೂ ಮೂರಾಬಟ್ಟೆಯಾಗಿದೆ. ಇನ್ನು ನಗದನ್ನೇ ಆಧರಿಸಿದ ಗ್ರಾಮೀಣ-ಕೃಷಿ ಆರ್ಥಿಕತೆ ಹೆಚ್ಚೂ ಕಡಿಮೆ ಸ್ಥಗಿತತೆಗೆ ಈಡಾಗಿದೆ. ಇದೆಲ್ಲದರಿಂದಾಗಿ ದೇಶದ ಒಟ್ಟು ಆರ್ಥಿಕ ಚಟುವಟಿಕೆಯ ವೇಗವೇ ಅರ್ಧದಷ್ಟು ಕಡಿಮೆಯಾಗಿದೆ. ತಮ್ಮದೇ ಹಣಕ್ಕಾಗಿ ಸರತಿ ಸಾಲಿನಲ್ಲಿ ನಿಂತವರಲ್ಲಿ ಈವರೆಗೆ ನಲವತ್ತು ಜನ ಕುಸಿದುಬಿದ್ದು ಸತ್ತೇ ಹೋಗಿದ್ದಾರೆ. ವಿರೋಧ ಪಕ್ಷಗಳವರು ಇದನ್ನೆಲ್ಲ ದುರಂತಮಯವಾಗಿ ವರ್ಣಿಸುತ್ತಿದ್ದರೂ, ಕಾಳಧನದ ಬಹುಪಾಲು ಇರುವುದು ವಿದೇಶಿ ಬ್ಯಾಂಕುಗಳಲ್ಲಿ ಮತ್ತು ಬೇನಾಮಿ ಹಾಗೂ ರಿಯಲ್ ಎಸ್ಟೇಟ್ ಉದ್ಯಮಗಳಲ್ಲಿ; ಈ ನೋಟು ರದ್ದತಿಯಿಂದ ಅದರ ಒಂದು ಸಿಬಿರೂ ಸಿಗಲಾರದು ಎಂದು ವಿಶ್ಲೇಷಣೆಗಳ ಮೇಲೆ ವಿಶ್ಲೇಷಣೆಗಳನ್ನು ಮಂಡಿಸುತ್ತಿದ್ದರೂ, ನಮ್ಮ ಪರಮೇಶ್ವರ್ ಮತ್ತು ರಾಹುಲ್ ಗಾಂಧಿಯಂತಹವರು ದುಡ್ಡಿಗಾಗಿ ಸರತಿ ಸಾಲಿನಲ್ಲಿ ನಿಂತು ಕರುಣಾಜನಕವಾಗಿ ಕಾಣುತ್ತಿದ್ದರೂ, ಇಂತಹ ದುರ್ಭರ ಸಮಯದಲ್ಲಿ ರೆಡ್ಡಿ ಮಗಳ ಮದುವೆಯ ರಾಜವೈಭವಕ್ಕೆ ನಗದೆಲ್ಲಿಂದ ಬಂತು ಎಂದು ಇವರೆಲ್ಲ ವೀರಾವೇಶದಿಂದ ಕೇಳುತ್ತಿದ್ದರೂ, ಇದನ್ನೆಲ್ಲ ಒಟ್ಟಾಗಿ ಸೇರಿಸಿ ಇವರು ಸಂಸತ್ತಿನಲ್ಲಿ ಗಲಾಟೆ ಎಬ್ಬಿಸುತ್ತಿದ್ದರೂ, ಕೇಜ್ರಿವಾಲರಂತಹ ಚಾಲಾಕು ರಾಜಕಾರಣಿ, ನೋಟು ರದ್ದತಿಯ ಸುದ್ದಿ ಬಿಜೆಪಿ ನಾಯಕರಿಗೆ ಮೊದಲೇ ಗೊತ್ತಿತ್ತು; ಹಾಗಾಗಿಯೇ ಕಳೆದ ಮೂರು ತಿಂಗಳುಗಳಲ್ಲಿ ನಮ್ಮ ಬ್ಯಾಂಕುಗಳ ಖಾತೆಗಳಲ್ಲಿನ ಠೇವಣಿ ಹಣದ ಮೊತ್ತ ಇದ್ದಕ್ಕಿದಂತೆ ಏರಿದೆ ಎಂದು ಬಾಯಿ ಬಾಯಿ ಬಡಿದುಕೊಳ್ಳುತ್ತಿದ್ದರೂ, ಜನ ಮಿಸುಕಾಡುತ್ತಿಲ್ಲ. ಅಲ್ಲೊಂದು ಇಲ್ಲೊಂದೆಂಬಂತೆ ನಡೆದ ಸಣ್ಣ ಪುಟ್ಟ ಘಟನೆಗಳ ಹೊರತಾಗಿ ಶಾಂತಿ-ಸಹನೆ ಕಳೆದುಕೊಳ್ಳದೆ ಸಾಲುಗಳಲ್ಲಿ ನಿಲ್ಲುತ್ತಲೇ ಇದ್ದಾರೆ; ಹೇಗೋ ದಿನನಿತ್ಯದ ಜೀವನ ಸಾಗಿಸುತ್ತಿದ್ದಾರೆ.

ಏಕೆ? ನಮ್ಮ ರಿಕ್ಷಾವಾಲಾನಂತಹ ಬಡವರಿಗೆ, ಜನ ಸಾಮಾನ್ಯರಿಗೆ ಮೋದಿ ಕ್ರಮ ಒಂದು ದಿಢೀರ್ ರೋಮಾಂಚನವನ್ನು ಉಂಟು ಮಾಡಿದೆ. ತಮ್ಮ ಪರವಾಗಿ, ತಮಗೆ ಅನ್ಯಾಯ ಮಾಡಿದವರೆಂದು ಅವರು ನಂಬಿರುವ ಶ್ರೀಮಂತರ ವಿರುದ್ಧ ಒಂದು ನೇರ, ತಕ್ಷಣದ ಪರಿಣಾಮದ ದಾಳಿ ನಡೆದಿದೆ ಎಂಬ ಖುಷಿಯ ಭಾವನೆ ಅವರನ್ನು ಆವರಿಸಿದೆ. ಕಳೆದ ಇಪ್ಪತ್ತೈದು ವರ್ಷಗಳ 'ಅಭಿವೃದ್ಧಿ'ಯ ದೊಡ್ಡ ಪಾಲು ಹೊಡಕೊಂಡವರ ವಿರುದ್ಧದ ಇವರ ಅಸಹಾಯಕ ಸಿಟ್ಟಿಗೆ ಈಗ ಒಂದು ಹೊರದಾರಿ ಕಲ್ಪಿಸಲಾಗಿದೆ. ಊರ ಶ್ರೀಮಂತರ ಜೊತೆಗೇ ದೇವೇಗೌಡ-ಕುಮಾರಸ್ವಾಮಿ-ಯಡಿಯೂರಪ್ಪ-ಈಶ್ವರಪ್ಪ-ಸಿದ್ಧರಾಮಯ್ಯ-ಶಿವಕುಮಾರ್-ಜಾರ್ಜ್-ಮಹದೇವಪ್ಪನಂತವರು ಕೋಟಿ ಕೋಟಿ ಹಣ ಕಳೆದುಕೊಂಡಿರಬಹುದೆಂಬ ಸುಖಕರ ಊಹಾಪೋಹಗಳಲ್ಲಿ ಅವರು ಆನಂದ ತುಂದಿಲರಾಗಿದ್ದಾರೆ! ಮೋದಿಯವರ ತಂತ್ರ ಫಲಿಸಿದೆ!

ಹೌದು, ಇದು, ರಾಜಕೀಯ ತಂತ್ರ ಮಾತ್ರ ಎಂದೇ ಅನಿಸುತ್ತಿದೆ. ಕಾಸಿಗಾಗಿ ಜನರ ಇಂದಿನ ಪರದಾಟ ನೋಡಿದರೇ, ಇದೊಂದು ಸುಯೋಜಿತ ಆರ್ಥಿಕ ಕಾರ್ಯಕ್ರಮವಲ್ಲ ಎಂದು ಮೇಲ್ನೋಟಕ್ಕೇ ಗೊತ್ತಾಗುವಂತಿದೆ. ಹಾಗಾಗಿ, ಮೋದಿಯವರು ಕೆಲವೇ ಕೆಲವು ಆಪ್ತರೊಂದಿಗೆ ಮಾತಾಡಿಕೊಂಡು ನಡೆಸಿದ ಒಂದು ರಾಜಕೀಯ ಪರಿಹಾರ ಕಾರ್ಯಕ್ರಮವಿದು ಎಂಬ ಅನುಮಾನ ಮೂಡುತ್ತದೆ. ಹೀಗೆ ಅನುಮಾನಿಸಲು ಮುಖ್ಯವಾಗಿ ಎರಡು ಮೂರು ಕಾರಣಗಳಿವೆ. ಒಂದು: ಕಳೆದ ಲೋಕಸಭಾ ಚುನಾವಣೆಗಳಲ್ಲಿ ಮನಮೋಹನ್–ಸೋನಿಯಾರನ್ನು ಕಾಳಧನ ಪರವಾದವರೆಂದು ಹಂಗಿಸಿ, ತಾವು ಪ್ರಧಾನಿಯಾದ ತೊಂಬತ್ತು ದಿನಗಳಲ್ಲಿ ವಿದೇಶಗಳಲ್ಲಿರುವ ಕಾಳಧನವನ್ನು ಹೊತ್ತು ತಂದು ದೇಶದ ಜನರಿಗೆ ಹಂಚುವುದಾಗಿ ಮಾಡಿದ್ದ ಘೋಷಣೆಯ ವಿಶ್ವಾಸಾರ್ಹತೆ ಕುಂದತೊಡಗಿ ತಮ್ಮ ರಾಜಕೀಯ ವ್ಯಕ್ತಿತ್ವದ ಘನತೆ ಕುಸಿಯತೊಡಗಿದೆ ಎಂದು ಮೋದಿಯವರಲ್ಲಿ ಉಂಟಾಗಿರಬಹುದಾದ ಆತಂಕ. ಎರಡು: ಗೋರಕ್ಷಣೆಯ ಹೆಸರಿನಲ್ಲಿ ತಮ್ಮ ಪಕ್ಷದವರು ನಡೆಸಿದ ದುರಾಚಾರಗಳನ್ನು ಮತ್ತು ಆಶ್ವಾಸನೆ ನೀಡಿದ್ದಂತೆ ಹೆಚ್ಚಿನ ಉದ್ಯೋಗಗಳನ್ನು ನಿರ್ಮಿಸಲಾಗದ್ದರ ನೀತಿವೈಫಲ್ಯ ಕುರಿತ ಜನಸಾಮಾನ್ಯರ ಅಸಮಾಧಾನ. ಮುಖ್ಯವಾಗಿ ಮೂರನೆಯದ್ದು: ಹಿಂದಿನ ಯುಪಿಎ ಸರ್ಕಾರಕ್ಕಿಂತ ಭಿನ್ನವೆಂದು ಹೇಳಿಕೊಂಡು ಅನುಸರಿಸಿದ ತಮ್ಮ ಪಾಕಿಸ್ತಾನ ನೀತಿಯು ಪಠಾಣ್ ಕೋಟೆ ಮತ್ತು ಉರಿಗಳಲ್ಲಿ ನಡೆದ ಭಯೋತ್ಪಾದಕ ದಾಳಿಯ ಮೂಲಕ ವಿಫಲಗೊಂಡು ಮುಖಭಂಗಿತರಾದ ಮೋದಿ ಯುದ್ಧ ನಿಯಂತ್ರಣ ರೇಖೆ ದಾಟಿ ನಡೆಸಿದ್ದಾಗಿ ಹೇಳಿಕೊಂಡ 'ನಿರ್ದಿಷ್ಟ ದಾಳಿ' ತಮ್ಮ ಪಕ್ಷದ ಅಭಿಮಾನಿಗಳ ಹೊರತಾಗಿ ಇನ್ನಾರಲ್ಲೂ ವಿಶ್ವಾಸ ಹುಟ್ಟಿಸದೆ ತಮ್ಮ ಬಿಂಬ ಮಸುಕಾದಂತೆ ಅನ್ನಿಸಿದ್ದು. ಅದರ ಪರಿಣಾಮವಾಗಿ ಮುಂಬರುವ ರಾಜ್ಯ ವಿಧಾನಸಭಾ ಚುನಾವಣೆಗಳ ಬಗ್ಗೆ ಆತಂಕ ಮೂಡಿದ್ದು. ಇದಕ್ಕೆಲ್ಲ ಪರಿಹಾರ ಕ್ರಮವಾಗಿ ನೋಟು ರದ್ದತಿಯೆಂಬ ಸರಳ ಮತ್ತು ದಿಢೀರ್ ಜನಪ್ರಿಯತೆ ತರಬಹುದಾದ ನಿರ್ಧಾರಕ್ಕೆ ಅವರು ಬಂದಿರಬಹುದು.

ಅದೇನೇ ಇರಲಿ, ಮೋದಿಯವರ ಈ ಕ್ರಮ ಎಷ್ಟು ಕಾಳಧನವನ್ನು ಹೊರತರುವುದು ಎಂಬುದನ್ನು ಕಾದು ನೋಡಿಯೇ ಈ ಕ್ರಮ ರಾಜಕೀಯ ಉದ್ದೇಶದ್ದೋ ಅಥವಾ ಆರ್ಥಿಕ ಶಿಸ್ತಿನದ್ದೋ ಎಂದು ನಿರ್ಧರಿಸಬಹುದಾಗಿದೆ. ಬಹುಶಃ ಈ ವರ್ಷದ ಕೊನೆಯ ಹೊತ್ತಿಗೆ ಎಲ್ಲವೂ ಸ್ಪಷ್ಟವಾಗಲಿದೆ. ಅಷ್ಟೇ ಅಲ್ಲ, ಈ ಕಾರ್ಯಾಚರಣೆಯನ್ನು ಮೋದಿ ಬೇನಾಮಿ ಮತ್ತು ರಿಯಲ್ ಎಸ್ಟೇಟ್ ಆಸ್ತಿಗಳ ತನಿಖೆಗಳೊಂದಿಗೆ ಮುಂದುವರೆಸಿ ಪೂರ್ಣಗೊಳಿಸುವರೋ ಎಂಬುದನ್ನು ಕಾದು ನೋಡಬೇಕು. ಆದರೆ, ಮೋದಿ ಬಗ್ಗೆ ನಮ್ಮ ಪ್ರಗತಿಪರ ಅಥವಾ ಎಡಪಂಥೀಯ ಅಥವಾ ಸೆಕ್ಯುಲರ್ ರಾಜಕಾಣಿಗಳ ಸಕಾರಣ ವಿರೋಧ ಏನೇ ಇರಲಿ, ಅವರು ಭಾರತದ ಬೃಹತ್ ಬಹುಮತದ ನಾಯಕರಾಗಿ ಆಯ್ಕೆಯಾದವರು ಎಂಬುದನ್ನು ಯಾರೂ ಮರೆಯಲಾಗದು. ಜನ ಅವರಲ್ಲಿ ಕಳೆದ

ಎರಡೂ ವರ್ಷಗಳಲ್ಲಿ ಸ್ವಲ್ಪ ನಂಬಿಕೆ ಕಳೆದುಕೊಂಡಿರಬಹುದಾದರೂ, ನಿರೀಕ್ಷೆಗಳನ್ನು ಪೂರ್ಣವಾಗಿ ಕಳೆದುಕೊಂಡಿಲ್ಲ. ಇದಕ್ಕೆ ಮುಖ್ಯ ಕಾರಣ ನಮ್ಮ ಯಾವ ವಿರೋಧ ಪಕ್ಷವೂ, ಕಳೆದ ಲೋಕಸಭಾ ಚುನಾವಣೆಗಳಲ್ಲಿ ತಮಗೆ ಆದ ಭಾರಿ ಸೋಲಿಗೆ ನಿಜವಾದ ಕಾರಣಗಳೇನು ಎಂಬ ಬಗ್ಗೆ ಗಂಭೀರ ಆತ್ಮಾವಲೋಕನ ಮಾಡಿಕೊಂಡು ತಮ್ಮ ರಾಜಕಾರಣದ ಮೂಲ ತತ್ವಗಳನ್ನು ಬದಲಾಯಿಸಿಕೊಂಡು ಜನರ ನಂಬಿಕೆಯನ್ನು ಮತ್ತೆ ಗಳಿಸುವ ಪ್ರಯತ್ನವನ್ನೇ ಮಾಡದಿರುವುದು. ಕೋಮುವಾದದ ವಿರುದ್ಧದ ಘೋಷಣೆಗಳೇ ತಮ್ಮ ರಾಜಕೀಯ ಚಹರೆಗಳನ್ನು ವಿಶಿಷ್ಟಗೊಳಿಸಿ ಜನರನ್ನು ಸೆಳೆಯುತ್ತವೆ ಎಂದು ಅವು ನಂಬಿದಂತಿವೆ. ಮಿಕ್ಕಂತೆ ಇವರಿಗೂ ಬಿಜೆಪಿಯವರಿಗೂ ಯಾವುದೇ ವ್ಯತ್ಯಾಸಗಳಿಲ್ಲ ಎಂಬುದು ಜನರಿಗೆ ಗೊತ್ತಾಗಿದೆ. ಆದರೆ ಮೋದಿಯ ಪರಿಯೇ ಬೇರೆ ಎಂಬ ಭಾವನೆ ಜನರಲ್ಲಿ ಬೆಳೆಯುತ್ತಿರುವಂತಿದೆ. ಅದನ್ನು ಪ್ರೋತ್ಸಾಹಿಸಲೆಂದೇ ಮೋದಿ ಈ ಆರ್ಥಿಕ 'ನಿರ್ದಿಷ್ಟ ದಾಳಿ' ನಡೆಸಿದಂತೆ ತೋರುತ್ತದೆ. ವಿರೋಧ ಪಕ್ಷಗಳು ಇದನ್ನರಿಯದೆ, ಮೋದಿ ಸರ್ಕಾರದ ಮಾದರಿಗೆ ಒಂದು ವಿಶ್ವಾಸಾರ್ಹ ಪರ್ಯಾಯ ರಾಜಕೀಯ ಮಾದರಿಯನ್ನು ರೂಪಿಸುವ ಒಂದು ಸಂಕೀರ್ಣ ಅರಿವಿನ ಸಾಹಸಕ್ಕೆ ಮುಂದಾಗದೆ ಕೇವಲ ಮೋದಿ ಅಥವಾ ಮೋದಿ ಸರ್ಕಾರದ ವಿರುದ್ಧ ಹರಿಹಾಯುವ ಅತಿ ಸುಲಭ ಮತ್ತು ರೂಕ್ಷ ರಾಜಕೀಯ ಮಾರ್ಗವನ್ನೇ ಆಯ್ದುಕೊಳ್ಳುವುದಾರೆ–

ಈಗ ನಮ್ಮ ರಿಕ್ಷಾ ಚಾಲಕ ಸುಳ್ಳು ಹೇಳುವುದನ್ನಾಗಲಿ ಅಥವಾ ಅವನಂತಹ ಬಡವರು ಸಾಲುಗಳಲ್ಲಿ ನಿಂತು ಶ್ರೀಮಂತರ ಕಳ್ಳ ನೋಟುಗಳನ್ನು ಬದಲಾಯಿಸಿಕೊಟ್ಟು ಒಂದಿಷ್ಟು ಸಂಪಾದನೆ ಮಾಡಿಕೊಳ್ಳುವುದನ್ನಾಗಲಿ ನಾನು ಅನೈತಿಕ ಎಂದು ಏಕೆ ಮತ್ತು ಹೇಗೆ ಕರೆಯಲಿ?

(ಫೇಸ್‌ಬುಕ್ ಬರಹ: ೧೫.೧೧.೨೦೧೬ ಹಾಗೂ ಸಂವಾದ, ಡಿಸೆಂಬರ್, ೨೦೧೬)

ಒಂದು ಸಾಹಿತ್ಯ ಸಮ್ಮೇಳನದ ಸುತ್ತಮುತ್ತ...

ನಾನು ಇತ್ತೀಚೆಗೆ ಸಾಹಿತ್ಯ ಸಮ್ಮೇಳನವೊಂದಕ್ಕೆ ಹೋಗಿದ್ದೆ. ಅದು ಹಳ್ಳಿಯೊಂದರಲ್ಲಿ ನಡೆದ ಸಾಹಿತ್ಯ ಸಮ್ಮೇಳನ. ನನ್ನ ಗೆಳೆಯರೊಬ್ಬರು ಅದರ ಸರ್ವಾಧ್ಯಕ್ಷತೆಗೆ ಆಯ್ಕೆಯಾಗಿದ್ದುದರಿಂದ ನಾವು ಕೆಲವರು ಗೆಳೆಯರು ಸೇರಿ ಅಲ್ಲಿಗೆ ಹೋಗಿದ್ದೆವು. ಊರಿನ ಜನ ತಮ್ಮೂರಿನಲ್ಲಿ ಏನೋ ಮಹತ್ವದ್ದು ನಡೆಯುತ್ತಿದ್ದು, ಸುತ್ತಮುತ್ತಲೂರಿನ ದೊಡ್ಡ ಜನರು ಬರುತ್ತಿದ್ದಾರೆಂಬ ನಿರೀಕ್ಷೆಯಲ್ಲಿ ತುಂಬು ಸಂಭ್ರಮದಲ್ಲಿದ್ದಂತಿದ್ದರು. ಮಹಿಳೆಯರು ತಮ್ಮ ಮನೆಗಳ ಮುಂದೆ ರಂಗೋಲಿ ಹಾಕಿ ಊರಿಗೆ ಕಳೆ ತಂದಿದ್ದರು. ಮಕ್ಕಳು ಮರಿಗಳು ಗರಿಗರಿಯಾದ ಶಾಲಾ ಯೂನಿಫಾರ್ಮ್‌ಗಳನ್ನು ತೊಟ್ಟು ಸಮ್ಮೇಳನದ ಚಪ್ಪರದ ತುಂಬ ಗಲಾಟೆ ಮಾಡುತ್ತಾ ಓಡಾಡುತ್ತಿದ್ದರು.

ಈ ಸಂಭ್ರಮವನ್ನು ಅನುಭವಿಸುತ್ತಾ ಕೂತಿದ್ದ ನಮಗೆ ಕಾರ್ಯಕ್ರಮ ಆರಂಭವಾಗುತ್ತಿರುವ ಸೂಚನೆಯಾಗಿ ಎಲ್ಲರೂ ಎದ್ದು ನಿಲ್ಲಬೇಕೆಂಬ ಸೂಚನೆ ಧ್ವನಿವರ್ಧಕದಿಂದ ಹೊರಬಿತ್ತು. ನಾವು, ಬಹುಶಃ ಸಮ್ಮೇಳನಾಧ್ಯಕ್ಷರ ಮೆರವಣಿಗೆ ವೇದಿಕೆಯನ್ನು ತಲುಪುತ್ತಿದ್ದು, ಸಮ್ಮೇಳನಾಧ್ಯಕ್ಷರು ವೇದಿಕೆಯೇರಿ ವೇದಿಕೆಯ ಮಧ್ಯಭಾಗದಲ್ಲಿದ್ದ ಸಿಂಹಾಸನದಲ್ಲಿ ಆಸೀನರಾಗುವುದನ್ನು ಗೌರವಿಸಲು ಈ ಸೂಚನೆ ಎಂದು ಎದ್ದು ನಿಲ್ಲುವ ಪ್ರಯತ್ನ ಮಾಡುತ್ತಿದ್ದಂತೆ, ಧ್ವನಿವರ್ಧಕದಿಂದ ಮುಂದಿನ ಉದ್ಘೋಷಣೆಯಾಯಿತು: 'ಶ್ರೀ ಮಠದ ಶ್ರೀ ಶ್ರೀ... ಸ್ವಾಮಿಗಳು ವೇದಿಕೆಗೆ ಆಗಮಿಸುತ್ತಿದ್ದು, ಅವರು ತಮ್ಮ ಆಸನದಲ್ಲಿ ಆಸೀನರಾಗುವವರೆಗೆ ಅವರಿಗೆ ಗೌರವವಾಗಿ ಜನ ಎದ್ದು ನಿಲ್ಲಬೇಕು'

ಜನರೆಲ್ಲ ಎದ್ದು ನಿಂತರು. ನಾವು ಗೆಳೆಯರು ನಾವೇನಾದರೂ ತಪ್ಪಿ ಯಾವುದಾದರೂ ಮಠದ ಜಾತಿ ಸಮ್ಮೇಳನಕ್ಕೆ ಬಂದುಬಿಟ್ಟಿದ್ದೇವೋ ಎಂಬ ಗೊಂದಲ–ಗಾಬರಿಗಳಿಂದ ವೇದಿಕೆಯತ್ತ ಕಣ್ಣು ಹಾಯಿಸಿದರೆ, ಅದಕ್ಕೆ ಒಂದು ಜಾತಿಯ ಒಂದು ಪಂಗಡದ ಸ್ವಾಮೀಜಿಯ ಹೆಸರು ಇಡಲಾಗಿತ್ತು. ಈಗ ಸಮ್ಮೇಳನದ ಉದ್ಘಾಟನೆಗೆಂದು ವೇದಿಕೆಯೇರಿ ಸಿಂಹಾಸನಾಧೀಶರಾಗುತ್ತಿದವರು ಅದೇ ಜಾತಿಯ ಇನ್ನೊಂದು ಪಂಗಡ (ಮಠ)ದ ಸ್ವಾಮೀಜಿ. ಈ ಎರಡೂ ಪಂಗಡಗಳಿಗೆ ಸೇರಿದ ಜನವೇ ಪ್ರಾಬಲ್ಯದಲ್ಲಿದ್ದ ಆ ಊರಿಗೆ ತಕ್ಕಂತೆ ಸಾಹಿತ್ಯ ಸಮ್ಮೇಳನದ ಸಂಘಟಕರು ಈ ಒಂದು ಜಾತಿ ಪಂಗಡಗಳ ಸಮನ್ವಯದ ಪ್ರಯತ್ನ ಮಾಡಿದ್ದರು.

ಆ ಸ್ವಾಮೀಜಿ ಇನ್ನೂ ಯುವಕರು. ಬಂದು ಸಿಂಹಾಸನದ ಮೇಲೆ ಆಸೀನರಾದರು. ಆ ಸಿಂಹಾಸನದ ಅಕ್ಕಪಕ್ಕಗಳಲ್ಲಿದ್ದ ಸಾಮಾನ್ಯ ಕುರ್ಚಿಗಳ ಮೇಲೆ ಆ ಪ್ರದೇಶದ ಗ್ರಾಮಪಂಚಾಯ್ತಿ ಸದಸ್ಯರುಗಳಿಂದ ಹಿಡಿದು ವಿವಿಧ ಸ್ತರಗಳ ಜನಪ್ರತಿನಿಧಿಗಳು ಧನ್ಯಭಾವದಿಂದ ಕೂತಿದ್ದರು. ನಮ್ಮ ಗೆಳೆಯ ಸಮ್ಮೇಳನದ ಸರ್ವಾಧ್ಯಕ್ಷರು ಎಲ್ಲಿ ಎಂದು ಹುಡುಕಾಡಿದರೆ, ಅವರು ಸ್ವಾಮೀಜಿಯ ಪಕ್ಕದ ಕಬ್ಬಿಣದ ಕುರ್ಚಿಯಲ್ಲಿ ಕಂಡೂ ಕಾಣದಂತೆ ಗುಬ್ಬಚ್ಚಿಯಂತೆ ಕೂತು ತಮ್ಮ ಸಮ್ಮೇಳನಾಧ್ಯಕ್ಷ ಭಾಷಣದ ದಸ್ತಾವೇಜಿನ ಪುಟಗಳ ಮೇಲೆ ಕಣ್ಣಾಡಿಸುತ್ತಾ ಕೂತಿದ್ದರು. ಸಮಾಜವಾದಿ ಹಿನ್ನೆಲೆಯಿಂದ ಬಂದ ಅವರು ಸಮ್ಮೇಳನದ ಸರ್ವಾಧ್ಯಕ್ಷರಾಗಿ ಹೀಗೆ ಕರುಣಾಜನಕವಾಗಿ ಕೂತಿರುವುದನ್ನು ಕಂಡು ಜಿಗುಪ್ಸೆಯಾಯಿತು. ಅವರು ಪ್ರತಿಭಟಿಸುವ ವಿಶ್ವಾಸದಲ್ಲಿ ನಾವೂ ನಮ್ಮ ಪ್ರತಿಭಟನೆಯ ಮೂಲಕ ಅವರಿಗೆ ಬೆಂಬಲ ವ್ಯಕ್ತಪಡಿಸಬೇಕೆಂಬ ತುಡಿತ ಹೆಚ್ಚಾಯಿತು. ಆದರೆ ಸ್ವಾಮೀಜಿ ವೇದಿಕೆಯೇರಿದಾಗ ಎದ್ದು ನಿಂತ ಜನಸ್ತೋಮವನ್ನು ಗಮನಿಸಿದ್ದ ನಮಗೆ ನಮ್ಮ ಸುರಕ್ಷೆಯ ಆತಂಕವೂ ಉಂಟಾಗಿದ್ದು ಸಹಜವೇ! ಅಷ್ಟರಲ್ಲಿ ಇದ್ದಕ್ಕಿದ್ದಂತೆ ನಮ್ಮ ಮತ್ತು ಸಮ್ಮೇಳನಾಧ್ಯಕ್ಷರ ಪೀಕಲಾಟ ತಪ್ಪಿಸುವಂತೆ ಸಂಘಟಕರು ವೇದಿಕೆಯ ಮೇಲೆ ಇನ್ನೊಂದು ಸಿಂಹಾಸನವನ್ನು ತಂದು ಸ್ವಾಮೀಜಿ ಪಕ್ಕದಲ್ಲಿರಿಸಿದರು.

ಸಮ್ಮೇಳನಾಧ್ಯಕ್ಷರು ಎದ್ದು ಆ ಸಿಂಹಾಸಾನದ ಮೇಲೆ ಆಸೀನರಾದರು. ನಮಗೆ ಚಪ್ಪಾಳೆ ತಟ್ಟಿ ಅದಕ್ಕೆ ಮೆಚ್ಚುಗೆ ಸೂಚಿಸಬೇಕೆನಿಸದರೂ, ನಾವು ನಾಲ್ಕಾರು ಜನರಷ್ಟೇ ಚಪ್ಪಾಳೆ ತಟ್ಟಿ ಹಾಸ್ಯಾಸ್ಪದರೆನಿಸುವ ಅನುಮಾನದಿಂದ ಸುಮ್ಮನಾದೆವು.

ನಂತರ ಸಮ್ಮೇಳನ ಆರಂಭವಾಯಿತು. ಅರ್ಧ ಶಬ್ದ ಮತ್ತು ಅರ್ಧ ವಾಕ್ಯಗಳನ್ನಷ್ಟೇ ಉಚ್ಚರಿಸಬಲ್ಲವರಾಗಿದ್ದ ನಿರೂಪಕರು ಮೊದಲು, ಶ್ರೀ ಶ್ರೀ ... ಸ್ವಾಮೀಜಿಯವರ ಪಾದಾರವಿಂದಗಳಿಗೆ ಪೊಡಮಡುತ್ತಾ ತಮ್ಮ ನಿರೂಪಣೆಯನ್ನು ಆರಂಭಿಸಿ, ವೇದಿಕೆಯ ಮೇಲಿದ್ದ ಎಲ್ಲ ಸಣ್ಣ ಪುಟ್ಟ ರಾಜಕಾರಣಿ ಮತ್ತು ಊರ ಹಿರಿಯರಿಗೂ, ಸದ್ಯ ಅವರವರ ಪಾದಾರವಿಂದಗಳನ್ನು ಅವರಿಗೇ ಬಿಟ್ಟು ಸುಮ್ಮನೆ ಪೊಡಮಟ್ಟು, ಕೊಟ್ಟಕೊನೆಗೆ ನಮ್ಮ ಸಮ್ಮೇನಾಧ್ಯಕ್ಷರಿಗೂ ಪೊಡಮಟ್ಟರು! ನಂತರ ಸ್ವಾಗತ. ಅದೂ ಅದೇ ಕ್ರಮದಲ್ಲಿ ಪೊಡಮಡುವಿಕೆಯ ಬೊಗಳೆ ಮಾತು! ಅಂತೂ ಕೊನೆಗೆ ಸಮ್ಮೇಳನದ ಸರ್ವಾಧ್ಯಕ್ಷರಿಗೂ ಒಂದು ಔಪಚಾರಿಕ ಸ್ವಾಗತ ದೊರೆಯಿತು.

ಇದನ್ನೆಲ್ಲ ಕಸಿವಿಸಿಯಲ್ಲಿ ನೋಡುತ್ತಾ, ವೇದಿಕೆಯ ಮೇಲೆ ನಡೆಯುತ್ತಿದ್ದುದರ ಯಾವುದೇ ಗಮನವಿರದೆ ಸುಮ್ಮನೆ ಗುಜುಗುಡುತ್ತಿದ್ದ ಹೆಂಗಸರು–ಮಕ್ಕಳಿಂದಲೇ ತುಂಬಿದ್ದ ಆ ಜನಸ್ತೋಮದ ಮಧ್ಯೆ ಕೂತಿದ್ದ ನಮಗೆ ಮತ್ತೆ ನಿರೂಪಕರಿಂದ ಸದ್ಯ ಬಾಯಿಯಲ್ಲೇ ಪಾದಾರವಿಂದಗಳಿಗೆ ಪೊಡಮಡಿಸಿಕೊಂಡು ಎದ್ದು ದೀಪ ಬೆಳಗಿ ಸಮ್ಮೇಳನವನ್ನು ಉದ್ಘಾಟಿಸಿದ ಸ್ವಾಮೀಜಿ ತಮ್ಮ ಉದ್ಘಾಟನಾ ನುಡಿಗಳನ್ನಾಡತೊಡಗಿದಾಗ ನಮಗೆ ಆಶ್ಚರ್ಯ ಕಾದಿತ್ತು. ಆ ಸ್ವಾಮೀಜಿ ಅಂದು ಎಂತಹ ಅದ್ಭುತ ಭಾಷಣ ಮಾಡಿದರೆಂದರೆ, ನಾವು ದಂಗಾಗಿ ಹೋದೆವು. ಕನ್ನಡ ನಾಡು ನುಡಿಗಳ ಹೆಮ್ಮೆಯ ಚರಿತ್ರೆಯಿಂದ ಆರಂಭಿಸಿದ ಅವರು ಇಂದು ಕನ್ನಡ ಶಾಲೆಗಳನ್ನು ಕುರಿತ ಜನರ ಉಪೇಕ್ಷೆಯ ಹಿನ್ನೆಲೆಯಲ್ಲಿ ಕನ್ನಡ ಎದುರಿಸುತ್ತಿರುವ ಅಪಾಯಗಳನ್ನೂ, ಇಂತಹ ಸಂದರ್ಭದಲ್ಲಿ ಕನ್ನಡಪರ ಚಳುವಳಿ, ಹೋರಾಟಗಳು ದಾರಿ ತಪ್ಪುತ್ತಿರುವ ಬಗೆಯನ್ನೂ ತಮ್ಮ ತಿಳಿಗನ್ನಡದಲ್ಲಿ ಎಷ್ಟು ಸ್ಪಷ್ಟವಾಗಿ, ದಿಟ್ಟವಾಗಿ ವಿವರಿಸಿದರೆಂದರೆ, ಅವರ ಉಪಸ್ಥಿತಿಯ ಸುತ್ತ ನಮ್ಮಲ್ಲಿ ಬೆಳೆದಿದ್ದ ಪ್ರತಿಕೂಲ ಭಾವನೆಗಳೆಲ್ಲ ಹಾಗೇ ಕರಗಿ ಹೋದವು. ನಮ್ಮ ಗೆಳೆಯರಾದ ಸಮ್ಮೇಳನಾಧ್ಯಕ್ಷರು ಮುಖ್ಯವಾಗಿ ಶಿಕ್ಷಣ ಹಕ್ಕು ಕಾಯಿದೆ ಹೇಗೆ ಕನ್ನಡ ಶಾಲೆಗಳಿಗೆ ಗಂಡಾಂತರ ತಂದಿದೆ ಎಂಬ ಅಂಶದ ಸುತ್ತ ತಮ್ಮ ಮಾತುಗಳನ್ನು ಕೇಂದ್ರೀಕರಿಸಿ ಮಾಡಿದ ಭಾಷಣವೂ ತುಂಬ ಚೆನ್ನಾಗಿತ್ತಾದರೂ, ಆ ಪರಿಸರದಲ್ಲಿ ಅದಕ್ಕಿಂತ ಸ್ವಾಮೀಜಿಯ ಉದ್ಘಾಟನಾ ಭಾಷಣವೇ ಹೆಚ್ಚು ಸಾರ್ವತ್ರಿಕವಾಗಿ ಪರಿಣಾಮಕಾರಿಯಾಗಿತ್ತೆಂಬುದು ನನ್ನ ಅಭಿಮತ. ಇದರಿಂದ ಯಾರ ಹೆಸರನ್ನು ಈ ಸಮ್ಮೇಳನದ ಮುಖ್ಯ ವೇದಿಕೆಗೆ ಇಡಲಾಗಿತ್ತೋ ಅವರ ನೇತೃತ್ವದ ಮಠವೇ ಈ ಹಳ್ಳಿಯ ಬಳಿ ನಡೆಸುತ್ತಿರುವ ಭರ್ಜರಿ ಇಂಗ್ಲಿಷ್ ಶಾಲೆಯನ್ನು ಕುರಿತ ಈ ಹಳ್ಳಿಗರ ಮೋಹ ಕಡಿಮೆಯಾದೀತೆಂಬುದು ನನ್ನ ಆಸೆ!

ಸಮ್ಮೇಳನದ ಉದ್ಘಾಟನಾ ಸಮಾರಂಭ ನಮ್ಮ ಎಲ್ಲ ಸಾಹಿತ್ಯ ಸಮ್ಮೇಳನಗಳಲ್ಲಾದಂತೆ ಕಾಲಮಿತಿಯನ್ನು ಬಹುವಾಗಿ ಮೀರಿ ನಡೆದು ಗೋಷ್ಠಿಗಳು ಅಸ್ತವ್ಯಸ್ತವಾದವು. ಮಧ್ಯಾಹ್ನ ಒಂದೂವರೆಗೆ ಮುಗಿಯಬೇಕಿದ್ದ ನನ್ನ ಗೆಳೆಯರೊಬ್ಬರ ಗೋಷ್ಠಿ ಮುಗಿದಾಗ ಸಂಜೆ ಆರೂ ಕಾಲು. ನಂತರವೂ ಒಂದೆರಡು ಗೋಷ್ಠಿಗಳೂ, ಸಮಾರೋಪವೂ ಇದ್ದುವಂತೆ. ಹೊರಗಿಂದ ಬಂದ ಜನ ಸಂಪೂರ್ಣ ಖಾಲಿಯಾಗಿತ್ತಂತೆ. ಗಂಡಸರೆಲ್ಲ ವೇದಿಕೆಯ ಮೇಲೆ ಮತ್ತು ಸುತ್ತಮುತ್ತಲ ಸಂಘಟನಾ ಕೆಲಸಗಳಲ್ಲಿ ಹಂಚಿಹೋಗಿದ್ದು, ಮುಂದಿನ ಗೋಷ್ಠಿಗಳಿಗೆ ಹೇಗೂ ಆ ಹಳ್ಳಿಯ ಹೆಂಗಸರೂ-ಮಕ್ಕಳೂ ಇದ್ದರಲ್ಲ!

ಉದ್ಘಾಟನಾ ಸಮಾರಂಭದ ನಂತರ ಗೆಳೆಯ ಸಮ್ಮೇಳನಾಧ್ಯಕ್ಷರೊಂದಿಗೆ ಮಾತಾಡಿದಾಗ ಗೊತ್ತಾಗಿದ್ದು, ಸಮ್ಮೇಳನಾಧ್ಯಕ್ಷರಿಗೆ ತಮಗೆ ಹಾಕಿದ್ದಂತಹ ಸಿಂಹಾಸನ ತಂದು ಹಾಕಲು ಸೂಚಿಸಿದ್ದು ಸ್ವಾಮೀಜಿಯಂತೆ! ಸಮ್ಮೇಳನದ ಹುಂಬ ಸಂಘಟಕರಿಗೆ ಇಲ್ಲದ ಸಂಸ್ಕೃತಿಯನ್ನು ಸ್ವಾಮೀಜಿ ಮೆರೆದಿದ್ದರು. ಅಂದು ಬಹುಶಃ ಸ್ವಾಮೀಜಿ ಮಾಡಬಹುದಾಗಿದ್ದುದು ಅಷ್ಟನ್ನೇ. ಏಕೆಂದರೆ, ಆ ಹಳ್ಳಿಯ ಜನಕ್ಕೆ ಸಾಹಿತ್ಯ ಸಮ್ಮೇಳನವೂ ಒಂದೇ, ಧರ್ಮಗಳ ಹೆಸರಿನಲ್ಲಿ ನಡೆಯುವ ಜಾತಿ ಸಮ್ಮೇಳನವೂ ಒಂದೇ! ಆದರೆ ಸಾಹಿತ್ಯ ಪರಿಷತ್ತಿನ ಜನಕ್ಕಾದರೂ ಏನಾಗಿದೆ? ಈ ಪ್ರಶ್ನೆಗೆ ಸಾಹಿತ್ಯ ಪರಿಷತ್ತಿನ ಸಂದರ್ಭದಲ್ಲಿ ಅರ್ಥವೇ ಇಲ್ಲವೆಂದು ಕಾಣುತ್ತದೆ. ಏಕೆಂದರೆ, ಸಾಹಿತ್ಯ ಪರಿಷತ್ತಿಗೂ ಸಾಹಿತ್ಯ-ಸಂಸ್ಕೃತಿಗಳಿಗೂ ಸಂಬಂಧ ಕಳಚಿಹೋಗಿ ಬಹಳ ವರ್ಷಗಳೇ ಆಗಿವೆ ಎಂಬದೀಗ ರಹಸ್ಯದ ಮಾತೇನಲ್ಲ. ರಾಜ್ಯಮಟ್ಟದಿಂದ ಹಿಡಿದು ಜಿಲ್ಲಾಮಟ್ಟದ ಸಾಹಿತ್ಯ ಪರಿಷತ್ ಚುನಾವಣೆಗಳು ನಡೆಯುವುದು ಒಂದು ರಾಜಕೀಯ ಚುನಾವಣೆಯಂತೆಯೇ! ಜಾತಿ, ವ್ಯಕ್ತಿಕೇಂದ್ರಿತ ಗುಂಪುಗಾರಿಕೆಯದ್ದೇ ಮೇಲುಗೈ.

ಈಗ ನಮ್ಮ ಸರ್ಕಾರದ ಬಳಿ ಹಣ ಜಾಸ್ತಿಯಾಗಿ ಜಿಲ್ಲಾ ಮತ್ತು ತಾಲ್ಲೂಕು ಸಮ್ಮೇಳನಗಳಿಗೂ ಲಕ್ಷಾಂತರ ರೂಪಾಯಿಗಳ ಅನುದಾನ ಘೋಷಿತವಾಗಿರುವುದರಿಂದ ಸಾಹಿತ್ಯ ಸಮ್ಮೇಳನಗಳೆಂದರೆ, ಹಣಕಾಸಿನ ವಹಿವಾಟೂ ಆಗಿಬಿಟ್ಟಿದೆ. (ಇಲ್ಲದಿದ್ದರೆ ಈಗ ಇಷ್ಟೊಂದು ಜಿಲ್ಲಾ, ತಾಲ್ಲೂಕು ಸಮ್ಮೇಳನಗಳು ಎಲ್ಲಿ ನಡೆಯುತ್ತಿದ್ದವು!) ಇದರಿಂದ ಸ್ಪರ್ಧೆ ರಾಜಕೀಯವಾಗಿ ಇನ್ನೂ ಬಿರುಸಾಗಿ, ಯಾರ್ಯಾರೋ-ಊರ ಪುಢಾರಿಗಳೆಲ್ಲ-ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳಾಗಿ ಆಯ್ಕೆಯಾಗುತ್ತಿದ್ದಾರೆ ಇಲ್ಲವೇ ನಾಮನಿರ್ದೇಶಿತವಾಗುತ್ತಿದ್ದಾರೆ. ಹೀಗಾಗಿ ಸಾಹಿತ್ಯ ಸಮ್ಮೇಳನವೆಂದರೆ, ಸ್ವಾಗತ ಸಮಿತಿ, ವೇದಿಕೆ ಸಮಿತಿ, ಚಪ್ಪರ ಸಮಿತಿ, ಮೆರವಣಿಗೆ ಸಮಿತಿ, ವಸತಿ ಸಮಿತಿ, ಊಟೋಪಚಾರಗಳ ಸಮಿತಿ ಇತ್ಯಾದಿ ಸಮಿತಿಗಳಲ್ಲದೆ, ಪ್ರತಿ ಗೋಷ್ಠಿಯ ಪ್ರಾರ್ಥನೆ, ಸ್ವಾಗತ, ನಿರೂಪಣೆ, ವಂದನಾರ್ಪಣೆಗಳ ಹೆಸರಲ್ಲಿ ಆಹ್ವಾನ ಪತ್ರಿಕೆಯಲ್ಲಿ ಮತ್ತು ವೇದಿಕೆಯ ಮೇಲೆ ಕಾಣಿಸಿಕೊಂಡು 'ಮಿಂಚ' ಬಯಸುವ ಹುಂಬ ಪ್ರದರ್ಶನವೇ ಎಂಬಂತಾಗಿದೆ. ಸದರಿ ಒಂದು ದಿನದ ತಾಲ್ಲೂಕು ಸಾಹಿತ್ಯ ಸಮ್ಮೇಳನದ ಆಹ್ವಾನ ಪತ್ರಿಕೆಯಲ್ಲಿ ಸುಮಾರು ನೂರಕ್ಕೂ ಹೆಚ್ಚು ಜನರ

ಹೆಸರುಗಳು ಮುದ್ರಿತವಾಗಿವೆ! ಇಂತಹವರ ಮಧ್ಯೆ ಅಲ್ಲಲ್ಲಿ ಸಾಹಿತ್ಯ ಮತ್ತು ಸಂಸ್ಕೃತಿ ಸೂಕ್ಷ್ಮತೆಗಳುಳ್ಳ ಜನರೂ ಇದ್ದಾರೆಂಬುದೂ ನಿಜ. ಆದರೆ ಅವರು ಅಲ್ಪಸಂಖ್ಯಾತರು, ಅಸಹಾಯಕರು.

ಮೇಲೆ ತಿಳಿಸಿದ ಸಾಹಿತ್ಯ ಸಮ್ಮೇಳನಕ್ಕೆ ಸಂಬಂಧಪಟ್ಟ ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ನನ್ನನ್ನು ಕಂಡು 'ತಾವು ಈ ಸಮ್ಮೇಳನಕ್ಕೆ ಬಂದದ್ದು ನನಗೆ ಸಂತೋಷವಾಗಿದೆ' ಎಂದರು. ಅದಕ್ಕೆ, 'ಅದರೆ ನನಗೆ ಸಂತೋಷವಾಗಿಲ್ಲ' ಎಂದ ನಾನು, 'ಸಾಹಿತ್ಯ ಸಮ್ಮೇಳನ ಸಾಹಿತ್ಯದ ಘನತೆ-ಗೌರವಗಳೊಂದಿಗೆ ನಡೆಯಬೇಕು. ಇಂತಹ ಸಮಾರಂಭಗಳು ಹಳ್ಳಿಯ ಜನ ತಮ್ಮ ಜಾತಿ ನಡವಳಿಕೆಗಳನ್ನು ಮೀರಿ ನಡೆಯುವಂತಹ ಸಾಂಸ್ಕೃತಿಕ ವಾತಾವರಣ ನಿರ್ಮಿಸಬೇಕು. ಆದರೆ ಇಲ್ಲಿ ಅಂತಹ ನಡವಳಿಕೆಗಳನ್ನು ಪುಷ್ಠೀಕರಿಸುವಂತೆ ನಡೆಯುತ್ತಿದೆಯಲ್ಲ?' ಎಂದು ನನ್ನ ಮತ್ತು ನನ್ನ ಗೆಳೆಯರ ಬೇಸರವನ್ನು ವ್ಯಕ್ತಪಡಿಸಿದೆ. ಜೊತೆಗೆ ಈ ಮಾತುಗಳನ್ನೂ ಹೇಳಿದೆ: 'ಸ್ವಾಮೀಜಿಗಳನ್ನು ಸಾಹಿತ್ಯ ಸಮ್ಮೇಳನಗಳಿಗೆ ಕರೆಯಬಾರದೆಂದಲ್ಲ. ಏಕೆಂದರೆ ನಮ್ಮ ಸಾಹಿತಿಗಳಲ್ಲನೇಕರು ಸ್ವಾಮೀಜಿಗಳಂತೆಯೇ ಸಾಹಿತ್ಯ ಮಠಗಳನ್ನು ಕಟ್ಟಿಕೊಂಡಿದ್ದಾರೆ! ಇಂತಹ ಒಬ್ಬ ಮಠಾಧೀಶರೇ ಅಲ್ಲವೆ ಈ ಬಾರಿಯ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾಗಿರುವುದು? ಅದು ಬೇರೆ ವಿಷಯ! ಆದರೆ ಅವರಿಗೆ ಈ ಸಂದರ್ಭಕ್ಕೆ ಎಷ್ಟು ಉಚಿತವೋ ಅಷ್ಟು ಮಾತ್ರ ಗೌರವ ಸಲ್ಲಿಸಬೇಕು. ಅವರಿಗೆ ಸಾಹಿತ್ಯ ಸಮ್ಮೇಳನಾಧ್ಯಕ್ಷರಿಗೆ ಮೀರಿದ ಗೌರವಗಳನ್ನು ಪ್ರದರ್ಶಿಸಬಾರದು. ಅದು ಸಾಧ್ಯವಾಗದಿದ್ದರೆ ಅವರನ್ನು ಕರೆಯಲೇಬಾರದು. ಅದನ್ನೂ ತಡೆಯಲಾಗದಿದ್ದರೆ, ಆ ಊರಿಗೆ ಸಾಹಿತ್ಯ ಸಮ್ಮೇಳನ ನಡೆಸುವ ಅವಕಾಶ ನೀಡಬಾರದು. ಇಂದು ಬಂದ ಸ್ವಾಮೀಜಿ ನಿಜವಾಗಿ ಪ್ರಬುದ್ಧರೆಂದು ಕಾಣುತ್ತದೆ. ಅವರು ಸಮ್ಮೇಳನದ ಸಂಘಟಕರು ತೋರಿದ್ದ ಅವಿವೇಕವನ್ನು ತಿದ್ದಿದರು, ಸರಿ. ಆದರೆ ಎಲ್ಲರೂ ಹಾಗಲ್ಲ'. ಇದಕ್ಕೆ ಪ್ರತಿಯಾಗಿ ಅಧ್ಯಕ್ಷರೇನೋ 'ಹೌದು ನಮ್ಮಿಂದ ತಪ್ಪಾಗಿದೆ. ನಿಮ್ಮಂತವರು ತಿದ್ದಿ ಹೇಳಬೇಕು. ಕಲಿತುಕೊಳ್ಳುತ್ತೇವೆ' ಎಂಬ ವಿನಯದ ಮಾತುಗಳನ್ನಾಡಿದರು. ಆದರೆ ನೂರು ವರ್ಷಗಳ ಇತಿಹಾಸವಿರುವ ಸಾಹಿತ್ಯಕ ಸಂಸ್ಥೆಯ ಪದಾಧಿಕಾರಿಗಳಿಗೆ ಇಂತಹ ಪ್ರಾಥಮಿಕ ಸಂಗತಿಗಳನ್ನೂ ಹೇಳಬೇಕಾದ ಸ್ಥಿತಿ ನಮ್ಮದಾಗಿದೆ.

ನಂತರದ ಒಂದೆರಡು ದಿನಗಳಲ್ಲಿ ಸಮ್ಮೇಳನವನ್ನು ಉದ್ಘಾಟಿಸಿದ ಸ್ವಾಮೀಜಿ ನನ್ನ ಗೆಳೆಯರೊಬ್ಬರ ಮಗಳ ವಿವಾಹ ಸಮಾರಂಭವೊಂದರಲ್ಲಿ ನನಗೆ ಕಂಡರು. ನಾನೇ ಹೋಗಿ ಅವರನ್ನು ಮಾತನಾಡಿಸಿ, 'ನಿಮ್ಮ ಅಂದಿನ ಭಾಷಣ ತುಂಬ ಚೆನ್ನಾಗಿತ್ತು. ಅಭಿನಂದನೆಗಳು' ಎಂದೆ. ಈಗಾಗಲೇ ನನ್ನ ಬಗ್ಗೆ ಗೊತ್ತಿದ್ದ ಅವರು 'ನಿಮ್ಮ ಈ ಪ್ರೋತ್ಸಾಹದ ಮಾತುಗಳು ನನಗೆ ನಿಜವಾಗಿಯೂ ಸಂತೋಷ ತಂದಿದೆ.' ಎಂದರು. ಅದು ಬರೀ ಸೌಜನ್ಯದ ಮಾತುಗಳಾಗಿರದೆ, ಪ್ರಾಮಾಣಿಕತೆ ಅವರ ಮಾತುಗಳಲ್ಲಿ, ಮುಖದಲ್ಲಿ ವ್ಯಕ್ತವಾಗಿತ್ತು. ನಾನು 'ನಿಮ್ಮಂಥವರು

ಮಠಗಳ ಒಳಗಿಂತ ಹೆಚ್ಚಾಗಿ ಹೊರಗೆ ಹೆಚ್ಚು ಕೆಲಸ ಮಾಡಬೇಕಿದೆ' ಎಂದು ನನ್ನ ಮನದಾಳದ ಮಾತನ್ನು ಹೇಳಿದೆ. ಅದಕ್ಕೆ ಅವರು ಪ್ರತಿಕ್ರಿಯೆ ನೀಡುವ ಮುನ್ನವೇ, ಅವರ ಜೊತೆಗಿದ್ದ ಭಕ್ತರೊಬ್ಬರು ಗಾಬರಿಯಾದವರಂತೆ, 'ಅಯ್ಯೋ, ಈಗಿರುವ ಕೆಲಸಗಳಿಗೇ ಅವರಿಗೆ ಬಿಡುವಿಲ್ಲ. ಇನ್ನು ಹೆಚ್ಚು ಕೆಲಸಗಳಿಗೆ ಅವರನ್ನು ಹಚ್ಚಬೇಡಿ' ಎಂದು ಮಾತು ಮುಗಿಸುವ ಸೂಚನೆ ನೀಡಿದರು. ಆದರೂ ಸ್ವಾಮೀಜಿ ತಡೆದು, 'ನೀವೊಮ್ಮೆ ಮಠಕ್ಕೆ ಬನ್ನಿ. ಮಾತಾಡೋಣ' ಎಂದು ಹೇಳಿ ನಮಸ್ಕರಿಸಿದರು. ನಾನೂ ನಮಸ್ಕರಿಸಿದೆ.

ಬಹುಶಃ ಇಲ್ಲಿಗೆ ಈ ಪ್ರಸಂಗ ಮುಗಿಯಿತು. ಏಕೆಂದರೆ, ಒಮ್ಮೆ ವ್ಯವಸ್ಥೆಯೊಳಗೆ ಪ್ರವೇಶಿಸಿದ ಮೇಲೆ, ಬುದ್ಧಿ ಏನೇ ಹೇಳಿದರೂ, ಕೈ-ಬಾಯಿಗಳ ಕೆಲಸಗಳೇ ಬೇರೆ ರೀತಿಯಾಗುವುದು ಅನಿವಾರ್ಯವಾಗುತ್ತದೆ.

(ಫೇಸ್‌ಬುಕ್ ಬರಹ: ೨೮.೧೧.೨೦೧೬)

ಎಡ ಬಲಗಳ ನಡುವೆ ಒಂದಿಷ್ಟು ನೈತಿಕತೆ ಕುರಿತ ಮಾತುಗಳು

ಇಂದು ಬೆಳಬೆಳಿಗ್ಗೆಯೇ ನಮ್ಮ ಮನೆಯ ಕೆಲಸದಾಕೆ ನನ್ನ ಹೆಂಡತಿಯೊಂದಿಗೆ ಗುಸಗುಸ ನಡೆಸುತ್ತಾ, ಅಕ್ಕಾ, ನನ್ನ ಹತ್ರ ಸಾವಿರ ರೂಪಾಯಿಗಳ ಆರು ಹಳೆ ನೋಟುಗಳಿವೆ. ಚಿಲ್ಲರೆ ಮಾಡಿಸಿಕೊಡಕ್ಕಾಗುತ್ತಾ?' ಅಂತ ಕೇಳುತ್ತಿರುವುದು ಕಿವಿಗೆ ಬಿತ್ತು. ಸಹಜವಾಗಿಯೇ ನನ್ನ ಕಿವಿಗಳು ಚುರುಕಾದವು. ನನ್ನ ಹೆಂಡತಿ ನನಗೆ ಕೇಳಿಸುವಂತೆಯೇ, 'ಹದಿನೈದು ದಿವಸದ ಹಿಂದೆ ಎರಡು ನೋಟನ್ನು ನಾನೇ ಬ್ಯಾಂಕಿಗೆ ಕೊಟ್ಟು ಚಿಲ್ಲರೆ ಕೊಡಿಸಿದ್ದೆನಲ್ಲ! ಈಗ ಮತ್ತೆ ಈ ಹಳೇ ನೋಟುಗಳು ಎಲ್ಲಿಂದ ಬಂದವು?' ಎಂದು ಕೇಳಿದಳು. ಅದಕ್ಕೆ ಅವಳು ಮತ್ತೆ ಗುಸುಗುಸುಗುಡುತ್ತಾ, 'ಚೀಟಿ ಎತ್ಕಂಡೆ. ಅವರು ಕೊಟ್ರು' ಎಂದಳು. ಇದನ್ನು ಕೇಳಿ, 'ಯಾರತ್ರ ಹೇಳ್ತಿ ಈ ಸುಳ್ಳುಪಳ್ಳು? ಚೀಟಿ ಹಣ ಹಳೇ ನೋಟಲ್ಲಿ ಯಾರು ಕೊಡ್ತಾರೆ? ನೀನು ಮಳ್ಳಿ ತರಾ ನನ್ನತ್ರ ಮಾತಾಡಬೇಡ.' ಎಂದು ಅವಳನ್ನು ಕೆದಕಿದಳು. ಕೆಲಸದವಳು, ನಾನೂ ಅವಳ ಸಹಾಯಕ್ಕೆ ಬರಲೆಂಬ ಇಂಗಿತದೊಂದಿಗೆ ಏನೋ, ನನ್ನತ್ತಲೂ ಒಮ್ಮೆ ಕಣ್ಣು ಹಾಯಿಸಿ ಮತ್ತೆ ಸುಳ್ಳು ಸುಳ್ಳೇ ಮೆತ್ತಗೆ 'ಅಕ್ಕಾ ನಮ್ಮ ಸಂಘದವರು ಕೊಟ್ಟರು' ಎಂದಳು. ಮತ್ತೆ ನನ್ನ ಹೆಂಡತಿಯ ಪ್ರಶ್ನೆ : 'ಯಾವ ಸಂಘದವರೆ? ಯಾಕೆ ಕೊಟ್ರು?' ಈಗ ಕೆಲಸದವಳಿಗೆ ಸ್ವಲ್ಪ ಪೀಕಲಾಟಕ್ಕಿಟ್ಟುಕೊಂಡಂತಿತ್ತು. ಅವಳು ಕಸ ಗುಡಿಸುವ ನೆಪದಲ್ಲಿ ಹಿತ್ತಲ ಕಡೆ ನಡೆದಳು. ನನ್ನ ಹೆಂಡತಿಯೂ ಅವಳಿಗೆ ಕೆಲಸಗಳ ಸೂಚನೆಗಳನ್ನು ನೀಡುತ್ತಾ ಹಿಂಬಾಲಿಸಿದಳು.

ಹಿತ್ತಲಲ್ಲಿ ಮಾತು ಮುಂದುವರೆದಿರುವುದು ಅಸ್ಪಷ್ಟವಾಗಿ ನನಗೆ ಕೇಳಿಸುತ್ತಿತ್ತು. ಆ ಮಾತುಕತೆಯ ಕೊನೆಗೆ ನನ್ನ ಹೆಂಡತಿ ಸ್ವಲ್ಪ ಆಕ್ರೋಶದಿಂದಲೇ, 'ನೀವೆಂಥ ಜನರೇ!

ಮೊನ್ನೆ ಮೊನ್ನೆ ಮೋದಿ ಸರ್ಕಾರವನ್ನು ಬಡವರ ಸರ್ಕಾರ ಬಂದಂಗಾಯ್ತು ಅಂತ ಹೊಗಳ್ತಿದ್ರಿ. ಈಗ ನೋಡಿದರೆ ಕಳ್ಳ ಹಣ ತಗೊಂಡು ಬಂದು ಚಿಲ್ರೆ ಕೊಡಿಸಿ ಅಂತ ಕೇಳ್ತಿದ್ದೀರಿ!' ಎಂದೆನ್ನುತ್ತಾ, 'ನನ್ನ ಕೇಳಬೇಡ. ಇಂಥದಕ್ಕೆಲ್ಲ ಇನ್ನಾರತ್ರಾದರೂ ಹೋಗು' ಎಂದು ಮಾತು ಮುಗಿಸಿದಂತೆ ತೋರಿತು.

ಸ್ವಲ್ಪ ಅಪ್ರತಿಭಳಾದಂತಿದ್ದ ಕೆಲಸದವಳು, ಕಸ ಗುಡಿಸುವ ಶಬ್ದ ಮಾಡುತ್ತಲೇ 'ಹೋಗ್ಲಿ ಬಿಡಿ ಅಕ್ಕ. ಬಡವ್ರಿಗೆ ಒಂಚೂರು ಸಹಾಯ ಮಾಡ್ತಿರೇನೋಂತ ಕೇಳ್ದೆ ಅಷ್ಟೆ' ಎಂದು ಮಾತು ಮುಗಿಸಲು ಯತ್ನಿಸಿದವಳಂತೆ ಹೇಳಿದ್ದು ಕೇಳಿಸಿತು. ಮಾತು ಏನಾಗಿರಬಹುದೆಂದು ಊಹಿಸಿದ ನಾನು ಅವಳು ಹೋಗುವವರೆಗೆ ನನ್ನ ಹೆಂಡತಿಯನ್ನು ಏನೆಂದು ಕೇಳಲಿಲ್ಲ.

ಒಂದೆರಡು ದಿನಗಳಿಂದಲೇ ಶಿವಮೊಗ್ಗದಲ್ಲಿ ರಾಜಕಾರಣಿಯೊಬ್ಬರು ತಮ್ಮಲ್ಲಿದ್ದ ಲಕ್ಷಾಂತರ ರೂಪಾಯಿಗಳ ಮೊತ್ತದ ಅಕ್ರಮಗೊಂಡ ನೋಟುಗಳನ್ನು ತಮ್ಮ ಬಂಟರುಗಳನ್ನು ಮೇಲಿಂದ ಮೇಲೆ ಬ್ಯಾಂಕುಗಳಿಗೆ ಕಳಿಸಿ ಸಕ್ರಮ ಮಾಡಿಕೊಂಡಾದನಂತರವೂ ಉಳಿದ ಅಪಾರ ಹಣವನ್ನು ಊರಿನ ವಿವಿಧ ಜಾತಿ ಮತ್ತು ಸೇವಾ ಸಂಘಗಳಿಗೆ ಉಚಿತ ರಾಜಕೀಯ ಸಂದೇಶದೊಂದಿಗೆ ಹಂಚುತ್ತಿದ್ದಾರೆ ಎಂಬ ಸುದ್ದಿ ಕೇಳಿದ್ದೆ. ಆ ಕಾರ್ಯಕ್ರಮದ ಭಾಗವಾಗಿ ನಮ್ಮ ಮನೆ ಕೆಲಸದಾಕೆಗೂ ಅವಳ ಸಂಘದಿಂದ ಒಂದಿಷ್ಟು ನೋಟುಗಳು ಕೈಸೇರಿದ್ದವೆಂದು ಊಹಿಸಿದ್ದೆ. ಅದಕ್ಕೇ ಆ ಗುಸುಗುಸು ಮಾತು. ನನ್ನ ಹೆಂಡತಿ ನನ್ನ ಊಹೆಯನ್ನು ಖಚಿತಪಡಿಸಿದಳು.

ಇದನ್ನೆಲ್ಲ ನೋಡಿ, ಕೇಳಿ ನನ್ನಲ್ಲಿ ಅಂದು ಉಂಟಾದ ಜಿಜ್ಞಾಸೆ: 'ಬಡವರೆಂದರೆ ಯಾರು? ಎಡಪಂಥೀಯರು, ಪ್ರಗತಿಪರರು ಎಂದು ಘೋಷಿಸಿಕೊಂಡಿರುವ ನಾವು ಯಾವ ಬಡವರ ಬಗ್ಗೆ, ಎಂತಹ ಬಡತನದ ಬಗ್ಗೆ ಸಹಾನುಭೂತಿ ಹೊಂದಿ ನಮ್ಮ ಸಿದ್ಧಾಂತ-ಕಾರ್ಯಕ್ರಮಗಳನ್ನು ಪ್ರತಿಪಾದಿಸುತ್ತಿದ್ದೇವೆ?' ಮನೆ ಕೆಲಸದ ಇದೇ ಹೆಂಗಸು, ನಮ್ಮ ರಿಕ್ಷಾವಾಲಾನಂತೆಯೇ, ಹತ್ತು ದಿನಗಳ ಹಿಂದಷ್ಟೇ, ಮೋದಿಯವರ ನೋಟು ರದ್ದತಿ ಘೋಷಣೆಯಿಂದ ನಿಜವಾಗಿಯೂ ರೋಮಾಂಚಿತಳಾದಂತೆ 'ಅಂತೂ ಬಡವರಪರ ಸರ್ಕಾರ ಬಂದಂಗೈತೆ!' ಎಂದು ಸಂಭ್ರಮಿಸಿದ್ದಳಲ್ಲಾ! ಅವಳೇ ಈಗ ರದ್ದು ಮಾಡಿದ ನೋಟುಗಳ ಖದೀಮ ಒಡೆಯರಿಂದ ನೋಟು ಪಡೆದು ಅವನ್ನು ಸಕ್ರಮಗೊಳಿಸಿಕೊಳ್ಳಲು ಹೊರಟು ತಾನೇ ಹೆಸರಿಸಿದ 'ಬಡವರ ಸರ್ಕಾರ'ದ ಕಾರ್ಯಕ್ರಮಕ್ಕೇ ದ್ರೋಹ ಬಗೆಯ ಹೊರಟಿದ್ದಾಳಲ್ಲಾ, ಅದೂ ಮತ್ತೆ ತನ್ನ ಬಡತನವನ್ನು ವೈಭವೀಕರಿಸಿಕೊಂಡು?

ಇದು ನನ್ನ ಮನೆಕೆಲಸದಾಕೆಯೊಬ್ಬಳ ವರ್ತನೆಯ ವಿರೋಧಾಭಾಸದ ಸುತ್ತ ಸೃಷ್ಟಿಯಾದ ಜಿಜ್ಞಾಸೆಯಲ್ಲ. ನಾವೇ ಹದಿನೈದು ದಿವಸ ಕಣ್ಣಾರೆ ನೋಡಿದ್ದೇವೆ, ಎಷ್ಟೊಂದು ಜನ 'ಬಡವರು' ಅಥವಾ 'ವಂಚಿತರು' ತಮ್ಮ ದುಡಿಮೆ ಬಿಟ್ಟು ಕಪ್ಪು ಹಣದ ಕಳ್ಳ ಖದೀಮರ ಅಕ್ರಮ ನೋಟುಗಳನ್ನು ಸ್ಪರ್ಧಾತ್ಮಕ ಕಮೀಷನ್ ಮೇಲೆ ಸಕ್ರಮ ಮಾಡಿಸಿಕೊಡಲು

ದಿನಕ್ಕೆರಡು–ಮೂರು ಬ್ಯಾಂಕುಗಳ ಮುಂದೆ ಸರತಿ ಸಾಲುಗಳಲ್ಲಿ ನಿಂತಿದ್ದನ್ನು? ಹಾಗೇ, ಈ ಬಡವರಿಗಾಗಿಯೇ ತೆರೆಯಲಾದ 'ಜನಧನ' ಖಾತೆಗಳಿಗೆ ಈ ಹದಿನೈದು ದಿನಗಳಲ್ಲಿ ಸಾಗರೋಪಾದಿಯಲ್ಲಿ ಠೇವಣಿ ಹಣ ಹರಿದು ಬಂದದ್ದು ಯಾರ ಕೈಗಳ ಮೂಲಕ? ಅಷ್ಟೇ ಅಲ್ಲ, ನಮ್ಮ ರಾಜ್ಯದಲ್ಲಿ ಒಂದೇ ಸಮನೆ ಪತ್ತೆಯಾಗುತ್ತಿರುವ ಖೋಟಾ ಪಡಿತರ ಚೀಟಿಗಳ (ಹಲವರ ಬಳಿ ಐದು–ಆರು ಚೀಟಿಗಳಿದ್ದುದನ್ನು ನಾನೇ ಕಂಡಿದ್ದೆ) ಹಾವಳಿಗೆ ಕಾರಣರಾಗಿದ್ದವರು/ಕಾರಣರಾಗಿರುವವರಾದರೂ ಯಾರು? ಇವೆಲ್ಲ ಸಮಾಜ ವಿರೋಧಿ ಚಟುವಟಿಕೆಗಳಲ್ಲವೆ?

ಹಾಗಾದರೆ ನಾವು ಅಮೂರ್ತವಾಗಿ ಬಡವ–ಶ್ರಮಜೀವಿ–ವಂಚಿತ–ಶೋಷಿತ ಎಂದೆಲ್ಲ ಕರೆಯುವ ಜನರ ಮೂರ್ತ ರೂಪಗಳಾದರೂ ಯಾವುವು? ಎಲ್ಲಿವೆ ಅವು? ಇದು ಬಡತನದ ಸಮಸ್ಯೆಯ ಸರಳೀಕರಣವೆಂದು ನನ್ನ ಪ್ರಗತಿಪರ–ಎಡಪಂಥೀಯ ಗೆಳೆಯರು ಸೈದ್ಧಾಂತಿಕ ರಾಗ ಎಳೆಯುವರೆಂದು ನನಗೆ ಗೊತ್ತು. ಆದರೆ ಇದು ಸರಳೀಕರಣವಾದರೆ, ನಿಮ್ಮ ಸಂಕೀರ್ಣ ಗ್ರಹಿಕೆಯಲ್ಲಿನ ಬಡವ ಅಥವಾ ಶ್ರಮಜೀವಿ ಯಾರು, ಇಂದಿನ ಬದುಕಿನ ಯಾವ ಮಾದರಿಯಲ್ಲಿ ಅವನ/ಅವಳ ನಿಜ ಅಸ್ತಿತ್ವವನ್ನು ಗುರುತಿಸಬಹುದು ಮತ್ತು ಹಾಗೆ ಗುರುತಿಸಲು ಇರುವ ಪರಿಕರಗಳಾದರೂ ಯಾವುವು ದಯವಿಟ್ಟು ಹೇಳಿ.

ನಿಜ, ಬಡವರಿಗೆ ಆಸೆ ಸಹಜ. ತಮ್ಮ ದಿನನಿತ್ಯದ ಬಡತನವನ್ನು ನಿವಾರಿಸಿಕೊಳ್ಳಲು ಎದುರುಬಂದ ಇಂತಹ ಅವಕಾಶಗಳನ್ನು ಅವರು ಬಳಸಿಕೊಳ್ಳಲು ಮುಂದಾಗುವ ದೌರ್ಬಲ್ಯಕ್ಕೊಳಗಾಗಲು ಅವರ ಬಡತನವೇ ಕಾರಣವೆಂದು ವಾದಿಸಲು ಸಾಧ್ಯವಿದೆ. ಇದರ ಸಹಜ ಮುಂದಿನ ವಾದ ಸರಣಿ ಎಂದರೆ ಇದಕ್ಕೆ ಮತ್ತೆ ಕಾರಣ, ಸರ್ಕಾರವನ್ನು ಅಥವಾ ಸಂಘಟನೆಯನ್ನು ನಂಬಿ ಕೂತರೆ ತಮ್ಮ ಬಡತನವೇನೂ ಶಾಶ್ವತವಾಗಿ ನೀಗುವುದೆಂಬ ನಂಬಿಕೆಯೇ ಅವರಲ್ಲಿ ಇಂಗಿ ಹೋಗಿದೆ ಎಂಬುದು. ಹಾಗಾದಲ್ಲಿ ಸರ್ಕಾರದ ನೋಟು ರದ್ದತಿಯಂತಹ ಕಾರ್ಯಕ್ರಮವನ್ನಾದರೂ 'ಬಡವರು' ಬಡವರ ಪರವಾದ ಕಾರ್ಯಕ್ರಮವೆಂದು ಸಂಭ್ರಮದಿಂದ ಸ್ವಾಗತಿಸುತ್ತಿರುವುದರ ಮರ್ಮವಾದರೂ ಏನು? 'ಬಡವ'ರ ವ್ಯಕ್ತಿತ್ವದ ಈ ಒಡಕಿನ ಮೂಲವಾದರೂ ಯಾವುದು?

ಇನ್ನೊಂದು ಉದಾಹರಣೆ ಕೊಡುವೆ. ಅನುಕೂಲಸ್ಥರು ಅಡಿಗೆ ಅನಿಲದ ಮೇಲಿನ ಸಹಾಯಧನವನ್ನು ಸ್ವಯಂಪ್ರೇರಣೆಯಿಂದ ಬಿಟ್ಟುಕೊಡಬೇಕೆಂದೂ, ಹಾಗೆ ಬಿಟ್ಟುಕೊಟ್ಟರೆ, ಅದನ್ನು ಬಡ ಕುಟುಂಬವೊಂದಕ್ಕೆ ಅಡಿಗೆ ಅನಿಲ ಒದಗಿಸಲು ಬಳಸಿಕೊಳ್ಳಲಾಗುವುದೆಂದೂ ಸರ್ಕಾರ ಕೇಳಿಕೊಂಡಿದ್ದು ನಿಮಗೂ ನೆನಪಿರಬಹುದು. ನಾನು ಮಧ್ಯಮ ವರ್ಗದ ಪಿಂಚಣಿದಾರನಾದರೂ, ನಮಗೆ ಅಡಿಗೆ ಅನಿಲದ ಸಹಾಯಧನದ ಅಗತ್ಯವಿಲ್ಲವೆನಿಸಿದ್ದರಿಂದ ಅದನ್ನು ಬಿಟ್ಟುಕೊಟ್ಟೆ. ಒಂದೇ ವಾರದಲ್ಲಿ, ಇದರ ಪರಿಣಾಮವಾಗಿ ಬಿಹಾರದ ಬಡಕುಟುಂಬವೊಂದಕ್ಕೆ ಅಡಿಗೆ ಅನಿಲದ ಸೌಲಭ್ಯ ಕಲ್ಪಿಸಿರುವ ಸಂದೇಶವೊಂದು–ಆ

ಕುಟುಂಬದ ವಿವರಗಳೊಂದಿಗೆ– ನನಗೆ ಬಂತು. ಇದರಿಂದ ಪ್ರಭಾವಿತನಾದ ನಾನು ನನಗಿಂತಲೂ ಆರ್ಥಿಕವಾಗಿ ಸುಭದ್ರವಾಗಿದ್ದ ಗೆಳೆಯರಿಗೆ ತಂತಮ್ಮ ಅಡಿಗೆ ಅನಿಲದ ಸಹಾಯಧನ ಬಿಟ್ಟುಕೊಡಲು ಹೇಳಿದೆ. ಆದರೆ ಯಾರೊಬ್ಬರೂ ಬಿಟ್ಟುಕೊಡಲು ತಯಾರಾಗಲಿಲ್ಲ. ಇವರೆಲ್ಲ ನನ್ನಂತೆಯೇ ಒಂದು ಕಾಲದಲ್ಲಿ ಬಡವರಾಗಿ ಎಲ್ಲ ಸೌಲಭ್ಯ ಪಡೆದು ಈಗ ಮಧ್ಯಮ–ಮೇಲ್ಮಧ್ಯಮ ವರ್ಗಗಳಿಗೆ ಸೇರಿಕೊಂಡಿರುವವರು. ಒಬ್ಬೊಬ್ಬರದೂ ಒಂದೊಂದು ಸಬೂಬು! ಒಬ್ಬರು 'ಸುಮ್ಮನಿರಿ ಸರ್, ಮೊದಲಾಗಿ ನಾವು ಕಟ್ಟುವ ತೆರಿಗೆ ಯಾರ ಬಾಯಿಗಳಿಗೆ ಹೋಗುತ್ತಿದೆ ಎಂಬುದು ಕಣ್ಣಿಗೆ ಕಾಣುವುದಿಲ್ವಾ? ' ಎಂದು ಕೇಳಿದರೆ, ಮತ್ತೊಬ್ಬರು, 'ಮೊದಲು ನಮ್ಮ ಶಾಸಕರು, ಮಂತ್ರಿಗಳು ತಂತಮ್ಮ ಸೌಲಭ್ಯಗಳನ್ನು ಬಿಟ್ಟುಕೊಡಲು ಮುಂದೆ ಬರಲಿ!' ಎಂದು ಸವಾಲೆಸೆದರು! ಮಗದೊಬ್ಬರು ಇನ್ನೂ ಮುಂದೆ ಹೋಗಿ, 'ಅಯ್ಯೋ ಏನ್ನಾರ್, ಮೋದಿ ವಿರುದ್ಧವಾಗಿದ್ದ ನೀವೇ ಹೀಗೆ ಮೋದಿ ಸರ್ಕಾರದ ಬೆಂಬಲಕ್ಕೆ ನಿಂತಿದ್ದೀರಲ್ಲಾ!' ಎಂದು ಉದ್ಗಾರ ತೆಗೆದು ನನ್ನನ್ನು ದಂಗು ಬಡಿಸಿದರು.

ಅಡಿಗೆ ಅನಿಲದ ಸಹಾಯಧನದ ಈ ಕಥೆಯನ್ನು ಇಲ್ಲಿ ಏಕೆ ಹೇಳಿದೆನೆಂದರೆ, ನೋಟು ರದ್ದತಿಯನ್ನು ಹೊಗಳುತ್ತಲೇ ಅದರ ದುರ್ಲಾಭ ಪಡೆಯಲು ನಿರಾಕರಿಸಲಾಗದ ದೌರ್ಬಲ್ಯಕ್ಕೆ ಬಡತನ ಕಾರಣವೆಂಬ ವಾದ ಭಾವನಾತ್ಮಕವಾದದ್ದೇ ಹೊರತು ಅದು ನಿಜವಲ್ಲವೇನೋ ಎಂಬ ನನ್ನ ಶಂಕೆಯನ್ನು ಪುಷ್ಠೀಕರಿಸಲು. ಬಡತನವೇ ನಿಜ ಕಾರಣವಾಗಿದ್ದರೆ, ಅಡಿಗೆ ಅನಿಲದ ಸಹಾಯಧನಕ್ಕೆ ಸಂಬಂಧಪಟ್ಟಂತೆ ಮಾಜಿ ಬಡವರರಾದ ನನ್ನ ಗೆಳೆಯರ ವರ್ತನೆಗೆ ಏನು ಕಾರಣ? ಹಾಗೆ ನೋಡಿದರೆ, ಬಂಡವಾಳಶಾಹಿ ಲಾಭಕೋರರು, ಬಡವರ ಶತ್ರುಗಳು, ಶೋಷಕ ವರೇಣ್ಯರು ಎಂದು ಇಂದು ಕರೆಯಲ್ಪಡುತ್ತಿರುವ ಅಂಬಾನಿ ಕುಟುಂಬ ಕೂಡ ಕೆಲವೇ ವರ್ಷಗಳ ಹಿಂದೆ ಬಡವರ ಕುಟುಂಬವೇ ಆಗಿತ್ತಲ್ಲವೆ? ಹಾಗಾದರೆ, ಶೋಷಿತ ಶೋಷಕನಾಗುವುದರ ನಡುವೆ ನಡೆಯುವುದಾರೂ ಏನು?

ಮೊದಲಾಗಿ ನನ್ನ ಪ್ರಕಾರ ಈ ಪ್ರಶ್ನೆಯೇ ತಪ್ಪಾಗಿದೆ. ಶೋಷಕ ಮತ್ತು ಶೋಷಿತ ಎಂಬ ವಿಂಗಡಣೆಯ ರಾಜಕಾರಣವೇ ಇಂದು ತನ್ನ ಪ್ರಸ್ತುತತೆಯನ್ನು ಕಳೆದುಕೊಂಡಿದೆ. ಅದಕ್ಕೆ ಮತ್ತೆ, ಇದರ ಸ್ಪಷ್ಟ ವಿಂಗಡಣೆ ಮಾಡಿದ ಎಡಪಂಥೀಯ ರಾಜಕಾರಣದ ತಾತ್ವಿಕತೆಯೇ ಕಾರಣವಾಗಿದೆ. ಜಗತ್ತಿನ ಎಲ್ಲ ಏರುಪೇರುಗಳ, ಅಸಮತೋಲನಗಳ ಮೂಲ ಆರ್ಥಿಕತೆಯಲ್ಲಿದೆ ಎಂಬ ಅದರ ಭೌತವಾದಿ ಎಂದು ಕರೆಯಬಹುದಾದ ದೃಷ್ಟಿಕೋನವೇ ದೋಷಪೂರ್ಣವಾದದ್ದು. ಏಕೆಂದರೆ ಇದು ಬದುಕನ್ನು ಗ್ರಹಿಸುವ ಬಗೆಯೇ ಅಸಮಗ್ರವಾದದ್ದು. ಇದರಿಂದಾಗಿ ಇದು ಮನುಷ್ಯನ ಅಂತರಂಗದ ಮೂಲಸತ್ವವಾಗಿದ್ದ ನೈತಿಕತೆಯನ್ನೇ ಸಾಪೇಕ್ಷವೆಂದೂ, ಅಂದರೆ ಆರ್ಥಿಕತೆಯ ಉಪ

ಉತ್ಪನ್ನವೆಂದೂ ವಿಶ್ಲೇಷಿಸಿತು. ಆದರೆ ಮನುಷ್ಯ ತನ್ನ ಬದುಕನ್ನು ಆರಂಭಿಸಿದ್ದು ಸಾಂಘಿಕವಾಗಿ; ಇಂದು ಆರ್ಥಿಕತೆ ಎಂದು ಕರೆಯಲಾಗುವ ಕಲ್ಪನೆಯೇ, ಅದರ ಪ್ರಜ್ಞೆಯೇ ಇಲ್ಲದ ಹಂತವದು. ಒಟ್ಟಿಗೆ ಬದುಕುವ ವಿವೇಕ, ಕೌಶಲ್ಯ ಮತ್ತು ಅಂತಃಕರಣಗಳಷ್ಟೇ ಕೆಲಸ ಮಾಡುತ್ತಿದ್ದ ಘಟ್ಟವದು. ಅದೇ ಮನುಷ್ಯನ ಅಂತರಂಗದ, ಮನುಷ್ಯ ಪ್ರಜ್ಞೆಯ ಅಡಿಪಾಯ. ಅದೇ ಮುಂದೆ ನೈತಿಕತೆ ಎಂಬ ಹೆಸರಿನಲ್ಲಿ ಒಂದು ಸಾಮಾಜಿಕ ಸಂಹಿತೆಯಾಗಿ ಬೆಳೆಯಿತು.

ಆದರೆ, ಮನುಷ್ಯ ಬದುಕಿನಲ್ಲಿ ಸುಖ-ಸಂಪತ್ತುಗಳ ಕಲ್ಪನೆ ಬೆಳೆಯತೊಡಗಿದಂತೆ, ಅದರ ಸುತ್ತ ಆರ್ಥಿಕತೆ ಎಂಬೊಂದು ಹೊಸ ಕಲ್ಪನೆ ಬೆಳೆಯತೊಡಗಿದಂತೆ ನೈತಿಕತೆಯ 'ಪ್ರಯೋಜನ' ಕಡಿಮೆಯಾಗತೊಡಗಿತು. ಮನುಷ್ಯ ಪ್ರಜ್ಞೆಯ ಈ ಹಂತದಲ್ಲೇ ಉದಯವಾದದ್ದು ಭೌತವಾದ. ಅಥವಾ ಈ ಲೋಕ ಸೃಷ್ಟಿಯಾಗಿರುವುದು ಮನುಷ್ಯನ ಶ್ರಮ ಮಾತ್ರದಿಂದ ಎಂಬ ಲೋಕಗ್ರಹಿಕೆಯ ಮಾದರಿ. ನಮ್ಮ ಜನಪ್ರಿಯ ಎಡಪಂಥ ನಿಂತಿರುವುದೇ ಇಂತಹ ಭೌತವಾದಿ ಲೋಕಗ್ರಹಿಕೆಯ ಸಿದ್ಧಾಂತದ ಮೇಲೆ. ಅದು ಕೂಡ ಸಾಂಘಿಕ ಬದುಕಿನ ತತ್ವವನ್ನೇ ಹೇಳುವುದಾದರೂ, ನೈತಿಕತೆಯನ್ನು ಅಪ್ರಸ್ತುತಗೊಳಿಸಿಕೊಂಡ ತನ್ನ ಪರಿಭಾಷೆಯಲ್ಲಿ ಸಮಾಜವನ್ನು ಬಡವ-ಶ್ರೀಮಂತ ಅಥವಾ ಶೋಷಿತ-ಶೋಷಕ ಎಂದು ಒಡೆದು ನೋಡುವ ವಿಧಾನವೇ ದೋಷಪೂರ್ಣವಾಗಿರುವುದರಿಂದ ಅದರ ಸಮತಾವಾದ ಅಥವಾ ಸಮಾಜವಾದದ ಹೆಸರಿನ ಸಂಘಜೀವನದ ಆದರ್ಶ ಕೈಗೂಡದೇ ಹೋಗಿದೆ.

ಈ ದುರಂತದ ಹಿಂದಿರುವ ಇನ್ನೊಂದು ಕಾರಣವನ್ನೂ ಇಲ್ಲಿ ಹೇಳಿಬಿಡಬೇಕು. ಅದು ಭೌತವಾದಿ ಲೋಕಗ್ರಹಿಕೆ ಕಟ್ಟಿಕೊಟ್ಟ ಹೊಸ ಇತಿಹಾಸಶಾಸ್ತ್ರದ ತತ್ವಗಳು. ಇವು ಇತಿಹಾಸವನ್ನು ಮನುಷ್ಯ ಇತಿಹಾಸದ ಸ್ಮೃತಿಕೋಶವನ್ನು ಕಾಲಕೋಶದ ಅನಂತತೆಯಲ್ಲಿ ಮಾಗುವುದಕ್ಕೆ ಬಿಡುವ ಬದಲು ಅದನ್ನು ಕೆರಳಿಸುವಂತೆ ಮಾಡಿದವು. ಇದನ್ನೇ ಗಾಂಧಿ, ಇತಿಹಾಸವನ್ನು ಸಂಘರ್ಷಗಳ ಇತಿಹಾಸವಾಗಿ ನೋಡದೆ ಸಂಘರ್ಷಗಳ ನಡುವಣ ಶಾಂತಿ-ಸಾಮರಸ್ಯಗಳ ಇತಿಹಾಸವಾಗಿ ಏಕೆ ನೋಡಬಾರದೆಂಬ ಪ್ರಶ್ನೆಯ ರೂಪದಲ್ಲಿ ಕೇಳಿದ್ದು. ಅವರ ಪ್ರಕಾರ ಇತಿಹಾಸದಲ್ಲಿ ಸಂಘರ್ಷಗಳ ಕಾಲಕ್ಕಿಂತ ಸಂಘರ್ಷಗಳ ನಡುವಣ ಶಾಂತಿಯ ಕಾಲಾವಧಿಗಳೇ ಬಹು ಹೆಚ್ಚು. ಹಾಗಾಗಿ ಮಾನವ ಸಮಾಜದ ವರ್ತನೆಯ ಅಧ್ಯಯನ ಇಂತಹ ಕಾಲಾವಧಿಗಳ ಅಧ್ಯಯನವನ್ನು ಹೆಚ್ಚು ಅವಲಂಬಿಸಬೇಕು. ಆದರೆ ಭೌತವಾದಿ ದೃಷ್ಟಿಕೋನ ಇದಕ್ಕೆ ವಿರುದ್ಧವಾದ ಅಧ್ಯಯನಗಳನ್ನವಲಂಬಿಸಿ ಮನುಷ್ಯ ಸಮಾಜವನ್ನು ಶೋಷಣೆ ಎಂಬ ಘರ್ಷಣಾತ್ಮಕ ಗ್ರಹಿಕೆಯ ನೆಲೆಯಲ್ಲೇ ವಿಶ್ಲೇಷಿಸಿತು. ಇಂತಹ ಅಧ್ಯಯನಗಳಿಗೆ ೧೮-೧೯ನೇ ಶತಮಾನದಲ್ಲಿನ ಯೂರೋಪಿನಲ್ಲಿನ ಜ್ಞಾನಯುಗದ (ಜ್ಞಾನಯುಗ ಎಂದರೇ ಮೂಲತಃ ಭೌತಶಾಸ್ತ್ರದ ಮೆರೆದಾಟದ ಯುಗ) ಆತ್ಯಂತಿಕ ಪರಿಣಾಮವೆಂಬಂತೆ ಮೂಡಿದ

ಕೈಗಾರಿಕೀಕರಣ ಸೃಷ್ಟಿಸತೊಡಗಿದ್ದ ಸಾಮಾಜಿಕ ಏರುಪೇರುಗಳ ಒತ್ತಡಗಳೂ ಇದ್ದವು ಎಂಬುದನ್ನೂ ನಾವು ಗಮನಿಸಬೇಕು. ಈ ಕೈಗಾರಿಕೀಕರಣದ ಪರಿಣಾಮವೇ ಸಾಮಾಜ್ಯಶಾಹಿಗೆ ಕಾರಣವಾಗಿ, ಭೌತವಾದಿ ದೃಷ್ಟಿಕೋನವು ಹೊಸ ಮತ್ತು ಕ್ರಾಂತಿಕಾರಿ ಜ್ಞಾನಮೀಮಾಂಸೆಯ ಹೆಸರಿನಲ್ಲಿ ಜಗತ್ತಿನ ಲೋಕ ಗ್ರಹಿಕೆಯ ಪ್ರಧಾನ (dominant ಎಂಬರ್ಥದಲ್ಲಿ) ಮಾರ್ಗವಾಗಿ–ಕೆಲವು ಸ್ಥಳೀಯ ವಿರೋಧ, ಸವಾಲುಗಳ ಮಧ್ಯೆಯೂ–ಹಲವು ರಾಜಿಗಳೊಂದಿಗಾದರೂ ಸ್ಥಾಪಿಸಲ್ಪಟ್ಟಿತು.

ಅದೇನೇ ಇರಲಿ, ಮೂಲ ನೈತಿಕತೆಯ ಪ್ರಜ್ಞೆಯೇ ಇಲ್ಲದ ಸಾಮಾಜಿಕತೆಯ ಉತ್ಪನ್ನವಾದ ಮನುಷ್ಯನೊಳಗೆ ಸದಾ ಶೋಷಿತನೂ, ಶೋಷಕನೂ ಒಟ್ಟಿಗೆ ಇರಬಲ್ಲ. ಸಂದರ್ಭಕ್ಕೆ ತಕ್ಕಂತೆ ಈ ರೂಪಗಳು ಕಾಣಿಸತೊಡಗುತ್ತವೆ ಮತ್ತು ಅದಲು ಬದಲಾಗುತ್ತವೆ. ಎಡಪಂಥೀಯ ರಾಜಕಾರಣ ಎದುರಿಸುತ್ತಿರುವ ಆಂತರಿಕ ತೊಂದರೆ ಇದು. ಅದರ ಮೂಲ ಮೊದಲೇ ಹೇಳಿದಂತೆ, ಅದರ ಭೌತವಾದಿ ಲೋಕಗ್ರಹಿಕೆಯ ಮೀಮಾಂಸೆಯಲ್ಲಿದೆ. ಅದು ಮನುಷ್ಯನನ್ನು ಒಂದು ಭೌತವಾದಿ ಅಸ್ತಿತ್ವವಾಗಿ ಮಾತ್ರ ಪರಿಕಲ್ಪಿಸಿಕೊಂಡು, ಅವನ ಭೌತಿಕ ಅಗತ್ಯಗಳನ್ನು ಪೂರೈಸಿಕೊಳ್ಳುವುದಷ್ಟೇ ಅವನ ಬದುಕಿನ ಸಾರ್ಥಕ್ಯವೆಂಬ ಬದುಕಿನ ವ್ಯಾಖ್ಯಾನವನ್ನು ಸೃಷ್ಟಿಸುತ್ತಿದೆ. ಆದರೆ ಭೌತಿಕ ಅಗತ್ಯಗಳಿಗೆ ಕೊನೆ ಮೊದಲಿದೆಯೇ? ಹಾಗಾಗಿ ಅದು ಮನುಷ್ಯನನ್ನು ನಿರಂತರ ದಾಹಿಯನ್ನಾಗಿಯೇ ಮಾಡುವ ದುರಂತವನ್ನೂ ಸೃಷ್ಟಿಸಿದೆ. ಇಲ್ಲಿಯೇ ಎಡಪಂಥ ಮತ್ತು ಬಲಪಂಥ ಒಟ್ಟು ಸೇರುವುದು. ಬಲಪಂಥ ಮನುಷ್ಯನನನ್ನು ಶೋಷಿತ ಮತ್ತು ಶೋಷಕ ಎಂದು ವಿಂಗಡಿಸದೆ, ಮನುಷ್ಯನ ವೈಯುಕ್ತಿಕ ಸಾಮರ್ಥ್ಯದ ಮಾನ್ಯತೆ ಮತ್ತು ಪ್ರೋತ್ಸಾಹಗಳನ್ನು ನಂಬುತ್ತಾ ಆ ನಂಬಿಕೆಯ ಆಧಾರದ ಮೇಲೇ ಮಾನವ ಕುಲ ತನ್ನ ಸಾರ್ಥಕತೆಯನ್ನು ಕಂಡುಕೊಳ್ಳಬಹುದು ಎಂದು ವಾದಿಸುತ್ತಾ ಬಂದು ಕೊನೆಗೆ ಸೇರುವುದು ಇಲ್ಲಿಯೇ. ಹಾಗಾಗಿ ಈ ಎಡ–ಬಲ ಎಂಬ ಪಂಥೀಯ ವಿಂಗಡಣೆಗಳೇ ಆತ್ಯಂತಿಕವಾಗಿ ದೋಷಪೂರ್ಣ ಮತ್ತು ಅಪಾಯಕಾರಿ ಎಂಬ ಮನವರಿಕೆ ಆಗುವ ಕಾಲವೀಗ ಬಂದಿದೆ.

ಹಾಗಾದರೆ ಇದರಿಂದ ಹೊರದಾರಿ ಎಲ್ಲಿದೆ? ಗಾಂಧಿ, ಮನುಷ್ಯ ಮೂಲತಃ ನೈತಿಕ ಜೀವನ ನಡೆಸಲು ಬದ್ಧನಾಗಿದ್ದಾನೆ ಎಂದು ನಂಬಿದ್ದರು. ಈ ನಂಬಿಕೆಯ ಹಿನ್ನೆಲೆಯಲ್ಲಿ ಗಾಂಧಿ ನೈತಿಕತೆ ಎಂದರೇನು ಎಂಬ ಪ್ರಶ್ನೆಗೆ ಉತ್ತರಿಸಿದ್ದು ಹೀಗೆ: ನೈತಿಕತೆ ಎಂದರೆ ತನ್ನ ನೆರೆಹೊರೆಯನ್ನು ಕುರಿತ ತನ್ನ ಕರ್ತವ್ಯದ ಪಾಲನೆಯ ಅರಿವು. ಅಂದರೆ, ಸಾಂಘಿಕತೆ ಮನುಷ್ಯ ಜೀವನದ ಮೂಲ ಅಡಿಪಾಯವಾಗಿದ್ದು, ಅದನ್ನು ಕಾಪಾಡಲು ತಾನು ಮಾಡಬೇಕಾದ ಕರ್ತವ್ಯದ ಅರಿವು ಇದು. ಆದರೆ ಎಡಪಂಥದ ಮೀಮಾಂಸೆಯಲ್ಲಿ ಎಲ್ಲ ತಲೆಕೆಳಕಾಗಿದೆ. ಅದು ಸಮಾಜವನ್ನು ಶೋಷಕ–ಶೋಷಿತ ಎಂಬ ದೋಷಪೂರ್ಣ ಗ್ರಹಿಕೆಯಲ್ಲಿ ಒಡೆದು ನೋಡುತ್ತಿರುವುದರಿಂದ

ಕರ್ತವ್ಯ ಎಂಬ ಸೇವೆಯ ಪರಿಕಲ್ಪನೆಯೇ ಹಿನ್ನೆಲೆಗೆ ಸರಿದುಹೋಗಿ ಸುಖವೆಂಬ ಹಕ್ಕಿನ ಪರಿಕಲ್ಪನೆಯೊಂದೇ ಮುನ್ನೆಲೆಗೆ ಬಂದಿದೆ. ಪ್ರತಿಯೊಬ್ಬನೂ ಶೋಷಿತ ಅಥವಾ ಶೋಷಕ ಎಂದು ಗೆರೆ ಹೊಡೆದಂತೆ ವಿಂಗಡಿಸಲ್ಪಟ್ಟಿರುವುದರಿಂದ ಈ ಹಕ್ಕು-ಕರ್ತವ್ಯಗಳೂ ಈ ಶೋಷಕ-ಶೋಷಿತರ ನಡುವೆ ಗೆರೆ ಹೊಡೆದಂತೆ ವಿಂಗಡಣೆಯಾಗಿಬಿಟ್ಟಿವೆ. ಹಾಗಾಗಿಯೇ ಬಡವರ ಸಮಾಜ ವಿರೋಧಿ ಕೃತ್ಯಗಳು ತಪ್ಪಾಗಿ ಕಾಣದೆ, ಸಾಂದರ್ಭಿಕ ದೌರ್ಬಲ್ಯಗಳಾಗಿ ಮಾತ್ರ ಕಂಡು, ಎಡಪಂಥೀಯರ ಸುಖೀ ರಾಜ್ಯದ ಗುರಿ ಮುಂದೆ ಮುಂದಕ್ಕೇ ಹೋಗುತ್ತಿರುತ್ತದೆ ಮತ್ತೆ ಇದು ಬಡವರ ತಪ್ಪು ಮಾಡುವ ಸಂದರ್ಭಗಳನ್ನೂ ಹೆಚ್ಚಿಸುತ್ತಾ ಹೋಗಿ ಎಡಪಂಥ ಎನ್ನುವುದು ತನ್ನನ್ನು ತಾನೇ ಒಂದು ವಿಷಚಕ್ರದೊಳಕ್ಕೆ ಬಂಧಿಸಿಕೊಳ್ಳುತ್ತಾ ಹೋಗುತ್ತದೆ. ಎಡಪಂಥದ ಬಗೆಗಿನ ಈ ನನ್ನ ಮಾತುಗಳು ನನ್ನನ್ನು ಬಲಪಂಥದ ಪ್ರತಿಪಾದಕ ಎಂದು ಬಿಂಬಿಸುವುದಿಲ್ಲ ಎಂದು ನಂಬಿದ್ದೇನೆ. ಏಕೆಂದರೆ, ನಮ್ಮ ಗ್ರಹಿಕೆ ಸ್ಪಷ್ಟವಿದ್ದಾಗ ಪಂಥವೆಂಬುದಕ್ಕೆ ಜಾಗವೇ ಇರುವುದಿಲ್ಲ. ಆದರೆ ಜಗತ್ತಿನ ದುಃಖ ನಿವಾರಣೆ ಎಲ್ಲ ಮನುಷ್ಯರ ಕರ್ತವ್ಯವಾಗಿರುವುದರಿಂದ(ಮನುಷ್ಯ ಮೂಲತಃ ಸಂಘಜೀವಿಯಾಗಿರುವುದೂ ಇದನ್ನೇ ಸೂಚಿಸುತ್ತದಲ್ಲವೆ?) ಈ ಗುರಿಯೊಂದಿಗೆ ತನ್ನನ್ನು ಗುರುತಿಸಿಕೊಂಡು, ಆದರೆ ದಾರಿ ತಪ್ಪಿದಂತೆ ತೋರುತ್ತಿರುವ ಗುಂಪನ್ನು ಎಡಪಂಥೀಯರು ಎಂದು ಪಾರಿಭಾಷಿಕವಾಗಿ ಕರೆಯುತ್ತಿದ್ದು, ಅದರೊಂದಿಗೆ ನನ್ನ ಸಹಾನುಭೂತಿ ಇರುವುದರಿಂದ ಇಲ್ಲಿ ಒಂದು ಆತ್ಮಾವಲೋಕನದ ಪ್ರಯತ್ನವೊಂದನ್ನು ಮಾಡಿದ್ದೇನಷ್ಟೆ. ನನ್ನ ಪ್ರಕಾರ ಬಲಪಂಥವೆಂಬುದಕ್ಕೆ ನಿಜವಾದ ಅಸ್ತಿತ್ವವೇ ಇಲ್ಲ. ಅದು ನಮಗೆ ಕಾಣಿಸಿಕೊಂಡಿದ್ದರೆ, ಅದಕ್ಕೆ ಕಾರಣ ಲೋಕ ಕಲ್ಯಾಣಕ್ಕೆ ಇರಬಹುದಾದ ಮತ್ತು ಈಗ ಸಾಂದರ್ಭಿಕವಾಗಿ ಎಡವೆಂದು ಕರೆಯಲಾಗುತ್ತಿರುವ ಪಂಥ ಸಂಪೂರ್ಣ ದಾರಿ ತಪ್ಪಿರುವುದೇ ಆಗಿದೆ. ಬೆಳಕು ಮುಸುಕಾಗತೊಡಗಿದಾಗ ಕತ್ತಲು ಆವರಿಸಿಕೊಳ್ಳತೊಡಗುವಂತೆ.

ಕೊನೆಯ ಮಾತು: ಈ ಎಡಪಂಥ ಮತ್ತೆ ಸರಿ ದಾರಿಗೆ ಬರುವುದಾದರೂ ಹೇಗೆ? ಅದು ಮನುಷ್ಯ ಜೀವನ-ನಾಗರಿಕತೆಗಳನ್ನು ಯಾವುದೇ ಸೈದ್ಧಾಂತಿಕ ಪೂರ್ವಗ್ರಹಗಳಿಲ್ಲದೆ ಪ್ರಾಚೀನ ವಿವೇಕದ ಕಣ್ಣುಗಳಲ್ಲಿ ನೋಡಿದ ಗಾಂಧಿ ನೈತಿಕತೆಯ ಅರ್ಥವನ್ನು ಮೂರ್ತವಾಗಿ ಹೇಳಲು ಬಳಸಿದ 'ನೆರೆಹೊರೆ' ಎಂಬ ಕಲ್ಪನೆಯನ್ನು ಪುನರನ್ವೇಷಿಸುವ ನಮ್ಮ ಪ್ರಾಮಾಣಿಕ ಪ್ರಯತ್ನದಲ್ಲಿದೆ. ಹಾಗಾಗಿ ಇಂದಿನ ಎಡಪಂಥದ ರಾಜಕಾರಣ ನೆರೆಹೊರೆಯ ರಾಜಕಾರಣವನ್ನು ಕಟ್ಟುವ ಕಡೆ ಗಮನ ಹರಿಸಬೇಕಿದೆ. ಅದು ನಮಗೆ ಎಂತಹ, ಎಷ್ಟು ತಂತ್ರಜ್ಞಾನ ಬೇಕು? ನಮ್ಮ ಅಭಿವೃದ್ಧಿ ಮಾದರಿ ಎಂತಹದ್ದಾಗಿರಬೇಕು? ಸುಖದ ಪರಿಮಿತಿಗಳು ಯಾವುವು? ವ್ಯಕ್ತಿ ಮುಖ್ಯವೋ, ಸಮಾಜ ಮುಖ್ಯವೋ? ಎಂಬ ಮೂಲಭೂತ ಪ್ರಶ್ನೆಗಳನ್ನೆಲ್ಲ ತನ್ನ ರಾಜಕಾರಣದ ದಾರಿಯಲ್ಲೇ ಪರಿಹರಿಸಿಕೊಳ್ಳುತ್ತಾ ಹೋಗುತ್ತದೆ.

ಇಂತಹ ಕಷ್ಟಸಾಧ್ಯ ಪ್ರಯತ್ನ ಆಗುವವರೆಗೆ ಮೋದಿಯಂಥವರು, ಗೋರಕ್ಷಣೆ, ನಿರ್ದಿಷ್ಟ ದಾಳಿ, ನೋಟು ರದ್ದತಿ, ಚಿನ್ನ ನಿಯಂತ್ರಣ, ಬೇನಾಮಿ ಆಸ್ತಿ ತಪಾಸಣೆ ಮುಂತಾದ 'ಜನೋನ್ಮಾದ' ಕಾರ್ಯಕ್ರಮಗಳನ್ನು ಜಾರಿಗೆ ತರುತ್ತಾ ತಮ್ಮ ಹಿಡಿತವನ್ನು ಬಿಗಿ ಮಾಡಿಕೊಳ್ಳುತ್ತಲೇ ಹೋಗುತ್ತಾರೆ. ಇದರ ಪರಿಣಾಮವಾಗಿ ಎಡಪಂಥೀಯರ ಹತಾಶೆಯ ಅರಚಾಟ-ಕೂಗಾಟಗಳೂ ಜಾಸ್ತಿಯಾಗುತ್ತಾ ಹೋಗಿ ಜನರಿಗೆ ಹಿಂಸೆ ತಪ್ಪಿದ್ದಲ್ಲ.

(ಫೇಸ್‌ಬುಕ್ ಬರಹ : ೧.೧೨. ೨೦೧೬)

ನೋಟು ರದ್ದತಿ: ಆಸೆ ಮತ್ತು ಆತಂಕಗಳ ತೂಗುಯ್ಯಾಲೆಯಲ್ಲಿ......

ಮೋದಿಯವರ ನೋಟು ರದ್ದತಿ ಕಾರ್ಯಕ್ರಮದ ವಿಧಿಗಳು ಕೊನೆಗೊಳ್ಳುತ್ತಾ ಬರುತ್ತಿರುವಂತೆ, ಅವರು ಹಿಡಿಯಹೊರಟ ಕಪ್ಪು ಹಣ ಅಲ್ಲಲ್ಲಿ ಗುಪ್ತವಾಗಿ ಬಿಳಿಯಾಗುತ್ತಿರುವ ವರದಿಗಳು ಬರುತ್ತಿವೆ. ಕರ್ನಾಟಕದಲ್ಲಾಗುತ್ತಿರುವಂತೆ ಇದು ಕೆಲವೆಡೆ ಬಹಿರಂಗಗೊಳ್ಳುತ್ತಲೂ ಇವೆ. ಇಂತಹ ಸುದ್ದಿಗಳನ್ನು ರಾಜಕೀಯ ಮಸಾಲೆಯೊಂದಿಗೆ ಉಣಬಡಿಸುತ್ತಾ ತಮ್ಮ ಜಾಹೀರಾತು ಆದಾಯಗಳನ್ನು ಹೆಚ್ಚಿಸಿಕೊಳ್ಳುತ್ತಿರುವ ಮಾಧ್ಯಮಗಳಿಗೆ ಅಂಟಿಕೊಂಡ ಆರಾಮ ಬದುಕಿನ ಜನ ಇಂತಹ ಸುದ್ದಿಗಳನ್ನು ರೋಚಕವಾಗಿ ಆಸ್ವಾದಿಸುತ್ತಾ ಮೋದಿಯವರಿಗೆ 'ಉಘೇ! ಉಘೇ!!' ಎನ್ನುತ್ತಿದ್ದಾರೆ. ಇದರಿಂದ ಉತ್ತೇಜನಗೊಂಡ ಮೋದಿಯವರು ಬರಲಿರುವ ಚುನಾವಣೆಗಳಿಗಾಗಿ ಉತ್ತರ ಪ್ರದೇಶದಲ್ಲಿನ 'ಪರಿವರ್ತನಾ' ಸಭೆಗಳಲ್ಲಿ ತಮ್ಮಿಂದ ತಾವೇ ಹುಚ್ಚು ಹಿಡಿಸಿಕೊಂಡವರಂತೆ ಯದ್ವಾತದ್ವಾ ಕೂಗಾಡುತ್ತಾ ವೋಟುಗಳನ್ನು ದೋಚಿಕೊಳ್ಳುವ ಉತ್ಸಾಹದಲ್ಲಿದ್ದಾರೆ. ಈ ದೃಶ್ಯ ನನಗೆ ಎಪ್ಪತ್ತರ ದಶಕದ ಇಂದಿರಾ ಗಾಂಧಿಯವರ 'ಗರೀಬಿ ಹಠಾವೋ!' ಭಾಷಣಗಳ ಭಾವಭಂಗಿಗಳನ್ನು ನೆನಪಿಗೆ ತರುತ್ತಿದೆ.

ಇಡೀ ದೇಶದಲ್ಲಿ ವಾತಾವರಣ ವಿದ್ಯುತ್ ಸಂಚಾರವಾದಂತೆ, ಬಿಡುವಿರುವ ಎಲ್ಲರೂ ಈ ನೋಟು ರದ್ದತಿಯ 'ಕ್ರಾಂತಿಕಾರಕತೆ'ಯ ಬಗ್ಗೆ ಚರ್ಚಿಸುತ್ತಿದ್ದಾರೆ. ಆದರೆ ಕೆಲ ಇಂಗ್ಲಿಷ್ ಪತ್ರಿಕೆಗಳು ಮತ್ತು ಟಿವಿ ವಾಹಿನಿಗಳ ಹೊರತಾಗಿ ಇನ್ನಾವ ವೇದಿಕೆಯಲ್ಲೂ, ಈ ಕಾರ್ಯಕ್ರಮದ ಸಾಧಕ-ಬಾಧಕಗಳ ಬಗ್ಗೆ ವಸ್ತುನಿಷ್ಠವಾಗಿ ಚರ್ಚಿಸುವ ಸಂದರ್ಭಗಳೇ ಕಾಣುತ್ತಿಲ್ಲ. ಅಲ್ಲದೆ, ಈ ನೋಟು ರದ್ದತಿ ಉಂಟು ಮಾಡಿರುವ ನಗದಿನ ಕೊರತೆ, ಅಸಂಘಟಿತ ವಲಯಗಳ ಜನರ ಮೇಲೆ, ಸಣ್ಣಪುಟ್ಟ ವ್ಯಾಪಾರಿಗಳು, ಉತ್ಪಾದಕರು ಮತ್ತು ರೈತರ ಮೇಲೆ ಏನು ಪರಿಣಾಮ ಉಂಟು ಮಾಡಿದೆ ಎಂಬ ಬಗ್ಗೆ ಗಂಭೀರ ವರದಿಗಳಾಗಲೀ ಸುದ್ದಿಗಳಾಗಲೀ ನಮ್ಮ ಮಧ್ಯೆ ಚಲಾವಣೆಯಲ್ಲಿದ್ದಂತೆ ಕಾಣುವುದಿಲ್ಲ. ಇದು ಮತ್ತೆ ದೇಶ ಮತ್ತು ಅದರ ಜನಮಾನಸ ಎಷ್ಟು ದುರಂತಮಯವಾಗಿ ಒಡೆದುಹೋಗಿದೆ ಎಂಬುದನ್ನು ಸೂಚಿಸುತ್ತಿದೆ.

ಸರ್ಕಾರದ ಸಮರ್ಥಕರೇನೋ, ಇದೊಂದು ದೀರ್ಘಕಾಲಿಕವಾಗಿ ಜನರಿಗೆ ಹಿತವನ್ನೇ ಉಂಟು ಮಾಡುವ ಆರ್ಥಿಕ ಸ್ವಚ್ಛತೆಯ ಕಾರ್ಯಕ್ರಮವಾಗಿದ್ದು, ಅದಕ್ಕಾಗಿ ಜನತೆ ಸ್ವಲ್ಪಮಟ್ಟಿನ ತೊಂದರೆ ಅನುಭವಿಸಬೇಕಾಗಿದೆ ಎನ್ನುತ್ತಿದ್ದಾರೆ. ಜಾಗತೀಕರಣದ ಹೆಸರಿನಲ್ಲಿ ದೇಶದಲ್ಲಿ ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಸೃಷ್ಟಿಯಾದ ದಿಢೀರ್ ಶ್ರೀಮಂತರ ಭೋಗ ವಿಲಾಸಗಳನ್ನು ಕಂಡು ಒಳಗೊಳಗೇ ಕುದಿಯುತ್ತಿದ್ದ ಸಾಮಾನ್ಯ ಜನ ಇದನ್ನು ಈ ದಿಢೀರ್ ಶ್ರೀಮಂತರನ್ನು ಮಟ್ಟ ಹಾಕುವ ಕ್ರಮವೆಂದು ಭಾವಿಸಿ ಸರ್ಕಾರದ ಸಮರ್ಥಕರ ಮಾತುಗಳನ್ನು ನಂಬಿ ಸಾಕಷ್ಟು ಶಾಂತಿಯಿಂದಲೇ ಸರ್ಕಾರದೊಂದಿಗೆ ಸಹಕರಿಸುತ್ತಿದ್ದಾರೆ. ಆದರೆ ಎಷ್ಟು ದಿನ? ಈ ತೊಂದರೆ ನಿಜವಾಗಿಯೂ ನಿರೀಕ್ಷಿತ ಫಲ ನೀಡುವುದೇ? ಈಗಾಗಲೇ ಅಲ್ಲಲ್ಲಿ ಅಸಮಧಾನ–ಅಶಾಂತಿ–ಪ್ರತಿಭಟನೆಗಳ ಸೂಚನೆಗಳು ಕಾಣತೊಡಗಿವೆ.

ಆರ್ಥಿಕ ಪರಿಣಿತರ ಪ್ರಕಾರ ಆರ್ಥಿಕ ಸ್ವಚ್ಛತೆಯ ಕಾರ್ಯಕ್ರಮ ನೋಟು ರದ್ದತಿ ಮತ್ತು ಆನಂತರ ಘೋಷಿಸಲಾಗಿರುವ ಚಿನ್ನ ಮಿತಿ ಆದೇಶಗಳೊಂದಿಗೇ ಮುಗಿಯುವುದಾದರೆ ಇದೊಂದು ಆರ್ಥಿಕ ಅನಾಹುತವನ್ನು ಸೃಷ್ಟಿಸೀತು. ಏಕೆಂದರೆ, ನಮ್ಮ ದೇಶದಲ್ಲಿ ನಗದಿನ ರೂಪದಲ್ಲಿ ಇರಬಹುದಾದ ಕಪ್ಪುಹಣ ಶೇ. ಆರು ಮಾತ್ರ ಮಿಕ್ಕದ್ದು ಇರುವುದು ವಿದೇಶಿ ಬ್ಯಾಂಕುಗಳಲ್ಲಿ, ಬೇನಾಮಿ ಆಸ್ತಿಗಳಲ್ಲಿ, ರಿಯಲ್ ಎಸ್ಟೇಟ್ ವ್ಯವಹಾರಗಳಲ್ಲಿ. ಹಾಗಾಗಿಯೇ ನೋಟು ರದ್ದತಿ ಕಾರ್ಯಕ್ರಮದಿಂದ ಈವರೆಗೆ ಬ್ಯಾಂಕುಗಳಿಗೆ ಬಂದು ಸಕ್ರಮಗೊಂಡಿರುವ ಹಣದ ಮೊತ್ತ ನೋಡಿದರೆ, ರದ್ದಾದ ನೋಟುಗಳ ರೂಪದಲ್ಲಿದ್ದ ಬಹುಭಾಗ ಹಣ ಸಕ್ರಮವಾದದ್ದೇ ಆಗಿತ್ತು. ಡಿಸೆಂಬರ್ ಅಂತ್ಯದೊಳಗಾಗಿ ಬ್ಯಾಂಕುಗಳಿಗೆ ಬಂದು ಸಕ್ರಮಗೊಳ್ಳದೆ ಉಳಿಯಬಹುದಾದ ಶೇ. ೧೦ರಷ್ಟು ಅಲ್ಪ ಭಾಗದ ಗಣನೀಯ ಭಾಗ ಈಗ ದೇಶದ ವಿವಿಧ ಭಾಗಗಳಿಂದ ಬರುತ್ತಿರುವ ವರದಿಗಳಂತೆ ಸರ್ಕಾರದ ಕಣ್ಣು ತಪ್ಪಿಸಿದ ವಿಧಾನಗಳ ಮೂಲಕ ಬಿಳಿಯಾಗುತ್ತಲೇ ಇದೆ! ವರದಿಯಾಗದ ಪ್ರಕರಣಗಳೆಷ್ಟೋ ಯಾರಿಗೆ ಗೊತ್ತು? ಈ ಭಾಗ್ಯಕ್ಕಾಗಿ ಸರ್ಕಾರ ಜನರ ಮಧ್ಯೆ ಚಲಾವಣೆಯಲ್ಲಿದ್ದ ಶೇ.೮೬ರಷ್ಟು ಮೌಲ್ಯದ ನಗದನ್ನು ರದ್ದು ಮಾಡುವ ಅಗತ್ಯವಿತ್ತೆ? ಆ ಮೂಲಕ ಸಾಮಾನ್ಯ ಜನರ ಬಹುಭಾಗದ ಆರ್ಥಿಕ ಚಟುವಟಿಕೆಗಳಿಗೆ ಧಕ್ಕೆ ಉಂಟು ಮಾಡಿ, ಅವರ ಬದುಕನ್ನು ಮೂರಾಬಟ್ಟೆ ಮಾಡಿ ದೇಶದ ಒಟ್ಟು ಆರ್ಥಿಕ ಬೆಳವಣಿಗೆಯ ಗತಿಯನ್ನು ನಿರ್ಣಾಯಕವಾಗಿ ತಗ್ಗಿಸುವ ಅಗತ್ಯವಿತ್ತೆ? ಇವು ಸರ್ಕಾರದ ಆಶ್ರಯದಲ್ಲಿರದ (ನೊಬೆಲ್ ಪ್ರಶಸ್ತಿ ಪುರಸ್ಕೃತ ಅರ್ಥಶಾಸ್ತ್ರಜ್ಞರಾದ ನಮ್ಮವರೇ ಆದ ಅಮರ್ತ್ಯಸೇನ್ ಮತ್ತು ಅಮೆರಿಕಾದ ಪಾಲ್ ಕ್ರುಗ್ಮನ್ ಸೇರಿದಂತೆ) ಕೆಲ ಆರ್ಥಿಕ ತಜ್ಞರು ಕೇಳುತ್ತಿರುವ ಪ್ರಶ್ನೆಗಳು.

ಹಾಗೇ ಈ ಆರ್ಥಿಕ ತಜ್ಞರು ಹೇಳುತ್ತಿರುವ ಕೆಲವು ಸಂಗತಿಗಳು ಬೆಚ್ಚಿಬೀಳಿಸುವಂತಿವೆ: ಸರ್ಕಾರ ಹೇಳುತ್ತಿರುವಂತೆ, ಈ ಡಿಸೆಂಬರ್ ಕೊನೆಯ ನಂತರ ಪರಿಸ್ಥಿತಿ ಸಾಮಾನ್ಯವಾಗಲಾರದು. ರದ್ದಾದ ನಗದು ಮತ್ತೆ ಜನರ ಮಧ್ಯೆ ಹೊಸ ನೋಟುಗಳ

ರೂಪದಲ್ಲಿ ಚಲಾವಣೆಗೆ ಬರಲು ಕನಿಷ್ಠ ಆರು ತಿಂಗಳುಗಳು ಬೇಕು. ಆ ಅವಧಿಯಲ್ಲಿ ಆಗುವ ಉದ್ಯೋಗ ನಷ್ಟ, ಉತ್ಪಾದನೆಯ ನಷ್ಟ, ಮಾನವ ಸಂಕಷ್ಟ ಒಟ್ಟಾಗಿ ಉಂಟು ಮಾಡುವ ರಾಷ್ಟ್ರೀಯ ಅನಾಹುತದ ಪ್ರಮಾಣ ಸದ್ಯಕ್ಕೆ ಅಂದಾಜಿಸಲಾಗುತ್ತಿಲ್ಲ. ಇನ್ನೂ ಹೆಚ್ಚಿನ ಆತಂಕದ ಸಂಗತಿ ಎಂದರೆ ನೋಟು ರದ್ದತಿ ಪ್ರಜಾಪ್ರಭುತ್ವದ ಆಧಾರವಾಗಿರುವ ಸರ್ಕಾರ ಮತ್ತು ಜನತೆಯ ನಡುವಣ ನಂಬಿಕೆಯನ್ನು ಘಾಸಿಗೊಳಿಸಿದೆ ಎಂಬುದು. ನೋಟು ಎಂದರೆ ಸರ್ಕಾರ ಜನರ ನಂಬಿಕೆಯನ್ನು ಬೇಡಿ ನೀಡುವ ಹಣಕಾಸಿನ ಪ್ರಮಾಣ ಪತ್ರ. ಅದನ್ನೇ ಯಾವುದೇ ಸಮರ್ಪಕ ಪರ್ಯಾಯ ವ್ಯವಸ್ಥೆ ಇಲ್ಲದೆ ಆ ನಂಬಿಕೆಗೇ–ತಾತ್ಕಾಲಿಕವಾಗಿಯಾದರೂ–ಮೋಸ ಮಾಡಿದರೆ? ಅಮರ್ತ್ಯಸೇನ್ರು ಆತಂಕಿಸಿರುವಂತೆ, ಮುಂದೊಂದು ದಿನ ಸರ್ಕಾರ ಹೀಗೇ ಯಾವುದೇ ಪರ್ಯಾಯ ವ್ಯವಸ್ಥೆ ಇಲ್ಲದೆ, ಜನರ ಬ್ಯಾಂಕ್ ಖಾತೆಗಳ ಹಣದ ಮೇಲೆ ಮಿತಿ ಹೇರಿ ಅವರ ಹಣವನ್ನು ವಶಪಡಿಸಿಕೊಳ್ಳಲು ಮುಂದಾದರೆ? ಇದು ಆಗಲಾರದು ಎಂದು ಹೇಗೆ ಖಚಿತವಾಗಿ ಹೇಳುವುದು? ಜನರ ಒಂದು ಭಾಗದ ಸಹಾನುಭೂತಿಯನ್ನು ಪ್ರಚೋದಿಸಿ ಸರ್ಕಾರ ಇದನ್ನು ಈಗಿನಂತೆಯೇ ಸುಲಭವಾಗಿ ಮಾಡಬಹುದಾಗಿದೆ ಅಲ್ಲವೆ? ಆದರೆ, ಹಾಗಾಗದು ಎಂದು ಭಾವಿಸೋಣ!

ತಮ್ಮ ಸರ್ಕಾರ ಅಧಿಕಾರಕ್ಕೆ ಬಂದ ತೊಂಭತ್ತು ದಿನಗಳಲ್ಲಿ ವಿದೇಶೀ ಬ್ಯಾಂಕುಗಳಲ್ಲಿರುವ ಭಾರತೀಯರ ಕಪ್ಪು ಹಣವನ್ನು ತಂದು ಪ್ರತಿಯೊಬ್ಬರ ಬ್ಯಾಂಕ್ ಖಾತೆಗಳಿಗೆ ೧೫ ಲಕ್ಷ ರೂ. ಜಮಾ ಮಾಡುವುದಾಗಿ ಹೇಳಿದ್ದ ಮಾತನ್ನು ನಂಬಿದಂತೆಯೇ ಜನ ಈಗಲೂ ಮೋದಿಯವರ ನೋಟು ರದ್ದತಿ ಕಾರ್ಯಕ್ರಮದ ಘೋಷಿತ ಘನೋದ್ದೇಶವನ್ನು ನಂಬಿ ಕಷ್ಟಗಳನ್ನು ಎದುರಿಸುತ್ತಲೇ ಬೆಂಬಲ ಸೂಚಿಸುತ್ತಿದ್ದಾರೆ. ಆದರೆ ತಮ್ಮ ಮೊದಲ ಭರವಸೆಯನ್ನು ಈಡೇರಿಸಲು ಏಕೆ ಸಾಧ್ಯವಾಗಿಲ್ಲ ಎಂದು ಜನತೆಗೆ ವಿವರಿಸುವ (ಮತ್ತು ಈ ಸಂಬಂಧ ಹಿಂದಿನ ಸರ್ಕಾರವನ್ನು ಕಾಳಧನಕೋರರ ಪರ ಎಂದು ದೂಷಿಸಿದ್ದಕ್ಕಾಗಿ ಕ್ಷಮೆ ಕೋರುವ ವಿನಯವನ್ನೂ ತೋರದ) ಮೋದಿ ಈ ನೋಟು ರದ್ದತಿ ಕಾರ್ಯಕ್ರಮದಿಂದ ನಿರೀಕ್ಷಿತ ಫಲ ದೊರಕದಿದ್ದರೆ ಜನ ಏನು ಮಾಡಬೇಕು? ಆರ್ಥಿಕ ತಜ್ಞರ ಪ್ರಕಾರ, ಈ ನೋಟು ರದ್ದತಿ ಕಾರ್ಯಕ್ರಮವನ್ನು ಬೇನಾಮಿ ಆಸ್ತಿಗಳ ಪರಿಶೋಧನೆ, ರಿಯಲ್ ಎಸ್ಟೇಟ್ ಉದ್ಯಮದ ಸ್ವಚ್ಛೀಕರಣ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ರಾಜಕೀಯ ಭ್ರಷ್ಟಾಚಾರವನ್ನು ತೊಡೆದುಹಾಕುವಂತಹ ಮೂಲಭೂತ ಚುನಾವಣಾ ಸುಧಾರಣೆಗಳ ಬಗ್ಗೆ ತ್ವರಿತವಾಗಿ ಕ್ರಮ ಕೈಗೊಳ್ಳದಿದ್ದರೆ ನೋಟು ರದ್ದತಿಯ ಮೋದಿಯವರ ಕ್ರಮ ಪೂರ್ಣ ವ್ಯರ್ಥವೇ. ಆಗ ಅದನ್ನು ಮೋದಿಯವರು ಬರಲಿರುವ ರಾಜ್ಯ ವಿಧಾನಸಭಾ ಚುನಾವಣೆಗಳನ್ನು ಗೆಲ್ಲಲು ಹಲವು ವೈಫಲ್ಯಗಳ ನಡುವೆ ಮಸುಕಾಗತೊಡಗಿದ್ದ ತಮ್ಮ ಬಿಂಬವನ್ನು ದಿಢೀರನೆ ಸುಧಾರಿಸಿಕೊಳ್ಳಲು ಜನರಿಗೆ ಮತ್ತು ದೇಶಕ್ಕೆ ವೃಥಾ ತೊಂದರೆ ನೀಡಿದ ರಾಜಕೀಯ ಸ್ಟಂಟ್ ಎಂದೇ ಭಾವಿಸಬೇಕಾಗುತ್ತದೆ. ಮೋದಿಯವರಿಗೆ ಇದೆಲ್ಲ ಮಾಡುವ ರಾಜಕೀಯ

ಇಚ್ಛಾಶಕ್ತಿ ಧೈರ್ಯ ಮತ್ತು ಜಾಗ ಇದೆಯೆ? ಇತರ ಪಕ್ಷಗಳಿರಲಿ, ಸ್ವತಃ ಅವರ ಪಕ್ಷದ ಚರಿತ್ರೆಯೇ ಈ ಬಗ್ಗೆ ಆಸೆ ಹುಟ್ಟಿಸುವಂತಿಲ್ಲ. ಆದರೂ ಕಾದು ನೋಡಬಹುದು. ಇದೆಲ್ಲ ತೀರ್ಮಾನವಾಗಲು ಹೇಗೂ ತಿಂಗಳುಗಳೇ ಬೇಕಲ್ಲ!

ಅಲ್ಲಿಯವರೆಗೆ ಜನ ಟಿವಿ ಮುಂದೆ ಕೂತು ದುರುಳ ಚಿಕ್ಕರಾಯಪ್ಪ ಅಂಡ್ ಕಂಪನಿಯ ಹಿಂದೆ ಇರುವ ರಾಜಕಾರಣಿಗಳಾರು ಎಂದು ಊಹಿಸುತ್ತಾ, ಅದೇ ವೇಳೆಯಲ್ಲಿ ಇಂತಹ ಕಂಪನಿಗಳು ನಮ್ಮ ಮನ-ಮನೆಗಳಲ್ಲೇ ಇರಬಹುದೆಂಬುದನ್ನು ಮರೆಯುತ್ತಾ ಅಥವಾ ಮರೆಮಾಚಿಕೊಳ್ಳುತ್ತಾ, ನಮ್ಮ ಟಿವಿ ನಿರೂಪಕರು ಹೆಣೆಯುವ ರೋಚಕ ಕಥೆಗಳನ್ನು ಸವಿಯುತ್ತಾ, ಗೆಳೆಯರೊಂದಿಗೆ ಚರ್ಚಿಸುತ್ತಾ ಕಾಲ ಕಳೆಯಬಹುದು! ಜೈ ಹಿಂದ್!!

(ಫೇಸ್‌ಬುಕ್ ಬರಹ: ೩.೧೨.೨೦೧೬)

ರಾಯಚೂರು ಸಾಹಿತ್ಯ ಸಮ್ಮೇಳನದ ನೆಪದಲ್ಲಿ ಕೆಲವು ಟಿಪ್ಪಣಿಗಳು...

ರಾಯಚೂರಿನ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಸಮಾಪ್ತಗೊಂಡಿದೆ. ಯಾವ ಸಮ್ಮೇಳನದಲ್ಲೂ ಸೇರದಷ್ಟು ಜನ ಈ ಸಮ್ಮೇಳನದಲ್ಲಿ ಸೇರಿದ್ದರೆಂದು ಅಲ್ಲಿ ಊಟ ಮಾಡಿದ ಜನಸಂಖ್ಯೆಯ ಆಧಾರದ ಮೇಲೆ ಪತ್ರಿಕೆಗಳು ವರದಿ ಮಾಡಿವೆ. ರಾಯಚೂರು ಹಿಂದುಳಿದ ಪ್ರದೇಶಕ್ಕೆ ಸೇರಿರುವುದೂ ಮತ್ತು ಗಡಿನಾಡ ಕನ್ನಡಿಗರು ಬರಲು ಹತ್ತಿರವಾದ ಸ್ಥಳವಾಗಿರುವುದೂ ಇದಕ್ಕೆ ಒಂದು ಕಾರಣವಾಗಿರಬಹುದು. ಇಂತಹ ಜಾಗಗಳಲ್ಲಿ ದೊಡ್ಡ ಸಮಾರಂಭಗಳು ಜನರ ಹೆಚ್ಚಿನ ಗಮನ-ಕುತೂಹಲಗಳಿಗೆ ಕಾರಣವಾಗುವುದು ಸಹಜ ಮತ್ತು ಸಂತೋಷದ ಸಂಗತಿಯೂ ಹೌದು.

ಜಮಾಯಿಸಿದ ಜನಸ್ತೋಮದ ಗಾತ್ರ ಕುರಿತ ವರದಿಯ ಜೊತೆಗೇ ಪತ್ರಿಕೆಗಳು ಈ ಸಮ್ಮೇಳನದ ಗೋಷ್ಠಿಗಳ ನಿರಾಶಾದಾಯಕ ಗುಣಮಟ್ಟದ ಬಗೆಗೂ ವರದಿ ಮಾಡಿವೆ. ಪ್ರತಿದಿನ ನಮ್ಮ ಪತ್ರಿಕೆಗಳು ಈ ಗೋಷ್ಠಿಗಳ ಬಗ್ಗೆ ವಿವರವಾದ ವರದಿಗಳನ್ನು ಪ್ರಕಟಿಸುತ್ತಿದ್ದು, ಅವುಗಳಿಂದಲೇ ಈ ಸಮ್ಮೇಳನ ಗೋಷ್ಠಿಗಳ ಗುಣಮಟ್ಟದ ಬಗ್ಗೆ ಜನ ಒಂದು ನಿರ್ಧಾರಕ್ಕೆ ಬಂದಿರುತ್ತಾರೆ. ಇದನ್ನೇ, ಬಹುಶಃ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರಾದ ಕಾರಣದಿಂದ ಅಲ್ಲಿ ವೇದಿಕೆ ಏರಿದ್ದ ಹಿರಿಯ ಸಾಹಿತಿ ಚಂಪಾ, ಈ ಸಮ್ಮೇಳನಕ್ಕೆ ಹಿರಿಯ ಸಾಹಿತಿಗಳು ಬರದಿರುವ ಬಗ್ಗೆ ಪ್ರಶ್ನೆ ಎತ್ತಿ ಪರೋಕ್ಷವಾಗಿ ಸೂಚಿಸಿದ್ದಾರೆ.

ಈ ಸಾಹಿತ್ಯ ಸಮ್ಮೇಳನವೆಂಬುದು ಎಂದು ಅಖಿಲ ಭಾರತ ಎಂಬ ಅಭಿದಾನ ಪಡೆದು ತನ್ನ ಹೊಟ್ಟೆಯನ್ನು ಉಬ್ಬಿಸಿಕೊಂಡಿತೋ ಅಂದಿನಿಂದಲೇ ಅದರ ಅಜೀರ್ಣತೆಯ, ಅನಾರೋಗ್ಯದ ಲಕ್ಷಣಗಳು ಕಾಣತೊಡಗಿದವೆಂದು ನಾನು ಭಾವಿಸಿದ್ದೇನೆ. ಸಮಾನಾಂತರ ವೇದಿಕೆಗಳೆಂಬುವು ಸೃಷ್ಟಿಯಾಗಿ, ಗೋಷ್ಠಿಗಳ ಸಂಖ್ಯೆ ಹೆಚ್ಚಾಗತೊಡಗಿ, ಪ್ರತಿಯೊಂದು ಗೋಷ್ಠಿಗೂ ಉದ್ಘಾಟನೆ, ಆಶಯ ಭಾಷಣಗಳೆಂಬುವು ಸೇರಿ ಸಾಹಿತ್ಯ ಸಮ್ಮೇಳನವೆಂಬುದು ಯಾವುದೇ ಕೇಂದ್ರ ದೃಷ್ಟಿಯಿಲ್ಲದ ಎರಡು ಮೂರು ದಿನಗಳು ನಡೆಯುವ ಮಾತಿನ ಜಾತ್ರೆಯಾಗಿ ಪರಿಣಮಿಸಿದೆ ಎಂಬುದನ್ನು ಎಲ್ಲರೂ ಬಲ್ಲರು. ಈ ಸಮ್ಮೇಳನಗಳಿಗೆ ಊರು ನೋಡಿ ಅಪರೂಪಕ್ಕೆ ಒಟ್ಟಿಗೆ ಸಿಗುವ ಸಾಹಿತಿ ಮಿತ್ರರೊಡನೆ ಒಡನಾಡಲಾದರೂ ಒಂದು ವಿಹಾರ ಯಾತ್ರೆಯಂತೆ ಹೋಗುತ್ತಿದ್ದ ನನ್ನ ಸಾಹಿತಿ ಮಿತ್ರರನೇಕರು ಇತ್ತೀಚಿನ ವರ್ಷಗಳಲ್ಲಿ ಈ ಸಮ್ಮೇಳನದ ಕಡೆ ಮುಖ ಹಾಕಿ ಮಲಗುವುದನ್ನೂ ನಿಲ್ಲಿಸಿರುವುದು ಸಹಜವೇ ಆಗಿದೆ. ಇದೆಲ್ಲದರ ಪರಿಣಾಮವಾಗಿ ಕ್ರಮೇಣ ಸಾಹಿತ್ಯ ಸಮ್ಮೇಳನಕ್ಕೂ ಸಾಹಿತ್ಯ-ಸಂಸ್ಕೃತಿಗಳಿಗೂ ಸಂಬಂಧ ಕಡಿದುಹೋಗಿ ಬಹಳ ವರ್ಷಗಳೇ ಆದವು ಎಂಬ ಮಾತು ಪ್ರಚಲಿತದಲ್ಲಿದೆ.

ಈ ಸಂದರ್ಭದಲ್ಲಿ ನನ್ನ ಕಿರಿಯ ಗೆಳೆಯರೊಬ್ಬರು ಅಸಾಹಿತಿಯೊಬ್ಬರು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಸಾಹಿತ್ಯ ಸಮ್ಮೇಳನಕ್ಕೆ ನಿಜ ಸಾಹಿತಿಗಳು ಹೋಗಿ ಅದಕ್ಕೆ ಮಾನ್ಯತೆ ನೀಡುವುದು ಎಷ್ಟು ಸರಿ ಎಂಬ ಮುಜುಗರದ; ಆದರೆ ಬಹು ಪ್ರಸ್ತುತವಾದ ಪ್ರಶ್ನೆಯನ್ನು ನನಗೆ ಕೇಳಿದ್ದಾರೆ. ಅವರ ಈ ಪ್ರಶ್ನೆ ಸದರಿ ರಾಯಚೂರು ಸಮ್ಮೇಳನಕ್ಕೆ ಸಂಬಂಧಿಸಿದ್ದೋ ಅಥವಾ ಸಾರ್ವತ್ರಿಕವಾದದ್ದೋ ನನಗೆ ತಿಳಿಯದು. ಏಕೆಂದರೆ ಸಾಹಿತ್ಯ ಸಮ್ಮೇಳನಗಳಿಗೆ ಅಧ್ಯಕ್ಷರ ಆಯ್ಕೆ ರಾಜಕೀಯಗೊಂಡು (ಅಂದರೆ ಸಾಹಿತ್ಯಿಕ-ಸಾಂಸ್ಕೃತಿಕ ಮಾನದಂಡಗಳು ಅಪ್ರಸ್ತುತಗೊಂಡು) ಬಹಳ ದಿನಗಳೇ ಆಗಿವೆ. ಇದಕ್ಕೆ ಮುಖ್ಯ ಕಾರಣ, ಈ ಆಯ್ಕೆ ಮುಖ್ಯವಾಗಿ ಸಾಹಿತ್ಯ ಪರಿಷತ್ತಿನ ವಿವಿಧ ಹಂತಗಳ ಪದಾಧಿಕಾರಿಗಳ ಅಧಿಕಾರ ವ್ಯಾಪ್ತಿಗೆ ಸೇರಿದ್ದು ಈ ಪದಾಧಿಕಾರ ಸ್ಥಾನಗಳಿಗೆ ನಡೆಯುವ ಚುನಾವಣೆ ಎಲ್ಲ ಸಾಹಿತ್ಯಿಕ-ಸಾಂಸ್ಕೃತಿಕ ಮಾನ-ಮರ್ಯಾದೆಗಳನ್ನು ಕಳಚಿಕೊಂಡು ಅಪ್ಪಟ ಮಧಾರಿ ರಾಜಕಾರಣದ ಮಾರ್ಗದಲ್ಲಿ ನಡೆಯುತ್ತಾ ಅಲ್ಲಿಗೆ ಸಾಹಿತ್ಯ-ಸಂಸ್ಕೃತಿಗಳ ಗಂಧವಿಲ್ಲದ ಜನರೇ ಹೆಚ್ಚಿಗೆ ಆಯ್ಕೆಯಾಗುತ್ತಿರುವುದು. ಹಾಗಾಗಿಯೇ ಚಿದಾನಂದ ಮೂರ್ತಿ, ಜಿ.ಎಸ್. ಅಮೂರ, ಚಂಪಾ, ಗಿರಡ್ಡಿ, ಸಿದ್ಧಲಿಂಗ ಪಟ್ಟಣಶೆಟ್ಟಿ, ಜಿ.ಹೆಚ್. ನಾಯಕ, ಕೆ.ವಿ. ತಿರುಮಲೇಶ, ವೈದೇಹಿ ಮತ್ತು ದಿ. ಯಶವಂತ ಚಿತ್ತಾಲ ಮುಂತಾದ ಹಿರಿಯ ಮತ್ತು ಘನವಾದ ಸಾಹಿತ್ಯಿಕ-ಸಾಂಸ್ಕೃತಿಕ ಚಿಂತಕರನ್ನು ಮರೆತು ಇತ್ತೀಚಿನ ಹೀಚು ಪಾಚುಗಳನ್ನೆಲ್ಲ ಅಗ್ಗದ ರಾಜಕೀಯ ಕಾರಣಗಳಿಗಾಗಿ ಸಮ್ಮೇಳನಾಧ್ಯಕ್ಷತೆಗೆ ಏರಿಸಿ ಸಮ್ಮೇಳನಗಳ ಘನತೆ-ಗೌರವಗಳೇ ಕುಂದಿ, ಅವು ನುಡಿ ಜಾತ್ರೆಗಳೂ ಆಗದೆ, ದನ ಜಾತ್ರೆಗಳ ಮಾದರಿಯಲ್ಲಿ ಬರಿ ಜನಜಾತ್ರೆಗಳಂತಾಗುತ್ತಿರುವುದು. ಈ ಸಂಬಂಧವಾಗಿಯೇ ನಾನು ಈ ಹಿಂದಿನ ಸಮ್ಮೇಳನದ

ಅಧ್ಯಕ್ಷತೆಗೆ ಗೆಳೆಯ ಸಿದ್ಧಲಿಂಗಯ್ಯ ಆಯ್ಕೆಯಾದಾಗ, ಹಲವು ಪ್ರಜ್ಞೆಗಳೊಂದಿಗೆ ಸ್ವಲ್ಪ ಸಾಹಿತ್ಯಿಕ ಪ್ರಜ್ಞೆಯನ್ನೂ ಹೊಂದಿದವರೆಂದು ನಾನು ನಂಬಿದ ಅವರಾದರೂ, 'ಮೊದಲು ನಮ್ಮ ಗುರುಗಳಾದ ಚಿದಾನಂದಮೂರ್ತಿಯವರನ್ನು ಸಮ್ಮೇಳನಾಧ್ಯಕ್ಷರನ್ನಾಗಿ ಮಾಡಿ; ನಂತರ ನೋಡುವಾ!' ಎಂದು ಹೇಳಬೇಕಿತ್ತೆಂದು ಹಿಂದೊಮ್ಮೆ ಬರೆದಿದ್ದುದು. ಆದರೆ ಸಿದ್ಧಲಿಂಗಯ್ಯ ನನ್ನ ನಿರೀಕ್ಷೆಗೆ ವಿರುದ್ಧವಾಗಿ ತಮ್ಮ ಅವಕಾಶವಾದಿ ಪ್ರಜ್ಞೆಯನ್ನಷ್ಟೇ ಮೆರೆದರು! ಈ ಪರಂಪರೆ ಇದೀಗ ಮುಂದುವರೆದಿದೆಯಷ್ಟೆ!

ಪ್ರಶ್ನೆ ಕೇಳಿದ ನನ್ನ ಕಿರಿಯ ಗೆಳೆಯರಿಗೆ ಸಾಹಿತಿ-ಅಸಾಹಿತಿ ಎಂಬ ವಿಂಗಡಣೆಗಿಂತ ಕೆಟ್ಟ ಸಾಹಿತಿ-ಒಳ್ಳೆಯ ಸಾಹಿತಿ ಎಂಬ ವಿಂಗಡಣೆ ಹೆಚ್ಚು ಉಚಿತ ಮತ್ತು ಸಾಹಿತ್ಯಾಭಿರುಚಿಯ ದೃಷ್ಟಿಯಿಂದ ಸೂಕ್ತವಾದ ವಿಂಗಡಣೆಯಾದೀತೆಂದು ಹೇಳಿದೆ. ಆದರೆ ದುರಂತವೆಂದರೆ ಇಂದು ಒಳ್ಳೆಯ ಸಾಹಿತ್ಯವಾವುದು, ಕೆಟ್ಟ ಸಾಹಿತ್ಯವಾವುದು ಎಂಬುದರ ಗಡಿಗೆರೆಗಳೇ ಅಸ್ಪಷ್ಟವಾಗಿವೆ. ಇದಕ್ಕೆ ಮುಖ್ಯ ಕಾರಣ, ಸಾಹಿತ್ಯದ ಅಭಿರುಚಿಯ ಗುಣಮಟ್ಟವನ್ನು ಕಾಪಾಡಬಲ್ಲ ಸಾಹಿತ್ಯ ವಿಮರ್ಶೆಯೆಂಬುದೇ ಸಾಹಿತ್ಯೇತರ ಕಾರಣಗಳಿಂದಾಗಿ ರಾಜಕೀಯೀಕರಣಕ್ಕೊಳಪಟ್ಟಿದೆ. ಬಂಡಾಯ ಸಾಹಿತ್ಯವೆಂಬುದು ಆರಂಭವಾದ ನಂತರ ಸಾಹಿತ್ಯ ವಿಮರ್ಶೆಯ ಪರಿಭಾಷೆಯಲ್ಲಿ ಸಾಮಾಜಿಕ ನ್ಯಾಯ, ಲಿಂಗ ನ್ಯಾಯ, ಪ್ರಾದೇಶಿಕ ನ್ಯಾಯ ಮುಂತಾದ ರಾಜಕೀಯ ಪಾರಿಭಾಷಿಕಗಳೇ ಹೆಚ್ಚು ಚಲಾವಣೆಗೆ ಬಂದಿವೆ ಮತ್ತು ಅವು ಹೆಚ್ಚು ಆಕ್ರಮಣಶೀಲವೂ ಆಗಿಬಿಟ್ಟಿವೆ. ಕಾಗೆಯ ದನಿಯೇ ಹೆಚ್ಚು ಮಧುರವಾಗಿದ್ದರೂ, ಕೋಗಿಲೆಯ ಧ್ವನಿಯೇ ಹೆಚ್ಚು ಮಧುರವೆನ್ನಿಸಿಕೊಂಡಿರಲು ಕಾರಣವೆಂದರೆ, ಕಾಗೆಗೆ ಹೆಚ್ಚು ಜನಬೆಂಬಲವಿಲ್ಲದಂತೆ ಮಾಡಿರುವ ವಿಮರ್ಶೆಯ ರಾಜಕಾರಣ ಎಂಬ ವಾದ ಮಂಡಿಸುವ ಮೂಲಕ ಸಾಹಿತ್ಯ ವಿಮರ್ಶೆಯ ಮರು ಮೌಲ್ಯಮಾಪನಕ್ಕೆ ಕರೆಕೊಡುವ ಸಾಹಿತ್ಯಕ ನಾಯಕರ ಭಾಷಣ-ಘೋಷಣೆಗಳನ್ನು ತಡೆಯುವವರೇ ಇಲ್ಲದಂತಹ ದುಃಸ್ಥಿತಿ ಒಂದು ಕಾಲದಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿಗಳಿಗೆ ಒದಗಿ ಬಂತು. ವೈಯಕ್ತಿಕ ಪ್ರಭಾವದ ಗುಂಪು ನಿರ್ಮಾಣದ ಒತ್ತಾಸೆಯಿಂದಲೋ ಅಥವಾ ಸಮಕಾಲೀನ ಸಾಹಿತ್ಯ ಸ್ಪರ್ಧೆಯಲ್ಲಿ ಹಿಂದುಳಿದು ಹೋಗುವ ಆತಂಕದಲ್ಲಿಯೋ ಅಥವಾ ಸದ್ಯದ ಲಾಭಗಳ ಎದುರು ದೂರದ ಆಘಾತಗಳ ಬಗೆಗಿನ ಅಂದಾಜು ಇಲ್ಲದೆಯೋ ಒಂದಲ್ಲ ಒಂದು ಕಾರಣಕ್ಕೆ ಪ್ರತ್ಯಕ್ಷವಾಗಿಯೋ ಅಥವಾ ಪರೋಕ್ಷವಾಗಿಯೋ ಕನ್ನಡ ಸಾಹಿತ್ಯದ ಇಂತಹ ದುಃಸ್ಥಿತಿಗೆ ಕಾರಣರಾದವರಲ್ಲಿ ಡಿ.ಆರ್. ನಾಗರಾಜ, ದೇವನೂರ ಮಹಾದೇವ, ಚಂಪಾರಂತವರೂ ಸೇರಿದ್ದುದು ಸತ್ಯ.

ಇವರೆಲ್ಲ ಬಂಡಾಯ ಸಾಹಿತ್ಯ ಎಂಬ ಕಲ್ಪನೆ ಮೂಲತಃ ಹುಟ್ಟಿದ್ದು ರಾಜಕೀಯ ಪಕ್ಷವೊಂದರ ಹೊಸ ನಾಯಕನೊಬ್ಬನ ಪಕ್ಷ ಸಂಘಟನೆಯ ಹೊಸ ಹುರುಪಿನ ಭಾಗವಾಗಿಯೇ ಹೊರತು ಅಂದಿನ ಕನ್ನಡ ಸಾಹಿತ್ಯ ಪರಿಸ್ಥಿತಿಯ ಅನಿವಾರ್ಯತೆಯಲ್ಲಿ ಅಲ್ಲ ಎಂಬ ಸಂಗತಿ ಗೊತ್ತಿದ್ದೂ ತಾವು ಕ್ರಿಯಾಶೀಲರಾಗಿದ್ದ ಅರೆ ರಾಜಕೀಯ ಸಂಘಟನೆಗಳ

ವ್ಯಾಮೋಹದಲ್ಲಿ ಇದನ್ನು ಬೇಕೆಂತಲೇ ಮರೆತರು. ಹಾಗಾಗಿಯೇ ಡಿ.ಆರ್. 'ಖಡ್ಗವಾಗಲಿ ಕಾವ್ಯ' ಎಂಬ ರಾಜಕೀಯ ತುದಿಯ ಘೋಷಣೆ ತಯಾರಿಸಿಕೊಟ್ಟು ಎಳೆಯರನ್ನು ಪ್ರಚೋದಿಸಿದರು. ದೇಮ, ಅಮಾಯಕರಂತೆ , 'ನಾವು ಬಂಡೆಯ ಮೇಲೆ ಚಿಗುರಬೇಕಾಗಿದೆ' ಎಂಬ ಬಹುಶಃ ತಾವೇ ನಂಬದ ಮಾತುಗಳನ್ನಾಡಿ ಕೃತಕ ದುರಂತದ ವಾತಾವರಣವನ್ನು ಸೃಷ್ಟಿಸಿದರು. ಚಂಪಾ ಬಹುಶಃ ತಮ್ಮ ಬ್ರಾಹ್ಮಣ ವಿರೋಧವನ್ನೆಲ್ಲ-ವಿಶೇಷವಾಗಿ ಅನಂತಮೂರ್ತಿ ವಿರೋಧ ರೂಪದಲ್ಲಿ ಕಾಣಿಸಿಕೊಂಡದ್ದನ್ನು- ಇಲ್ಲಿ ಯಾವುದೇ ಎಗ್ಗಿಲ್ಲದೆ ಎರಚಾಡಬಹುದು ಎಂದು ಭಾವಿಸಿದರೋ ಏನೋ! ನಂತರ ಇವರೆಲ್ಲ ಈ ಬಗ್ಗೆ ಕೈ ಕೈ ಹಿಸುಕಿಸಿಕೊಳ್ಳುವ ಹೊತ್ತಿಗೆ ಕಾಲ ಮಿಂಚಿತ್ತು. ಕನ್ನಡ ಸಾಹಿತ್ಯ ವನದಲ್ಲಿ ಕಾಗೆಗಳ ಕಾಕಾಕಾರವೇ ಕಿವಿಗಡಚಿಕ್ಕುವಂತೆ ತುಂಬಿಹೋಗಿತ್ತು! ಕೋಗಿಲೆಗಳ ಧ್ವನಿ ಕ್ಷೀಣವಾಗಿತ್ತು. ಆದರೆ ಕೋಗಿಲೆ ಹಾಡಲೇಬೇಕಲ್ಲ. ಅವು ಹಾಡುತ್ತಲೇ ಇವೆ. ಆದರೆ ಸಾಮಾಜಿಕ ನ್ಯಾಯ, ಲಿಂಗ ನ್ಯಾಯ ಇತ್ಯಾದಿ ರಾಜಕೀಯ ಕೃಪಾಪೋಷಿತ ಕಾಗೆಗಳ ಕಾಕಾಕಾರಗಳ ಮಧ್ಯೆ ಕೇಳದೇ ಹೋಗುವ ಆತಂಕ-ಅನುಮಾನಗಳಲ್ಲಿ. ರಾಯಚೂರು ಸಾಹಿತ್ಯ ಸಮ್ಮೇಳನ ಇದಕ್ಕೊಂದು ಪ್ರಾತ್ಯಕ್ಷಿಕೆಯಾಗಿ ಪರಿಣಮಿಸಿದ್ದರೆ ಆಶ್ಚರ್ಯವಿಲ್ಲ.

ಸುಮಾರು ನಲವತ್ತೆಂಟು ವರ್ಷಗಳ ಹಿಂದೆ ಪ್ರಥಮ ಬಂಡಾಯ ಸಾಹಿತ್ಯ ಸಮ್ಮೇಳನವನ್ನು ವಿರೋಧಿಸಿದವರಲ್ಲಿ ನಾನೂ ಒಬ್ಬ. ಸಾಹಿತ್ಯವನ್ನು ರಾಜಕೀಯ ಗೂಟಕ್ಕೆ ಕಟ್ಟಿಹಾಕಿದ ಕಾವಲು ನಾಯಿಯನ್ನಾಗಿ ಮಾಡುವುದು ಬೇಡವೆಂದವನು ನಾನು. ಸಾಹಿತ್ಯವೆಂದೂ ಸಂಸ್ಕೃತಿಯ ಮಥನದಲ್ಲಿ ಸೃಷ್ಟಿಯಾಗುವ ಬೆಣ್ಣೆ. ಈ ಮಥನದಲ್ಲಿ ರಾಜಕೀಯ (ಅಂದರೆ ಹೊರಗಿನ) ಹಸ್ತಕ್ಷೇಪ ಬೇಡವೆನ್ನುವುದು ನನ್ನ ವಾದವಾಗಿತ್ತು. ಸಾಹಿತ್ಯದ ಸ್ವಾಯತ್ತತೆ ಒಮ್ಮೆ ಕಳೆದು ಹೋಯಿತೆಂದರೆ, ರಾಜಕೀಯ-ಸಾಮಾಜಿಕ ಕಷ್ಟಕಾಲದಲ್ಲಿ ಜನರಿಗೆ ವಿಶ್ವಾಸಾರ್ಹ ಸ್ಫೂರ್ತಿಯ ಸೆಲೆಗಳೇ ಇಲ್ಲವಾಗುತ್ತವೆ ಎಂಬುದು ನನ್ನ ವಿವರಣೆಯಾಗಿತ್ತು. ಆದರೆ ನನ್ನ ಸಾಹಿತ್ಯ ಗೆಳೆಯರ ನಡುವೆ ನನ್ನದು ಒಂಟಿ ದನಿಯಾಗಿತ್ತು. ಬಹಳಷ್ಟು ಜನ ಬಂಡಾಯಿಗಳ ಬಾಯಿ ಎದುರಿಸಲಾರದೆ ಮನೆ ಸೇರಿಕೊಂಡರು ಇಲ್ಲವೇ ಸಮಯ ಕಾಯ್ದರು. ಕೆಲವರು ಕಾದು ಸುಸ್ತಾಗಿ ಹೋಗಿ ಅಲ್ಲಲ್ಲಿ ಆಗಾಗ ಬಂಡಾಯ ಸಮ್ಮೇಳನಗಳಲ್ಲಿ ಬಂಡಾಯದ ಬಣ್ಣ ಹಚ್ಚಿಕೊಂಡು ಕುಣಿಯತೊಡಗಿದರು. ಈ ವಿಷಯವಾಗಿ ನನ್ನ ನಿಲುವು ಸರಿ ಎಂಬುದನ್ನು ಲಂಕೇಶ್, ಅನಂತಮೂರ್ತಿ ಮತ್ತು ತೇಜಸ್ವಿಯವರಂತಹ ಹಿರಿಯ ಸಾಹಿತಿಗಳು ಬಂಡಾಯ ಸಾಹಿತ್ಯವೆಂಬುದನ್ನು ಮೂಸಿಯೂ ನೋಡದೆ ದೂರ ಉಳಿದು ಪುಷ್ಟೀಕರಿಸಿದ್ದು ನನ್ನ ಭಾಗ್ಯವೆಂದೇ ಹೇಳಬೇಕು!

ಇದೆಲ್ಲದರ ಫಲವೇ ಸಾಹಿತ್ಯ ಸಮ್ಮೇಳನವೆಂಬುದು ಕ್ರಮೇಣ ಸಾಹಿತ್ಯದಿಂದ ದೂರ ಸರಿದು ಹೆಚ್ಚೆಚ್ಚು ಸಾಹಿತ್ಯೇತರ ಅಥವಾ ರಾಜಕೀಯ ವಿಷಯಗಳ ಚರ್ಚೆಗಳ ವೇದಿಕೆಯಾಗತೊಡಗಿದ್ದು. ಇದರಿಂದಾಗಿ ವರ್ಷಕ್ಕೊಮ್ಮೆ ಕನ್ನಡದ ಜನ ಕನ್ನಡದ

ಕೆಲವಾದರೂ ಅತ್ಯುತ್ತಮ ಮನಸ್ಸುಗಳ ಆಳದ ಧ್ವನಿಗಳನ್ನು ಅವುಗಳ ವೈವಿಧ್ಯಮಯ ರೂಪ-ಲಯಗಳಲ್ಲಿ ಕೇಳಿ ಆನಂದಪಟ್ಟು ತಮ್ಮ ಮನಸ್ಸುಗಳನ್ನು ಸಂಪನ್ನಗೊಳಿಸಿಕೊಳ್ಳುವ ಅವಕಾಶಗಳೇ ಕಡಿಮೆಯಾಗತೊಡಗಿವೆ. ಹಾಗೆಂದ ಮಾತ್ರಕ್ಕೆ ಸಾಹಿತ್ಯ ಸಮ್ಮೇಳನದಲ್ಲಿ ಸಾಹಿತ್ಯೇತರ ವಿಷಯಗಳು ಚರ್ಚೆಯಾಗಲೇಬಾರದೆಂದಲ್ಲ. ಏಕೆಂದರೆ, ಸಾಹಿತ್ಯ ಪರಿಷತ್ತು ಆರಂಭವಾದದ್ದೇ ನಿರ್ದಿಷ್ಟವಾಗಿ ಸಾಹಿತ್ಯೋದ್ದೇಶಗಳಿಂದೇನಲ್ಲ. ಕರ್ನಾಟಕ ಏಕೀಕರಣ ಪ್ರಕ್ರಿಯೆಯ ಭಾಗವಾಗಿ; ಕನ್ನಡ ನಾಡು-ನುಡಿಗಳ ಸರ್ವಾಂಗೀಣ ಕಲ್ಯಾಣದ ದೃಷ್ಟಿಯಿಂದ. ಆದರೆ ಈ ಸಂಸ್ಥೆಯ ಮೂಲಕ ಇದೆಲ್ಲ ನಡೆಯಬೇಕಾದದ್ದು, ಕನ್ನಡ ಪ್ರಜ್ಞೆಯ ಕೇಂದ್ರವಾಗಿರಬಲ್ಲ ಸಾಹಿತ್ಯ ಪ್ರಜ್ಞೆಯ ಪರಿಧಿಯಲ್ಲಿ; ಅಂದರೆ ಅಲ್ಲಿ ಏನೇ ಚರ್ಚೆಯಾದರೂ ಅದಕ್ಕೊಂದು ಸಾಹಿತ್ಯಿಕ-ಸಾಂಸ್ಕೃತಿಕ ಪರಿಪ್ರೇಕ್ಷ್ಯವಿರಬೇಕು. ಕನ್ನಡ ಸಾಹಿತ್ಯ-ಸಂಸ್ಕೃತಿಗಳ ಗಂಧವಿರುವವರಿಗೆ ಮಾತ್ರ ಅಲ್ಲಿ ಅವಕಾಶವಿರಬೇಕು. ಆದರೆ ಇಂತಹ ದನಿಗಳ ಗಲಾಟೆ ಸಮ್ಮೇಳನದ ಸಾಹಿತ್ಯ ಚರ್ಚೆಗಳ ದೃಷ್ಟಿಕೇಂದ್ರವನ್ನು ವಿಚಲಿತಗೊಳ್ಳುವಷ್ಟು ಅತಿಯಾಗಬಾರದು. ಆದರೆ, ಇಂದು ಸಮ್ಮೇಳನಗಳ ಸಾಹಿತ್ಯೇತರವೆಂದು ಕರೆಯಬಹುದಾದ ಗೋಷ್ಠಿಗಳ ಗಡಿಗೆರೆಗಳು ಅಸ್ತವ್ಯಸ್ತವಾಗುತ್ತಾ, ಭೂಮಿಯ ಮೇಲಿನ ಎಲ್ಲ ವಿಷಯಗಳೂ ಚರ್ಚಿತವಾಗತೊಡಗಿ, ಅದೊಂದು ಸರ್ಕಾರಿ ಪ್ರಾಯೋಜಿತ ಎಲ್ಲರಿಗೂ ಎಲ್ಲವೂ ಆಗಲು ಹೋಗಿ ಯಾರಿಗೂ ಏನೂ ಆಗದ ಚರ್ವಿತ ಚರ್ವಣ ಜನಜಾತ್ರೆಯಂತಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಅಪ್ಪಟ ಸಾಹಿತ್ಯ ಕಾರ್ಯಕ್ರಮವಾಗಿರಬೇಕಿದ್ದ ಕವಿಗೋಷ್ಠಿಗಳು ಇಂದು ಏನಾಗಿವೆ, ಯಾವ ಮಟ್ಟ ತಲುಪಿವೆ ನೋಡಿ!

ಇಂದು ರಾಯಚೂರಿನಲ್ಲಿ ಕಾಗೆಗಳದ್ದೇ ರಾಜ್ಯಭಾರ ಎಂದು ಗೊತ್ತಿದ್ದೂ ಕೆಲವು ಕೋಗಿಲೆಗಳೂ ಅಲ್ಲಿ ಹೋಗಿ ಕೂಗಿದ್ದರೆ ಅದಕ್ಕೇನು ಕಾರಣವಿರಬಹುದು? ಇದಕ್ಕೆ ಮುಖ್ಯ ಕಾರಣ ಬಹುತೇಕ ಕನ್ನಡ ಸಾಹಿತಿಗಳ ಪ್ರದರ್ಶನೀಯತೆಯ ಮೋಹ ಅವರ ಮತ್ತು ಸಾಹಿತ್ಯದ ಮಾನ ಮರ್ಯಾದೆಗಳ ಪ್ರಜ್ಞೆಯನ್ನೂ ಮೀರಿ ಬೆಳೆದಿರುವುದು. ಕನ್ನಡ ಸಾಹಿತ್ಯ ಪರಿಷತ್ತನ್ನು ಬಹಿಷ್ಕರಿಸಿ ಎಂದು ಕರೆ ಕೊಟ್ಟಿದ್ದ ಗೋಪಾಲಕೃಷ್ಣ ಅಡಿಗರಂತಹ ಶೀಲ ಶಿರೋಮಣಿ ಅಡಿಗರೇ ಹಂಪನಾ ಒಂದು ಕಣ್ಣೊಡೆದೊಡನೆ ಧರ್ಮಸ್ಥಳದಲ್ಲಿ ಸಮ್ಮೇಳನದ ಪೀಠ ಏರಲಿಲ್ಲವೆ? ಹಾಗೇ ಸಾಹಿತ್ಯ ಪರಿಷತ್ತನ್ನು ವಿರೋಧಿಸುವ ಪ್ರತಿಜ್ಞೆಗೈದು ಸ್ಥಾಪಿತವಾದ ಬಂಡಾಯ ಸಾಹಿತ್ಯ ಸಂಘಟನೆಯ ವೀರ ನಾಯಕವರೇಣ್ಯರು ಈಗ ಎಲ್ಲೆಲ್ಲಿ ಯಾವ ಪೀಠಗಳನ್ನಲಂಕರಿಸಿದ್ದಾರೆ ಎಂಬುದು ಎಲ್ಲರಿಗೂ ಕಾಣುತ್ತಿದೆ. ಇವಕ್ಕೆಲ್ಲ ಅವರಲ್ಲಿ ಸೂಕ್ತ ಸಮರುಘಾಯಿಷಿಗಳಿವೆ. ಏಕೆಂದರೆ ಸಾಹಿತ್ಯ ಎಂಬುದೀಗ ಸಕಲ ಕಲಾ ವಲ್ಲಭರ ಆಡೊಂಬಲವಾಗಿದೆ!

ಹಾಗಾಗಿಯೇ ಕನ್ನಡ ಸಾಹಿತ್ಯವೆಂಬುದೀಗ ಯಾವುದೇ ಘನತರವಾದ ಮೌಲ್ಯಾನ್ವೇಷಣೆಗೆ ತೊಡಗುವ ಅಂತರ್ಮುಖೀಯತೆಯನ್ನು ಕಳೆದುಕೊಂಡು ಜನಪರತೆ-ಜೀವಪರತೆಗಳೆಂಬ ಹುಸಿ ಘೋಷಣೆಗಳ ಅಡಿಯಲ್ಲಿ ನಡೆಯುವ ಲೌಕಿಕ ಲಾಭದಾಸೆಗಳ ಗುಂಪುಗಾರಿಕೆಯ

ಬರ್ಹಿಮುಖಿ ಚಟುವಟಿಕೆಯಾಗಿದೆ. ಸಾಹಿತ್ಯದ ಒರತೆಯಲ್ಲಿ ಚಿಮ್ಮುವ ನಿಜ ಸಂತೋಷ ಮಾಯವಾಗಿದೆ. ಹಾಗಾಗಿಯೇ ಯಾವುದೇ ಸಾಹಿತ್ಯ ಸಮ್ಮೇಳನಕ್ಕೆ ಹೋಗಬೇಕೋ ಬೇಡವೋ ಎಂಬ ಪ್ರಶ್ನೆ ಅಮುಖ್ಯವಾಗಿದೆ. ನಮ್ಮ ಪರಿಸರವನ್ನು ನಮ್ಮ ಬೇಜವಾಬ್ದಾರಿ ಜೀವನ ಶೈಲಿಗಳಿಂದ ಮಲಿನಗೊಳಿಸುತ್ತಿರುವವರೂ, ಪರಿಸರ ಮಲಿನವಾಯಿತೆಂದು ಕೂಗುತ್ತಾ ಹಾರಾಡುವವರೂ ಒಂದೇ ಜನ ಎಂಬ ವಾಸ್ತವದ ಈ ದಿನಗಳಲ್ಲಿ ಸಾಹಿತ್ಯದ ಮಾಲಿನ್ಯದ ಪ್ರಶ್ನೆ ಬಗ್ಗೆ ಚಿಂತಿಸುವವರು ಮೂರ್ಖರಷ್ಟೆ!

ಹಾಗಾದರೆ, ಸಾಹಿತ್ಯ ಸಮ್ಮೇಳನಗಳನ್ನು ಸಾಹಿತಿಗಳು ಬಹಿಷ್ಕರಿಸಿಬಿಡಬೇಕೆ? ಅದು ಅನಗತ್ಯ. ಸಾಹಿತ್ಯ ಪರಿಷತ್ತು ಜನರ ಸಂಸ್ಥೆ; ಜನರ ಹಣದಿಂದ ನಡೆಯುತ್ತಿರುವ ಸಂಸ್ಥೆ. ಅದರ ಸಮ್ಮೇಳನಗಳೂ ಅಷ್ಟೆ. ಆದುದರಿಂದ ಅದು ಹಾದಿ ತಪ್ಪಿದಾಗ ನಿರ್ದಾಕ್ಷಿಣ್ಯವಾಗಿ ಅದರ ವಿರುದ್ಧ ದನಿ ಎತ್ತಬೇಕು. ಆ ಮೂಲಕ ನಮ್ಮ ಆತ್ಮಸಾಕ್ಷಿಯನ್ನು ಸ್ವಚ್ಛವಾಗಿಟ್ಟುಕೊಂಡು, ನಮಗೆ ಒಪ್ಪಿಗೆಯಾದ ಸಂದರ್ಭ ಬಂದಾಗ ಅದರಲ್ಲಿ ಭಾಗವಹಿಸಬಹುದಾಗಿದೆ. ಆಯ್ಕೆ ಆತ್ಮಸಾಕ್ಷಿಯದ್ದಾಗಿರಬೇಕು. (ಅಂತಹ ಆಯ್ಕೆಯಲ್ಲೇ ರಾಯಚೂರಿಗೆ ಹೋಗಿದ್ದಾಗಿ ಕೆಲವರು ಹೇಳಿದರೆ ಆಶ್ಚರ್ಯವೇನೂ ಇಲ್ಲ!) ಹಾಗಾಗಲು ಸಾಹಿತ್ಯ ರಾಜಕೀಯ ದಾಕ್ಷಿಣ್ಯಪರತೆಯಿಂದ ದೂರ ಸರಿಯಬೇಕು. ಕನ್ನಡ ಸಾಹಿತ್ಯ ತನ್ನ ಸಾಹಿತ್ಯ ಸ್ವಾಯತ್ತತೆಯನ್ನು ಮರಳಿ ಪಡೆಯುವಂತಾಗಬೇಕು. ಅದನ್ನು ಗುರುತಿಸುವ ಸಾಹಿತ್ಯ ವಿಮರ್ಶೆ ಬೆಳೆಯಬೇಕು.

ಹಾಗಾಗಿ ರಾಯಚೂರು ಸಮ್ಮೇಳನದ ಬಗ್ಗೆ ನನ್ನ ಕಿರಿಯ ಸ್ನೇಹಿತ ಕೇಳಿದ ಪ್ರಶ್ನೆಗೆ ನನ್ನ ಉತ್ತರ ಇದಾಗಿತ್ತು: ನಿನ್ನ ಪ್ರಶ್ನೆಗೆ ಇದು ಸಕಾಲವಲ್ಲ! (ಕೊನೆಯ ಟಿಪ್ಪಣಿ: ಈ ಬರಹದಲ್ಲಿನ ಕಾಗೆ–ಕೋಗಿಲೆಗಳ ರೂಪಕವನ್ನು ಅತಿಗೆ ಕೊಂಡೊಯ್ದು, ಈ ಲೇಖಕ ನಮ್ಮ ಜೀವ ಜಗತ್ತಿನ ಅನನ್ಯ ಪಕ್ಷಿಗಳಲ್ಲೊಂದಾದ ಕಾಗೆಗಳ ಸಂತತಿಯ ನಾಶಕ್ಕೆ ಹೊರಟಿದ್ದಾನೆ ಎಂಬ 'ಬಂಡಾಯ ವಿಮರ್ಶೆ'ಯನ್ನು ಮಾಡಬಾರದಾಗಿ ವಿನಂತಿ. ಈ ರೂಪಕ, ಅವುಗಳ ಧ್ವನಿ ಕುರಿತ ಚರ್ಚೆಗೆ ಮಾತ್ರ ಸೀಮಿತ!!)

(ಫೇಸ್‌ಬುಕ್ ಬರಹ : ೫.೧೨.೨೦೧೬)

ಖಾದಿ ಮತ್ತು ಮೋದಿ

ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಹೊರತಂದಿರುವ 2017ರ ಡೈರಿ ಮತ್ತು ಕ್ಯಾಲೆಂಡರುಗಳ ಮೇಲೆ ಚರಕದ ಹಿಂದೆ ಮೋದಿ ಚಿತ್ರವನ್ನು ಛಾಪಿಸಲಾಗಿದೆ. ಈ ಸುದ್ದಿ ರಾಷ್ಟ್ರ ಮಟ್ಟದಲ್ಲಿ ಗಾಂಧಿ ಮತ್ತು ಗಾಂಧಿ ದರ್ಶನ ಕುರಿತು ಗೌರವ ಇರುವವರ ವಲಯಗಳಲ್ಲಿ ತೀವ್ರ ಅಸಮಧಾನ, ಪ್ರತಿಭಟನೆ ಮತ್ತು ಚರ್ಚೆಗಳಿಗೆ ಕಾರಣವಾಗಿದೆ.

ಆದರೆ ಇವಾವುವೂ ಆ ಕ್ಯಾಲೆಂಡರ್ ಮತ್ತು ಡೈರಿಗಳನ್ನು ಸರ್ಕಾರ ಹಿಂತೆಗೆದುಕೊಳ್ಳುವಂತೆ ಮಾಡುವುದಿರಲಿ, ಸರ್ಕಾರದ ಕಡೆಯಿಂದ ಈ ಬಗ್ಗೆ ಒಂದು ಹೇಳಿಕೆಯನ್ನೂ ಹೊಮ್ಮಿಸದಾಗಿದೆ. ಇದು ನಿಜವಾಗಿಯೂ ಸಮಕಾಲೀನ ರಾಷ್ಟ್ರಜೀವನದ ಒಂದು ಆಘಾತಕಾರಿ ಬೆಳವಣಿಗೆಯಾಗಿದೆ. ಏಕೆಂದರೆ, ಇದು ಆಧುನಿಕ ಕಾಲದ ಭಾರತ ಇತಿಹಾಸವನ್ನೇ ವಿಕೃತಗೊಳಿಸುವ ಒಂದು ನಿರ್ಣಾಯಕ ಪ್ರಯತ್ನವಾಗಿದೆ. ರಾಷ್ಟ್ರಪಿತನ ವ್ಯಕ್ತಿತ್ವಕ್ಕೆ ಮಾಡಿದ ಅಪಚಾರವೂ ಆಗಿದೆ.

ಈ ಚಿತ್ರದ ಸಮರ್ಥಕರು, ಖಾದಿ ಉತ್ಪನ್ನಗಳ ವ್ಯಾಪಾರ ಕಳೆದೆರಡು ವರ್ಷಗಳಲ್ಲಿ ಏರಿಕೆ ಕಂಡಿದ್ದು, ಈ ಮೋದಿ ಮುದ್ರೆ (Brand)ಯಿಂದ ಅದು ಮತ್ತಷ್ಟು ಹೆಚ್ಚಾಗಲಿದೆ ಎಂದು ವಾದಿಸುತ್ತಿದ್ದಾರೆ. ಆದರೆ ಗಾಂಧೀಜಿಗೆ ಚರಕ ಎಂಬುದು ಒಂದು ನೂಲುವ (ಉತ್ಪಾದನಾ) ಸಾಧನ ಮಾತ್ರವಾಗಿರಲಿಲ್ಲ. ಅದಕ್ಕೆ ನಮ್ಮ ರಾಷ್ಟ್ರೀಯ ಹೋರಾಟದ ಚರಿತ್ರೆಯ ನೆನಪುಗಳ ಹಿನ್ನೆಲೆಯಿಯಿದ್ದು, ಗಾಂಧಿ ದರ್ಶನದಲ್ಲಿ ಅದು ಸರಳ ಸಭ್ಯ ಜೀವನವನ್ನು ಪ್ರತಿಪಾದಿಸುವ ಮೌಲ್ಯಗಳಾದ ಸ್ವದೇಶಿ, ಸ್ವಾವಲಂಬನೆ, ಶ್ರಮಜೀವನ, ಮಹಿಳಾ ಸಬಲೀಕರಣ, ವಿಕೇಂದ್ರೀಕರಣ ಮತ್ತು ಗ್ರಾಮ ಸ್ವರಾಜ್ಯದ ಪ್ರತೀಕವೂ ಆಗಿ ಜನಮನದಲ್ಲಿ ಸ್ಥಾಪಿಸಲ್ಪಟ್ಟಿದೆ.

ಆದರೆ ಮೋದಿಯವರು ದೇಶದ ಅತ್ಯಂತ ಶ್ರೇಷ್ಠ ವಸ್ತ್ರ ವಿನ್ಯಾಸಕಾರರಿಂದ ತಮ್ಮ ವಸ್ತ್ರಗಳನ್ನು ತಯಾರಿಸಿಕೊಂಡು ಉಡುವ ಮತ್ತು ವಿದೇಶಿ ಯಾತ್ರೆಗಾಗಿ ಅತ್ಯಂತ ದುಬಾರಿ ಸೂಟ್ ಹೊಲೆಸಿ ಧರಿಸಲಿಚ್ಛಿಸುವ ಸೊಗಸುಗಾರ ವ್ಯಕ್ತಿಯಾಗಿದ್ದಾರೆ. ಅಲ್ಲದೆ ಅವರ ರಾಜಕಾರಣ ಆದಷ್ಟೂ ಹೆಚ್ಚಿನ ವಿದೇಶಿ ಬಂಡವಾಳ ಆಕರ್ಷಿಸಿ ದೇಶವನ್ನು ಅತ್ಯಂತ ಹೆಚ್ಚಿನ ಮಟ್ಟದಲ್ಲಿ ಕೈಗಾರೀಕರಣಗೊಳಿಸಿ ಶ್ರೀಮಂತ ಜೀವನವನ್ನು ನಡೆಸಬಲ್ಲ ನಗರೀಕೃತ ಜನರ ಬಲಾಢ್ಯ ದೇಶವನ್ನಾಗಿ ಮಾಡುವ ಘೋಷಿತ ಉದ್ದೇಶವುಳ್ಳದ್ದಾಗಿದೆ. ಮತ್ತು ಅವರ ಸರ್ಕಾರದ ಕಳೆದೆರಡೂ ವರ್ಷಗಳ ಕಾರ್ಯಕ್ರಮಗಳೂ ಆ ದಿಕ್ಕಿನಲ್ಲೇ ನಡೆದಿವೆ. ಜೊತೆಗೆ ಇತ್ತೀಚಿನ ನೋಟು ರದ್ದತಿ ನಿರ್ಧಾರವೂ ಸೇರಿದಂತೆ ಅವರ ಸರ್ಕಾರದ ನಿರ್ಧಾರಗಳು ಅಧಿಕಾರ ಕೇಂದ್ರೀಕರಣದ ಆಡಳಿತ ಮಾದರಿಯ ಬಗ್ಗೆ ಅವರಿಗೆ ಒಲವಿರುವುದನ್ನು ತೋರಿಸುತ್ತಿವೆ. ಎಲ್ಲಕ್ಕಿಂತ ಮುಖ್ಯವಾಗಿ ಮೋದಿ ಪ್ರತಿನಿಧಿಸುವ ರಾಜಕೀಯ ಪರಂಪರೆಗೂ ನಮ್ಮ ರಾಷ್ಟ್ರೀಯ ಹೋರಾಟಕ್ಕೂ ಯಾವುದೇ ಸಂಬಂಧವಿಲ್ಲ. ಅವರ ರಾಜಕೀಯ ಪರಂಪರೆ ರಾಷ್ಟ್ರೀಯ ಹೋರಾಟದ ಮೌಲ್ಯಗಳನ್ನು ವಿರೋಧಿಸಿಕೊಂಡು ಬಂದ ಚರಿತ್ರೆಯನ್ನು ಹೊಂದಿದೆ. ಹಾಗಾಗಿಯೇ ಮೋದಿಯವರು ಪ್ರಧಾನ ಮಂತ್ರಿಯಾಗಿ ಅಧಿಕಾರ ಸ್ವೀಕರಿಸುತ್ತಿದ್ದಂತೆಯೇ ಗಾಂಧಿಯನ್ನು ಕೊಂದ ಗೋಡ್ಸೆಯ ಹುಟ್ಟುಹಬ್ಬ ಆಚರಿಸುವ, ಆತನ ಗುಡಿ ಕಟ್ಟುವ ಮಾತುಗಳು ದೇಶಾದ್ಯಂತ ಕೇಳಿಬಂದವು. ಅಂತಹ ಜನರ ಧ್ವನಿಗೆ ಬಲ ಬಂದು ಭಾರತದ ಸ್ವಾತಂತ್ರ್ಯೋತ್ತರ ಇತಿಹಾಸದಲ್ಲಿ ಅದು ಮೊದಲ

ಬಾರಿಗೆ ಬಹಿರಂಗವಾಗಿ ಅಭಿವ್ಯಕ್ತಗೊಂಡಿತು ಕೂಡ. ಆದರೆ ಇದೆಲ್ಲದಕ್ಕೆ ಇನ್ನೂ ಕಾಲ ಕೂಡಿಬಂದಿಲ್ಲವೆಂಬಂತೆ ಆ ಧ್ವನಿಗಳನ್ನು ಸದ್ದಿಲ್ಲದೆ ಸುಮ್ಮನಿರಿಸಲಾಯಿತು.

ಹೀಗಿರುವಾಗ ಮೋದಿಯವರು ಈಗ ಚರಕದ ಜೊತೆ ತಮ್ಮ ಸಂಬಂಧವನ್ನು ಸ್ಥಾಪಿಸಿಕೊಳ್ಳಹೊರಟಿರುವುದು ಅಸಹಜವೂ, ಅಸಂಬದ್ಧವೂ, ಅಪವಿತ್ರವೂ ಮತ್ತು ದುರುದ್ದೇಶಪೂರ್ವಕವೂ ಆದ ಪ್ರಯತ್ನವಾಗಿದೆ. ಒಂದೇ ಮಾತಲ್ಲಿ ಹೇಳುವುದಾದರೆ ಇದು ಪರಮ ಆತ್ಮದ್ರೋಹದ ಪ್ರಯತ್ನವೇ ಆಗಿದೆ. ಏಕೆಂದರೆ ಈವರೆಗೆ ಅವರಾಗಲೀ, ಅವರ ಪಕ್ಷವಾಗಲೀ ಗಾಂಧಿ ಮತ್ತು ಅವರ ದರ್ಶನವನ್ನು ತಾವು ತಪ್ಪಾಗಿ ಅರ್ಥೈಸಿಕೊಂಡಿದ್ದೆವು; ಆದರೆ ನಮಗೀಗ ಹಲವು ನೆಲೆಗಳಲ್ಲಿ ಗಾಂಧಿ ತತ್ವಗಳ ಅಗತ್ಯ ಕಂಡುಬಂದಿದೆ ಎಂದು ಬಹಿರಂಗವಾಗಿ ಯಾವುದೇ ಪಶ್ಚಾತ್ತಾಪವನ್ನು ದಾಖಲಿಸಿಲ್ಲ. ಬದಲಿಗೆ ಗಾಂಧಿಯನ್ನು ಕೇವಲ ಸ್ವಚ್ಛತಾ ಕಾರ್ಯಕ್ರಮದ ಪ್ರತೀಕವನ್ನಾಗಿ ಕುಬ್ಜಗೊಳಿಸಿ ಹಾಸ್ಯಾಸ್ಪದಗೊಳಿಸುವ ಪ್ರಯತ್ನವನ್ನು ಮಾಡಲಾಗಿದೆ.

ನಿಜ, ಇತ್ತೀಚಿನ ವರ್ಷಗಳಲ್ಲಿ ಖಾದಿ ಹೆಚ್ಚು ಜನಪ್ರಿಯವಾಗುತ್ತಿದೆ. ಆದರೆ ಅದು ಜನಪ್ರಿಯವಾಗುತ್ತಿರುವುದು, ಗಾಂಧಿ ಸೂತ್ರಗಳು ಮತ್ತು ಮೌಲ್ಯಗಳನ್ನು ಧಿಕ್ಕರಿಸಿ ಜಾರಿಯಾದ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣಗಳ ನೀತಿಯಿಂದ ಸೃಷ್ಟಿಯಾದ ನವಶ್ರೀಮಂತ ಸಮಾಜದ ಒಂದು ಪ್ರತಿಷ್ಠಿತ ವರ್ಗದ ವಸ್ತ್ರ ವಿನ್ಯಾಸವಾಗಿ. ಜೊತೆಗೆ ಅದರ ಪಾಲಿ(ಮಿಶ್ರ) ಆವೃತ್ತಿಯಲ್ಲಿ. ಅದು ಹೆಚ್ಚಾಗಿ ಸುಳ್ಳರ, ಕಳ್ಳರ, ಲೂಟಿಕೋರ ಖದೀಮರ ಸಮವಸ್ತ್ರವಾಗುತ್ತಿದೆ. ಮೋದಿಯವರು ಖಾದಿಯ ಪ್ರೋತ್ಸಾಹಕರಾಗಿ ಅದರ ವ್ಯಾಪಾರವನ್ನು ಹೆಚ್ಚಿಸಬಲ್ಲರಾದರೆ ಅದು ಈ ವಲಯಗಳಲ್ಲಿ ಎಂಬುದು ಮೋದಿ ಸಮರ್ಥಕರಿಗೆ ಗೊತ್ತಿದ್ದರೆ ಒಳ್ಳೆಯದು.

ಇನ್ನೊಂದು ಮಾತೂ ನಿಜ. ಅದೆಂದೆರೆ, ಮೋದಿ ಸರ್ಕಾರದ ಮುನ್ನ ಇದ್ದ; ಗಾಂಧೀಜಿಯ ದಾರ್ಶನಿಕ ವಾರಸುದಾರಿಕೆಯನ್ನು ಕೊಚ್ಚಿಕೊಳ್ಳುವ ಕಾಂಗ್ರೆಸ್ ಪಕ್ಷದ ಎರಡು–ಮೂರು ಸರ್ಕಾರಗಳೂ ಮೋದಿಯವರು ಅನುಸರಿಸುತ್ತಿರುವ ಆರ್ಥಿಕ ನೀತಿಗಳನ್ನೇ ಅನುಸರಿಸುತ್ತಿದ್ದವು. ಹಾಗೆ ನೋಡಿದರೆ ಅವೇ ಈ ದೇಶದಲ್ಲಿನ ಈ ನೀತಿಗಳ ಆದ್ಯ ಪ್ರವರ್ತಕರು ಕೂಡ. ಆದರೆ ಆ ಸರ್ಕಾರಗಳು ಎಂದೂ ಚರಕದ ಜೊತೆ ಗಾಂಧಿಯ ಜಾಗದಲ್ಲಿ ತನ್ನ ಯಾವುದೇ ರಾಜಕೀಯ ನಾಯಕರ ಚಿತ್ರವನ್ನು ಜೋಡಿಸುವ ಭಂಡ ಪ್ರಯತ್ನ ಮಾಡಲಿಲ್ಲ. ಆದರೆ ಮೋದಿ ಸರ್ಕಾರ ಈ ಪ್ರಯತ್ನ ಮಾಡುತ್ತಿರುವುದನ್ನು ನೋಡಿದರೆ, ಯಾವುದೇ ರಾಷ್ಟ್ರೀಯ ಹೋರಾಟದ ಪರಂಪರೆ ಇಲ್ಲದೆ ಬಲಿಷ್ಠ ರಾಷ್ಟ್ರೀಯತೆಯನ್ನು ಪ್ರತಿಪಾದಿಸಬೇಕಾಗಿ ಬಂದಿರುವ ತನ್ನ ದಟ್ಟ ದರಿದ್ರ ಸ್ಥಿತಿಯನ್ನು ಅದು ಸಹಿಸಿಕೊಳ್ಳಲಾಗದೆ, ಇತಿಹಾಸವನ್ನೇ ನುಂಗಿ ನೊಣೆದು ತನ್ನದೇ ಹೊಸ ಇತಿಹಾಸವನ್ನು ಬರೆಯುವ ಪ್ರಯತ್ನದಲ್ಲಿದ್ದಂತಿದೆ. ಇದು ಅತ್ಯಂತ ಅಪಾಯಕಾರಿ ನಡೆಯಾಗಿದೆ.

ಮೋದಿಯವರು ಇಂದು ಚುನಾವಣಾ ಬಹುಮತ ಪಡೆದು (ಅದೂ ಶೇ.32ರಷ್ಟು ಮಾತ್ರ) ಅಧಿಕಾರದಲ್ಲಿದ್ದಾರೆ. ಕಾನೂನಿಗೆ ವಿರುದ್ಧವಲ್ಲದ ಯಾವುದೇ ಕ್ರಮ ಕೈಗೊಳ್ಳುವ ಅಧಿಕಾರವನ್ನು ಅವರ ಸರ್ಕಾರ ಹೊಂದಿದೆ. ಇನ್ನು ನೈತಿಕತೆ ಅನ್ನವುದು ಇಂದು ತರ್ಕಶಾಸ್ತ್ರಿಗಳ ಮಾತಿನ ವೈಖರಿಗಳ ಮಧ್ಯೆ ಸಿಲುಕಿ ನುಜ್ಜುಗುಜ್ಜಾಗಿ ತನ್ನ ಜೀವವನ್ನೇ ಕಳೆದುಕೊಂಡಿದೆ. ಹೀಗಿರುವಾಗ ನಮ್ಮ ಗಾಂಧಿವಾದಿಗಳಿಗೆ ಏನಾಗಿದೆ? ವಿಶೇಷವಾಗಿ, ನಮ್ಮ ರಾಜ್ಯದ ಅಳಿದುಳಿದಿರುವ ಗಾಂಧಿವಾದಿಗಳು ಏನು ಮಾಡುತ್ತಿದ್ದಾರೆ? ಗಾಂಧಿ ಮತ್ತು ಗಾಂಧಿ ಪರಂಪರೆಗೆ ಎಸಗಲಾಗುತ್ತಿರುವ ಈ ಅಪಚಾರದ ವಿರುದ್ಧ ಅವರಿಂದ ಏಕೆ ಎಲ್ಲೂ ಯಾವ ಸೊಲ್ಲು ಕೇಳಿಬರುತ್ತಿಲ್ಲ?

ಕೆಲವು ಪತ್ರಗಳು:

೧. ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷರಿಗೊಂದು ಪತ್ರ

ದಿನಾಂಕ: ೩.೫.೨೦೧೨

ಪ್ರಿಯಶ್ರೀ ಪುಂಡಲೀಕ ಹಾಲಂಬಿ ಅವರಲ್ಲಿ,

ವಂದನೆಗಳು. ಮೊದಲಿಗೆ. ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಆಯ್ಕೆಯಾಗಿರುವುದಕ್ಕಾಗಿ ನಿಮಗೆ ನನ್ನ ಹಾರ್ದಿಕ ಅಭಿನಂದನೆಗಳು. ನಿಮ್ಮ ಸಾರಥ್ಯದಲ್ಲಿ ಪರಿಷತ್ತು ಕನ್ನಡ ನಾಡು ನುಡಿಯ ಭವಿಷ್ಯವನ್ನು ಕಾಪಾಡುವ ದಿಸೆಯಲ್ಲಿ ನಿಸ್ಪೃಹತೆಯಿಂದ ಕೆಲಸ ಮಾಡುವುದೆಂದು ಆಶಿಸುತ್ತೇನೆ. ಹಾಗೇ ಈ ದಿಸೆಯಲ್ಲಿನ ನಿಮ್ಮೆಲ್ಲ ಪ್ರಯತ್ನಗಳು ಯಶಸ್ವಿಯಾಗಲಿ ಎಂದೂ ಹಾರೈಸುವೆ.

ನೀವಿನ್ನೂ ಇದೀಗ ಅಧಿಕಾರ ವಹಿಸಿಕೊಳ್ಳುತ್ತಿರುವಿರಿ. ಆದರೆ ನೀವು ತಕ್ಷಣವೇ ಕೈಗೆತ್ತಿಕೊಳ್ಳಬೇಕಾದ ಕನ್ನಡದ ತುರ್ತು ಕೆಲಸವೊಂದಿದೆ ಎಂದು ಭಾವಿಸಿ ನಾನು ಈ ಪತ್ರ ಬರೆಯುತ್ತಿರುವೆ. ರಾಜ್ಯಾದ್ಯಂತ ಇನ್ನು ಕೆಲವೇ ದಿನಗಳಲ್ಲಿ ಶಾಲೆಗಳು ಆರಂಭವಾಗಲಿವೆ. ನಾಡು–ನುಡಿಯ ಭವಿಷ್ಯವನ್ನು ಭದ್ರಪಡಿಸುವ ಕೆಲಸ ಈ ಹಂತದಲ್ಲಿ ಆರಂಭವಾಗಬೇಕಾದ ಸ್ಥಿತಿ ಇಂದು ಕನ್ನಡಕ್ಕೆ ಒದಗಿ ಬಂದಿದೆ ಎಂಬುದನ್ನು ತಾವೂ ಬಲ್ಲಿರಿ. ನಾಡು ನುಡಿಯನ್ನು ಕಟ್ಟಬೇಕಾದ ಕನ್ನಡದ ಮಕ್ಕಳನ್ನು ಅಡಿಪಾಯದ ಹಂತದಲ್ಲೆ ಕನ್ನಡದಿಂದ ದೂರವಿರಿಸುವ ದುರ್ಬುದ್ಧಿ ಕನ್ನಡ ಜನಕ್ಕೆ ಬಂದಿದೆ. ಇದಕ್ಕೆ ಸರ್ಕಾರದ ನೀತಿ–ನಿಲುವುಗಳೂ ಕಾರಣವಾಗಿದೆ.

ಆದರೆ ಇದನ್ನೆಲ್ಲ ಬೌದ್ಧಿಕವಾಗಿ ವಿಶ್ಲೇಷಿಸುತ್ತಾ ಯಾರ ತಪ್ಪು, ಎಷ್ಟು, ಏಕೆ ಇತ್ಯಾದಿಗಳನ್ನು ತೀರ್ಮಾನಿಸುತ್ತಾ ಕೂರುವ ಕಾಲವಿದಲ್ಲ. ಹಾಗಾಗಿ ಶಿಕ್ಷಣದ ವಿಷಯದಲ್ಲಿ ಕನ್ನಡಪರ ವಾತಾವರಣ ನಿರ್ಮಾಣ ಮಾಡುವಂತಹ ಕಾರ್ಯಕ್ರಮಗಳನ್ನು ಆ ಮೂಲಕ ನಮ್ಮ

ತಂದೆತಾಯಂದಿರು ತಮ್ಮ ಮಕ್ಕಳನ್ನು ಕನ್ನಡ ಶಾಲೆಗಳಿಗೆ ಸೇರಿಸಲು ಪ್ರೇರೇಪಿಸುವ ಕೆಲಸವನ್ನು ಪರಿಷತ್ತು ಈಗ ರೂಪಿಸಿ ಕಾರ್ಯಗತ ಮಾಡುವುದು ಅದರ ತುರ್ತು ಕರ್ತವ್ಯವೇ ಆಗಿದೆ ಎಂದು ನಾನು ಭಾವಿಸುವೆ. ಏಕೆಂದರೆ, ನಮ್ಮ ಮಕ್ಕಳ ಬುದ್ಧಿ ಬೆಳವಣಿಗೆಯ ಅಡಿಪಾಯ ಕನ್ನಡದ ಮಾತೃಕೆಗಳಿಂದ ನಿರ್ಮಿತವಾಗದಿದ್ದಲ್ಲಿ ಕನ್ನಡ ನಾಡು-ನುಡಿಗಳೆಂಬುವು ಬರೀ ಬಾಯಿ ಮಾತಿನ ಬೊಗಳೆಯಾಗಿ ಉಳಿಯಬಲ್ಲುವಷ್ಟೆ. ಈ ದಿಸೆಯಲ್ಲಿ ಸಾಹಿತ್ಯ ಪರಿಷತ್ತಿನ ಇತ್ತೀಚಿನ ಒಲವು-ನಿಲುವುಗಳು ನಿರಾಶಾದಾಯಕವಾಗಿದ್ದವು ಎಂದು ವಿಷಾದದಿಂದ ಹೇಳಬೇಕಾಗಿದೆ. ನಿಮ್ಮ ನೇತೃತ್ವದಲ್ಲಾದರೂ, ಈ ತಪ್ಪು ಸರಿಯಾಗಲಿ.

ಸಾಹಿತ್ಯ ಪರಿಷತ್ತು ಶಾಲಾ ಪ್ರವೇಶಾತಿ ಆರಂಭವಾಗುವ ಮುನ್ನವೇ ಪ್ರತಿ ಊರಿನಲ್ಲಿ-ಕನಿಷ್ಟ ಹೋಬಳಿ ಮಟ್ಟದಲ್ಲಾದರೂ-ಕನ್ನಡ ಶಾಲೆಗಳ ಪರ ಪ್ರಚಾರ ಸಭೆ, ಮೊಹಲ್ಲಾ-ಬೀದಿ ಮೆರವಣಿಗೆ, ಮನೆ ಮನೆಗೆ ಭೇಟಿ, ಕರಪತ್ರ-ಭಿತ್ತಿಪತ್ರಗಳ ಆಂದೋಲನವೊಂದನ್ನು ಆರಂಭಿಸುವ ಬಗ್ಗೆ ಕೂಡಲೇ ಯೋಚಿಸಿ ಎಂದು ಕೇಳಿಕೊಳ್ಳುವೆ. ಇದಕ್ಕಾಗಿ ನೀವು, ಪ್ರಾಥಮಿಕ ಶಾಲಾ ಶಿಕ್ಷಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿವಿಧ ಅಕಾಡೆಮಿಗಳು ಮತ್ತು ಕನ್ನಡಪರ ಸಂಘಟನೆಗಳ ಸಹಕಾರವನ್ನೂ ಪಡೆಯಬಹುದು. ಈ ಆಂದೋಲನದ ಭಾಗವಾಗಿ ಪರಿಷತ್ತಿನ ನೇತೃತ್ವದಲ್ಲೇ ಶಾಲಾ ಗುಣಮಟ್ಟ ಖಾತರಿ/ನಿಗಾ ಸಮಿತಿಗಳನ್ನೂ ರಚಿಸಬಹುದು. ಈ ಆಂದೋಲನ ಕನ್ನಡ ಭಾಷೆಯ, ಕನ್ನಡದ ಮಕ್ಕಳ ಬೆಳವಣಿಗೆಯ ದೃಷ್ಟಿಯಿಂದಷ್ಟೇ ಅಲ್ಲ, ಸಾಹಿತ್ಯ ಸಮ್ಮೇಳನಗಳ ಸಂದರ್ಭದಲ್ಲಿ ಮಾತ್ರ ಜನರ ನೆನಪಿಗೆ ಬರುವಷ್ಟು ಜನದೂರವಾಗಿರುವ ಸಾಹಿತ್ಯ ಪರಿಷತ್ತನ್ನು ಜನರ ಹತ್ತಿರಕ್ಕೆ ಒಯ್ಯುವ ಪರಿಣಾಮಕಾರಿ ಕಾರ್ಯಕ್ರಮವೂ ಆದೀತು. ಕನ್ನಡ ಶಾಲೆಗಳೂ ಉಳಿದಾವು.

ನನ್ನ ಈ ಸಲಹೆಯನ್ನು ನೀವು ಅಗತ್ಯ ಸಹಾನುಭೂತಿಯಿಂದ ಪರಿಶೀಲಿಸಿ ಕಾರ್ಯಕ್ರಮ ರೂಪಿಸುವಿರಿ ಎಂದು ಆಶಿಸುವೆ. ಸವಿತಾ ನಿಮಗೆ ಅಭಿನಂದನೆ ಮತ್ತು ನಿಮ್ಮ ಪತ್ನಿಗೆ ನೆನಪು ತಿಳಿಸಿದ್ದಾಳೆ.

ವಿಶ್ವಾಸದ

ಡಿ.ಎಸ್. ನಾಗಭೂಷಣ

ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಿಗೊಂದು ಪತ್ರ

ದಿನಾಂಕ: ೨.೪.೨೦೧೪

ಪ್ರಿಯರಾದ ಶ್ರೀಮತಿ ಮಾಲತಿ ಪಟ್ಟಣಶೆಟ್ಟಿ ಅವರಲ್ಲಿ,

ವಂದನೆಗಳು. ಮೊದಲಿಗೆ, ಸಾಹಿತ್ಯ ಅಕಾಡೆಮಿಯ ಅಧ್ಯಕ್ಷತೆಯ ಅಧಿಕಾರ ವಹಿಸಿಕೊಂಡಿರುವ ನಿಮಗೆ ಮತ್ತು ನಿಮ್ಮೊಡನೆ ಅಕಾಡೆಮಿ ಸದಸ್ಯರಾಗಿ ನೇಮಕಗೊಂಡಿರುವ ಎಲ್ಲ ಸದಸ್ಯರಿಗೆ ನಮ್ಮ ಅಭಿನಂದನೆಗಳು ಮತ್ತು ಶುಭಾಶಯಗಳು.

ನಿಮ್ಮ ದಿನಾಂಕ: ೪-೩-೨೦೧೪ರ ಪತ್ರ ಸಂ: ಕ್ರಕಸಾಅ/೨೦೧೩-೧೪/೧೪೬೫ ತಲುಪಿದೆ. ನಿಮ್ಮ ಮತ್ತು ನಿಮ್ಮ ತಂಡದ ಈ ವಿಶ್ವಾಸಕ್ಕಾಗಿ ನಾವು ಕೃತಜ್ಞರು. ನೀವು ಹಾಕಿಕೊಂಡಿರುವ ಯೋಜನೆಗಳು ಸದುದ್ದೇಶದಿಂದ ಕೂಡಿದ್ದು ಅವು ಯಶಸ್ವಿಯಾಗಿ ಜಾರಿಯಾಗಲಿ ಎಂದು ಆಶಿಸುತ್ತೇವೆ. ಆದರೆ ಈ ಬಗ್ಗೆ ಒಂದು ಮಾತು: ಮಕ್ಕಳ ಮತ್ತು ಯುವ ಬರಹಗಾರರ ಸಾಹಿತ್ಯಕ್ಕೆ ಪ್ರಾಧಾನ್ಯತೆ ಕೊಡುವುದೇನೋ ಸರಿ. ಆದರೆ ಮಹಿಳಾ ಸಾಹಿತ್ಯಕ್ಕೇಕೆ? ಮಹಿಳಾ ಸಾಹಿತ್ಯ ಕುರಿತ ಚರ್ಚೆ ಸಾಕಷ್ಟು ನಡೆದಿದ್ದು ಆ ಕ್ಷೇತ್ರಕ್ಕೆ ವಿಶೇಷ ಆದ್ಯತೆ ಅವಶ್ಯಕ ಎಂದು ನಮಗೇನೂ ಅನ್ನಿಸಿಲ್ಲ.

ಇನ್ನೊಂದು ಸಲಹೆ ಎಂದರೆ ಕಾವ್ಯ, ಕಥೆ, ಪ್ರಬಂಧ ಇತ್ಯಾದಿ ವಾರ್ಷಿಕ ಸಂಪುಟಗಳು, ಅನಿಕೇತನ ಮತ್ತು ಅಕಾಡೆಮಿ ವಾರ್ತಾಪತ್ರಗಳು ಅನವಶ್ಯಕ ಖರ್ಚಿನ ಬಾಬತ್ತಾಗಿದ್ದು ಅವನ್ನು ನಿಲ್ಲಿಸಬಹುದಾಗಿದೆ. ಏಕೆಂದರೆ ಅವು ನಿಯಮಿತವಾಗಿ ಪ್ರಕಟಣೆಯನ್ನೂ ಕಾಣದೆ ಬರೀ ಔಪಚಾರಿವೆನಿಸಿವೆ. ಹೆಚ್ಚೆಂದರೆ ಗರಿಷ್ಠ ಪುಟ ಸಂಖ್ಯೆಯ ಮಿತಿ ಹಾಕಿ ಕಾವ್ಯ ಸಂಪುಟವನ್ನೂ, ಅನಿಕೇತನದ ಅನುವಾದ ಮತ್ತು ಇಂಗ್ಲಿಷ್ ಆವೃತ್ತಿಗಳನ್ನು ಪ್ರಕಟಿಸಬಹುದಾಗಿದೆ.

ಮುಖ್ಯವಾಗಿ ನಾವು ಹೇಳಬಯಸುವುದೇನೆಂದರೆ, ಕನ್ನಡ ಸಾಹಿತ್ಯ ಕ್ಷೇತ್ರ ದಿನೇ ದಿನೇ ಸಾಹಿತ್ಯ ಕೇಂದ್ರದಿಂದ ದೂರ ಸರಿಯುತ್ತಾ ಆನುಷಂಗಿಕ ವಿಷಯಗಳ ಬಗೆಗೇ ಹೆಚ್ಚು ಗಮನ ಹರಿಸುತ್ತಾ ಸಾಹಿತ್ಯದ ರುಚಿ-ಅಭಿರುಚಿಗಳಿಗೇ ಭಂಗ ತರುತ್ತಿರುವುದನ್ನು ಸಾಹಿತ್ಯ ಅಕಾಡೆಮಿ ಗಮನಿಸಬೇಕು. ಸಾಹಿತ್ಯ ಅಕಾಡೆಮಿಯ ಕಾರ್ಯಕ್ರಮಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಜನ ಏಕೆ ಸೇರುತ್ತಿಲ್ಲ ಅಥವಾ ಸೇರಿದೆಡೆ ಒಂದು ಗುಂಪಿನ, ಒಂದು ನಿರ್ದಿಷ್ಟ ವಿಚಾರ ಧಾರೆಯ ಜನ ಮಾತ್ರ ಏಕೆ ಸೇರುತ್ತಾರೆ ಎಂಬುದರ ಬಗ್ಗೆ ಸಮಚಿತ್ತದಿಂದ ಆಲೋಚಿಸಿ ಈ ಅಸಮತೋಲನವನ್ನು ಸರಿಪಡಿಸುವ ಕ್ರಮಗಳನ್ನು ಕೈಗೊಳ್ಳಬೇಕು. ಸಾಹಿತಿಗಳ ಗುಂಪುಗಾರಿಕೆ ಸಾಹಿತ್ಯ ಕಾರ್ಯಕ್ರಮಗಳ ಆಡಳಿತದೊಳಕ್ಕೆ ನುಸುಳದಂತೆ ನೋಡಿಕೊಳ್ಳುವುದು ನಿಮ್ಮ ಮತ್ತು ನಿಮ್ಮ ಸದಸ್ಯರ ಆದ್ಯ ಕರ್ತವ್ಯವಾಗಬೇಕೆಂದು ನಾವು ಬಯಸುತ್ತೇವೆ.

ಕಳೆದ ಇಪ್ಪತ್ತು ವರ್ಷಗಳಿಂದ ಅಕಾಡೆಮಿಯ ಆಡಳಿತವನ್ನು ಸಾಹಿತ್ಯಿಕ ಅರಿವಿಗೆ ಬದಲಾಗಿ ಸಾಮಾಜಿಕ, ಪ್ರಾದೇಶಿಕ, ಲಿಂಗ ನ್ಯಾಯಗಳು ಆಳುತ್ತಿವೆ ಎಂಬುದು ನಮ್ಮ ಅನಿಸಿಕೆ. ಸಾರ್ವಜನಿಕ ಆಡಳಿತದಲ್ಲಿ ಅವಶ್ಯಕವಾಗಿರಬಹುದಾದ ಈ ನ್ಯಾಯಗಳು ಸಾಹಿತ್ಯ-ಸಂಸ್ಕೃತಿ ಕ್ಷೇತ್ರಗಳಲ್ಲಿ ಅನವಶ್ಯಕ ಮಾತ್ರವಲ್ಲ, ಸಾಹಿತ್ಯ-ಸಂಸ್ಕೃತಿಗಳ ಅನನ್ಯತೆ ಮತ್ತು ಮೌಲಿಕತೆಗಳನ್ನೇ ಬುಡಮೇಲುಗೊಳಿಸುವಂತಹವು. ಏಕೆಂದರೆ ಕನಿಷ್ಟ ಆಧುನಿಕ ಚರಿತ್ರೆಯಲ್ಲಿ ಈ ಕ್ಷೇತ್ರಗಳಲ್ಲಿ ಯಾರ ಭಾಗವಹಿಸುವಿಕೆಗೂ ಸಾಮಾಜಿಕ ಅಡ್ಡಿ-ಆತಂಕಗಳಿರಲಿಲ್ಲ. ಇದ್ದಿದ್ದರೆ ಕುವೆಂಪು ಮತ್ತು ದೇವನೂರ ಮಹಾದೇವ ಆಧುನಿಕ ಕನ್ನಡ ಸಾಹಿತ್ಯದ

ಎರಡು ಅತ್ಯುನ್ನತ ಗಿರಿ-ಶಿಖರಗಳಾಗಿ ಮೂಡುತ್ತಿರಲಿಲ್ಲ. ಅಷ್ಟೇ ಅಲ್ಲ, ಈ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಬಹುತೇಕ ಜನರ ಸಾಮಾಜಿಕ ಹಿನ್ನೆಲೆಗಳನ್ನೊಮ್ಮೆ ನೋಡಿದರೆ ಇದು ಇನ್ನಷ್ಟು ಸ್ಪಷ್ಟವಾಗುತ್ತದೆ. ಹಾಗಾಗಿ ಇಂದು ಸಾಹಿತ್ಯ ಕ್ಷೇತ್ರದಲ್ಲಿ ಸಾಮಾಜಿಕ ಮತ್ತು ಇತರ ನ್ಯಾಯಗಳ ಹೆಸರಿನಲ್ಲಿ ಮೀಸಲಾತಿ ಕೇಳುವುದೆಂದರೆ, ಅದು ಪ್ರತಿಭಾಹೀನರ ಪುಢಾರಿ ರಾಜಕಾರಣವೇ ಆದೀತು.

ಆದರೆ ತಮ್ಮ ಜಾತಿಯವರಿಗೆ, ತಮ್ಮ ಗುಂಪಿನವರಿಗೆ, ತಮ್ಮ ಜಿಲ್ಲೆಯವರಿಗೆ, ತಮಗೆ ಬೇಕಾದವರಿಗೆ ಮಾನ್ಯತೆ ದೊರಕಿಸಿಕೊಡಲು ಕಳೆದ ಇಪ್ಪತ್ತು ವರ್ಷಗಳಲ್ಲಿ ಅಕಾಡೆಮಿಯಲ್ಲಿ ಈ ಮೀಸಲಾತಿಯನ್ನು ಮುಂದುವರೆಸಿಕೊಂಡು ಬರಲಾಗಿದೆ. ಪರಿಣಾಮವಾಗಿ ಕಳೆದ ಇಪ್ಪತ್ತು ವರ್ಷಗಳಲ್ಲಿ ಎಂತೆಂಥವರಿಗೆ ಅಕಾಡೆಮಿಯ ಗೌರವಗಳು ಸಂದಿವೆ ಮತ್ತು ಈ ಗೌರವದಿಂದ ಯಾರ್‍ಯಾರು ವಂಚಿತರಾಗಿದ್ದಾರೆ ಮತ್ತು ಈ ಗೌರವ-ಬಹುಮಾನಗಳಿಗೆ ಯಾವ ಮತ್ತು ಎಂತಹ ಮರ್ಯಾದೆ ಸಿಗುತ್ತಿದೆ ಎಂಬುದರ ಬಗ್ಗೆ ನೀವು ಮಾಹಿತಿ ಸಂಗ್ರಹಿಸುವುದಾದರೆ ನಿಮಗೆ ನಮ್ಮ ಮಾತು ಅರ್ಥವಾದೀತು. ಸಾಹಿತ್ಯ-ಸಂಸ್ಕೃತಿಗಳ ರುಚಿ-ಅಭಿರುಚಿಗಳನ್ನು ರಕ್ಷಿಸುವ ದೃಷ್ಟಿಯಿಂದಲಾದರೂ ದಯವಿಟ್ಟು ಈ ರಾಜಕಾರಣಕ್ಕೆ ಕೊನೆ ಹಾಡಿರಿ ಎಂದು ಕೋರುತ್ತೇವೆ.

ನಮ್ಮ ಮತ್ತೊಂದು ಸಲಹೆಯೆಂದರೆ, ಅಕಾಡೆಮಿಯ ಕಾರ್ಯಕ್ರಮಗಳನ್ನು ಹೆಚ್ಚಾಗಿ ತಾಲ್ಲೂಕು ಕೇಂದ್ರಗಳಿಗೆ ವಿಸ್ತರಿಸಿ, ಅವುಗಳಿಗೆ ಆಯಾ ಜಿಲ್ಲೆಯ ಕನಿಷ್ಠ ಹತ್ತು ಜನ ಸಾಹಿತ್ಯಾಭಿಮಾನಿಗಳನ್ನು ಅಗತ್ಯ ಭತ್ಯೆಗಳನ್ನು ನೀಡಿ ಆಹ್ವಾನಿಸಬೇಕು.

ಕೊನೆಯದಾಗಿ: ಅಕಾಡೆಮಿ ಪ್ರತಿ ವರ್ಷ ನೀಡುವ ಪುಸ್ತಕ ಬಹುಮಾನ ಮತ್ತು ಗೌರವ ಪ್ರಶಸ್ತಿಯ ನಗದು ಮೊತ್ತವನ್ನು ಗಣನೀಯ ಪ್ರಮಾಣದಲ್ಲಿ ಹೆಚ್ಚಿಸಬೇಕು. ಹಾಗೇ, ಈ ಬಹುಮಾನ ಮತ್ತು ಪ್ರಶಸ್ತಿಗಳ ಆಯ್ಕೆ ಪ್ರಕ್ರಿಯೆ ಗೋಪ್ಯ ಮತ್ತು ಕಟ್ಟುನಿಟಾಗಿರುವಂತೆ ನೋಡಿಕೊಳ್ಳಬೇಕಾಗಿದೆ.

ವಂದನೆಗಳೊಂದಿಗೆ,

ಡಿ.ಎಸ್. ನಾಗಭೂಷಣ

ಗಿರೀಶ್ ಅಜಕ್ಕಳ ಅವರಿಗೊಂದು ಪತ್ರ

ದಿನಾಂಕ: ೩.೫.೨೦೧೨

ಪ್ರಿಯಶ್ರೀ ಗಿರೀಶ್ ಅವರಲ್ಲಿ,

ವಂದನೆಗಳು. ನೀವು ವಿಶ್ವಾಸಪೂರ್ವಕವಾಗಿ ಕಳಿಸಿದ ಅಸಹಿಷ್ಣುತೆ ಕುರಿತ ನಿಮ್ಮ ಕಿರುಪುಸ್ತಕವನ್ನು ಇದೀಗ ತಾನೇ ಓದಿಮುಗಿಸಿದೆ. ನಾನು ಹೇಳಬಹುದಾದದ್ದು ಇಷ್ಟು:

೧. ಈ ಪುಸ್ತಕದಲ್ಲಿ ನೀವು ಸೆಕ್ಯುಲರ್‌ವಾದ–ವಾದಿಗಳೆಂದು ಗುರುತಿಸಿ ಎದುರುತ್ತರ ಕೊಡಲು ಯತ್ನಿಸಿರುವ ಪಂಥ/ಪಂಥೀಯರು ಮೂಲತಃ ಮಾರ್ಕ್ಸ್‌ವಾದಿಯಾದದ್ದು/ಮಾರ್ಕ್ಸ್‌ವಾದಿಗಳು. ಅವರೀಗ ರಾಜಕೀಯವಾಗಿ ಸಂಪೂರ್ಣ ಸೋತು ತಮ್ಮ ಭವಿಷ್ಯದ ಬಗ್ಗೆ ತೀರಾ ಅತಂಕಗೊಂಡವರು. ತಮ್ಮ (ಜಗತ್ತನ್ನು ಭೌತ–ಅಭೌತವೆಂದು ವಿಭಾಗಿಸಿ ನೋಡುವ) ಸಿದ್ಧಾಂತದಲ್ಲೇ ಮೂಲದೋಷವಿದೆ; ಅದೇ, ಅಖಂಡ ಪ್ರಜ್ಞೆಯ ಪರಂಪರೆಯುಳ್ಳ ಇಂಡಿಯಾದಂತಹ ದೇಶದಲ್ಲಿ ತಮ್ಮ ಅವನತಿಗೆ ಕಾರಣವಾಗಿದೆ ಎಂದು ಇನ್ನೂ ಅರಿಯಲಾಗದ ಈ ಸಿದ್ಧಾಂತಶಠರು ಸಂಘ ಪರಿವಾರದ ರಾಜಕಾರಣವೇ ತನ್ನ ವಿನಾಶಕ್ಕೆ ಕಾರಣವೆಂದು ನಂಬಿ ಅದರ ವಿರುದ್ಧ ನಡೆಸಿರುವ ರಾಜಕೀಯ ಪ್ರಚಾರಾಂದೋಲನದ ಒಂದು ಆಯಾಮವಾಗಿ ಇಂದು ಅಸಹಿಷ್ಣುತೆ ಕುರಿತ ಚರ್ಚೆ ಕಾಣುತ್ತಿರುವುದು ನಿಜ.

೨. ಆದರೆ ಭಾರತದಲ್ಲಿ ಸೆಕ್ಯುಲರ್‌ವಾದದ ಇನ್ನೊಂದು ಆವೃತ್ತಿಯೂ ಇದೆ. ಸೆಕ್ಯುಲರ್‌ವಾದ ಪಶ್ಚಿಮದ ಆಧುನಿಕ ರಾಜಕಾರಣದಿಂದ ಆಮದಾದ ಪರಿಕಲ್ಪನೆ ಎಂಬುದು ತಾಂತ್ರಿಕವಾಗಿ ಸರಿ ಎನಿಸಿದರೂ, ನಮ್ಮ ರಾಷ್ಟ್ರೀಯ ಹೋರಾಟದ ಮೂಲಕ ಇಲ್ಲಿ ಕಟ್ಟಿಕೊಂಡ ಆಧುನಿಕ ರಾಜಕಾರಣ ಎದುರಿಸಬೇಕಾಗಿ ಬಂದ ಬಿಕ್ಕಟ್ಟುಗಳ ಹಿನ್ನೆಲೆಯಲ್ಲಿ ನಮ್ಮದೇ ಎನ್ನಬಹುದಾದ ಸೆಕ್ಯುಲರ್‌ವಾದವೆಂಬುದೊಂದು ಅಸ್ತಿತ್ವದಲ್ಲಿದೆ ಎಂಬುದನ್ನು ನಾವು ಗಮನಿಸದಿರಲಾಗದು. ನಿರ್ದಿಷ್ಟವಾಗಿ, ಕಳೆದ ಶತಮಾನದ ಮುವ್ವತ್ತರ ದಶಕದಿಂದಲೂ ಗಾಂಧಿ ರಾಜಕಾರಣದ ವಿರುದ್ಧ ಹಲವು ನೆಲೆಗಳಲ್ಲಿ ಕೆಲಸ ಮಾಡುತ್ತಾ ಬಂದಿರುವ ಸಂಕುಚಿತ ಹಿಂದೂವಾದಿ ರಾಜಕಾರಣ ಈ ದೇಸಿ ಸೆಕ್ಯಲರ್‌ವಾದದ ಅಗತ್ಯವನ್ನು ಮನಗಾಣಿಸಿದೆ.

೩. ಹಿಂದೂ ಧರ್ಮ ಸೆಮೆಟಿಕ್ ಧರ್ಮಗಳಂತೆ 'ರಿಲಿಜಿಯನ್' ಅಲ್ಲ; ಅದೊಂದು ಹಲವು ಸಂಪ್ರದಾಯಗಳ ಸಮೂಹ ಎಂಬುದು ತಾಂತ್ರಿವಾಗಿ ಮಾತ್ರ ಸರಿ. ಕನಿಷ್ಠ, ಮೇಲೆ ಪ್ರಸ್ತಾಪಿಸಿದ ಹಿಂದೂವಾದಿ ರಾಜಕಾರಣ ಆರಂಭವಾದ ಕಾಲದಿಂದಲೂ ಹಿಂದೂ ಧರ್ಮವನ್ನು ಒಂದು 'ರಿಲಿಜಿಯನ್' ಆಗಿ ಕಟ್ಟುವ ವ್ಯವಸ್ಥಿತ ಪ್ರಯತ್ನ ನಡೆದೇ ಇದೆ. ಆಧುನಿಕ ಕಾಲದ ನಮ್ಮ ಅನ್ಯಮತ ವಿರೋಧಿ ದಂಗೆಗಳಲ್ಲಿ ತಮ್ಮೆಲ್ಲ ಪ್ರತ್ಯೇಕ ಸಂಪ್ರದಾಯಗಳನ್ನು ಮರೆತು ಎಲ್ಲ ಸಂಪ್ರದಾಯಗಳ ಹಿಂದುಗಳೂ ಭಾಗವಹಿಸುವುದನ್ನು ನಾವು ನೋಡಿದ್ದೇವೆ (ಉದಾ: ೧೯೮೪ರ ಸಿಖ್ ಹತ್ಯಾಕಾಂಡ, ೨೦೦೨ರ ಗುಜರಾತ್ ಹತ್ಯಾಕಾಂಡ) ರಾಮಜನ್ಮಭೂಮಿ ಆಂದೋಲನ ರಾಮನನ್ನು ಎಲ್ಲ ಸಂಪ್ರದಾಯಗಳ ದೇವರನ್ನಾಗಿ ಮಾಡಿದ್ದೂ ಇದಕ್ಕೆ ಇನ್ನೊಂದು ಉದಾಹರಣೆ.

೪. ಕಾಂಗ್ರೆಸ್ಸಿನ ಅಥವಾ ಸೆಕ್ಯುಲರ್‌ವಾದಿಗಳ ಮುಸ್ಲಿಮರ ತುಷ್ಟೀಕರಣವೇ ಹಿಂದೂವಾದಿ ರಾಜಕಾರಣದ ಉತ್ಕರ್ಷಕ್ಕೆ ಒಂದು ಕಾರಣವೆಂಬುದು ನಿಜವೆಂದ ಮಾತ್ರಕ್ಕೆ, ಅದು ಹಿಂದೂವಾದಿ ರಾಜಕಾರಣದ ಚೇಷ್ಟೆಗಳನ್ನು ಕ್ಷಮಾರ್ಹಗೊಳಿಸುವುದಿಲ್ಲ.

೫. ಇಸ್ಲಾಂ ಒಂದು ಕಠಿಣ ಧರ್ಮ, ಅದು ಹಿಂದೂ ಧರ್ಮದ ರೀತಿಯಲ್ಲಿ ಆಧುನಿಕಗೊಳ್ಳಲು ನಿರಾಕರಿಸುತ್ತದೆ ಎಂಬುದು ನಮ್ಮ ಬದಿಯ ಅಭಿಪ್ರಾಯ. ಅದೇನೇ

ಇದ್ದರೂ, ಅದರ ಫಲವನ್ನು ಅದರ ಸದಸ್ಯರು ಉಣ್ಣುತ್ತಾ ಅದು ಒಳಗಿಂದ ಬದಲಾವಣೆಯಾಗಬೇಕಷ್ಟೆ. ಸದ್ಯಕ್ಕೆ ಆ ಧರ್ಮ ನಮ್ಮ ಸಂವಿಧಾನಕ್ಕೆ ಬದ್ಧವಾಗಿ ನಡೆಯುತ್ತಿದೆಯೋ ಇಲ್ಲವೋ ಎಂಬುದಷ್ಟೇ ಇಂದು ನಮಗೆ ಮುಖ್ಯವಾಗಬೇಕು.

೬. ಅಸಹಿಷ್ಣುತೆಯ ಕೂಗು ಚಾಲ್ತಿಗೆ ಬಂದದ್ದು, ಮೋದಿ ಸರ್ಕಾರ ಆಡಳಿತಕ್ಕೆ ಬಂದಂದನಿಂದ. ಒಂದೇ ಸಮನೆ ಅನ್ಯಧರ್ಮೀಯರ ಅಸಹ್ಯಕರ ನಿಂದನೆ, ಕೊಲೆಗಳು ಮತ್ತು ಸರ್ಕಾರದ ಸದಸ್ಯರಿಂದ ಹಿಂದೂ ಮತೀಯ ಪ್ರಸ್ತಾವನೆಗಳು ಒಂದಾದರ ಮೇಲೊಂದರಂತೆ ನಡೆದದ್ದು ಮತ್ತು ಅದಕ್ಕೆ ಪ್ರಭುತ್ವದ ಮೂಕ ಸಮ್ಮತಿ ಇದೆ ಎಂಬುದು ರಾಷ್ಟ್ರಪ್ರಜ್ಞೆಯ ಅರಿವಿಗೆ ಬಂದಾಗ. ಹಿಂದೆಯೂ ಅಸಹಿಷ್ಣುತೆ ಇತ್ತು. ಆದರೆ ಅದು ಪ್ರಭುತ್ವದ ನೀತಿಯಾಗಿರಲಿಲ್ಲ.

೭. ಪಾಕಿಸ್ತಾನದಲ್ಲಿದೆಯೆಂದು ನೀವು ನಂಬುವ ಅಸಹಿಷ್ಣುತೆಯನ್ನು ಉಲ್ಲೇಖಿಸಿ ಇಲ್ಲಿನ ಅಸಹಿಷ್ಣುತೆಯನ್ನು ಕ್ಷಮಾರ್ಹಗೊಳಿಸುವ ಪ್ರಯತ್ನ ನೀವು ಬಹುವಾಗಿ ಮೆಚ್ಚುವ ಹಿಂದೂಧರ್ಮೀಯತೆಗೇ ವಿರುದ್ಧವಾದದ್ದು.

೮. ಭಾರತದ ಹಿಂದೂ ಬಲಪಂಥೀಯತೆಗೆ ಒಂದು ಬೌದ್ಧಿಕ ಪರಂಪರೆ ಇಲ್ಲ ಎಂಬ ಅಭಿಪ್ರಾಯವಿದೆ. ಹೀಗಾಗಿ ಬಾಲಗಂಗಾಧರರ ಮಾರ್ಗದರ್ಶನದಲ್ಲಿ ಅದಕ್ಕೊಂದು ಬೌದ್ಧಿಕತೆಯನ್ನು ಕಟ್ಟಿಕೊಡುವ ಒಂದು ಯೋಜನೆ ಜಾರಿಯಲ್ಲಿದೆ ಎಂದು ಕೇಳಿದ್ದೇನೆ. ನಿಮ್ಮ ಕಿರುಪುಸ್ತಕ ಓದಿದಾಗ ನೀವೂ ಈ ಯೋಜನೆಯ ಕಾರ್ಯಕರ್ತರಂತೆ ನನಗೆ ಕಂಡಿತು.

ಆದರೆ ಹಿಂದೂವಾದಿ ಬಲಪಂಥೀಯ ರಾಜಕಾರಣಕ್ಕೆ ಒಂದು ಬೌದ್ಧಿಕ ಪರಂಪರೆ ಇಲ್ಲ ಎಂದು ನಾನು ನಂಬುವುದಿಲ್ಲ. ಆಧುನಿಕ ಅರ್ಥದ ಬೌದ್ಧಿಕ ಪರಂಪರೆ ಇಲ್ಲ ಎಂದು ಹೇಳಬಹುದಷ್ಟೆ. ಏಕೆಂದರೆ, ನಿಮ್ಮ ಈ ಕಿರುಬರಹದಲ್ಲೂ ಇಣುಕುವ ವರ್ಣಾಶ್ರಮ ಧರ್ಮದ ತಾತ್ವಿಕತೆಯೇನೂ ಕಡಿಮೆ ತೀವ್ರತೆಯ ಬೌದ್ಧಿಕತೆಯಲ್ಲ.

ಮತ್ತೊಮ್ಮೆ ವಂದನೆಗಳು.

ಡಿ.ಎಸ್. ನಾಗಭೂಷಣ

ಪರ್ಯಾಯ ರಾಜಕಾರಣ: ಎಸ್. ಆರ್. ಹಿರೇಮಠರಿಗೆ ಪತ್ರ–೧

ಶ್ರೀಯುತ ಹಿರೇಮಠ ಅವರಲ್ಲಿ, ದಿನಾಂಕ: ೨.೭.೨೦೧೬

ವಂದನೆಗಳು. ಪರ್ಯಾಯ ರಾಜಕಾರಣದ ಚಿಂತನೆಗಾಗಿ ತಾವು ಮತ್ತು ತಮ್ಮ ಗೆಳೆಯರು ಇದೇ ೯ ಹಾಗೂ ೧೦ರಂದು ಧಾರವಾಡದಲ್ಲಿ ಕರೆದಿರುವ ಸಮಾವೇಶದ ಆಹ್ವಾನ ಪತ್ರ ತಲುಪಿದೆ. ನಿಮ್ಮ ವಿಶ್ವಾಸಕ್ಕಾಗಿ ಕೃತಜ್ಞ.

ಪರ್ಯಾಯ ರಾಜಕಾರಣಕ್ಕಾಗಿ ಚಿಂತನಾ ಸಮಾವೇಶಗಳು ಕರ್ನಾಟಕದಲ್ಲಿ ನಡೆದಿರುವುದು ಇದೇ ಮೊದಲಲ್ಲ. ಎಂಭತ್ತರ ದಶಕದ ಲಂಕೇಶರ 'ಪ್ರಗತಿರಂಗ'ದಿಂದ ಹಿಡಿದು ಸದ್ಯದ ನಿಮ್ಮ ಈ ಪ್ರಯತ್ನದಲ್ಲೂ ಭಾಗಿಯಾಗಿರುವ 'ಸರ್ವೋದಯ ಕರ್ನಾಟಕ'ದವರೆಗೆ ನಾಲ್ಕಾರು ಪ್ರಯತ್ನಗಳು ನಡೆದಿವೆ. ಈ ಎಲ್ಲ ಪ್ರಯತ್ನಗಳಲ್ಲಿ ಒಂದಲ್ಲ ಒಂದು ನೆಲೆಯಲ್ಲಿ ಭಾಗವಹಿಸಿದ್ದ ನನ್ನ ಪ್ರಕಾರ ಈ ಎಲ್ಲವೂ ನಿರಾಶೆಗೊಳಿಸಿವೆ.

ಧಾರವಾಡದಲ್ಲಿ ನಡೆಯಲಿರುವ ಇಂತಹ ಇನ್ನೊಂದು ಪ್ರಯತ್ನದಲ್ಲಿ ನನಗೆ ಕಾಣಿಸುತ್ತಿರುವ ಹೊಸ ಮುಖಗಳೆಂದರೆ ನೀವು ಮತ್ತು ಶಾಸಕ ರಾಜೀವ್ ಮಾತ್ರ. ನಿಮ್ಮ ಬಗ್ಗೆ ನನಗೆ ಅಪಾರ ಗೌರವವಿದೆ. ರಾಜೀವ್ ಬಗ್ಗೆ ನನಗೇನೂ ಗೊತ್ತಿಲ್ಲ. ಮಿಕ್ಕವರೆಲ್ಲರದ್ದೂ ತುಕ್ಕು ಹಿಡಿದ ಮುಖಗಳೇ. ಅವರ ಹಿಂದಿರುವ ಜನ ಕೂಡ ತಮ್ಮದೇ ಅಜೆಂಡಾಗಳನ್ನಿಟ್ಟುಕೊಂಡು ಕಾಯುತ್ತಿರುವವರೇ ಆಗಿದ್ದಾರೆ. ಹಾಗಾಗಿ ನಿಮ್ಮ ಈ ಪ್ರಯತ್ನದ ಬಗ್ಗೆ ನನಗೇನೂ ನಿರೀಕ್ಷೆ ಇಲ್ಲ.

ಬರೀ ಚಿಂತಕರು, ಸಾಹಿತಿಗಳು ಅಥವಾ ನಿಮ್ಮಂತಹ ಕಾನೂನು ನೆಲೆಯ ಹೋರಾಟಗಾರರು ಹೊಸ ರಾಜಕಾರಣವನ್ನು ಕಟ್ಟಲಾರರು ಎಂದು ಹೇಳಿದರೆ ತಾವು ತಪ್ಪು ತಿಳಿಯಲಾರಿರಿ ಎಂದು ಭಾವಿಸುವೆ. ಇಂದು ರಾಜಕೀಯ ವ್ಯವಸ್ಥೆ ಎಷ್ಟು ಪಟ್ಟಭದ್ರವಾಗಿದೆ ಎಂದರೆ, ಪಟ್ಟುಬಿಡದೆ ಇದರ ವಿರುದ್ಧ ಸತತ ಹೋರಾಟ ನಡೆಸಬಲ್ಲ ಆಳದ ಬದ್ಧತೆಯುಳ್ಳ ಹಠವಾದಿಯೊಬ್ಬ ಮಾತ್ರ ಇದಕ್ಕೆ ಸವಾಲೆಸೆಯಬಲ್ಲ. ಇಂದು ಕೇಜ್ರಿವಾಲ್ ಮಾಡುತ್ತಿರುವ ರಾಜಕಾರಣವನ್ನು ನಾನು ಎಳ್ಳಷ್ಟೂ ಇಷ್ಟಪಡುವುದಿಲ್ಲ. ಆದರೆ, ಆತ ತಾನು ಕಟ್ಟಿದ ಪಕ್ಷ ಅಧಿಕಾರಕ್ಕೆ ಬರಲು ನೀಡಿದ ನಾಯಕತ್ವದ ಗುಣ ಮಾತ್ರ ಮೆಚ್ಚುವಂತಹದ್ದು. ದುಸ್ಸಾಹಸಗಳಿಗೆ ಅಂಜುತ್ತಾ, ತನ್ನ ವ್ಯಕ್ತಿತ್ವವನ್ನೇ ಪಣಕ್ಕೊಡ್ಡಲು ಹಿಂಜರಿಯುತ್ತಾ, ಜನನಾಯಕನಾಗಲೊಲ್ಲದ ನಾಯಕರಿಗೆ ಪರ್ಯಾಯ ರಾಜಕಾರಣ ಒಂದು ಚಟ ಮಾತ್ರವಾಗಬಲ್ಲುದಷ್ಟೆ. ಹಾಗಾಗಿ ರಾಜೀವ್ ಬಗ್ಗೆ ಮಾತ್ರ ಆಸೆ ಇಟ್ಟುಕೊಳ್ಳಬಹುದೇನೋ, ತಿಳಿಯದು. ಅದು ನಿಜವಾಗುವುದಾದರೆ ತುಂಬ ಸಂತೋಷ.

ಇನ್ನೊಂದು ಮಾತು: ರಾಷ್ಟ್ರೀಯ ಮಟ್ಟದ ಚಿಂತಕರ ಪಾತ್ರ ಚಿಂತನೆಯ ಮಟ್ಟಕ್ಕೆ ಮಾತ್ರ ಸೀಮಿತಗೊಂಡರೆ ಒಳ್ಳೆಯದು. ಸಂಘಟನೆಯೊಳಕ್ಕೆ ಅವರು ಪ್ರವೇಶಿಸಿದರೆ ಎಲ್ಲವೂ ಅಸ್ತವ್ಯಸ್ತವೆಂದೇ ತಿಳಿಯಿರಿ. ಹಾಗೆ ನೋಡಿದರೆ ಸದ್ಯಕ್ಕೆ ನಾವು ಕರ್ನಾಟಕದ ಹಿತಚಿಂತನೆ ಮಾಡಿದರೆ ಸಾಕಾಗಿದೆ. ಅದನ್ನು ಸರಿಯಾಗಿ ಮಾಡಿದರೆ ಭಾರತದ ಹಿತಚಿಂತನೆಗೂ ನಮ್ಮ ಕೊಡುಗೆ ಸಲ್ಲಿಸಿದಂತಾಗುತ್ತದೆ. ಹಾಗಾಗಿ ಅಖಿಲ ಭಾರತ ಸಂಪರ್ಕ ಮತ್ತು ಸಹವಾಸ ಬೇಡವೇ ಬೇಡವೆಂಬುದು ನನ್ನ ಅಭಿಪ್ರಾಯ.

ಸದ್ಯದ ಸಮಾವೇಶಕ್ಕೆ ನಾನು ಬರಲಾಗುತ್ತಿಲ್ಲ, ಕ್ಷಮೆ ಇರಲಿ. ಬಂದಿದ್ದರೂ ನಾನು ಹೇಳಲು ನನ್ನ ಬಳಿ ಇದ್ದುದು ಇಷ್ಟೇ. ಸಮಾವೇಶ ಕರ್ನಾಟಕದ ಜನತೆಯನ್ನು ಬಡಿದೆಬ್ಬಿಸುವಂತಹ ತೀರ್ಮಾನಗಳಿಗೆ ಬರುವಂತಾಗಲಿ ಎಂದು ಹಾರೈಸುತ್ತಾ,

ವಂದನೆಗಳೊಂದಿಗೆ

ವಿಶ್ವಾಸದ

ಡಿ.ಎಸ್. ನಾಗಭೂಷಣ

ಪರ್ಯಾಯ ರಾಜಕಾರಣ: ಎಸ್. ಆರ್. ಹಿರೇಮಠರಿಗೆ ಪತ್ರ-೨

ಮಾನ್ಯರೇ,

ಶ್ರೀಮತಿ ರೂಪ ಹಾಸನ ಅವರು ಕಳಿಸಿದ್ದ 'ಜನಾಂದೋಲನಗಳ ಮಹಾಮೈತ್ರಿ' ರೂಪಿಸಿರುವ 'ಗುರಿ, ಕಾರ್ಯಕ್ರಮ. ಕಾರ್ಯಯೋಜನೆ...' ಕುರಿತ ಅಂತಿಮ ಕರಡನ್ನು ಓದಿದೆ. ಓದಿ ನಿಜವಾಗಿಯೂ ನಿರಾಶೆಯಾಯಿತು. ಅದೇ ಹಳೆಯ ಎಡಪಂಥೀಯ ಅಥವಾ ಪ್ರಗತಿಪರವೆಂದು ಹೇಳಿಕೊಂಡು ಬರುತ್ತಿರುವ ಗುಂಪುಗಳ ಅದೇ ಹಳೆಯ ಎರಕದಲ್ಲಿ ಅದ್ದಿ ತೆಗೆದಂತಿರುವ ನುಡಿಗಟ್ಟುಗಳ ಗಂಟುಮೂಟೆಯಂತಿರುವ ಈ ದಾಖಲೆಯು ಹೊಸದಾಗಿ ಯಾರನ್ನೂ ಆಕರ್ಷಿಸುವ ಉತ್ಸಾಹ ಹುಟ್ಟಿಸುವಂತಿಲ್ಲ. ಅದೇ, ಜನಪರ, ಜೀವಪರ, ಮನುವಾದ, ಜನಾಂದೋಲನ, ಜನಾಗ್ರಹ, ಶ್ರಮಜೀವಿ, ಬಂಡವಾಳಶಾಹಿ, ಸಮಾನತೆ, ಸ್ವಾತಂತ್ರ್ಯ, ಸೋದರತೆ, ಮಹಾಮೈತ್ರಿ ಇತ್ಯಾದಿ ಈಗಾಗಲೇ ತುಕ್ಕುಹಿಡಿದು ವಿಶ್ವಾಸಾರ್ಹತೆಯನ್ನು ಕಳೆದುಕೊಂಡಿರುವ ಪದಪುಂಜಗಳು. ಇವನ್ನು ಬಳಸಿ ಹೆಚ್ಚೆಂದರೆ, ಇವನ್ನು ತುಕ್ಕುಗೊಳಿಸಿರುವ ಹಳೆಯ ಗೆಳೆಯ-ಗೆಳತಿಯರೆಲ್ಲ ಸೇರಿ ಯಾವುದಾದರೂ ಒಂದು ಊರಿನಲ್ಲಿ ಮಾನವ ಸರಪಳಿ ರಚಿಸಿಕೊಂಡು ಪ್ರತಿಭಟನೆಯ ಪ್ರದರ್ಶನ ನೀಡಬಹುದಷ್ಟೆ. ಹೊಸ ರಾಜಕಾರಣದ ಹತ್ತಿರವೂ ಸುಳಿಯಲಾಗುವುದಿಲ್ಲ.

ತನ್ನನ್ನು ಮಹಾ-ಮೈತ್ರಿ ಎಂದು ಕರೆದುಕೊಂಡಿರುವ ಈ ಸಂಘಟನೆ ತನಗಾಗಿ ಹೊಸ ಭಾಷೆ, ನುಡಿಗಟ್ಟನ್ನು ಕಂಡುಕೊಳ್ಳಲಾಗದಿರುವ ಮಹಾ ದೌರ್ಬಲ್ಯ, ಅದು ನೇರ ರಾಜಕಾರಣದ ಮೂಲಕ ಜನರೊಡನೆ ಮುಖಾಮುಖಿಯಾಗಲು ಹಾಕಿರುವ ಹಿಂದೇಟಿನಲ್ಲೇ ಅಡಗಿದೆ ಎನಿಸುತ್ತದೆ. ಇದು ತನ್ನ ಅಗತ್ಯ-ಅನಿವಾರ್ಯತೆ ತನಗೇ ಮನದಟ್ಟಾಗದಿರುವ ದರಿದ್ರ ಸ್ಥಿತಿ! ತನ್ನ ಪ್ರಣಾಳಿಕೆಯನ್ನು ಇತರ ರಾಜಕೀಯ ಪಕ್ಷಗಳು ಅನುಮೋದಿಸಬೇಕೆಂದು ಕಾಯ್ದು ಕೂರುವ ಈ ಕರುಣಾಜನಕ ಸ್ಥಿತಿ ಅದರ ಬಗ್ಗೆ ಎಲ್ಲವನ್ನೂ ಹೇಳುವಂತಿದೆ! ಯಾಕೆ, ರಾಜಕೀಯ ಪಕ್ಷಗಳ ಬಳಿ ನಿಮ್ಮಷ್ಟೇ 'ಜನಪರ-ಜೀವಪರ'ವಾದ ಪ್ರಣಾಳಿಕೆ

ರೂಪಿಸಬಲ್ಲ ಜಾಣ ಜನರಿಲ್ಲವೆಂದು ನೀವು ಭಾವಿಸಿದ್ದೀರಾ? ನಿಮ್ಮ ಪ್ರಣಾಳಿಕೆಯನ್ನು ಇತರರು ಅನುಮೋದಿಸಿ ವಿಶ್ವಾಸಾರ್ಹತೆ ಗಳಿಸಿಕೊಳ್ಳುವಂತಹ ಯಾವ ವಿಶ್ವಾಸಾರ್ಹತೆಯನ್ನು ನೀವು ಗಳಿಸಿಕೊಂಡಿದ್ದೀರಿ? ನನ್ನ ತಿಳುವಳಿಕೆಯ ಪ್ರಕಾರ ಇಂದು ಕರ್ನಾಟಕದಲ್ಲಿ ಚುನಾವಣಾ ರಾಜಕಾರಣದಲ್ಲಿ ಗಣನೀಯ ಪ್ರಭಾವ ಬೀರಬಲ್ಲ ಯಾವ ಜನಾಂದೋಲನವೂ ಅಸ್ತಿತ್ವದಲ್ಲಿದ್ದಂತಿಲ್ಲ. ಬಹುಶಃ ಇದು ಗೊತ್ತಾಗಿಯೇ ಈ ಮಹಾಮೈತ್ರಿ ಈ ತೆರೆಮರೆಯ ರಾಜಕಾರಣ ಮಾಡಹೊರಟಂತಿದೆ. ಇದರ ಮೂಲಕ ಮುಂದಿನ ಚುನಾವಣೆಗಳ ಹೊತ್ತಿಗೆ ಈಗ ಅಳಿದುಳಿದಿರುವ ಜನಾಂದೋಲನಗಳೂ ಕೆಲವು ರಾಜಕೀಯ ಏಜೆಂಟರುಗಳನ್ನು (ಈಗ ಕಾಂಗ್ರೆಸ್ಸಿಗೆ ಇರುವ 'ಪ್ರಗತಿಪರ'ರ ಏಜೆಂಟರುಗಳಂತೆ) ಸೃಷ್ಟಿಸಿ ತಮ್ಮ ಅಳಿದುಳಿದಿರುವ ವಿಶ್ವಾಸಾರ್ಹತೆಯನ್ನೂ ಕಳೆದುಕೊಳ್ಳಬಹುದಷ್ಟೆ.

ಈ ಮಹಾಮೈತ್ರಿಯು ತನ್ನ ಪ್ರಣಾಳಿಕೆಯನ್ನು ಒಪ್ಪುವ ರಾಜಕೀಯ ಪಕ್ಷವನ್ನು ಬೆಂಬಲಿಸುತ್ತದಂತೆ ಮತ್ತು ಒಪ್ಪದ ರಾಜಕೀಯ ಪಕ್ಷ ಆಯ್ಕೆಯಾಗದಂತೆ ನೋಡಿಕೊಳ್ಳುತ್ತದಂತೆ! ಇದು ಈ ಮಹಾಮೈತ್ರಿ–ಇದರ ಸದರಿ ದಾಖಲೆಯ ನುಡಿಗಟ್ಟನ್ನು ನೋಡಿದರೇ ಗೊತ್ತಾಗುವಂತೆ– ಈಗಿರುವ ಯಾವ ಪಕ್ಷವನ್ನು ವಿರೋಧಿಸುತ್ತದೆ ಮತ್ತು ಯಾವ ಪಕ್ಷಗಳನ್ನು ಬೆಂಬಲಿಸುತ್ತದೆ ಎಂಬುದನ್ನು ಯಾರಾದರೂ ಈಗಲೇ ಸುಲಭವಾಗಿ ಊಹಿಸಬಹುದಾಗಿದೆ. ಹಾಗಾಗಿ ಮಹಾಮೈತ್ರಿ ಎಂಬುದು ಒಂದು ಪರಾವಲಂಬಿ ರಾಜಕೀಯ ನಾಟಕ ಮಂಡಳಿಯಂತೆ ನನಗೆ ಕಾಣುತ್ತಿದೆ.

ಜನರನ್ನು ಬಡವ–ಸಾಹುಕಾರ, ಕೆಳಜಾತಿ–ಮೇಲ್ಜಾತಿ–ಶೋಷಕ–ಶೋಷಿತ ಇತ್ಯಾದಿ ಖಚಿತ ಗಡಿಗೆರೆಗಳ ವಿಂಗಡಣೆಗಳ ಮೂಲಕ ಸಂಘಟಿಸುವ ರಾಜಕಾರಣದ ಕಾಲ ಮುಗಿದು ಬಹಳ ದಿನಗಳೇ ಆಗಿವೆ. ಹಾಗಾಗಿ ಇಂದು ರಾಜಕಾರಣ ನಡೆಯಬೇಕಾದದ್ದು, ಬರಲಿರುವ ದಿನಗಳಲ್ಲಿ ಎಲ್ಲರೂ ಒಟ್ಟಿಗೆ ಮತ್ತು ಒಟ್ಟಾಗಿ ಎದುರಿಸಬೇಕಾಗಿ ಬರುವ ಸೂಚನೆಗಳನ್ನು ನೀಡುತ್ತಿರುವ ಅನಾಹುತಗಳ ಪ್ರಶ್ನೆಗಳನ್ನೆತ್ತಿಕೊಳ್ಳುವ ಮೂಲಕ. ಉದಾ: ನೀರು. ಗಾಳಿ, ಇಂಧನ ಮುಂತಾದವುಗಳಿಗೆ ಸಂಬಂಧಿಸಿದ ಜೀವ ಪರಿಸರ ಬಿಕ್ಕಟ್ಟು, 'ಅಭಿವೃದ್ಧಿ' ಪರಿಕಲ್ಪನೆ ಸೃಷ್ಟಿಸುತ್ತಿರುವ ಬೃಹತ್ ಜನಸ್ತೋಮಗಳ ಸ್ಥಳಾಂತರ ಮತ್ತು ನಿರಾಶ್ರಿತರ ಸಮಸ್ಯೆಗಳು, ಹೆಚ್ಚುತ್ತಿರುವ ಹಿಂಸೆ, ರೋಗ–ರುಜಿನಗಳು ಮತ್ತು ಆತ್ಮಹತ್ಯೆಗಳಿಗೆ ಸಂಬಂಧಿಸಿದ ಸಾಮಾಜಿಕ ಬಿಕ್ಕಟ್ಟುಗಳ ಕಾರಣಗಳನ್ನು ವಿಶ್ಲೇಷಿಸುವ ಮೂಲಕ ಹೊಸ ರಾಜಕಾರಣದ ಸವಾಲುಗಳನ್ನು ಗುರುತಿಸಿಕೊಳ್ಳಬಹುದು ಮತ್ತು ಆ ಮೂಲಕ ಹೊಸ ಪರಿಭಾಷೆ–ನುಡಿಗಟ್ಟುಗಳನ್ನು ಕಂಡುಕೊಳ್ಳಬಹುದು. ಬಡತನ ನಿವಾರಣೆ ಎಂಬುದು ಕೇವಲ ಭೌತಿಕ ಸಂಪನ್ಮೂಲಗಳ ವಿತರಣೆಗೆ ಸಂಬಂಧಿಸಿದ ಸಂಗತಿಯಾಗಿರದೆ, ಒಂದು ಸಮತುಲಿತ ಸಾಮಾಜಿಕ–ಸಾಂಸ್ಕೃತಿಕ–ಪಾರಿಸರಿಕ ಬದುಕಿನ ಮಾದರಿ ನಿರ್ಮಾಣದ ಆತ್ಯಂತಿಕ ಗುರಿಗೂ ಸಾವಯವಾಗಿ ಸಂಬಂಧಿಸಿದ ಸಂಗತಿಯೂ ಆಗಿರಬೇಕಾಗಿರುತ್ತದೆ.

ಇದು ಸದ್ಯದ 'ಅಭಿವೃದ್ಧಿ' ಮಾದರಿಯ ರಾಜಕಾರಣದಿಂದ ನಾವು ಕಲಿಯಬೇಕಾಗಿರುವ ಮುಖ್ಯ ಪಾಠವೂ ಆಗಿದೆ. ಹಾಗಾಗಿ, ನಮಗೀಗ ಅಗತ್ಯವಾಗಿರುವುದು ಪರ್ಯಾಯ ರಾಜಕಾರಣವಲ್ಲ; ಹೊಸ ರಾಜಕಾರಣ.

ಇದಕ್ಕಾಗಿ, ಬಡತನ ನಿವಾರಣೆ ಅಥವಾ ಧರ್ಮನಿರಪೇಕ್ಷತೆ ರಾಜಕಾರಣ ಎಂಬುದು ಎರಡು ಅಲಗಿನ ಕತ್ತಿಯಾಗಿ ಪರಿಣಮಿಸಿರುವುದನ್ನು ನಾವು ಗಮನಿಸದಿರಲಾಗದು. ಬಡತನ ನಿವಾರಣೆ ಮತ್ತು ಜಾತ್ಯತೀತೆಯ ಆಧಾರದ ಮೇಲೆ ರಾಜಕಾರಣ ಮಾಡಬಯಸುವವರು ಇಂದು ಮೊದಲು ಬಡತನ ನಿವಾರಣೆಯ ಮತ್ತು ಜಾತ್ಯತೀತತೆಯ ಅರ್ಥದ ಗಡಿಗಳು ಯಾವುದೆಂಬುದನ್ನು ಸ್ಪಷ್ಟವಾಗಿ ಗುರುತಿಸಬೇಕು. ಅಸ್ಮಿತೆಯ ರಾಜಕಾರಣ ಇಂದು ಸಂಸ್ಕೃತಿಗೆ ಸಂಬಂಧಿಸಿದ ವಿಷಯವಾಗಿ ಉಳಿಯದೆ, ಸಾಮಾಜಿಕ ವಿಭಜನೆಯ ದುಷ್ಟ ರಾಜಕಾರಣವಾಗಿದೆ ಎಂಬುದನ್ನು ಗಮನಿಸಬೇಕು. ಆ ಮೂಲಕ 'ಅಭಿವೃದ್ಧಿ' ಎಂಬುದುದರ ಬಹು ಆಯಾಮಗಳನ್ನು ಗುರುತಿಸಿ ಅದರ ಹೊಸ ಅರ್ಥ ನಿರೂಪಿಸಬೇಕು. ಆಗ ಬಹುಶಃ ಸ್ಥಳೀಯತೆ, ತಂತ್ರಜ್ಞಾನ, ಉತ್ಪಾದನೆ, ವಿಕೇಂದ್ರೀಕರಣ, ಬಡತನ ಇತ್ಯಾದಿಗಳಿಗೆ ಹೊಸ ಪರಿಪ್ರೇಕ್ಷ ಒದಗಿ ಹೊಸ ಅರ್ಥಗಳು ಗೋಚರಿಸಿಯಾವು.

ಇದೆಲ್ಲವನ್ನೂ ಮಾಡದೆ ಅಥವಾ ಮಾಡಲು ಪುರುಸೊತ್ತಿಲ್ಲದೆ ಯಾವುದೋ ಅವಸರಸರದಲ್ಲಿ ಅದು ಮಾಡಬೇಕು, ಇದು ಮಾಡಬೇಕೆಂದು ಇತರರನ್ನು ಆಗ್ರಹಿಸುವುದು ಜವಾಬ್ದಾರಿ ಇಲ್ಲದ ಅಧಿಕಾರ ಪ್ರಯೋಗದ ಹಾಸ್ಯಾಸ್ಪದ ಪ್ರಯತ್ನ ಮಾತ್ರವೆನಿಸುತ್ತದೆ. ಏಕೆಂದರೆ, ಯಾವುದೇ ಪಕ್ಷವಾಗಲಿ ಅದಕ್ಕೆ ಅದರದೇ ಆದ ಸಂಘಟನಾತ್ಮಕ ಒತ್ತಾಯಗಳಿರುತ್ತವೆ. ನೀವು ಕೊಡುವ ಅಂಗೈ ಅಗಲದ ಬೆಂಬಲಕ್ಕಾಗಿ ಅವು ಬಾಯಿಮಾತಿಗಷ್ಟೇ ನಿಮ್ಮ ಒತ್ತಾಯಗಳನ್ನು ಒಪ್ಪಬಹುದು. ಇಂದು ಯಾವ ಪಕ್ಷವೇ ಅಧಿಕಾರಕ್ಕೆ ಬರಲಿ, ಅವೆಲ್ಲವೂ ಆತ್ಯಂತಿಕವಾಗಿ ವಿಶ್ವಬ್ಯಾಂಕ್ ಮತ್ತು ಐಎಂಎಫ್‌ಗಳ ಆರ್ಥಿಕ ಗಡಿಗೆರೆಗಳಲ್ಲೇ ಕೆಲಸ ಮಾಡಲು ಬದ್ಧವಾಗಿವೆ ಎಂಬುದನ್ನು ನಾವು ತಿಳಿಯಬೇಕು. ಕೇಂದ್ರದ್ದೇ ಆಗಲಿ, ನಮ್ಮ ರಾಜ್ಯದ್ದೇ ಆಗಲಿ ಮುಂಗಡ ಪತ್ರಗಳ ಸ್ಥೂಲ ನಕ್ಷೆ ಮತ್ತು ಅಂತಿಮ ರೂಪಗಳೆರಡು ಅನುಮೋದನೆಗಾಗಿ ಹೋಗುವುದು ಎಲ್ಲಿಗೆ, ಯಾರ ಪ್ರತಿನಿಧಿಗಳ ಕೈಗಳಿಗೆ ಎಂಬುದನ್ನು ಇಂದಿನ ನಮ್ಮ ಆಡಳಿತಾಂಗದ ಒಳಹೊಕ್ಕು ನೋಡಿದರೆ ಈ ಎಲ್ಲವೂ ತಿಳಿಯುತ್ತದೆ.

ಹಾಗಾಗಿ ನಿಮಗೆ ನಿಜವಾದ ಪರ್ಯಾಯ ರಾಜಕಾರಣ ಅಗತ್ಯ-ಅನಿವಾರ್ಯತೆ ಕಂಡು ಬಂದಿದ್ದರೆ, ನೇರ ರಾಜಕಾರಣಕ್ಕೆ ಇಳಿಯುವ ಧೈರ್ಯ ತೋರಿರಿ ಇಲ್ಲವೇ ನಿಮ್ಮ ಆಂದೋಲನಗಳನ್ನು ಮಾಡಿಕೊಂಡು ಎಷ್ಟು ಸಾಧಿಸಿಕೊಳ್ಳಬಹುದೋ ಅಷ್ಟನ್ನು ಸಾಧಿಸಿಕೊಳ್ಳಿ. ನಿದ್ದೆ ಮಾಡಬಯಸುವವರನ್ನು ದಯವಿಟ್ಟು ನಿದ್ದೆ ಮಾಡಲು ಬಿಡಿ. ಅವರನ್ನು ಆಗಾಗ್ಗೆ

ಎಬ್ಬಿಸಿ ಅವರಿಂದ ಜನರಿಗೆ ಸುಮ್ಮನೆ ತೊಂದರೆ ಕೊಡಿಸುವುದೂ, ಅದನ್ನು ನಾಡ ಆತ್ಮಸಾಕ್ಷಿಯ ಜಾಗೃತಿ ಎಂದು ಕರೆಯುವ ನಾಟಕವೂ ಬೇಡ! ಜನಕ್ಕೆ ಇದೆಲ್ಲ ಸಾಕಾಗಿದೆ.

ವೈಫಲ್ಯದ ಭಯ ಇರುವವರು ಏನನ್ನೂ ಮಾಡಲಾರರು! ಕನಿಷ್ಟ ಆ ಕೇಜ್ರಿವಾಲನಿಂದ ಒಂದು ಕೆಟ್ಟ ಸ್ಫೂರ್ತಿಯನ್ನಾದರೂ ಪಡೆಯಿರಿ!

ಡಿ.ಎಸ್. ನಾಗಭೂಷಣ,

ಶಿವಮೊಗ್ಗ



ಸದ್ಯದ ಸಮಸ್ಯೆಗಳಿಗೆ ಅರ್ಥವಂತಿಕೆಯಿಂದ ಸ್ಪಂದಿಸುವ ಕನ್ನಡದ ಕೆಲವೇ ಚಿಂತಕರಲ್ಲಿ ಡಿ ಎಸ್ ನಾಗಭೂಷಣ್ ಪ್ರಮುಖರು. ಸಮಾಜವಾದದ ಖಚಿತ ಹಿನ್ನೆಲೆಯಿಂದ ಬರೆಯುವ ಇವರ ಪ್ರತಿಲೇಖನದಲ್ಲೂ ವಿಭಿನ್ನ ದೃಷ್ಟಿಯನ್ನು, ಹೊಳಹನ್ನು ಕಾಣಬಹುದು. ಹಾಗೆಯೇ ಅವರ ಎಲ್ಲಾ ಕ್ರಿಯೆಗಳಲ್ಲೂ ಆಳದಲ್ಲಿ ಮಾನವೀಯತೆ, ಸಾಮಾಜಿಕ ಕಾಳಜಿ ಎದ್ದು ಕಾಣುತ್ತದೆ. ಅದೇ ಅವರ ಶಕ್ತಿ ಕೂಡ. ಒಪ್ಪದೇ ಹೋದಾಗ ಜಗಳಕ್ಕೂ ಇಳಿಯಬಲ್ಲ ಡಿಎಸ್ಸೆನ್ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸುವುದರಲ್ಲೂ ಅಷ್ಟೇ ಧಾರಾಳಿ. ಅವರ ಎಲ್ಲಾ ಪ್ರತಿಕ್ರಿಯೆಗಳು ವಿಚಾರಗಳ ಸಮರವೇ ಹೊರತು, ವೈಯಕ್ತಿಕ ಪೂರ್ವಗ್ರಹಗಳಿಂದ ಮೂಡಿಬಂದ ಹೇಳಿಕೆಗಳಲ್ಲ. ಇವರಷ್ಟು ನಿಷ್ಠುರವಾಗಿ, ನಿಸ್ಸಂದಿಗ್ಧವಾಗಿ, ಧೈರ್ಯದಿಂದ ಹೇಳಬೇಕಾದ್ದನ್ನು ಹೇಳುವವರು ವಿರಳ. ಅವರ ಅಭಿಪ್ರಾಯಗಳನ್ನು ಒಪ್ಪದೇ ಇರಬಹುದು ಅಥವಾ ಅವರು ಹೇಳುವ ವಿಧಾನದ ಬಗ್ಗೆ ತಕರಾರು ಇರಬಹುದು, ಆದರೆ ಅವರ ಚಿಂತನೆಗಳನ್ನು ನಿರ್ಲಕ್ಷಿಸುವುದಕ್ಕೆ ಸಾಧ್ಯವೇ ಇಲ್ಲ.

ಟಿ ಎಸ್ ವೇಣುಗೋಪಾಲ್

20ನೇ ವರ್ಷ
ಅಭಿರುಚಿ ಪ್ರಕಾಶನ
ನಂ. ೩೮೬, ೧೪ನೇ ಮುಖ್ಯರಸ್ತೆ,
೩ನೇ ಅಡ್ಡರಸ್ತೆ, ಸರಸ್ವತೀಪುರ, ಮೈಸೂರು-೯